ವಿಷಯಾನುಕ್ರಮಣಿಕೆ

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೩೧

ಶ್ರೀ ವ್ಯಾಸಮಹರ್ಷಿ ಪ್ರಣೀತಂ

ಶ್ರೀ

ವರಾಹಮಹಾಪುರಾಣಂ

(ಕನ್ನಡ ಅನುವಾದ ವಿವರಣೆಗಳೊಡನೆ)

ಮೂರನೆಯ ಭಾಗ

(೧೨೦—೧೪೪ ಅಧ್ಯಾಯಗಳು)

ಅನುವಾದಕ:

ಆಸ್ಥಾನ ವಿದ್ವಾನ್, ಮ. ರ. ವರದಾಚಾರ್ಯ

ಕರ್ಣಾಟಾಧ್ಯಾಪಕ, ಮಹಾರಾಜರವರ ಕಾಲೇಜ್, ಮೈಸೂರು.

ಮೈಸೂರು:

ಶ್ರೀ ಹನುಮಾನ್ ಪ್ರೆಸ್

೧೯೪೭

|| ಶ್ರೀರಸ್ತು ||

ಮುನ್ನುಡಿ

ಶ್ರೀ ವರಾಹಪುರಾಣದಲ್ಲಿ ಕಾಂಡ ಅಥವಾ ಖಂಡ ವಿಭಾಗವು ಸಹಜವಾಗಿ ಇಲ್ಲವಾದರೂ ವಾಚನಾದಿ ಸೌಕರ್ಯಕ್ಕಾಗಿ ಪುಸ್ತಕಗಳನ್ನು ಬೇರೆಬೇರೆಯ ಭಾಗಗಳಾಗಿ ಮಾಡಿದೆ. ಹೀಗೆ ಆಗಿರುವ ಈ ಪುರಾಣದ ಮೂರನೆಯ ಭಾಗವು ನೂರ ಇಪ್ಪತ್ತನೆಯ ಅಧ್ಯಾಯದಿಂದ ನೂರ ನಲವತ್ತೈದನೆಯ ಅಧ್ಯಾಯದ ವರೆಗಿನ ಇಪ್ಪತ್ತೈದು ಅಧ್ಯಾಯಗಳನ್ನೊಳಗೊಂಡಿದೆ.

ಈ ಮೂರನೆಯ ಸಂಪುಟದ ಆದಿಯಲ್ಲಿ ದ್ವಿಜರ ಸಂಧ್ಯಾವಂದನಕರ್ಮ ವಿಚಾರವನ್ನೂ ಮನುಷ್ಯರು ಪುನರ್ಜನ್ಮದುಃಖವನ್ನು ತಪ್ಪಿಸಿಕೊಳ್ಳಲು ಅನುಸರಿಸಬೇಕಾದ ಧರ್ಮವನ್ನೂ ದೇವಪೂಜಾದಿ ಸತ್ಕರ್ಮಗಳನ್ನೂ ಹೇಳಿದೆ. ಆದರೆ ಸಂಧ್ಯಾವಂದನದೇವಪೂಜಾದಿಕರ್ಮಗಳಿಗೆ ಇಲ್ಲಿ ಹೇಳಿರುವ ಮಂತ್ರಗಳು ಯಾವುವೂ ವೇದೋಕ್ತವಾದವುಗಳಾಗಿಯಾಗಲಿ ಹಿಂದಿನಿಂದಲೂ ದ್ವಿಜರ ಬಳಕೆಯಲ್ಲಿರುವವುಗಳಾಗಿಯಾಗಲಿ ಇರುವಂತೆ ಕಾಣುವುದಿಲ್ಲ ಅಲ್ಲದೆ ಕೆಲವು ಮಂತ್ರಗಳು ಅಶುದ್ಧವಾಗಿರುವುದರಿಂದ ಸರಿಯಾಗಿ ಅರ್ಥವಾಗುವುದಿಲ್ಲ. ಸರಿಯಾದ ಆಧಾರವಿಲ್ಲದೆ ಅವುಗಳನ್ನು ತಿದ್ದುವುದು ಅನುಚಿತವೆಂದು ಭಾವಿಸಿ ಇದ್ದಂತೆಯೇ ಬರೆದಿದೆ.

ಪುರಾಣದ ಈ ಭಾಗದಲ್ಲಿರುವ ವಿಷ್ಣುಮಾಯಾ ಮಹಿಮೆಯ ವಿಚಾರವಾದ 'ಮಾಯಾಚಕ್ರ' (೨೫ನೆಯ ಅಧ್ಯಾಯ) ದಲ್ಲಿ ಬರುವ ಸೋಮಶರ್ಮನೆಂಬ ಮುನಿಯ ಸ್ವರೂಪಪರಿವರ್ತನದ ಚಿತ್ರಚರಿತ್ರೆಯು ಸಂಸಾರದ ಸ್ವರೂಪವನ್ನು ತಿಳಿಸುವುದಲ್ಲದೆ ಕರುಣಾದ್ಭುತರಸಭರಿತವಾಗಿ ಕಾವ್ಯದೃಷ್ಟಿಯಿಂದಲೂ ಬಹು ಮನೋಹರವಾದುದಾಗಿದೆ.

ಅಲ್ಲದೆ ಈ ಸಂಪುಟದಲ್ಲಿ ಕರ್ಮಜ್ಞಾನ ಭಕ್ತಿಯೋಗಗಳ ವಿಚಾರವನ್ನು ಸಂಗ್ರಹವಾಗಿ ತಿಳಿಸಿದೆ ಉದ್ದಕ್ಕೂ ಹಲವು ಪವಿತ್ರತೀರ್ಥಗಳನ್ನೊಳಗೊಂಡಿರುವ

ಕೋಕಾಮುಖ, ಕುಬ್ಜಾಮ್ರಕ, ಸೌಕರ (ವಾರಾಹ), ಬದರೀ, ಶಾಲಗ್ರಾಮ ಇವೇ ಮೊದಲಾದ ಕೆಲವು ಮಹಾಪುಣ್ಯಕ್ಷೇತ್ರಗಳ ಮಹಿಮೆಯನ್ನು ವಿಸ್ತಾರವಾಗಿ ಆಯಾ ಕ್ಷೇತ್ರ ಸಂಬಂಧದಿಂದ ಇಹಪರಸೌಖ್ಯಗಳನ್ನು ಪಡೆದವರ ಅದ್ಭುತ ಚರಿತ್ರೆಯೊಡನೆ ಹೇಳಿದೆ.

ಇಂತಹ ಪುರಾಣರತ್ನಗಳನ್ನು ಸರ್ವರಿಗೂ ಅರಿವುಬೆಳಕನ್ನುಂಟು ಮಾಡುವಂತೆ ಪ್ರಕಾಶಪಡಿಸಿ, ಮಹೋಪಕಾರ ಮಾಡಿರುವ ನಮ್ಮನ್ನಾಳುವ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಬಿ., ಜಿ. ಸಿ. ಎಸ್. ಐ.** ಮಹಾಪ್ರಭುಗಳವರಿಗೂ, ಅವರ ಕುಟುಂಬಕ್ಕೂ ಶ್ರೀ ಆದಿವರಾಹದೇವನು ಆಯುರಾರೋಗ್ಯಾದಿ ಸಕಲಸನ್ಮಂಗಳಗಳನ್ನೂ ದಯೆಪಾಲಿಸಲೆಂದು ಪ್ರಾರ್ಥಿಸುವೆನು.

ವ್ಯಯ ಸಂ|| ಮಾಘ
ಶುದ್ಧ ೧೫ ಬುಧವಾರ
5—2—1497

ಅನುವಾದಕ
ಮಡೇನೂರ ರಘುನಾಥಾಚಾರ್ಯರ ಮಗ ವರದಾಚಾರ್ಯ.
ಆಸ್ಥಾನ ವಿದ್ವಾನ್.

|| ಶ್ರೀರಸ್ತು ||

ಶ್ರೀವರಾಹಪುರಾಣದಲ್ಲಿ ಮೂರನೆಯ ಭಾಗದ ವಿಷಯಾನುಕ್ರಮಣಿಕೆ.

ಪುಟಸಂಖ್ಯೆ

ನೂರ ಇಪ್ಪತ್ತನೆಯ ಅಧ್ಯಾಯ

ತ್ರಿಕಾಲಸಂಧ್ಯಾವಂದನೆ, ದಿಗ್ವಂದನೆಗೆ ಕಾರಣ. 1—2

ಅರ್ಘ್ಯಪ್ರದಾನಮಂತ್ರ ಕ್ರಮಾದಿಗಳು 2—6

ನೂರ ಇಪ್ಪತ್ತೊಂದನೆಯ ಅಧ್ಯಾಯ

ಮನುಷ್ಯರು ಪುನರ್ಜನ್ಮವನ್ನು ತಪ್ಪಿಸಿಕೊಳ್ಳುವಮಾರ್ಗ 7—12

ನೂರ ಇಪ್ಪತ್ತೆರಡನೆಯ ಅಧ್ಯಾಯ

ಕೋಕಾಮುಖಕ್ಷೇತ್ರ ಮಹಿಮೆ 13—36

ಮತ್ಸ್ಯ ಚಿಲ್ಲಿಗಳಾಗಿದ್ದು ಕೋಕಾಮುಖಕ್ಷೇತ್ರ ಮರಣದಿಂದ ಶಕರಾಜ ರಾಣಿಯರಾಗಿ ಜನಿಸಿದವರ ಕಥೆ 17—36

ನೂರ ಇಪ್ಪತ್ತಮೂರನೆಯ ಅಧ್ಯಾಯ

ಪುಷ್ಪಗಂಧಾದಿಗಳ ಮಹಿಮೆ 37—46

ಉತ್ಥಾನದ್ವಾದಶಿಯಲ್ಲಿ ವಿಷ್ಣುಪೂಜೆಯ ಮಹಿಮೆ 38—40

ಕಾರ್ತಿಕಮಾರ್ಗಶಿರ ವೈಶಾಖಮಾಸಗಳ ದ್ವಾದಶಿಯ ಪೂಜೆಯ ಪ್ರಾಶಸ್ತ್ಯ 41—46

ನೂರ ಇಪ್ಪತ್ತನಾಲ್ಕನೆಯ ಅಧ್ಯಾಯ

ಬೇರೆಬೇರೆಯ ಋತುಗಳ ಪುಷ್ಪಾದಿಪೂಜಾಸಾಮಗ್ರಿಗಳು 47—59

ನೂರ ಇಪ್ಪತ್ತೈದನೆಯ ಅಧ್ಯಾಯ

ಮಾಯಾಚಕ್ರ 60—99

	ಪುಟಸಂಖ್ಯೆ
ಭೂದೇವಿಯು ಮಾಯಾಸ್ವರೂಪವನ್ನು ತಿಳಿಸಬೇಕೆಂದು ಶ್ರೀ ವರಾಹನನ್ನು ಪ್ರಾರ್ಥಿಸಿದುದು	60—61
ಮಾಯೆಯ ಶಕ್ತಿವ್ಯಾಪನೆ ಮತ್ತು ಕಾರ್ಯಗಳು	62—70
ವಿಷ್ಣುಮಾಯೆಯನ್ನು ತಿಳಿಯುವ ಆಸೆಯಿಂದ ಬೇಡಿತಿಯ ಜನ್ಮವನ್ನು ಪಡೆದವನಂತಾದ ಸೋಮಶರ್ಮನೆಂಬ ಮುನಿಯು ಚಿತ್ರ ಚರಿತ್ರೆ	71—99

ನೂರ ಇಪ್ಪತ್ತಾರನೆಯ ಅಧ್ಯಾಯ

ಕುಬ್ಜಾಮ್ರಕಕ್ಷೇತ್ರ ಮಹಿಮೆ	100-146
ಕುಬ್ಜಾಮ್ರಕವೆಂಬ ಹೆಸರುಬರಲು ಕಾರಣ, ರೈಭ್ಯಮುನಿಯ ಕಥೆ	100-105
ಕುಬ್ಜಾಮ್ರಕಕ್ಷೇತ್ರದಲ್ಲಿರುವ ಕುಮುದಾಕಾರ ತೀರ್ಥವಿಚಾರ	106
,, ,, ಮಾನಸ ,,	,,
,, ,, ಮಾಯಾ ,,	107
,, ,, ಸರ್ವಾತ್ಮಕ ,,	108
,, ,, ಸಾರ್ಷಪಕ ,,	,,
,, ,, ಪೂರ್ಣಮುಖ ,,	108-109
,, ,, ಕರವೀರ ,,	111
,, ,, ಪುಂಡರೀಕ ,,	112
,, ,, ಅಗ್ನಿತೀರ್ಥ ,,	113-115
,, ,, ವಾಯವ್ಯ ,,	115-116
,, ,, ಶಕ್ರ ,,	117
,, ,, ವರುಣ ,,	118
,, ,, ಸಪ್ತಸಾಮುದ್ರಕ ,,	119-120
,, ,, ಮಾನಸರಸ್ ,,	120-121

ಪುಟಸಂಖ್ಯೆ

ಮುಂಗಸಿಯೂ ಹಾವೂ ಆಗಿದ್ದು ಕುಬ್ಜಾಮ್ರಕಕ್ಷೇತ್ರದಲ್ಲಿ ಪ್ರಾಣ ಬಿಟ್ಟುದರಿಂದ ಕೋಸಲರಾಜಪುತ್ರನೂ ಪ್ರಾಗ್ಜ್ಯೋತಿಷ ರಾಜಪುತ್ರಿಯೂ ಆಗಿ ಜನಿಸಿ, ದಂಪತಿಗಳಾಗಿ ಸುಖಿಸಿ ಪೂರ್ವಜನ್ಮಸ್ಮರಣೆಯಿಂದ ಮತ್ತೆ ಕುಬ್ಜಾಮ್ರಕಕ್ಕೆ ಬಂದು ಮುಕ್ತರಾದವರ ಕಥೆ 122–145

ನೂರ ಇಪ್ಪತ್ತೇಳನೆಯ ಅಧ್ಯಾಯ

ಬ್ರಾಹ್ಮಣದೀಕ್ಷಾ ಸೂತ್ರವರ್ಣನೆ, ದೀಕ್ಷಿತರ ಧರ್ಮಗಳು 147–163

ನೂರ ಇಪ್ಪತ್ತೆಂಟನೆಯ ಅಧ್ಯಾಯ

ಕ್ಷತ್ರಿಯ ದೀಕ್ಷೆಯಕ್ರಮ 164–166

ವೈಶ್ಯದೀಕ್ಷಾಕ್ರಮ 167–168

ಶೂದ್ರದೀಕ್ಷಾಕ್ರಮ 169–171

ಬ್ರಾಹ್ಮಣಾದಿ ಚತುರ್ವರ್ಣದೀಕ್ಷಿತರಿಗೆ ವಿಹಿತವಾದ ಕೊಡೆಗಳು 171

ಗಣಾಂತಿಕವೆಂಬ ದೀಕ್ಷೆಯ ವಿಚಾರ, ದೇವೋಪಚಾರಕ್ರಮ 172–183

ನೂರ ಇಪ್ಪತ್ತೊಂಬತ್ತನೆಯ ಅಧ್ಯಾಯ

ಚತುರ್ವರ್ಣದೀಕ್ಷೆ, ದೇವೋಪಚಾರ 184–197

ತಾಮ್ರದ ಪಾತ್ರೆಯಲ್ಲಿ ನೈವೇದ್ಯಾದಿಗಳ ಅರ್ಪಣದ ಮೇಲ್ಮೆ 188–195

ಯಾರಮಾಂಸಾದಿಗಳಿಂದ ತಾಮ್ರಾದಿ ಲೋಹಗಳುದಿಸಿದುವೊ ಆ ಗುಡಾಕೇಶನೆಂಬ ವಿಷ್ಣುಭಕ್ತನಾದ ರಾಕ್ಷಸನ ಕಥೆ 189–194

ದೀಕ್ಷಿತರ ಸಂಧ್ಯಾವಂದನ ಮಂತ್ರ 196–197

ನೂರ ಮೂವತ್ತನೆಯ ಅಧ್ಯಾಯ

ರಾಜಾನ್ನಭೋಜನ ವಿಚಾರ 198–207

ಭಾಗವತರು, ಸಾಮಾನ್ಯವಾದ ರಾಜಾನ್ನವನ್ನು ಭುಂಜಿಸ ಬಾರದೆಂಬುದು 200–201

ರಾಜಾನ್ನವಾದರೂ ಭಗವದ್ಭಕ್ತರು ಸಿದ್ಧಪಡಿಸಿ, ದೇವಾರ್ಪಣ ಮಾಡಿದುದನ್ನು ಭುಂಜಿಸಬಹುದೆಂಬುದು 202

ಪುಟಸಂಖ್ಯೆ

ಸಾಮಾನ್ಯ ರಾಜಾನ್ನಭೋಜನ ಪ್ರಾಯಶ್ಚಿತ್ತ 203

ನೂರ ಮೂವತ್ತೊಂದನೆಯ ಅಧ್ಯಾಯ

ಹಲ್ಲನ್ನುಜ್ಜದೇ ದೇವಸನ್ನಿಧಿಗೆ ಹೋಗುವುದರಿಂದಾಗುವ ದೋಷ 204–205

,, ,, ಹೋದ ಅಪರಾಧಕ್ಕೆ ಪ್ರಾಯಶ್ಚಿತ್ತ 206–207

ನೂರ ಮೂವತ್ತೆರಡನೆಯ ಅಧ್ಯಾಯ

ಸ್ತ್ರೀಸಂಗಮಾಡಿ, ಸ್ನಾನಾದಿಗಳಿಂದ ಶುದ್ಧನಾಗದೆ ದೇವರನ್ನು ಮುಟ್ಟುವುದರಿಂದ ಸಂಭವಿಸುವ ದೋಷ ಮತ್ತು ಅದರ ಪರಿಹಾರವಿಚಾರ 208–210

ಶವವನ್ನು ಮುಟ್ಟಿ ಅಥವಾ ಶ್ಮಶಾನಕ್ಕೆ ಹೋಗಿ ಶುದ್ಧನಾಗದಿರುವುದರ ದೋಷ ಮತ್ತು ಪ್ರಾಯಶ್ಚಿತ್ತ 210–212

ರಜಸ್ವಲೆಯನ್ನು ಮುಟ್ಟಿ ಶುದ್ಧನಾಗದೆ ದೇವಸ್ಪರ್ಶಮಾಡುವುದರ ದೋಷ ಮತ್ತು ಅದರ ಪರಿಹಾರ 212–213

ಶವವನ್ನು ಮುಟ್ಟಿ, ಶುದ್ಧನಾಗದೆ ದೇವಸನ್ನಿಧಿಗೆ ಹೋಗುವುದೇ ಮೊದಲಾದುದರ ದೋಷ ಮತ್ತು ಅದರ ಪರಿಹಾರಕ್ರಮ 214–216

ನೂರ ಮೂವತ್ತಮೂರನೆಯ ಅಧ್ಯಾಯ

ದೇವರ ಪೂಜೆಯ ಕಾಲದಲ್ಲಿ ಅಪಾನವಾಯುವಿಸರ್ಜನೆ ಮಾಡುವುದೇ ಮೊದಲಾದ ಅಪರಾಧಗಳಿಗೆ ಪ್ರಾಯಶ್ಚಿತ್ತ 217–220

ನೂರ ಮೂವತ್ತನಾಲ್ಕನೆಯ ಅಧ್ಯಾಯ

ದೇವರ ಪೂಜೆಯ ಸಮಯದಲ್ಲಿ ಇತರರೊಡನೆ ಬೇರೆಯ ಮಾತನ್ನಾಡುವ, ನೀಲಿಯ ಬಣ್ಣದ ಉಡುಪನ್ನು ಧರಿಸಿರುವ, ಕೋಪವುಳ್ಳವನಾಗಿರುವ, ಅಥವಾ ಕರ್ಮಾನರ್ಹವಾದ ಹೂಗಳನ್ನರ್ಪಿಸುವ ಅಪರಾಧಗಳ ದುಷ್ಫಲ ಮತ್ತು ಪ್ರಾಯಶ್ಚಿತ್ತ 221–236

ಪುಟಸಂಖ್ಯೆ

ನೂರ ಮೂವತ್ತೈದನೆಯ ಅಧ್ಯಾಯ

ಕೆಂಪಾದ ಅಥವಾ ಕರಿಯುಬಟ್ಟೆಯನ್ನುಟ್ಟು, ದೇವರನ್ನು ಪೂಜಿಸುವುದು, ಕತ್ತಲೆಯಲ್ಲಿ ಅಥವಾ ಮೈಲಿಗೆಯಲ್ಲಿ ದೇವರನ್ನು ಮುಟ್ಟುವುದು, ಅಶುಚಿಪದಾರ್ಥಗಳನ್ನು ಅರ್ಪಿಸುವುದು ಇವೇ ಮೊದಲಾದ ಕೆಲವು ಅಪರಾಧಗಳ ಮತ್ತು ಅವುಗಳ ಪ್ರಾಯಶ್ಚಿತ್ತಗಳ ವಿಚಾರ 237–249

ನೂರ ಮೂವತ್ತಾರನೆಯ ಅಧ್ಯಾಯ

ಪ್ರಾಯಶ್ಚಿತ್ತ ಕರ್ಮಸೂತ್ರ– ದೇವರ ಪೂಜೆಯಲ್ಲಿ ಮಾಡುವ ಮತ್ತೆ ಕೆಲವು ಅಪರಾಧಗಳು ಮತ್ತು ಅವುಗಳ ಪರಿಹಾರಕ್ರಮ 250–276

ರುದ್ರನು ಶ್ಮಶಾನದಲ್ಲಿ ವಾಸಿಸಲು ಕಾರಣ 253–260

ನೂರ ಮೂವತ್ತೇಳನೆಯ ಅಧ್ಯಾಯ

ಸೌಕರ ಅಥವಾ ವಾರಾಹಕ್ಷೇತ್ರ ಮಹಿಮೆ 277–331

ಸೌಕರಕ್ಷೇತ್ರದಲ್ಲಿರುವ ಚಕ್ರತೀರ್ಥವಿಚಾರ 281–82

,, ಸೋಮತೀರ್ಥವಿಚಾರ 282–323

ಚಂದ್ರನು ಸೋಮತೀರ್ಥದಲ್ಲಿ ತಪಸ್ಸನ್ನು ಮಾಡಿ, ವಿಷ್ಣುವಿನಿಂದ ವರವನ್ನು ಪಡೆದುದು 282–286

ಸೋಮತೀರ್ಥದಲ್ಲಿ ಪ್ರಾಣಬಿಟ್ಟು ಹೆಣ್ಣುನರಿಯು ಕಾಂಚೀರಾಜ ಕುಮಾರಿಯಾಗಿ ಜನಿಸಿ ಕಳಿಂಗರಾಜಕುಮಾರನ ಪತ್ನಿಯಾದ ಕಥೆ. 288–327

ಗೃಧ್ರವಟತೀರ್ಥಮಹಿಮೆ, ಹದ್ದಾಗಿದ್ದು ಗೃಧ್ರವಟತೀರ್ಥದಲ್ಲಿ ಪ್ರಾಣಬಿಟ್ಟುದರಿಂದ ಕಳಿಂಗರಾಜಕುಮಾರನಾಗಿ ಜನಿಸಿ ದವನ ಕಥೆ.

ಆಖೇಟಕತೀರ್ಥಮಹಿಮೆ. 324

ವೈವಸ್ವತ ಅಥವಾ ಸೂರ್ಯತೀರ್ಥಮಹಿಮೆ, ಸೂರ್ಯನು ತಪಸ್ಸು ಮಾಡಿ, ಯಮ ಯಮುನೆಯರೆಂಬ ಮಕ್ಕಳನ್ನು ಪಡೆದುದು. 327–329

ಪುಟಸಂಖ್ಯೆ

ನೂರ ಮೂವತ್ತೆಂಟನೆಯ ಅಧ್ಯಾಯ

ಸೌಕರ(ವಾರಾಹ)ತೀರ್ಥ ಮಹಿಮೆ, ಖಂಜರೀಟ ಪಕ್ಷಿಯಾಗಿದ್ದು ಸೌಕರಕ್ಷೇತ್ರದ ಆದಿತ್ಯತೀರ್ಥದಲ್ಲಿ ಪ್ರಾಣಬಿಟ್ಟುದರಿಂದ ಮಹಾ ಜ್ಞಾನಿಯೂ ವಿರಕ್ತನೂ ಆಗಿ ಜನಿಸಿದ ವೈಶ್ಯಬಾಲಕನ ಕಥೆ. 332–353

ನೂರ ಮೂವತ್ತೊಂಬತ್ತನೆಯ ಅಧ್ಯಾಯ

ಸೌಕರಕ್ಷೇತ್ರ ಮಹಿಮೆ. 354–378

ಸೌಕರಕ್ಷೇತ್ರವನ್ನು ಗುಡಿಸುವುದು ಅಥವಾ ಸಾರಿಸುವುದರಿಂದಾಗುವ ಫಲ. 354–358

ಸೌಕರಕ್ಷೇತ್ರದಲ್ಲಿ ಗಾನನರ್ತನಾದಿಗಳ ಫಲ. 358–377

ಸೌಕರಕ್ಷೇತ್ರದ ಗಾನಪ್ರಭಾವದಿಂದ ಬ್ರಹ್ಮರಾಕ್ಷಸನಿಗೆ ಮುಕ್ತಿಯನ್ನುಂಟುಮಾಡಿ, ತಾನೂ ಮುಕ್ತನಾದ ಪಂಚಮನ ಕಥೆ. 360–374

ನೂರ ನಲವತ್ತನೆಯ ಅಧ್ಯಾಯ

ಕೋಕಾಮುಖ(ಬದರೀ)ಕ್ಷೇತ್ರ ಮಹಿಮೆ. 379–399

ಕೋಕಾಮಂಡಲದ ವಿಷ್ಣುಧಾರಾ ತೀರ್ಥಪ್ರಭಾವ. 383–384

,,	ವಿಷ್ಣುಪದ	,,	384
,,	ಸೋಮ	,,	385
,,	ತುಂಗಕೂಟ	,,	,,
,,	ಅನಿತ್ಯಾಶ್ರಮ	,,	386
,,	ಅಗ್ನಿಸರೋವರ	,,	,,
,,	ಬ್ರಹ್ಮಸರೋವರ	,,	387
,,	ಧೇನುವಟ	,,	387–388
,,	ಧರ್ಮೋದ್ಭವ	,,	388–389
,,	ಕೋಟಿವಟ	,,	389
,,	ಪಾಪಪ್ರಮೋಚನ	,,	390

		ಪುಟಸಂಖ್ಯೆ
ಕೋಕಾಮುಂಡಲದ ಯವಮಾವ್ಯಸನಕ ತೀರ್ಥಪ್ರಭಾವ		391
,,	ಮಾತಂಗ ,,	391–392
,,	ವಜ್ರಭವ ,,	392
,,	ಶಕ್ರರುದ್ರ ,,	393
,,	ದಂಷ್ಟ್ರಾಂಕುರ ,,	393–394
,,	ವಿಷ್ಣುಸರ್ವಕಾಮಿಕಾದಿ ,,	394–396

ನೂರ ನಲವತ್ತೊಂದನೆಯ ಅಧ್ಯಾಯ

ಬದರಿಕಾಶ್ರಮ ಮಹಿಮೆ		400–414
ಬದರಿಕಾಶ್ರಮದ	ಹಿಮಕುಂಡ ತೀರ್ಥಪ್ರಭಾವ	401
,,	ಅಗ್ನಿಸತ್ಯಪದ ,,	401–402
,,	ಪಂಚ(ಧಾರಾ)ಶಿಖ ,,	403
,,	ಚತುಸ್ರ್ರೋತ ,,	403–404
,,	ವೇದಧಾರ ,,	404
,,	ದ್ವಾದಶಾದಿತ್ಯ ,,	405
,,	ಲೋಕಪಾಲ ,,	405–406
,,	ಮೇರುವರ ,,	,,
,,	ಮಾನಸೋದ್ಭೇದ ,,	407
,,	ಪಂಚಶಿರ ,,	408–409
,,	ಸೋಮಾಭಿಷೇಕ ,,	409–410
,,	ಊರ್ವಶೀಕುಂಡ ,,	410–413
ಬದರಿಕಾಶ್ರಮದಲ್ಲಿ ವಿಷ್ಣುವು ತಪಸ್ಸನ್ನು ಮಾಡಿದುದು		,,

ನೂರ ನಲವತ್ತೆರಡನೆಯ ಅಧ್ಯಾಯ

ರಜಸ್ವಲೆಯರ ನಿಯಮ	415–418
ಸ್ತ್ರೀಸಮಾಗಮವಿಧಿ	422
ಕರ್ಮಸನ್ಯಾಸ, ಜ್ಞಾನಸನ್ಯಾಸ, ಸಮಚಿತ್ತತೆ, ಯೋಗವಿಚಾರ	418–430

ಪುಟಸಂಖ್ಯೆ

ನೂರ ನಲವತ್ತಮೂರನೆಯ ಅಧ್ಯಾಯ

ಮಂದಾರಕ್ಷೇತ್ರ ಮಹಿಮೆ	431–443
ಮಂದಾರಕ್ಷೇತ್ರದಲ್ಲಿರುವ ಸ್ನಾನಕುಂಡ ತೀರ್ಥಪ್ರಭಾವ	435
,, ವೈಕುಂಠಕಾರಣ ,,	435–436
,, ಸಮುಸ್ರೋತಸ್ ,,	436
,, ಮತ್ತೆ ಕೆಲವು ,,	436–438
,, ಚಕ್ರಾವರ್ತ ,,	438–439
,, ಗಭೀರ ,,	439–440
,, ಸ್ಯಮಂತಪಂಚಕ ,,	441

ನೂರ ನಲವತ್ತನಾಲ್ಕನೆಯ ಅಧ್ಯಾಯ

ಸೋಮೇಶ್ವರಾದಿಲಿಂಗ ಮುಕ್ತಿಕ್ಷೇತ್ರ ತ್ರಿವೇಣ್ಯಾದಿಗಳ ಮಹಿಮೆ	443–482
ಶಾಲಗ್ರಾಮಕ್ಷೇತ್ರ ಮಹಿಮೆ	444
ಚಂದ್ರನು ಶಾಪನಿವೃತ್ತಿಗಾಗಿ ಸೋಮೇಶ್ವರ ಲಿಂಗವನ್ನು ಪ್ರತಿಷ್ಠೆಮಾಡಿ ಸ್ತುತಿಸಿ, ವರವನ್ನು ಪಡೆದುದು	446–449
ರೇವೆ (ನರ್ಮದಾನದಿ)ಯ ತಪಸ್ಸಿಗೊಲಿದ ಶಿವನು ಅವಳಿಗೆ ಪುತ್ರನಾದುದು	450–451
ಗಂಡಕಿಯ ತಪಸ್ಸು ಹರಿಸ್ತುತಿ, ವರಪ್ರಾಪ್ತಿ	451–457
ಬಾಣಗಂಗಾ ತೀರ್ಥಮಹಿಮೆ	458
ರಾವಣನ ತಪೋವನ ಮತ್ತು ನರ್ತನಾಚಲ	,,
ಸಾಲಂಕಾಯನನ ತಪಸ್ಸು, ಈಶ್ವರನು ಆತನಿಗೆ ಪುತ್ರನಾದುದು	445–462
ಗಂಡಕೀನದಿಯ ಅವತಾರ, ಗಂಡಕೀತ್ರಿವೇಣಿಯ ಮಹಿಮೆ	463–477
ಗಂಡಕಿಯಲ್ಲಿ ಶಾಲಗ್ರಾಮಶಿಲೆಗಳಲ್ಲಿ ಚಕ್ರಚಿಹ್ನೆಗಳಾಗಲು ಕಾರಣ, ಶಾಪದಿಂದ ಆನೆ ಮೊಸಳೆಗಳಾಗಿದ್ದು, ಗಂಡಕಿಯಲ್ಲಿ ಮುಕ್ತರಾದ ಜಯವಿಜಯರೆಂಬ ಸಹೋದರರ ಕಥೆ	470–476
ಹಂಸತೀರ್ಥ ಪ್ರಭಾವ	480–481

ಶ್ರೀ ವರಾಹಪುರಾಣದಲ್ಲಿ ಮೂರನೆಯ ಭಾಗದ ಮುಖ್ಯ ವಿಷಯಗಳ ವರ್ಣಾನುಕ್ರಮವಾದ ಸೂಚಿಕೆ

ವಿಷಯ	ಅಧ್ಯಾಯ	ಆರಂಭದ ಪುಟ
ಅಗ್ನಿತೀರ್ಥ	126	113
ಅಗ್ನಿಸರೋವರ ತೀರ್ಥ	140	386
ಅಗ್ನಿಸತ್ಯಪದತೀರ್ಥ	141	401
ಅನಿತ್ಯಾಶ್ರಮತೀರ್ಥ	140	386
ಆಷಾಢೀಟಿಕತೀರ್ಥ	137	324
ಉತ್ಥಾನದ್ವಾದಶೀ ದೇವಪೂಜಾ ಮಹಿಮೆ	123	39
ಊರ್ವಶೀಕುಂಡತೀರ್ಥ	141	410
ಋತುಪೂಜಾಸಂಭಾರ	24	47
ಕರ್ಮ (ಸನ್ಯಾಸ) ಯೋಗ	142	418
ಕರವೀರತೀರ್ಥ	126	111
ಕಳಿಂಗರಾಜರಾಣಿಯರು	137	288
ಕ್ಷತ್ರಿಯದೀಕ್ಷೆ	128	164
ಕಾಂಚೀರಾಜಕುಮಾರಿ	137	288
ಕಾರ್ತಿಕ ಮಾರ್ಗಶಿರ ಮಾಸಗಳ ಮೇಲ್ಮೆ	23	43
ಕುಬ್ಜಾಮ್ರಕಕ್ಷೇತ್ರ ಮಹಿಮೆ	126	100
ಕುಮುದಾಕಾರತೀರ್ಥ	126	106
ಕೋಕಾಮುಖಕ್ಷೇತ್ರಮಹಿಮೆ	122	14
,,	140	379
ಕೋಕಾಮುಖಕ್ಷೇತ್ರಮರಣದಿಂದ ರಾಜರಾಣಿಯರಾದ ಮತ್ಸ್ಯಚಿಲ್ಲಿಗಳ ಕಥೆ	122	17
ಕೋಟಿವಟತೀರ್ಥ	140	389
ಖಂಜರೀಟೋಪಾಖ್ಯಾನ	138	334
ಗಂಡಕೀನದಿಯ ಅವತಾರ, ಮಹಿಮೆ	144	463
ಗಂಡಕಿಯ ತಪಸ್ಸು ಹರಿಸ್ತುತಿ ವರಪ್ರಾಪ್ತಿ	144	451
ಗಂಡಕೀ ತ್ರಿವೇಣೀ ಮಹಿಮೆ	144	463
ಗಣಾಂತಿಕದೀಕ್ಷೆ	128	172

ವಿಷಯ	ಅಧ್ಯಾಯ	ಆರಂಭದ ಪುಟ
ಗುಡಾಕೇಶನೆಂಬ ವಿಷ್ಣುಭಕ್ತನಾದ ರಾಕ್ಷಸನ ಕಥೆ	129	189
ಗೃಧ್ರವಟತೀರ್ಥ	137	288
ಚಕ್ರತೀರ್ಥ	137	281
ಚತುಸ್ರ್ರೋತಸ್ತೀರ್ಥ	141	403
ಚಂದ್ರನ ತಪಸ್ಸು	144	446
ಜನ್ಮಾಭಾವಕಾರಣ	121	7
ಜಯವಿಜಯರೆಂಬ ಆನೆಮೊಸಳೆಗಳಾಗಿದ್ದು ಗಂಡಕಿಯಲ್ಲಿ ಮುಕ್ತರಾದವರ ಕಥೆ	144	470
ಜ್ಞಾನ (ಸನ್ಯಾಸ) ಯೋಗ	142	418
ತಾಮ್ರದ ಪಾತ್ರೆಯ ಪ್ರಾಶಸ್ತ್ಯ	129	188
ತ್ರಿಕಾಲ ಸಂಧ್ಯಾವಂದನೆ	120	1
ತುಂಗಕೂಟತೀರ್ಥ	140	385
ದಂಷ್ಟ್ರಾಂಕುರತೀರ್ಥ	140	393
ದ್ವಾದಶಾದಿತ್ಯತೀರ್ಥ	141	405
ದಿಗ್ವಂದನೆ	120	2
ದೇವಪ್ರಿಯರು	122	13
ದೇವರ ಸನ್ನಿಧಿಯಲ್ಲಿ ಮಾಡಬಾರದ ಅಪರಾಧಗಳು	132	208
ದೇವೋಪಚಾರಕ್ರಮ	129	184
ಧರ್ಮೋದ್ಭವತೀರ್ಥ	140	388
ಧೇನುವಟತೀರ್ಥ	140	387
ಪಂಚಶಿರತೀರ್ಥ	141	408
ಪಂಚಧಾರಾತೀರ್ಥ	141	403
ಪಾಪಪ್ರಮೋಚನತೀರ್ಥ	140	390
ಪ್ರಾಗ್ಜ್ಯೋತಿಷರಾಜ ರಾಣಿಯರ ಕಥೆ	126	122
ಪುಂಡರೀಕತೀರ್ಥ	126	112
ಪೂರ್ಣಮುಖತೀರ್ಥ	126	108
ಬದರಿಕಾಶ್ರಮ	141	400
ಬದರಿಕಾಶ್ರಮದಲ್ಲಿ ವಿಷ್ಣುವಿನ ತಪಸ್ಸು	141	410
ಬ್ರಹ್ಮಸರೋವರ	140	387
ಬಾಣಗಂಗಾತೀರ್ಥ	144	458

ವಿಷಯ	ಅಧ್ಯಾಯ	ಆರಂಭದ ಪುಟ
ಬ್ರಾಹ್ಮಣದೀಕ್ಷಾಸೂತ್ರ	127	147
ಭಗವದ್ಭಕ್ತರಾದ ದ್ವಿಜರಮಹಿಮೆ	125	95
ಮಂದಾರಕ್ಷೇತ್ರ ಮಹಿಮೆ	143	431
ಮಾತಂಗ ತೀರ್ಥ	140	391
ಮಾನಸತೀರ್ಥ	126	106
ಮಾನಸರಸ್ ತೀರ್ಥ	126	120
ಮಾನಸೋದ್ಭೇದತೀರ್ಥ	141	407
ಮಾಯಾಚಕ್ರಸ್ವರೂಪ	125	61
ಮಾಯಾತೀರ್ಥ	126	107
ಮುಕ್ತಿಕ್ಷೇತ್ರ	144	468
ಮೇರುವರ ತೀರ್ಥ	141	406
ಯಮಾವ್ಯಸನಕ ತೀರ್ಥ	140	391
ಯೋಗವಿಚಾರ	142	418
ರಜಸ್ವಲೆಯರ ನಿಯಮ	142	416
ರಾಜಾನ್ನ ಭೋಜನ ವಿಚಾರ	130	198
ರಾವಣ ತಪೋವನ, ನರ್ತನಾಚಲ	144	458
ರೇವೆ(ನರ್ಮದೆ)ಯ ತಪಸ್ಸು, ಶಿವನನ್ನು ಪುತ್ರನಾಗಿ ಪಡೆದುದು	144	450
ರೈಭ್ಯಮುನಿಯ ತಪಸ್ಸು	126	102
ಲೋಕಪಾಲತೀರ್ಥ	141	405
ಲೋಹಗಳ ಉತ್ಪತ್ತಿ	129	194
ವಜ್ರಭವತೀರ್ಥ	140	392
ವರುಣತೀರ್ಥ	126	118
ವಾಯುತೀರ್ಥ	126	116
ವಿಷ್ಣುತೀರ್ಥ	140	394
ವಿಷ್ಣುಧಾರಾತೀರ್ಥ	140	383
ವಿಷ್ಣುಪದತೀರ್ಥ	140	384
ವೇದಧಾರತೀರ್ಥ	141	404
ವೈವಸ್ವತ(ಸೌರ)ತೀರ್ಥ	137	327
ವೈಶ್ಯದೀಕ್ಷಾವಿಧಿ	128	167

ವಿಷಯ	ಅಧ್ಯಾಯ	ಆರಂಭದ ಪುಟ
ಶಕ್ರತೀರ್ಥ	126	117
ಶಕ್ರ ರುದ್ರತೀರ್ಥ	140	393
ಶಾಲಗ್ರಾಮಕ್ಷೇತ್ರ ಮಹಿಮೆ	144	444
ಶಾಲಗ್ರಾಮಶಿಲೆಗಳಲ್ಲಿ ಚಕ್ರಚಿಹ್ನೆಯಿರಲು ಕಾರಣ	144	470
ಶೂದ್ರದೀಕ್ಷಾಕ್ರಮ	128	169
ಸಪ್ತಸಾಮುದ್ರಕತೀರ್ಥ	126	119
ಸಮಚಿತ್ತತೆ	142	418
ಸರ್ವಕಾಮಿಕಾತೀರ್ಥ	140	395
ಸರ್ವಾತ್ಮಕತೀರ್ಥ	126	108
ಸಾಲಂಕಾಯನ ಮುನಿಯ ತಪಸ್ಸು, ಪುತ್ರಪ್ರಾಪ್ತಿ	144	445
ಸಾರ್ಷಪಕತೀರ್ಥ	126	108
ಸ್ತ್ರೀಸಮಾಗಮವಿಧಿ	142	422
ಸುಗಂಧ ಪತ್ರಾರ್ಪಣೆ	123	43
ಸೂರ್ಯನು ಪುತ್ರಪ್ರಾಪ್ತಿಗಾಗಿ ತಪಸ್ಸು ಮಾಡಿದುದು	137	327
ಸೋಮತೀರ್ಥ	137	284
,,	140	385
ಸೋಮಾಭಿಷೇಕತೀರ್ಥ	141	409
ಸೋಮಶರ್ಮ ಮುನಿಯ ಮಾಯೆಯ ಅರಿವು	125	72
ಸೋಮ(ಚಂದ್ರ)ನು ವಿಷ್ಣುವನ್ನು ಆರಾಧಿಸಿದುದು	137	282
ಸೋಮೇಶ್ವರಾದಿ ಲಿಂಗಮಹಿಮೆ	144	443
ಸೌಕರಕ್ಷೇತ್ರ ಮಹಿಮೆ	137	278
,,	139	354
ಆ ಕ್ಷೇತ್ರದಲ್ಲಿ ಗಾನಮಾಡಿ, ಬ್ರಹ್ಮರಾಕ್ಷಸನನ್ನು ಉದ್ಧರಿಸಿ ತಾನು ಮುಕ್ತನಾದ ಪಂಚಮನ ಕಥೆ	139	360
ಹದ್ದುನರಿಗಳಾಗಿದ್ದು ಕ್ಷೇತ್ರಮರಣದಿಂದ ರಾಜ ರಾಣಿಯರಾದವರ ಕಥೆ	137	288
ಹಂಸತೀರ್ಥ	144	480
ಹಿಮಕುಂಡತೀರ್ಥ	141	401

|| ಶ್ರೀರಸ್ತು ||

ಶ್ರೀ ವರಾಹ ಮಹಾಪುರಾಣಂ

ವಿಂಶತ್ಯಧಿಕಶತತಮೋಽಧ್ಯಾಯಃ

ಅಥ ತ್ರಿಸಂಧ್ಯಾಮಂತ್ರೋಪಸ್ಥಾನಂ

|| ಶ್ರೀವರಾಹ ಉವಾಚ ||

ಶೃಣುಷ್ವ ಪರಮಂ ಗುಹ್ಯಂ ಪೂರ್ವಂ ಪೃಷ್ಟಂ ತ್ವಯಾ ಧರೇ ।
ದೇವಿ ಸರ್ವಂ ಪ್ರವಕ್ಷ್ಯಾಮಿ ಸಂಸಾರತರಣಂ ಮಹತ್ || ೧ ||

ಸ್ನಾನಂ ಕೃತ್ವಾ ಯಥಾನ್ಯಾಯಂ ಮಮ ಕರ್ಮಪರಾಯಣಾಃ ।
ಉಪಸರ್ಪಂತಿ ಯೇ ಭಕ್ತ್ಯಾ ಕದನ್ನಾಶಾ ಜಿತೇಂದ್ರಿಯಾಃ || ೨ ||

ನೂರ ಇಪ್ಪತ್ತನೆಯ ಅಧ್ಯಾಯ

ತ್ರಿಕಾಲ ಸಂಧ್ಯಾವಂದನೆಯ ಉಪಸ್ಥಾನ ಮಂತ್ರ

೧. ಶ್ರೀ ವರಾಹ—ದೇವಿ, ಧರೇ, ನೀನು ಹಿಂದೆ ಪ್ರಶ್ನಿಸಿದ, ಸಂಸಾರವನ್ನು ದಾಟಿಸುವ, ಉತ್ತಮವೂ, ಪರಮರಹಸ್ಯವೂ ಆದ ವಿಚಾರವನ್ನೆಲ್ಲಾ ಹೇಳುತ್ತೇನೆ. ಕೇಳು.

೨. ಕದನ್ನವನ್ನು ಭುಜಿಸುತ್ತ ಜಿತೇಂದ್ರಿಯರಾಗಿ ನನ್ನ ಕರ್ಮದಲ್ಲಿ ಆಸಕ್ತರಾಗಿರುವವರು ನಿಯಮದಂತೆ ಸ್ನಾನವನ್ನು ಮಾಡಿ ಭಕ್ತಿಯಿಂದ ನನ್ನನ್ನು ಆಶ್ರಯಿಸುವರು.

ಯಚ್ಚೈವಮುಚ್ಯತೇ ಭದ್ರೇ ಮಮ ರೂಪಂ ಸನಾತನಂ ।
ಅಹಮೇವ ವರಾರೋಹೇ ಸರ್ವಭೂತಸನಾತನಃ ॥ ೩ ॥

ಅಧಶ್ಚೋರ್ಧ್ವಂ ಚ ತಿರ್ಯಕ್ಚ ಅಹಮೇವ ವ್ಯವಸ್ಥಿತಃ ।
ದಿಶಾಂ ಚ ವಿದಿಶಾಂ ಚೈವ ಉಪರ್ಯುಪರಿ ಭಾಮಿನಿ ॥ ೪ ॥

ಸರ್ವಥಾ ವಂದನೀಯಾಸ್ತಾ ಮಮ ಭಕ್ತೇನ ಸರ್ವದಾ ।
ಕ್ರಿಯಾಸಮೂಹಯುಕ್ತೇನ ಯದೀಚ್ಛೇತ್ಪರಮಾಂ ಗತಿಂ ॥ ೫ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ಗುಹ್ಯಂ ಲೋಕೇ *ಮಹಾಶಯಾಃ ।
ತಥಾ ವೈ ವಂದನೀಯಾಸ್ತೇ ಮಮ ಮಾರ್ಗಾನುಸಾರಿಣಃ ॥ ೬ ॥

ಕೃತ್ವಾಪಿ ಪರಮಂ ಕರ್ಮ ಬುದ್ಧಿಮಾದಾಯ ತದ್ವಿಧಾಂ ।
ತತಃ ಪೂರ್ವಮುಖೋ ಭೂತ್ವಾ ಪುನರ್ಗೃಹ್ಯ ಜಲಾಂಜಲಿಂ ॥ ೭ ॥

---

೩. ಭದ್ರೇ, ನನ್ನ ರೂಪವು ಸನಾತನವಾದುದೆಂದು ಹೇಳುವರಷ್ಟೆ. ವರಾರೋಹೇ, ಸರ್ವಭೂತಗಳಲ್ಲೂ ನಾನೇ ಸನಾತನನು.

೪. ಕೆಳಗೂ, ಮೇಲೆಯೂ, ಪಕ್ಕಗಳಲ್ಲೂ, ದಿಕ್ಕುವಿದಿಕ್ಕುಗಳಲ್ಲೂ ಎಲ್ಲೆಲ್ಲೂ ನಾನೇ ಇದ್ದೇನೆ.

೫. ಕರ್ಮಗಳನ್ನು ಆಚರಿಸುವ ಭಕ್ತನು ಪರಮಗತಿಯನ್ನು ಬಯಸುವುದಾದರೆ ನಿಜವಾಗಿಯೂ ಯಾವಾಗಲೂ ಮೇಲೆ ಮೇಲೆ ಎಲ್ಲಾ ದಿಕ್ಕುಗಳನ್ನೂ ವಂದಿಸಬೇಕು.

೬. ದೇವಿ, ಬೇರೊಂದು ರಹಸ್ಯ ವಿಚಾರವನ್ನು ನಿನಗೆ ಹೇಳುತ್ತೇನೆ. ಲೋಕದಲ್ಲಿ ನನ್ನ ಮಾರ್ಗಾನುಸಾರಿಗಳಾದ ಭಕ್ತಮಹಾಶಯರನ್ನೂ ಹಾಗೆಯೇ ವಂದಿಸಬೇಕು.

೭–೮. ಆ ಬಗೆಯಾದ ಬುದ್ಧಿಯಿಂದ ಉತ್ಕೃಷ್ಟವಾದ ಕರ್ಮವನ್ನು ಮಾಡಿ, ಬಳಿಕ ಪೂರ್ವಾಭಿಮುಖನಾಗಿ ನಿಂತು ಬೊಗಸೆಯಿಂದ ನೀರನ್ನು

---

* ಮಹದ್ಯಶಃ । ಯಥಾ.

ಓಂ ನಮೋ ನಾರಾಯಣೇತ್ಯುಕ್ತ್ವಾ ಇಮಂ ಮಂತ್ರಮುದೀರಯೇತ್ ॥೮॥

ಯಜಾಮಹೇ ಧರ್ಮಪರಾಯಣೋದ್ಭವಂ ।
ನಾರಾಯಣಂ ಸರ್ವಲೋಕಪ್ರಧಾನಂ ॥
ಈಶಾನಮಾದ್ಯಂ ಪುರುಷಂ ಪುರಾಣಂ ।
ಸಂಸಾರಮೋಕ್ಷಾಯ ಕೃಪಾಕರಂ ತಂ ॥ ೯ ॥

ತತಃ ಪಶ್ಚಾನ್ಮುಖೋ ಭೂತ್ವಾ ಪುನರ್ಗೃಹ್ಯ ಜಲಾಂಜಲಿಂ ।
ದ್ವಾದಶಾಕ್ಷರಮುಚ್ಚಾರ್ಯ ಇಮಂ ಮಂತ್ರಮುದೀರಯೇತ್ ॥ ೧೦ ॥

ಯಥಾ ತು ದೇವಃ ಪರಮಾದಿಕರ್ತಾ ।
ಪುರಾಣಕಲ್ಪಶ್ಚ ಯಥಾ ವಿಭೂತಿಃ ॥
ತಥಾ ಸ್ಥಿತಂ ಚಾದಿಮನಂತರೂಪಂ ।
ಅಮೋಘಸಂಕಲ್ಪಮನಂತಮೀಡೆ ॥ ೧೧ ॥

ತೆಗೆದುಕೊಂಡು 'ಓಂ ನಮೋ ನಾರಾಯಣಾಯ' ಎಂದು ಹೇಳಿ, "ಯಜಾಮಹೇ ಧರ್ಮಪರಾಯಣೋದ್ಭವಂ । ನಾರಾಯಣಂ ಸರ್ವಲೋಕಪ್ರಧಾನಂ ॥ ಈಶಾನಮಾದ್ಯಂ ಪುರುಷಂ ಪುರಾಣಂ । ಸಂಸಾರಮೋಕ್ಷಾಯ ಕೃಪಾಕರಂ ತಂ ॥" ಎಂಬ ಮಂತ್ರವನ್ನು ಹೇಳಿ, ಅರ್ಘ್ಯವನ್ನು ಕೊಡಬೇಕು.

೧೦-೧೧. ಬಳಿಕ ಪಶ್ಚಿಮಾಭಿಮುಖನಾಗಿ ಮತ್ತೆ ಬೊಗಸೆಯಿಂದ ನೀರನ್ನು ತುಂಬಿಕೊಂಡು ದ್ವಾದಶಾಕ್ಷರ ಮಂತ್ರವನ್ನು ಹೇಳಿ, ಬಳಿಕ "ಯಥಾತು ದೇವಃ ಪರಮಾದಿಕರ್ತಾ । ಪುರಾಣಕಲ್ಪಶ್ಚ ಯಥಾ ವಿಭೂತಿಃ ॥ ತಥಾ ಸ್ಥಿತಂ ಚಾದಿಮನಂತರೂಪಂ । ಅಮೋಘಸಂಕಲ್ಪಮನಂತ ಮೀಡೇ ॥" ಎಂಬೀ ಮಂತ್ರವನ್ನು ಹೇಳಿ ಅರ್ಪಿಸಬೇಕು.

ತತಸ್ತೇನೈವ ಕಾಲೇನ ಪುನರ್ಗೃಹ್ಯ ಜಲಾಂಜಲಿಂ ।
ತೇನೈವ ಚಾಸ್ಯ ಯೋಗೇನ ಭೂತ್ವಾ ಚೈವೋತ್ತರಾಮುಖಃ ॥
ನಮೋ ನಾರಾಯಣೇತ್ಯುಕ್ತ್ವಾ ಇಮಂ ಮಂತ್ರಮುದಾಹರೇತ್ ॥ ೧೨ ॥

ಯಜಾಮಹೇ ದಿವ್ಯಂ ಪರಂ ಪುರಾಣಂ ।
ಅನಾದಿಮಧ್ಯಾಂತಮನಂತರೂಪಂ ॥
ಭವೋದ್ಭವಂ ವಿಶ್ವಕರಂ ಪ್ರಶಾಂತಂ ।
ಸಂಸಾರಮೋಕ್ಷಾವಹಮದ್ವಿತೀಯಂ ॥ ೧೩ ॥

ತತಸ್ತೇನೈವ ಕಾಲೇನ ಭೂತ್ವಾ ವೈ ದಕ್ಷಿಣಾಮುಖಃ ।
ನಮಃ ಪುರುಷೋತ್ತಮಾಯೇತ್ಯುಕ್ತ್ವಾ ಇಮಂ ಮಂತ್ರಮುದೀರಯೇತ್ ॥
॥ ೧೪ ॥

ಯಜಾಮಹೇ ಯಜ್ಞಮಹೋರೂಪಂ ತು ಸತ್ಯಂ ।
ಋತಂ ಚ ಕಾಲಾದಿಮರೂಪಮಾದ್ಯಂ ॥
ಅನನ್ಯರೂಪಂ ಚ ಮಹಾನುಭಾವಂ ।
ಸಂಸಾರಮೋಕ್ಷಾಯ ಕೃತಾವತಾರಂ ॥ ೧೫ ॥

೧೨–೧೩. ಆನಂತರ ಆಗಲೇ ಮತ್ತೆ ಬೊಗಸೆಯಿಂದ ನೀರನ್ನು ತೆಗೆದುಕೊಂಡು, ಅದರೊಡನೆ ಉತ್ತರಾಭಿಮುಖನಾಗಿ 'ನಮೋ ನಾರಾಯಣಾಯ' ಎಂದು ಹೇಳಿ, "ಯಜಾಮಹೇ ದಿವ್ಯಂ ಪರಂ ಪುರಾಣಂ । ಅನಾದಿಮಧ್ಯಾಂತಮನಂತರೂಪಂ ॥ ಭವೋದ್ಭವಂ ವಿಶ್ವಕರಂ ಪ್ರಶಾಂತಂ । ಸಂಸಾರಮೋಕ್ಷಾವಹಮದ್ವಿತೀಯಂ ॥" ಎಂಬೀ ಮಂತ್ರವನ್ನು ಹೇಳಿ, ಬೊಗಸೆಯ ನೀರನ್ನರ್ಪಿಸಬೇಕು.

೧೪-೧೫. ಬಳಿಕ ಆಗಲೇ ಬೊಗಸೆಯಲ್ಲಿ ಮತ್ತೆ ನೀರನ್ನು ತುಂಬಿಕೊಂಡು ದಕ್ಷಿಣಾಭಿಮುಖನಾಗಿ 'ನಮೋ ಪುರುಷೋತ್ತಮಾಯ' ಎಂದು, "ಯಜಾಮಹೇ ಯಜ್ಞಮಹೋರೂಪಂ ತು ಸತ್ಯಂ । ಋತಂ ಚ ಕಾಲಾದಿಮರೂಪಮಾದ್ಯಂ ॥ ಅನನ್ಯರೂಪಂ ಚ ಮಹಾನುಭಾವಂ । ಸಂಸಾರಮೋಕ್ಷಾಯ ಕೃತಾವತಾರಂ ॥" ಎಂಬ ಮಂತ್ರವನ್ನು ಹೇಳಿ ಅರ್ಪಿಸಬೇಕು.

ಕಾಷ್ಠಕೃತ್ಯಸ್ತತೋ ಭೂತ್ವಾ ಕೃತ್ವಾ ಚೇಂದ್ರಿಯನಿಗ್ರಹಂ ।
ಅಚ್ಯುತೇ ತು ಮನಃ ಕೃತ್ವಾ ಇಮಂ ಮಂತ್ರಮುದಾಹರೇತ್ ॥ ೧೬ ॥

ಯಜಾಮಹೇ ಸೋಮಪಂ ಭವಂತಂ ತೇ ।
ಸೋಮಾರ್ಕನೇತ್ರಂ ಶತಪತ್ರನೇತ್ರಂ ॥
ಜಗತ್ಪ್ರಧಾನಂ ನನು ಲೋಕನಾಥಂ ।
ಮೃತ್ಯುತ್ರಿಸಂಸಾರವಿಮೋಕ್ಷಣಂ ಚ ॥ ೧೭ ॥

ತ್ರಿಷು ಸಂಧ್ಯಾಸ್ವನೇನೈವ ವಿಧಿನಾ ಕುರ್ಯಾನ್ನಮ ಚ ಕರ್ಮ ತತ್ ।
ಬುಧ್ಯಾ ಯುಕ್ತ್ಯಾ ಚ ಮತ್ಯಾ ಚ ಯದೀಚ್ಛೇತ್ಪರಮಾಂ ಗತಿಂ ॥ ೧೮ ॥

ಗುಹ್ಯಾನಾಂ ಪರಮಂ ಗುಹ್ಯಂ ಯೋಗಾನಾಂ ಪರಮೋನಿಧಿಃ ।
ಸಾಂಖ್ಯಾನಾಂ ಪರಮಂ ಸಾಂಖ್ಯಂ ಕರ್ಮಣಾಂ ಕರ್ಮ ಚೋತ್ತಮಂ॥೧೯॥

ಏತನ್ನ ದದ್ಯಾನ್ಮೂರ್ಖಾಯ ಪಿಶುನಾಯ ಶಠಾಯ ಚ ।
ದೀಕ್ಷಿತಾಯೈವ ದಾತವ್ಯಂ ಸುಶಿಷ್ಯಾಯ ದೃಢಾಯ ಚ ॥ ೨೦ ॥

೧೬–೧೭. ಹೀಗೆ ದಿಕ್ಕುಗಳ ಸೇವಾಕಾರ್ಯವನ್ನು ಮಾಡಿ, ಬಳಿಕ, ಇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟುಕೊಂಡು ವಿಷ್ಣುವಿನಲ್ಲಿ ಮನಸ್ಸನ್ನು ಇಟ್ಟು, "ಯಜಾಮಹೇ ಸೋಮಪಂ ಭವಂತಂ ತೇ । ಸೋಮಾರ್ಕನೇತ್ರಂ ಶತಪತ್ರನೇತ್ರಂ ॥ ಜಗತ್ಪ್ರಧಾನಂ ನನು ಲೋಕನಾಥಂ । ಮೃತ್ಯುತ್ರಿಸಂಸಾರವಿಮೋಕ್ಷಣಂ ಚ ॥" ಎಂಬೀ ಮಂತ್ರವನ್ನು ಹೇಳಬೇಕು.

೧೮. ಪರಮಗತಿಯನ್ನು ಅಪೇಕ್ಷಿಸುವುದಾದರೆ ತ್ರಿಸಂಧ್ಯಾಕಾಲಗಳಲ್ಲೂ ನನ್ನ ವಂದನಕರ್ಮಗಳನ್ನು ಇದೇ ವಿಧಾನದಿಂದ ಬುದ್ಧಿಯುಕ್ತಿಗಳಿಂದ ಮಾಡಬೇಕು.

೧೯–೨೦. ಗೂಢವಾದುವುಗಳಲ್ಲಿ ಅತಿಗೂಢವೂ, ಯೋಗಗಳಲ್ಲಿ ಪರಮನಿಧಿಯೂ, ಸಾಂಖ್ಯಗಳಲ್ಲಿ ಪರಮಸಾಂಖ್ಯವೂ, ಕರ್ಮಗಳಲ್ಲಿ ಉತ್ತಮಕರ್ಮವೂ ಆದ ಇದನ್ನು ಮೂರ್ಖನಿಗೂ, ಪಿಶುನನಿಗೂ, ಉಪದೇಶಿಸಬಾರದು. ದೃಢನೂ ವ್ರತಿಯೂ ಆದ ಒಳ್ಳೆಯ ಶಿಷ್ಯನಿಗೇ ಉಪದೇಶಿಸಬೇಕು.

ಏತಂ ಮರಣಕಾಲೇಽಪಿ ಗುಹ್ಯಂ ವಿಷ್ಣುಪ್ರಭಾಷಿತಂ ।
ಬುದ್ಧ್ವಾ ಧಾರಯಿತವ್ಯಂ ನ ವಿಸ್ಮರ್ತವ್ಯಂ ಕದಾಚನ ॥ ೨೧ ॥

ಯ ಏತತ್ಪಠತೇ ನಿತ್ಯಂ ಕಲ್ಯೋತ್ಥಾಯೀ* ದೃಢವ್ರತಃ ।
ಮಮಾಪಿ ಹೃದಯೇ ನಿತ್ಯಂ ಸ ತಿಷ್ಠತಿ ನ ಸಂಶಯಃ ॥ ೨೨ ॥

ಯ ಏತೇನ ವಿಧಾನೇನ ತ್ರಿಸಂಧ್ಯಂ ಕರ್ಮಕಾರಯೇತ್ ।
ತಿರ್ಯಗ್ಯೋನಿವಿನಿರ್ಮುಕ್ತೋ ಮಮ ಲೋಕಂ ಸ ಗಚ್ಛತಿ ॥ ೨೩ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ತ್ರಿಸಂಧ್ಯಾಮಂತ್ರೋಪಸ್ಥಾನಕರಣಂ ನಾಮ ವಿಂಶತ್ಯಧಿಕಶತತಮೋಽಧ್ಯಾಯಃ

---

೨೧. ವಿಷ್ಣುವು ಹೇಳಿದ ಈ ರಹಸ್ಯವನ್ನು ಮರಣಕಾಲದಲ್ಲಿಯೂ ಬುದ್ಧಿಯಲ್ಲಿಟ್ಟುಕೊಳ್ಳಬೇಕು. ಎಂದಿಗೂ ಮರೆಯಕೂಡದು.

೨೨. ನಿತ್ಯವೂ ಬೆಳಗ್ಗೆ ಎದ್ದು, ದೃಢವ್ರತನಾಗಿ ಇದನ್ನು ಹೇಳುವವನು ನಿಜವಾಗಿಯೂ ನನ್ನ ಹೃದಯದಲ್ಲಿ ಯಾವಾಗಲೂ ಇರುವುದರಲ್ಲಿ ಸಂಶಯವಿಲ್ಲ.

೨೩. ಈ ವಿಧಿಯಿಂದ ತ್ರಿಸಂಧ್ಯಾಕಾಲದಲ್ಲಿಯೂ ಕರ್ಮವನ್ನು ಮಾಡುವವನು ತಿರ್ಯಗ್ಜನ್ಮಗಳನ್ನು ತಪ್ಪಿಸಿಕೊಂಡು, ನನ್ನ ಲೋಕವನ್ನು ಸೇರುವನು.

ಅಧ್ಯಾಯದ ಸಾರಾಂಶ :—

ಶ್ರೀವರಾಹನು ಭೂದೇವಿಗೆ ಕರ್ಮಾಸಕ್ತನಾದ ಆರ್ಯನು ಮೂರು ಕಾಲಗಳಲ್ಲೂ ಮಾಡಬೇಕಾದ ಸಂಧ್ಯಾವಂದನ ಕರ್ಮವನ್ನು ತಿಳಿಸುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರಇಪ್ಪತ್ತನೆಯ ಅಧ್ಯಾಯ.

---

* ಕಲ್ಪೋಚ್ಛ್ರಾಯೀ.

॥ ಶ್ರೀಃ ॥

–X–

ಏಕವಿಂಶತ್ಯಧಿಕಶತತಮೋಽಧ್ಯಾಯಃ

ಅಥ ಜನ್ಮಾಭಾವಃ

॥ ಶ್ರೀವರಾಹ ಉವಾಚ ॥

ಯೇನ ಗರ್ಭಂ ನ ಗಚ್ಛೇತ ತಚ್ಛೃಣುಷ್ವ ವಸುಂಧರೇ ।
ಕಥಯಿಷ್ಯಾಮಿ ತೇ ಹ್ಯೇವಂ ಸರ್ವಧರ್ಮವಿನಿಶ್ಚಯಂ ॥ ೧ ॥

ಕೃತ್ವಾಪಿ ವಿಪುಲಂ ಕರ್ಮ ಆತ್ಮಾನಂ ನ ಪ್ರಶಂಸತಿ ।
ಕರೋತಿ ಬಹುಕರ್ಮಾಣಿ ಶುದ್ಧೇನೈವಾಂತರಾತ್ಮನಾ ॥ ೨ ॥

ಕೃತ್ವಾ ತು ಮಮ ಕರ್ಮಾಣಿ ಸಮರ್ಥೋಽನುಗ್ರಹೇ ರತಃ ।
ಕಾರ್ಯಾಕಾರ್ಯೇ ವಿಜಾನಾತಿ ಸರ್ವಧರ್ಮೇಷು ನಿಷ್ಠಿತಃ ॥ ೩ ॥

ನೂರ ಇಪ್ಪತ್ತೊಂದನೆಯ ಅಧ್ಯಾಯ

ಜನ್ಮಾಭಾವ

೧. ಶ್ರೀವರಾಹ—ವಸುಂಧರೇ, ಮನುಷ್ಯನು ಯಾವುದರಿಂದ ಮತ್ತೆ ಜನ್ಮವನ್ನು ಪಡೆಯದಿರುವನೋ ಆ ಸರ್ವಧರ್ಮನಿರ್ಣಯವನ್ನು ನಿನಗೆ ಈಗ ಹೇಳುತ್ತೇನೆ. ಕೇಳು.

೨-೭. ಯಾರು ಶುದ್ಧಾಂತರಂಗದಿಂದ ಬಹು ಸತ್ಕರ್ಮಗಳನ್ನು ಮಾಡುವನೋ, ಬೇಕಾದಹಾಗೆ ಕರ್ಮಗಳನ್ನು ಮಾಡಿದರೂ ಆತ್ಮಸ್ತುತಿಯನ್ನು ಮಾಡಿಕೊಳ್ಳದಿರುವನೋ, ಸಮರ್ಥನಾಗಿ ನನ್ನ ಪೂಜಾದಿಕರ್ಮಗಳನ್ನು ಮಾಡಿ, ಅನುಗ್ರಹವನ್ನು ಪಡೆಯುವುದರಲ್ಲಿ ಆಸಕ್ತನೋ, ಕಾರ್ಯಾಕಾರ್ಯಗಳನ್ನು ಚೆನ್ನಾಗಿ ತಿಳಿದು ಸರ್ವಧರ್ಮನಿರತನಾಗಿರುವನೋ, ಶೀತೋಷ್ಣವಾಯು

ಶೀತೋಷ್ಣವಾತವರ್ಷಾದಿಕ್ಷುತ್ಪಿಪಾಸಾಸಹಶ್ಚ ಯಃ |
ಯೋ ದರಿದ್ರೋ ನಿರಾಲಸ್ಯಃ ಸತ್ಯವಾಗನಸೂಯಕಃ ॥ ೪ ॥

ಸ್ವದಾರನಿರತೋ ನಿತ್ಯಂ ಪರದಾರವಿವರ್ಜಕಃ |
ಸತ್ಯವಾದೀ ವಿಶುದ್ಧಾತ್ಮಾ ನಿತ್ಯಂ ಭಾಗವತಪ್ರಿಯಃ ॥ ೫ ॥

ಸಂವಿಭಾಜ್ಯ ವಿಶೇಷಜ್ಞೋ ನಿತ್ಯಂ ಬ್ರಾಹ್ಮಣವತ್ಸಲಃ |
ಪ್ರಿಯಭಾಷೀ ದ್ವಿಜಾನಾಂ ಚ ಮಮಕರ್ಮಪರಾಯಣಃ ॥ ೬ ॥

ಕುಯೋನಿಂ ತು ನ ಗಚ್ಛೇತ ಮಮ ಲೋಕಂ ಸ ಗಚ್ಛತಿ ॥ ೭ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ಯೋ ವಿಯೋನಿಂ ನ ಗಚ್ಛೇತ ಮಮ ಕರ್ಮಪರಾಯಣಃ ॥ ೮ ॥

ಜೀವಹಿಂಸಾನಿವೃತ್ತಸ್ತು ಸರ್ವಭೂತಹಿತಃ ಶುಚಿಃ |
ಸರ್ವತ್ರ ಸಮತಾಯುಕ್ತಃ ಸಮಲೋಷ್ಟಾಶ್ಮಕಾಂಚನಃ ॥ ೯ ॥

ವೃಷ್ಟ್ಯಾದಿಗಳನ್ನೂ, ಹಸಿವು ಬಾಯಾರಿಕೆಗಳನ್ನೂ ಸಹಿಸುವನೋ, ದರಿದ್ರನಾಗಿದ್ದರೂ ಆಲಸ್ಯ ವಿಲ್ಲದವನೋ, ಸತ್ಯಭಾಷಿಯೋ, ಅಸೂಯೆಯಿಲ್ಲದವನೋ, ಪರಸ್ತ್ರೀವಿಮುಖನೂ, ಸ್ವಪತ್ನೀನಿರತನೂ, ಪರಿಶುದ್ಧಾತ್ಮನೂ, ಯಾವಾಗಲೂ ಭಗವದ್ಭಕ್ತರಲ್ಲೂ ಬ್ರಾಹ್ಮಣರಲ್ಲೂ ಪ್ರೀತಿಯುಳ್ಳವನೂ, ವಿವೇಕಿಯೂ, ವಿಶೇಷಜ್ಞನೂ, ದ್ವಿಜರಿಗೆ ಹಿತವಾಗಿ ಮಾತನಾಡುವವನೂ, ನನ್ನ ಕರ್ಮಗಳಲ್ಲಿ ನಿರತನೂ ಆಗಿರುವನೋ ಆತನು ಹೀನಜನ್ಮಕ್ಕೆ ಹೋಗದೆ ನನ್ನ ಲೋಕವನ್ನು ಸೇರುವನು.

೮. ವಸುಂಧರೇ, ನನ್ನ ಕರ್ಮಗಳಲ್ಲಿ ಆಸಕ್ತನಾದ ಬೇರೆ ಯಾರ ಹೀನಜನ್ಮಗಳಿಗೆ ಹೋಗದಿರುವನೋ ಅದನ್ನೂ ಹೇಳುತ್ತೇನೆ. ಕೇಳು.

೯–೧೩. ಸುಂದರಿ, ಪ್ರಾಣಿಹಿಂಸೆ ಮಾಡದೆ ಸಕಲಪ್ರಾಣಿಗಳಿಗೂ ಹಿತನೂ, ಪರಿಶುದ್ಧನೂ, ಸರ್ವಸಮತೆಯುಳ್ಳವನೂ, ಮಣ್ಣು ಕಲ್ಲು ಚಿನ್ನಗಳಲ್ಲಿ

ಬಾಲ್ಯೇ ಸ್ಥಿತೋಽಪಿ ವಯಸಿ ಶಾಂತೋ ದಾಂತಶ್ಶುಭೇ ರತಃ ।
ನಿತ್ಯಂ ನೈವ ವಿಜಾನಾತಿ ಪರೇಣಾಪಕೃತಂ ಕ್ವಚಿತ್ ॥ ೧೦ ॥

ಕರ್ತವ್ಯಂ ಸಂಸ್ಮರೇತ್ಸರ್ವಂ ಮಮ ಸತ್ಯಂ ಚ ಜಲ್ಪತಿ ।
ವ್ಯಲೀಕಾದ್ವಿನಿವೃತ್ತೋ ಯಸ್ತ್ವಥೈತಿಕೃತನಿಶ್ಚಯಃ ॥ ೧೧ ॥

ನಿತ್ಯಂ ಚ ವೃತ್ತಿವಾನ್ಕಂಚಿತ್ಪರೋಕ್ಷೇಽಪಿ ನ ಚಾಕ್ಷಿಪೇತ್ ।
ಋತುಕಾಲೇಽಪಿ ಗಚ್ಛೇದ್ಯಃ ಅಪತ್ಯಾರ್ಥೇ ಸ್ವಕಾಂ ಸ್ತ್ರಿಯಂ ॥ ೧೨ ॥

ಈದೃಶಾಸ್ತು ನರಾ ಭದ್ರೇ ಮಮ ಕರ್ಮಪರಾಯಣಾಃ ।
ತೇ ವಿಯೋನಿಂ ನ ಗಚ್ಛಂತಿ ಮಮ ಗಚ್ಛಂತಿ ಸುಂದರಿ ॥ ೧೩ ॥

ಪುನರನ್ಯತ್ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ॥ ೧೪ ॥

ಪುರುಷಾಣಾಂ ಪ್ರಸನ್ನಾನಾಂ ಯಶ್ಚ ಧರ್ಮಸ್ಸನಾತನಃ ।
ಮನುನಾಪ್ಯನ್ಯಥಾ ದೃಷ್ಟೋ ಹ್ಯನ್ಯಥಾಂಗಿರಸೇನ ಚ ॥ ೧೫ ॥

ಸಮದೃಷ್ಟಿಯುಳ್ಳವನೂ, ಬಾಲ್ಯವಯಸ್ಸಿನವನಾಗಿದ್ದರೂ ಶಾಂತನೂ, ಜಿತೇಂದ್ರಿಯನೂ, ಶುಭಕಾರ್ಯಾಸಕ್ತನೂ, ಯಾವಾಗಲೂ ಪರರು ಮಾಡಿದ ಅಪಕಾರವನ್ನು ಸ್ವಲ್ಪವೂ ನೆನೆಯದವನೂ, ತಾನು ಮಾಡಬೇಕಾದುದನ್ನು ಎಲ್ಲವನ್ನೂ ಜ್ಞಾಪಿಸಿಕೊಳ್ಳುವವನೂ, ನಿಜವನ್ನು ನುಡಿಯುವವನೂ, ಅಪ್ರಿಯಗಳನ್ನು ಬಿಟ್ಟವನೂ, ಸತ್ಯದಲ್ಲಿ ನಂಬಿಕೆಯುಳ್ಳವನೂ, ಸದಾ ಉದ್ಯೋಗಶೀಲನೂ, ಯಾರನ್ನೂ, ಹಿಂದೆಯೂ (ಪರೋಕ್ಷದಲ್ಲಿಯೂ) ಆಕ್ಷೇಪಿಸದವನೂ, ಪುತ್ರಾರ್ಥವಾಗಿ ತನ್ನ ಪತ್ನಿಯೊಡನೆ ಋತುಕಾಲದಲ್ಲಿ ಮಾತ್ರ ಸೇರುವವನೂ, ಆಗಿರುವ ನನ್ನ ಕರ್ಮಪರಾಯಣನಾದ ಮನುಷ್ಯನು ಹೀನಜನ್ಮಕ್ಕೆ ಹೋಗದೆ ನನ್ನ ಲೋಕವನ್ನು ಸೇರುವನು.

೧೪. ವಸುಂಧರೇ, ಇನ್ನೂ ಬೇರೆಯ ವಿಚಾರವನ್ನು ಹೇಳುತ್ತೇನೆ. ಕೇಳು.

೧೫. ನಿರ್ಮಲರಾದ ಮನುಷ್ಯರ ಸನಾತನಧರ್ಮವನ್ನು ಮನುವು ಒಂದು ವಿಧವಾಗಿಯೂ, ಬೃಹಸ್ಪತಿಯು ಮತ್ತೊಂದು ವಿಧವಾಗಿಯೂ ತಿಳಿದುಕೊಂಡರು.

ಶುಕ್ರೇಣ ಚಾನ್ಯಥಾ ದೃಷ್ಟೋ ಗೌತಮೇನಾಪಿ ಚಾನ್ಯಥಾ ।
ಸೋಮೇನ ಚಾನ್ಯಥಾ ದೃಷ್ಟೋ ರುದ್ರೇನಾಪ್ಯನ್ಯಥಾ ಪುನಃ ।
ಶಂಖೇನ ಚಾನ್ಯಥಾ ದೃಷ್ಟೋ ಲಿಖಿತೇನಾಪಿ ಚಾನ್ಯಥಾ ॥ ೧೬ ॥

ಕಶ್ಯಪೇನಾನ್ಯಥಾ ದೃಷ್ಟೋ ಧರ್ಮೇಣಾಪ್ಯನ್ಯಥಾ ಧರೇ ।
ಅಗ್ನಿನಾ ವಾಯುನಾ ಚೈವ ದೃಷ್ಟೋ ಧರ್ಮೋಽನ್ಯಥಾ ಧರೇ ।
ಯಮೇನ ಚಾನ್ಯಥಾ ದೃಷ್ಟಃ ಇಂದ್ರೇಣ ವರುಣೇನ ಚ ॥ ೧೭ ॥

ಕುಬೇರೇಣಾನ್ಯಥಾ ದೃಷ್ಟಃ ಶಾಂಡಿಲ್ಯೇನಾಪಿ ಚಾನ್ಯಥಾ ।
ಪುಲಸ್ತ್ಯೇನಾನ್ಯಥಾ ದೃಷ್ಟಃ ಆದಿತ್ಯೇನಾಪಿ ಚಾನ್ಯಥಾ ।
ಪಿತೃಭಿಶ್ಚಾನ್ಯಥಾ ದೃಷ್ಟೋ ಹ್ಯನ್ಯಥಾಪಿ ಸ್ವಯಂಭುವಾ ॥ ೧೮ ॥

ಆತ್ಮನಾತ್ಮನಿ ಧರ್ಮೇಣ ಯೇ ನರಾ ನಿಶ್ಚಿತವ್ರತಾಃ ।
ಸ್ವಕಂ ಪಾಲಯತೇ ಧರ್ಮಂ ಸ್ವಮತೇನೈವ ಭಾಷಿತಂ ॥ ೧೯ ॥

ಪರವಾದಂ ನ ಕುರ್ವೀತ ಸರ್ವಧರ್ಮೇಷು ನಿಶ್ಚಿತಂ ॥ ೨೦ ॥

೧೬-೧೮. ಹೀಗೆಯೇ, ಶುಕ್ರ, ಗೌತಮ, ಸೋಮ, ರುದ್ರ, ಶಂಖ, ಲಿಖಿತ, ಕಶ್ಯಪ, ಧರ್ಮರಾಯ, ಅಗ್ನಿ, ವಾಯು, ಯಮ, ಇಂದ್ರ, ವರುಣ, ಕುಬೇರ, ಶಾಂಡಿಲ್ಯ, ಪುಲಸ್ತ್ಯ, ಆದಿತ್ಯ, ಪಿತೃದೇವತೆಗಳು, ಬ್ರಹ್ಮ, ಇವರೆಲ್ಲರಿಗೂ ಆ ಧರ್ಮವು ಬೇರೆ ಬೇರೆಯ ವಿಧವಾಗಿ ಕಂಡುಬಂದಿದೆ.

೧೯. ಆದುದರಿಂದ ಸ್ಥಿರವ್ರತಿಗಳಾದವರು ತಮ್ಮಲ್ಲಿ ತಾವು ಧರ್ಮವನ್ನು ನಿರ್ಣಯಿಸಿಕೊಂಡು ತಮ್ಮ ಧರ್ಮವನ್ನು ಪಾಲಿಸಬೇಕು. ತಮ್ಮ ಅಭಿಪ್ರಾಯ ದಂತೆ ಮಾತನಾಡಬೇಕು.

೨೦. ಸರ್ವಧರ್ಮಗಳಲ್ಲೂ ಪರರ ವಾದವನ್ನೇ ನಿಶ್ಚಯವೆಂದು ಮಾಡಕೊಡದು.

ನ ನಿಂದೇದ್ಧರ್ಮಕಾರ್ಯಾಣಿ ಆತ್ಮಧರ್ಮಪಥೇ ಸ್ಥಿತಃ ॥ ೨೧ ॥

ಏಭಿರ್ಗುಣೈಸ್ಸಮಾಯುಕ್ತೋ ಮಮ ಕರ್ಮಾಣಿ ಕಾರಯೇತ್ ।
ವಿಯೋನಿಂ ಸ ನ ಗಚ್ಛೇತ ಮಮ ಲೋಕಾಯ ಗಚ್ಛತಿ ॥ ೨೨ ॥

ಪುನರನ್ಯತ್ತು ವಕ್ಷ್ಯಾಮಿ ತಚ್ಛೃಣುಷ್ವೇಹ ಮಾಧವಿ ।
ತರಂತಿ ಪುರುಷಾ ಯೇನ ಗರ್ಭಸಂಸಾರಸಾಗರಂ ॥ ೨೩ ॥

ಜಿತೇಂದ್ರಿಯಾ ಜಿತಕ್ರೋಧಾ ಲೋಭಮೋಹವಿವರ್ಜಿತಾಃ ।
ಆತ್ಮೋಪಕಾರಕಾ ನಿತ್ಯಂ ದೇವಾತಿಥಿಗುರುಪ್ರಿಯಾಃ
ಹಿಂಸಾದೀನಿ ನ ಕುರ್ವೀತ ಮಧುಮಾಂಸ ವಿವರ್ಜಕಾಃ ॥ ೨೪ ॥

ಮನಸಾ ಬ್ರಾಹ್ಮಣೀಂ ಚೈವ ಯೋ ಗಚ್ಛೇನ್ನ ಕದಾಚನ ।
ವಿಪ್ರಾಯ ಕಪಿಲಾಂ ದದ್ಯಾತ್ ವೃದ್ಧಂ ಸಾಂತ್ವೇನ ಪಾಲಯೇತ್ ॥ ೨೫ ॥

---

೨೧. ಸ್ವಧರ್ಮಮಾರ್ಗದಲ್ಲಿರುವವನು ಬೇರೆಯ ಧರ್ಮಕಾರ್ಯಗಳನ್ನು ನಿಂದಿಸಬಾರದು.

೨೨. ಈ ಗುಣಗಳುಳ್ಳವನಾಗಿ ನನ್ನ (ಪೂಜಾದಿ) ಕರ್ಮಗಳನ್ನು ಮಾಡುವವನು ಹೀನ ಜನ್ಮಕ್ಕೆ ಹೋಗದೆ ನನ್ನ ಲೋಕವನ್ನು ಸೇರುವನು.

೨೩. ಮಾಧವಿ, ಮನುಷ್ಯರು ಗರ್ಭಸಂಸಾರಸಾಗರವನ್ನು ದಾಟುವ ಮತ್ತೊಂದು ವಿಧಾನವನ್ನೂ ಹೇಳುತ್ತೇನೆ. ಅದನ್ನು ಕೇಳು.

೨೪-೨೯. ಇಂದ್ರಿಯಗಳನ್ನೂ, ಕೋಪವನ್ನೂ ಜಯಿಸಿದವರೂ, ಲೋಭಮೋಹಗಳಿಲ್ಲದವರೂ, ಆತ್ಮೋಪಕಾರಕರೂ, ಯಾವಾಗಲೂ ದೇವಾತಿಥಿಗುರುಗಳಲ್ಲಿ ಪ್ರೀತಿಯುಳ್ಳವರೂ, ಹಿಂಸಾದಿದುಷ್ಕಾರ್ಯಗಳನ್ನೂ, ಮದ್ಯಮಾಂಸಗಳನ್ನೂ ಬಿಟ್ಟವರೂ, (ಬ್ರಾಹ್ಮಣರಲ್ಲದಿದ್ದಲ್ಲಿ) ಎಂದಿಗೂ ಮನಸ್ಸಿನಲ್ಲಿಯೂ ಬ್ರಾಹ್ಮಣಸ್ತ್ರೀಯನ್ನು ಬಯಸದವರೂ, ಬ್ರಾಹ್ಮಣರಿಗೆ ಕಪಿಲೆಯನ್ನು ದಾನ ಮಾಡುವವರೂ, ವೃದ್ಧರನ್ನು ಸಮಾಧಾನದಿಂದ ಪಾಲಿಸುವವರೂ, ಮಕ್ಕಳಲ್ಲಿ

ಸರ್ವೇಷಾಂ ಚೈವ ಪುತ್ರಾಣಾಂ ನ ವಿಶೇಷಂ ಕರೋತಿ ಯಃ ।
ಸಂಕ್ರುದ್ಧಂ ಬ್ರಾಹ್ಮಣಂ ದೃಷ್ಟ್ವಾ ಯಸ್ತು ತತ್ರ ಪ್ರಸಾದಯೇತ್ ॥ ೨೬ ॥

ಯಃ ಸ್ಪೃಶೇತ್ಕಪಿಲಾಂ ಭಕ್ತ್ಯಾ ಕುಮಾರೀಂ ನ ಚ ದೂಷಯೇತ್ ।
ಅಗ್ನಿಂ ನ ಚಕ್ರಮೇತ್ಪದ್ಭ್ಯಾಂ ನ ಚ ಪುತ್ರೇಣ ಭಾಷಯೇತ್ ॥ ೨೭ ॥

ಜಲೇ ನ ಮೇಹಯೇದ್ಯಸ್ತು ಗುರುಭಕ್ತೋ ನ ಜಲ್ಪಕಃ ।
ಏವಂ ಧರ್ಮೇಣ ಸಂಯುಕ್ತೋ ಯೋನು ಮಾಂ ಪ್ರತಿಪದ್ಯತೇ ॥ ೨೮ ॥

ಸ ಚ ಗರ್ಭಂ ನ ಗಚ್ಛೇತ ಮಮ ಲೋಕಂ ಸ ಗಚ್ಛತಿ ॥ ೨೯ ॥

ಇತಿ ಶ್ರೀ ವರಾಹಪುರಾಣೇ ಜನ್ಮಾಭಾವೋನಾಮೈಕವಿಂಶತ್ಯಧಿಕ
ಶತತಮೋಧ್ಯಾಯಃ

ಪಕ್ಷಪಾತಮಾಡದವರೂ, ಕೋಪಗೊಂಡ ಬ್ರಾಹ್ಮಣನನ್ನು ನೋಡಿದರೆ ಅವನನ್ನು ಸಮಾಧಾನಗೊಳಿಸುವವರೂ, ಕಪಿಲೆಯನ್ನು ಭಕ್ತಿಯಿಂದ ಮುಟ್ಟುವವರೂ, ಕನ್ನೆಯನ್ನು ದೂಷಿಸದವರೂ, ಅಗ್ನಿಯನ್ನು ಒದೆಯದೆ ಅಥವಾ ದಾಟದೆ ಇರುವವರೂ, ಮಗನೊಡನೆ ಜಗಳವಾಡದೆ ಇರುವವರೂ ನೀರಿನಲ್ಲಿ ಮೂತ್ರ ವಿಸರ್ಜನೆಮಾಡದವರೂ, ಗುರುಭಕ್ತರೂ, ಅತಿಭಾಷಿಗಳಲ್ಲದವರೂ ಆಗಿ ಧರ್ಮಯುತರಾದ ಯಾರು ನನ್ನನ್ನು ಆಶ್ರಯಿಸುವರೋ ಅವರು ಮತ್ತೆ ಗರ್ಭವನ್ನು ಹೊಗದೆ ನನ್ನ ಲೋಕವನ್ನು ಸೇರುವರು.

ಅಧ್ಯಾಯದ ಸಾರಾಂಶ :—

ಶ್ರೀವರಾಹನು ಭೂದೇವಿಗೆ, ಮನುಷ್ಯರಿಗೆ ಪುನರ್ಜನ್ಮವಿಲ್ಲದಂತೆ ಮಾಡುವ ವಿಷ್ಣುಪೂಜೆ ಮೊದಲಾದುವುಗಳ ವಿಶೇಷರೀತಿಗಳನ್ನು ಹೇಳುವಲ್ಲಿಗೆ ಶ್ರೀವರಾಹ ಪುರಾಣದಲ್ಲಿ ನೂರ ಇಪ್ಪತ್ತೊಂದನೆಯ ಅಧ್ಯಾಯ.

॥ ಶ್ರೀಃ ॥

-X-

ದ್ವಾವಿಂಶತ್ಯಧಿಕಶತತಮೋಽಧ್ಯಾಯಃ

ಅಥ ಕೋಕಾಮುಖಮಾಹಾತ್ಮ್ಯಂ

॥ ವರಾಹ ಉವಾಚ ॥

ಗುಹ್ಯಾನಾಂ ಪರಮಂ ಗುಹ್ಯಂ ತಚ್ಛೃಣುಷ್ವ ವಸುಂಧರೇ ।
ತಿರ್ಯಗ್ಯೋನಿಗತಾಶ್ಚಾಪಿ ಯೇನ ಮುಚ್ಯಂತಿ ಕಿಲ್ಬಿಷಾತ್ ॥ ೧ ॥

ಅಷ್ಟಮ್ಯಾಂ ಚ ಚತುರ್ದಶ್ಯಾಂ ಮೈಥುನಂ ಯೋ ನ ಗಚ್ಛತಿ ।
ಭುಕ್ತ್ವಾ ಪರಸ್ಯ ಚಾನ್ನಾನಿ ಯಶ್ಚೈವ ನ ವಿಕುತ್ಸತಿ ॥ ೨ ॥

ಬಾಲ್ಯೇ ವಯಸ್ಯಪಿ ಚ ಯೋ ಮಮ ನಿತ್ಯಮನುವ್ರತಃ ।
ಯೇನ ಕೇನಾಪಿ ಸಂತುಷ್ಟೋ ಯೋ ಮಾತಾಪಿತೃಪೂಜಕಃ ॥ ೩ ॥

ನೂರ ಇಪ್ಪತ್ತೆರಡನೆಯ ಅಧ್ಯಾಯ

ಕೋಕಾಮುಖಮಹಿಮೆ.

೧. ಶ್ರೀವರಾಹ—ವಸುಂಧರೇ, ಯಾವುದರಿಂದ ತಿರ್ಯಗ್ಜನ್ಮಗತರು ಕೂಡ ಪಾಪವನ್ನು ಕಳೆದುಕೊಳ್ಳುವರೋ ಆ ರಹಸ್ಯಗಳಲ್ಲಿ ಪರಮರಹಸ್ಯವನ್ನು ಕೇಳು.

೩-೬ ಅಷ್ಟಮೀ ಚತುರ್ದಶಿಗಳಲ್ಲಿ ಸ್ತ್ರೀಸಂಗಮಾಡದವನೂ, ಪರರ ಅನ್ನವನ್ನು ತಿಂದು ದೂಷಿಸದವನೂ, ಬಾಲ್ಯದಲ್ಲೂ, ಯೌವನದಲ್ಲೂ, ಯಾವಾಗಲೂ ನನ್ನ ವ್ರತನಿಷ್ಠನೂ, ದೊರೆತುದರಲ್ಲೇ ಸಂತೋಷಪಡುವವನೂ, ತಾಯಿತಂದೆಗಳನ್ನು ಪೂಜಿಸುವವನೂ, ಅತಿಶ್ರಮದಿಂದ ಜೀವಿಸದವನೂ, ವಿವೇಕಿಯೂ,

ಆಯಾಸೇ ಜೀವತಿ ನಯಃ ಪ್ರವಿಭಾಗೀ ಗುಣಾನ್ವಿತಃ ।
ದಾತಾ ಭೋಕ್ತಾ ಚ ಕಾರ್ಯೇಷು ಸ್ವತಂತ್ರೋ ನಿತ್ಯಸಂಯುತಃ ॥ ೪ ॥

ವಿಕರ್ಮ ನಾಭಿಕುರ್ವೀತ ಕೌಮಾರ ವ್ರತಸಂಸ್ಥಿತಃ ।
ಸರ್ವಭೂತದಯಾಯುಕ್ತಃ ಸತ್ವೇನ ಚ ಸಮನ್ವಿತಃ ॥ ೫ ॥

ಮತ್ಯಾ ಚ ನಿಸ್ಪೃಹೋತ್ಯಂತಂ ಪರಾರ್ಥೇಷ್ವಸ್ಪೃಹಸ್ಸದಾ ।
ಈದೃಗ್ಬುದ್ಧಿಂ ಸಮಾದಾಯ ಮಮ ಲೋಕಾಯ ಗಚ್ಛತಿ ॥ ೬ ॥

ಇಮಂ ಗುಹ್ಯಂ ವರಾರೋಹೇ ದೇವೈರಪಿ ದುರಾಸದಂ ।
ತಚ್ಛೃಣುಷ್ವಾನವದ್ಯಾಂಗಿ ಕಥ್ಯಮಾನಂ ಮಯಾನಘೇ ॥ ೭ ॥

ಜರಾಯುಜಾಂಡಜೋದ್ಭಿಜ್ಜಸ್ವೇದಜಾನಿ ಕದಾಚನ ।
ಯೇ ನ ಹಿಂಸಂತಿ ಭೂತಾನಿ ಶುದ್ಧಾತ್ಮಾನೋ ದಯಾಪರಾಃ ॥ ೮ ॥

ಯಸ್ತು ಕೋಕಾಮುಖೇ ದೇವಿ ಧ್ರುವಂ ಪ್ರಾಣಾನ್ಪರಿತ್ಯಜೇತ್ ।
ಮನಸಾ ನ ಚಲತ್ಯೇವ ಮಮ ವಲ್ಲಭತಾಂ ವ್ರಜೇತ್ ॥ ೯ ॥

ಗುಣಶಾಲಿಯೂ, ಉದಾರನೂ, ಭೋಗಿಯೂ, ಕಾರ್ಯಗಳಲ್ಲಿ ಸ್ವತಂತ್ರನೂ, ನಿತ್ಯನಿಯಮವುಳ್ಳವನೂ, ಕೌಮಾರವ್ರತದಲ್ಲಿರುವನಾಗಿ ವಿಕರ್ಮಗಳನ್ನು ಮಾಡದವನೂ, ಸರ್ವಪ್ರಾಣಿದಯಾಪರನೂ, ಗುಣಯುತನೂ, ಬುದ್ಧಿಪೂರ್ವಕವಾಗಿ ನಿಸ್ಪೃಹನೂ, ಎಂದಿಗೂ ಪರದ್ರವ್ಯದಲ್ಲಿ ಆಸೆಯಿಲ್ಲದವನೂ ಆಗಿರುವವನು ನನ್ನ ಲೋಕವನ್ನು ಸೇರುವನು.

೭. ವರಾರೋಹೇ, ಅನಘೇ, ಶೋಭನಾಂಗೀ, ದೇವತೆಗಳಿಗೂ ಪಡೆಯಲು ಕಷ್ಟವಾದ, ನಾನು ಹೇಳುವ ಈ ರಹಸ್ಯವನ್ನು ಕೇಳು.

೮-೯. ದೇವಿ, ಗರ್ಭಾಶಯಜ, ಅಂಡಜ, ಉದ್ಭಿಜ, ಸ್ವೇದಜಗಳೆಂಬ ಪ್ರಾಣಿಗಳನ್ನು ಎಂದಿಗೂ ಹಿಂಸಿಸದ, ದಯಾಪರರಾದ ಶುದ್ಧಾತ್ಮರೂ, ಕೋಕಾಮುಖಕ್ಷೇತ್ರದಲ್ಲಿ ನಿಜವಾಗಿ ಪ್ರಾಣಗಳನ್ನು ಬಿಡುವವನೂ ನನ್ನ ಮನಸ್ಸಿನಿಂದ ಚಲಿಸುವುದೇ ಇಲ್ಲ. ನನಗೆ ಪ್ರಿಯರಾಗುವರು.

ತತೋ ವಿಷ್ಣುವಚಃ ಶ್ರುತ್ವಾ ಸಾ ಮಹೀ ಶಂಸಿತವ್ರತಾ ।
ವರಾಹರೂಪಿಣಂ ದೇವಂ ಪ್ರತ್ಯುವಾಚ ವಸುಂಧರಾ ॥ ೧೦ ॥

॥ ಧರಣ್ಯುವಾಚ ॥

ಅಹಂ ಶಿಷ್ಯಾ ಚ ದಾಸೀ ಚ ಭಕ್ತಾ ಚ ತ್ವಯಿ ಮಾಧವ ।
ಏವಂ ಮೇ ಪರಮಂ ಗುಹ್ಯಂ ತ್ವದ್ಭಕ್ತ್ಯಾ ವಕ್ತುಮರ್ಹಸಿ ॥ ೧೧ ॥

ಚಕ್ರಂ ವಾರಾಣಸೀಂ ಚೈವ ಅಟ್ಟಹಾಸಂ ಚ ನೈಮಿಷಂ ।
ಭದ್ರಕರ್ಣಹ್ರದಂ ಚೈವ ಹಿತ್ವಾ ಕೋಕಾಂ ಪ್ರಶಂಸಸಿ ॥ ೧೨ ॥

ನಗರಂ ಚ ದ್ವಿರಂಡಂ ಚ ಮುಕುಟಂ ಮಂಡಲೇಶ್ವರಂ ।
ಕೇದಾರಂ ಚ ತತೋ ಮುಕ್ತ್ವಾ ಕಿಂ ಕೋಕಾಂ ಚ ಪ್ರಶಂಸಸಿ ॥ ೧೩ ॥

ದೇವದಾರುವನಂ ಮುಕ್ತ್ವಾ ತಥಾ ಜಲೇಶ್ವರಂ ವಿಭುಂ ।
ದುರ್ಗಂ ಮಹಾಬಲಂ ಮುಕ್ತ್ವಾ ಕಿಂ ವೈ ಕೋಕಾಂ ಪ್ರಶಂಶಸಿ ॥ ೧೪ ॥

---

೧೦. ಶ್ಲಾಘ್ಯವಾದ ವ್ರತವುಳ್ಳ ಆ ಭೂದೇವಿಯು ವಿಷ್ಣುವಿನ ಈ ಮಾತನ್ನು ಕೇಳಿ, ವರಾಹರೂಪನಾದ ಆ ದೇವನನ್ನು ನೋಡಿ, ಮುಂದಿನ ಮಾತನಾಡಿದಳು.

೧೧. ಭೂದೇವಿ—ಮಾಧವಾ, ನಾನು ನಿನಗೆ ಶಿಷ್ಯಳೂ ಸೇವಕಳೂ, ಭಕ್ತಳೂ ಆಗಿದ್ದೇನೆ. ನಿನಗೆ ಭಕ್ತಳಾಗಿರುವುದರಿಂದ ಆ ಪರಮರಹಸ್ಯವನ್ನು ನನಗೆ ನೀನು ಹೇಳಬೇಕು.

೧೨. ಚಕ್ರಕ್ಷೇತ್ರವನ್ನೂ, ವಾರಾಣಸೀ (ಕಾಶಿ), ಅಟ್ಟಹಾಸ, ನೈಮಿಷ ಭದ್ರಕರ್ಣಹ್ರದ ಈ ಕ್ಷೇತ್ರಗಳನ್ನೂ ಬಿಟ್ಟು, ಕೋಕಾಮುಖಕ್ಷೇತ್ರವನ್ನು ಏಕೆ ಹೊಗಳುತ್ತೀಯೆ.

೧೩. ದ್ವಿರಂಡನಗರವನ್ನೂ, ಮುಕುಟ ಮಂಡಲೇಶ್ವರಗಳನ್ನೂ, ಕೇದಾರವನ್ನೂ ಬಿಟ್ಟು, ಕೋಕಾಕ್ಷೇತ್ರವನ್ನು ಏಕೆ ಶ್ಲಾಘಿಸುತ್ತೀಯೆ ?

೧೪. ದೇವದಾರುವನವನ್ನೂ, ಸಮಸ್ತಸ್ವರೂಪವಾದ ಜಾಲೇಶ್ವರವನ್ನೂ ಮಹಾಬ-ದುರ್ಗವನ್ನೂ ಬಿಟ್ಟು, ಏಕೆ ಕೋಕಾಕ್ಷೇತ್ರವನ್ನೂ ಸ್ತುತಿಸುತ್ತೀಯೆ ?

ಗೋಕರ್ಣಂ ಚ ತತೋ ಮುಕ್ತ್ವಾ ಶುದ್ಧಂ ಜಾಲ್ಮೇಶ್ವರಂ ತಥಾ ।
ಏಕಲಿಂಗಂ ತತೋ ಮುಕ್ತ್ವಾ ಕಿಂ ತ್ವಾ ಕೋಕಾಂ ಪ್ರಶಂಸಸಿ ॥ ೧೫ ॥

ಏವಂ ಪೃಷ್ಟಸ್ತ್ವಯಾ ಭಕ್ತ್ಯಾ ಮಾಧವಶ್ಚ ಮಹಾಪ್ರಭುಃ ।
ವರಾಹರೂಪೀ ಭಗವಾನ್ ಪ್ರತ್ಯುವಾಚ ವಸುಂಧರಾಂ ॥ ೧೬ ॥

॥ ಶ್ರೀವರಾಹ ಉವಾಚ ॥

ಏವಮೇತನ್ಮಹಾಭಾಗೇ ಯನ್ಮಾಂ ತ್ವಂ ಭೀರು ಭಾಷಸೇ ।
ಕಥಯಿಷ್ಯಾಮಿ ತೇ ಗುಹ್ಯಂ ಕೋಕಾ ಯೇನ ವಿಶಿಷ್ಯತೇ ॥ ೧೭ ॥

ಏತೇ ರುದ್ರಾಶ್ರಿತಾಃ ಕ್ಷೇತ್ರಾ ಯೇ ತ್ವಯಾ ಪರಿಕೀರ್ತಿತಾಃ ।
ಏತೇ ಪಾಶುಪತಾಶ್ಚೈಷಾ ಕೋಕಾ ಭಾಗವತಸ್ಯ ಹ ॥ ೧೮ ॥

ತತ್ರಾನ್ಯತ್ತೇ ಪ್ರವಕ್ಷ್ಯಾಮಿ ಮಹಾಖ್ಯಾನಂ ವರಾನನೇ ।
ವೃತಂ ಕೋಕಾಮುಖೇ ಚೈವ ಮಮ ಕ್ಷೇತ್ರೇ ಹಿ ಸುಂದರಿ ॥ ೧೯ ॥

---

೧೫. ಗೋಕರ್ಣಕ್ಷೇತ್ರವನ್ನೂ, ಶುದ್ಧವಾದ ಜಾಲ್ಮೇಶ್ವರಕ್ಷೇತ್ರವನ್ನೂ, ಏಕಲಿಂಗಕ್ಷೇತ್ರವನ್ನೂ ಸ್ತೋತ್ರಮಾಡದೆ ಕೋಕಾಮುಖಕ್ಷೇತ್ರವನ್ನು ಏತಕ್ಕಾಗಿ ಸ್ತೋತ್ರಮಾಡುತ್ತೀಯೆ ?

೧೬. ಭೂದೇವಿಯು ಹೀಗೆ ಭಕ್ತಿಯಿಂದ ಕೇಳಲು, ಮಹಾಪ್ರಭುವೂ, ಲಕ್ಷ್ಮೀಕಾಂತನೂ, ವರಾಹರೂಪನೂ ಆದ ಭಗವಂತನು ಆ ವಸುಂಧರೆಗೆ ಮುಂದಿನ ಉತ್ತರವನ್ನು ಹೇಳಿದನು.

೧೭. ಶ್ರೀವರಾಹ—ಮಹಾಭಾಗ್ಯೇ, ಭೀರು, ನೀನು ನನ್ನನ್ನು ಹೀಗೆ ಕೇಳುವುದರಿಂದ, ಕೋಕಾಮುಖಕ್ಷೇತ್ರವು ಏತರಿಂದ ಅತಿಶಯವಾದುದೆಂಬ ಈ ರಹಸ್ಯವನ್ನು ನಿನಗೆ ಹೇಳುತ್ತೇನೆ.

೧೮–೧೯. ವರಾನನೇ, ನೀನು ಹೇಳಿದ ವಾರಾಣಸಿ(ಕಾಶಿ)ಮೊದಲಾದುವು ರುದ್ರಾಶ್ರಿತಕ್ಷೇತ್ರಗಳು. ಅಲ್ಲದೆ ಅವು ಪಾಶುಪತಗಳು. ಈ ಕೋಕಾಮುಖ ವಾದರೋ ಸಾಕ್ಷಾದ್ಭಗವಂತನ ಕ್ಷೇತ್ರವಾಗಿದೆ. ಸುಂದರಿ, ನನ್ನ ಕ್ಷೇತ್ರವಾದ ಕೋಕಾಮುಖದಲ್ಲಿ ನಡೆದ ಮಹಾವೃತ್ತಾಂತವನ್ನು ನಿನಗೆ ಹೇಳುತ್ತೇನೆ.

ಕಶ್ಚಿಲ್ಲುಬ್ಧೋಮಿಷಾಹಾರಶ್ಚರನ್ವೈ ಕೋಕಮಂಡಲೇ ।
ತತ್ರಾಲ್ಪೇನಾಂಬುನಾ ಯುಕ್ತೇ ಹ್ರದೇ ಮತ್ಸ್ಯಸ್ತು ತಿಷ್ಠತಿ ।
ದೃಷ್ಟ್ವಾ ತಂ ಲುಬ್ಧಕಸ್ತೂರ್ಣಂ ಬಡಿಶೇನಾಜಹಾರ ಹ ॥ ೨೦ ॥

ತಸ್ಯ ಹಸ್ತಾತ್ತು ಬಲವಾನ್ ಮತ್ಸ್ಯಸ್ತೂರ್ಣಂ ವಿನಿರ್ಗತಃ ॥ ೨೧ ॥

ಅಥ ಶ್ಯೇನಸ್ತು ತಂ ಹರ್ತುಂ ಮಂತ್ರಯಿತ್ವಾ ನಭಶ್ಚರಃ ।
ನಿಪತ್ಯ ತಂ ಗೃಹೀತ್ವೈವ ಪ್ರೋಡ್ಡೀನಸ್ತ್ವರಯಾನ್ವಿತಃ ॥ ೨೨ ॥

ಅಶಕ್ತಸ್ಯ ತತೋ ನೇತುಂ ಮತ್ಸ್ಯಃ ಕೋಕಾಮುಖೇಽಪತತ್ ॥ ೨೩ ॥

ತತ್ಕ್ಷೇತ್ರಸ್ಯ ಪ್ರಭಾವೇಣ ರಾಜಪುತ್ರೋಽಭವತ್ಪ್ರಭುಃ ।
ರೂಪವಾನ್ಗುಣವಾನ್ ಶುದ್ಧಃ ಕುಲೀನ ವಯಸಾನ್ವಿತಃ ॥ ೨೪ ॥

---

೨೦. ಮಾಂಸಹಾರಿಯಾದ ಒಬ್ಬ ಬೇಡನು ಕೋಕಮಂಡಲದಲ್ಲಿ ಸಂಚರಿಸುತ್ತ, ಅಲ್ಲಿ ಸ್ವಲ್ಪವೇ ನೀರುಳ್ಳ ಒಂದು ಮಡುವಿನಲ್ಲಿದ್ದ ಮೀನೊಂದನ್ನು ನೋಡಿ, ಬೇಗನೆ ಅದನ್ನು ಗಾಳದಿಂದ ಹಿಡಿದುಕೊಂಡನು.

೨೧. ಶಕ್ತಿಯುಳ್ಳ ಆ ಮೀನು ತಟ್ಟನೆ ಅವನ ಕಯ್ಯಿಂದ ನುಣುಚಿಕೊಂಡು ಕೆಳಗೆ ಬಿದ್ದಿತು.

೨೨. ಆಗ ಆಕಾಶದಲ್ಲಿ ಹಾರುತ್ತಿದ್ದ ಒಂದು ಗಿಡಗವು ಆ ಮೀನನ್ನು ತಾನು ತೆಗೆದುಕೊಂಡು ಹೋಗಬೇಕೆಂದು ಆಲೋಚಿಸಿ, ಇಳಿದು, ಹೊತ್ತು ಕೊಂಡೇ ಬೇಗನೆ ಹಾರಿತು.

೨೩. ಆದರೆ ಹೊರಲಾರದ ಆ ಗಿಡಗನ ಬಾಯಿಂದ ಮೀನು ಕೋಕಾಮುಖಕ್ಷೇತ್ರದಲ್ಲಿ ಬಿದ್ದಿತು.

೨೪. ಬಿದ್ದ ಆ ಮೀನು ಆ ಕ್ಷೇತ್ರದ ಮಹಿಮೆಯಿಂದ ಪ್ರಭುವಾದ ರಾಜಪುತ್ರನಾಗಿ ಜನಿಸಿತು. ರೂಪವಂತನೂ, ಗುಣವಂತನೂ, ಕುಲೀನನೂ ಆದ ಅವನು ಯೌವನವನ್ನೂ ಪಡೆದನು.

ಅಥ ಕಾಲೇನ ತಸ್ಯೈವ ಮೃಗವ್ಯಾಧಸ್ಯ ಚಾಂಗನಾ ।
ಗೃಹೀತ್ವಾ ಚೈವ ಮಾಂಸಾನಿ ಗಚ್ಛಂತೀ ಯಾತಿ ತತ್ರ ವೈ ॥ ೨೫ ॥

ಏಕಾ ಚಿಲ್ಲೀ ಮಾಂಸಲುಬ್ಧಾ ತದ್ಧಸ್ತಾನ್ಮಾಂಸಗರ್ಧಿನೀ ।
ಆಗತ್ಯಾಗತ್ಯ ತರಸಾ ಹರ್ತುಂ ಸಮುಪಚಕ್ರಮೇ ॥ ೨೬ ॥

ಮೃಗವ್ಯಾಧೋ ಬಲಾನ್ಮಾಂಸಂ ಹರ್ತುಕಾಮಾಂ ತು ಚಿಲ್ಲಿಕಾಂ ।
ಬಾಣೇನೈಕೇನ ಸಂಹತ್ಯ ಪಾತಿತಾ ಭುವಿ ತತ್ಕ್ಷಣಾತ್ ॥ ೨೭ ॥

ಆಕಾಶಾತ್ಪತಿತಾ ಭದ್ರೇ ಕೋಕಾಯಾಂ ಮಮ ಸನ್ನಿಧೌ
ಜಾತಾ ಚಂದ್ರಪುರೇ ರಮ್ಯೇ ರಾಜಪುತ್ರೀ ಯಶಸ್ವಿನೀ ॥ ೨೮ ॥

ಸಾ ವ್ಯವರ್ಧತ ಕನ್ಯಾ ತು ವಯೋರೂಪಗುಣಾನ್ವಿತಾ ।
ಚತುಃಷಷ್ಟಿಕಲಾಯುಕ್ತಾ ಪುರುಷಂ ಸಾ ಜುಗುಪ್ಸತಿ ॥ ೨೯ ॥

---

೨೫. ಮೀನನ್ನು ಹಿಡಿದಿದ್ದ ಅದೇ ಬೇಡನ ಹೆಂಡತಿಯು ಅವು ನಡೆದ ಕೆಲವು ದಿನಗಳಮೇಲೆ ಮಾಂಸವನ್ನು ಹೊತ್ತುಕೊಂಡು ಹೋಗುತ್ತ ಅಲ್ಲಿಗೆ ಬಂದಳು.

೨೬–೨೭. ಮಾಂಸದಲ್ಲಿ ಬಹಳ ಆಸೆಯುಳ್ಳ ಒಂದು ಹೆಣ್ಣು ಭರತಹಕ್ಕಿಯು (ಚಿಲ್ಲಿಯು) ಅವಳ ಕಯ್ಯಿಂದ ಅದನ್ನು ಬಲದಿಂದ ಕಿತ್ತುಕೊಳ್ಳಲು ಮತ್ತೆ ಮತ್ತೆ ಅವಳಹತ್ತಿರ ಬರಲಾರಂಭಿಸಿತು. ಬೇಡನು ಆ ಚಿಲ್ಲಿಕೆಯನ್ನು ಒಂದು ಬಾಣದಿಂದ ಹೊಡೆದು ತಟ್ಟನೆ ನೆಲಕ್ಕೆ ಬೀಳಿಸಿದನು.

೨೮. ಭದ್ರೇ, ಆಕಾಶದಿಂದ ಕೋಕಾಮುಖದಲ್ಲಿ ನನ್ನ ಸನ್ನಿಧಿಯಲ್ಲಿ ಬಿದ್ದು ಪ್ರಾಣಬಿಟ್ಟ ಆ ಚಿಲ್ಲಿಕೆಯು ಮನೋಹರವಾದ ಚಂದ್ರಪುರದಲ್ಲಿ ಕೀರ್ತಿವಂತೆಯಾದ ರಾಜಪುತ್ರಿಯಾಗಿ ಜನಿಸಿತು.

೨೯–೩೦. ಆ ಕನ್ನೆಯು ರೂಪಗುಣಗಳಿಂದ ಕೂಡಿ, ಅರವತ್ತುನಾಲ್ಕು ಕಲೆಗಳಲ್ಲಿ ಚತುರಳಾಗಿ ಬೆಳೆದು ಯೌವನವನ್ನು ಪಡೆದಳು. ತನಗೆ ತಕ್ಕ

ರೂಪವಾನ್ಗುಣವಾನ್ ಶೂರೋ ಯುದ್ಧಕಾರ್ಯಾರ್ಥನಿಶ್ಚಿತಃ ।
ಸೌಮ್ಯಶ್ಚ ಪುರುಷಶ್ಚೈವ ಸಾ ಚ ನೇತಿ ಜುಗುಪ್ಸತಿ ॥ ೩೦ ॥

(ರೂಪವಾನ್ಗುಣವಾನ್ಶೂರೋ ಯುದ್ಧಕಾರ್ಯಾರ್ಥನಿಷ್ಠಿತಃ ।
ಸೌಮ್ಯಂ ಚ ಪುರುಷಂ ಚೈವ ಸರ್ವಾನಭಿಜುಗುಪ್ಸತಿ) ॥ ೩೧ ॥

ಅಥ ಕೇನಚಿತ್ಕಾಲೇನ ಶಕ ಆನಂದಪೂರಕೇ ।
ಸಂಬಂಧೋಜಾಯತ ತಯೋರ್ಮಧ್ಯಮೇ ವಯಸಿ ಸ್ಥಯೋಃ ॥ ೩೨ ॥

ತಥಾ ತು ತೌ ಸಮಾಸಾದ್ಯ ಪರಸ್ಪರಮಥ ಕ್ರಮಾತ್ ।
ಯಥಾನ್ಯಾಯಂ ಸವಿಪ್ರೋಕ್ತಂ ವಿಧಿದೃಷ್ಟೇನ ಕರ್ಮಣಾ ॥ ೩೩ ॥

ಸ ವೈ ತಯಾ ಸಮಂ ನಿತ್ಯಂ ಸಾ ಚ ತೇನ ಸಮಂ ಶುಭಾ ।
ಅನ್ಯೋನ್ಯಂ ರಮಮಾಣೌ ತೌ ಮುಹೂರ್ತಮಪಿ ನೋಜ್ಝತಃ ॥ ೩೪ ॥

ರೂಪವಂತನೂ, ಗುಣವಂತನೂ, ಶೂರನೂ, ಯುದ್ಧಕಾರ್ಯವಿಶಾರದನೂ, ಸೌಮ್ಯನೂ ಆದ ವರನು ಇಲ್ಲವೆಂದು ಆಕೆಯು ಗಂಡಸೆಂದರೆ ಜಿಹಾಸೆಪಡುತ್ತಿದ್ದಳು.

೩೧. (ರೂಪವಂತನೂ, ಗುಣವಂತನೂ, ಶೂರನೂ, ಯುದ್ಧಕಾರ್ಯನಿಷ್ಠನೂ, ಸೌಮ್ಯನೂ ಆದ ಯಾವ ವರನನ್ನೂ ಅವಳು ಒಪ್ಪಲಿಲ್ಲ.)

೩೨. ಸ್ವಲ್ಪಕಾಲದಮೇಲೆ, ಆನಂದ ಪೂರಕನಾದ(ಮೇಲೆ ಹೇಳಿದ) ಶಕರಾಜಕುಮಾರನು ಅವಳಿಗೆ ದೊರೆಯಲು, ಮಧ್ಯಮ ವಯಸ್ಸಿನವರಾದ ಅವರಿಬ್ಬರಿಗೂ ಸಂಬಂಧವಾಯಿತು.

೩೩–೩೪. ಬಳಿಕ ಅವರಿಬ್ಬರೂ ಶಾಸ್ತ್ರೋಕ್ತವಾಗಿ ಬ್ರಾಹ್ಮಣರು ಹೇಳಿದಂತೆ ನ್ಯಾಯವಾಗಿ ವಿವಾಹಕರ್ಮವನ್ನು ಮಾಡಿಕೊಂಡು, ದಂಪತಿಗಳಾದರು. ರಾಜಕುಮಾರನು ರಾಜಪುತ್ರಿಯೊಡನೆಯೂ, ಶುಭೆಯಾದ ರಾಜಪುತ್ರಿಯು ರಾಜಪುತ್ರನೊಡನೆಯೂ ಅನ್ಯೋನ್ಯವಾಗಿ ರಮಿಸುತ್ತ ಸ್ವಲ್ಪಕಾಲವೂ ಒಬ್ಬರನ್ನೊಬ್ಬರು ಅಗಲದಿದ್ದರು.

ಗಚ್ಛತ್ಯೇವಂ ಬಹುತರೇ ಕಾಲೇ ಚೈವಾಪ್ಯನಿಂದಿತಾ |
ಸಮುಪ್ರೇಮ್ಣಾ ಚ ಸಂಯುಕ್ತಾ ಸೌಹೃದೇನ ಚ ನಾಯಕಂ || ೩೫ ||

ಭಜಮಾನಾ ವಿನೀತಾ ಚ ಸೌಹೃದಾಚ್ಚ ವಿಶೇಷತಃ |
ಏವಂ ಬಹುಗತಃ ಕಾಲಃ ಕಾಮಭೋಗೇಷು ಸಕ್ತಯೋಃ || ೩೬ ||

ರಾಜಪುತ್ರಸ್ತತೋಽಪ್ಯತ್ರ ಶಕಾನಾಂ ನಂದವರ್ಧನಃ |
ತಸ್ಯಾಜಾಯತ ಮಧ್ಯಾಹ್ನೇ ಶಿರೋರುಗತಿಪೀಡಿನೀ || ೩೭ ||

ಯೇ ಕೇ ಚಿದ್ಭಿಷಜಸ್ತತ್ರ ಗದೇಷು ಕುಶಲಾಃ ಶುಭೇ |
ತೇ ತತ್ರೌಷಧಯೋಗಂ ಚ ಚಕ್ರುಸ್ತೇನಾಪಿ ವೇದನಾ || ೩೮ ||

ನನಾಶ ನೈವ ಸಂಯಾತಃ ಕಾಲೋ ಬಹುತಿಥಸ್ತತಃ |
ನ ಸಂಬುಧ್ಯತಿ ಚಾತ್ಮಾನಂ ವಿಷ್ಣುಮಾಯಾ ವಿಮೋಹಿತಃ || ೩೯ ||

೩೫–೩೬. ಬಹುಕಾಲ ಕಳೆದರೂ ಸ್ತುತ್ಯಳಾದ ಆ ರಾಜಪುತ್ರಿಯು ಪ್ರೇಮದಿಂದಲೂ, ಸೌಹಾರ್ದದಿಂದಲೂ, ವಿನಯದಿಂದಲೂ ಪತಿಯನ್ನು ಸೇವಿಸುತ್ತಿದ್ದಳು. ಹೀಗೆ ಕಾಮಭೋಗಾಸಕ್ತರಾದ ಅವರು ಬಹುಕಾಲವನ್ನು ಕಳೆದರು.

೩೭. ಬಳಿಕ ಶಕರ ಆನಂದವನ್ನು ಹೆಚ್ಚಿಸುತ್ತಿದ್ದ ಆ ರಾಜಪುತ್ರನಿಗೆ ಮಧ್ಯಾಹ್ನದಲ್ಲಿ ಹೆಚ್ಚಾದ ತಲೆನೋವು ಬರಲಾರಂಭಿಸಿತು.

೩೮–೩೯. ಶುಭೇ, ರೋಗಗಳನ್ನರಿತು ಚಿಕಿತ್ಸೆಮಾಡುವುದರಲ್ಲಿ ಚತುರರಾದ ಹಲವರು ವೈದ್ಯರು ಔಷಧವನ್ನು ಪ್ರಯೋಗಿಸಿದರೂ ತಲೆನೋವು ಹೋಗಲೇ ಇಲ್ಲ. ಹಾಗೆಯೇ ಬಹುಕಾಲವೂ ಕಳೆಯಿತು. ವಿಷ್ಣುಮಾಯೆಯಿಂದ ಮೋಹಿತನಾದ ಆ ರಾಜಕುಮಾರನು ತಾನಾರೆಂಬುದೇ ಮೊದಲಾದುದನ್ನು ಅರಿಯಲಿಲ್ಲ.

ಪೂರ್ಣೇಹಿ ಸಮಯೇತತ್ತು ಉಭಯೋಶ್ಚ ತದಂತರಂ ।
ತಸ್ಯಕಾಲಃ ಸಂವೃತಸ್ಯಯೋಸೌ ಪೂರ್ವಪ್ರತಿಸ್ತವಃ
ಅಯನೇಗತ ಏತೇಷಾಂ ವೃತ್ತಂ ಕೌತೂಹಲಂಭುವಿ ॥ ೪೦ ॥

ಅನ್ಯೋನ್ಯಪ್ರೀತಿಯುಕ್ತೌ ತು ನಾನ್ಯೋನ್ಯಂ ಜಹತುಃ ಕ್ವಚಿತ್ ॥ ೪೧ ॥

ತತಃ ಸರ್ವಾನವದ್ಯಾಂಗೀ ಭರ್ತಾರಮಿದಮಬ್ರವೀತ್ ।
ಕಿಮಿದಂ ತವ ಭದ್ರಂ ತೇ ವೇದನಾ ಜಾಯತೇ ಶಿರೇ ॥ ೪೨ ॥

ಏತದಾಚಕ್ಷ್ವ ತತ್ವೇನ ಯದ್ಯಹಂ ಚ ತವ ಪ್ರಿಯಾ ।
ಬಹವೋ ಭಿಷಜಶ್ಚೈವ ನಾನಾಶಾಸ್ತ್ರವಿಶಾರದಾಃ ।
ಕುರ್ವಂತಿ ತವ ಕರ್ಮಾಣಿ ವೇದನಾ ಚ ನ ಗಚ್ಛತಿ ॥ ೪೩ ॥

---

೪೦. ರಹಸ್ಯವಿಚಾರವುಳ್ಳ ಆ ರಾಜರಾಣಿಯರ ಪೂರ್ವಪುಣ್ಯ ಸುಖಾನುಭವದ ಆ ಕಾಲವು ಪೂರ್ಣವಾಗುತ್ತ ಬರಲು ಆ ದಂಪತಿಗಳ ಮತ್ತು ವೈದ್ಯರ ವೃತ್ತಾಂತವು ಲೋಕದಲ್ಲಿ ಹರಡಿ, ಎಲ್ಲರಿಗೂ ಕುತೂಹಲವನ್ನುಂಟು ಮಾಡಿತು.

೪೧. ದೊರೆಯು ಶಿರೋವೇದನೆಯುಳ್ಳವನಾಗಿದ್ದರೂ ಪರಸ್ಪರ ಪ್ರೀತಿಯಿಂದ ಬಂಧಿತರಾಗಿ ಒಂದಾಗಿದ್ದ ಆ ದಂಪತಿಗಳು ಒಬ್ಬರನ್ನೊಬ್ಬರು ಎಲ್ಲೂ ಎಂದೂ ಅಗಲಿರಲಿಲ್ಲ.

೪೨-೪೩. ಬಳಿಕ ಸರ್ವಾಂಗಸುಂದರಿಯಾದ ಆಕೆಯು ಪತಿಯನ್ನು ನೋಡಿ, "ನಿನಗೆ ಮಂಗಳವಾಗಲಿ. ನಿನಗೆ ತಲೆನೋವು ಬರುತ್ತದೆ. ನಾನಾಶಾಸ್ತ್ರವಿಶಾರದರಾದ ಹಲವರು ವೈದ್ಯರು ಚಿಕಿತ್ಸೆಮಾಡುತ್ತಾರೆ. ಆದರೂ ನೋವು ತಪ್ಪುವುದೇ ಇಲ್ಲ. ಕಾರಣವೇನೆಂಬುದನ್ನು ನಾನು ನಿನ್ನ ಪ್ರೀತಿಪಾತ್ರಳಾಗಿದ್ದರೆ ನಿಜವಾಗಿ ಹೇಳು" ಎಂದಳು.

ಏವಂ ಸ ಪ್ರಿಯಯಾ ಪ್ರೋಕ್ತಸ್ತಾಂ ಪ್ರಿಯಾಂ ಪುನರಬ್ರವೀತ್ ।
ಇದಂ ಕಿಂ ವಿಸ್ಮೃತಾ ಭದ್ರೇ ಸರ್ವವ್ಯಾಧಿಸಮನ್ವಿತಂ ॥ ೪೪ ॥

ಯಲ್ಲಬ್ಧಂ ಮಾನುಷತ್ವಂ ಚ ಸುಖದುಃಖಸಮನ್ವಿತಂ ।
ಸಂಸಾರಸಾಗರಾರೂಢಂ ನಾತಿಪ್ರಷ್ಟುಂ ತ್ವಮರ್ಹಸಿ ॥ ೪೫ ॥

ತೇನೈವಂ ಭಾಷಿತಾ ಬಾಲಾ ಶ್ರೋತುಕಾಮಾ ವರಾನನಾ ।
ತತಃ ಕದಾಚಿಚ್ಛಯನೇ ಸುಪ್ತೌ ತೌ ದಂಪತೀ ಕಿಲ
ಗತೇ ಬಹುತಿಥೇ ಕಾಲೇ ಪುನಃ ಪಪ್ರಚ್ಛ ಸಾ ಪ್ರಿಯಂ ॥ ೪೬ ॥

ಕಥಯಸ್ವ ತಮೇವಾರ್ಥಂ ಯನ್ಮಯಾ ಪೂರ್ವಪೃಚ್ಛಿತಂ ।
ಕಿಂ ಮಾಂ ನ ಭಾಷಸೇ ನಾಥ ಸಾಭಿಪ್ರಾಯಂ ವಚಸ್ತವ ॥ ೪೭ ॥

ಗೋಪ್ಯಂ ವಾ ಕಿಂಚಿದಸ್ತೀಹ ಕಿಂ ಗೋಪಯಸಿ ಮೇ ಪುರಃ ।
ಅವಶ್ಯಂ ಚೈವ ವಕ್ತವ್ಯಂ ಯದ್ಯಹಂ ತವ ವಲ್ಲಭಾ ॥ ೪೮ ॥

೪೪–೪೫. ಪ್ರಿಯೆಯು ಹೀಗೆ ಕೇಳಲು ಆ ರಾಜಕುಮಾರನು, "ಭದ್ರೇ, ಈ ದೇಹವು ಸರ್ವರೋಗಗಳಿಂದ ಕೂಡಿದುದೆಂಬುದನ್ನೂ ಮನುಷ್ಯಜನ್ಮವೇ ಸುಖದುಃಖಗಳಿಂದ ಕೂಡಿದುದೆಂಬುದನ್ನೂ ಮರೆತೆಯೇನು ! ಸಂಸಾರಸಾಗರವನ್ನೇರಿರುವ ನನ್ನನ್ನು ಹೆಚ್ಚಾಗಿ ಕೇಳಬಾರದು" ಎಂದನು.

೪೬. ತಿಳಿಯಲು ಇಚ್ಛೆಯುಳ್ಳ ಅವಳಿಗೆ ಅವನು(ರಾಜಕುಮಾರನು) ಹೀಗೆ ಹೇಳಿ ಬಹಳ ದಿನಗಳು ಕಳೆಯಲು ಒಂದಾನೊಂದುದಿನ ಹಾಸಿಗೆಯ ಮೇಲೆ ಆ ದಂಪತಿಗಳು ಮಲಗಿರುವಾಗ ರಾಜಪುತ್ರಿಯು ತಿರುಗಿಯೂ ಪ್ರಿಯನನ್ನು ಕೇಳಿದಳು.

೪೭-೪೮. "ನಾಥ, ನಾನು ಹಿಂದೆ ಕೇಳಿದುದನ್ನೇ ಹೇಳು. ನಿನ್ನ ಮಾತು ಅಭಿಪ್ರಾಯಗರ್ಭಿತವಾಗಿದೆ. ಏಕೆ ಬಿಚ್ಚಿಹೇಳುವುದಿಲ್ಲ ? ಇದರಲ್ಲಿ ಗುಟ್ಟೇನಾದರೂ ಇದೆಯೆ ? ನನ್ನೆದುರಿಗೆ ಏಕೆ ಬಚ್ಚಿಡುತ್ತೀಯೆ ? ನಾನು ನಿನಗೆ ಪ್ರಿಯೆಯಾಗಿದ್ದರೆ ಅವಶ್ಯವಾಗಿ ಹೇಳಬೇಕಲ್ಲವೆ ?"

ಇತಿ ನಿರ್ಬಂಧತಃ ಪೃಷ್ಟಃ ಸ ಶಕಾಧಿಪತಿರ್ನೃಪಃ ।
ತಾಂ ಪ್ರಿಯಾಂ ಪ್ರಣಯಾತ್ಪ್ರಾಹ ಬಹುಮಾನಪುರಸ್ಸರಂ ॥ ೪೯ ॥

ಮುಚ್ಯತಾಂ ಮಾನುಷಂ ಭಾವಂ ತಾಂ ಜಾತಿಂ ಸ್ಮರ ಪೌರ್ವಿಕೀಂ ।
ಅಥ ಕೌತೂಹಲಂ ಭದ್ರೇ ಶ್ರವಣೇ ಪೂರ್ವಜನ್ಮನಃ ॥ ೫೦ ॥

ಮನ್ಮಾತಾಪಿತರೌ ಗತ್ವಾ ಪ್ರಸಾದಯ ಶುಚಿಸ್ಮಿತೇ ।
ಮಾನಾರ್ಹೌ ಮಾನಯಿತ್ವಾ ತೌ ಯಯಾಹಂ ಜಠರೇ ಧೃತಃ ॥ ೫೧ ॥

ತಯೋರಾಜ್ಞಾಂ ಪುರಸ್ಕೃತ್ಯ ಮಾನಯಿತ್ವಾ ಯಥಾರ್ಹತಃ ।
ಅಥ ಕೋಕಾಮುಖೇ ಗತ್ವಾ ಕಥಯಿಷ್ಯಾಮ್ಯಸಂಶಯಂ ॥ ೫೨ ॥

ಸ್ವಪೂರ್ವಜನ್ಮವೃತ್ತಂ ತು ದೇವಾನಾಮಪಿ ದುರ್ಲಭಂ ।
ತತ್ರ ತೇ ಕಥಯಿಷ್ಯಾಮಿ ಸರ್ವವೃತ್ತಮನಿಂದಿತೇ ॥ ೫೩ ॥

---

೪೯. ಹೀಗೆಂದು ನಿರ್ಬಂಧದಿಂದ ಕೇಳಿಸಿಕೊಂಡ ಶಕಾಧಿಪತಿಯಾದ ಆ ರಾಜಕುಮಾರನು ಆ ಪ್ರಿಯೆಯಲ್ಲಿ ಪ್ರೀತಿಯಿಂದ ಬಹುಮಾನಪೂರ್ವಕವಾಗಿ ಹೀಗೆ ಹೇಳಿದನು.

೫೦-೫೨. "ಭದ್ರೇ, ಮನುಷ್ಯಭಾವವನ್ನು ಮರೆತು, ಹಿಂದಿನ ಆ ಜನ್ಮವನ್ನು ಜ್ಞಾಪಿಸಿಕೊ. ಅಲ್ಲದೆ ಪೂರ್ವಜನ್ಮವನ್ನು ಕೇಳುವುದರಲ್ಲಿ ನಿನಗೆ ಕುತೂಹಲವಿದ್ದರೆ ನನ್ನ ತಾಯಿತಂದೆಗಳ ಬಳಿಗೆ ಹೋಗಿ ಅವರನ್ನೊಪ್ಪಿಸು. ಮಂದಹಾಸೇ, ಮಾನಾರ್ಹರೂ, ನನ್ನನ್ನು ಜಠರದಲ್ಲಿ ಧರಿಸಿದವರೂ ಆದ ಅವರನ್ನು ತಕ್ಕಂತೆ ಗೌರವಿಸಿ, ಅವರ ಅಪ್ಪಣೆಯನ್ನು ಮುಂದಿಟ್ಟುಕೊಂಡು, ಕೋಕಾಮುಖಕ್ಕೆ ಹೋಗಿ ಬಳಿಕ ಹೇಳುವುದರಲ್ಲಿ ಸಂಶಯವಿಲ್ಲ.

೫೩. ಆರ್ಯೆ, ದೇವತೆಗಳಿಗೂ ತಿಳಿಯಲು ಕಷ್ಟವಾದ ನನ್ನ ಪೂರ್ವಜನ್ಮದ ಸಮಾಚಾರವನ್ನೂ, ಎಲ್ಲಾ ಚರಿತ್ರೆಯನ್ನೂ ಅಲ್ಲಿ ನಿನಗೆ ಹೇಳುವೆನು."

ತತಸ್ಸಾ ಹ್ಯನವದ್ಯಾಂಗೀ ಶ್ವಶ್ರೂಶ್ವಶುರಯೋಃ ಪುರಃ ।
ಗತ್ವಾ ಗೃಹೀತ್ವಾ ಚರಣೌ ತತಸ್ತಾವಿದಮಬ್ರವೀತ್ ॥ ೫೪ ॥

ಕಿಂಚಿದ್ವಿಜ್ಞಾಪ್ತುಕಾಮಾಸ್ಮಿ ತತ್ರ ವಾಮವಧೀಯತಾಂ ।
ಭವದಾಜ್ಞಾಂ ಪುರಸ್ಕೃತ್ಯ ಭವದ್ಭ್ಯಾಮನುಮಾನಿತೌ ॥ ೫೫ ॥

ಪುಣ್ಯೇ ಕೋಕಾಮುಖೇ ಗಂತುಮಿಚ್ಛಾವಸ್ತತ್ರ ವಾಂ ಗುರೂ ।
ಕಾರ್ಯಗೌರವಭಾರೇಣ ನ ನಿಷೇಧ್ಯೌ ಕಥಂಚನ ॥ ೫೬ ॥

ಅದ್ಯ ಯಾವತ್ಕಿಮಪಿ ವಾಂ ಯಾಚಿತಂ ನ ಮಯಾ ಕ್ವಚಿತ್ ।
ಪುರಸ್ತಾದ್ಯುವಯೋಸ್ತನ್ಮೇ ಯಾಚಿತಂ ದಾತುಮರ್ಹಥಃ ॥ ೫೭ ॥

ಶಿರೋವೇದನಯಾ ಯುಕ್ತಃ ಸದಾ ತವ ಸುತೋ ಹ್ಯಯಂ ।
ಮಧ್ಯಾಹ್ನೇ ಮೃತಕಲ್ಪೋ ವೈ ಜಾಯತೇ ಹ್ಯಚಿಕಿತ್ಸಕಂ ॥ ೫೮ ॥

---

೫೪. ಬಳಿಕ ಆ ಮಂಗಳಾಂಗಿಯು ಅತ್ತೆಮಾವಂದಿರ ಮುಂದೆಹೋಗಿ, ಅವರ ಕಾಲುಗಳನ್ನು ಹಿಡಿದುಕೊಂಡು ವಂದಿಸಿ, ಅವರನ್ನು ನೋಡಿ ಮುಂದಿನ ಮಾತನಾಡಿದಳು.

೫೫-೫೬. "ಸ್ವಲ್ಪ ವಿಜ್ಞಾಪಿಸಲು ಬಯಸುತ್ತೇನೆ. ತಾವು ಲಾಲಿಸಬೇಕು. ನಿಮ್ಮ ಅನುಮತಿಯನ್ನು ಮುಂದಿಟ್ಟುಕೊಂಡು ದಂಪತಿಗಳಾದ ನಾವಿಬ್ಬರೂ ಕೋಕಾಮುಖಕ್ಷೇತ್ರಕ್ಕೆ ಹೋಗಬೇಕೆಂದು ಬಯಸುತ್ತೇವೆ. ಕಾರ್ಯಗೌರವ ಭಾವದಿಂದ ಹೇಗಾದರೂ ತಾವು ನಮ್ಮನ್ನು ತಡೆಯಬಾರದು.

೫೭. ಇದುವರೆಗೂ ಗುರುಗಳಾದ ತಮ್ಮನ್ನು ಯಾವಾಗಲೂ, ಏನನ್ನೂ ನಾನು ಬೇಡಿಲ್ಲ. ತಮ್ಮೆದುರಿಗೆ ನಾನು ಬೇಡಿರುವುದನ್ನು ದಯೆಪಾಲಿಸಬೇಕು.

೫೮. ತಮ್ಮ ಕುಮಾರನು ಯಾವಾಗಲೂ ತಲೆನೋವುಳ್ಳವನಾಗಿರುವನು. ಮಧ್ಯಾಹ್ನಕಾಲದಲ್ಲಿ ಮೃತನಂತಾಗುವನು. ನೋವು ಅಪರಿಹಾರ್ಯವಾಗಿದೆ.

ಸುಖಾನಿ ಸರ್ವವಿಷಯಾನ್ನಿಸೃಜ್ಯ ಪರಿಪೀಡಿತಃ ।
ಕೋಕಾಮುಖಂ ವಿನಾ ಕಷ್ಟಂ ನ ನಿವೃತ್ತಂ ಭವಿಷ್ಯತಿ ॥ ೫೯ ॥

ಕದಾಚಿನ್ನೋಕ್ತಪೂರ್ವಂ ತೇ ರಹಸ್ಯಂ ಪರಮಂ ಮಹತ್ ।
ತ್ವರಿತಂ ಗಂತುಮಿಚ್ಛಾವಃ ವಿಷ್ಣೋಸ್ತತ್ಪರಮಂ ಪದಂ ।
ದಂಪತಿಭ್ಯಾಂ ಹಿ ಮನನಂ ರೋಚತಾಂ ಸರ್ವಥೈವ ಹಿ ॥ ೬೦ ॥

ತತೋ ವಧೂವಚಃ ಶ್ರುತ್ವಾ ಶಕಾನಾಮಧಿಪೋ ನೃಪಃ ।
ಕರೇಣ ಸ್ವಯಮಾದಾಯ ವಧೂಂ ಪುತ್ರಮುವಾಚ ಹ ॥ ೬೧ ॥

ಕಿಮಿದಂ ಚಿಂತಿತಂ ವತ್ಸ ಕೋಕಾಮುಖಗಮಂ ಪ್ರತಿ ॥ ೬೨ ॥

ಹಸ್ತ್ಯಶ್ವರಥಯಾನಾನಿ ಸ್ತ್ರಿಯಶ್ಚಾಪ್ಸರಸೋಪಮಾಃ ।
ಸರ್ವಮೇತತ್ತು ಸಪ್ತಾಂಗಂ ಕೋಶಕೋಷ್ಠಾದಿಸಂಯುತಂ
ಶರಣಂ ವಿತ್ತಯೋರಾಜ್ಯಂ ತ್ವಯಿ ಸರ್ವಂ ಪ್ರತಿಷ್ಠಿತಂ ॥ ೬೩ ॥

---

೫೯. ತಲೆನೋವಿನಿಂದ ಪೀಡಿತನಾಗಿ ಸಕಲವಿಷಯಸುಖಗಳನ್ನೂ ಬಿಟ್ಟಿರುವನು. ಕೋಕಾಮುಖಕ್ಕೆ ಹೋದಲ್ಲದೆ ಈ ಕಷ್ಟವು ಪರಿಹಾರವಾಗುವುದಿಲ್ಲ.

೬೦. ಈ ಪರಮರಹಸ್ಯವನ್ನು ನಾನು ಹಿಂದೆಂದೂ ತಮಗೆ ಹೇಳಲಿಲ್ಲ. ವಿಷ್ಣುವಿನ ಆ ಪರಮಸ್ಥಾನಕ್ಕೆ ಬೇಗನೆ ಹೋಗಲು ಇಚ್ಛಿಸುತ್ತೇವೆ. ದಂಪತಿಗಳಾದ ತಮಗೆ ಈ ವಿಚಾರವು ಅವಶ್ಯವಾಗಿ ಸಮ್ಮತವಾಗಲಿ.

೬೧. ಸೊಸೆಯ ಈ ಮಾತನ್ನು ಕೇಳಿ, ಶಕಾಧಿಪತಿಯಾದ ದೊರೆಯು ಅವಳನ್ನು ಕಯ್ಯಿಂದಮುಟ್ಟಿ ಮುದ್ದಿಸಿ, ಮಗನನ್ನು ನೋಡಿ ಹೀಗೆ ಹೇಳಿದನು.

೬೨-೬೪. "ಮಗೂ, ಇದೇಕೆ ? ಕೋಕಾಮುಖಕ್ಕೆ ಹೋಗಲು ಬಯಸಿದೆ ? ಆನೆ, ಕುದುರೆ, ಬಂಡಿ ಮೊದಲಾದ ವಾಹನಗಳನ್ನೂ, ಅಪ್ಸರಸ್ತ್ರೀಯರಂತಹ ವನಿತೆಯರನ್ನೂ, ಭಂಡಾರಕಣಜಗಳೊಡಗೂಡಿದ ಸಪ್ತಾಂಗವೆಲ್ಲವನ್ನೂ, ದ್ರವ್ಯಭಂಡಾರವನ್ನೂ, ನಿನಗಿರುವ ದೊರೆತನವನ್ನೂ,

ಮಿತ್ರಂ ವರಾಸನಂ ಚೈವ ಗೃಹ್ಣೀಷ್ವ ಸುತಸತ್ತಮ ।
ತ್ವಯಿ ಪ್ರತಿಷ್ಠಿತಾಃ ಪ್ರಾಣಾಃ ಸಂತಾನಂ ಚ ತ್ವದುತ್ತರಂ || ೬೪ ||

ತತಃ ಪಿತುರ್ವಚಃ ಶ್ರುತ್ವಾ ರಾಜಪುತ್ರೋ ಯಶಸ್ವಿನಿ ।
ಪಿತುಃ ಪಾದೌ ಗೃಹೀತ್ವಾ ಚ ಪ್ರೋವಾಚ ವಿನಯಾನ್ವಿತಃ || ೬೫ ||

ಅಲಂ ರಾಜ್ಯೇನ ಕೋಶೇನ ವಾಹನೇನ ಬಲೇನ ವಾ || ೬೬ ||

ಗಂತುಮಿಚ್ಛಾಮಿ ತತ್ರಾಹಂ ತೂರ್ಣಂ ಕೋಕಾಮುಖಂ ಮಹತ್ ।
ಶಿರೋವೇದನಯಾ ಯುಕ್ತೋ ಯದಿ ಜೀವಾಮ್ಯಹಂ ಪಿತಃ || ೬೭ ||

ತದಾ ರಾಜ್ಯಂ ಬಲಂ ಕೋಶೋಮಮೈವೈತನ್ನ ಸಂಶಯಃ ।
ತತ್ರೈವ ಗಮನಾನ್ಮಹ್ಯಂ ವೇದನಾ ನಾಶಮೇಷ್ಯತಿ || ೬೮ ||

ಪುತ್ರೋಕ್ತಮವಧಾರ್ಯೈವಂ ಶಕಾನಾಮಧಿಪೋ ನೃಪಃ ।
ಅನುಜಜ್ಞೇ ತತಃ ಕೋಕಾಂ ಗಚ್ಛ ಪುತ್ರ ಶುಭಂತವ || ೬೯ ||

ಪ್ರಿಯವಾದ ಉತ್ತಮಾಸನವನ್ನೂ ತೆಗೆದುಕೊ. ಪುತ್ರೋತ್ತಮಾ, ನನ್ನ ಪ್ರಾಣಗಳೂ, ಮುಂದಿನ ಸಂತಾನವೂ ನಿನ್ನ ಮೇಲೆ ನಿಂತಿವೆ ”

೬೫. ರಾಜಪುತ್ರನು ತಂದೆಯ ಮಾತನ್ನು ಕೇಳಿ, ಆತನ ಕಾಲುಗಳನ್ನು ಹಿಡಿದುಕೊಂಡು, ವಿನಯದಿಂದ ಹೇಳಿದನು.

೬೬-೬೮. “ ಅಪ್ಪಾ, ನನಗೆ ರಾಜ್ಯ, ಕೋಶ, ವಾಹನ, ಸೈನ್ಯ ಇವಾವುವೂ ಬೇಡ. ತಲೆನೋವಿನಿಂದ ಪೀಡಿತನಾಗಿ ಶ್ರೇಷ್ಠವಾದ ಆ ಕೋಕಾಮುಖಕ್ಷೇತ್ರಕ್ಕೆ ಬೇಗನೆ ಹೋಗಲು ಬಯಸುತ್ತೇನೆ. ತಂದೆಯೇ, ನಾನು ಬದುಕಿದ್ದರೆ, ಈ ರಾಜ್ಯ,ಕೋಶ, ಬಲ ಮೊದಲಾದುವೆಲ್ಲವೂ ನನ್ನವೇ ಎಂಬುದರಲ್ಲಿ ಸಂಶಯವಿಲ್ಲ. ಅಲ್ಲಿಗೆ ಹೋಗುವುದರಿಂದಲೇ ನನ್ನ ಶಿರೋವೇದನೆಯು ತಪ್ಪುವುದು ”

೬೯. ಶಕಾಧಿಪತಿಯಾದ ಆ ದೊರೆಯು ಮಗನು ಹೇಳಿದುದನ್ನು ಸರಿಯೆಂದು ನಿರ್ಣಯಿಸಿ, “ ಮಗು, ಕೋಕೆಗೆ ಹೋಗು. ನಿನಗೆ ಶುಭವಾಗಲಿ ” ಎಂದು ಅನುಮತಿಸಿದನು.

ವಣಿಜಶ್ಚೈವ ಪೌರಾಶ್ಚ ವೈಶ್ಯಾಶ್ಚಾಪಿ ವರಾಂಗನಾಃ ।
ಅನುಜಗ್ಮೂ ರಾಜಪುತ್ರಂ ಕೋಕಾಮುಖಪಥೇ ಸ್ಥಿತಂ ॥ ೭೦ ॥

ಅಥ ದೀರ್ಘೇಣ ಕಾಲೇನ ಪ್ರಾಪ್ತಃ ಕೋಕಾಮುಖಂ ತ್ವಿದಂ ॥ ೭೧ ॥

ತತ್ರ ಗತ್ವಾ ವರಾರೋಹಾ ಭರ್ತಾರಮಿದಮಬ್ರವೀತ್ ।
ಪೂರ್ವಪೃಷ್ಟಂ ಮಯಾ ಯತ್ತೇ ವಕ್ಷ್ಯಾಮೀತಿ ಚ ಮಾಂಪ್ರತಿ ।
ಕೋಕಾಮುಖೇ ತ್ವಯಾಪ್ಯುಕ್ತಂ ತದೇತನ್ಮಮ ಕಥ್ಯತಾಂ ॥ ೭೨ ॥

ನಿಶಮ್ಯೇತಿ ಪ್ರಿಯಾಪ್ರೋಕ್ತಂ ರಾಜಪುತ್ರೋ ಯಶಸ್ವಿನಿ ।
ಪ್ರಹಸ್ಯಾಹ ಪ್ರಿಯಾಂ ತಾಂ ತು ಸಮಾಲಿಂಗ್ಯ ವಸುಂಧರೇ ॥ ೭೩ ॥

ರಜನೀ ಸಂಪ್ರವೃತ್ತೇಯಂ ಸುಖಂ ಸ್ವಾಪೋ ವಿಧೀಯತಾಂ ।
ಶ್ವಃ ಸರ್ವಂ ಕಥಯಿಷ್ಯಾಮಿ ಯತ್ತೇ ಮನಸಿ ವರ್ತತೇ ॥ ೭೪ ॥

---

೭೦. ಕೋಕಾಮುಖಕ್ಕೆ ಹೊರಟ ರಾಜಪುತ್ರನೊಡನೆ ಪಟ್ಟಣಿಗರಾದ ವೈಶ್ಯವರ್ತಕರೂ, ಉತ್ತಮಸ್ತ್ರೀಯರೂ ಪ್ರಯಾಣಮಾಡಿದರು.

೭೧. ಬಳಿಕ ಬಹುದಿನಗಳಮೇಲೆ ಅವನು ಆ ಕೋಕಾಮುಖಕ್ಷೇತ್ರವನ್ನು ಸೇರಿದನು.

೭೨. ಅಲ್ಲಿಗೆಹೋದ ಬಳಿಕ ರಾಜಪುತ್ರಿಯು, ಪತಿಯನ್ನು ನೋಡಿ, "ನಾನು ಹಿಂದೆ ನಿನ್ನಲ್ಲಿ ಯಾವುದನ್ನು ಪ್ರಶ್ನಿಸಿದೆನೋ, ನೀನೂ ಯಾವುದನ್ನು ಕೋಕಾಮುಖದಲ್ಲಿ ಹೇಳುವೆನೆಂದೆಯೋ ಅದನ್ನು ಈಗ ನನಗೆ ಹೇಳು" ಎಂದಳು.

೭೩-೭೪. ಯಶಸ್ವಿನಿ, ವಸುಂಧರೇ, ರಾಜಕುಮಾರನು ಪ್ರಿಯೆಯು ಹೀಗೆ ಹೇಳಿದುದನ್ನು ಕೇಳಿ, ನಕ್ಕು, ಅವಳನ್ನು ಆಲಿಂಗಿಸಿಕೊಂಡು, "ಈಗ ರಾತ್ರಿಯಾಗಿದೆ. ಸುಖವಾಗಿ ಮಲಗಿ ನಿದ್ದೆಮಾಡು. ನಿನ್ನ ಮನಸ್ಸಿನಲ್ಲಿರುವುದೆಲ್ಲವನ್ನೂ ನಾಳೆ ಹೇಳುವೆನು" ಎಂದನು.

ಪ್ರಭಾತಾಯಾಂ ತು ಶರ್ವರ್ಯಾಂ ಸ್ನಾತೌ ಕ್ಷೌಮವಿಭೂಷಿತೌ ।
ಪ್ರಣಮ್ಯ ಶಿರಸಾ ವಿಷ್ಣುಂ ಹಸ್ತೇ ಗೃಹ್ಯ ತತಃ ಪ್ರಿಯಾಂ ॥ ೭೫ ॥

ತತಃಪೂರ್ವೋತ್ತರೇ ಪಾರ್ಶ್ವೇ ನಿತ್ಯಂ ಯೋ ಹೃದಿ ತಿಷ್ಠತಿ ।
ಅಸ್ಥೀನಿ ದರ್ಶಯಾಮಾಸ ಅವಶಿಷ್ಟಾನಿ ಯಾನಿ ತು ॥ ೭೬ ॥

ಏತಾನಿ ಮಮ ಚಾಸ್ಥೀನಿ ಪೂರ್ವದೇಹೋದ್ಭವಾನಿ ಚ ।
ಅಹಂ ಪುರಾಭವಂ ಮತ್ಸ್ಯಃ ಕೋಕೇಷು ವಿಚರನ್ ಜಲೇ ॥ ೭೭ ॥

ವ್ಯಾಧೇನ ನಿಗೃಹೀತೋಽಸ್ಮಿ ಬಡಿಶೇನ ಜಲೇಚರಃ ।
ತದ್ಧಸ್ತಾನ್ನಿರ್ಗತಸ್ತತ್ರ ಬಲೇನ ಪತಿತೋ ಭುವಿ ॥ ೭೮ ॥

ಶ್ಯೇನೇನಾಮಿಷಲುಬ್ಧೇನ ನಖೈರ್ವಿದ್ಧೋಽಸ್ಮಿ ಸುಂದರಿ ।
ನೀತ ಆಕಾಶಮಾರ್ಗೇಣ ತಸ್ಮಾಚ್ಚ ಪತಿತೋತ್ರ ವೈ ॥ ೭೯ ॥

೭೫-೭೬. ಬೆಳಗಾಗುತ್ತಲೇ ಆ ರಾಜ ದಂಪತಿಗಳು ಮಿಂದು, ಪಟ್ಟೆಯ ವಸ್ತ್ರಗಳಿಂದಲಂಕೃತರಾಗಿ ವಿಷ್ಣುವನ್ನು ತಲೆಬಾಗಿ ವಂದಿಸಿದರು. ಬಳಿಕ ರಾಜಪುತ್ರನು ಪ್ರಿಯೆಯನ್ನು ಕೈಹಿಡಿದು ಕರೆದುಕೊಂಡು ಹೋಗಿ, ಆ ಕ್ಷೇತ್ರದ ಈಶಾನ್ಯಭಾಗದಲ್ಲಿದೆಯೆಂದು ಜ್ಞಾಪಕವಿದ್ದು ಅಲ್ಲೇ ಉಳಿದಿದ್ದ ತನ್ನ ಎಲುಬುಗಳನ್ನು ಆಕೆಗೆ ತೋರಿಸಿದನು.

೭೭. "ಸುಂದರಿ, ಇವು ನನ್ನ ಹಿಂದಿನ ದೇಹದಲ್ಲಿದ್ದ ಅಸ್ಥಿಗಳು. ನಾನು ಹಿಂದೆ ಈ ಕೋಕಾಕ್ಷೇತ್ರದ ನೀರಲ್ಲಿ ಚರಿಸುವ ಮೀನಾಗಿದ್ದೆನು.

೭೮. ನೀರಲ್ಲಿ ಸಂಚರಿಸುತ್ತಿದ್ದ ನನ್ನನ್ನು ಬೇಡನು ಗಾಳದಿಂದ ಹಿಡಿದನು. ಬಲದಿಂದ ಅವನ ಕೈಯ್ಯಿಂದ ನುಣುಚಿಕೊಂಡು, ಅಲ್ಲೇ ನೆಲದ ಮೇಲೆ ಬಿದ್ದೆನು.

೭೯. ಮಾಂಸದ ಆಸೆಯುಳ್ಳ ಗಿಡಗವು ಉಗುರಿನಿಂದ ಹೊಡೆದು ಬಾಧಿಸಿತು. ಅಲ್ಲದೆ ಆಕಾಶಮಾರ್ಗದಿಂದ ಎತ್ತಿಕೊಂಡು ಹೋಗಿ, ಅಲ್ಲಿಂದ ನನ್ನನ್ನು ಇಲ್ಲಿ ಬೀಳಿಸಿತು.

ತೇನ ತಸ್ಯ ಪ್ರಹಾರೇಣ ಜಾತಾ ಶಿರಸಿ ವೇದನಾ ।
ಅಹಮೇವ ವಿಜಾನಾಮಿ ನಾನ್ಯೋ ಜಾನಾತಿ ಮಾಂ ವಿನಾ ॥ ೬೦ ॥

ಏತತ್ತೇ ಕಥಿತಂ ಭದ್ರೇ ಪೂರ್ವಪೃಷ್ಟಂ ಚ ಯತ್ತ್ವಯಾ ।
ಗಚ್ಛ ಸುಂದರಿ ಭದ್ರಂ ತೇ ಯತ್ರ ತೇ ವರ್ತತೇ ಮನಃ ॥ ೬೧ ॥

ತತಸ್ಸಾಪ್ಯನವದ್ಯಾಂಗೀ ರಕ್ತಪದ್ಮಶುಭಾನನಾ ।
ಕರುಣಂ ಸ್ವರಮಾದಾಯ ಭರ್ತಾರಂ ಪುನರಬ್ರವೀತ್ ॥ ೬೨ ॥

ಏತದರ್ಥಂ ಮಯಾ ಭದ್ರ ಗುಹ್ಯಂ ನೋಕ್ತಂ ತಥಾ ಸ್ವಕಂ ।
ಅಹಂ ಚ ಯಾದೃಶೀ ಪೂರ್ವಂ ಅಭವಂ ತಚ್ಛೃಣುಷ್ವ ಮೇ ॥ ೬೩ ॥

ಕ್ಷುತ್ಪಿಪಾಸಾಪರಿಶ್ರಾಂತಾ ಚಿಲ್ಲೀ ಗಗನಗಾಮಿನೀ ।
ವೃಕ್ಷೋಪರಿ ಸಮಾಸೀನಾ ಭಕ್ಷ್ಯಂ ಚೈವ ವಿಚಿನ್ವತೀ ॥ ೬೪ ॥

---

೬೦. ಆದುದರಿಂದ ಆ ಹೊಡೆತದಿಂದ ತಲೆನೋವುಂಟಾಯಿತು. ಇದನ್ನು ನಾನೇ ಬಲ್ಲೆನಲ್ಲದೆ ಮತ್ತಾರೂ ಅರಿಯರು.

೬೧. ಭದ್ರೇ, ಹಿಂದೆ ನೀನು ಕೇಳಿದ ಈ ವಿಚಾರವನ್ನು ಈಗ ಹೇಳಿದ್ದೇನೆ. ಸುಂದರಿ, ನಿನಗೆ ಮಂಗಳವಾಗಲಿ. ನಿನಗೆ ಮನಸ್ಸಿರುವೆಡೆಗೆ ಹೋಗು.'' (ಎಂದನು).

೬೨. ಬಳಿಕ ಪ್ರಶಸ್ತಾಂಗಿಯೂ, ಕೆಂದಾವರೆಯಂತೆ ಸುಂದರವಾದ ಮುಖವುಳ್ಳವಳೂ, ಆದ ರಾಜಪುತ್ರಿಯು ಕರುಣೆಯ ದನಿಯಿಂದ ಪತಿಯನ್ನು ಕುರಿತು ಹೀಗೆ ಹೇಳಿದಳು.—

೬೩. "ಭದ್ರ, ನಿನ್ನಂತೆಯೇ ನಾನೂ ನನ್ನ ಈ ರಹಸ್ಯವಿಚಾರವನ್ನು ಹೇಳಲಿಲ್ಲ. ನಾನು ಪೂರ್ವದಲ್ಲಿ ಎಂತಹವಳಾಗಿದ್ದೆನೋ ಅದನ್ನು ಕೇಳು.

೬೪. ನಾನು ಹಸಿವು ಬಾಯಾರಿಕೆಗಳಿಂದ ಬಳಲಿದ ಚಿಲ್ಲಿಕೆಯಾಗಿ ಆಕಾಶದಲ್ಲಿ ಹಾರುತ್ತ ತಿಂಡಿಯನ್ನು ಹುಡುಕಿ, ಬಳಿಕ ಒಂದು ಮರದಮೇಲೆ ಕುಳಿತಿದ್ದೆನು.

ಅಥ ಕಶ್ಚಿನ್ಮೃಗವ್ಯಾಧೋ ಹತ್ವಾ ವನಚರಾನ್ಬಹೂನ್ ।
ಸಂಗೃಹ್ಯ ಮಾಂಸಭಾರಾನ್ವೈ ತೇನ ಮಾರ್ಗೇಣ ಸಂಗತಃ ॥ ೮೫ ॥

ಸ್ಥಾಪಯಿತ್ವಾ ಮಾಂಸಭಾರಾನ್ ಪ್ರಿಯಾಯಾಃ ಸವಿಧೇ ಸ್ವಯಂ ।
ಕಾಷ್ಠಾನ್ಯಾನಯಿತುಂ ಯಾತಃ ಕ್ಷುಧಿತೋ ಮಾಂಸಪಾಚನೇ ॥ ೮೬ ॥

ಪ್ರವೃತ್ತೋಽಗ್ನಿಮುಪಾದಾಯ ತಾವದುಡ್ಡೀಯ ಸತ್ವರಂ ।
ಮಾಂಸಪಿಂಡೋ ಮಯಾ ವಿದ್ಧೋ ದೃಢೈರ್ವಜ್ರಮಯೈರ್ನಖೈಃ ॥ ೮೭ ॥

ನ ಚ ಶಕ್ತಾಸ್ಮಿ ಸಂಹರ್ತುಂ ಮಾಂಸಭಾರಪ್ರಪೀಡಿತಾ ।
ಅಶಕ್ತಾ ದೂರಗಮನೇ ಸವಿಧೇ ಹಿ ವ್ಯವಸ್ಥಿತಾ ॥ ೮೮ ॥

ಭಕ್ಷಯಿತ್ವಾ ತತೋ ಮಾಂಸಂ ವ್ಯಾಧಸ್ಸಂಹೃಷ್ಟಮಾನಸಃ ।
ಅಪಶ್ಯನ್ಮಾಂಸಪಿಂಡಂ ತು ಮೃಗಯಾಮಾಸ ಪಾರ್ಶ್ವತಃ ॥ ೮೯ ॥

---

೮೫. ಆಗ ಮೃಗಗಳ ಬೇಟೆಗಾರನೊಬ್ಬನು ಹಲವು ಕಾಡುಮೃಗಗಳನ್ನು ಕೊಂದು ಮಾಂಸಗಳನ್ನು ಸೇರಿಸಿ ಹೊತ್ತುಕೊಂಡು ಆ ದಾರಿಯಲ್ಲಿ ಬಂದನು.

೮೬–೮೭. ಅಲ್ಲಿ ತನ್ನ ಹೆಂಡತಿಯು ಹತ್ತಿರ ಮಾಂಸದ ಹೊರೆಗಳನ್ನು ಇಟ್ಟು, ಹಸಿದಿದ್ದ ತಾನು ಮಾಂಸವನ್ನು ಬೇಯಿಸಲು ಸೌದೆಯನ್ನು ತರಲು ಹೋಗಿ, ಬಂದು, ಬೆಂಕಿಯನ್ನು ಹತ್ತಿಸಿ ಬೇಯಿಸಲು ತೊಡಗಿದನು. ಅಷ್ಟರಲ್ಲಿಯೇ ನಾನು ಮರದಿಂದ ಹಾರಿ ಬೇಗನೆ ಮಾಂಸದ ಉಂಡೆಯನ್ನು ವಜ್ರದಂತೆ ಗಟ್ಟಿಯಾದ ಉಗುರುಗಳಿಂದ ಹೊಡೆದೆನು.

೮೮. ಮಾಂಸದ ಭಾರದಿಂದ ಪೀಡಿತಳಾಗಿ ಅದನ್ನು ಹೊತ್ತುಕೊಂಡು ದೂರ ಹೋಗಲಾರದೆ ಹತ್ತಿರದಲ್ಲಿಯೇ ಕುಳಿತುಕೊಂಡೆನು.

೮೯. ಬೇಡನು (ಬೇಯಿಸಿದ) ಮಾಂಸವನ್ನು ತಿಂದು, ಸಂತೋಷಗೊಂಡ ಮನಸ್ಸುಳ್ಳವನಾಗಿ ಬಳಿಕ (ಬೇಯಿಸದೆ ಇಟ್ಟಿದ್ದ) ಮಾಂಸದ ಉಂಡೆಯನ್ನು ಕಾಣದೆ ಪಕ್ಕಗಳಲ್ಲಿ ಹುಡುಕಿದನು.

ತಾವದ್ದದರ್ಶ ಮಾಂ ತತ್ರ ಖಾದಂತೀಂ ಮಾಂಸಪಿಂಡಿಕಾಂ ।
ತತಸ್ಸ ಧನುರುದ್ಯಮ್ಯ ಸಶರಂ ಚ ವ್ಯಕರ್ಷತ ।
ವಿದ್ಧ್ವಾ ಬಾಣೇನ ಮಾಂ ತತ್ರ ಭಕ್ಷಯಂತೀಮಪಾತಯತ್ ॥ ೯೦ ॥

ತತೋಽಹಂ ಭ್ರಮಮಾಣಾ ವೈ ನಿಶ್ಚೇಷ್ಟಾ ಗತಜೀವಿತಾ ॥
ಪತಿತಾಸ್ಮ್ಯವಶಾ ಭದ್ರ ಕಾಲತಂತ್ರೇ ದುರಾಸದೇ ॥ ೯೧ ॥

ಏತತ್‌ಕ್ಷೇತ್ರಪ್ರಭಾವೇಣ ತ್ವಕಾಮಾಪಿ ನೃಪಾತ್ಮಜಾ ।
ಜಾತಾಸ್ಮಿ ತ್ವತ್ಪ್ರಿಯಾ ಚಾಪಿ ಸ್ಮರಂತೀ ಪೂರ್ವಜನ್ಮ ತತ್ ॥ ೯೨ ॥

ಏತಾನಿ ಪಶ್ಯ ಚಾಸ್ಥೀನಿ ಶೇಷಾಣಿ ಬಹುಕಾಲತಃ ।
ಗಲಿತಾನ್ಯಲ್ಪಶೇಷಾಣಿ ಪ್ರಾಣನಾಥ ಸಮೀಪತಃ ॥ ೯೩ ॥

ಏವಂ ಸಾ ದರ್ಶಯಿತ್ವಾ ತು ಭರ್ತಾರಂ ಪುನರಬ್ರವೀತ್ ॥ ೯೪ ॥

---

೯೦. ಅಷ್ಟರಲ್ಲಿ ಅಲ್ಲಿ ಮಾಂಸವನ್ನು ತಿನ್ನುತ್ತಿದ್ದ ನನ್ನನ್ನು ಕಂಡು, ಬಿಲ್ಲನ್ನು ತೆಗೆದುಕೊಂಡು ಬಾಣವನ್ನು ಸೆಳೆದು ಅದರಿಂದ ಹೊಡೆದು ನನ್ನನ್ನು ಬೀಳಿಸಿದನು.

೯೧. ಭದ್ರ, ಬಳಿಕ ನಾನು ಸುತ್ತುತ್ತ ಪರವಶಳೂ, ನಿಶ್ಚೇಷ್ಟಳೂ ಆಗಿ ತಿಳಿಯಲು ಕಷ್ಟವಾದ ಕಾಲತಂತ್ರದಿಂದ ಪ್ರಾಣವನ್ನು ಕಳೆದುಕೊಂಡು ಬಿದ್ದೆನು.

೯೨. ಈ ಕ್ಷೇತ್ರದ ಮಹಿಮೆಯಿಂದ ನಾನು ಇಚ್ಛಿಸದಿದ್ದರೂ ರಾಜಕುಮಾರಿಯಾಗಿ ಜನಿಸಿ, ಆ ಪೂರ್ವಜನ್ಮಸ್ಮರಣೆಯುಳ್ಳವಳಾಗಿಯೇ ನಿನ್ನ ಪ್ರಿಯೆಯಾದೆನು.

೯೩–೯೪. ಪ್ರಾಣನಾಥ, ಬಹುಕಾಲದಿಂದ ಗಳಿತವಾಗಿ ಸ್ವಲ್ಪವೇ ಉಳಿದಿರುವ ಈ ಮೂಳೆಗಳನ್ನು ನೋಡು" ಎಂದು ತೋರಿಸಿ, ತಿರುಗಿ ಪತಿಯೊಡನೆ ಮಾತನಾಡಿದಳು

ಆನೀತೋಽಸಿ ಮಯಾ ಭದ್ರ ಸ್ಥಾನಂ ಕೋಕಾಮುಖಂ ಪ್ರತಿ ।
ಏತತ್ಕ್ಷೇತ್ರಪ್ರಭಾವೇಣ ತಿರ್ಯಗ್ಯೋನಿಗತಾ ಅಪಿ ।
ಉತ್ತಮೇ ತು ಕುಲೇ ಜಾತಾ ಮಾನುಷೀಂ ಜಾತಿಮಾಶ್ರಿತಾ ॥ ೯೫ ॥

ಯಂ ಯಂ ಪ್ರವಕ್ಷ್ಯಸೇ ಧರ್ಮಂ ವಿಷ್ಣುಪ್ರೋಕ್ತಂ ಯಶೋಧನ ।
ತಂ ತಮೇವ ಕರಿಷ್ಯಾಮಿ ವಿಷ್ಣುಲೋಕೇ ಸುಖಾವಹಂ ॥ ೯೬ ॥

ತತಸ್ತಸ್ಯಾ ವಚಃ ಶ್ರುತ್ವಾ ಲಬ್ಧಪೂರ್ವಸ್ಮೃತಿರ್ನೃಪಃ ।
ವಿಸ್ಮಯಂ ಪರಮಂ ಗತ್ವಾ ಸಾಧು ಸಾಧ್ವಿತ್ಯಪೂಜಯತ್ ॥ ೯೭ ॥

ತಸ್ಮಿನ್ ಕ್ಷೇತ್ರೇ ಚ ಯತ್ಕರ್ಮ ಕರ್ತವ್ಯಂ ಧರ್ಮಸಂಹಿತಂ ।
ತಚ್ಛ್ರುತ್ವಾ ಕಾನಿಚಿದ್ದೇವೀ ಸ್ವಯಂ ಚಕ್ರೇ ಪತಿವ್ರತಾ ॥ ೯೮ ॥

---

೯೫. "ಭದ್ರ, ಕೋಕಾಮುಖಕ್ಷೇತ್ರಕ್ಕೆ ನಿನ್ನನ್ನು ಕರೆದುಕೊಂಡು ಬಂದಿದ್ದೇನೆ. ತಿರ್ಯಗ್ಜನ್ಮದಲ್ಲಿ ಹುಟ್ಟಿದರೂ ಈ ಕ್ಷೇತ್ರದ ಮಹಿಮೆಯಿಂದ ಉತ್ತಮ ಕುಲದಲ್ಲಿ ಹುಟ್ಟಿ ಮನುಷ್ಯಸ್ತ್ರೀಜನ್ಮವನ್ನು ಪಡೆದೆನು.

೯೬. ಯಶೋಧನ, ವಿಷ್ಣುವು ಹೇಳಿರುವ ಯಾವ ಯಾವ ಧರ್ಮಗಳನ್ನು ಬೋಧಿಸುವೆಯೋ ವಿಷ್ಣುಲೋಕಸುಖವನ್ನುಂಟುಮಾಡುವ ಅದೆಲ್ಲವನ್ನೂ ಮಾಡುವೆನು."

೯೭. ಅವಳ ಮಾತನ್ನು ಕೇಳಿ, ಪೂರ್ವಜನ್ಮದ ಸ್ಮರಣೆಯನ್ನು ಪಡೆದ ರಾಜಪುತ್ರನು ಪರಮಾಶ್ಚರ್ಯವನ್ನು ಪಡೆದು, "ಸಾಧು, ಸಾಧು" ಎಂದು ಅವಳನ್ನು ಸ್ತುತಿಸಿದನು.

೯೮. ಆ ಕ್ಷೇತ್ರದಲ್ಲಿ ಮಾಡಬೇಕಾದ ಧರ್ಮಯುತವಾದ ಕರ್ಮಗಳನ್ನು (ಅವನಿಂದ)ಕೇಳಿ, ಪತಿವ್ರತೆಯಾದ ಆ ದೇವಿಯು ಅವುಗಳಲ್ಲಿ ಕೆಲವನ್ನು ತಾನೂ ಮಾಡಿದಳು.

ಅನ್ಯೇಽಪಿ ಸರ್ವೇ ತಚ್ಛ್ರುತ್ವಾ ಯಸ್ಯ ಯದ್ರೋಚತೇ ಪ್ರಿಯಂ ।
ತತ್ತತ್ಸರ್ವೇಽಪಿ ಕುರ್ವಂತಿ ವಿಧಿದೃಷ್ಟೇನ ಕರ್ಮಣಾ ॥ ೯೯ ॥

ತತ್ರ ತೌ ದಂಪತೀ ದ್ರವ್ಯಮನ್ನಂ ರತ್ನಂ ದ್ವಿಜೇಷು ಚ ।
ದದತುಃ ಪರಮಪ್ರೀತೌ ಪಾತ್ರೇಭ್ಯಶ್ಚ ಯಥಾರ್ಹತಃ ॥ ೧೦೦ ॥

ಯೇ ಯೇ ತತ್ರಾರ್ಥಮಾಸಾದ್ಯ ಯಾತಾಸ್ತೇಽಪಿ ವಸುಂಧರೇ ।
ಬ್ರಾಹ್ಮಣೇಭ್ಯೋ ದದುಃ ಸ್ವಾನಿ ವಿಷ್ಣುಭಕ್ತ್ಯಾ ಯತವ್ರತಾಃ ॥ ೧೦೧ ॥

ತತ್ರ ಸ್ಥಿತ್ವಾ ವರಾರೋಹೇ ಮಮ ಕರ್ಮವ್ಯವಸ್ಥಿತಾಃ ।
ತತ್ಕ್ಷೇತ್ರಸ್ಯ ಪ್ರಭಾವೇಣ ಶ್ವೇತದ್ವೀಪಮುಪಾಗತಾಃ ॥ ೧೦೨ ॥

ಏವಂ ಸ ರಾಜಪುತ್ರೋಽಪಿ ಮಮ ಕರ್ಮವ್ಯವಸ್ಥಿತಃ ।
ಮುಕ್ತ್ವಾ ತು ಮಾನುಷಂ ಭಾವಂ ಶ್ವೇತದ್ವೀಪಮುಪಾಗತಃ ॥ ೧೦೩ ॥

---

೯೯. ಇತರರೆಲ್ಲರೂ ಅದನ್ನು ಕೇಳಿ, ಅವರವರಿಗೆ ಇಷ್ಟವೂ, ಹಿತವೂ ಆದ ಸತ್ಕರ್ಮವನ್ನು ಅವರವರು ವಿಧ್ಯುಕ್ತವಾದ ರೀತಿಯಲ್ಲಿ ಮಾಡಿದರು.

೧೦೦. ಅಲ್ಲಿ ಆ ರಾಜದಂಪತಿಗಳು, ದ್ವಿಜರಲ್ಲಿ ಅರ್ಹರಾದವರಿಗೆ ತಕ್ಕಂತೆ ದ್ರವ್ಯವನ್ನೂ, ಅನ್ನವನ್ನೂ, ರತ್ನವನ್ನೂ ಪರಮಪ್ರೀತಿಯಿಂದ ದಾನ ಮಾಡುತ್ತಿದ್ದರು.

೧೦೧. ವಸುಂಧರೇ, ಯಾರು ಯಾರು ವಿಷ್ಣುಭಕ್ತಿಯಿಂದ ವ್ರತನಿಷ್ಠರಾಗಿ ಆ ಕ್ಷೇತ್ರಕ್ಕೆ ಬಂದು ಹೋದರೋ ಅವರೂ ತಮ್ಮಲ್ಲಿ ಇರುವುದನ್ನು ಬ್ರಾಹ್ಮಣರಿಗೆ ಕೊಟ್ಟರು.

೧೦೨. ವರಾರೋಹೇ, ಅಲ್ಲಿದ್ದು ನನ್ನ ಕರ್ಮಗಳಲ್ಲಿ ನಿರತರಾದವರು ಆ ಕ್ಷೇತ್ರದ ಪ್ರಭಾವದಿಂದ ಶ್ವೇತದ್ವೀಪ(ವೈಕುಂಠ)ವನ್ನು ಸೇರಿದರು.

೧೦೩. ಹಾಗೆಯೇ ಆ ರಾಜಪುತ್ರನೂ ನನ್ನ ಕರ್ಮದಲ್ಲಿ ಆಸಕ್ತನಾಗಿ ಮನುಷ್ಯಜನ್ಮವನ್ನು ತೊರೆದು, ಶ್ವೇತದ್ವೀಪವನ್ನು ಸೇರಿದನು.

ಸರ್ವೇ ತು ಪುರುಷಾಸ್ತತ್ರ ಆತ್ಮನಾತ್ಮನುದರ್ಶನಾತ್ ।
ಶುಕ್ಲಾಂಬರಧರಾ ದಿವ್ಯಭೂಷಣೈಶ್ಚ ವಿಭೂಷಿತಾಃ ॥ ೧೦೪ ॥

ದೀಪ್ತಿಮಂತೋ ಮಹಾಕಾಯಾಃ ಸರ್ವೇ ಚ ಶುಭದರ್ಶನಾಃ ॥ ೧೦೫ ॥

ಸ್ತ್ರಿಯೋಽಪಿ ದಿವ್ಯಾ ತತ್ರತ್ಯಾ ದಿವ್ಯಭೂಷಣಭೂಷಿತಾಃ ।
ತೇಜಸಾ ದೀಪ್ತಿಮತ್ಯಶ್ಚ ಶುದ್ಧಸತ್ವವಿಭೂಷಿತಾಃ ।
ಮಯಿ ಶುದ್ಧಂ ಪರಂ ಭಾವಮಾರೂಢಾ ಸತ್ಯವರ್ಚಸಃ ॥ ೧೦೬ ॥

ಏತತ್ತೇ ಕಥಿತಂ ದೇವಿ ಕೋಕಾಮುಖಮನುತ್ತಮಂ ॥ ೧೦೭ ॥

ಯತ್ರ ಮತ್ಸ್ಯಶ್ಚ ಚಿಲ್ಲೀ ಚ ಸಕಾಮಾ ಯೇ ಸಮಾಗತಾಃ ।
ಪ್ರಸಾದಾನ್ಮಮ ಸುಶ್ರೋಣಿ ಶ್ವೇತದ್ವೀಪಮುಪಾಗತಾಃ ॥ ೧೦೮ ॥

೧೦೪-೧೦೫. ಆ ಕ್ಷೇತ್ರದಲ್ಲಿರುವ ಪುರುಷರೆಲ್ಲರೂ ತಮಗೆ ತಾವೇ ಪರಬ್ರಹ್ಮಜ್ಞಾನವನ್ನು ಪಡೆದು, ಶುದ್ಧವಾದ ಶುಕ್ಲವಸ್ತ್ರಧಾರಿಗಳೂ, ದಿವ್ಯಭೂಷಣಾಲಂಕೃತರೂ, ಕಾಂತಿವಂತರೂ, ಮಹಾದೇಹಿಗಳೂ, ಶುಭ ದರ್ಶನರೂ ಆದವರು.

೧೦೬. ಅಲ್ಲಿರುವ ಸ್ತ್ರೀಯರೂ ದಿವ್ಯರೂ, ದಿವ್ಯಭೂಷಣ ಭೂಷಿತರೂ, ಕಾಂತಿಯಿಂದ ಹೊಳೆಯುವವರೂ, ಶುದ್ಧಸತ್ವಗುಣಾಲಂಕೃತರೂ, ಸತ್ಯತೇಜಸ್ವಿನಿಯರೂ, ನನ್ನಲ್ಲಿ ಶುದ್ಧವೂ ನಿಶ್ಚಲವೂ ಆದ ಭಾವವುಳ್ಳವರೂ ಆಗಿರುವರು.

೧೦೭-೧೦೮. ದೇವಿ, ಎಲ್ಲಿದ್ದ ಮೀನೂ, ಚಿಲ್ಲಿಕೆಯೂ, ಉದ್ದೇಶಪೂರ್ವಕವಾಗಿ ಬಂದವರೂ ನನ್ನ ಅನುಗ್ರಹದಿಂದ ಶ್ವೇತದ್ವೀಪವನ್ನು ಸೇರಿದರೋ ಆ ಅತ್ಯುತ್ತಮವಾದ ಕೋಕಾಮುಖ ವಿಚಾರವನ್ನು ನಿನಗೆ ಹೇಳಿದ್ದೇನೆ.

ಏಷ ಧರ್ಮಶ್ಚ ಕೀರ್ತಿಶ್ಚ ಶಕ್ತಿಶ್ಚೈವ ಮಹದ್ಯಶಃ ।
ಕರ್ಮಣಾಂ ಪರಮಂ ಕರ್ಮ ತಪಸಾಂ ಚ ಮಹತ್ತಪಃ ॥ ೧೦೯ ॥

ಆಖ್ಯಾನಾನಾಂ ಚ ಪರಮಂ ಕೃತೀನಾಂ ಪರಮಾ ಕೃತಿಃ ।
ಧರ್ಮಾಣಾಂ ಚ ಪರೋ ಧರ್ಮಃ ತವಾರ್ಥಂ ಕೀರ್ತಿತೋ ಮಯಾ॥೧೧೦॥

ಕ್ರೋಧನಾಯ ನ ತಂ ದದ್ಯಾತ್ ಮೂರ್ಖಾಯ ಪಿಶುನಾಯ ಚ ।
ಅಭಕ್ತಾಯ ನ ತಂ ದದ್ಯಾತ್ ಅಶ್ರದ್ಧಾಯ ಶಠಾಯ ಚ ॥ ೧೧೧ ॥

ದೀಕ್ಷಿತಾಯೈವ ದಾತವ್ಯಂ ಸುಪ್ರಸನ್ನಾಯ ನಿತ್ಯಶಃ ।
ಪಂಡಿತಾಯ ಚ ದಾತವ್ಯಂ ಯಶ್ಚ ಶಾಸ್ತ್ರವಿಶಾರದಃ ॥ ೧೧೨ ॥

ಏತನ್ಮರಣಕಾಲೇಽಪಿ ಧಾರಯೇದ್ಯಃ ಸಮಾಹಿತಃ ।
ಸೋಽಪಿ ಮುಚ್ಯೇತ ಪೂತಾತ್ಮಾ ಗರ್ಭಾದ್ಯೋನಿಭವಾದ್ಭಯಾತ್ ॥ ೧೧೩ ॥

೧೦೯–೧೧೦. ಈ ಧರ್ಮಕೀರ್ತಿಶಕ್ತಿಗಳನ್ನೂ, ಕರ್ಮಗಳಲ್ಲಿ ಉತ್ತಮ ಕರ್ಮವನ್ನೂ, ತಪಸ್ಸುಗಳಲ್ಲಿ ಮಹಾತಪಸ್ಸನ್ನೂ, ಕಾವ್ಯಗಳಲ್ಲಿ ಪರಮ ಕಾವ್ಯವನ್ನೂ ಧರ್ಮಗಳಲ್ಲಿ ಪರಮಧರ್ಮವನ್ನೂ, ಉತ್ತಮ ಚರಿತ್ರೆಯನ್ನೂ ನಿನಗಾಗಿ ಹೇಳಿದೆನು.

೧೧೧. ಕೋಪವುಳ್ಳವನಿಗೂ, ಮೂರ್ಖನಿಗೂ, ಪಿಶುನನಿಗೂ, ಅಭಕ್ತನಿಗೂ ಆಸಕ್ತಿಯಿಲ್ಲದವನಿಗೂ ದುಷ್ಟನಿಗೂ ಇದನ್ನು ಉಪದೇಶಿಸಬಾರದು.

೧೧೨. ಯಾವಾಗಲೂ, ಸುಪ್ರಸನ್ನನಾದ ದೀಕ್ಷಿತನಿಗೂ, ಶಾಸ್ತ್ರವಿಶಾರದನಾದ ಪಂಡಿತನಿಗೂ ಉಪದೇಶಿಸಬೇಕು.

೧೧೩. ಈ ವಿಚಾರವನ್ನು ಮರಣಕಾಲದಲ್ಲಿಯೂ ಸಮಾಹಿತನಾಗಿ ಮನಸ್ಸಿನಲ್ಲಿಟ್ಟುಕೊಳ್ಳುವ ಪವಿತ್ರಾತ್ಮನು ಗರ್ಭಾದಿಗಳಲ್ಲಿ ಮತ್ತೆ ಜನಿಸುವ ಭೀತಿಯಿಲ್ಲದವನಾಗುವನು.

ಏತತ್ತೇ ಕಥಿತಂ ಭದ್ರೇ ಮಹಾಖ್ಯಾನಂ ಮಹೌಜಸಂ ॥ ೧೧೪ ॥

ಯ ಏತೇನ ವಿಧಾನೇನ ಗತ್ವಾ ಕೋಕಾಮುಖಂ ಮಹತ್ ।
ಸೋಽಪಿ ಯಾತಿ ಪರಾಂ ಸಿದ್ಧಿಂ ಚಿಲ್ಲಿಮತ್ಸ್ಯೌ ಯಥಾ ಪುರಾ ॥ ೧೧೫ ॥

ಇತಿ ಶ್ರೀ ವರಾಹಪುರಾಣೇ ಕೋಕಾಮುಖ ಮಾಹಾತ್ಮ್ಯೇ
ದ್ವಾವಿಂಶತ್ಯಧಿಕಶತತಮೋಽಧ್ಯಾಯಃ

---

೧೧೪. ಭದ್ರೇ, ಅತಿತೇಜವುಳ್ಳ ಈ ಮಹಾಚರಿತ್ರೆಯನ್ನು ನಿನಗೆ ಹೇಳಿದ್ದೇನೆ.

೧೧೫. ಈ ವಿಧಾನದಿಂದ ಪೂಜ್ಯವಾದ ಕೋಕಾಮುಖಕ್ಷೇತ್ರಕ್ಕೆ ಹೋಗುವವನು ಪೂರ್ವದ ಆ ಚಿಲ್ಲಿಪಕ್ಷಿ ಮೀನುಗಳಂತೆ ಪರಮ ಸಿದ್ಧಿಯನ್ನು ಪಡೆಯುವನು.

ಅಧ್ಯಾಯದ ಸಾರಾಂಶ :—

ಶ್ರೀವರಾಹನು ಭೂದೇವಿಗೆ, ಕೋಕಾಮುಖಕ್ಷೇತ್ರಮಹಿಮೆಯನ್ನು, ಅದಕ್ಕೆ ಉದಾಹರಣೆಯಾಗಿ ಮೀನೂ, ಚಿಲ್ಲಿಪಕ್ಷಿಯೂ ಆಗಿದ್ದು ಆ ಕ್ಷೇತ್ರದಲ್ಲಿ ಪ್ರಾಣಬಿಟ್ಟುದರಿಂದ ಮುಂದಿನ ಜನ್ಮದಲ್ಲಿ ರಾಜಪುತ್ರ ರಾಜಪುತ್ರಿಯರಾಗಿ ದಂಪತಿಗಳಾಗಿ ಸುಖದಿಂದಿದ್ದು(ಮತ್ತೆ)ಕೋಕಾಮುಖಕ್ಷೇತ್ರಕ್ಕೆ ಬಂದು ಧರ್ಮವನ್ನಾಚರಿಸಿ, ಮುಕ್ತರಾದವರ ವಿಚಾರವನ್ನೂ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರಿಪ್ಪತ್ತೆರಡನೆಯ ಅಧ್ಯಾಯ.

॥ ಶ್ರೀಃ ॥

–x–

ತ್ರಯೋವಿಂಶತ್ಯಧಿಕಶತತಮೋಧ್ಯಾಯಃ

ಅಥ ಸುಮನೋಗಂಧಾದಿ ಮಾಹಾತ್ಮ್ಯಂ

॥ ಸೂತ ಉವಾಚ ॥

ಶ್ರುತ್ವಾ ತು ಕೋಕಾಮಾಹಾತ್ಮ್ಯಂ ಪೃಥಿವೀ ಧರ್ಮಸಂಹಿತಂ ।
ವಿಸ್ಮಯಂ ಪರಮಂ ಯಾತಾ ಶ್ರುತ್ವಾ ಧರ್ಮಂ ಮಹೌಜಸಂ ॥ ೧ ॥

॥ ಧರಣ್ಯುವಾಚ ॥

ಅಹೋ ಪ್ರಭಾವಃ ಕೋಕಾಯಾ ಮಾಹಾತ್ಮ್ಯಂ ಕ್ರೋಡರೂಪಿಣಃ ।
ತಿರ್ಯಗ್ಯೋನಿಗತೋ ವಾಪಿ ಪ್ರಾಪ್ತೋ ಯತ್ಪರಮಾಂ ಗತಿಂ ॥ ೨ ॥

ನೂರ ಇಪ್ಪತ್ತಮೂರನೆಯ ಅಧ್ಯಾಯ

ಪುಷ್ಪಗಂಧಾದಿಮಹಿಮೆ

೧ ಸೂತಮುನಿ—ಭೂದೇವಿಯು ಧರ್ಮಯುತವಾದ ಕೋಕಾ ಮಹಿಮೆಯನ್ನೂ, ಅತ್ಯುಜ್ವಲವಾದ ಧರ್ಮವನ್ನೂ ಕೇಳಿ, ಅತ್ಯಾಶ್ಚರ್ಯವನ್ನು ಪಡೆದಳು.

೨. ಭೂದೇವಿ—ತಿರ್ಯಗ್ಜನ್ಮದಲ್ಲಿ ಹುಟ್ಟಿದವನಾದರೂ ಯಾವುದರಿಂದ ಪರಮಗತಿಯನ್ನು ಪಡೆದನೋ ಆ ಕೋಕಾಕ್ಷೇತ್ರದ ಪ್ರಭಾವವೂ, ವರಾಹ ಮೂರ್ತಿಯಾದ ನಿನ್ನ ಮಹಿಮೆಯೂ ಅದ್ಭುತವಾದುದು.

ತವ ದೇವ ಪ್ರಸಾದೇನ ಕಿಂಚಿದಿಚ್ಛಾಮಿ ವೇದಿತುಂ ।
ಯನ್ಮಯಾ ಪೂರ್ವಪೃಷ್ಟೋಽಸಿ ಕೇನ ಧರ್ಮೇಣ ಮಾನವಾಃ ॥ ೩ ॥

ತಪಸಾ ಕರ್ಮಣಾ ವಾಪಿ ಪಶ್ಯಂತಿ ತ್ವಾಂ ಹಿ ಮಾಧವ ।
ಪ್ರಸಾದಸುಮುಖೋ ಭೂತ್ವಾ ನಿಖಿಲಂ ವಕ್ತುಮರ್ಹಸಿ ॥ ೪ ॥

ಏವಂ ಪೃಷ್ಟಸ್ತದಾ ದೇವ್ಯಾ ಮಾಧವ್ಯಾ ಸ ತು ಮಾಧವಃ ।
ಪ್ರಹಸ್ಯ ಪುನರೇವೇದಂ ವಕ್ತುಂ ಸಮುಪಚಕ್ರಮೇ ॥ ೫ ॥

॥ ಶ್ರೀ ವರಾಹ ಉವಾಚ ॥

ಏವಮೇತನ್ಮಹಾಭಾಗೇ ಯಥಾ ತ್ವಂ ಭೀರು ಭಾಷಸೇ ।
ಕಥಯಿಷ್ಯಾಮಿ ತೇ ಧರ್ಮಂ ಗುಹ್ಯಂ ಸಂಸಾರಮೋಕ್ಷಣಂ ॥ ೬ ॥

ಗತೇ ಮೇಘಾಗಮೇ ಕಾಲೇ ಪ್ರಸನ್ನ ಶರದಾಶಯೇ ।
ಅಂಬರೇ ವಿಮಲೇ ಜಾತೇ ವಿಮಲೇ ಶಶಿಮಂಡಲೇ ॥ ೭ ॥

೩-೪. ದೇವ, ನಿನ್ನ ಅನುಗ್ರಹದಿಂದ ಇನ್ನೂ ಸ್ವಲ್ಪ ತಿಳಿದುಕೊಳ್ಳಲು ಬಯಸುತ್ತೇನೆ. ನಾನು ಹಿಂದೆಯೇ ನಿನ್ನನ್ನು ಕೇಳಿದ್ದೆನು. ಮಾಧವಾ, ಮನುಷ್ಯರು ನಿನ್ನನ್ನು ಯಾವ ಧರ್ಮದಿಂದ ಸಂದರ್ಶಿಸುವರು? ತಪಸ್ಸಿನಿಂದಲೇ? ಕರ್ಮದಿಂದಲೇ? ದಯೆಯಿಂದ ಸುಮುಖನಾಗಿ ಎಲ್ಲವನ್ನೂ ಹೇಳಬೇಕು.

೫. ಹೀಗೆ ಧರಣೀದೇವಿಯಿಂದ ಕೇಳಿಸಿಕೊಂಡ ಮಾಧವನು ನಕ್ಕು, ತಿರುಗಿಯೂ ಇದನ್ನು ಹೇಳಲು ಮೊದಲುಮಾಡಿದನು.

೬. ಶ್ರೀವರಾಹ—ಮಹಾಭಾಗ್ಯೇ, ಭೀರು, ನೀನು ಕೇಳಿದ ಸಂಸಾರ ವಿಮೋಚಕವೂ, ರಹಸ್ಯವೂ ಆದ ಈ ಧರ್ಮವನ್ನು ನಿನಗೆ ಹೇಳುತ್ತೇನೆ.

೭-೯. ಮಳೆಗಾಲವು ಕಳೆದು, ನಿರ್ಮಲವಾದ ಶರತ್ಕಾಲವು ಬಂದು, ಆಕಾಶವು ನಿರ್ಮಲವಾಗಿ, ಚಂದ್ರಮಂಡಲವೂ ಸ್ವಚ್ಛವಾಗಿ, ಅತಿಶೀತವೂ,

ನಾತಿಶೀತೇ ನ ಚಾತ್ಯುಷ್ಣೇ ಕಾಲೇ ಹಂಸವಿರಾವಿಣಿ |
ಕುಮುದೋತ್ಪಲಕಲ್ಹಾರಪದ್ಮಸೌರಭನಿರ್ಭರೇ ॥ ೮ ॥

ಕುಮುದಸ್ಯ ತು ಮಾಸಸ್ಯ ಭವೇದ್ಯಾ ದ್ವಾದಶೀ ಶುಭಾ |
ತಸ್ಯಾಂ ಮಾಮರ್ಚಯೇದ್ಯಸ್ತು ತತ್ಪ್ರಭಾವಂ ಶೃಣುಷ್ವ ಮೇ ॥ ೯ ॥

ಯಾವಲ್ಲೋಕಾಶ್ಚ ಧಾರ್ಯಂತೇ ತಾವತ್ಕಾಲಂ ವಸುಂಧರೇ |
ಮದ್ಭಕ್ತೋ ಜಾಯತೇ ಧನ್ಯೋ ನಾನ್ಯಭಕ್ತಃ ಕದಾಚನ ॥ ೧೦ ॥

ಕೃತ್ವಾ ಮಮೈವ ಕಾರ್ಯಾಣಿ ದ್ವಾದಶ್ಯಾಂ ಯತ್ರ ಮಾಧವಿ |
ಮಮೈವಾರಾಧನಾರ್ಥಾಯ ಇಮಂ ಮಂತ್ರಮುದೀರಯೇತ್ ॥ ೧೧ ॥

ಮಂತ್ರಃ—

ಬ್ರಹ್ಮಣಾ ಚ ರುದ್ರೇಣ ಯಸ್ತೂಯಮಾನೋ ಭವಾನೃಷಿ ವಂದಿತೋ ವಂದನೀಯಶ್ಚ ಪ್ರಾಪ್ತಾ ದ್ವಾದಶೀಯಂ ತೇ ಪ್ರಬುಧ್ಯಸ್ವ

ಅತ್ಯುಷ್ಣವೂ ಇಲ್ಲದೆ ಹಂಸಗಳು ವಿಹರಿಸುವ ಕಾಲವಾದ, ಕುಮುದೋತ್ಪಲಕಲ್ಹಾರ ಕಮಲಗಳ ಸುವಾಸನೆಯಿಂದ ಪೂರ್ಣವಾದ ಕಾರ್ತಿಕಮಾಸದ ಶುಕ್ಲಪಕ್ಷದ ಶುಭಕರವಾದ(ಉತ್ಥಾನ)ದ್ವಾದಶಿಯಲ್ಲಿ ನನ್ನನ್ನು ಪೂಜಿಸುವವನ ಮಹಿಮೆಯನ್ನು ಕೇಳು.

೧೦. ವಸುಂಧರೇ, ಉತ್ಥಾನ ದ್ವಾದಶಿಯಲ್ಲಿ ನನ್ನನ್ನು ಪೂಜಿಸುವ ನನ್ನ ಭಕ್ತನು ಲೋಕಗಳಿರುವವರೆಗೂ ಸುಕೃತಿಯಾಗುವನು. ಅನ್ಯಭಕ್ತನು ಎಂದಿಗೂ ಆಗಲಾರನು.

೧೧-೧೨. ಮಾಧವಿ, ಆ ದ್ವಾದಶಿಯದಿನ ನನ್ನ ಪೂಜಾಕಾರ್ಯಗಳನ್ನು ಮಾಡಿ, ನನ್ನ ಸಂತೋಷಕ್ಕಾಗಿ, "ಲೋಕನಾಥ, ಬ್ರಹ್ಮನಿಂದಲೂ ರುದ್ರನಿಂದಲೂ ಸ್ತುತಿಸಲ್ಪಡುವನೂ ಋಷಿಗಳಿಂದ ನಮಸ್ಕೃತನೂ ಆದ ನಿನ್ನ ಉತ್ಥಾನ

ಜಾಗೃಷ್ವ ಮೇಘಾ ಗತಾಃ ಪೂರ್ಣಶ್ಚಂದ್ರಃ ಶಾರದಾನಿ ಪುಷ್ಪಾಣಿ ಲೋಕೇ ನಾಥ ತುಭ್ಯಮಹಂ ದದಾನೀತಿ ಧರ್ಮಹೇತೋಸ್ತವ ಪ್ರೀತಯೇ ಪ್ರಬುದ್ಧ ಜಾಗ್ರತಂ ಲೋಕನಾಥ ತ್ವಾಂ ಭಜಮಾನಾ ಯಜ್ಞೇನ ಯಜಂತೇ ಸತ್ರೇಣ ಸತ್ರಿಣೋ ವೇದೈಃ ಪಠಂತಿ ಭಗವತಃ ಶುದ್ಧಾಃ ಪ್ರಬುದ್ಧಾಃ ಜಾಗ್ರತೋ ಲೋಕನಾಥ ॥ ೧೨ ॥

ಏವಂ ಕರ್ಮಾಣಿ ಕುರ್ವಂತಿ ದ್ವಾದಶ್ಯಾಂ ವೈ ಯಶಸ್ವಿನಿ ।
ಮಮ ಭಕ್ತಾ ವ್ರತಂ ಶ್ರೇಷ್ಠಂ ತೇ ಯಾಂತಿ ಪರಮಾಂ ಗತಿಂ ॥ ೧೩ ॥

ಏವಂ ವೈ ಶಾರದಂ ಕರ್ಮ ನಿಖಿಲಂ ಕಥಿತಂ ಮಯಾ ।
ದೇವಿ ಸಂಸಾರಮೋಕ್ಷಾರ್ಥಂ ಮಮ ಭಕ್ತಸುಖಾವಹಂ ॥ ೧೪ ॥

ಇತಿ ಪ್ರಬೋಧಿನೀಕರ್ಮ

ದ್ವಾದಶಿಯು ಒದಗಿದೆ. ಎಚ್ಚರಗೊಂಡೇಳು. ಮೋಡಗಳು ಹೋದುವು. ಚಂದ್ರನು ಪೂರ್ಣನಾಗಿರುವನು. ಶರತ್ಕಾಲದ ಹೂಗಳನ್ನು ನಾನು ನಿನಗೆ. ಅರ್ಪಿಸುತ್ತೇನೆ. ಜಗನ್ನಾಥಾ, ಎಚ್ಚರಗೊಂಡೆದ್ದ ನಿನ್ನನ್ನು ಧರ್ಮಸಂಪಾದನೆ ಗಾಗಿಯೂ ನಿನ್ನ ಸಂತೋಷಕ್ಕಾಗಿಯೂ ಭಾಗವತರೂ ಶುದ್ಧರೂ ಯಜಮಾನರೂ ಜಾಗರೂಕರಾಗಿ ಯಜ್ಞಗಳಿಂದಲೂ ಸತ್ರಗಳಿಂದಲೂ ಪೂಜಿಸುವರು. ವೇದಗ ಳಿಂದ ಸ್ತುತಿಸುವರು." ಎಂಬರ್ಥವುಳ್ಳ "ಬ್ರಹ್ಮಣಾಚ........ಲೋಕನಾಥ" ಎಂಬ ಮೇಲಿನ (೧೨ ನೆಯ) ಮಂತ್ರವನ್ನು ಹೇಳಬೇಕು.

೧೩. ಯಶಸ್ವಿನಿ, ದ್ವಾದಶಿಯಲ್ಲಿ ಹೀಗೆ ಶ್ರೇಷ್ಠವಾದ ವ್ರತಕರ್ಮಗಳನ್ನು ಮಾಡುವ ನನ್ನ ಭಕ್ತರು ಪರಮಗತಿಯನ್ನು ಪಡೆಯುವರು.

೧೪. ದೇವಿ, ಹೀಗೆ ನನ್ನ ಭಕ್ತರಿಗೆ ಸುಖವನ್ನುಂಟುಮಾಡುವುದೂ, ಸಂಸಾರವಿಮೋಚಕವೂ ಆದ ಶರತ್ಕಾಲದ ಕರ್ಮವೆಲ್ಲವನ್ನೂ ಹೇಳಿದ್ದೇನೆ. ಇದು ಎಚ್ಚರಗೊಳಿಸುವ ಕರ್ಮ.

ಅನ್ಯಚ್ಚ ತೇ ಪ್ರವಕ್ಷ್ಯಾಮಿ ಶೈಶಿರಂ ಕರ್ಮ ಶೋಭನಂ ।
ಯಾನಿ ಕರ್ಮಾಣಿ ಕುರ್ವಂತೋ ನರಾ ಯಾಂತಿ ಪರಾಂ ಗತಿಂ ॥ ೧೫ ॥

ಶೀತವಾತಾಭಿಸಂತಪ್ತಾ ಮಮ ಭಕ್ತ್ಯಾ ವ್ಯವಸ್ಥಿತಾಃ ।
ಅನನ್ಯಮನಸೋ ಭೂತ್ವಾ ಯೋಗಾಯ ಕೃತನಿಶ್ಚಯಾಃ ॥ ೧೬ ॥

ಶಿಶಿರೇ ಯಾನಿ ಕರ್ಮಾಣಿ ಪುಷ್ಪಿತಾಶ್ಚ ವನಸ್ಪತೀಃ ।
ತೈರೇವ ಚಾರ್ಚನಂ ಕೃತ್ವಾ ಜಾನುಭ್ಯಾಂ ಪತಿತಃ ಕ್ಷಿತೌ ॥ ೧೭ ॥

ಕರಾಭ್ಯಾಮಂಜಲಿಂ ಕೃತ್ವಾ ಇಮಂ ಮಂತ್ರಮುದೀರಯೇತ್ ॥ ೧೮ ॥

ಮಂತ್ರಃ

ಶಿಶಿರೋ ಭವಾನ್ ಧಾತರಿಮಂಲೋಕನಾಥ ಹಿಮಂ ದುಸ್ತರಂ ದುಷ್ಪ್ರವೇಶಂ
ಕಾಲಂ ಸಂಸಾರಾನ್ಮಾಂ ತಾರಯೇಮಂ ಧರ್ತಾ ತ್ರಿಲೋಕನಾಥ ॥ ೧೯ ॥

ಯಸ್ತ್ವೆಥೈತೇನ ಮಂತ್ರೇಣ ಶಿಶಿರೇ ಕರ್ಮ ಕಾರಯೇತ್ ।
ಸ ಗಚ್ಛೇತ್ಪರಮಾಂ ಸಿದ್ಧಿಂ ಮಮ ಭಕ್ತ್ಯಾ ವ್ಯವಸ್ಥಿತಃ ॥ ೨೦ ॥

---

೧೫. ಪುರುಷರು ಯಾವ ಕರ್ಮಗಳನ್ನು ಮಾಡಿ ಪರಮಗತಿಯನ್ನೈದುವರೋ ಆ ಶಿಶಿರ (ಶೀತ) ಕಾಲದಲ್ಲಿ ಮಾಡಬೇಕಾದ ಬೇರೆಯ ಮಂಗಳಕರ್ಮವನ್ನೂ ಹೇಳುವೆನು.

೧೬–೧೯. ನನ್ನ ಭಕ್ತಿಯಲ್ಲಿ ನಿರತರೂ, ಅನನ್ಯಮನಸ್ಕರಾಗಿ ಯೋಗದಲ್ಲಿ ದೃಢಮನಸ್ಸು ಮಾಡಿದವರೂ ಶಿಶಿರ (ಶೀತ) ಕಾಲದಲ್ಲಿ ಶೀತವಾದ ಗಾಳಿಯಿಂದ ತೊಂದರೆಪಡುತ್ತಿರುವವರೂ ಆದ ವ್ರತಿಗಳು ಆ ಕಾಲದಲ್ಲಿ ಗಿಡಬಳ್ಳಿಗಳಲ್ಲಿ ದೊರೆಯುವ ಕರ್ಮಾರ್ಹವಾದ ಹೂಗಳಿಂದಲೇ ನನ್ನನ್ನು ಪೂಜಿಸಿ, ನೆಲದಲ್ಲಿ ಮೊಳಕಾಲೂರಿ, ನಮಸ್ಕರಿಸಿ, ಕೈಮುಗಿದುಕೊಂಡು, " ಧಾತೃವೇ, ಲೋಕನಾಥ, ತ್ರಿಲೋಕನಾಥ, ಶಿಶಿರಋತುರೂಪನಾದ ನೀನು ಈ ಹೂಗಳನ್ನು ಧರಿಸಿ, ದುಸ್ತರವೂ ದುಷ್ಪ್ರವೇಶ್ಯವೂ ಆದ ಈ ಹಿಮಗಾಲದಿಂದಲೂ ಸಂಸಾರದಿಂದಲೂ ನನ್ನನ್ನು ಉತ್ತಾರಣಗೊಳಿಸು. " ಎಂಬರ್ಥವುಳ್ಳ " ಶಿಶಿರೋಭವಾನ್........ ಲೋಕನಾಥ " ಎಂಬ ಮೇಲಿನ (೧೯ ನೆಯ) ಮಂತ್ರವನ್ನು ಹೇಳಬೇಕು.

೨೦. ಈ ಮಂತ್ರದಿಂದ ಶಿಶಿರದಲ್ಲಿ ಕರ್ಮಮಾಡುವ ನನ್ನ ನಿಶ್ಚಲಭಕ್ತನು ಪರಮಸಿದ್ಧಿಯನ್ನು ಪಡೆಯುವನು.

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ |
ಮಾಸಂ ಮಾರ್ಗಶಿರಂ ಚೈವ ವೈಶಾಖಂ ಚ ಮಮ ಪ್ರಿಯಂ
ಅಹಂ ತತ್ರ ಪ್ರವಕ್ಷ್ಯಾಮಿ ಪುಷ್ಪಾದೀನಾಂ ಚ ಯತ್ಫಲಂ || ೨೧ ||

ನವವರ್ಷಸಹಸ್ರಾಣಿ ನವವರ್ಷಶತಾನಿ ಚ |
ತಿಷ್ಠತೇ ವಿಷ್ಣುಲೋಕೇಸ್ಮಿನ್ಯೋ ದದಾತಿ ಸ್ಮ ನಿಶ್ಚಲಂ || ೨೨ ||

ಏಕೈಕಂ ಗಂಧಪತ್ರಂ ಚ ದಾನಮೇತನ್ಮಹತ್ಫಲಂ |
ಮತಿಮಾನ್ಧೃತಿಮಾನ್ ಭೂತ್ವಾ ಗಂಧಪುಷ್ಪಾಣಿ ದಾಪಯೇತ್ || ೨೩ ||

ಪುನರನ್ಯತ್ಪ್ರವಕ್ಷ್ಯಾಮಿ ಗಂಧಪತ್ರಸ್ಯ ಯತ್ಫಲಂ || ೨೪ ||

ದ್ವಾದಶ್ಯಾಂ ಚೈವ ಯೋ ದದ್ಯಾತ್ ತ್ರೀನ್ಮಾಸಾಂಶ್ಚ ಸಮಾಹಿತಃ |
ಕೌಮುದಸ್ಯ ತು ಮಾಸಸ್ಯ ಮಾರ್ಗಶೀರ್ಷಸ್ಯ ವೈ ತಥಾ || ೨೫ ||

---

೨೧. ವಸುಂಧರೇ, ಬೇರೊಂದು ವಿಚಾರವನ್ನೂ ಹೇಳುತ್ತೇನೆ. ಕೇಳು. ಮಾರ್ಗಶಿರಮಾಸವೂ, ವೈಶಾಖಮಾಸವೂ ನನಗೆ ಇಷ್ಟವಾದುವು. ಆ ತಿಂಗಳು ಗಳಲ್ಲಿ ಪುಷ್ಪಾದಿಗಳಿಂದ ಅರ್ಚಿಸುವುದರಿಂದ ಆಗುವ ಫಲವನ್ನು ಹೇಳುತ್ತೇನೆ.

೨೨–೨೪. ಬುದ್ಧಿವಂತನೂ, ಧೈರ್ಯವಂತನೂ ಆಗಿ ಗಂಧಪುಷ್ಪಗಳನ್ನ ರ್ಪಿಸಬೇಕು. ನಿಶ್ಚಲನಾಗಿ ಅರ್ಪಿಸುವವನು ಒಂಬತ್ತುಸಾವಿರದ ಒಂಬೈನೂರು ವರ್ಷಕಾಲ ವಿಷ್ಣುಲೋಕದಲ್ಲಿರುವನು. ಒಂದೊಂದು ಸುಗಂಧಪತ್ರ (ದಳ) ವನ್ನು ಅರ್ಪಿಸುವುದರಿಂದ ಈ ಮಹಾಫಲವಾಗುವುದು. ಸುಗಂಧಪತ್ರದ ಬೇರೆಯ ಫಲವನ್ನೂ ಹೇಳುತ್ತೇನೆ.

೨೫–೨೭. ಕಾರ್ತಿಕ, ಮಾರ್ಗಶಿರ, ವೈಶಾಖ ಈ ಮೂರು ತಿಂಗಳೂ ದ್ವಾದಶಿಯಲ್ಲಿ ಶಾಂತನೂ ಏಕಚಿತ್ತನೂ ಆಗಿ ಆಯಾ ತಿಂಗಳ ಒಳ್ಳೆಯ ಹೂಗಳ

ವೈಶಾಖಸ್ಯ ತು ಮಾಸಸ್ಯ ವನಮಾಲಾಂ ಸುಪುಷ್ಪಿತಾಂ ।
ಏಕಚಿತ್ತಂ ಸಮಾಧಾಯ ಗಂಧಪುಷ್ಪಾಣಿ ಯೋ ನ್ಯಸೇತ್ ॥ ೨೬ ॥

ವರ್ಷಾಣಿ ದ್ವಾದಶೈವೇಹ ತೇನ ಪೂಜಾ ಕೃತಾ ಭವೇತ್ ॥ ೨೭ ॥

ಶಾಲಪುಷ್ಪೇಣ ಮಿಶ್ರೇಣ ಕೌಮುದ್ಯಾಂ ಗಂಧಕೇನ ಚ ।
ಮಾಸಿ ಮಾರ್ಗಶಿರೇ ಭದ್ರೇ ದದ್ಯಾದುತ್ಪಲಮಿಶ್ರಿತಂ ।
ಏವಂ ಮಹತ್ಫಲಂ ಭದ್ರೇ ಗಂಧಪತ್ರಸ್ಯ ಚ ಸ್ಮೃತಂ ॥ ೨೮ ॥

ಶ್ರುತ್ವೇತಿ ವಚನಂ ತಸ್ಯ ಪ್ರಶ್ರಯೇಣ ತು ಮಾಧವಿ ।
ಪ್ರಹಸ್ಯ ಪ್ರಣಯಾದ್ವಾಕ್ಯಮಿತ್ಯುವಾಚ ವಸುಂಧರಾ ॥ ೨೯ ॥

ಪ್ರಭೋ ದ್ವಾದಶಮಾಸಾಶ್ಚ ಷಷ್ಟ್ಯುತ್ತರ ಶತತ್ರಯಂ ।
ತತ್ರ ದ್ವಾವೇವ ಕಿಂ ಮಹ್ಯಂ ಭಗವನ್ಕಿಂ ಪ್ರಶಂಸಸಿ
ದ್ವಾದಶೀಂ ಚಾಪಿ ದೇವೇಶ ಪ್ರಶಂಸಸಿ ಸದಾ ಮಮ ॥ ೩೦ ॥

ಮಾಲೆಯನ್ನೂ, ಸುಗಂಧಪುಷ್ಪಗಳನ್ನೂ ನನಗೆ ಅರ್ಪಿಸಿದರೆ ಆ ಭಕ್ತನು ಹನ್ನೆರಡು ವರ್ಷಕಾಲ ಪೂಜೆಮಾಡಿದಂತಾಗುವುದು.

೨೮. ಭದ್ರೇ, ಕಾರ್ತಿಕಮಾಸದಲ್ಲಿ ಸುಗಂಧಶಾಲಪುಷ್ಪದಿಂದಲೂ ಮಾರ್ಗಶಿರಮಾಸದಲ್ಲಿ ನೈದಿಲೆಹೂಗಳಿಂದಲೂ ಮಿಶ್ರಿತವಾದ ಹೂ ಪತ್ರಮಾಲೆಗಳನ್ನು ಅರ್ಪಿಸಬೇಕು. ಹೀಗೆ ಮಾಡುವುದರಿಂದ ಗಂಧಪತ್ರಗಳ ಫಲವು ಹೆಚ್ಚಾಗುವುದು.

೨೯–೩೦. ಭೂದೇವಿಯು ಶ್ರೀವರಾಹನ ಈ ಮಾತನ್ನು ಕೇಳಿ, ನಕ್ಕು ಪ್ರೀತಿಯಿಂದ “ ಪ್ರಭುವೇ, ಭಗವಂತ, ವರ್ಷದಲ್ಲಿ ಹನ್ನೆರಡು ತಿಂಗಳುಗಳೂ, ಮುನ್ನೂರರವತ್ತುದಿನಗಳೂ ಇವೆ. ಅವುಗಳಲ್ಲಿ ಎರಡುತಿಂಗಳುಗಳನ್ನು ಮಾತ್ರವೇ ನನ್ನಲ್ಲೇಕೆ ಹೊಗಳುತ್ತೀಯೆ ? ಅಲ್ಲದೆ ದ್ವಾದಶಿಯನ್ನೂ ಯಾವಾಗಲೂ ನನ್ನಲ್ಲಿ ಏಕೆ ಶ್ಲಾಘಿಸುತ್ತೀಯೆ ? ” ಎಂದಳು.

ಇತಿ ಪೃಷ್ಟಸ್ತದಾ ದೇವ್ಯಾ ಧರಣ್ಯಾ ಸ ತು ಮಾಧವಃ ।
ಪ್ರಹಸ್ಯ ತಾಮುವಾಚೇದಂ ವಚನಂ ಧರ್ಮಸಂಶ್ರಿತಂ ॥ ೩೧ ॥

ಶೃಣು ತತ್ವೇನ ಮೇ ದೇವಿ ಯೇನೇಮೌ ಮಮ ಚ ಪ್ರಿಯೌ ।
ತಿಥೀನಾಂ ದ್ವಾದಶೀ ಚಾಪಿ ಸರ್ವಯಜ್ಞಫಲಾಧಿಕಾ ॥ ೩೨ ॥

ತ್ವಯಾ ದ್ವಿಜಸಹಸ್ರೇಭ್ಯೋ ಯತ್ಫಲಂ ಪ್ರಾಪ್ನುಯಾನ್ನರಃ ।
ತದೇಕಂ ಸಂಪ್ರದಾಯ್ಯೈವ ದ್ವಾದಶ್ಯಾಮಭಿವಿಂದತಿ ॥ ೩೩ ॥

ಕೌಮುದ್ಯಾಂ ಚ ಪ್ರಬುದ್ಧೋಽಸ್ಮಿ ವೈಶಾಖ್ಯಾಂ ಚ ಸಮುದ್ಧೃತಃ ।
ಮಹಾನಾಧಿಹರೋ ಯೋಗಸ್ತೇಽನ್ಯೈತತ್ಪ್ರಭವೋ ಧರೇ ॥ ೩೪ ॥

---

೩೧. ಭೂದೇವಿಯು ಆಗ ಹೀಗೆ ಕೇಳಲು ಆ ಮಾಧವನು ನಕ್ಕು, ಧರ್ಮ ಯುತವಾದ ಈ ಮುಂದಿನ ಮಾತನಾಡಿದನು.

೩೨. "ದೇವಿ, ಈ ಎರಡು ತಿಂಗಳುಗಳೂ, ತಿಥಿಗಳಲ್ಲಿ ಸರ್ವಯಜ್ಞಫಲಾಧಿಕವಾದ ದ್ವಾದಶಿಯೂ ಏಕೆ ನನಗೆ ಪ್ರಿಯವಾದುವೆಂಬುದನ್ನು ನಿಜವಾಗಿ ಕೇಳು.

೩೩. ಸಾವಿರಜನ ಬ್ರಾಹ್ಮಣರಿಗೆ ಭೂದಾನ ಮಾಡುವುದರಿಂದ ಮನುಷ್ಯನು ಯಾವ ಫಲವನ್ನು ಪಡೆಯುವನೋ ಅದೇ ಫಲವನ್ನು ದ್ವಾದಶಿಯಲ್ಲಿ ನನಗೆ ಸುಗಂಧವುಳ್ಳ ಪುಷ್ಪ (ಪತ್ರ) ವೊಂದನ್ನು ಅರ್ಪಿಸಿ ಪಡೆಯುವನು.

೩೪. ಧರೇ, ಕಾರ್ತಿಕಮಾಸದಲ್ಲಿ ನಾನು ಶೇಷಶಯ್ಯೆಯಿಂದೇಳುವೆನು. ವೈಶಾಖಮಾಸದಲ್ಲಿ ಬಹಳ ಉತ್ಸಾಹಸಂತೋಷಗಳುಳ್ಳವನಾಗಿರುವೆನು. ಆದುದರಿಂದ ಈ ತಿಂಗಳುಗಳಲ್ಲಾಗುವ ಪೂಜಾದಿಯೋಗವು, ಮಾಡುವ ಮನುಷ್ಯರ ಮನೋವ್ಯಾಧಿಬಂಧನಗಳನ್ನು ಪರಿಹರಿಸುವುದರಲ್ಲಿ ಉತ್ತಮವಾದುದು.

ಅತಃ ಕೌಮುದಿಕಾಯಾಂ ತು ವೈಶಾಖ್ಯಾಂ ಯತಮಾನಸಃ ।
ಗಂಧಪತ್ರಂ ಕರೇ ಗೃಹ್ಯ ಇಮಂ ಮಂತ್ರಮುದೀರಯೇತ್ ॥ ೩೫ ॥

ಮಂತ್ರಃ—ಭಗವನ್ನಾಜ್ಞಾಪಯ

ಇಮಂ ಬಹುತರಂ ನಿತ್ಯಂ ವೈಶಾಖಂ ಚೈವ ಕಾರ್ತಿಕಂ ।
ಗೃಹಾಣ ಗಂಧಪತ್ರಾಣಿ ಧರ್ಮಮೇವಂ ಪ್ರವರ್ಧಯ ॥ ೩೬ ॥

ನಮೋ ನಾರಾಯಣೇತ್ಯುಕ್ತ್ವಾ ಗಂಧಪತ್ರಂ ಪ್ರದಾಪಯೇತ್ ॥ ೩೭ ॥

ಪುಷ್ಪಾಣಾಂ ಚ ಪ್ರವಕ್ಷ್ಯಾಮಿ ಯೋ ಗುಣೋ ಯಚ್ಚ ವೈ ಫಲಂ ।
ದತ್ವಾ ವೈ ಗಂಧಪತ್ರಾಣಿ ಪುಷ್ಪಹಸ್ತಃ ಶುಚಿರ್ನರಃ ।
ಓಂ ನಮೋ ವಾಸುದೇವಾಯೇತ್ಯುಕ್ತ್ವಾ ಮಂತ್ರಮುದೀರಯೇತ್ ॥೩೮॥

ಸುಮನಾಂಸೀಮಾನಿ ಅರ್ಚಯಿತುಂ ಮಾಂ ಸುಮನಸಂ ಕುರು
ಗೃಹ್ಣೀಷ್ವ ಸುಮನಸ್ಕಂ ದೇವ ಸುಗಂಧೇನ ತೇ ನಮಃ ॥ ೩೯ ॥

೩೫-೩೭. ಆದುದರಿಂದ ಕಾರ್ತಿಕ ವೈಶಾಖಮಾಸಗಳ (ದ್ವಾದಶಿಯ) ಲ್ಲಿ ಪ್ರತಿಯು ಸ್ಥಿರಮನಸ್ಸುಳ್ಳವನಾಗಿ ಸುಗಂಧಪತ್ರದಳವನ್ನು ಕೈಗೆ ತೆಗೆದುಕೊಂಡು "ಭಗವಂತನೇ, ನನಗೆ ಅನುಜ್ಞೆಯನ್ನು ಕೊಡು. ವೈಶಾಖಮಾಸದಲ್ಲೂ ಕಾರ್ತಿಕಮಾಸದಲ್ಲೂ ಅಧಿಕವಾಗಿರುವ ಈ ಸುಗಂಧ ಪತ್ರಗಳನ್ನು ಪರಿಗ್ರಹಿಸು. ನನ್ನ ಧರ್ಮವನ್ನು ಬೆಳೆಸು. ಓಂ ನಾರಾಯಣನಿಗೆ ನಮಸ್ಕಾರ" ಎಂಬ ಅರ್ಥವುಳ್ಳ "ಭಗವನ್ನಾಜ್ಞಾಪಯ....... ಓಂ ನಮೋ ನಾರಾಯಣಾಯ" ಎಂಬರ್ಥದ ಮೇಲಿನ (೩೬-೩೭ನೆಯ) ಮಂತ್ರವನ್ನು ಹೇಳಿ ನನಗೆ ಅರ್ಪಿಸಬೇಕು.

೩೮-೩೯. ಹೂಗಳ (ಅರ್ಪಣ) ಗುಣವನ್ನೂ, ಫಲವನ್ನೂ ಹೇಳುತ್ತೇನೆ. ಶುಚಿಯಾದ ಮನುಷ್ಯನು ಸುಗಂಧದ ಪತ್ರಗಳನ್ನು ಅರ್ಪಿಸಿದ ಬಳಿಕ ಹೂಗಳನ್ನು ಕೈಗಳಲ್ಲಿರಿಸಿಕೊಂಡು 'ಓಂ ನಮೋ ವಾಸುದೇವಾಯ (ಓಂ ವಾಸುದೇವನಿಗೆ ನಮಸ್ಕಾರ)' ಎಂದು ಹೇಳಿ, 'ಭಗವಂತಾ, ಈ ಹೂಗಳನ್ನು ನಿನಗೆ ಅರ್ಪಿಸುವುದಕ್ಕೆ ನನಗೆ ಅನುಜ್ಞೆಯನ್ನು ದಯಪಾಲಿಸು. ಸುಗಂಧದಿಂದ ಕೂಡಿದ ಇವುಗಳನ್ನು ಸ್ವೀಕರಿಸು. ಮತ್ತು ಒಳ್ಳೆಯ ಹೂಗಳನ್ನು ಅರ್ಪಿಸುವ ನನ್ನನ್ನು ಒಳ್ಳೆಯ ಮನಸ್ಸುಳ್ಳವನನ್ನಾಗಿಯೂ ದೇವನನ್ನಾಗಿಯೂ ಮಾಡು. ನಿನಗೆ ನಮಸ್ಕಾರ.' ಎಂಬರ್ಥದ ೩೯ ನೆಯ ಮೇಲಿನ ಮಂತ್ರವನ್ನು ಹೇಳಿ, ನನಗೆ ಅರ್ಪಿಸಬೇಕು.

ದಿವ್ಯಂ ವರ್ಷಸಹಸ್ರಂ ವೈ ಮಮ ಲೋಕೇಷು ತಿಷ್ಠತಿ ॥ ೪೦ ॥

ಪ್ರಾಪ್ನೋತಿ ದದಮಾನಸ್ತು ಮಮ ಕರ್ಮಪರಾಯಣಃ ।
ನ ಜನ್ಮಮರಣಂ ಚೈವ ನ ಗ್ಲಾನಿಂ ನಚ ವೈ ಕ್ಷುಧಾಂ ॥ ೪೧ ॥

ಏಕೈಕಸ್ಯ ತು ಪುಷ್ಪಸ್ಯ ಪುಣ್ಯಮೇತನ್ಮಹಾಫಲಂ ।
ಸುಮನೋಗಂಧಸಂಭೂತಂ ಯತ್ತ್ವಯಾ ಪೂರ್ವಪೃಚ್ಛಿತಂ ॥ ೪೨ ॥

ಇತಿ ಶ್ರೀವರಾಹಪುರಾಣೇ ಸುಮನೋಗಂಧಾದಿಮಾಹಾತ್ಮ್ಯಂ
ನಾಮ ತ್ರಯೋವಿಂಶತ್ಯಧಿಕ ಶತತಮೋಧ್ಯಾಯಃ

೪೦-೪೧. ಹೀಗೆ ಅರ್ಪಿಸುವ ನನ್ನ ಪೂಜಾಸಕ್ತನು ಮತ್ತೆ ಜನನ ಮರಣಗಳನ್ನಾಗಲಿ, ಹಸಿವು ಬಳಲಿಕೆಗಳನ್ನಾಗಲಿ ಪಡೆಯುವುದಿಲ್ಲ ದಿವ್ಯಸಹಸ್ರವರ್ಷ ಕಾಲ ನನ್ನ ಲೋಕದಲ್ಲಿ ನೆಲಸುವನು.

೪೨. ದೇವಿ, ಇದು, ನೀನು ಹಿಂದೆ ಕೇಳಿದ ಒಂದೊಂದು ಹೂವಿನ ಸುಗಂಧದಿಂದುಂಟಾಗುವ ಪುಣ್ಯಮಹಾಫಲ.

ಅಧ್ಯಾಯದ ಸಾರಾಂಶ :—

'ನಿನ್ನ ಸಂದರ್ಶನವು ಹೇಗೆ ಲಭಿಸುವುದು ?' ಎಂದು ಕೇಳಿದ ಭೂದೇವಿಗೆ ಶ್ರೀವರಾಹನು, ಉತ್ಥಾನದ್ವಾದಶಿಯ ವ್ರತ, ದ್ವಾದಶಿಯ ಮಹಿಮೆ, ಶಿಶಿರ ಕಾಲದ ಕರ್ಮ, ವಿಷ್ಣುವಿಗೆ ಸುಗಂಧಪತ್ರಪುಷ್ಪಗಳನ್ನು ಅರ್ಪಿಸುವುದರ ಪುಣ್ಯಫಲ ಇವುಗಳನ್ನು ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರಇಪ್ಪತ್ತಮೂರನೆಯ ಅಧ್ಯಾಯ.

|| ಶ್ರೀಃ ||

–x–

ಚತುರ್ವಿಂಶತ್ಯಧಿಕಶತತಮೋಽಧ್ಯಾಯಃ

ಅಥ ಋತೂಪಸ್ಕರಂ

|| ಶ್ರೀ ವರಾಹ ಉವಾಚ ||

***ವೈಶಾಖಸ್ಯ ತು ಮಾಸಸ್ಯ ಶುಕ್ಲಪಕ್ಷಸ್ಯ ದ್ವಾದಶೀಂ |**
ಗೃಹ್ಯವಾಸಂತಿಕಾಪುಷ್ಪಾನ್ಸುಗಂಧಾ ಯೇ ಕ್ರಮಾಗತಾಃ || ೧ ||

ಶ್ವೇತಂ ಪಾಂಡುರಕಂ ಚೈವ ಸುಗಂಧಂ ಶೋಭನಂ ಬಹು |
ವಿಧಿನಾ ಮಂತ್ರಯುಕ್ತೇನ ಸುಪ್ರೀತೇನಾಂತರಾತ್ಮನಾ || ೨ ||

ತತ ಏವಂ ವಿಧಿಂ ಕೃತ್ವಾ ಸರ್ವಂ ಭಾಗವತಂ ಶುಚಿಃ |
ಯಸ್ತು ಜಾನಾತಿ ಕರ್ಮಾಣಿ ವಿಧಿದೃಷ್ಟೇನ ಕರ್ಮಣಾ || ೩ ||

ನೂರ ಇಪ್ಪತ್ತನಾಲ್ಕನೆಯ ಅಧ್ಯಾಯ

ಋತುಪೂಜಾಸಂಭಾರ.

೧–೬. ಶ್ರೀವರಾಹ—ವೈಶಾಖಮಾಸದ ಶುಕ್ಲಪಕ್ಷದ ದ್ವಾದಶಿಯದಿನ ಆ ಕಾಲದಲ್ಲಿ ಸುವಾಸನೆಯುಳ್ಳುದಾಗಿಯೂ, ಮನೋಹರವಾಗಿಯೂ ಇರುವ, ಬಿಳಿಯ ಮತ್ತು ಹಸುರುಬಿಳುಪುಳ್ಳ ಇರುವಂತಿಗೆ ಹೂವುಗಳನು ಮಂತ್ರೋಕ್ತವಿಧಿಯಿಂದ ಸಂಪಾದಿಸಿ, ಎಲ್ಲವನ್ನೂ ಮಂತ್ರಗಳಿಂದ ಸಿರ್ಣಯಿಸಿ ಕರ್ಮಗಳನ್ನರಿತವನು ಶುಚಿಯಾಗಿ ಪ್ರೀತಿಯುತವಾದ ನಿರ್ಮಲಮನದಿಂದ

---

* ಫಾಲ್ಗುನಸ್ಯ

ವಿಧಿನಾ ಮಂತ್ರಪೂತೇನ ಕುರ್ಯಾಚ್ಛಾಂತಮನೋಮಲಃ ।
ನಮೋ ನಾರಾಯಣಾಯೇತ್ಯುಕ್ತ್ವಾ ಇಮಂ ಮಂತ್ರಮುದೀರಯೇತ್ ॥ ೪ ॥

ಮಂತ್ರಃ

ಓಂ ನಮೋಽಸ್ತು ದೇವದೇವೇಶ ಶಂಖಚಕ್ರಗದಾಧರ ।
ನಮೋಽಸ್ತು ತೇ ಲೋಕನಾಥ ಸ್ರವೀರಾಯ ನಮೋಽಸ್ತುತೇ ॥ ೫ ॥

ಸಂಪುಷ್ಪಿತಸ್ಯೇಹ ವಸಂತಕಾಲೇ ।
ವನಸ್ಪತೇರ್ಗಂಧರಸಪ್ರಯುಕ್ತಾಃ ॥
ಪಶ್ಯಂಶ್ಚ ಮಾಂ ಪುಷ್ಪಿತಪಾದಪೇಂದ್ರಂ ।
ವಸಂತಕಾಲೇ ಸಮುಪಾಗತೇ ಚ ॥ ೬ ॥

ಯಶ್ಚೈತೇನ ವಿಧಾನೇನ ಕುರ್ಯಾನ್ಮಾಸೇ ತು ಮಾಧವೇ* ।
ನ ಸ ಗಚ್ಛತಿ ಸಂಸಾರಂ ಮಮ ಲೋಕಾಯ ಗಚ್ಛತಿ ॥ ೭ ॥

ಭಗವಂತನ ಪೂಜಾಕರ್ಮವನ್ನೆಲ್ಲಾ ವಿಧ್ಯುಕ್ತವಾದ ರೀತಿಯಲ್ಲಿ ಮಾಡಿ 'ನಮೋ ನಾರಾಯಣಾಯ (ನಾರಾಯಣನಿಗೆ ನಮಸ್ಕಾರ)' ಎಂದು ಹೇಳಿ, ಓಂ ದೇವ ದೇವೇಶ, ಶಂಖ ಚಕ್ರ ಗದಾಧರಾ, ನಿನಗೆ ನಮಸ್ಕಾರ. ಲೋಕನಾಥ, ಅತಿ ವೀರನಾದ ನಿನಗೆ ನಮಸ್ಕಾರ. ಎಂಬ ಅರ್ಥವುಳ್ಳ "ಓಂ ನಮೋಽಸ್ತು........ನಮೋಸ್ತುತೇ" ಎಂಬ ಮೇಲಿನ (೫ ನೆಯ) ಮಂತ್ರವನ್ನು ಹೇಳಿ, ವಸಂತಕಾಲದಲ್ಲಿ ಚೆನ್ನಾಗಿ ಹೂ ಬಿಟ್ಟಿರುವ ವನಸ್ಪತಿಗಳ ಗಂಧರಸದಿಂದ ಪ್ರೇರಿತರಾದ ಭಕ್ತರು, ವಸಂತಕಾಲ ಬರಲಾಗಿ ಹೂ ಬಿಟ್ಟ ವೃಕ್ಷರಾಜನಾಗಿರುವ ನನ್ನನ್ನು ಸಂದರ್ಶಿಸಬೇಕು.

೭. ಈ ವಿಧಿಯಿಂದ ವೈಶಾಖಮಾಸದಲ್ಲಿ ನನ್ನನ್ನು ಪೂಜಿಸುವವನು ಮತ್ತೆ ಸಂಸಾರವನ್ನು ಪಡೆಯದೆ ನನ್ನ ಲೋಕವನ್ನು ಸೇರುವನು.

---

* ಫಾಲ್ಗುನೇ

ಯತ್ತ್ವಂ ಪೃಚ್ಛಸಿ ಸುಶ್ರೋಣಿ ಮಾಸೇ ವೈಶಾಖ ಉತ್ತಮೇ ।
ಶುಕ್ಲಪಕ್ಷೇ ತು ದ್ವಾದಶ್ಯಾಂ ಯತ್ಫಲಂ ತಚ್ಛೃಣುಷ್ವ ಮೇ ॥ ೮ ॥

ಪುಷ್ಪಿತೇಷು ಚ ಶಾಲೇಷು ತಥಾನ್ಯೇಷು ದ್ರುಮೇಷು ಚ ।
ಗೃಹೀತ್ವಾ ಶಾಲಪುಷ್ಪಾಣಿ ಮಮ ಕರ್ಮಣಿ ಸಂಸ್ಥಿತಾಃ ॥ ೯ ॥

ಕೃತ್ವಾ ತು ಮಮ ಕರ್ಮಾಣಿ ಶುಭಾನಿ ತರುಣಾನಿ ಚ ।
ಪೂಜ್ಯ* ಭಾಗವತಾನ್ಸರ್ವಾನ್ ಸ್ಥಾಪಯಿತ್ವಾ ತತೋಽಗ್ರತಃ ।
ಋಷಯಃ ಸ್ತುವಂತಿ ಮಂತ್ರೇಣ ವೇದೋಕ್ತೇನ ತು +ಮಾಧವಂ ॥ ೧೦ ॥

ಗಂಧರ್ವಾಪ್ಸರಸಶ್ಚೈವ ಗೀತನೃತ್ಯೈಃ ಸವಾದಿತ್ರೈಃ ।
ಸ್ತುವಂತಿ ದೇವಲೋಕಾಶ್ಚ ಪುರಾಣಂ ಪುರುಷೋತ್ತಮಂ ॥ ೧೧ ॥

ಸಿದ್ಧವಿದ್ಯಾಧರಾ ಯಕ್ಷಾಃ ಪಿಶಾಚೋರಗರಾಕ್ಷಸಾಃ ॥ ೧೨ ॥

---

೮. ಸುಂದರಿ, ಉತ್ತಮವಾದ ವೈಶಾಖಮಾಸದಲ್ಲಿ ಶುಕ್ಲಪಕ್ಷದ್ವಾದಶಿಯ ಫಲವೇನೆಂದು ಪ್ರಶ್ನಿಸಿದೆಯಷ್ಟೆ. ಅದನ್ನು ಹೇಳುತ್ತೇನೆ. ಕೇಳು.

೯–೧೦. ಶಾಲವೃಕ್ಷಗಳೂ, ಬೇರೆಯ ಮರಗಳೂ ಹೂಗಳುಳ್ಳವಾಗಿರುವಾಗ ನನ್ನ ಕರ್ಮಗಳಲ್ಲಾಸಕ್ತರಾದವರು ಶಾಲಪುಷ್ಪಗಳನ್ನು ತಂದು, ನನ್ನ ಶುಭಕರ್ಮಗಳನ್ನು ಚೆನ್ನಾಗಿ ಮಾಡಿ, ಆ ಹೊಸ ಹೂಗಳಿಂದ ಅರ್ಚಿಸಿ ಭಗವದ್ಭಕ್ತರೆಲ್ಲರನ್ನೂ ಮುಂದೆ ನಿಲ್ಲಿಸಿ, ಮಾಧವನನ್ನು ಋಷಿಗಳು ವೇದೋಕ್ತ ಮಂತ್ರಗಳಿಂದ ಸ್ತುತಿಸುವರು.

೧೧–೧೨. ಗಂಧರ್ವರೂ, ಅಪ್ಸರಸರೂ, ವಾದ್ಯದೊಡಗೂಡಿದ ಗೀತನೃತ್ಯಗಳಿಂದ ಸ್ತುತಿಸುವರು ದೇವಲೋಕವೂ, ಸಿದ್ಧವಿದ್ಯಾಧರಯಕ್ಷಪಿಶಾಚೋರಗರಾಕ್ಷಸರೂ ಪುರಾಣಪುರುಷೋತ್ತಮನನ್ನು ಸ್ತುತಿಸುವರು.

---

* ಇಲ್ಲಿಯವರೆಗಿರುವ ವಿಚಾರಕ್ಕೂ ಮುಂದಿನ ವಿಚಾರಕ್ಕೂ ಸಂಬಂಧವಿರುವಂತೆ ಕಾಣುವುದಿಲ್ಲ. ಅರ್ಚಿಸಬೇಕು. ಎಂದು ಶ್ರೀವರಾಹನು ಭೂದೇವಿಗೆ ಹೇಳುತ್ತಿರುವಾಗ' ಎಂಬರ್ಥವುಳ್ಳ ಭಾಗವು ಲುಪ್ತವಾಗಿರುವಂತಿದೆ.

+ ಮಾಧವಿ.

ಸ್ತುವಂತಿ ದೇವಂ ಭೂತಾನಾಂ ಸರ್ವಲೋಕಸ್ಯ ಚೇಶ್ವರಂ ।
ಆದಿತ್ಯಾ ವಸವೋ ರುದ್ರಾ ಅಶ್ವಿನೌ ಚ ಮರುದ್ಗಣಾಃ ॥ ೧೩ ॥

ಸ್ತುವಂತಿ ದೇವದೇವೇಶಂ ಯುಗಾನಾಂ ಸಂಕ್ಷಯೇಽಕ್ಷಯಂ ।
ತತೋ ವಾಯುಶ್ಚ ವಿಶ್ವೇ ಚ ಅಶ್ವಿನೌ ಚ ಸಮನ್ವಿತಾಃ ॥ ೧೪ ॥

ಸ್ತುವಂತಿ ಕೇಶವಂ ದೇವಮಾದಿಕಾಲಮಯಂ ಪ್ರಭುಂ ।
ತತೋ ಬ್ರಹ್ಮಾ ಚ ಸೋಮಶ್ಚ ಶಕ್ರಶ್ಚಾಗ್ನಿಸಮನ್ವಿತಃ ॥ ೧೫ ॥

ಸ್ತುವಂತಿ ನಾಥಂ ಭೂತಾನಾಂ ಸರ್ವಲೋಕಮಹೇಶ್ವರಂ ।
ನಾರದಃ ಪರ್ವತಶ್ಚೈವ ಅಸಿತೋ ದೇವಲಸ್ತಥಾ ।
ಪುಲಹಶ್ಚ ಪುಲಸ್ತ್ಯಶ್ಚ ಭೃಗುಶ್ಚಾಂಗಿರ ಏವ ಚ ॥ ೧೬ ॥

---

೧೩. ಭೂತಗಳಿಗೂ, ಸರ್ವಲೋಕಕ್ಕೂ ಈಶ್ವರನಾದ ದೇವನನ್ನು ಆದಿತ್ಯರೂ, ವಸುಗಳೂ, ರುದ್ರರೂ, ಅಶ್ವಿನೀದೇವರೂ, ಮರುದ್ಗಣದವರೂ ಸ್ತುತಿಸುವರು.

೧೪. ಬಳಿಕ ವಾಯುವೂ, ವಿಶ್ವೇದೇವತೆಗಳೂ, ಅಶ್ವಿನೀದೇವರೂ ಒಟ್ಟುಗೂಡಿ, ಪ್ರಳಯಕಾಲದಲ್ಲಿಯೂ, ಅಕ್ಷಯನಾದ ದೇವದೇವೇಶನನ್ನು ಸ್ತೋತ್ರ ಮಾಡುತ್ತಾರೆ.

೧೫. ಬಳಿಕ ಬ್ರಹ್ಮನೂ, ರುದ್ರನೂ, ಇಂದ್ರಾಗ್ನಿಗಳೂ ಕೇಶವನನ್ನು ಸ್ತುತಿಸುತ್ತಾರೆ.

೧೬. ಅಲ್ಲದೆ ನಾರದಪರ್ವತರೂ, ಅಸಿತ, ದೇವಲ, ಪುಲಹ, ಪುಲಸ್ತ್ಯ, ಭೃಗು, ಅಂಗಿರಸರೂ ಭೂತನಾಥಾನಾದ ಸರ್ವಲೋಕಮಹೇಶ್ವರನನ್ನು ಸ್ತುತಿಸುತ್ತಾರೆ.

ಏತೇ ಚಾನ್ಯೇ ಚ ಬಹವೋ ಮಿತ್ರಾವಸುಪರಾವಸೂ ।
ಸ್ತುವಂತಿ ನಾಥಂ ಭೂತಾನಾಂ ಯೋಗಿನಾಂ ಯೋಗಮುತ್ತಮಂ ॥ ೧೭ ॥

ಶ್ರುತ್ವಾ ತು ಪ್ರತಿನಿರ್ಘೋಷಂ ದೇವಾನಾಂ ತು ಮಹೌಜಸಾಂ ।
ತತೋ ನಾರಾಯಣೋ ದೇವಃ ಪ್ರತ್ಯುವಾಚ ವಸುಂಧರಾಂ ॥ ೧೮ ॥

ಕಿಮಯಂ ಶ್ರೂಯತೇ ಶಬ್ದೋ ಬ್ರಹ್ಮಘೋಷೇಣ ಸಂಯುತಃ ।
ದೇವಾನಾಂ ಚ ಮಹಾಭಾಗೇ ಮಹಾಶಬ್ದೋಽತ್ರ ಶ್ರೂಯತೇ ॥ ೧೯ ॥

ತತಃ ಕಮಲಪತ್ರಾಕ್ಷೀ ಸರ್ವರೂಪಗುಣಾನ್ವಿತಾ ।
ವರಾಹರೂಪಿಣಂ ದೇವಂ ಪ್ರತ್ಯುವಾಚ ವಸುಂಧರಾ ॥ ೨೦ ॥

ದೇವಾಃ ಕಾಂಕ್ಷಂತಿ ತೇ ದೇವ ವಾರಾಹೀಂ ರೂಪಸಂಸ್ಥಿತಿಂ ।
ತ್ವನ್ನಿಯೋಗನಿಯುಕ್ತಾಶ್ಚ ತದರ್ಥಂ ಲೋಕಭಾವನ ॥ ೨೧ ॥

---

೧೭. ಇವರೂ, ಮಿತ್ರಾವಸುಪರಾವಸುಗಳೇ ಮೊದಲಾದ ಇನ್ನೂ ಹಲವರೂ ಭೂತನಾಥನೂ, ಯೋಗಿಗಳ ಉತ್ತಮಯೋಗವೂ ಆದ ದೇವನನ್ನು ಸ್ತುತಿಸುತ್ತಾರೆ.

೧೮. ಮಹಾತೇಜಸ್ವಿಗಳಾದ ದೇವತೆಗಳ ಮಹಾಶಬ್ದವನ್ನು ಕೇಳಿ, ನಾರಾಯಣದೇವನು ಭೂದೇವಿಯನ್ನು ಕುರಿತು ಮಾತನಾಡಿದನು.

೧೯. "ಮಹಾಭಾಗ್ಯೇ, ಇದೇನು! ಬ್ರಹ್ಮಘೋಷದೊಡನೆ ದೇವತೆಗಳ ಮಹಾಧ್ವನಿಯು ಕೇಳಿಸುತ್ತಿದೆ ?" ಎಂದನು.

೨೦. ಬಳಿಕ ಕಮಲಪತ್ರನೇತ್ರೆಯೂ, ಸರ್ವರೂಪಗುಣಯುತೆಯೂ ಆದ ಭೂದೇವಿಯು ವರಾಹರೂಪಿಯಾದ ದೇವನಿಗೆ ಉತ್ತರವನ್ನು ಹೇಳಿದಳು.

೨೧. "ದೇವ, ಲೋಕರಕ್ಷಕ, ನಿನ್ನ ಆಜ್ಞಾಕಾರ್ಯದಲ್ಲಿ ನಿಯಮಿತರಾದ ದೇವತೆಗಳು ಅದಕ್ಕಾಗಿ ನೀನು ವರಾಹರೂಪದಿಂದಿರುವುದನ್ನು ನೋಡಲು ಬಯಸುತ್ತಾರೆ." ಎಂದಳು

ತತೋ ನಾರಾಯಣೋ ದೇವಃ ಪೃಥಿವೀಂ ಪ್ರತ್ಯುವಾಚ ಹ ।
ಅಹಂ ಜಾನಾಮಿ ತಾನ್ದೇವಿ ಮಾರ್ಗಮಾಣಾನುಪಸ್ಥಿತಾನ್ ॥ ೨೨ ॥

ದಿವ್ಯಂ ವರ್ಷಸಹಸ್ರಂ ವೈ ಧಾರಿತಾಸಿ ವಸುಂಧರೇ ।
ಮಯಾ ಲೀಲಾಯಮಾನೇನ ಏಕದಂಷ್ಟ್ರಾಗ್ರಕೇಣ ವೈ ॥ ೨೩ ॥

ಇಹಾಗಚ್ಛಂತಿ* ಭದ್ರಂ ತೇ ದ್ರಷ್ಟುಕಾಮಾ ದಿವೌಕಸಃ ।
ಆದಿತ್ಯಾ ವಸವೋ ರುದ್ರಾಃ +ಸ್ಕಂದೇಂದ್ರೌ ಸಪಿತಾಮಹಾಃ ॥ ೨೪ ॥

ಏವಂ ತಸ್ಯ ವಚಃ ಶ್ರುತ್ವಾ ಮಾಧವಸ್ಯ ವಸುಂಧರಾ ।
ಶಿರಸ್ಯಂಜಲಿಮಾಧಾಯ ತತಸ್ತು ಚರಣೇಽಪತತ್ ॥ ೨೫ ॥

ವಾರಾಹಂ ಪುರುಷಂ ದೇವಂ ವಿಜ್ಞಾಪಯತಿ ಸಾ ಧರಾ ।
ಉದ್ಧೃತಾಸ್ಮಿ ತ್ವಯಾ ದೇವ ರಸಾತಲಗತಾ ಹ್ಯಹಂ ॥ ೨೬ ॥

---

೨೨. ಬಳಿಕ ನಾರಾಯಣದೇವನು ಭೂದೇವಿಗೆ ಹೇಳಿದನು — "ದೇವಿ, ಅವರು ನನ್ನನ್ನು ಹುಡುಕುತ್ತ ಇಲ್ಲಿಗೆ ಬಂದರೆಂಬುದನ್ನು ನಾನು ಬಲ್ಲೆನು.

೨೩. ವಸುಂಧರೇ, ನಾನು ಆಟವಾಡುವನಂತೆ ನಿನ್ನನ್ನು ಒಂದು ದಾಡೆಯ ತುದಿಯಿಂದ ದಿವ್ಯಸಹಸ್ರವರ್ಷಕಾಲ ಧರಿಸಿದ್ದೇನೆ.

೨೪. ನನ್ನನ್ನು ನೋಡಲು ಆಸೆಯಿಂದ ದೇವತೆಗಳೂ, ಆದಿತ್ಯರೂ, ವಸುಗಳೂ, ರುದ್ರರೂ, ಬ್ರಹ್ಮನೊಡಗೂಡಿದ ಸ್ಕಂದೇಂದ್ರರೂ ಇಲ್ಲಿಗೆ ಬಂದಿರುತ್ತಾರೆ."

೨೫. ಭೂದೇವಿಯು ಮಾಧವನ ಈ ಮಾತನ್ನು ಕೇಳಿ, ತಲೆಯಮೇಲೆ ಕೈಮುಗಿದು ವಂದಿಸಿ ಬಳಿಕ ಅವನ ಕಾಲಿಗೆ ಬಿದ್ದಳು.

೨೬. ಆಮೇಲೆ ಆ ಭೂದೇವಿಯು ವರಾಹರೂಪಿಯಾದ ಆ ದೇವನಿಗೆ ವಿಜ್ಞಾಪಿಸಿದಳು. "ದೇವ, ರಸಾತಲಕ್ಕೆ ಹೋಗಿದ್ದ ನನ್ನನ್ನು ನೀನು ಉದ್ಧರಿಸಿದ್ದೀಯೆ.

---

* ಇಹಾಗಚ್ಛಾಮಿ. + ಸ್ಕಂದ= ಷಣ್ಮುಖ

ಶರಣಂ ತ್ವಾಂ ಪ್ರಪನ್ನಾಹಂ ತ್ವದ್ಭಕ್ತ್ಯಾ ತ್ವಂ ಗತಿಃ ಪ್ರಭುಃ ।
ಕಿಂ ಕರ್ಮ ಕರ್ಮಣಾ ಕೇನ ಕಿಂ ವಾ ಜನ್ಮಪರಾಯಣಂ ॥ ೨೭ ॥

ಕಥಂ ವಾ ತುಷ್ಯಸೇ ದೇವ ಪೂಜ್ಯಸೇ ಕೇನ ಕರ್ಮಣಾ ।
ತವಾಹಂ ಕರ್ತುಮಿಚ್ಛಾಮಿ ಯಚ್ಚ ಮುಖ್ಯಂ ಸುಖಾವಹಂ ॥ ೨೮ ॥

ನ ಚ ಮೇಽಸ್ತಿ ವ್ಯಥಾ ಕಾಚಿತ್ ತವ ಕರ್ಮಣಿ ನಿತ್ಯಶಃ ।
ನ ಗ್ಲಾನಿರ್ನ ಜರಾ ಕಾಚಿನ್ನ ಜನ್ಮಮರಣೇ ತಥಾ ॥ ೨೯ ॥

ಸರ್ವೇ ಸುರಾಸುರಾ ಲೋಕಾಃ ಸರುದ್ರೇಂದ್ರಪಿತಾಮಹಾಃ ।
ಕ್ವೇಷ್ಟಂ ನಿವಾಸಂ ಕುರ್ವಂತಿ ಏಕೈಕಂ ಚ ಯಶೋಧರ ॥ ೩೦ ॥

ಕಾನಿ ಕರ್ಮಾಣಿ ಕುರ್ವಂತಿ ಯೇ ತ್ವಾಂ ಪಶ್ಯಂತಿ ಮಾಧವ ।
ಕಿಮಾಹಾರಾಃ ಕಿಮಾಚಾರಾಸ್ತ್ವಾಂ ಪಶ್ಯಂತೀಹ ಮಾಧವ ॥ ೩೧ ॥

---

೨೭. ನಿನ್ನ ಭಕ್ತಳಾದ ನಾನು ನಿನಗೆ ಶರಣಾಗತಳಾಗಿದ್ದೇನೆ. ನೀನೇ ನನಗೆ ಗತಿ. ನೀನೇ ಪ್ರಭು. ಕರ್ಮವಾವುದು ? ಯಾವ ಕರ್ಮದಿಂದ ಯಾವ ಜನ್ಮಸಂಗವಾಗುವುದು ?

೨೮. ದೇವ, ನೀನು ಹೇಗೆ ಸಂತುಷ್ಟನಾಗುವೆ ? ಯಾವ ಕರ್ಮದಿಂದ ಪೂಜಿತನಾಗುವೆ ? ನಿನಗೆ ಯಾವುದು ಮುಖ್ಯವೋ, ಸುಖಕರವೋ ಅದನ್ನು ಮಾಡಲಿಚ್ಛಿಸುತ್ತೇನೆ.

೨೯. ನಿನ್ನ ಕರ್ಮಗಳಲ್ಲಿ ನನಗೆ ಎಂದಿಗೂ ಯಾವ ವ್ಯಥೆಯೂ, ಬಳಲಿಕೆಯೂ ಇಲ್ಲ. ಮುಪ್ಪಾಗಲಿ .ಜನ್ಮಮರಣಗಳಾಗಲಿ ಇಲ್ಲ.

೩೦. ಯಶೋಧರ, ರುದ್ರೇಂದ್ರಬ್ರಹ್ಮಸಹಿತರಾದ ಸುರಾಸುರಲೋಕದವರೆಲ್ಲರೂ ಎಲ್ಲಿ ಇಷ್ಟವಾದ ಒಂದೊಂದು ನಿವಾಸವನ್ನು .ಮಾಡಿಕೊಳ್ಳುವರು ?

೩೧. ಮಾಧವಾ, ನಿನ್ನನ್ನು ಸಂದರ್ಶಿಸುವವರು ಯಾವ ಕರ್ಮಗಳನ್ನು ಮಾಡುವರು ? ಯಾವ ಆಹಾರವೂ, ಆಚಾರವೂ ಉಳ್ಳವರು ಈ ಲೋಕದಲ್ಲಿ ನಿನ್ನನ್ನು ಸಂದರ್ಶಿಸುವರು ?

ಬ್ರಾಹ್ಮಣಸ್ಯ ಚ ಕಿಂ ಕರ್ಮ ಕ್ಷತ್ರಿಯಸ್ಯ ಚ ಕಿಂ ಭವೇತ್ ।
ವೈಶ್ಯಃ ಕಿಂ ಕುರುತೇ ಕರ್ಮ ಶೂದ್ರಃ ಕಿಂ ಕರ್ಮ ಕಾರಯೇತ್ ॥ ೩೨ ॥

ಯೋಗೋ ವೈ ಪ್ರಾಪ್ಯತೇ ಕೇನ ತಪೋ ವಾ ಕೇನ ನಿಶ್ಚಿತಂ ।
ಕಿಂ ಚಾತ್ರ ಫಲಮಾಪ್ನೋತಿ ತವ ಕರ್ಮಪರಾಯಣಃ ॥ ೩೩ ॥

ಕಿಂ ಚ ದುಃಖನಿವಾಸಂ ವಾ ಭೋಜನಂ ಪಾನಕಂ ತಥಾ ।
ಕಿಂ ಚ ಕರ್ಮ ಪ್ರಯೋಕ್ತವ್ಯಂ ತವ ಭಕ್ತೈಶ್ಚ ಮಾಧವ ॥ ೩೪ ॥

ಪ್ರಾಸಣಂ ಕೀದೃಶಂ ಚಾಪಿ ಕಾಸು ದಿಕ್ಷು ತಥಾ ಪ್ರಭೋ ।
ಕಥಂ ಯೋನಿಂ ನ ಗಚ್ಛೇತ ವಿಯೋನಿಂ ಚ ನ ಗಚ್ಛತಿ ॥ ೩೫ ॥

ತಿರ್ಯಗ್ಯೋನಿಂ ನ ಗಚ್ಛೇತ ಕರ್ಮಣಾ ಕೇನ ಕೇಶವ ।
ತನ್ಮಮಾಚಕ್ಷ್ವ ಸಕಲಂ ಯೇನ ಚೈವ ಸುಖಂ ಭವೇತ್ ॥ ೩೬ ॥

---

೩೨. ಬ್ರಾಹ್ಮಣನ ಕರ್ಮವಾವುದು ? ಕ್ಷತ್ರಿಯನ ಕರ್ಮವೇನು ? ವೈಶ್ಯನು ಮಾಡಬೇಕಾದ ಕರ್ಮವಾವುದು ? ಶೂದ್ರನು ಯಾವ ಕರ್ಮವನ್ನು ಮಾಡಬೇಕು ?

೩೩. ನಿಜವಾಗಿ ಯಾರಿಗೆ ಯೋಗವೂ, ಯಾರಿಗೆ ತಪವೂ ಲಭಿಸುವುದು ? ನಿನ್ನ ಕರ್ಮದಲ್ಲಿ ನಿರತನಾದವನು ಇಲ್ಲಿ ಯಾವ ಫಲವನ್ನು ಪಡೆಯುವನು ?

೩೪. ಮಾಧವಾ, ಯಾವ ಭೋಜನವೂ, ಪಾನವೂ ದುಃಖಕ್ಕೆ ನೆಲೆಯಾಗುವುದು ? ನಿನ್ನ ಭಕ್ತರು ಯಾವ ಕರ್ಮವನ್ನು ಆಚರಿಸಬೇಕು ?

೩೫-೩೬. ನಿನಗೆ ಅರ್ಪಿಸಬೇಕಾದುದು ಎಂತಹುದು? ಯಾವ ದಿಕ್ಕುಗಳಲ್ಲಿ? ಕೇಶವಾ, ಯಾವ ಕರ್ಮದಿಂದ ಅಥವಾ ಹೇಗೆ ಜೀವನು ಮತ್ತೆ ಜನ್ಮವನ್ನಾಗಲಿ, ತಿರ್ಯಗ್ಜನ್ಮವನ್ನಾಗಲಿ ಪಡೆಯದಿರುವನು ? ಯಾವುದರಿಂದ ಸುಖವುಂಟಾಗುವುದು ? ಅದೆಲ್ಲವನ್ನೂ ನನಗೆ ಹೇಳು.

ಜರಾ ವಾ ಕೇನ ಗಚ್ಛೇತ ಜನ್ಮನಾ ಕೇನ ಗಚ್ಛತಿ ।
ಗರ್ಭವಾಸಂ ನ ಗಚ್ಛೇತ ಕರ್ಮಣಾ ಕೇನ ವಾಚ್ಯುತ ।
ಸಂಸಾರಸ್ಯ ನ ಗಚ್ಛೇತ ಕೇನ ಕರ್ಮಪ್ರಭಾವತಃ ॥ ೩೭ ॥

ಇತ್ಯುಕ್ತೋ ಭಗವಾಂಸ್ತತ್ರ ಪ್ರತ್ಯುವಾಚ ವಸುಂಧರಾಂ ॥ ೩೮ ॥

ಶೃಣುಷ್ವ ಮೇ ಭಾಗವತಾ ಯೇ ಚ ಮೋಕ್ಷೇ ವ್ಯವಸ್ಥಿತಾಃ ।
ತಾನ್ಮಂತ್ರಾನ್ಕೀರ್ತಯಿಷ್ಯಾಮಿ ಯೈಸ್ತೋಷಂ ಯಾಮಿ ನಿತ್ಯಶಃ ॥ ೩೯ ॥

ಮಂತ್ರಾಃ

ಮಾಸೇಷು ಸರ್ವೇಷು ಚ ಮುಖ್ಯಭೂತಃ ।
ತ್ವಂ ಮಾಧವೋ ಮಾಧವಮಾಸ ಏವ
ಪಶ್ಯೇದ್ದೇವಂ ತಂ ತು ವಸಂತಕಾಲೇ ।
ಉಪಾಗತಂ ಗಂಧರಸಪ್ರಯುಕ್ತ್ಯಾ

---

೩೭. ಮುಪ್ಪು ಏತರಿಂದ ಬರುವುದು ? ಜನ್ಮವೇತರಿಂದುಂಟಾಗುವುದು ? ಅಚ್ಯುತ, ಯಾವ ಕರ್ಮದ ಮಹಿಮೆಯಿಂದ ಮತ್ತೆ ಸಂಸಾರಕ್ಕೆ ಹೋಗದಿರುವನು ?

೩೮ ಹೀಗೆ ಕೇಳಿದ ವಸುಂಧರೆಗೆ ಭಗವಂತನು ಮುಂದಿನಂತೆ ಹೇಳಿದನು.

೩೯. ಮೋಕ್ಷದಲ್ಲಿ ನಿಂತಿರುವ ಭಗವದ್ಭಕ್ತರು ಯಾರೆಂಬುದನ್ನೂ, ಯಾವುದರಿಂದ ಯಾವಾಗಲೂ ನಾನು ಸಂತೋಷಪಡುವೆನೋ ಆ ಮಂತ್ರಗಳನ್ನೂ ಕೇಳು.

೪೦-೪೧. 'ಮಾಧವನಾದ ನೀನು ಮಾಸಗಳಲ್ಲೆಲ್ಲಾ ಮುಖ್ಯವಾದ ಮಾಧವ (ವೈಶಾಖ) ಮಾಸವೇ ಆಗಿದ್ದೀಯೆ. ಸಪ್ತಲೋಕಗಳಲ್ಲೂ ವೀರನೂ ನಾರಾಯಣನೂ ಆದ ನಿನ್ನನ್ನು ಸದಾಯಜ್ಞಗಳಲ್ಲಿ ಪೂಜಿಸುವಂತೆಯೇ ವಸಂತ ಕಾಲದಲ್ಲಿ ಸುಗಂಧರಸರೂಪನಾಗಿ ಆಗಮಿಸಿದ ದೇವನಾದ ನಿನ್ನನ್ನು ಸಂದರ್ಶಿಸಿ

ನಿತ್ಯಂ ಚ ಯಜ್ಞೇಷು ಯಥೇಜ್ಯತೇ ಯೋ ।
ನಾರಾಯಣಃ ಸಪ್ತಲೋಕೇಷು ವೀರಃ || ೪೦ ||

ಏವಂ ರಾಧೇ* ವಿಧಿಂ ಚೈವ ಕುರ್ಯಾತ್ಸರ್ವಂ ಮಮೋಕ್ತಿತಃ ।
ಇಮಮುಚ್ಚಾರಯೇನ್ಮಂತ್ರಂ ಸರ್ವಭಾಗವತಪ್ರಿಯಂ || ೪೧ ||

ಮಾಸೇಷು ಸರ್ವೇಷ್ವಪಿ ಮುಖ್ಯಭೂತೋ ।
ಮಾಸೋ ಭವಾನ್ ಗ್ರೀಷ್ಮ ಏಕಃ ಪ್ರಪನ್ನಃ
ಪಶ್ಯೇದ್ಭವಂತಂ ವರ್ತಮಾನಂ ಚ ಗ್ರೀಷ್ಮೇ ।
ತೇನೈವ ಸರ್ವಂ ದುಃಖಮೇತು ಪ್ರಶಾಂತಿಂ || ೪೨ ||

ಏವಂ ಗ್ರೀಷ್ಮೇ ವರಾರೋಹೇ ಮಮ ಚೈವಾರ್ಚನಂ ಕುರು ।
ನ ಜನ್ಮಮರಣಂ ಯೇನ ಮಮ ಲೋಕೇ ಗತಿರ್ಭವೇತ್ || ೪೩ ||

ಪೂಜಿಸಬೇಕು.' ಎಂಬ ಅರ್ಥದ ಸರ್ವಭಾಗವತರಿಗೂ ಪ್ರಿಯವಾದ "ಮಾಸೇಷು ಸರ್ವೇಷು ಚ........ಸರ್ವಲೋಕೇಷು ವೀರಃ" ಎಂಬ ಮೇಲಿನ (೪೦ ನೆಯ) ಮಂತ್ರವನ್ನು ಉಚ್ಚರಿಸಿ ನಾನು ಹೇಳಿರುವಂತೆ ವೈಶಾಖಮಾಸದಲ್ಲಿ ಸರ್ವಕರ್ಮಗಳನ್ನೂ ಮಾಡಬೇಕು.

೪೨-೪೩. ವರಾರೋಹೇ, "ಮಾಸಗಳಲ್ಲೆಲ್ಲಾ ಮುಖ್ಯನಾದ ನೀನು ಗ್ರೀಷ್ಮರೂಪವೊಂದನ್ನು ಧರಿಸಿದ್ದೀಯೆ ಗ್ರೀಷ್ಮಕಾಲದಲ್ಲೂ ಸನ್ನಿಹಿತನಾಗಿರುವ ನಿನ್ನನ್ನು ಭಕ್ತರು ಸಂದರ್ಶಿಸಲಿ. ಅದರಿಂದಲೇ ಅವರ ಸರ್ವದುಃಖವೂ ಶಮನವಾಗಲಿ" ಎಂಬ ಅರ್ಥವುಳ್ಳ ಮೇಲಿನ "ಮಾಸೇಷು........ಪ್ರಶಾಂತಿಂ" ಎಂಬ ಮಂತ್ರದಿಂದ ಗ್ರೀಷ್ಮಋತುವಿನಲ್ಲಿ ನನ್ನ ಅರ್ಚನೆಯನ್ನೇ ಮಾಡು. ಅದರಿಂದ ಜನನ ಮರಣಗಳಿಲ್ಲದ ನನ್ನ ಲೋಕವನ್ನು ಸೇರಬಹುದು.

---

* ಗ್ರೀಷ್ಮೇ

ಯಾವಂತಃ ಪುಷ್ಪಿತಾಃ ಶಾಲಾಃ ಪೃಥ್ವ್ಯಾಂ ಯಾವತ್ಸುಗಂಧಕಾಃ ।
ಅರ್ಚಿತಃ ಸ ಭವೇತ್ಸರ್ವೈ ಕೃತೋ ಯೇನ ಹ್ಯಯಂ ವಿಧಿಃ ॥ ೪೪ ॥

ಏವಂ ವರ್ಷಾಸ್ವಪಿ ಧರೇ ಮಮ ಕರ್ಮ ಚ ಕಾರಯೇತ್ ।
ಭವತೇ ನಿಷ್ಕಲಾ ಬುದ್ಧಿಃ ಸಂಸಾರೇ ಚ ನ ಜಾಯತೇ ॥ ೪೫ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ಕರ್ಮ ಸಂಸಾರಮೋಕ್ಷಣಂ ॥ ೪೬ ॥

ಕದಂಬಮುಕುಲಾಶ್ಚೈವ ಸರಲಾರ್ಜುನಪಾದಪಾಃ ।
ಏತೇಷಾಂ ಸುಮನೋಭಿಶ್ಚ ಪೂಜನೀಯೋ ಮಹಾದರಾತ್ ॥ ೪೭ ॥

ಮಮ ಸಂಸ್ಥಾಪನಂ ಕೃತ್ವಾ ವಿಧಿದೃಷ್ಟೇನ ಕರ್ಮಣಾ ।
ನಮೋ ನಾರಾಯಣಾಯೇತಿ ಇಮಂ ಮಂತ್ರಮುದೀರಯೇತ್ ॥ ೪೮ ॥

---

೪೪. ಈ ವಿಧಿಯನ್ನು ಆಚರಿಸುವವನು, ಪೃಥ್ವಿಯಲ್ಲಿ ಎಷ್ಟು ಶಾಲವೃಕ್ಷಗಳ ಸುವಾಸನೆಯುಳ್ಳ ಹೂಗಳಿವೆಯೋ ಅಷ್ಟರಿಂದಲೂ ನನ್ನನ್ನು ಅರ್ಚಿಸಿದಂತಾಗುವುದು.

೪೫. ಧರೇ, ಹೀಗೆಯೇ ವರ್ಷಋತುವಿನಲ್ಲಿಯೂ ನನ್ನ ಪೂಜಾಕರ್ಮವನ್ನು ಮಾಡಬೇಕು. ಅದರಿಂದ ಬುದ್ಧಿಯು ನಿಷ್ಕಲವಾಗುವುದು. ಸಂಸಾರದಲ್ಲಿ ಆಸೆಯುಳ್ಳುದಾಗುವುದಿಲ್ಲ.

೪೬. ಸಂಸಾರವಿಮೋಚಕವಾದ ಬೇರೆಯ ವಿಚಾರವನ್ನೂ ಈ ಸಂದರ್ಭದಲ್ಲಿ ಹೇಳುತ್ತೇನೆ.

೪೭-೪೮. ವರ್ಷಋತುವಿನಲ್ಲಿ ಕಡಹದ ಮೊಗ್ಗುಗಳಿಂದಲೂ, ಅರ್ಜುನ ದೇವದಾರು ಪುಷ್ಪಗಳಿಂದಲೂ ಬಹು ಆದರದಿಂದ ಪೂಜಿಸಬೇಕು. ವಿಧ್ಯುಕ್ತವಾದ ಕರ್ಮದಿಂದ ನನ್ನನ್ನು ಸ್ಥಾಪಿಸಿ, "ನಮೋನಾರಾಯಣಾಯ" ಎಂದು ಹೇಳಿ,

ಪಶ್ಯಂತಿ ಯೇ ಧ್ಯಾನಪರಾ ಘನಾಭಂ |
ತ್ವಮಾಶ್ರಿತಾಃ ಪೂಜ್ಯಮಾನಂ ಮಹಿಮ್ನಾ
ನಿದ್ರಾಂ ಭವಾನ್ಸಜತಾಂ ಲೋಕನಾಥ |
ವರ್ಷಾಸ್ವಿಮಂ ಪಶ್ಯತು ಮೇಘವರ್ಣಂ || ೪೯ ||

ಆಷಾಢಮಾಸೇ ದ್ವಾದಶ್ಯಾಂ ಸರ್ವಶಾಂತಿಕರಂ ಶುಭಂ |
ಯ ಏತೇನ ವಿಧಾನೇನ ಮಮ ಕರ್ಮ ತು ಕಾರಯೇತ್ |
ಸ ಮರ್ತ್ಯೋ ನ ಪ್ರಣಶ್ಯೇತ ಸಂಸಾರೇಽಸ್ಮಿನ್ಯುಗೇ ಯುಗೇ || ೫೦ ||

ಏತತ್ತೇ ಕಥಿತಂ ದೇವಿ ಋತೂನಾಂ ಕರ್ಮ ಚೋತ್ತಮಂ |
ತರಂತಿ ಯೇನ ಸಂಸಾರಂ ನರಾಃ ಕರ್ಮಪರಾಯಣಾಃ || ೫೧ ||

ಏತಂ ಗುಹ್ಯಂ ಮಹಾಭಾಗೇ ದೇವಾಃ ಕೇಪಿ ನ ಜಾನತೇ |
ಮುಕ್ತ್ವಾ ನಾರಾಯಣಂ ದೇವಂ ವಾರಾಹಂ ರೂಪಮಾಸ್ಥಿತಂ || ೫೨ ||

“ ಲೋಕನಾಥಾ, ಮಳೆಗಾಲದಲ್ಲಿ ನೀನು ಯೋಗನಿದ್ರೆಮಾಡು. ಧ್ಯಾನಾಸಕ್ತರಾಗಿ ನಿನ್ನನ್ನು ಆಶ್ರಯಿಸಿದ ಯಾರು ಮಹಿಮೆಯಿಂದ ಪೂಜ್ಯನೂ ಮೇಘ ಕಾಂತಿಯುಳ್ಳವನೂ ಆದ ನಿನ್ನನ್ನು ಸಂದರ್ಶಿಸಬೇಕೋ ಅವರು ಈ ಮೇಘವರ್ಣವನ್ನು ನೋಡಲಿ ” ಎಂಬರ್ಥದ ಪಶ್ಯಂತಿ........ಮೇಘವರ್ಣಂ ಎಂಬ ಮೇಲಿನ (೪೯ ನೆಯ) ಮಂತ್ರವನ್ನು ಹೇಳಬೇಕು.

೫೦. ಆಷಾಢಶುದ್ಧದ್ವಾದಶಿಯದಿನ ಈ ರೀತಿಯಿಂದ ಸರ್ವಶಾಂತಿಕರವೂ, ಶುಭವೂ ಆದ ನನ್ನ ಪೂಜಾಕರ್ಮವನ್ನು ಮಾಡುವವನು ಯುಗಯುಗಗಳಲ್ಲೂ ಈ ಸಂಸಾರದಲ್ಲಿ ನಾಶವಾಗುವುದಿಲ್ಲ.

೫೧. ದೇವಿ, ಕರ್ಮಾಸಕ್ತರಾದ ಮನುಷ್ಯರನ್ನು ಸಂಸಾರದಿಂದ ದಾಟಿಸುವ ಉತ್ತಮವಾದ ಈ ಋತುಪೂಜಾಕರ್ಮವನ್ನು ನಿನಗೆ ಹೇಳಿದ್ದೇನೆ.

೫೨. ಮಹಾಭಾಗ್ಯೇ, ವರಾಹರೂಪವನ್ನು ಧರಿಸಿದ ನಾರಾಯಣನಾದ ನನ್ನನ್ನು ಬಿಟ್ಟು ಮತ್ತಾವ ದೇವತೆಗಳೂ ಈ ರಹಸ್ಯವನ್ನರಿಯರು.

ನಾದೀಕ್ಷಿತಾಯ ದಾತವ್ಯಂ ಮೂರ್ಖಾಯ ಪಿಶುನಾಯ ಚ ।
ಕುಶಿಷ್ಯಾಯ ನ ದಾತವ್ಯಂ ಯೇ ಚ ಶಾಸ್ತ್ರಾರ್ಥದೂಷಕಾಃ ॥ ೫೩ ॥

ನ ಪಠೇದ್ಗೋಘ್ನಮಧ್ಯೇ ವೈ ನ ಪಠೇಚ್ಛಠಮಧ್ಯತಃ ।
ಧನಧರ್ಮಕ್ಷಯಸ್ತೇಷಾಂ ಪಠನಾದಾಶು ಜಾಯತೇ
ಪಠೇದ್ಭಾಗವತಾನಾಂ ಚ ಯೇ ಚ ಧರ್ಮೇಣ ದೀಕ್ಷಿತಾಃ ॥ ೫೪ ॥

ಏತತ್ತೇ ಕಥಿತಂ ಭದ್ರೇ ಪೂರ್ವಂ ಯತ್ಪೃಷ್ಟವತ್ಯಸಿ ।
ಕಾರ್ತ್ಸ್ನ್ಯೇನ ಕಥಿತಂ ಹ್ಯೇತತ್ಕಿಮನ್ಯತ್ಪರಿಪೃಚ್ಛಸಿ ॥ ೫೫ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಋತೂಪಸ್ಕರಣಂ
ನಾಮ ಚತುರ್ವಿಂಶತ್ಯಧಿಕಶತತಮೋಽಧ್ಯಾಯಃ

---

೫೩. ಇದನ್ನು ದೀಕ್ಷಿತನಲ್ಲದವನಿಗೂ, ಮೂರ್ಖನಿಗೂ, ಪಿಶುನನಿಗೂ, ಕುಶಿಷ್ಯನಿಗೂ, ಶಾಸ್ತ್ರಾರ್ಥಗಳನ್ನು ದೂಷಿಸುವವರಿಗೂ ಹೇಳಕೂಡದು.

೫೪. ಗೋಹತ್ಯಮಾಡಿದವರ ಮತ್ತು ದುಷ್ಟರ ಎದುರಿಗೆ ಇದನ್ನು ಓದಲೂಬಾರದು. ಓದಿದವರಿಗೆ ಬೇಗನೆ ಧನವೂ, ಧರ್ಮವೂ ನಾಶವಾಗುವುದು. ಧರ್ಮವ್ರತಿಗಳಾದ ಭಗವದ್ಭಕ್ತರಿಗೇ ಹೇಳಬೇಕು.

೫೫. ಭದ್ರೇ, ಪೂರ್ವದಲ್ಲಿ ನೀನು ಕೇಳಿದ ಈ ವಿಚಾರವನ್ನು ಪೂರ್ತಿಯಾಗಿ ಹೇಳಿದ್ದೇನೆ. ಬೇರೇನನ್ನು ಕೇಳುವೆ ?

ಅಧ್ಯಾಯದ ಸಾರಾಂಶ :—

ಶ್ರೀವರಾಹನು ಭೂದೇವಿಗೆ ಬೇರೆ ಬೇರೆ ಋತುಗಳಲ್ಲಿ ಯಾವ ಯಾವ ಹೂಗಳಿಂದ ತನ್ನನ್ನು ವಿಶೇಷವಾಗಿ ಪೂಜಿಸಬೇಕೆಂಬುದನ್ನೂ, ಅದಕ್ಕೆ ಅವಶ್ಯಕವಾದ ಮಂತ್ರಗಳನ್ನೂ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರ ಇಪ್ಪತ್ತನಾಲ್ಕನೆಯ ಅಧ್ಯಾಯ.

॥ ಶ್ರೀಃ ॥

–X–

ಪಂಚವಿಂಶತ್ಯಧಿಕಶತತಮೋಽಧ್ಯಾಯಃ

ಅಥ ಮಾಯಾಚಕ್ರಂ

॥ ಸೂತ ಉವಾಚ ॥

ಶ್ರುತ್ವಾ ಷಡೃತುಕರ್ಮಾಣಿ ಪೃಥಿವೀ ಶಂಸಿತವ್ರತಾ ।
ತತೋ ನಾರಾಯಣಂ ಭೂಯಃ ಪ್ರತ್ಯುವಾಚ ವಸುಂಧರಾ ॥ ೧ ॥

ಮಂಗಲ್ಯಾಶ್ಚ ಪವಿತ್ರಾಶ್ಚ ಯೇ ತ್ವಯಾ ಸಮುದಾಹೃತಾಃ ।
ಮಮ ಲೋಕೇಷು ವಿಖ್ಯಾತಾ ಮನಃ ಪ್ರಹ್ಲಾದಯಂತಿ ತೇ ॥ ೨ ॥

ಶ್ರುತ್ವಾ ತ್ವೇತಾನಿ ಕರ್ಮಾಣಿ ತ್ವನ್ಮುಖೋಕ್ತಾನಿ ಮಾಧವ ।
ಜಾತಾಸ್ಮಿ ನಿರ್ಮಲಾ ದೇವ ಶಶಾಂಕ ಇವ ಶಾರದಃ ॥ ೩ ॥

ನೂರ ಇಪ್ಪತ್ತೈದನೆಯ ಅಧ್ಯಾಯ

ಮಾಯಾಚಕ್ರ

೧. ಸೂತಮುನಿ—ಶ್ಲಾಘ್ಯವ್ರತೆಯಾದ ಭೂದೇವಿಯು ಆರು ಋತುಗಳಲ್ಲೂ ಮಾಡಬೇಕಾದ ಕರ್ಮಗಳನ್ನು ಕೇಳಿ, ಮತ್ತೆ ನಾರಾಯಣದೇವನನ್ನು ಕುರಿತು ನುಡಿದಳು.

೨-೩. ಮಾಧವಾ, ನೀನು ನನಗೆ ಹೇಳಿದ, ಲೋಕಪ್ರಸಿದ್ಧಗಳೂ, ಮಂಗಳಕರಗಳೂ, ಪವಿತ್ರಗಳೂ ಆದ ಹೂಗಳೇ ಮೊದಲಾದುವು ಮನಸ್ಸನ್ನು ಬಹಳವಾಗಿ ಸಂತೋಷಪಡಿಸುತ್ತವೆ. ನಿನ್ನ ಬಾಯಿಂದ ಈ ಕರ್ಮಗಳನ್ನು ಕೇಳಿ, ಶರತ್ಕಾಲದ ಚಂದ್ರನಂತೆ ನಿರ್ಮಲಳಾಗಿದ್ದೇನೆ.

ಏತನ್ಮೇ ಪರಮಂ ಗುಹ್ಯಂ ಪರಂ ಕೌತೂಹಲಂ ತಥಾ ।
ಮಮ ಚೈವ ಹಿತಾರ್ಥಾಯ ತ್ವಂ ವಿಷ್ಣೋ ವಕ್ತುಮರ್ಹಸಿ ॥ ೪ ॥

ಯಾಮೇನಾಂ ಭಾಷಸೇ ದೇವ ಮಮ ಮಾಯೇತಿ ನಿತ್ಯಶಃ ।
ಕಾ ಮಯಾ ಕೀದೃಶೀ ವಿಷ್ಣೋ ಕಿಂ ವಾ ಮಾಯೇತಿ ಚೋಚ್ಯತೇ ।
ಜ್ಞಾತುಮಿಚ್ಛಾಮಿ ಮಾಯಾರ್ಥಂ ರಹಸ್ಯಂ ಪರಮುತ್ತಮಂ ॥ ೫ ॥

ತತಸ್ತಸ್ಯಾ ವಚಃ ಶ್ರುತ್ವಾ ವಿಷ್ಣುರ್ಮಾಯಾಕರಂಡಕಃ ।
ಪ್ರತ್ಯುವಾಚ ತದಾ ವಾಕ್ಯಂ ಪ್ರಹಸ್ಯ ತು ವಸುಂಧರಾಂ ॥ ೬ ॥

ಭೂಮೇ ಮಾ ಪೃಚ್ಛ ಮಾಯಾಂ ಮೇ ಯನ್ಮಾಂ ಪೃಚ್ಛಸಿ ಸಾದರಂ ।
ವೃಥಾ ಕ್ಲೇಶಂ ಕಿಮರ್ಥಂ ತ್ವಂ ಪ್ರಾಪ್ಸ್ಯಸೇ ಯದ್ವಿಲೋಕನಾತ್ ॥ ೭ ॥

ಅದ್ಯಾಪಿ ಮಾಂ ನ ಜಾನಂತಿ ರುದ್ರೇಂದ್ರಾಸ್ಸಪಿತಾಮಹಾಃ ।
ಮಮ ಮಾಯಾಂ ವಿಶಾಲಾಕ್ಷಿ ಕಿಂ ಪುನಸ್ತ್ವಂ ವಸುಂಧರೇ ॥ ೮ ॥

೪-೫. ವಿಷ್ಣುವೇ, ಬಹು ಕುತೂಹಲವನ್ನುಂಟುಮಾಡುವುದೂ, ಅತಿರಹಸ್ಯವೂ ಆದ ಈ ವಿಚಾರವನ್ನು ನನ್ನ ಹಿತಕ್ಕಾಗಿ ನೀನು ಹೇಳಬೇಕು ದೇವ, ನೀನು ಯಾವಾಗಲೂ 'ನನ್ನ ಮಾಯೆ' ಎಂದು ಹೇಳುತ್ತಿರುವೆ. ಮಾಯೆ ಯಾವುದು ? ಎಂತಹುದು ? ಯಾವುದು ಮಾಯೆಯೆಂದೆನಿಸಿಕೊಳ್ಳುವುದು ? ಅತ್ಯುತ್ತಮವೂ, ರಹಸ್ಯವೂ ಆದ ಮಾಯೆಯ ಅರ್ಥ (ಸ್ವರೂಪ) ವನ್ನು ತಿಳಿಯಲು ಬಯಸುತ್ತೇನೆ.

೬. ಮಾಯಾಕರಂಡಕ(ಭರಣಿ)ನಾದ ವಿಷ್ಣುವು ಭೂದೇವಿಯ ಈ ಮಾತನ್ನು ಕೇಳಿ ನಕ್ಕು, ಅವಳನ್ನು ನೋಡಿ ಮುಂದಿನ ಮಾತನಾಡಿದನು.

೭. ಭೂಮೀ, ನೀನು ಆದರದಿಂದ ಕೇಳಬೇಕೆಂದಿರುವ ಆ ಮಾಯೆಯ ವಿಚಾರವನ್ನು ಕೇಳಬೇಡ. ಅದನ್ನರಿತು ಸುಮ್ಮನೆ ಏಕೆ ಕ್ಲೇಶಕ್ಕೊಳಗಾಗುವೆ?

೮. ವಸುಂಧರೇ, ಬ್ರಹ್ಮನೊಡಗೂಡಿದ ರುದ್ರೇಂದ್ರರು ಕೂಡ ಈಗಲೂ ನನ್ನನ್ನೂ, ನನ್ನ ಮಾಯೆಯನ್ನೂ ಅರಿಯರು. ವಿಶಾಲಾಕ್ಷೀ, ನಿನ್ನನ್ನು ಹೇಳುವುದೇನಿದೆ !

ಪರ್ಜನ್ಯೋ ವರ್ಷತೇ ಯತ್ರ ತಜ್ಜಲೇನ ಪ್ರಪೂರ್ಯತೇ |
ದೇಶೋ ನಿರ್ಜಲತಾಂ ಯಾತಿ ಏಷಾ ಮಾಯಾ ಮಮ ಪ್ರಿಯೇ ॥ ೯ ॥

ಸೋಮೋ ಯತ್ ಕ್ಷೀಯತೇ ಪಕ್ಷೇ ಪಕ್ಷೇ ವಾಪಿ ಚ ವರ್ಧತೇ |
ಅಮಾಯಾಂ ನ ಸ ದೃಶ್ಯೇತ ಮಾಯೇಯಂ ಮಮ ತತ್ತ್ವತಃ ॥ ೧೦ ॥

ಹೇಮಂತೇ ಸಲಿಲಂ ಕೂಪೇ ಉಷ್ಣಂ ಭವತಿ ಸುಂದರಿ |
ಭವೇಚ್ಚ ಶೀತಲಂ ಗ್ರೀಷ್ಮೇ ಮಾಯೇಯಂ ಮಮ ತತ್ತ್ವತಃ ॥ ೧೧ ॥

ಪಶ್ಚಿಮಾಂ ದಿಶಮಾಸ್ಥಾಯ ಯದಸ್ತಂ ಯಾತಿ ಭಾಸ್ಕರಃ |
ಉದೇತಿ ಪೂರ್ವತಃ ಪ್ರಾತರ್ಮಾಯೇಯಂ ಮಮ ಸುಂದರಿ ॥ ೧೨ ॥

ಶೋಣಿತಂ ಚೈವ ಶುಕ್ರಂ ಚ ಉಭೇ ತೇ ಪ್ರಾಣಿಸಂಸ್ಥಿತೇ |
ಗರ್ಭೇ ಚ ಜಾಯತೇ ಜಂತುರ್ಮಾಯೇಯಂ ಮಮ ಸುಂದರಿ ॥ ೧೩ ॥

---

೯. ಪ್ರಿಯೇ, ಗುಡುಗುವ ಮೋಡವು ಎಲ್ಲಿ ಮಳೆಯನ್ನು ಸುರಿಸುವುದೋ ಆ ದೇಶವು ನೀರಿಂದ ತುಂಬುತ್ತದೆ. ಇಲ್ಲದ ದೇಶವು ನೀರಿಲ್ಲದುದಾಗಿರುತ್ತದೆ. ಇದು ನನ್ನ ಮಾಯೆ.

೧೦. ಚಂದ್ರನು ಕೃಷ್ಣಪಕ್ಷದಲ್ಲಿ ಕ್ಷೀಣನಾಗುವುದೂ, ಶುಕ್ಲಪಕ್ಷದಲ್ಲಿ ಬೆಳೆಯುವುದೂ, ಅಮಾವಾಸ್ಯೆಯ ದಿನ ಕಾಣಿಸದೆಯೇ ಇರುವುದೂ ನಿಜವಾಗಿ ನನ್ನ ಮಾಯೆ.

೧೧. ಸುಂದರಿ, ಸೇದುವ ಬಾವಿಯ ನೀರು ಹಿಮಂತಋತುವಿನಲ್ಲಿ ಬೆಚ್ಚಗಿರುತ್ತದೆ. ಗ್ರೀಷ್ಮ(ಬಿಸಿಲು)ಕಾಲದಲ್ಲಿ ತಣ್ಣಗಿರುತ್ತದೆ. ತಾತ್ವಿಕವಾಗಿ ಇದು ನನ್ನ ಮಾಯೆ.

೧೨. ಸುಂದರಿ, ಸೂರ್ಯನು ಪಶ್ಚಿಮದಿಕ್ಕಿಗೆ ಹೋಗಿ ಮುಳುಗುವುದೂ, ಬೆಳಗ್ಗೆ ಪೂರ್ವದಲ್ಲುದಿಸುವುದೂ ನನ್ನ ಮಾಯೆ.

೧೩. ಸುಂದರಿ, ಪ್ರಾಣಿಗಳಲ್ಲಿರುವ ಶೋಣಿತ(ರಕ್ತ)ವೂ, ಶುಕ್ರವೂ (ರೇತಸ್ಸೂ) ಎರಡೂ ಸ್ತ್ರೀಪುರುಷಸಂಗಮಕಾಲದಲ್ಲಿ ಸೇರಿ, ಗರ್ಭದಲ್ಲಿ ಪ್ರಾಣಿಯು ಜನಿಸುವುದು. ಇದು ನನ್ನ ಮಾಯೆ.

ಜೀವಃ ಪ್ರವಿಶ್ಯ ಗರ್ಭಂ ತು ಸುಖದುಃಖೇ ಚ ವಿಂದತಿ ।
ಜಾತಶ್ಚ ವಿಸ್ಮರೇತ್ಸರ್ವಂ ಏಷಾ ಮಾಯಾ ಮಮೋತ್ತಮಾ ॥ ೧೪ ॥

ಆತ್ಮಕರ್ಮಾಶ್ರಿತೋ ಜೀವೋ ನಷ್ಟಸಂಜ್ಞೋ ಗತಸ್ಪೃಹಃ ।
ಕರ್ಮಣಾ ನೀಯತೇಽನ್ಯತ್ರ ಮಾಯೈಷಾ ಮಮ ಚೋತ್ತಮಾ ॥ ೧೫ ॥

ಶುಕ್ರಶೋಣಿತಸಂಯೋಗಾಜ್ಜಾಯಂತೇ ಮಮ ಜಂತವಃ ।
ಅಂಗುಲ್ಯಶ್ಚರಣೌ ಚೈವ ಭುಜೌ ಶೀರ್ಷಂ ಕಟಿಸ್ತಥಾ ॥ ೧೬ ॥

ಪೃಷ್ಠಂ ತಥೋದರಂ ಚೈವ ದಂತೌಷ್ಠಪುಟನಾಸಿಕಂ ।
ಕರ್ಣೌ ನೇತ್ರೇ ಕಪಾಲೌ ಚ ಲಲಾಟಂ ಜಿಹ್ವಯಾ ಸಹ ॥ ೧೭ ॥

ಏತಯಾ ಮಾಯಯಾ ಯುಕ್ತಾ ಜಾಯಂತೇ ಯದಿ ಜಂತವಃ ॥ ೧೮ ॥

ತಸ್ಯೈವ ಜೀರ್ಯತೇ ಭುಕ್ತಮಗ್ನಿನಾ ಪೀತಮೇವ ಚ ।
ಅಧಶ್ಚ ಸ್ರವತೇ ಜಂತುಃ ಏಷಾ ಮಾಯಾ ಮಮೋತ್ತಮಾ ॥ ೧೯ ॥

---

೧೪. ಜೀವನು ಗರ್ಭದಲ್ಲಿ ಸೇರಿ, ಸುಖದುಃಖಗಳನ್ನು ಅರಿಯುತ್ತಾನೆ. (ಪಡೆಯುತ್ತಾನೆ). ಆದರೂ ಭೂಮಿಯಲ್ಲಿ ಹುಟ್ಟುತ್ತಲೇ ಎಲ್ಲವನ್ನೂ ಮರೆಯುತ್ತಾನೆ. ಇದು ನನ್ನ ಉತ್ತಮಮಾಯೆ.

೧೫. ತನ್ನ ಕರ್ಮವನ್ನವಲಂಬಿಸಿರುವ ಜೀವನು ಬುದ್ಧಿಯನ್ನೂ, ತನ್ನ ಹೆಸರನ್ನೂ, ಆಸೆಯನ್ನೂ ಕಳೆದುಕೊಂಡು, ಕರ್ಮದಿಂದ ಬೇರೆಕಡೆಗೆ ಕರೆದುಕೊಂಡು ಹೋಗಲ್ಪಡುವನು. ಇದೂ ನನ್ನ ಉತ್ತಮವಾದ ಮಾಯೆ.

೧೬–೧೯. ಪ್ರಾಣಿಗಳು ಶುಕ್ರಶೋಣಿತಗಳ ಸಂಯೋಗದಿಂದ ಜನಿಸುತ್ತವೆ ಅವಕ್ಕೆ ಬೆರಳುಗಳೂ, ಕಾಲುಗಳೂ, ಭುಜಗಳೂ, ತಲೆಯೂ, ನಡುವೂ, ಪೃಷ್ಠವೂ, ಹೊಟ್ಟೆಯೂ, ಹಲ್ಲುತುಟಿಗಳೂ, ಮೂಗೂ, ಕಣ್ಣುಕಿವಿಗಳೂ, ತಲೆಯ ಚಿಪ್ಪುಗಳೂ, ಹಣೆಯೂ, ನಾಲಗೆಯೂ (ಈ ಮಾಯೆಯಿಂದಲೇ) ಉಂಟಾಗುವುವು. ಪ್ರಾಣಿಯು ತಿಂದುದೂ, ಕುಡಿದುದೂ ಜಠರಾಗ್ನಿಯಿಂದ ಜೀರ್ಣವಾಗುತ್ತದೆ ಪ್ರಾಣಿಯು ಕೆಳಗೆ ನಡೆಯುತ್ತದೆ. ಅಥವಾ ಕುಂದುತ್ತದೆ. ಇದೂ ನನ್ನ ಉತ್ತಮವಾದ ಮಾಯೆ.

ಶಬ್ದಃ ಸ್ಪರ್ಶಶ್ಚ ರೂಪಂ ಚ ರಸೋ ಗಂಧಶ್ಚ ಪಂಚಮಃ ।
ಅನ್ನಾತ್ಪ್ರವರ್ತತೇ ಜಂತುರೇಷಾ ಮಾಯಾ ಮಮ ಪ್ರಿಯಾ ॥ ೨೦ ॥

ಸರ್ವರ್ತುಷು ನಿಜಾಕಾರಃ ಸ್ಥಾವರೇ ಜಂಗಮೇ ತಥಾ ।
ತತ್ತ್ವಂ ನ ಜ್ಞಾಯತೇ ತಸ್ಯ ಮಾಯೈಷಾ ಮಮ ಸುಂದರಿ ॥ ೨೧ ॥

ಆಪೋ ದಿವ್ಯಾಸ್ತಥಾ ಭೌಮಾ ಆಪೋ ಯೇಷು ಪ್ರತಿಷ್ಠಿತಾಃ ।
ನದ್ಯೋ ವೃದ್ಧಿಂ ಪ್ರಯಾಂತ್ಯತ್ರ ಮಾಯೈಷಾ ಮಮ ಸುಂದರಿ ॥ ೨೨ ॥

ವೃಷ್ಟೌ ಬಹೂದಕಾಸ್ಸರ್ವೇ ಪಲ್ವಲಾನಿ ಸರಾಂಸಿ ಚ ।
ಗ್ರೀಷ್ಮೇ ಸರ್ವಾಣಿ ಶುಷ್ಯಂತಿ ಏತನ್ಮಾಯಾಬಲಂ ಮಮ ॥ ೨೩ ॥

ಹಿಮವಚ್ಛಿಖರಾನ್ಮುಕ್ತಾ ನಾಮ್ನಾ ಮಂದಾಕಿನೀ ನದೀ ।
ಗಾಂ ಗತಾ ಸಾ ಭವೇದ್ಗಂಗಾ ಮಾಯೈಷಾ ಮಮ ಕೀರ್ತಿತಾ ॥ ೨೪ ॥

---

೨೦. ಪ್ರಾಣಿಯು ಶಬ್ದಸ್ಪರ್ಶರೂಪರಸಗಂಧಗಳೆಂಬ ವಿಷಯಗಳಲ್ಲಿ ಆಹಾರದಿಂದಲೇ ಪ್ರವರ್ತಿಸುತ್ತದೆ. ಇದು ನನಗೆ ಇಷ್ಟವಾದ ಮಾಯೆ.

೨೧. ಚರಾಚರಗಳಲ್ಲಿ ಎಲ್ಲಾ ಋತುಗಳಲ್ಲೂ ಆಯಾ ಋತುಗಳಿಗೆ ಸಹಜವಾದ (ಹೂಕಾಯಿಗಳು ಬಿಡುವುದೇ ಮೊದಲಾದ) ಒಂದು ನಿಷ್ಕೃಷ್ಟವಾದ ಆಕಾರವು ಕಾಣಿಸುತ್ತದೆ. ಅದರ ತತ್ತ್ವವು ತಿಳಿಯುವುದಿಲ್ಲ. ಸುಂದರಿ, ಇದೂ ನನ್ನ ಮಾಯೆ.

೨೨. ಸುಂದರಿ, ಮಳೆಯ ನೀರೂ, ಭೂಮಿಯ ನೀರೂ ಇರುವ ನದಿಗಳ ಪ್ರವಾಹವು ಹೆಚ್ಚುವುದೂ ನನ್ನ ಮಾಯೆಯಿಂದಲೇ.

೨೩. ಎಲ್ಲಾ ಹೊಂಡಗಳೂ, ಸರೋವರಗಳೂ, ಮಳೆಗಾಲದಲ್ಲಿ ಹೆಚ್ಚು ನೀರುಳ್ಳವಾಗಿರುವುವು. ಬೇಸಗೆಯಲ್ಲಿ ಎಲ್ಲವೂ ಬತ್ತುವುವು. ಇದು ನನ್ನ ಮಾಯೆಯ ಬಲ.

೨೪. ಹಿಮವತ್ಪರ್ವತಶಿಖರದಿಂದ ಹೊರಟ ಮಂದಾಕಿನಿಯೆಂಬ ಹೆಸರಿನ ನದಿಯು ಭೂಮಿಗೆ ಬಂದು ಗಂಗೆಯೆಂಬ ಹೆಸರನ್ನು ಪಡೆಯುವುದು. ಇದೂ ನನ್ನ ಮಾಯೆಯೆನಿಸಿಕೊಳ್ಳುವುದು.

ಮೇಘಾ ವಹಂತಿ ಸಲಿಲಮುದ್ಧೃತ್ಯ ಲವಣಾರ್ಣವಾತ್ |
ವರ್ಷಂತಿ ಮಧುರಂ ಲೋಕೇ ಏತನ್ಮಾಯಾಬಲಂ ಮಮ || ೨೫ ||

ರೋಗಾರ್ತಾ ಜಂತವಃ ಕೇಚಿತ್ ಭಕ್ಷಯಂತಿ ಮಹೌಷಧಂ |
ತಸ್ಯ ವೀರ್ಯಂ ಸಮಾಶ್ರಿತ್ಯ ಮಾಯಾಂ ತು ವಿಸೃಜಾಮ್ಯಹಂ || ೨೬ ||

ಔಷಧೇ ದೀಯಮಾನೇಽಪಿ ಜಂತುಃ ಪಂಚತ್ವಮೇತಿ ಯತ್ |
ನಿರ್ವೀರ್ಯಮೌಷಧಂ ಕೃತ್ವಾ ಕಾಲೋ ಭೂತ್ವಾ ಹರಾಮ್ಯಹಂ || ೨೭ ||

ಪ್ರಥಮಂ ಜಾಯತೇ ಗರ್ಭಃ ಪಶ್ಚಾತ್ಸಂಜಾಯತೇ ಪುಮಾನ್ |
ಜಾಯತೇ ಮಧ್ಯಮಂ ರೂಪಂ ತತೋಽಪಿ ಜರಯಾ ಯುತಃ ।
ತತ ಇಂದ್ರಿಯನಾಶಶ್ಚ ಏತನ್ಮಾಯಾಬಲಂ ಮಮ || ೨೮ ||

---

೨೫. ಮೋಡಗಳು ಉಪ್ಪುನೀರಿನ ಸಾಗರದಿಂದ ನೀರನ್ನೆತ್ತಿ ಹೊತ್ತು ಕೊಂಡು ಹೋಗಿ, ಲೋಕಕ್ಕೆ ಸಿಹಿಯಾದ ನೀರನ್ನು ಸುರಿಸುವುವು. ಇದು ನನ್ನ ಮಾಯೆಯ ಬಲ.

೨೬-೨೭. ರೋಗಪೀಡಿತಗಳಾದ ಕೆಲವು ಪ್ರಾಣಿಗಳು ಮಹೌಷಧವನ್ನು ಸೇವಿಸುವುವು. ಔಷಧಿಯ ಶಕ್ತಿಯನ್ನು ಆಶ್ರಯಿಸಿ ನನ್ನ ಮಾಯೆಯನ್ನು ಪ್ರಯೋಗಿಸುವೆನು. ಔಷಧವನ್ನು ಕೊಟ್ಟರೂ(ಕೆಲವುವೇಳೆ) ಪ್ರಾಣಿಯು ಸತ್ತೇಹೋಗುವುದು. ಆ ಸಂದರ್ಭದಲ್ಲಿ ಔಷಧವನ್ನು ಶಕ್ತಿಯಿಲ್ಲದುದನ್ನಾಗಿ ಮಾಡಿ, ನಾನೇ ಕಾಲ(ಯಮ)ನಾಗಿ ಪ್ರಾಣಿಯನ್ನು ಒಯ್ಯುವೆನು.

೨೮. ಮೊದಲು ಗರ್ಭವು ಉದಿಸುತ್ತದೆ. ಬಳಿಕ ಮನುಷ್ಯನುದಿಸುತ್ತಾನೆ. ಮಧ್ಯವಯಸ್ಸಿನವನಾಗಿಯೂ, ಬಳಿಕ ಮುಪ್ಪಿನಿಂದ ಕೂಡಿದವನಾಗಿಯೂ ಆಗುತ್ತಾನೆ. ಬಳಿಕ ಇಂದ್ರಿಯಗಳೂ ನಾಶವಾಗುವುವು. ಇದೂ ನನ್ನ ಮಾಯಾಬಲವೇ.

ಯದ್ಭೂಮೌ ನಿಹಿತಂ ಬೀಜಂ ತಸ್ಮಾತ್ತತ್ಜಾಯತೇಂಕುರಂ ।
ಪುಸಶ್ಚ ಪತ್ರಾದಿಯುತಂ ಏತನ್ಮಾಯಾಬಲಂ ಮಮ ॥ ೨೯ ॥

ಏಕಬೀಜಾತ್ಪ್ರಕೀರ್ಣಾದ್ವೈ ಜಾಯಂತೇ ತಾನಿ ಭೂರಿಶಃ ।
ತತ್ರಾಮೃತಂ ವಿಸೃಜಾಮಿ ಮಾಯಾಯೋಗೇನ ಭೂರಿಶಃ ॥ ೩೦ ॥

ಲೋಕಃ ಏವಂ ವಿಜಾನಾತಿ ಗರುಡೋ ವಹತೇಽಚ್ಯುತಂ ।
ಭೂತ್ವಾ ವೇಗೇನ ಗರುಡೋ ವಹಾಮ್ಯಾತ್ಮಾನಮಾತ್ಮನಾ ॥ ೩೧ ॥

ಯಾ ಏತಾ ದೇವತಾಸ್ಸರ್ವಾ ಯಜ್ಞಭಾಗೇನ ತೋಷಿತಾಃ ।
ಮಾಯಾಮೇತಾಮಹಂ ಕೃತ್ವಾ ತೋಷಯಾಮಿ ದಿವೌಕಸಃ ॥ ೩೨ ॥

ಲೋಕಾಸ್ಸರ್ವೇ ವಿಜಾನಂತಿ ದೇವಾ ನಿತ್ಯಂ ಮಖಾಶಿನಃ ।
ಮಾಯಾಮೇತಾಮಹಂ ಕೃತ್ವಾ ಯಕ್ಷ್ಯಾಮಿ ತ್ರಿದಿವೌಕಸಃ ॥ ೩೩ ॥

---

೨೯. ಭೂಮಿಯಲ್ಲಿ ಬಿತ್ತಿದ ಬೀಜವು ಮೊಳೆಯುವುದೂ, ಎಲೆ ಮೊದಲಾದುವುಗಳಿಂದ ಕೂಡುವುದೂ, ನನ್ನ ಮಾಯೆಯ ಬಲದಿಂದಲೇ.

೩೦. ಒಂದು ಬೀಜವನ್ನು ಬಿತ್ತಿದರೆ ಅದರಿಂದ ಬೇಕಾದಷ್ಟು ಬೀಜಗಳಾಗುವುವು. ಆ ಒಂದು ಬೀಜದಲ್ಲಿ ಮಾಯೆಯ ಸಂಬಂಧದಿಂದ ನಾನು ಅಮೃತವನ್ನು ಸುರಿಯುವೆನು. (ಅದೇ ಹಲವು ಬೀಜಗಳಾಗಲು ಕಾರಣ)

೩೧. ಲೋಕವು, ಗರುಡನು ವಿಷ್ಣುವನ್ನು ವಹಿಸುತ್ತಾನೆಂದು ತಿಳಿದುಕೊಂಡಿದೆ.(ಆದರೆ)ನಾನೇ ಗರುಡನಾಗಿ, ವೇಗದಿಂದ ನನ್ನನ್ನು ನಾನೇ ವಹಿಸುತ್ತೇನೆ.

೩೨. ದೇವತೆಗಳೆಲ್ಲರೂ ಯಜ್ಞಭಾಗದಿಂದ ತೃಪ್ತಿಪಡಿಸಲ್ಪಡುವರಷ್ಟೆ. ನಾನೇ ಯಜ್ಞವೆಂಬ ಮಾಯೆಯನ್ನು ಮಾಡಿ ದೇವತೆಗಳನ್ನು ಸಂತೋಷಗೊಳಿಸುವೆನು.

೩೩. ದೇವತೆಗಳು ಯಾವಾಗಲೂ ಯಜ್ಞಭೋಜನರೆಂದು ಲೋಕವೆಲ್ಲಾ ತಿಳಿದುಕೊಂಡಿದೆ. ನಾನೇ ಆ ಮಾಯೆಯನ್ನು ಮಾಡಿ, ದೇವತೆಗಳನ್ನು ಪೂಜಿಸುತ್ತೇನೆ.

ಸರ್ವೋಽಪಿ ಭಜತೇ ಲೋಕೇ ಯಷ್ಟಾರಂ ಚ ಬೃಹಸ್ಪತಿಂ |
ಮಾಯಾಮಾಂಗೀರಸೀಂ ಕೃತ್ವಾ ಯಾಜಯಾಮಿ ದಿವೌಕಸಃ || ೩೪ ||

ಸರ್ವೇ ಲೋಕಾ ವಿಜಾನಂತಿ ವರುಣಃ ಪಾತಿ ಸಾಗರಂ |
ಮಾಯಾಂ ತು ವಾರುಣೀಂ ಕೃತ್ವಾ ರಕ್ಷಾಮಿ ಚ ಮಹಾರ್ಣವಂ || ೩೫ ||

ಸರ್ವೇ ಲೋಕಾ ವಿಜಾನಂತಿ ಕುಬೇರೋಽಯಂ ಧನೇಶ್ವರಃ |
ಕುಬೇರಮಾಯಾಮಾದಾಯ ಅಹಂ ರಕ್ಷಾಮಿ ತದ್ಧನಂ || ೩೬ ||

ಏವಂ ಲೋಕಾ ವಿಜಾನಂತಿ ವೃತ್ರಶ್ಶಕ್ರೇಣ ಸೂದಿತಃ |
ಶಾಕ್ರೀಂ ಮಾಯಾಂ ಸಮಾಸ್ಥಾಯ ಮಯಾ ವೃತ್ರೋ ನಿಷೂದಿತಃ|| ೩೭ ||

ಏವಂ ಲೋಕಾ ವಿಜಾನಂತಿ ಅದಿತ್ಯಶ್ಚ ಧ್ರುವೋ ಮಹಾನ್ |
ಮೇರುಂ ಮಾಯಾಮಯಂ ಕೃತ್ವಾ ವಹಾಮ್ಯಾದಿತ್ಯಮೇವ ಚ || ೩೮ ||

---

೩೪. ಲೋಕದಲ್ಲಿ ಎಲ್ಲರೂ ಯಜ್ಞಮಾಡುವವನನ್ನೂ, ಬೃಹಸ್ಪತಿಯನ್ನು (ಗುರುವನ್ನೂ)ಭಜಿಸುತ್ತಾರೆ.(ಆದರೆ)ನಾನೇ ಬೃಹಸ್ಪತಿಯ ಮಾಯೆಯನು ಮಾಡಿ ದೇವತೆಗಳಿಗೆ ಯಜ್ಞಮಾಡಿಸುತ್ತೇನೆ.

೩೫. ಲೋಕಗಳೆಲ್ಲವೂ, ವರುಣನು ಸಾಗರವನ್ನು ರಕ್ಷಿಸುವನೆಂದು ಅರಿವೆ. ಆದರೆ ನಾನೇ ವರುಣನಂತೆ ಮಾಯೆಯಿಂದ ಮಹಾಸಾಗರವನ್ನು ರಕ್ಷಿಸುತ್ತೇನೆ.

೩೬. ಕುಬೇರನು ಧನಕ್ಕೊಡೆಯನೆಂದು ಲೋಕಗಳೆಲ್ಲವೂ ತಿಳಿದು ಕೊಂಡಿವೆ. ಕುಬೇರರೂಪವಾದ ಮಾಯೆಯನ್ನು ಮಾಡಿ, ನಾನೇ ಆ ಧನವನ್ನು ಕಾಪಾಡುತ್ತೇನೆ.

೩೭. ವೃತ್ರಾಸುರನನ್ನು ಇಂದ್ರನು ಕೊಂದನೆಂದು ಲೋಕಗಳು ತಿಳಿದಿವೆ. ಇಂದ್ರರೂಪವಾದ ಮಾಯೆಯನ್ನು ಪಡೆದು ವೃತ್ರನನ್ನು ಕೊಂದವನು ನಾನೇ.

೩೮. ಲೋಕದವರು, ಸೂರ್ಯನು ದೊಡ್ಡವನೆಂದೂ, ಸ್ಥಿರನೆಂದೂ ಅರಿಯುವರು. ಮಾಯಾ ಮಯವಾದ ಮೇರುಪರ್ವತವನ್ನು ಮಾಡಿ, ಸೂರ್ಯನನ್ನೂ ನಾನೇ ವಹಿಸುತ್ತೇನೆ.

ಏವಮಾಭಾಷತೇ ಲೋಕೋ ಜಲಂ ವಾ ನಶ್ಯತೇಽಖಿಲಂ ।
ಬಡಬಾಮುಖಮಾಸ್ಥಾಯ ಪಿಬಾಮಿ ತದಹಂ ಜಲಂ ॥ ೩೯ ॥

ವಾಯುಂ ಮಾಯಾಮಯಂ ಕೃತ್ವಾ ಮೇಘೇಷು ವಿಸೃಜಾಮ್ಯಹಂ ।
ಯದೀದಂ ಭಾಷತೇ ಲೋಕಃ ಕುತ್ರೈತತ್ತಿಷ್ಠತೇ ಜಲಂ ॥ ೪೦ ॥

ದೇವಾ ಅಪಿ ನ ಜಾನಂತಿ ಅಮೃತಂ ಕುತ್ರ ತಿಷ್ಠತಿ ।
ಮಮ ಮಾಯಾನಿಯೋಗೇನ ತಿಷ್ಠತಿ ಹ್ಯೌಷಧಂ ವನೇ ॥ ೪೧ ॥

ಲೋಕೋ ಹ್ಯೇವಂ ವಿಜಾನಾತಿ ರಾಜಾ ಪಾಲಯತೇ ಪ್ರಜಾಃ ।
ರಾಜಮಾಯಾಮಹಂ ಕೃತ್ವಾ ಪಾಲಯಾಮಿ ವಸುಂಧರಾಂ ॥ ೪೨ ॥

ಯೇ ತು ವೈ ದ್ವಾದಶಾದಿತ್ಯಾ ಉದೇಷ್ಯಂತಿ ಯುಗಕ್ಷಯೇ ।
ಪ್ರವಿಶ್ಯ ತಾನಹಂ ಭೂಮೇ ಮಾಯಾಂ ಲೋಕೇ ಸೃಜಾಮ್ಯಹಂ ॥ ೪೩ ॥

---

೩೯. ಸಾಗರದ ನೀರೆಲ್ಲಾ ಬಡಬಾಗ್ನಿಯಿಂದ ನಾಶವಾಗುವುದೆಂದು ಲೋಕವು ಹೇಳುತ್ತದೆ. ನಾನೇ ಬಡಬಾಗ್ನಿಮುಖದಲ್ಲಿ ನೆಲಸಿ, ಆ ನೀರನ್ನು ಕುಡಿಯುತ್ತೇನೆ.

೪೦. ಮಾಯಾಮಯವಾದ ವಾಯುವನ್ನು ಸೃಷ್ಟಿಸಿ, ಮೇಘಗಳ ಮೇಲೆ ನಾನು ಬಿಡುವೆನು. ಲೋಕವು 'ಈ ನೀರು ಎಲ್ಲಿರುತ್ತದೆಯೋ!' ಎಂದುಕೊಳ್ಳುತ್ತದೆ.

೪೧–೪೨. ಅಮೃತವು ಎಲ್ಲಿರುತ್ತದೆಂಬುದನ್ನು ದೇವತೆಗಳೂ ಅರಿಯರು. ನನ್ನ ಮಾಯೆಯ ನಿಯೋಗದಿಂದಲೇ ವನದಲ್ಲಿ ಔಷಧವಿರುತ್ತದೆ. ರಾಜನು ಪ್ರಜೆಗಳನ್ನು ಪಾಲಿಸುತ್ತಾನೆಂದು ಲೋಕವು ತಿಳಿದುಕೊಳ್ಳುತ್ತದೆ. ರಾಜ ಮಾಯೆಯನ್ನು ಮಾಡಿ ನಾನೇ ಭೂಮಿಯನ್ನು ಪರಿಪಾಲಿಸುತ್ತೇನೆ.

೪೩–೪೪. ಯುಗಾಂತ್ಯ(ಪ್ರಳಯ)ದಲ್ಲಿ ಹನ್ನೆರಡುಜನ ಸೂರ್ಯರು ಉದಿಸುವರಷ್ಟೆ. ಭೂದೇವಿ, ಅವರಲ್ಲಿ ನಾನು ಪ್ರವೇಶಿಸಿ, ಲೋಕದಲ್ಲಿ ಮಾಯೆಯನ್ನು ಸೃಜಿಸುವೆನು. ಸೂರ್ಯನ ಕಿರಣವು ಲೋಕದಲ್ಲಿ ಎಲ್ಲಕ್ಕೂ

ಸೂರ್ಯಸ್ಯ ಚಾಂಶುನಾ ಭೂಮೇ ಸದಾ ಲೋಕೇಷು ಪಚ್ಯತೇ ।
ಮಾಯಾಮಂಶುಮಯೀಂ ಕೃತ್ವಾ ಪೂರಯಾಮ್ಯಖಿಲಂ ಜಗತ್ ॥ ೪೪ ॥

ವರ್ಷಂತೇ ಯತ್ರ ಸಂವರ್ತಾ ಧಾರೈರ್ಮುಸಲಸನ್ನಿಭೈಃ ।
ಮಾಯಾಂ ಸಾಂವರ್ತಕೀಂ ಗೃಹ್ಯ ಪೂರಯಾಮ್ಯಖಿಲಂ ಜಗತ್ ॥ ೪೫ ॥

ಯತ್ಸ್ವಪಾಮಿ ವರಾರೋಹೇ ಶೇಷಸ್ಯೋಪರಿ ಧಾರಿಣಿ ।
ಅನಂತಮಾಯಯಾ ಚಾಹಂ ಧಾರಯಾಮಿ ಸ್ವಪಾಮಿ ಚ ॥ ೪೬ ॥

ವರಾಹಮಾಯಾಮಾದಾಯ ಭೂಮೇ ಜಾನಾಸಿ ಕಿಂ ನ ವೈ ॥ ೪೭ ॥

ದೇವಾ ಯತ್ರ ನಿಲೀಯಂತೇ ಸಾ ಮಾಯಾ ಮಮ ಕೀರ್ತಿತಾ ॥ ೪೮ ॥

ತ್ವಂ ಚಾಪಿ ವೈಷ್ಣವೀಂ ಮಾಯಾಂ ಕೃತ್ವಾ ಜಾನಾಸಿ ಕಿಂ ನ ತತ್ ।
ಧಾರಿತಾಸಿ ಚ ಸುಶ್ರೋಣಿ ವಾರಾನ್ಸಪ್ತದಶೈವ ತು ॥ ೪೯ ॥

ಶಾಖವನ್ನುಂಟುಮಾಡುತ್ತದೆ. ಆದರೆ ಕಿರಣಮಯವಾದ ಮಾಯೆಯನ್ನು ಮಾಡಿ ಆದರಿಂದ ಲೋಕವನ್ನೆಲ್ಲಾ ನಾನೇ ತುಂಬುವೆನು.

೪೫. ಪ್ರಳಯಕಾಲದ ಮೋಡಗಳು ಒನಕೆಯ ಗಾತ್ರದ ಧಾರೆಗಳಿಂದ ವರ್ಷಿಸುವುವು. ಆದರೆ ಪ್ರಳಯಮೇಘದ ಮಾಯೆಯನ್ನು ಪಡೆದು, ಸಮಸ್ತ ಜಗತ್ತನ್ನೂ ನಾನೇ ನೀರಿಂದ ತುಂಬುವೆನು.

೪೬. ಧಾರಿಣಿ, ವರಾರೋಹೇ, ಆದಿಶೇಷನಮೇಲೆ ಮಲಗುವೆನಷ್ಟೆ. ಶೇಷನೆಂಬ ಮಾಯೆಯಿಂದ ನನ್ನನ್ನು ನಾನೇ ಧರಿಸಿ ಮಲಗುವೆನು.

೪೭. ಭೂಮೀ, ನಾನು ವರಾಹಮಾಯೆಯನ್ನು ಧರಿಸಿರುವುದನ್ನು ನೀನರಿಯೆಯಾ ? !

೪೮. ದೇವತೆಗಳಿಗೆ ನೆಲೆಯಾದ ಸ್ವರ್ಗ ಅಥವಾ ಅಮರಾವತಿಯೂ ನನ್ನ ಮಾಯೆಯೆನಿಸಿಕೊಳ್ಳುವುದು.

೪೯. ನಾನು ವೈಷ್ಣವಮಾಯೆಯನ್ನು ಮಾಡಿ ನಿನ್ನನ್ನೂ ಹದಿನೇಳುಸಾರಿ ಧರಿಸಿದ್ದೇನೆ. ಸುಶ್ರೋಣಿ ಅದನ್ನು ನೀನು ತಿಳಿಯೆಯಾ !

ಮಾಯಯಾ ತು ಮಮ ದೇವೀಯಂ ಕೃತ್ವಾ ಹ್ಯೇಕಾರ್ಣವಾಂ ಮಹೀಂ |
ಮಮ ಮಾಯಾಬಲಂ ಹ್ಯೇತತ್ ಯೇನ ತಿಷ್ಠಾಮ್ಯಹಂ ಜಲೇ || ೩೦ ||

ಪ್ರಜಾಪತಿಂ ಚ ರುದ್ರಂ ಚ ಸೃಜಾಮಿ ಚ ವಹಾಮಿ ಚ |
ತೇಪಿ ಮಾಯಾಂ ನ ಜಾನಂತಿ ಮಮ ಮಾಯಾವಿಮೋಹಿತಾಃ || ೩೧ ||

ಅಥೋ ಪಿತೃಗಣಾಶ್ಚಾಪಿ ಯೇ ಏತೇ ಸೂರ್ಯವರ್ಚಸಃ |
ಮಾಯಾಂ ಪಿತೃಮಯೀಂ ಹ್ಯೇತಾಂ ಗೃಹ್ಣಾಮೀತಿ ಚ ತತ್ತ್ವತಃ || ೩೨ ||

ಕಿಂತು ತ್ವಮೇವ ಸುಶ್ರೋಣಿ ಅನ್ಯಚ್ಚ ಶೃಣು ಸುಂದರಿ |
ಋಷಿರ್ಮಾಯಾನುಸಾರೇಣ ಸ್ತ್ರಿಯಾ ಯೋನಿಂ ಪ್ರವೇಶಿತಃ || ೩೩ ||

---

೩೦. ದೇವಿ, ಭೂಮಿಯಾದ ನಿನ್ನನ್ನು ಏಕಸಾಗರಳನ್ನಾಗಿ ಮಾಡಿರುವುದೂ ನನ್ನ ಮಾಯೆ. ನಾನು ನೀರಲ್ಲಿ ನಿಂತಿರುವುದೂ ನನ್ನ ಮಾಯೆಯ ಬಲದಿಂದಲೇ.

೩೧. ಬ್ರಹ್ಮನನ್ನೂ, ರುದ್ರನನ್ನೂ ನಾನೇ ಸೃಷ್ಟಿಸುತ್ತೇನೆ. ವಹಿಸುತ್ತೇನೆ. ಆದರೆ ನನ್ನ ಮಾಯೆಯಿಂದ ವಿಮೋಹಿತರಾಗಿರುವ ಅವರೂ ಮಾಯೆಯನ್ನರಿಯರು.

೩೨. ಇದಲ್ಲದೆ ಸೂರ್ಯನಂತೆ ತೇಜಸ್ವಿಗಳಾದ ಪಿತೃವರ್ಗದವರಿರುವರಷ್ಟೆ. ಆದರೆ ನಿಜವಾಗಿ ನಾನೇ ಪಿತೃರೂಪವಾದ ಮಾಯೆಯನ್ನು ಪಡೆಯುವೆನು.

೩೩. ಸುಶ್ರೋಣಿ, ಮತ್ತೊಂದು ವಿಚಾರವನ್ನೂ ನೀನೇ ಕೇಳು. ಸುಂದರಿ, ಒಬ್ಬ ಋಷಿಯು, ಮಾಯೆಯನ್ನನುಸರಿಸಿ ಸ್ತ್ರೀಜನ್ಮವನ್ನು ಪಡೆಯುವಂತೆ ಮಾಡಿದೆನು.

ತತೋ ವಿಷ್ಣೋರ್ವಚಃ ಶ್ರುತ್ವಾ ಶ್ರೋತುಕಾಮಾ ವಸುಂಧರಾ ।
ಕರಾಭ್ಯಾಮಂಜಲಿಂ ಕೃತ್ವಾ ವಾಕ್ಯಮೇತತ್ತದಾಬ್ರವೀತ್ ॥ ೫೪ ॥

ಕಿಂ ತೇನ ಋಷಿಮುಖ್ಯೇನ ಕೃತಂ ಕರ್ಮ ಸುದುಷ್ಕರಂ ।
ಸ್ತ್ರೀತ್ವಂ ಚೈವ ಪುನಃ ಪ್ರಾಪ್ತಂ ಸ್ತ್ರೀಯೋನಿಂ ಚೈವ ಪ್ರಾಪಿತಃ ॥ ೫೫ ॥

ಏತನ್ಮೇ ಸರ್ವಮಾಖ್ಯಾಹಿ ಪರಂ ಕೌತೂಹಲಂ ಮಮ ।
ತಸ್ಯ ಬ್ರಾಹ್ಮಣಮುಖ್ಯಸ್ಯ ಸ್ತ್ರೀತ್ವೇ ಯತ್ಕರ್ಮ ಪಾಪಕಂ ॥ ೫೬ ॥

ತತೋ ಮಹ್ಯಾ ವಚಃ ಶ್ರುತ್ವಾ ಹೃಷ್ಟತುಷ್ಟಮನಾ ಹರಿಃ ।
ಮಧುರಂ ವಾಕ್ಯಮಾದಾಯ ಪ್ರತ್ಯುವಾಚ ವಸುಂಧರಾಂ ॥ ೫೭ ॥

ಶೃಣು ತತ್ವೇನ ಮೇ ದೇವಿ ಧರ್ಮಾಖ್ಯಾನೇ ಚ ಸುಂದರಿ ।
ಮಾಯಾ ಮಮ ವಿಶಾಲಾಕ್ಷಿ ರೋಹಿಣೀಲೋಮಹರ್ಷಿಣೀ ॥ ೫೮ ॥

---

೫೪. ವಿಷ್ಣುವಿನ ಈ ಮಾತನ್ನು ಕೇಳಿದ ಭೂದೇವಿಯು ಆ ಋಷಿಯ ವಿಚಾರವನ್ನು ತಿಳಿಯಬೇಕೆಂದು, ಕೈಗಳನ್ನು ಮುಗಿದುಕೊಂಡು ಮುಂದಿನ ಮಾತನಾಡಿದಳು.

೫೫-೫೬. "ಆ ಋಷಿಶ್ರೇಷ್ಠನು ಯಾವ ಕಷ್ಟಕರವಾದ ಕರ್ಮವನ್ನು ಮಾಡಿದನು? ಏಕೆ ಸ್ತ್ರೀಜನ್ಮವನ್ನು ಪಡೆದನು? ಅವನು ಸ್ತ್ರೀಜನ್ಮವನ್ನು ಪಡೆಯುವಂತೆ ನೀನು ಏಕೆ ಮಾಡಿದೆ? ಆತನು ಸ್ತ್ರೀರೂಪವನ್ನು ಪಡೆಯಲು ಯಾವ ಪಾಪಕರ್ಮವು ಕಾರಣ? ಇದೆಲ್ಲವನ್ನೂ ನನಗೆ ಹೇಳು. ನನಗೆ ಅತಿ ಕುತೂಹಲವಾಗಿದೆ."

೫೭. ಹರಿಯು ಭೂದೇವಿಯ ಮಾತನ್ನು ಕೇಳಿ, ಹರ್ಷತೃಪ್ತಿಗಳಿಂದ ಕೂಡಿದ ಮನವುಳ್ಳವನಾಗಿ, ಇಂಪಾದ ಮಾತುಗಳಿಂದ ಅವಳಿಗೆ ಹೇಳಿದನು.

೫೮. "ದೇವಿ, ನಾನು ಹೇಳುವ ನಿಜವಾದ ಧರ್ಮಚರಿತೆಗಳನ್ನು ಕೇಳು. ಸುಂದರಿ, ವಿಶಾಲಾಕ್ಷೀ, ನನ್ನ ಮಾಯೆಯು ಮಿಂಚಿನಂತೆ ರೋಮಾಂಚವನ್ನುಂಟುಮಾಡುವುದಾಗಿದೆ.

ಮಾಯಾಯಾ ಮಮ ಯೋಗೇನ ಸೋಮಶರ್ಮಾ ಚ ಕರ್ಶಿತಃ ।
ಗತೋ ಗತೀರನೇಕಾಶ್ಚ ಉತ್ತಮಾಧಮಮಧ್ಯಮಾಃ ॥ ೫೯ ॥

ಬ್ರಾಹ್ಮಣತ್ವಂ ಪುನಃ ಪ್ರಾಪ್ತೋ ಮಮ ಮಾಯಾಪ್ರಚೋದಿತಃ ।
ಯಥಾ ಬ್ರಾಹ್ಮಣಮುಖ್ಯೇನ ಪ್ರಾಪ್ತಾ ಸ್ತ್ರೀಯೋನಿರೇವ ಚ ॥ ೬೦ ॥

ನ ತಸ್ಯ ವಿಕೃತಂ ಕರ್ಮ ಅಪರಾಧೋ ನ ವಿದ್ಯತೇ ।
ಮಮೈವಾರಾಧನಪರೋ ಮಮ ಕರ್ಮಪರಾಯಣಃ ॥ ೬೧ ॥

ನಿತ್ಯಂ ಚಿಂತಯತೇ ಭೂಮೇ ಮಮ ಮೂರ್ತಿಂ ಮನೋರಮಾಂ ।
ಅಥ ದೀರ್ಘೇಣ ಕಾಲೇನ ತಸ್ಯ ತುಷ್ಟೋಽಸ್ಮಿ ಸುಂದರಿ ।
ತಪಸಾ ಕರ್ಮಣಾ ಭಕ್ತ್ಯಾ ಅನನ್ಯಮನಸಾ ಸ್ತುತಃ ॥ ೬೨ ॥

---

೫೯ ನನ್ನ ಮಾಯೆಯ ಸಂದರ್ಭದಿಂದ ಸೋಮಶರ್ಮನೆಂಬ ಋಷಿಯು ಕೃಶನಾದನು. ಉತ್ತಮ ಮಧ್ಯಮಾಧಮಗಳಾದ ಹಲವು ಗತಿಗಳನ್ನು ಪಡೆದನು.

೬೦-೬೧. ಮತ್ತೆ ಬ್ರಾಹ್ಮಣತ್ವವನ್ನು ಪಡೆದನು. ನನ್ನ ಮಾಯೆಯ ಪ್ರೇರಣೆಯಿಂದಲೇ ಆ ಬ್ರಾಹ್ಮಣಮುಖ್ಯನು ಸ್ತ್ರೀಜನ್ಮವನ್ನು ಪಡೆದನೇ ಹೊರತು ಅದರಲ್ಲಿ ಅವನ ದುಷ್ಕರ್ಮವಾಗಲಿ, ಅಪರಾಧವಾಗಲಿ ಏನೂ ಇಲ್ಲ. ಅವನು ನನ್ನ ಆರಾಧನೆಯಲ್ಲಿಯೇ ನಿರತನು. ನನ್ನ ಕರ್ಮಗಳಲ್ಲಿ ಆಸಕ್ತನು.

೬೨. ಭೂಮೀ, ಆತನು ನಿತ್ಯವೂ ನನ್ನ ಮನೋಹರವಾದ ಮೂರ್ತಿಯನ್ನು ಧ್ಯಾನಿಸುತ್ತಿದ್ದನು. ಸುಂದರಿ, ನನ್ನಲ್ಲೇ ನೆಲಸಿದ ಮನದಿಂದ ತಪಸ್ಸಿನಿಂದಲೂ, ಕರ್ಮದಿಂದಲೂ, ಭಕ್ತಿಯಿಂದಲೂ, ಸ್ತುತನಾದ ನಾನು ಬಹುಕಾಲದಮೇಲೆ ಅವನಿಗೆ ಒಲಿದೆನು.

ತತಸ್ತಸ್ಯ ಮಯಾ ದೇವಿ ದತ್ವಾ ದರ್ಶನಮುತ್ತಮಂ ।
ವರೇಣ ಛಂದಿತೋ ವಿಪ್ರ ತಪಸ್ತುಷ್ಟೋಽಸ್ಮಿ ತೇ ದ್ವಿಜ ।
ವರಂ ವರಯ ಭದ್ರಂತೇ ತವ ಯದ್ಧೃದಿ ವರ್ತತೇ ॥ ೬೩ ॥

ರತ್ನಾನಿ ಕಾಂಚನಂ ಗಾವಸ್ತಥಾ ರಾಜ್ಯಮಕಂಟಕಂ ।
ಅಥವೇಚ್ಛಸಿ ತಂ ಸ್ವರ್ಗಂ ಯತ್ರ ಸೌಖ್ಯಂ ವರಾಂಗನಾಃ ॥ ೬೪ ॥

ಧನರತ್ನಂ ಸಮೃದ್ಧಂ ಹಿ ಹೇಮಭಾಂಡವಿಭೂಷಿತಂ ।
ಯತ್ರ ಸರ್ವಾ ದಿವ್ಯರೂಪಾ ಭವಂತ್ಯಪ್ಸರಸಃ ಪರಾಃ ।
ದದಾಮಿ ತೇ ವರಂ ವಿಪ್ರ ಯಾವತ್ತೇ ಚಿತ್ತಚಿಂತಿತಂ ॥ ೬೫ ॥

ತತೋ ಮಮ ವಚಃ ಶ್ರುತ್ವಾ ಸ ಚ ಬ್ರಾಹ್ಮಣಪುಂಗವಃ ।
ಶಿರಸಾ ಪತಿತೋ ಭೂಮೌ ಮಾಮುವಾಚ ಪ್ರಿಯಂ ವಚಃ ॥ ೬೬ ॥

---

೬೩. ದೇವಿ, ಬಳಿಕ ಆತನಿಗೆ ಉತ್ತಮಸಂದರ್ಶನವನ್ನಿತ್ತು ವರದಿಂದ ಸಂತೋಷಪಡಿಸಿದೆನು. “ಬ್ರಾಹ್ಮಣನೇ, ನಿನ್ನ ತಪದಿಂದ ತೃಪ್ತನಾಗಿದ್ದೇನೆ. ನಿನ್ನ ಮನದಲ್ಲಿರುವ ವರವನ್ನು ಬೇಡು. ನಿನಗೆ ಮಂಗಳವಾಗಲಿ.

೬೪–೬೫. ರತ್ನಗಳನ್ನೂ, ಸುವರ್ಣವನ್ನೂ, ಹಸುಗಳನ್ನೂ, ನಿಷ್ಕಂಟಕವಾದ ರಾಜ್ಯವನ್ನೂ ಬಯಸುತ್ತೀಯೋ? ಅಥವಾ, ಎಲ್ಲಿ ಸೌಖ್ಯವೂ, ಸುವರ್ಣದ ದೊಡ್ಡಪಾತ್ರೆಗಳಲ್ಲಲಂಕೃತವಾದ ಧನರತ್ನಗಳ ಸಮೃದ್ಧಿಯೂ ಇದೆಯೋ, ಎಲ್ಲಿರುವ ಉತ್ತಮಾಂಗನೆಯರೆಲ್ಲರೂ ದಿವ್ಯರೂಪದ ಅಪ್ಸರಸಿಯರೋ ಆ ಸ್ವರ್ಗವನ್ನು ಬಯಸುತ್ತೀಯೋ? ಬ್ರಾಹ್ಮಣನೇ, ನಿನ್ನ ಮನಸ್ಸಿಗೆ ಬೇಕಾದ ವರವನ್ನು ಕೊಡುತ್ತೇನೆ.” ಎಂದೆನು.

೬೬. ನನ್ನ ಮಾತನ್ನು ಕೇಳಿ, ಬಳಿಕ ಆ ಬ್ರಾಹ್ಮಣೋತ್ತಮನು ನನಗೆ ಭೂಮಿಯಮೇಲೆ ಅಡ್ಡಬಿದ್ದು ವಂದಿಸಿ, ಹಿತವಾದ ಮಾತನಾಡಿದನು.

ಅಥ ನೋ ಕುಪ್ಯಸೇ ದೇವ ವರಂ ಸಮನುಯಾಚತೇ ।
ಯತ್ತ್ವಯಾ ಭಾಷಿತಂ ದೇವ ಮಮ ದೇಯಂ ಯದೃಚ್ಛಯಾ ॥ ೬೭ ॥

ನ ಚಾಹಂ ಕಾಂಚನಂ ಗಾವೋ ನ ಚ ಸ್ತ್ರೀರಾಜ್ಯಮೇವ ಚ ।
ಸ್ವರ್ಗಂ ವಾಪ್ಸರಸೋ ವಾಪಿ ಐಶ್ವರ್ಯಂ ನ ಮನೋಹರಂ ॥ ೬೮ ॥

ತಥಾ ಸ್ವರ್ಗಸಹಸ್ರಾಣಾಮೇಕಂ ಚಾಪಿ ನ ರೋಚತೇ ।
ಜ್ಞಾತುಮಿಚ್ಛಾಮಿ ತೇ ಮಾಯಾಂ ಯಯಾ ಕ್ರೀಡಸಿ ಮಾಧವ ॥ ೬೯ ॥

ತತಸ್ತಸ್ಯ ವಚಃ ಶ್ರುತ್ವಾ ಸ ಮಯಾ ತತ್ರ ಭಾಷಿತಃ ।
ಕಿಂ ಮಾಯಯಾ ತೇ ವಿಪ್ರೇಂದ್ರ ಅಕಾರ್ಯಂ ಪೃಚ್ಛಸೇ ದ್ವಿಜ ॥ ೭೦ ॥

ದೇವಾ ಅಪಿ ನ ಜಾನಂತಿ ವಿಷ್ಣುಮಾಯಾವಿಮೋಹಿತಾಃ ॥ ೭೧ ॥

೬೭-೬೮. "ದೇವ, ನೀನು ಕೋಪಿಸದಿದ್ದರೆ ನಾನು ವರವನ್ನು ಬೇಡುವೆನು, ದೇವ, ನನಗೆ ಕೊಡುವುದಾಗಿ ಅಕಸ್ಮಾತ್ತಾಗಿ ನೀನು ಯಾವುದನ್ನು ಹೇಳಿದೆಯೋ ಆ ಸುವರ್ಣವಾಗಲಿ, ಹಸುಗಳಾಗಲಿ, ಸ್ತ್ರೀಯರಾಗಲಿ, ರಾಜ್ಯವಾಗಲಿ, ಐಶ್ವರ್ಯವಾಗಲಿ, ಸ್ವರ್ಗವಾಗಲಿ, ಅಪ್ಸರಸ್ತ್ರೀಯರಾಗಲಿ ನನಗೆ ಮನೋಹರರಲ್ಲ.

೬೯. ಅಂತಹ ಸಾವಿರ ಸ್ವರ್ಗಗಳಲ್ಲಿ ಒಂದೂ ನನಗೆ ಇಷ್ಟವಿಲ್ಲ. ಮಾಧವಾ, ಯಾವುದರಿಂದ ನೀನು ವಿನೋದಪಡುವೆಯೋ ಆ ನಿನ್ನ ಮಾಯೆಯನ್ನು ತಿಳಿಯಲು ಇಚ್ಛಿಸುತ್ತೇನೆ."

೭೦-೭೧. ಅವನ ಮಾತನ್ನು ಕೇಳಿದಮೇಲೆ ನಾನು, "ವಿಪ್ರೇಂದ್ರನೇ, ಮಾಯೆಯಿಂದ ನಿನಗೇನು ? ಅಕಾರ್ಯವನ್ನು ಪ್ರಶ್ನಿಸುತ್ತೀಯೆ. ವಿಷ್ಣು ಮಾಯಾ ಮೋಹಿತರಾದ ದೇವತೆಗಳೂ ಅದನ್ನರಿಯರು" ಎಂದು ಹೇಳಿದೆನು.

ತತೋ ಮಮ ವಚಃ ಶ್ರುತ್ವಾ ಸ ಚ ಬ್ರಾಹ್ಮಣಪುಂಗವಃ ।
ಉವಾಚ ಮಧುರಂ ವಾಕ್ಯಂ ಮಾಯಯಾ ಚ ಪ್ರಚೋದಿತಃ ॥ ೭೨ ॥

ಯದಿ ತುಷ್ಟೋಽಸಿ ಮೇ ದೇವ ಕರ್ಮಣಾ ತಪಸಾಥವಾ ।
ತವ ದೇವ ಪ್ರಸಾದೇನ ಮನ್ಯೈವಂ ದೀಯತಾಂ ವರಃ ॥ ೭೩ ॥

ತತಸ್ತು ಸ ಮಯಾ ಪ್ರೋಕ್ತಸ್ತಪಸ್ವೀ ಬ್ರಾಹ್ಮಣಸ್ತಥಾ ।
ಗಚ್ಛ ಕುಬ್ಜಾಮ್ರಕೇ ಗಂಗಾಂಸ್ನಾತೋ ಮಾಯಾಂ ತು ಗಚ್ಛಸಿ ॥ ೭೪ ॥

ಮಮೈವಂ ವಚನಂ ಶ್ರುತ್ವಾ ಕೃತ್ವಾ ಚೈವ ಪ್ರದಕ್ಷಿಣಂ ।
ದೇವಿ ಕುಬ್ಜಾಮ್ರಕೇ ವಿಪ್ರೋ ಮಮ ಮಾಯಾಭಿಲಾಷುಕಃ ॥ ೭೫ ॥

ತತಃ ಕುಂಡೀಂ ತ್ರಿದಂಡಂ ಚ ಮಾತ್ರಾಭಾಂಡಂ ಚ ಯತ್ನತಃ ।
ಸ್ಥಾಪಯಿತ್ವಾ ಯಥಾನ್ಯಾಯಂ ತೀರ್ಥಮಾರಾಧಯದ್ಯಥಾ ॥ ೭೬ ॥

ತತೋ ಹ್ಯವತರದ್ಗಂಗಾಂ ವಿಧಿದೃಷ್ಟೇನ ಕರ್ಮಣಾ ॥ ೭೭ ॥

೭೨-೭೩. ನನ್ನ ಮಾತನ್ನು ಕೇಳಿ, ಆ ಬ್ರಾಹ್ಮಣೋತ್ತಮನು ಮಾಯೆಯಿಂದ ಪ್ರೇರಿತನಾಗಿ, "ದೇವ, ನೀನು ನನ್ನ ಕರ್ಮದಿಂದಲೋ, ತಪಸ್ಸಿನಿಂದಲೋ ಸಂತುಷ್ಟನಾಗಿದ್ದರೆ ಅನುಗ್ರಹದಿಂದ ನನಗೆ ಈ ವರವನ್ನೇ ದಯಪಾಲಿಸು'' ಎಂದು ಇನಿದಾದ ಮಾತನಾಡಿದನು.

೭೪. ಬಳಿಕ ನಾನು ತಪಸ್ವಿಯಾದ ಆ ಬ್ರಾಹ್ಮಣನಿಗೆ "ಕುಬ್ಜಾಮ್ರಕ ಕ್ಷೇತ್ರಕ್ಕೆ ಹೋಗು. ಅಲ್ಲಿ ಗಂಗೆಯಲ್ಲಿ ಸ್ನಾನಮಾಡಿ, ಮಾಯೆಯನ್ನು ಪಡೆಯುವೆ'' ಎಂದು ಹೇಳಿದೆನು.

೭೫-೭೭. 'ದೇವಿ, ನನ್ನ ಮಾತನ್ನು ಕೇಳಿ, ನನ್ನ ಮಾಯೆಯನ್ನು ತಿಳಿಯಲು ಅಭಿಲಾಷೆಯುಳ್ಳ ಆ ಬ್ರಾಹ್ಮಣನು, ನನಗೆ ಪ್ರದಕ್ಷಿಣಮಾಡಿ, ಬಳಿಕ ಕುಬ್ಜಾಮ್ರಕಕ್ಕೆ ಹೋಗಿ, ತನ್ನ ಕಮಂಡಲ ತ್ರಿದಂಡಗಳನ್ನೂ, ದ್ರವ್ಯಪಾತ್ರೆ ಅಥವಾ ಚೀಲವನ್ನೂ ಪ್ರಯತ್ನದಿಂದ ಸರಿಯಾದೆಡೆಯಲ್ಲಿಟ್ಟು, ವಿಧಿಯಂತೆ ತೀರ್ಥವನ್ನಾರಾಧಿಸಿ, ಬಳಿಕ ಶಾಸ್ತ್ರದಲ್ಲಿ ಹೇಳಿರುವಂತೆ ಗಂಗೆಯಲ್ಲಿಳಿದನು.

ಅವಗಾಹ್ಯ ತತೋ ಗಂಗಾಂ ಸರ್ವಗಾತ್ರೇ ಚ ಕ್ಲೇದಿತೇ ।
ತಾವನ್ನಿಷಾದಸದನೇ ತತ್ಸ್ತ್ರೀಗರ್ಭೇ ಗತೋಽಭವತ್ ॥ ೭೮ ॥

ಹೃದಯೇಽಚಿಂತಯತ್ತತ್ರ ಗರ್ಭಕ್ಲೇಶೇನ ಪೀಡಿತಃ ॥ ೭೯ ॥

ಅಹೋ ಕಷ್ಟಂ ಮಯಾ ಕಿಂಸ್ವಿತ್ಕರ್ಮ ವಾ ದುಷ್ಕೃತಂ ಕೃತಂ ।
ಯೋಽಹಂ ನಿಷಾದಗರ್ಭೇಽಸ್ಮಿನ್ ವಸಾಮಿ ನರಕೇಷು ಚ ॥ ೮೦ ॥

ಧಿಕ್ ತಪೋ ಧಿಕ್ಚ ಮೇ ಕರ್ಮ ಧಿಕ್ಫಲಂ ಧಿಕ್ಚ ಜೀವಿತಂ ।
ಯೋಽಹಂ ನಿಷಾದಗರ್ಭೇಽಸ್ಮಿನ್ಪೀಡಿತೋ ಮಲಸಂಕುಲೇ ।
ಅಸ್ಥ್ನಾಂ ತ್ರಿಶತಸಂಕೀರ್ಣೇ ನವದ್ವಾರಾಭಿಸಂವೃತೇ ॥ ೮೧ ॥

ಪುರೀಷಮೂತ್ರಸಂಕೀರ್ಣೇ ಮಾಂಸಶೋಣಿತಕರ್ದಮೇ ।
ದುರ್ಗಂಧೇ ದುಸ್ಸಹೇ ಚೈವ ವಾತಿಕಶ್ಲೇಷ್ಮಪೈತ್ತಿಕೇ ।
ಬಹುರೋಗಸಮಾಕೀರ್ಣೇ ಬಹುದುಃಖಸಮಾಕುಲೇ ॥ ೮೨ ॥

---

೭೮. ಬಳಿಕ ಗಂಗೆಯಲ್ಲಿ ಮುಳುಗಿ ಸರ್ವಾವಯವಗಳನ್ನೂ ಒದ್ದೆಯಾಗಿ ಮಾಡಿದ ಕೂಡಲೆ ಆತನು ಒಬ್ಬ ಬೇಡನ ಮನೆಯಲ್ಲಿ ಅವನ ಹೆಂಡತಿಯ ಗರ್ಭದಲ್ಲಿ ಸೇರಿದನು.

೭೯-೮೦. ಅಲ್ಲಿ ಗರ್ಭಕ್ಲೇಶದಿಂದ ಪೀಡಿತನಾಗಿ ಮನಸ್ಸಿನಲ್ಲಿ ಹೀಗೆ ಯೋಚಿಸಿದನು. "ಅಯ್ಯೋ ಕಷ್ಟ. ನಾನು ಯಾವ ದುಷ್ಕರ್ಮವನ್ನು ತಾನೆ ಮಾಡಿದೆನು! ನಾನು ಬೇಡಿತಿಯ ಈ ಗರ್ಭವೆಂಬ ನರಕಗಳಲ್ಲಿ ವಾಸಮಾಡುವೆನಲ್ಲಾ !

೮೧-೮೨. ಛೀ, ನನ್ನ ತಪಸ್ಸೂ, ಕರ್ಮವೂ, ಫಲವೂ, ಜೀವನವೂ ನಿಂದ್ಯವಾದುದು. ಏಕೆಂದರೆ ನಾನು, ಕೊಳೆಯಿಂದಲೂ, ಮುನ್ನೂರು ಎಲುಬುಗಳಿಂದಲೂ, ಮಲಮೂತ್ರಗಳಿಂದಲೂ, ತುಂಬಿ, ಒಂಬತ್ತು ರಂಧ್ರಗಳುಳ್ಳದಾಗಿ, ಮಾಂಸರಕ್ತಗಳ ಕೆಸರೂ, ಸಹಿಸಲಾಗದ ನಾತವೂ, ವಾತಪಿತ್ತಶ್ಲೇಷ್ಮಗಳೂ ಉಳ್ಳದಾಗಿ ಬಹು ರೋಗದುಃಖಗಳಿಂದ ತುಂಬಿರುವ ಈ ಬೇಡಿತಿಯ ಬಸಿರಿನಲ್ಲಿ ತೊಂದರೆಪಡುತ್ತಿದ್ದೇನೆ.

ಅಹಂ ಕಿಂ ತೇನ ಚೋಕ್ತೇನ ದುಃಖಾನ್ಯನುಭವಾಮಿ ಚ ।
ಕುತೋ ವಿಷ್ಣುಃ ಕುತೋ ವಾಹಂ ಕುತೋ ಗಂಗಾಜಲಾನಿ ಚ ॥ ೮೩ ॥

ಗರ್ಭಸಂಸಾರನಿಷ್ಕ್ರಾಂತಃ ಪಶ್ಚಾದಾಪ್ಸ್ಯಾಮಿ ತಾಂ ಕ್ರಿಯಾಂ ।
ಏವಂ ಚಿಂತಯಮಾನಸ್ತು ಶೀಘ್ರಂ ಗರ್ಭಾದ್ವಿನಿಸ್ಸೃತಃ ॥ ೮೪ ॥

ಭೂಮ್ಯಾಂ ತುಂ ಪತತಸ್ತಸ್ಯ ನಷ್ಟಂ ತತ್ಪೂರ್ವಚಿಂತನಂ ।
ಅಜಾಯತ ತತಃ ಕನ್ಯಾ ನಿಷಾದಸ್ಯ ಗೃಹೇ ತದಾ ॥ ೮೫ ॥

ಧನಧಾನ್ಯಸಮೃದ್ಧಸ್ಯ ಬ್ರಾಹ್ಮಣೋ ವರ್ತತೇ ಸ ಚ ।
ನ ಚ ಸಂಜ್ಞಾಯತೇ ಕಿಂಚಿತ್ ವಿಷ್ಣುಮಾಯಾ ವಿಮೋಹಿತಃ ॥ ೮೬ ॥

ಅಥ ದೀರ್ಘಸ್ಯ ಕಾಲಸ್ಯ ಕೃತೋದ್ವಾಹಾ ಯಶಸ್ವಿನಿ ।
ಪುತ್ರಾನ್ದುಹಿತರಶ್ಚೈವ ಜನಯಾಮಾಸ ಮಾಯಯಾ ॥ ೮೭ ॥

೮೩-೮೪. ನಾನು ಆ ವಿಷ್ಣುವಿನ ಮಾತಿನಿಂದ ದುಃಖಗಳನ್ನು ಅನುಭವಿಸುತ್ತೇನೇನೋ! ಆ ವಿಷ್ಣುವೆಲ್ಲಿ! ನಾನೆಲ್ಲಿ! ಗಂಗೆಯ ತೀರ್ಥಗಳೆಲ್ಲಿ! ಇರಲಿ! ಈ ಗರ್ಭಸಂಸಾರದಿಂದ ಹೊರಹೊರಟು ಆ ಕೆಲಸವನ್ನು ಮಾಡುವೆನು" ಹೀಗೆ ಯೋಚಿಸುವವನಾಗಿ ಬೇಗನೆ ಗರ್ಭದಿಂದ ಹೊರಗೆ ಬಂದನು.

೮೫. ಭೂಮಿಗೆ ಬಿದ್ದನೋ ಇಲ್ಲವೋ, ಅವನು ಗರ್ಭದಲ್ಲಿ ಮೊದಲು ಚಿಂತಿಸಿದುದೆಲ್ಲವೂ ಮರೆತುಹೋಯಿತು. ಬೇಡನ ಮನೆಯಲ್ಲಿ ಹೆಣ್ಣಾಗಿ ಜನಿಸಿದನು.

೮೬. ಧನಧಾನ್ಯಸಮೃದ್ಧಿಯುಳ್ಳ ಬೇಡನ ಮನೆಯಲ್ಲಿ ಹೆಣ್ಣಾಗಿರುವ ಆ ಬ್ರಾಹ್ಮಣನು ವಿಷ್ಣುಮಾಯೆಯಿಂದ ವಿಮೋಹಿತನಾಗಿದ್ದುದರಿಂದ ತನ್ನ ಹಿಂದಿನ ವಿಚಾರವಾವುದನ್ನೂ ಸ್ವಲ್ಪವೂ ಅರಿಯಲಿಲ್ಲ.

೮೭. ಬಳಿಕ ಬಹುಕಾಲದಮೇಲೆ ಮದುವೆಯಾದ ಆ ಕೀರ್ತಿವಂತೆಯು ಮಾಯೆಯಿಂದ ಗಂಡುಮಕ್ಕಳನ್ನೂ ಹೆಣ್ಣುಮಕ್ಕಳನ್ನೂ ಪಡೆದಳು.

ಭಕ್ಷ್ಯಾಭಕ್ಷ್ಯಂ ಚ ಖಾದೇತ ಪೇಯಾಪೇಯಂ ಚ ತತ್ಪಿಬೇತ್ |
ಜೀವಾನಿ ಚೈವ ಸತತಂ ಘಾತಿತಾನಿ ತತಸ್ತತಃ || ೮೮ ||

ಕಾರ್ಯಾಕಾರ್ಯಂ ನ ಜಾನೀತೇ ವಾಚ್ಯಾವಾಚ್ಯಂ ತಥೇತಿ ಚ |
ಗಮ್ಯಾಗಮ್ಯಂ ನ ಜಾನಾತಿ ಮಾಯಾಜಾಲೇನ ಮೋಹಿತಾ || ೮೯ ||

ಪಂಚಾಶದ್ವರ್ಷಕೇ ಕಾಲೇ ಮಾಯಾಖ್ಯಾತಸ್ಯ ತು ದ್ವಿಜಃ |
ಘಟಂ ಗೃಹೀತ್ವಾ ವಿಕ್ಲಿಷ್ಟವಸ್ತ್ರಕ್ಷಾಲನಕಾರಣಾತ್ || ೯೦ ||

ತೀರೇ, ನಿಕ್ಷಿಪ್ಯ ವಸ್ತ್ರಂ ಸ ಘಟಂ ಚ ವಿನಿಧಾಯ ಹಿ |
ಸ್ನಾತುಂ ಗಂಗಾಜಲೇ ಸ್ಥಿತ್ವಾ ವಿಗಾಹಯತಿ ಜಾಹ್ನವೀಂ || ೯೧ ||

ಪ್ರಸ್ವೇದಘರ್ಮಸಂತಪ್ತಃ ಸ ಶಿರಸ್ನಾನಮೀಹತೇ || ೯೨ ||

---

೮೮. ಆಕೆ ಭಕ್ಷ್ಯಾಭಕ್ಷ್ಯಗಳನ್ನೆಲ್ಲಾ ತಿನ್ನುವಳು. ಪೇಯಾಪೇಯಗಳೆಲ್ಲವನ್ನೂ ಕುಡಿಯುವಳು. ಬರಬರುತ್ತ ಯಾವಾಗಲೂ ಪ್ರಾಣಿಗಳನ್ನೂ ಕೊಲ್ಲುವಳು.

೮೯. ಮಾಯಾಜಾಲದಿಂದ ಮೋಹಿತಳಾದ ಆಕೆ, ಮಾಡಬೇಕಾದುದು ಮಾಡಬಾರದುದನ್ನಾಗಲಿ, ಹೇಳಬಹುದಾದುದು ಹೇಳಬಾರದುದನ್ನಾಗಲಿ, ಹೋಗಬೇಕಾದ ಮತ್ತು ಹೋಗಬಾರದೆಡೆಗಳನ್ನಾಗಲಿ ಅರಿಯಳು.

೯೦-೯೨. ಹಿಂದೆ ಬ್ರಾಹ್ಮಣನಾಗಿದ್ದ ಆ ಬೇಡಿತಿಯು ಅವಳಿಗೆ ಐವತ್ತು ವರ್ಷ ವಯಸ್ಸಾದಾಗ, ಮಾಯೆಯಿಂದ ಪ್ರೇರಿತಳಾಗಿ ಕೊಡವನ್ನು ತೆಗೆದುಕೊಂಡು, ಮಲದ ಬಟ್ಟೆಗಳನ್ನು ಒಗೆಯುವುದಕ್ಕಾಗಿ ಗಂಗೆಗೆ ಬಂದು, ಬಟ್ಟೆಯನ್ನೂ, ಕೊಡವನ್ನೂ ದಡದಲ್ಲಿಟ್ಟು, ಸ್ನಾನಮಾಡುವುದಕ್ಕಾಗಿ ಗಂಗೆಯ ನೀರಲ್ಲಿ ನಿಂತುಕೊಂಡು, ಬಿಸಿಲಿನಿಂದ ಬೆವತು ಬಳಲಿದ್ದುದರಿಂದ ತಲೆಗೂ ಸ್ನಾನ ಮಾಡಬೇಕೆಂದು, ಗಂಗೆಯಲ್ಲಿ ಮುಳುಗಿದಳು.

ಜಾತಸ್ತಪೋಧನಸ್ತತ್ರ ದಂಡೀ ಕುಂಡೀಧರಃ ಪುನಃ ॥ ೯೩ ॥

ಯತ್ರ ಪಶ್ಯತಿ ವಿಪ್ರೋಽಸೌ ಮಾತ್ರಾಂ ಕುಂಡೀಂ ತ್ರಿದಂಡಕಂ ।
ವಸ್ತ್ರಾದಿ ದರ್ಶಿತಂ ಚೈವ ಯತ್ರ ಸಂಸ್ಥಾಪಿತಂ ಪುರಾ ॥
ತತ್ತೇನ ಸರ್ವಂ ಸಂದೃಷ್ಟಂ ಜಾತೇ ಜ್ಞಾನೇ ತು ಪೂರ್ವವತ್ ॥ ೯೪ ॥

ವಿಪ್ರೇಣ ಜ್ಞಾತುಕಾಮೇನ ವಿಷ್ಣುಮಾಯಾಂ ಯಥಾ ಪುರಾ ।
ತತ ಉತ್ತರತಸ್ತತ್ರ ಗಂಗಾಯಾಂ ತು ತಪೋಧನಃ ॥ ೯೫ ॥

ವಾಸೋ ಗೃಹ್ಣಾತಿ ಸವ್ರೀಡೋ ಯೋಗಂ ಚ ಪರಿಚಿಂತಯನ್ ।
ಉಪವಿಶ್ಯ ಚ ಗಂಗಾಯಾಃ ಪುಲಿನೇ ಸಮವಾಲುಕೇ ॥
ತತೋ ನಿಂದತಿ ಚಾತ್ಮಾನಂ ತಪಸಾ ಯತ್ತದಾ ಕೃತಂ ॥ ೯೬ ॥

ಮಯಾ ಕಿಂ ಕರ್ಮ ಪಾಪೇನ ಕೃತಂ ನಿಂದ್ಯಂ ಸುದುಷ್ಕರಂ ।
ಏವಂ ನಿಂದತಿ ಚಾತ್ಮಾನಂ ಧಿಕ್ಕುರ್ವನ್ಸಾಧುದೂಷಿತಂ ॥ ೯೭ ॥

---

೯೩. ಮುಳುಗಿದೊಡನೆಯೇ ಆಕೆಯು ಅಲ್ಲಿ ಮತ್ತೆ, ದಂಡಕಮಂಡಲಗಳನ್ನು ಧರಿಸುವ ಹಿಂದಿನ ಋಷಿಯಾದಳು.

೯೪. ಆ ಬ್ರಾಹ್ಮಣಋಷಿಗೆ ಪೂರ್ವದಂತೆ ಜ್ಞಾನವುಂಟಾದುದರಿಂದ ಹಿಂದೆ ತಾನು ಎಲ್ಲಿಟ್ಟಿದ್ದನೋ ಅಲ್ಲಿ ನೋಡಲಾಗಿ ವಸ್ತ್ರವಸ್ತುಭಾಂಡಕಮಂಡಲು ತ್ರಿದಂಡಗಳು ಅಲ್ಲೇ ಕಾಣಿಸಿದುವು. ಹಿಂದಿನಂತೆಯೇ ಎಲ್ಲವನ್ನೂ ನೋಡಿದನು.

೯೫-೯೬. ಬಳಿಕ ಹಿಂದಿನಂತೆಯೇ ವಿಷ್ಣುಮಾಯೆಯನ್ನು ತಿಳಿಯಲು ಬಯಸಿದ ಆ ತಪಸ್ವಿಯು ಗಂಗೆಯ ಉತ್ತರ ದಡದಲ್ಲಿದ್ದ ತನ್ನ ವಸ್ತ್ರವನ್ನು ಲಜ್ಜೆಯಿಂದ ತೆಗೆದುಕೊಂಡನು. ಯೋಗವನ್ನು ಚಿಂತಿಸುತ್ತ ಗಂಗೆಯ ಮರಳು ದಿಣ್ಣೆಯಲ್ಲಿ ಕುಳಿತುಕೊಂಡು ಬಳಿಕ ತನ್ನನ್ನೂ, ತನ್ನ ತಪಸ್ಸಿನಿಂದ ಆಗ ಆದುದನ್ನೂ ಅರಿತನು.

೯೭, "ಪಾಪಿಯಾದ ನಾನು, ಮಾಡಲು ಕಷ್ಟವೂ, ನಿಂದ್ಯವೂ ಆದ ಯಾವ ಕರ್ಮವನ್ನು ಮಾಡಿದೆನೋ! ಛೀ!" ಎಂದು ತನ್ನನ್ನು ದೂಷಿತನನ್ನಾಗಿ ಚೆನ್ನಾಗಿ ನಿಂದಿಸಿಕೊಂಡನು.

ಆಚಾರೋ ವಾ ಪರಿಭ್ರಷ್ಟೋ ಯೇನಾಹಂ ಪ್ರಾಪಿತಸ್ತ್ವಿಮಾಂ ।
ನಿಷಾದಸ್ಯ ಕುಲೇ ಜಾತೋ ಭಕ್ಷ್ಯಾಭಕ್ಷ್ಯಾಶ್ಚ ಭಕ್ಷಿತಾಃ ॥ ೯೮ ॥

ಜೀವಾಶ್ಚ ಘಾತಿತಾಸ್ಸರ್ವೇ ಜಲಸ್ಥಲದಿವೌಕಸಃ ।
ಪೇಯಾಪೇಯಂ ಚ ಮೇ ಪೀತಂ ವಿಕ್ರೀತಾಶ್ಚಾಪ್ಯವಿಕ್ರೇಯಾಃ ॥ ೯೯ ॥

ಅಗಮ್ಯಗಮನಂ ಚೈವ ವಾಚ್ಯಾವಾಚ್ಯಂ ನ ರಕ್ಷಿತಂ ।
ವೇಶ್ಮನ್ಯಭೋಜ್ಯಭೋಜ್ಯಂ ಚ ಭುಕ್ತಂ ಚೈವ ನ ಸಂಶಯಃ ॥ ೧೦೦ ॥

ಪುತ್ರಾ ದುಹಿತರಶ್ಚೈವ ನಿಷಾದಾಜ್ಜನಿತಾ ಮಯಾ ।
ತತಃ ಕಿಂ ಚಾಪರಾಧಂ ವಾ ಕೇನ ವಾ ತದ್ವಿಚಿಂತಯೇ ॥ ೧೦೧ ॥

ಯೇನಾಹಂ ಪ್ರಾಪಿತೋ ಹ್ಯೇನಾಂ ನೈಷಾದೀಮೀದೃಶೀಂ ದಶಾಂ ॥ ೧೦೨ ॥

ಏತಸ್ಮಿನ್ನಂತರೇ ಭೂಮೇ ನಿಷಾದಃ ಕ್ರೋಧಮೂರ್ಛಿತಃ ।
ಪುತ್ರೈಃ ಪರಿವೃತಸ್ತತ್ರ ಮಾಯಾತೀರ್ಥಮುಪಾಗತಃ ॥ ೧೦೩ ॥

೯೮-೧೦೨. "ನಾನು ಏತರಿಂದ ಈ ಸ್ಥಿತಿಯನ್ನು ಪಡೆದೆನೋ ?! ಆಚಾರವೋ ಹಾಳಾಯಿತು. ಬೇಡರ ಕುಲದಲ್ಲಿ ಹುಟ್ಟಿದೆನು. ಭಕ್ಷ್ಯಾಭಕ್ಷ್ಯಗಳನ್ನು ತಿಂದೆನು. ಜಲಭೂಮ್ಯಾಕಾಶಚರಗಳಾದ ಪ್ರಾಣಿಗಳನ್ನು ಕೊಂದೆನು. ಕುಡಿಯಬಾರದುದನ್ನೂ ಕುಡಿದೆನು. ಮಾರಬಾರದುದನ್ನು ಮಾರಿದೆನು. ಅಗಮ್ಯಗಮನವನ್ನು ಮಾಡದೆಯೂ, ಆಡಬಾರದುದನ್ನು ಆಡದೆಯೂ ಇರಲಿಲ್ಲ. ಮನೆಯಲ್ಲಿ ಉಣ್ಣಬಾರದುದನ್ನು ಉಂಡುದರಲ್ಲಿ ಸಂದೇಹವಿಲ್ಲ. ಬೇಡನಿಂದ ಗಂಡುಮಕ್ಕಳನ್ನೂ ಪಡೆದೆನು. ಈ ಬಗೆಯ ಬೇಡಿತಿಯ ದೆಸೆಯು ನನಗೆ ಏತರಿಂದುಂಟಾಯಿತೋ ?! ಅಂತಹ ಯಾವ ತಪ್ಪನ್ನು ಮಾಡಿದೆನೊ ! ಅದನ್ನು ಚಿಂತಿಸುತ್ತೇನೆ" ಎಂದುಕೊಳ್ಳುತ್ತಿದ್ದನು.

೧೦೩. ಭೂದೇವಿ, ಈ ನಡುವೆ ಸಿಟ್ಟಿನಿಂದ ವೈಮರೆತ ಬೇಡನು ಮಕ್ಕಳೊಡಗೂಡಿ ಆ ಮಾಯಾತೀರ್ಥಕ್ಕೆ ಬಂದನು.

ತತೋ ಮೃಗಯತೇ ಭಾರ್ಯಾಂ ಭಕ್ತಿಯುಕ್ತಾಂ ಶುಭೇಕ್ಷಣಾಂ ॥ ೧೦೪ ॥

ಪರಿಪೃಚ್ಛತಿ ಚೈಕೈಕಂ ತಪ್ಯಮಾನಂ ತಪೋಧನಂ ।
ಕಿಂ ನು ಪಶ್ಯಥ ಭಾರ್ಯಾಂ ಮೇ ಗಂಗಾತೀರಮುಪಾಗತಾಂ ॥
ಘಟಮಾದಾಯ ಹಸ್ತೇನ ಆಗತಾಂ ಜಲಕಾರಣಾತ್ ॥ ೧೦೫ ॥

ತತ್ರೈವ ಚ ನರಾಸ್ಸರ್ವೇ ಮಾಯಾತೀರ್ಥಮುಪಾಗತಾಃ ॥
ಪಶ್ಯಂತ್ಯತ್ರ ಪರಿವ್ರಾಜಂ ಕುಂಭಂ ಚೈವ ಯಥಾಸ್ಥಿತಂ ॥ ೧೦೬ ॥

ತತೋಃ ದುಃಖೇನ ಸಂತಪ್ತಃ ಅಪಶ್ಯಂಶ್ಚ ಸ್ವಕಾಂ ಪ್ರಿಯಾಂ ।
ದೃಷ್ಟ್ವಾ ಪಟಂ ಚ ಕುಂಭಂ ಚ ಕರುಣಂ ಪರ್ಯವೇದಯತ್ ॥ ೧೦೭ ॥

ಇದಂ ವಾಸಶ್ಚ ಕುಂಭಶ್ಚ ನದೀಕೂಲೇ ಚ ತಿಷ್ಠತಿ ।
ನ ಚಾಪಿ ದೃಶ್ಯತೇ ಭಾರ್ಯಾ ಗಂಗಾತೀರಮುಪಾಗತಾ ॥ ೧೦೮ ॥

---

೧೦೪. ಅಲ್ಲಿ ಅವನು ಶುಭನೇತ್ರೆಯೂ, ಭಕ್ತಿಯುತಳೂ ಆದ ತನ್ನ ಹೆಂಡತಿಯನ್ನು ಹುಡುಕಿದನು.

೧೦೫. ಅಲ್ಲಿ ತಪಸ್ಸು ಮಾಡುತ್ತಿದ್ದ ಒಬ್ಬೊಬ್ಬ ಋಷಿಯನ್ನೂ ಅವನು, "ಕೈಯಲ್ಲಿ ಕೊಡವನ್ನು ಹಿಡಿದುಕೊಂಡು, ನೀರಿಗಾಗಿ ಗಂಗೆಯ ಹತ್ತಿರ ಬಂದ ನನ್ನ ಹೆಂಡತಿಯನ್ನು ನೋಡಿದಿರಾ ?" ಎಂದು ಕೇಳಿದನು.

೧೦೬. ಅಲ್ಲಿ ಮಾಯಾತೀರ್ಥಕ್ಕೆ ಬಂದವರೆಲ್ಲರೂ, ಹೊಸ ಋಷಿಯನ್ನೂ, ಇಟ್ಟಂತೆಯೇ ಇದ್ದ ಕೊಡವನ್ನೂ ನೋಡಿದರು.

೧೦೭. ಬೇಡನು ತನ್ನ ಪ್ರಿಯೆಯನ್ನು ಕಾಣದೆ, ಅಲ್ಲಿದ್ದ ಬಟ್ಟೆಯನ್ನೂ, ಕೊಡವನ್ನೂ ಮಾತ್ರ ಕಂಡು, ದುಃಖದಿಂದ ಬೆಂದು, ಕರುಣೆಯುಂಟಾಗುವಂತೆ ಅತ್ತನು.

೧೦೮. "ಈ ಬಟ್ಟೆಯೂ, ಕೊಡವೂ ಹೊಳೆಯ ದಡದಲ್ಲಿಯೇ ಇದೆ. ಇಲ್ಲಿಗೆ ಬಂದ ಹೆಂಡತಿಯು ಕಾಣಿಸುವುದಿಲ್ಲ.

ಅಥ ಕೇನಾಪಿ ಗ್ರಾಹೇಣ ಸ್ನಾಯಮಾನಾ ತಪಸ್ವಿನೀ ।
ಗೃಹೀತಾ ತೋಯಮಧ್ಯಂ ತು ಜಿಹ್ವಾಲೋಲೇನ ಚಾಬಲಾ ॥ ೧೦೯ ॥

ಅಥವಾಪಿ ಪಿಶಾಚೇನ ಭಕ್ಷಿತಾ ಭೂತರಾಕ್ಷಸೈಃ ।
ಆಕೃಷ್ಟಾ ಕಿಂ ನು ರೋಗೇಣ ಗಂಗಾತೀರಂ ಸಮಾಶ್ರಿತಾ ॥ ೧೧೦ ॥

ನ ಚಾಪ್ರಿಯಂ ಮಯಾಸ್ಯುಕ್ತಾ ಕದಾಚಿದಪಿ ವಾಚಕಂ ।
ಸ್ವಪ್ನೇಽಪಿ ನೋಕ್ತಪೂರ್ವಾಸಿ ಕದಾಚಿದಪಿ ಚಾಪ್ರಿಯಂ ॥ ೧೧೧ ॥

ಕಿಂ ಕೃತಂ ದುಷ್ಕೃತಂ ಪೂರ್ವಂ ಮಯಾ ಕರ್ಮ ಸುಸಂಕಟಂ ।
ಯೇನ ಮತ್ಪುರತೋ ಭಾರ್ಯಾಸ್ಯದೃಷ್ಟಾ ವಿಗತಿಂ ಗತಾ ॥ ೧೧೨ ॥

ಏಹಿ ಮೇ ಸುಭಗೇ ಕಾಂತೇ ಮಮ ಚಿತ್ತಾನುವರ್ತನಿ ।
ಪಶ್ಯೈತಾನ್ಬಾಲಕಾನ್ಭೀತಾನ್ ಕ್ಲಿಶ್ಯಮಾನಾನಿತಸ್ತತಃ ॥ ೧೧೩ ॥

---

೧೦೯. ನಾಲಗೆಯ ಚಾಪಲ್ಯದ ಯಾವುದೋ ಜಲಚರವು, ಸ್ನಾನ ಮಾಡುತ್ತಿದ್ದ ಆ ಶೋಚನೀಯಳಾದ ಅಬಲೆಯನ್ನು ನೀರಮಧ್ಯಕ್ಕೆ ಎಳೆದು ಕೊಂಡು ಹೋಗಿರಬೇಕು.

೧೧೦. ಇಲ್ಲವಾದರೆ ಗಂಗಾತೀರಕ್ಕೆ ಬಂದವಳನ್ನು ಪಿಶಾಚಿಯೋ, ಭೂತರಾಕ್ಷಸರೋ ತಿಂದರೋ ! ರೋಗವು ನೀರೊಳಕ್ಕೆ ಸೆಳೆಯಿತೋ ? !

೧೧೧. ನಾನು ಯಾವಾಗಲೂ ನಿನಗೆ ಅಪ್ರಿಯವಾದ ಮಾತನಾಡಿಲ್ಲ. ಕನಸಿನಲ್ಲಿಯೂ ಹಿಂದೆಂದೂ ನಿನಗೆ ಅಹಿತವನ್ನು ಹೇಳಿಲ್ಲ.

೧೧೨. ನಾನು ಪೂರ್ವದಲ್ಲಿ ಬಹು ಸಂಕಟಕರವಾದ ಯಾವ ಪಾಪ ಕರ್ಮವನ್ನು ಮಾಡಿದೆನೋ ! ಯಾವುದರಿಂದ ನನ್ನ ಹೆಂಡತಿಯು ನನ್ನಮುಂದೆ ಕಾಣಿಸದೆ ದುರ್ಗತಿಯನ್ನು ಪಡೆದಳೋ !

೧೧೩. ಸುಂದರೀ, ನನ್ನಕಾಂತೆ, ನನ್ನ ಮನದನ್ನೆ, ಬಾ. ಹೆದರಿ ಅಲ್ಲಲ್ಲಿ ದುಃಖಪಡುತ್ತಿರುವ ಬಾಲಕರನ್ನು ನೋಡು.

ಮಾಂ ಪಶ್ಯ ತ್ವಂ ವರಾರೋಹೇ ತ್ರೀನ್ಪುತ್ರಾನತಿಬಾಲಕಾನ್ |
ಚತಸ್ರೋ ದುಹಿತ್ರೀಃ ಪಶ್ಯ ಸರ್ವಾಂಶ್ಚ ಮಮ ಮಾನದೇ || ೧೧೪ ||

ಮಮ ಪುತ್ರಾ ರುದಂತ್ಯೇತೇ ಬಾಲಕಾಸ್ತವ ಲಾಲಸಾಃ || ೧೧೫ ||

ನಿತ್ಯಂ ಚ ದಾರಿಕಾ ರಕ್ಷ ಮಮ ದುಷ್ಕೃತಕಾರಿಣಃ |
ಕಾಮಂ ಮಾಂ ಕ್ಷುಧಿತಂ ಚೈವ ಜ್ಞಾಸ್ಯಸೇ ತ್ವಂ ಪಿಪಾಸಿತಂ || ೧೧೬ ||

ಏವಮುಕ್ತ್ವಾ ಚ ಕಲ್ಯಾಣಿ ಮಮ ಭಕ್ತ್ಯಾ ವ್ಯವಸ್ಥಿತಾ || ೧೧೭ ||

ಸವ್ರೀಡಂ ಭಾಷತೇ ವಿಪ್ರೋ ನಿಷಾದಂ ಗಚ್ಛನಾಸ್ತಿಸಾ || ೧೧೮ ||

ಸುಖಂ ಯೋಗಂ ಚ ತೇ ನೀತ್ವಾ ಸಾ ಗತಾ ಹ್ಯನಿವೃತ್ತಯೇ || ೧೧೯ ||

ತಂ ರುದಂತಂ ತಥಾ ದೃಷ್ಟ್ವಾ ಕಾರುಣ್ಯೇನ ಪರಿಪ್ಲುತಃ |
ನಿಷಾದಂ ಭಾಷತೇ ತತ್ರ ಗಚ್ಛ ಕಿಂ ಪರಿಕ್ಲಿಶ್ಯಸೇ || ೧೨೦ ||

೧೧೪–೧೧೭. ವರಾರೋಹೇ, ನನ್ನನ್ನು ನೋಡು. ಬಹಳ ಚಿಕ್ಕವರಾದ ಮೂವರು ಗಂಡುಮಕ್ಕಳನ್ನೂ, ನಾಲ್ವರು ಹೆಣ್ಣುಮಕ್ಕಳನ್ನೂ ಎಲ್ಲರನ್ನೂ ನೋಡು. ನನಗೆ ಮಾನವನ್ನು ಕೊಡುವವಳೇ, ನಿನ್ನಲ್ಲಿ ಬಹಳ ಆಸೆಯುಳ್ಳ ಈ ನಮ್ಮ ಮಕ್ಕಳು ಅಳುತ್ತವೆ. ನಿತ್ಯವೂ ಪಾಪವನ್ನು ಮಾಡುವ ನನ್ನ ಈ ಬಾಲೆಯರನ್ನು ರಕ್ಷಿಸು ಕಲ್ಯಾಣಿ, ನನ್ನಲ್ಲಿ ಭಕ್ತಿಯಿಂದಿದ್ದ ನೀನು, ನಾನು ಹೆಚ್ಚಾಗಿ ಹಸಿವು ಬಾಯಾರಿಕೆಗಳುಳ್ಳವನೆಂಬುದನ್ನು ಬಲ್ಲೆ" ಎಂದು ಹೇಳಿ ಅತ್ತನು.

೧೧೮–೧೧೯. ಹೀಗೆ ಗೋಳಾಡುತ್ತಿದ್ದ ಆ ಬೇಡನನ್ನು ನೋಡಿ ಬ್ರಾಹ್ಮಣನು ನಾಚಿಕೆಯಿಂದ, "ಬೇಡನೇ, ಅವಳಿಲ್ಲ, ಹೋಗು. ನಿನ್ನ ಸುಖವನ್ನೂ, ಯೋಗವನ್ನೂ ತೆಗೆದುಕೊಂಡು, ಅವಳು ಹಿಂದಕ್ಕೆ ಬಾರದಿರಲು (ಮುಕ್ತಿಗೆ)ಹೋದಳು" ಎಂದನು.

೧೨೦–೧೨೧. ಆದರೂ ಅಲ್ಲಿ ಅಳುತ್ತಿದ್ದ ಅವನನ್ನು ನೋಡಿ, ಕರುಣೆಯಿಂದ ಆರ್ದ್ರನಾದ ಆ ಋಷಿಯು, "ಹೋಗು, ಏಕೆ ದುಃಖಿಸುತ್ತೀಯೆ ? ಆ

ಬಾಲಾಂಸ್ತ್ವಾನ್ಪರಿರಕ್ಷಸ್ವ ಆಹಾರೈರ್ವಿವಿಧೈರಪಿ ।
ಏತೇ ನ ತ್ಯಜನೀಯಾಸ್ತೇ ಕದಾಚಿದಪಿ ಪುತ್ರಕಾಃ ॥ ೧೨೧ ॥

ಪರಿವ್ರಾಜವಚಃ ಶ್ರುತ್ವಾ ನಿಷಾದಸ್ತಸ್ಯ ಸನ್ನಿಧೌ ।
ಉವಾಚ ಮಧುರಂ ವಾಕ್ಯಂ ದುಃಖಶೋಕಪರಿಪ್ಲುತಃ ॥ ೧೨೨ ॥

ಅಹೋ ಮುನಿವರ ಶ್ರೇಷ್ಠ ಅಹೋ ಧರ್ಮಭೃತಾಂ ವರ ।
ಸಾಂತ್ವಿತೋಽಸ್ಮಿ ತ್ವಯಾ ವಿಪ್ರ ವಚನೈರ್ಮಧುರಾಕ್ಷರೈಃ ॥ ೧೨೩ ॥

ನಿಷಾದಸ್ಯ ವಚಃ ಶ್ರುತ್ವಾ ಸ ಮುನಿಃ ಶಂಸಿತವ್ರತಃ ।
ಉವಾಚ ಮಧುರಂ ವಾಕ್ಯಂ ದುಃಖಶೋಕಪರಿಪ್ಲುತಃ ॥ ೧೨೪ ॥

ಮಾ ರೋದೀರ್ವಚ್ಮಿ ಭದ್ರಂ ತೇ ತವಾಹಂ ಸಾ ಪ್ರಿಯಾಭವಂ ।
ಗಂಗಾತೀರಂ ಸಮಾಸಾದ್ಯ ಮುನಿರ್ಜಾತೋಽಸ್ಮ್ಯಹಂ ತಥಾ ॥ ೧೨೫ ॥

ಮಕ್ಕಳನ್ನು ಬಗೆ ಬಗೆಯ ಆಹಾರಗಳಿಂದ ಕಾಪಾಡು. ಮಕ್ಕಳನ್ನು ನೀನು ಎಂದಿಗೂ ಕೈಬಿಡಕೂಡದು" ಎಂದು ಹೇಳಿದನು.

೧೨೨–೧೨೩. ಸನ್ಯಾಸಿಯ ಮಾತನ್ನು ಕೇಳಿ, ಬೇಡನು ಶೋಕಾಕುಲನಾಗಿ ಇಂಪಾದ ಮಾತಿನಿಂದ ಅವನ ಸನ್ನಿಧಿಯಲ್ಲಿ, "ಅಹೋ ! ಮುನಿವರ, ಶ್ರೇಷ್ಠನೇ, ಧರ್ಮಿಷ್ಠರಲ್ಲಿ ಮೇಲಾದವನೇ, ಬ್ರಾಹ್ಮಣನೇ, ಇನಿದಾದ ಅಕ್ಷರಗಳಿಂದ ಕೂಡಿದ ಮಾತುಗಳಿಂದ ನನ್ನನ್ನು ಸಂತೈಸಿದ್ದೀಯೆ" ಎಂದನು.

೧೨೪-೧೨೫. ಸತ್ಯವಾದ ವ್ರತಗಳನ್ನಾಚರಿಸುವ ಆ ಮುನಿಯು ಬೇಡನ ಮಾತನ್ನು ಕೇಳಿ, "ಅಳಬೇಡ. ನಿನಗೆ ಒಳ್ಳೆಯದನ್ನು ಹೇಳುತ್ತೇನೆ. ನಾನೇ ನಿನ್ನ ಆ ಪ್ರಿಯೆಯಾಗಿದ್ದೆನು. ಗಂಗಾತೀರಕ್ಕೆ ಬಂದು, ನಾನು ಖುಷಿಯಾಗಿ ಮಾರ್ಪಟ್ಟಿದ್ದೇನೆ" ಎಂದನು.

ಪರಿವ್ರಾಜವಚಃ ಶ್ರುತ್ವಾ ನಿಷಾದೋ ವಿಗತಜ್ವರಃ |
ಶ್ಲಕ್ಷ್ಣಂ ವಚನಮಾದಾಯ ಪ್ರತ್ಯುವಾಚ ದ್ವಿಜೋತ್ತಮಂ || ೧೨೬ ||

ಕಿಮಿದಂ ಭಾಷಸೇ ವಿಪ್ರ ಅವ್ಯಕ್ತಂ ಯತ್ಕದಾಚನ |
ನ ಭಾವ ವಾ ಯದ್ಘಟಿತಂ ಸ್ತ್ರಿಯಃ ಪುಂಸ್ತ್ವಂ ಸದೈವ ಹಿ || ೧೨೭ ||

ನಿಷಾದಸ್ಯ ವಚಃ ಶ್ರುತ್ವಾ ಬ್ರಾಹ್ಮಣೋ ದುಃಖಮೂರ್ಛಿತಃ |
ಉವಾಚ ಮಧುರಂ ವಾಕ್ಯಂ ಗಂಗಾತೀರೇ ಚ ಧೀವರಂ || ೧೨೮ ||

ಶೀಘ್ರಂ ಗಚ್ಛ ಸ್ವಕಂ ದೇಶಮೇತಾನ್ಗೃಹ್ಯ ಸ್ವಬಾಲಕಾನ್ |
ಸರ್ವೇಷಾಂ ಚ ಯಥಾಸಂಖ್ಯಂ ಸ್ನೇಹಃ ಕರ್ತವ್ಯ ಏವ ಚ || ೧೨೯ ||

ಸ ತೇನ ಚೋದಿತೋ ಹ್ಯೇವಂ ನಿಷಾದೋ ನಾವಗಚ್ಛತಿ |
ಮಧುರಂ ಸ್ವರಮಾದಾಯ ಪ್ರತ್ಯುವಾಚ ದ್ವಿಜೋತ್ತಮಂ || ೧೩೦ ||

---

೧೨೬. ಸನ್ಯಾಸಿಯ ಮಾತನ್ನು ಕೇಳಿ, ಸಂತಾಪವನ್ನು ಕಳೆದುಕೊಂಡ ಬೇಡನು ಮೆದುನುಡಿಯಿಂದ ಅವನನ್ನು ಕುರಿತು ಹೀಗೆ ಹೇಳಿದನು.

೧೨೭. "ಬ್ರಾಹ್ಮಣೋತ್ತಮನೇ, ಇದೇನು ! ಎಂದೂ ಕಾಣದುದನ್ನು ಹೇಳುತ್ತೀಯೆ. ಈಗಾದಂತೆ ಹೆಂಗಸು ಗಂಡಸಾಗುವುದು ಯಾವಾಗಲಾದರೂ ಉಂಟೆ ?"

೧೨೮-೧೨೯. ಬೇಡನ ಮಾತನ್ನು ಕೇಳಿ, ದುಃಖದಿಂದ ಮೈಮರೆತ ಬ್ರಾಹ್ಮಣನು ಆ ಗಂಗೆಯ ದಡದಲ್ಲಿಯೇ ಅವನನ್ನು ನೋಡಿ, "ನಿನ್ನ ಈ ಮಕ್ಕಳನ್ನು ಕರೆದುಕೊಂಡು ಬೇಗನೆ ನಿನ್ನೆಡೆಗೆ ಹೋಗು. ಎಲ್ಲರಲ್ಲಿಯೂ, ಕ್ರಮವಾಗಿ ಪ್ರೀತಿಯನ್ನಿಡಬೇಕು" ಎಂದು ಇಂಪಾದ ಮಾತನಾಡಿದನು.

೧೩೦. ಋಷಿಯು ಹೀಗೆ ಪ್ರೇರಿಸಿದರೂ ತಿಳಿದುಕೊಳ್ಳದ ಆ ಬೇಡನು ಇಂಪಾದ ಮಾತಿನಿಂದ ಆ ಬ್ರಾಹ್ಮಣೋತ್ತಮನನ್ನು ಕುರಿತು ಮರುನುಡಿದನು.

ಕಿಂ ತ್ವಯಾ ದುಷ್ಕೃತಂ ಕರ್ಮ ಕೃತಂ ಪೂರ್ವಂ ಪುರಾತನಂ |
ಮಮ ಯದ್ಭಾಷಸೇ ಚೈವ ಸ್ತ್ರೀತ್ವಂ ಪ್ರಾಪ್ತೋಸಿ ತತ್ಕಥಂ || ೧೩೧ ||

ಕೇನ ದೋಷೇಣ ಪ್ರಾಪ್ತಸ್ತ್ವಂ ಸ್ತ್ರೀತ್ವಂ ಭೂತ್ವಾ ಪುಮಾನ್ಪುನಃ ।
ಪುಂಸ್ತ್ವಂ ಚೈವ ಕಥಂ ಪ್ರಾಪ್ತ ಏತದಾಚಕ್ಷ್ವ ಪೃಚ್ಛತಃ || ೧೩೨ ||

ಏವಂ ತಸ್ಯ ವಚಃ ಶ್ರುತ್ವಾ ಸ ಋಷಿಃ ಶಂಸಿತವ್ರತಃ |
ಉವಾಚ ಮಧುರಂ ವಾಕ್ಯಂ ಮಾಯಾತೀರ್ಥಜಲೇಚರಂ || ೧೩೩ ||

ನಿಷಾದ ಶೃಣು ತತ್ತ್ವೇನ ಮತ್ಕಥಾಂ ಚ ಪ್ರಜಲ್ಪತಃ ।
ನ ಮಯಾ ದುಷ್ಕೃತಂ ಕಿಂಚಿತ್ ಕೃತಂ ಕುತ್ರಾಪಿ ತತ್ವತಃ || ೧೩೪ ||

ಏಕಭಕ್ತಂ ಮಯಾಚಾರೇ ಅಭಕ್ಷ್ಯಂ ಚೈವ ವರ್ಜಿತಂ |
ಸ ಮಯಾರಾಧಿತೋ ದೇವೋ ಲೋಕನಾಥೋ ಜನಾರ್ದನಃ ||
ಕರ್ಮಭಿರ್ಬಹುಭಿಶ್ಚೈವ ಮಯಾ ದರ್ಶನಕಾಂಕ್ಷಿಣಾ || ೧೩೫ ||

೧೩೧–೧೩೨. "ನೀನು ಹಿಂದೆ ಯಾವ ಪಾಪಕರ್ಮವನ್ನು ಮಾಡಿದೆ ? ನನ್ನೊಡನೆ ಹೇಳಿದ ಸ್ತ್ರೀತ್ವವು ನಿನಗೆ ಹೇಗೆ ಯಾವ ದೋಷದಿಂದುಂಟಾಯಿತು ? ನೀನು ಹೆಂಗಸಾಗಿದ್ದು ಮತ್ತೆ ಹೇಗೆ ಗಂಡಸಾದೆ ? ಕೇಳುತ್ತಿರುವ ನನಗೆ ಇದನ್ನು ಹೇಳು"

೧೩೩. ಈ ಬಗೆಯ ಬೇಡನ ಮಾತನ್ನು ಕೇಳಿ, ಶ್ಲಾಘ್ಯವ್ರತಿಯಾದ ಆ ಋಷಿಯು ಮಾಯಾತೀರ್ಥಜಲದಲ್ಲಿ ಚರಿಸುವ ಅವನಿಗೆ, ಇಂಪಾಗಿ ಮುಂದಿನಂತೆ ಹೇಳಿದನು.

೧೩೪. 'ಬೇಡನೇ, ನನ್ನ ಕಥೆಯನ್ನು ನಿಜವಾಗಿ ಹೇಳುತ್ತೇನೆ. ಕೇಳು. ನಾನು ನಿಜವಾಗಿಯೂ ಎಂದೂ ಯಾವ ಪಾಪಕರ್ಮವನ್ನೂ ಸ್ವಲ್ಪವೂ ಮಾಡಲಿಲ್ಲ.

೧೩೫-೧೩೬. ಒಂದುಹೊತ್ತು ಮಾತ್ರ ಊಟಮಾಡುತ್ತ, ಅಭಕ್ಷ್ಯವಾದುದನ್ನು ಬಿಟ್ಟೂ ನಡೆದೆನು. ಲೋಕನಾಥನೂ, ಜನಾರ್ದನನೂ ಆದ ಆ ದೇವನ

ಅಥ ದೀರ್ಘೇಣ ಕಾಲೇನ ಮಯಾ ದೃಷ್ಟೋ ಜನಾರ್ದನಃ ॥ ೧೩೬ ॥

ವರೇಣ ಛಂದಯಾಮಾಸ ಬಹುಧಾ ಮಾಯಯಾ ತತಃ ।
ಮಯಾ ನಾಭೀಪ್ಸಿತಸ್ತಸ್ಮಾದ್ದೀಯಮಾನೋ ವರಸ್ತತಃ ॥ ೧೩೭ ॥

ಮಾಯಾಂ ಮೇ ದರ್ಶಯ ವಿಭೋ ವಿಷ್ಣೋ ಪ್ರಣತವತ್ಸಲ ।
ತತೋ ಮಾಂ ಭಾಷತೇ ವಿಷ್ಣುರ್ಮಾಯಾಂ ದೃಷ್ಟ್ವಾ ಹ್ಯಲಂ ದ್ವಿಜ ॥
॥ ೧೩೮ ॥

ಮಯಾ ಪುನಃ ಪುನಶ್ಚೋಕ್ತೋ ಮಮ ಪ್ರೀತ್ಯಾ ಪ್ರದರ್ಶಯ ॥ ೧೩೯ ॥

ತತೋಽಹಂ ತೇನ ಚಾಪ್ಯುಕ್ತಸ್ತರ್ಹಿ ದ್ರಕ್ಷ್ಯತ್ಯಲಂ ಭವಾನ್ ।
ಗಚ್ಛ ಕುಬ್ಜಾಮ್ರಕೇ ಗಂಗಾಂ ಸ್ನಾತ್ವೇತ್ಯಂತರ್ಹಿತೋಽಭವತ್ ॥ ೧೪೦ ॥

ಸಂದರ್ಶನವನ್ನು ಬಯಸಿದ ನಾನು ಆವನನ್ನು ಹಲವು ಕರ್ಮಗಳಿಂದಲೂ, ಆರಾಧಿಸಿದೆನು. ಬಳಿಕ ಬಹುಕಾಲದಮೇಲೆ ಆ ವಿಷ್ಣುವಿನ ದರ್ಶನವಾಯಿತು.

೧೩೭. ಬಳಿಕ ಆ ದೇವನು ಹಲವು ಬಗೆಯ ವರಗಳನ್ನು ಕೊಡುವುದಾಗಿ ಸಂತೈಸಿದನು. ಅವನು ಕೊಡುವ ವರವನ್ನು ನಾನು ಇಷ್ಟಪಡಲಿಲ್ಲ.

೧೩೮. 'ವಿಭೂ, ಪ್ರಣತವತ್ಸಲನೇ, ವಿಷ್ಣುವೇ, ನನಗೆ ಮಾಯೆಯನ್ನು ತೋರಿಸು,' ಎಂದೆನು. ವಿಷ್ಣುವು, 'ಬ್ರಾಹ್ಮಣನೇ, ಮಾಯೆಯನ್ನು ನೋಡುವುದು ಬೇಡ' ಎಂದನು.

೧೩೯. ನಾನು ಮತ್ತೆ ಮತ್ತೆ, 'ನನ್ನ ಪ್ರೀತಿಯಿಂದ ತೋರಿಸು' ಎಂದೆನು.

೧೪೦. ಬಳಿಕ ಆ ದೇವನು, 'ಆದರೆ ನೀನು ಕುಬ್ಜಾಮ್ರಕಕ್ಷೇತ್ರಕ್ಕೆ ಹೋಗು. ಅಲ್ಲಿ ಗಂಗೆಯಲ್ಲಿ ಸ್ನಾನಮಾಡಿ,(ಮಾಯೆಯನ್ನು)ಚೆನ್ನಾಗಿ ನೋಡುವೆ' ಎಂದು ಹೇಳಿ ಕಣ್ಮರೆಯಾದನು.

ಅಹಂ ಮಾಯಾಪ್ರಲೋಭೇನ ಗಂಗಾತೀರಮುಪಾಗತಃ ।
ದಂಡಂ ಕುಂಡೀಂ ಚ ವಸ್ತ್ರಂ ಚ ತೀರೇ ಸಂಸ್ಥಾಪ್ಯ ಯತ್ನತಃ ॥
ತತಃ ಸ್ನಾನವಿಧಾನೇನ ನಿಮಗ್ನಸ್ತು ಜಲೇಽಮಲೇ ॥ ೧೪೧ ॥

ನ ತತ್ರ ಕಿಂಚಿಜ್ಜಾನಾಮಿ ಕಿಮಿದಂ ಕಿಂ ಪ್ರವರ್ತತೇ ।
ನಿಷಾದೀಗರ್ಭಸಂಭೂತಸ್ತವ ಪತ್ನ್ಯಭವಂ ತತಃ ॥ ೧೪೨ ॥

ಕೇನಚಿತ್ಕಾರಣೇನಾತ್ರ ಪ್ರವಿಷ್ಟೋ ಜಾಹ್ನವೀಜಲೇ ।
ಸ್ನಾತ್ವಾಪಶ್ಯಂ ಪೂರ್ವವಚ್ಚ ತಾವಜ್ಜಾತೋ ಋಷಿಸ್ತ್ವಹಂ ॥ ೧೪೩ ॥

ನಿಷಾದ ಪಶ್ಯ ಕುಂಡೀಂ ಚ ಪಾತ್ರಂ ವಸ್ತ್ರಂ ಯಥಾಪುರಾ ।
ಪಂಚಾಶದ್ವರ್ಷದೇಶೀಯೋ ಜಾತೋಽಸ್ಮಿ ತ್ವದ್ಗೃಹೇ ವಸನ್ ॥
ದಂಡವಸ್ತ್ರಾದಿ ಯತ್ಕಿಂಚಿನ್ನ ಜೀರ್ಣಂ ಗಂಗಯಾ ಹೃತಂ ॥ ೧೪೪ ॥

---

೧೪೧. ನಾನು, ಮಾಯೆಯನ್ನು ತಿಳಿಯುವ ಅತ್ಯಾಶೆಯಿಂದ ಗಂಗಾತೀರಕ್ಕೆ ಬಂದು, ದಂಡ ಕಮಂಡಲವಸ್ತ್ರಗಳನ್ನು ಜಾಗರೂಕತೆಯಿಂದ ದಡದಲ್ಲಿಟ್ಟು, ಬಳಿಕ ಸ್ನಾನವಿಧಿಯಿಂದ, ನಿರ್ಮಲವಾದ ಗಂಗೆಯ ನೀರಿನಲ್ಲಿ ಮುಳುಗಿದೆನು.

೧೪೨. ಅಲ್ಲಿ, ಇದೇನು ? ಏಕೆ ಹೀಗಾಗುತ್ತದೆ ಎಂಬುದೊಂದನ್ನೂ ಸ್ವಲ್ಪವೂ ತಿಳಿಯೆನು. ಬೇಡಿತಿಯ ಹೊಟ್ಟೆಯಲ್ಲಿ ಹುಟ್ಟಿ ಬಳಿಕ ನಿನ್ನ ಹೆಂಡತಿಯಾದೆನು.

೧೪೩. ಮತ್ತೆ ಯಾವುದೋ ಕಾರಣದಿಂದ ಈ ಗಂಗೆಯ ನೀರಲ್ಲಿಳಿದು, ಸ್ನಾನಮಾಡಿ, ಒಡನೆಯೇ ಹಿಂದಿನಂತೆಯೇ ನಾನು ಋಷಿಯಾಗಿರುವುದನ್ನು ನೋಡಿದೆನು.

೧೪೪. ಬೇಡನೇ, ಕಮಂಡಲು, ವಸ್ತ್ರ, ಪಾತ್ರೆಗಳು ಹಿಂದಿನಂತೆಯೇ ಇವೆ. ನೋಡು. ನಿನ್ನ ಮನೆಯಲ್ಲಿದ್ದುಕೊಂಡು ಸುಮಾರು ಐವತ್ತುವರ್ಷದವಳಾದೆನು. ಆದರೂ ಇದುವರೆಗೆ ದಂಡವಸ್ತ್ರಾದಿಗಳು ಸ್ವಲ್ಪವೂ ಹಳೆಯವಾಗಿ ಕೆಟ್ಟುಹೋಗಿಲ್ಲ. ಅಥವಾ ಗಂಗೆಯಿಂದ ಕೊಚ್ಚಿಹೋಗಿಯೂ ಇಲ್ಲ.

ಏವಂ ತೇನ ತತಶ್ಚೋಕ್ತೋ ನಿಷಾದೋಽದೃಶ್ಯತಾಂ ಗತಃ ।
ಯೇ ಚ ತೇ ಬಾಲಕಾಸ್ತತ್ರ ತೇಷಾಂ ಕಶ್ಚಿನ್ನ ದೃಶ್ಯತೇ ॥ ೧೪೫ ॥

ಸ ತತೋ ಬ್ರಾಹ್ಮಣೋ ದೇವಿ ತಪಸ್ತಪತಿ ನಿಶ್ಚಿತಂ ।
ಊರ್ಧ್ವಶ್ವಾಸೋರ್ಧ್ವಬಾಹುಶ್ಚ ವಾಯುಭಕ್ಷಪರಾಯಣಃ ॥ ೧೪೬ ॥

ತಸ್ಯ ಪ್ರತಿಷ್ಠಮಾನಸ್ಯ ಅಪರಾಹ್ಣಂ ತು ಜಾಯತೇ ।
ತತಃ ಪ್ರಮುಚ್ಯತೇ ತೋಯಂ ದೇವಿ ಕೃತ್ವಾ ಯಥೋಚಿತಂ ॥ ೧೪೭ ॥

ಕರ್ಮಣ್ಯಾನಿ ಚ ಪುಷ್ಪಾಣಿ ಆಹೃತ್ಯ ಶ್ರದ್ಧಯಾನ್ವಿತಃ ।
ಅರ್ಚಯಿತ್ವಾ ಯಥಾನ್ಯಾಯಂ ವೀರಾಸನಮುಪಾಗತಃ ॥ ೧೪೮ ॥

ವೃತಸ್ತು ಬ್ರಾಹ್ಮಣೈರ್ಮುಖ್ಯೈರ್ಗಂಗಾಸ್ನಾನೇಷು ವೈ ದ್ವಿಜಃ ।
ಊಚುಸ್ತತೋ ದ್ವಿಜಾಸ್ತತ್ರ ತಪಸ್ವಿನಮನಿಂದಿತಂ ॥ ೧೪೯ ॥

---

೧೪೫. ಋಷಿಯು ಹೀಗೆನಲು, ಬಳಿಕ ಬೇಡನು ಕಾಣಿಸಲೇ ಇಲ್ಲ. ಅಲ್ಲಿದ್ದ ಅವನ ಮಕ್ಕಳಲ್ಲಿಯೂ ಯಾರೊಬ್ಬರೂ ಕಾಣಿಸದೆ ಹೋದರು.

೧೪೬. ದೇವಿ, ಬಳಿಕ ಆ ಬ್ರಾಹ್ಮಣನು ಎತ್ತಿದ ತೋಳುಗಳೂ, ಊರ್ಧ್ವಶ್ವಾಸವೂ ಉಳ್ಳವನಾಗಿ, ವಾತಾಹಾರನಾಗಿ ದೃಢವಾದ ತಪಸ್ಸನ್ನು ಮಾಡುತ್ತಿದ್ದನು.

೧೪೭-೧೪೮. ದೇವಿ, ಗಂಗೆಯ ನೀರಲ್ಲಿ ನಿಂತು ತಪಸ್ಸುಮಾಡುತ್ತಿದ್ದ ಆತನು ಅಪರಾಹ್ಣವಾಗುತ್ತಲೂ ನೀರಿಂದ ಹೊರಗೆ ಬಂದು ಯಥೋಚಿತ ಕರ್ಮಗಳನ್ನು ಮಾಡಿ, ಕರ್ಮಾರ್ಹವಾದ ಹೂಗಳನ್ನ ತಂದು ವಿಧಿಪೂರ್ವಕ ವಾಗಿ ಪೂಜಿಸಿ, ವೀರಾಸನದಲ್ಲಿ ಕುಳ್ಳಿರುವನು.

೧೪೯-೧೫೦. ಗಂಗಾಸ್ನಾನಕ್ಕೆ ಬಂದ ಬ್ರಾಹ್ಮಣೋತ್ತಮರು, ಸ್ತುತ್ಯನಾದ ಆ ತಪಸ್ವಿಯು ಸುತ್ತಲೂ ಸೇರಿ, "ಬ್ರಾಹ್ಮಣೋತ್ತಮನೇ, ಪ್ರಾತಃಕಾಲ ಘಾತ್ರೆ ಕಮಂಡಲು ತ್ರಿದಂಡಗಳನ್ನು ಇಲ್ಲಿಟ್ಟು, ಇಲ್ಲಿಂದ ಬೇಡರ ಹತ್ತಿರ

ಪೂರ್ವಾಹ್ಣೇ ಸ್ಥಾಪಯಿತ್ವಾತ್ರ ಮಾತ್ರಾಂ ಕುಂಡೀಂ ತ್ರಿದಂಡಕಂ ।
ಇತೋ ಗತೋಽಸಿ ಬ್ರಹ್ಮೇಂದ್ರ ಸ್ಥಾಪಯಿತ್ವಾ ತು ಧೀವರಾನ್ ।
ವಿಸ್ಮೃತಂ ಕಿಂ ತ್ವಯಾ ಸ್ಥಾನಂ ಕಥಂ ಶೀಘ್ರಂ ನ ಚಾಗತಃ ॥ ೧೫೦ ॥

ತತೋ ವಿಪ್ರವಚಃ ಶ್ರುತ್ವಾ ತೂಷ್ಣೀಮಾಸೀನ್ಮುನಿಸ್ತದಾ ।
ಬ್ರಾಹ್ಮಣಾನುಗತಂ ಸ್ಥಾನಮಾತ್ಮನಾತ್ಮಾನುಸಂಸ್ಥಿತಃ ॥ ೧೫೧ ॥

ಏತಸ್ಮಿನ್ನಂತರೇ ದೇವಿ ಸ ಚ ಬ್ರಾಹ್ಮಣಪುಂಗವಃ ।
ಅದ್ಯ ಪಂಚಾಶದ್ವರ್ಷಾಣಿ ಅಮಾವಾಸ್ಯಾದ್ಯ ಚೈವ ಹಿ ॥ ೧೫೨ ॥

ಕಥಮೇತಾವತಂ ಕಾಲಂ ಮಾಮೂಚುಬ್ರಾರ್ಹ್ಮಣಾಶ್ಚ ಕಿಂ ।
ಪೂರ್ವಾಹ್ಣೇ ಸ್ಥಾಪಯಿತ್ವಾ ತ್ವಂ ಸ್ವಾಂ ಮಾತ್ರಾಂ ಚಾಪರಾಹ್ಣಿಕೇ ।
ಕಥಂ ಕಾಲೇನ ಸಂಪ್ರಾಪ್ತಃ ಕಿಮೇತದಿತಿ ಭಾಷತೇ ॥ ೧೫೩ ॥

ಹೋದೆಯಷ್ಟೆ. ಏಕೆ ಬೇಗನೆ ಮತ್ತೆ ಇಲ್ಲಿಗೆ ಬರಲಿಲ್ಲ? ಕಮಂಡಲು ಮೊದಲಾದುವನ್ನು ಇಟ್ಟ ಈ ಸ್ಥಳವು ಮರೆತು ಹೋಯಿತೇನು?" ಎಂದ ಕೇಳಿದರು.

೧೫೧. ಬ್ರಾಹ್ಮಣರ ಈ ಮಾತನ್ನು ಕೇಳಿ, ಆಗ ಆ ಮುನಿಯು (ಏನೂ ತಿಳಿಯದೆ)ಸುಮ್ಮನಿದ್ದು, ಬ್ರಾಹ್ಮಣರು ಇದ್ದೆಡೆಯಲ್ಲಿಯೇ ತಾನೂ (ಅನುಸರಿಸಿ)ಕುಳಿತನು.

೧೫೨–೧೫೩. ದೇವಿ, ಇಷ್ಟರನಡುವೆ ಆ ಬ್ರಾಹ್ಮಣೋತ್ತಮನು, ನಾನು ಹಿಂದೆ ದಂಡಕಮಂಡಲಾದಿಗಳನ್ನು ಇಲ್ಲಿಟ್ಟು ಈಗ್ಗೆ ಐವತ್ತು ವರ್ಷಗಳಾದುವು. ಈದಿನ ಅಮಾವಾಸ್ಯೆಯಲ್ಲವೆ! ಇಷ್ಟು ಕಾಲಾವಾಗಿದ್ದರೂ ಈ ಬ್ರಾಹ್ಮಣರು ಏಕೆ, "ಇದೇನು, ಬೆಳಗ್ಗೆ ಪಾತ್ರೆ ಮೊದಲಾದುವನ್ನು ಇಲ್ಲಿಟ್ಟು ಹೋದವನು ಮತ್ತೆ ಅಪರಾಹ್ಣದಲ್ಲಿ ಬಂದಿದ್ದೀಯೆ? ಇದೇಕೆ?" ಎಂದು ಕೇಳುತ್ತಾರೆ? ಎಂದುಕೊಂಡನು.

ಏತಸ್ಮಿನ್ನಂತರೇ ದೇವಿ ಬ್ರಾಹ್ಮಣಾಯ ತತೋ ಮಯಾ ।
ದರ್ಶಯಿತ್ವಾ ನಿಜಂ ರೂಪಂ ತಮವೋಚಮಿದಂ ಧರೇ ॥ ೧೫೪ ॥

ಕಿಮಿದಂ ಭ್ರಾಂತರೂಪೋಽಸಿ ಕಿಂ ವಾ ತ್ವಂ ದೃಷ್ಟವಾನಸಿ ।
ಪಶ್ಯಾಮಿ ತ್ವಂ ವ್ಯಗ್ರಮಿವ ಸಾವಧಾನೋ ಭವ ಸ್ವಯಂ ॥ ೧೫೫ ॥

ಏವಮುಕ್ತಸ್ಸ ತು ಮಯಾ ಭೂಮೌ ಕೃತ್ವಾ ಶಿರಃ ಸ್ವಕಂ ।
ಉವಾಚ ದುಃಖಿತೋ ದೀನೋ ನಿಶ್ವಸ್ಯ ಚ ಮುಹುರ್ಮುಹುಃ ॥ ೧೫೬ ॥

ಅಹೋ ದೇವ ದ್ವಿಜಾ ಏತೇ ಮಾಂ ವದಂತಿ ಜಗದ್ಗುರೋ ।
ಪೂರ್ವಾಹ್ಣೇ ಸ್ಥಾಪಯಿತ್ವಾ ತ್ವಂ ವಸ್ತ್ರಂ ದಂಡಕಮಂಡಲೂ ।
ಆಗತೋಽಸ್ಯಪರಾಹ್ಣೇ ಕಿಂ ಸ್ಥಲಂ ವಿಸ್ಮೃತವಾನಸಿ ॥ ೧೫೭ ॥

೧೫೪–೧೫೫. ದೇವಿ, ವಸುಂಧರೇ, ಅಷ್ಟರಲ್ಲಿ ನಾನು ಅವನಿಗೆ ಪ್ರತ್ಯಕ್ಷನಾಗಿ, "ಇದೇಕೆ ಹೀಗೆ ಭ್ರಾಂತರೂಪನಾಗಿದ್ದೀಯೆ ? ನೀನು ಏನನ್ನು ನೋಡಿದೆ ? ವ್ಯಾಕುಲನಾಗಿರುವಂತೆ ನನಗೆ ಕಾಣಿಸುತ್ತೀಯೆ. ಹಿಂದಿನ ಕಥೆಯನ್ನು ನೆನೆದುಕೊ. ಸಾವಧಾನನಾಗು" ಎಂದೆನು.

೧೫೬. ನಾನು ಹೀಗೆನಲಾಗಿ, ಆತನು ಭೂಮಿಗೆ ತಲೆತಾಕಿಸಿ ನನ್ನನ್ನು ನಮಿಸಿ, ದುಃಖಿಸಿ, ಮತ್ತೆ ಮತ್ತೆ ನಿಟ್ಟುಸಿರುಬಿಟ್ಟು, ದೀನನಾಗಿ ಮಾತನಾಡಿದನು.

೧೫೭. "ದೇವ, ಜಗದ್ಗುರೂ, ಇದೇನೋ ಆಶ್ಚರ್ಯವಾಗಿದೆ. ಈ ಬ್ರಾಹ್ಮಣರು ನನ್ನನ್ನು, 'ವಸ್ತ್ರದಂಡಕಮಂಡಲಗಳನ್ನು ಬೆಳಗ್ಗೆ ಇಲ್ಲಿಟ್ಟು ಹೋಗಿ, ಏಕೆ ಇಷ್ಟು ಹೊತ್ತಾದಮೇಲೆ ಅಪರಾಹ್ಣದಲ್ಲಿ ಬಂದಿದ್ದೀಯೆ ? ಇಟ್ಟೆದ್ದೆಡೆಯನ್ನು ಮರೆತುಬಿಟ್ಟೆಯೇನು ? ' ಎಂದು ಕೇಳುತ್ತಾರೆ.

ಅಹಂ ವ್ಯಾಧಸ್ಯ ವೈ ಭೂತ್ವಾ ಭಾರ್ಯಾ ಚ ವ್ಯಾಧಯೋನಿಜಾ ।
ಪಂಚಾಶದ್ವರ್ಷಪರ್ಯಂತಂ ತತ್ರ ಸ್ಥಿತ್ವಾ ತತಃ ಕಿಲ ।
ತಸ್ಮಾಚ್ಚೈವ ತ್ರಯಃ ಪುತ್ರಾಶ್ಚತಸ್ರಶ್ಚಾಪಿ ಕನ್ಯಕಾಃ ॥ ೧೫೮ ॥

ಜಾತಾನ್ಯೇವಮಪತ್ಯಾನಿ ದುಷ್ಟಕರ್ಮ ಕೃತಂ ತಥಾ ।
ಸ್ನಾತುಂ ಕದಾಚಿದ್ಗಂಗಾಯಾಂ ಗತೋಽಹಂ ತೀರಭೂಮಿಗಃ ॥ ೧೫೯ ॥

ಸ್ಥಾಪಯಿತ್ವಾದ್ಯ ಸ್ವಂ ವಸ್ತ್ರಂ ಮಗ್ನಃ ಸ್ನಾಸ್ಯನ್ಜಲೇಽಮಲೇ ।
ಉನ್ಮಜ್ಯ ಸ್ವಂ ಪುನಶ್ಚೈವ ಪ್ರಾಪ್ತೋ ರೂಪಂ ಮುನಿಸ್ತುತಂ ॥ ೧೬೦ ॥

ಕಿಂ ಮಯಾ ವಿಕೃತಂ ಕರ್ಮ ಸೇವಮಾನೇನ ಮಾಧವ ।
ತಪಶ್ಚ ತಪ್ಯಮಾನೇನ ಕಿಂ ಮಯಾ ವಿಕೃತಂ ಕೃತಂ ॥ ೧೬೧ ॥

ಭಕ್ಷಿತಂ ಕಿಮಕರ್ಮಣ್ಯಂ ಸೇವಮಾನೇನ ಚಾಚ್ಯುತ ।
ವ್ಯಭಿಚಾರಶ್ಚ ಮೇ ತತ್ರ ಕೋ ಜಾತಸ್ತು ತವಾರ್ಚನೇ ॥ ೧೬೨ ॥

೧೫೮–೧೬೦. ನಾನು ಬೇಡಿತಿಯಾಗಿ ಜನಿಸಿ, ಬೇಡನ ಹೆಂಡತಿಯಾಗಿ ಅವನಿಂದ ಮೂವರು ಗಂಡುಮಕ್ಕಳನ್ನೂ, ನಾಲ್ವರು ಹೆಣ್ಣುಮಕ್ಕಳನ್ನೂ ಪಡೆದೆನು. ಅಲ್ಲದೆ ದುಷ್ಕರ್ಮಗಳನ್ನೂ ಮಾಡಿದೆನು. ಬೇಡನ ಮನೆಯಲ್ಲಿ ಐವತ್ತು ವರ್ಷಗಳವರೆಗೂ ಇದ್ದಲ್ಲವೆ ಬಳಿಕ ಯಾವಾಗಲೋ ಗಂಗೆಯಲ್ಲಿ ಸ್ನಾನಕ್ಕಾಗಿ ಬಂದು ದಡದಲ್ಲಿ ಬೇಡಿತಿಯಾದ ನನ್ನ ಬಟ್ಟೆಗಳನ್ನು ಈ ದಿನ ಇಟ್ಟು ಸ್ನಾನಮಾಡುತ್ತ, ನಿರ್ಮಲವಾದ ಗಂಗಾಜಲದಲ್ಲಿ ಮುಳುಗಿ, ಮೇಲಕ್ಕೇಳುತ್ತಲೆ ಮತ್ತೆಯೂ ಮುನಿಗಳು ಹೊಗಳುವ ನನ್ನ ಋಷಿರೂಪವನ್ನು ಪಡೆದೆನು !

೧೬೧. ಮಾಧವಾ, ಕರ್ಮವನ್ನಾಚರಿಸುವಾಗ ನಾನು ಏನಾದರೂ ತಪ್ಪು ಮಾಡಿದೆನೆ ? ತಪವನ್ನಾಚರಿಸುವಾಗ ಏನಾದರೂ ಅಪರಾಧಮಾಡಿದೆನೆ ?

೧೬೨. ಅಚ್ಯುತ, ನಿನ್ನ ಸೇವೆಮಾಡುತ್ತ ಕರ್ಮಾನರ್ಹವಾದ ಆಹಾರವನ್ನೇನಾದರೂ ತಿಂದೆನೆ ? ನಿನ್ನ ಪೂಜೆಮಾಡುವಾಗ ಏನಾದರೂ ಬೇರೆ ವಿಧವಾಗಿ ನಡೆದೆನೆ ? ಬೇರೆಡೆಯಲ್ಲಿ ಮನಸ್ಸಿಟ್ಟೆನೆ ?

ಏತದಾಚಕ್ಷ್ವ ತತ್ತ್ವೇನ ಯೇನಾಹಂ ನರಕಂ ಗತಃ ।
ಏತಚ್ಚಿಂತಾವ್ಯಾಕುಲೋಽಹಂ ನಿಬೋಧ ಭಗವನ್ಮನು ॥ ೧೬೩ ॥

ಮಾಯಾಲುಬ್ಧೇನ ಹಿ ಮಯಾ ಪೂರ್ವಂ ವಿಜ್ಞಾಪಿತೋಽಸ್ಯಸಿ ।
ನಾನ್ಯತ್ಸ್ಮರಾಮಿ ಪಾಪಂ ಚ ನರಕೇ ಯೇನ ಪಾತಿತಃ ॥ ೧೬೪ ॥

ತತಸ್ತಸ್ಯ ವಚಃ ಶ್ರುತ್ವಾ ಕಾರುಣ್ಯಪರಿದೇವಿತಂ ।
ಉಕ್ತವಾನಸ್ಮಿ ತಂ ವಿಪ್ರಂ ದುಃಖಸಂತಪ್ತಮಾನಸಂ ॥ ೧೬೫ ॥

ಮಾ ದುಃಖಂ ಕುರು ವಿಪ್ರೇಂದ್ರ ಆತ್ಮದೋಷಸಮುದ್ಭವಂ ।
ವಿಕರ್ಮ ನ ಕೃತಂ ಕಿಂಚಿದಪಿ ಮೇ ವಿಪ್ರ ಪೂಜನೇ
ಯೇನ ದುಃಖಮನುಪ್ರಾಪ್ತಂ *ಹೀನಯೋನಿಂ ಚ ವೈ ಗತಃ ॥ ೧೬೬ ॥

---

೧೬೩. ನಾನು ಏಕೆ(ಬೇಡಿತಿಯ ಜನ್ಮಕ್ಕೆ) ನರಕಕ್ಕೆ ಹೋದೆನು ? ಇದನ್ನು ನನಗೆ ನಿಜವಾಗಿ ಹೇಳು. ಭಗವಂತನೇ, ನಾನು ಈ ಚಿಂತೆಯಿಂದಲೇ ವ್ಯಾಕುಲನಾಗಿದ್ದೇನೆ ನನ್ನ ವಿಚಾರವನ್ನು ಚಿತ್ತಯಿಸು.

೧೬೪. ಮಾಯೆಯನ್ನರಿಯಲು ಆತ್ಯಾಸೆಯುಳ್ಳ ನಾನು ಹಿಂದೆಯೇ ವಿಜ್ಞಾಪಿಸಿದ್ದೇನೆ. ಬೇರಾವ ಪಾಪವೂ ನನಗೆ ಜ್ಞಾಪಕವಿಲ್ಲ. ಏತರಿಂದ ನಾನು ನರಕಕ್ಕೆ ಹಾಕಲ್ಪಟ್ಟೆನು ? "

೧೬೫. ಕರುಣೆಯುಂಟಾಗುವಂತೆ ಅಳುತ್ತ ಆಡುತ್ತಿರುವ ಅವನ ಮಾತನ್ನು ಕೇಳಿ, ದುಃಖದಿಂದ ಬೆಂದ ಮನಸ್ಸುಳ್ಳ ಆ ಬ್ರಾಹ್ಮಣನಿಗೆ ನಾನು ಹೇಳಿದೆನು.

೧೬೬. "ಬ್ರಾಹ್ಮಣೇಂದ್ರನೇ, ದುಃಖಿಸಬೇಡ. ನನ್ನ ಪೂಜೆಯಲ್ಲಿ ನೀನೇನೂ ತಪ್ಪುಮಾಡಲಿಲ್ಲ. ಆದರೆ ನೀನು ಹೀನಜನ್ಮವನ್ನು ಪಡೆದುದಕ್ಕೂ, ದುಃಖಪಟ್ಟುದಕ್ಕೂ ಆತ್ಮದೋಷವೇ ಕಾರಣ.

---

* ತಿರ್ಯಗ್ಯೋನಿ

ಉಕ್ತಮೇವ ಮಯಾ ಪೂರ್ವಂ ಶೃಣು ಬ್ರಾಹ್ಮಣಪುಂಗವ ।
ವರಾನ್ವರಯ ಭೋ ಬ್ರಹ್ಮನ್ ತ್ವಂ ಮಾಯಾಂ ವೃತವಾನಸಿ ॥ ೧೬೭ ॥

ದದಾಮಿ ದಿವ್ಯಭೋಗಾನ್ವೈ ಭೌಮಾನ್ವಾಪಿ ತವೇಪ್ಸಿತಂ ।
ತಾಂಸ್ತು ನೇಚ್ಛಸಿ ಮಾಯಾಯಾ ದರ್ಶನಂ ವೃತವಾನಸಿ ॥ ೧೬೮ ॥

ದೃಷ್ಟ್ವಾ ತು ವೈಷ್ಣವೀ ಮಾಯಾ ಯಾ ತ್ವಯಾ ಬ್ರಾಹ್ಮಣೇಪ್ಸಿತಾ॥ ೧೬೯ ॥

ನ ಗತೋ ದಿವಸಶ್ಚೇಹ ನಾಪರಾಹ್ಣೇಪಿ ಕುತ್ರಚಿತ್ ।
ವರ್ಷಾಣಿ ಚೈವ ಪಂಚಾಶತ್ ನಿಷಾದಸ್ಯ ಗೃಹೇಪಿ ನ ॥ ೧೭೦ ॥

ಸರ್ವಂ ಮಾಯಾಮಯಂ ತತ್ರ ವಿಸ್ಮಯಾತ್ಪರಿತಪ್ಯಸೇ* ॥ ೧೭೧ ॥

---

೧೬೭ ನಾನು ಹಿಂದೆ 'ಎಲೈ ಬ್ರಾಹ್ಮಣನೇ, ವರವನ್ನು ಬೇಡು' ಎಂದೆನು. ನೀನು ಮಾಯೆಯನ್ನು ಬೇಡಿದೆ.

೧೬೮. ನಿನಗೆ ಇಷ್ಟವಾದ ದಿವ್ಯಭೋಗವನ್ನಾಗಲಿ, ಭೂಭೋಗವನ್ನಾಗಲಿ ಕೊಡುತ್ತೇನೆಂದರೂ ಅದು ಬೇಕಿಲ್ಲದೆ ಮಾಯೆಯ ದರ್ಶನವನ್ನು ಬೇಡಿದೆ.

೧೬೯. ಬ್ರಾಹ್ಮಣನೇ, ನೀನು ಬಯಸಿದ ಮಾಯೆಯನ್ನ ನೀನು ನೋಡಿದೆ.

೧೭೦. ಇಲ್ಲಲ್ಲದೆ ಅಪರಾಹ್ಣದವರೆಗೂ ಬೇರೆಲ್ಲೂ ನೀನು ದಿವಸವನ್ನು ಕಳೆಯಲೂ ಇಲ್ಲ. ಬೇಡನ ಮನೆಯಲ್ಲಿ ಐವತ್ತು ವರ್ಷಗಳನ್ನು ಕಳೆಯಲೂ ಇಲ್ಲ.

೧೭೧. ಎಲ್ಲವೂ ಮಾಯಾಮಯವಾದುದು. ನೀನು ಆಶ್ಚರ್ಯದಿಂದ ಪರಿತಾಪಪಡುತ್ತೀಯೆ.

---

* ಬೊಂ. ಕ. ಪುಸ್ತಕಗಳಲ್ಲಿ ಈ ಭಾಗವು ೧೭೩ ನೆಯ ಶ್ಲೋಕದ ಉತ್ತರಾರ್ಧವಾಗಿದೆ.

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ದ್ವಿಜೋತ್ತಮ ।
ಯಾ ಏಷಾ ವೈಷ್ಣವೀ ಮಾಯಾ ತ್ವಯಾ ಬ್ರಾಹ್ಮಣ ಈಪ್ಸಿತಾ ।
ತ್ವಯಾ ನ ತತ್ಕೃತಂ ಕಿಂಚಿತ್ ಶುಭಂ ವಾಶುಭಮೇವ ವಾ ॥ ೧೭೨ ॥

ನ ತ್ವಯಾ ದುಷ್ಕೃತಂ ಕರ್ಮ ವ್ಯಭಿಚಾರಶ್ಚ ತತ್ರ ವೈ ।
ಅರ್ಚನಂ ಚ ನ ತೇ ಭ್ರಷ್ಟಂ ತಪಶ್ಚೈವ ನ ನಾಶಿತಂ ॥ ೧೭೩ ॥

ಭವಾಂತರೇ ಕೃತಂ ಯಚ್ಚ ಯೇನೇದಂ ಪ್ರಾಪ್ತವಾನ್ಮಹತ್ ।
ದುಃಖಂ ತಚ್ಚ ತವಾಖ್ಯಾಸ್ಯೇ ಶೃಣು ಬ್ರಾಹ್ಮಣಸತ್ತಮ ॥ ೧೭೪ ॥

ಮಮ ಭಕ್ತಾ ದ್ವಿಜಾಶ್ಶುದ್ಧಾ ಯತ್ತ್ವಯಾ ನಾಭಿವಾದಿತಾಃ ।
ತತ್ಪಾಪಾದೀದೃಶೋ ಭೋಗಸ್ತವ ಜಾತೋ ಹಿ ದುಃಖದಃ ॥ ೧೭೫ ॥

ಯೇ ಚ ಭಾಗವತಾಶುದ್ಧಾಃ ತೇ ನೂನಂ ಮಮ ಮೂರ್ತಯಃ ।
ತಾನ್ವಿಪ್ರಾನ್ಯೇ ನಮಸ್ಯಂತಿ ತೇ ಮಾಮೇವ ನಮಸ್ಯತೇ ॥ ೧೭೬ ॥

---

೧೭೨. ದ್ವಿಜೋತ್ತಮನೇ, ನಿನಗೆ ಇನ್ನೂ ಹೇಳುತ್ತೇನೆ. ಕೇಳು. ನೀನು ವೈಷ್ಣವೀಮಾಯೆಯನ್ನು ಬಯಸಿದೆಯಷ್ಟೆ. ಅದರಲ್ಲೂ ನಿನ್ನ ಪುಣ್ಯವಾಗಲಿ, ಪಾಪವಾಗಲಿ ಏನೂ ಇಲ್ಲ.

೧೭೩. ನೀನು ಆ ವಿಚಾರದಲ್ಲಿ ದುಷ್ಕರ್ಮವನ್ನಾಗಲಿ, ವ್ಯಭಿಚಾರವನ್ನಾಗಲಿ ಮಾಡಿಲ್ಲ. ನಿನ್ನ ಅರ್ಚನೆಯಲ್ಲೂ ತಪ್ಪಿಲ್ಲ. ತಪಸ್ಸೂ ನಷ್ಟವಾಗಿಲ್ಲ.

೧೭೪. ನೀನು ಜನ್ಮಾಂತರದಲ್ಲಿ ಮಾಡಿದ ತಪ್ಪಿನಿಂದ ಈ ಮಹಾ ದುಃಖವನ್ನು ಪಡೆದೆ. ಬ್ರಾಹ್ಮಣೋತ್ತಮನೇ, ಆ ನಿನ್ನ ತಪ್ಪನ್ನೂ ಹೇಳುತ್ತೇನೆ. ಕೇಳು.

೧೭೫ ನನ್ನ ಭಕ್ತರೂ, ಶುದ್ಧರೂ ಆದ ದ್ವಿಜರನ್ನು ನೀನು ವಂದಿಸಲಿಲ್ಲ. ಆ ಪಾಪದಿಂದ ನಿನಗೆ ಇಂತಹ ದುಃಖಕರವಾದ ಅನುಭವವುಂಟಾಯಿತು.

೧೭೬. ಶುದ್ಧರಾದ ಭಗವದ್ಭಕ್ತರು ನಿಜವಾಗಿ ನನ್ನ ಮೂರ್ತಿಗಳು. ಅವರನ್ನು ನಮಸ್ಕರಿಸುವವರು ನನ್ನನ್ನೇ ನಮಸ್ಕರಿಸಿದವರಾಗುವರು.

ವಿದಿತೋಽಸ್ಮೀಹ ವಿಪ್ರೇಂದ್ರ ತೈರಹಂ ನಾತ್ರ ಸಂಶಯಃ ।
ಮಮ ದರ್ಶನಾಕಾಮಾ ಯೇ ತೇ ಮೇ ಭಕ್ತಾ ದ್ವಿಜಾಸ್ತಥಾ ॥ ೧೭೭ ॥

ಶುದ್ಧಾ ಭಾಗವತಾಃ ಪೂಜ್ಯಾ ದ್ರಷ್ಟವ್ಯಾ ಸರ್ವದಾ ನೃಭಿಃ ।
ವಿಶೇಷೇಣ ಕಲೌ ಬ್ರಹ್ಮನ್ ದ್ವಿಜರೂಪೋ ಹ್ಯವಸ್ಥಿತಃ
ತಸ್ಮಾದ್ಬ್ರಾಹ್ಮಣಭಕ್ತಾ ಯೇ ತೇ ಮೇ ಭಕ್ತಾ ನ ಸಂಶಯಃ ॥ ೧೭೮ ॥

ಯೋ ಮಾಂ ಪ್ರಾಪ್ತುಮಿಹೇಚ್ಛೇತ ಯಸ್ಯಾವಾಚ್ಯಂ ನ ವಿದ್ಯತೇ ।
ಅನನ್ಯಮಾನಸೋ ಭೂತ್ವಾ ಮದ್ಭಕ್ತೇಷು ನಿಯೋಜಯೇತ್ ॥ ೧೭೯ ॥

ಗಚ್ಛ ಬ್ರಾಹ್ಮಣ ಸಿದ್ಧೋಽಸಿ ಯದಾ ಪ್ರಾಣನ್ವಿಮೋಕ್ಷ್ಯಸಿ ।
ತದಾ ಗಂತಾಸಿ ಮತ್ಸ್ಥಾನಂ ಶ್ವೇತದ್ವೀಪಂ ನ ಸಂಶಯಃ ॥ ೧೮೦ ॥

---

೧೭೭. ಬ್ರಾಹ್ಮಣೋತ್ತಮನೇ, ನನ್ನ ದರ್ಶನಾಸಕ್ತರೂ, ಭಕ್ತರೂ ಆದ ದ್ವಿಜರು ನನ್ನನ್ನು ಅರಿತಿರುವುದರಲ್ಲಿ ಸಂದೇಹವಿಲ್ಲ.

೧೭೮. ಶುದ್ಧರಾದ ಭಾಗವತರು ಜನರಿಗೆ ಯಾವಾಗಲೂ ಪೂಜ್ಯರು. ದರ್ಶನೀಯರು. ಬ್ರಾಹ್ಮಣನೇ, ಕಲಿಯುಗದಲ್ಲಿ ನಾನು ವಿಶೇಷವಾಗಿ ದ್ವಿಜರೂಪದಿಂದಿರುವೆನು. ಆದುದರಿಂದ ಯಾರು ಬ್ರಾಹ್ಮಣಭಕ್ತರೋ ಅವರು ನನ್ನ ಭಕ್ತರು. ಸಂದೇಹವಿಲ್ಲ.

೧೭೯. ಯಾರು ಆಡಬಾರದುದನ್ನು ಆಡದವರಾಗಿ ನನ್ನನ್ನು ಸೇರಲು ಬಯಸುವರೋ ಅವರು ಅನನ್ಯಮನಸ್ಕರಾಗಿ ನನ್ನ ಭಕ್ತರನ್ನು ಆಶ್ರಯಿಸಬೇಕು.

೧೮೦. ಬ್ರಾಹ್ಮಣನೇ, ನೀನು ಸಿದ್ಧಿಯನ್ನು ಪಡೆದಿದ್ದೀಯೆ. ಹೊರಡು. ನೀನು ಪ್ರಾಣಗಳನ್ನು ಬಿಟ್ಟಾಗ ನನ್ನ ಸ್ಥಾನವಾದ ಶ್ವೇತದ್ವೀಪ(ವೈಕುಂಠ)ಕ್ಕೆ ಬರುವೆ. ಸಂಶಯವಿಲ್ಲ.”

ಏವಮುಕ್ತ್ವಾ ವರಾರೋಹೇ ತತ್ರೈವಾಂತರ್ಹಿತೋಽಭವಂ ।
ಸೋಽಪಿ ದ್ವಿಜಸ್ತನ್ವಂ ತ್ಯಕ್ತ್ವಾ ಮಾಯಾತೀರ್ಥೇ ಯಶಸ್ವಿನಿ
ಕೃತ್ವಾ ಸುದುಷ್ಕರಂ ಕರ್ಮ ಶ್ವೇತದ್ವೀಪಮುಪಾಗತಃ ॥ ೧೮೧ ॥

ಧನ್ವೀ ತೂಣೀ ಶರೀ ಖಡ್ಗೀ ಮಾಯಾಬಲಪರಾಕ್ರಮಃ ।
ಮಾಂ ಚ ಪಶ್ಯತಿ ವೈ ನಿತ್ಯಂ ಮಾಯಾಬಲಸುಸಂಸ್ಥಿತಂ ॥ ೧೮೨ ॥

ಮಾಯಯಾ ಕಿಂ ತವ ಧರೇ ನ ಮಾಯಾಂ ಜ್ಞಾತುಮರ್ಹಸಿ ।
ಮಮ ಮಾಯಾಂ ನ ಜಾನಂತಿ ದೇವದಾನವರಾಕ್ಷಸಾಃ ॥ ೧೮೩ ॥

ಏತತ್ತೇ ಕಥಿತಂ ಭೂಮೇ ಮಾಯಾಖ್ಯಾನಂ ಮಹೌಜಸಂ ।
ಮಾಯಾಚಕ್ರಮಿತಿ ಖ್ಯಾತಂ ಸರ್ವಪುಣ್ಯಸುಖಾವಹಂ ॥ ೧೮೪ ॥

---

೧೮೧. ವರಾರೋಹೇ, ಯಶಸ್ವಿನೀ, ನಾನು ಹೀಗೆ ಹೇಳಿ, ಅಲ್ಲಿಯೇ ಕಣ್ಮರೆಯಾದೆನು. ಆ ಬ್ರಾಹ್ಮಣನೂ ಅತಿ ಕಷ್ಟವಾದ ಕರ್ಮಗಳನ್ನಾಚರಿಸಿ, ಮಾಯಾತೀರ್ಥದಲ್ಲಿ ದೇಹವನ್ನು ತ್ಯಜಿಸಿ ವೈಕುಂಠಕ್ಕೆ ಬಂದನು.

೧೮೨. ಬಿಲ್ಲುಬಾಣಕತ್ತಿಗಳನ್ನು ಧರಿಸಿದವನೂ, ಮಾಯಾಬಲಪರಾಕ್ರಮಗಳುಳ್ಳವನೂ ಆದ ಅವನು ಅಲ್ಲಿ ಯಾವಾಗಲೂ, ಮಾಯಾಬಲದಿಂದ ನೆಲಸಿರುವ ನನ್ನನ್ನು ನೋಡುತ್ತಿರುವನು.

೧೮೩. ಧರೇ, ಮಾಯೆಯಿಂದ ನಿನಗೇನಾಗಬೇಕು ? ನೀನು ಮಾಯೆಯನ್ನು ತಿಳಿಯಲು ಅರ್ಹಳಲ್ಲ. ದೇವದಾನವರಾಕ್ಷಸರೂ ನನ್ನ ಮಾಯೆಯನ್ನು ಅರಿಯರು.

೧೮೪. ಭೂದೇವಿ, ಅತ್ಯುಜ್ವಲವಾದ ಈ ಮಾಯಾಚರಿತ್ರೆಯನ್ನು ನಿನಗೆ ನಾನು ಹೇಳಿದ್ದೇನೆ. ಮಾಯಾಚಕ್ರವೆಂಬ ಹೆಸರಿನ ಇದು ಸರ್ವಪುಣ್ಯವನ್ನೂ ಸುಖವನ್ನೂ ಉಂಟುಮಾಡುವುದು.

೧೩

ಆಖ್ಯಾನಾನಾಂ ಮಹಾಖ್ಯಾನಂ ತಪಸಾಂ ಚ ಪರಂ ತಪಃ ।
ಪುಣ್ಯಾನಾಂ ಪರಮಂ ಪುಣ್ಯಂ ಗತೀನಾಂ ಚ ಪರಾ ಗತಿಃ ॥ ೧೮೫ ॥

ನಿತ್ಯಂ ಪಠೇದ್ಯೋ ಭಕ್ತೇಷು ಅಭಕ್ತೇಷು ನ ಕೀರ್ತಯೇತ್ ।
ಮಾ ಪಠೇನ್ನೀಚಮಧ್ಯೇಷು ಮಾ ಪಠೇಚ್ಛಾಸ್ತ್ರದೂಷಕೇ ॥ ೧೮೬ ॥

ಅಗ್ರತಃ ಪೃಚ್ಛತಾಶೂದ್ರಮದ್ಭಕ್ತೇಷು ತಥಾಗ್ರತಃ ।
ಪಠತೇ ಶೋಭತೇ ವಿಪ್ರೋ ನ ತು ಯೇ ಶಾಸ್ತ್ರದೂಷಕಾಃ ॥ ೧೮೭ ॥

ಕಲ್ಯಮುತ್ಥಾಯ ಯೋ ಭೂಮೇ ಪಠತೇ ಚ ದೃಢವ್ರತಃ ।
ತೇನ ದ್ವಾದಶವರ್ಷಾಣಿ ಮಮಾಗ್ರೇ ಪಠಿತಂ ಭವೇತ್ ॥ ೧೮೮ ॥

ಅಥ ಪೂರ್ಣೇನ ಕಾಲೇನ ಪುಮಾನ್ಪಂಚತ್ವಮಾಗತಃ ।
ಮದ್ಭಕ್ತೋ ಜಾಯತೇ ದೇವಿ ವಿಯೋನಿಂ ನ ಚ ಗಚ್ಛತಿ ॥ ೧೮೯ ॥

---

೧೮೫. ಚರಿತ್ರೆಗಳಲ್ಲಿ ಇದು ಮಹಾಚರಿತ್ರೆ; ತಪಸ್ಸುಗಳಲ್ಲಿ ಪರಮತಪಸ್ಸು; ಪುಣ್ಯಗಳಲ್ಲಿ ಪರಮಪುಣ್ಯ; ಗತಿಗಳಲ್ಲಿ ಪರಮಗತಿ.

೧೮೬. ಇದನ್ನು ನಿತ್ಯವೂ ಹೇಳುವವನು ಭಕ್ತರಿಗೆ ಹೇಳಬೇಕು. ಭಕ್ತರಲ್ಲದವರಿಗೂ, ಶಾಸ್ತ್ರದೂಷಕರಿಗೂ, ನೀಚರ ಮಧ್ಯದಲ್ಲೂ ಹೇಳಬಾರದು.

೧೮೭. ಕೇಳಲು ಬಯಸುವ ಶೂದ್ರಭಕ್ತರೆದುರಿಗೂ ಹೇಳುವ ಬ್ರಾಹಣನು ಪ್ರಕಾಶಕ್ಕೆ ಬರುವನು.

೧೮೮. ಭೂಮಿ, ಯಾರು ಬೆಳಗ್ಗೆ ಎದ್ದು, ದೃಢನಿಯಮವುಳ್ಳವನಾಗಿ, ಇದನ್ನು ಓದುವನೋ(ಹೇಳುವನೋ)ಅವನು ಹನ್ನೆರಡುವರ್ಷಕಾಲ ನನ್ನೆದುರಿಗೆ ಓದಿ(ಹೇಳಿ)ದವನಾಗುವನು.

೧೮೯. ದೇವಿ, ಹಾಗೆ ಹೇಳುವವನು ಆಯುಸ್ಸು ಕಳೆದು ಮೃತನಾದರೆ ನನ್ನ ಭಕ್ತನಾಗಿ ಹುಟ್ಟುವನು. ಹೀನಜನ್ಮಕ್ಕೆ ಹೋಗುವುದಿಲ್ಲ.

ಯ ಏವಂ ಶೃಣುಯಾನ್ನಿತ್ಯಂ ಮಹಾಖ್ಯಾನಂ ವಸುಂಧರೇ ।
ನ ಸ ಜಾಯೇತ ಮಂದಾತ್ಮಾ ವಿಯೋನಿಂ ನೈವ ಗಚ್ಛತಿ ॥ ೧೯೦ ॥

ಏತತ್ತೇ ಕಥಿತಂ ಭದ್ರೇ ತ್ವಯಾ ಯತ್ಪೂರ್ವಮೀಪ್ಸಿತಂ ।
ಮುಚ್ಯಮಾನಾ ವರಾರೋಹೇ ಕಿಮನ್ಯತ್ಪರಿಪೃಚ್ಛಸಿ ॥ ೧೯೧ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಮಾಯಾಚಕ್ರಂ ನಾಮ ಪಂಚವಿಂಶತ್ಯಧಿಕಶತತಮೋಽಧ್ಯಾಯಃ

---

೧೯೦. ವಸುಂದರೇ, ನಿತ್ಯವೂ ಈ ಮಹಾಖ್ಯಾನವನ್ನು ಕೇಳುವವನು ಹೀನಜನ್ಮದವನಾಗಿಯೂ, ಮಂದಾತ್ಮನಾಗಿಯೂ ಹುಟ್ಟನು.

೧೯೧. ಭದ್ರೇ, ವರಾರೋಹೇ, ನೀನು ಮುಂಚೆ ಬಯಸಿದ ಇದನ್ನು ನಿನಗೆ ಹೇಳಿದ್ದೇನೆ ಇದನ್ನು ಬಿಟ್ಟು ಬೇರಾವುದನ್ನು ಕೇಳುತ್ತೀಯೆ?

ಅಧ್ಯಾಯದ ಸಾರಾಂಶ :—

ಭೂದೇವಿಯಿಂದ ಮಾಯಾಸ್ವರೂಪವನ್ನು ಹೇಳಬೇಕೆಂದು ಪ್ರಾರ್ಥಿತನಾದ ಶ್ರೀವರಾಹನು, ಆಕೆಗೆ ಮಾಯೆಯ ವಿಚಾರವು ಬೇಕಿಲ್ಲವೆಂದು, ಅದು ಎಲ್ಲೆಲ್ಲಿಯೂ ವ್ಯಾಪಿಸಿರುವುದೆಂಬುದನ್ನೂ, ಸೋಮಶರ್ಮನೆಂಬ ಋಷಿಗೆ ತಾನು ತೋರಿಸಿದ ಮಾಯಾಚರಿತ್ರೆಯನ್ನೂ, ಅದರ ಶ್ರವಣಫಲವನ್ನೂ ಹೇಳಿ ವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರಿಪ್ಪತ್ತೈದನೆಯ ಅಧ್ಯಾಯ.

|| ಶ್ರೀಃ ||

–x–

ಷಡ್ವಿಂಶತ್ಯಧಿಕಶತತಮೋಽಧ್ಯಾಯಃ

ಅಥ ಕುಬ್ಜಾಮ್ರಕಮಾಹಾತ್ಮ್ಯಂ

|| ತತ್ರ ರೈಭ್ಯಾನುಗ್ರಹಃ ||

ಶ್ರುತ್ವಾ ಮಾಯಾಬಲಂ ಹ್ಯೇತದ್ಧರಣೀ ಶಂಸಿತವ್ರತಾ |
ವರಾಹರೂಪಿಣಂ ದೇವಂ ಪ್ರತ್ಯುವಾಚ ವಸುಂಧರಾ || ೧ ||

|| ಧರಣ್ಯುವಾಚ ||

ಯತ್ತ್ವತ್ಕುಬ್ಜಾಮ್ರಕೇ ದೇವ ಭಾಷಸೇ ತದನಂತಕಂ |
ನ ತತ್ರಾಹಂ ವಿಜಾನಾಮಿ ಪೂರ್ವಮುಕ್ತಂ ಚ ಯತ್ತ್ವಯಾ || ೨ ||

ಯಚ್ಚ ಕುಬ್ಜಾಮ್ರಕೇ ಪುಣ್ಯಂ ಪುಷ್ಟಿಸ್ತಸ್ಯ ಸನಾತನೀ |
ಏತನ್ಮೇ ಪರಮಂ ಗುಹ್ಯಂ ಭಗವನ್ವಕ್ತುಮರ್ಹಸಿ || ೩ ||

ನೂರಿಪ್ಪತ್ತಾರನೆಯ ಅಧ್ಯಾಯ

ಕುಬ್ಜಾಮ್ರಕಕ್ಷೇತ್ರ ಮಹಿಮೆ

೧. ರೈಭ್ಯಾನುಗ್ರಹ—ಪ್ರಶಸ್ತವ್ರತೆಯಾದ ಭೂದೇವಿಯು ವರಾಹರೂಪಿಯಾದ ದೇವನಿಂದ(ಹಿಂದೆ ಹೇಳಿದ)ಮಾಯಾಬಲವನ್ನು ಕೇಳಿ, ಅವನೊಡನೆ ಮತ್ತೆ ನುಡಿದಳು.

೨-೩. ಧರಣೀದೇವಿ—ದೇವ, ಕುಬ್ಜಾಮ್ರಕಕ್ಷೇತ್ರದ ವಿಚಾರವು ಅನಂತವಾಗಿದೆಯೆಂದು ನೀನು ಹಿಂದೆ ಹೇಳಿದೆ. ಆ ವಿಚಾರವು ನನಗೇನೂ ತಿಳಿಯದು. ಕುಬ್ಜಾಮ್ರಕಕ್ಷೇತ್ರದ ಪುಣ್ಯವೇನು ? ಅದರ ಸನಾತನವಾದ ವೃದ್ಧಿ(ಏಳಿಗೆ)ಯೇನು ? ಭಗವಂತನೇ, ಈ ಅತಿರಹಸ್ಯವನ್ನು ನನಗೆ ಹೇಳಬೇಕು.

॥ ವರಾಹ ಉವಾಚ ॥

ಸರ್ವಂ ತತ್ಕಥಯಿಷ್ಯಾಮಿ ಸರ್ವಲೋಕಸುಖಾವಹಂ ।
ಯಾ ಚ ಕುಬ್ಜಾಮ್ರಕೇ ಪುಷ್ಟಿರ್ಯಚ್ಚ ತೀರ್ಥಮನಿಂದಿತೇ ॥ ೪ ॥

ತಚ್ಚ ಕಾರ್ತ್ಸ್ನ್ಯೇನ ಮೇ ದೇವಿ ಶೃಣು ತತ್ವೇನ ಸುಂದರಿ ।
ಯಥಾ ಕುಬ್ಜಾಮ್ರಕೋ ಜಾತಃ ತತಸ್ತೀರ್ಥಂ ಯಥಾಕ್ರಮಂ
ಯಚ್ಚ ಕರ್ಮ ಯತೋ ಭೂಮೇ ಸ್ನಾತೋ ಯಾತಿ ಮೃತೋಽಪಿ ಚ॥೫॥

ಯುಗೇ ಸಪ್ತದಶೇ ಭೂಮೇ ಕೃತ್ವಾ ಚೈಕಾಂ ವಸುಂಧರಾಂ । ॥ ೬ ॥

ಮಧುಕೈಟಭೌ ತಥಾ ಹತ್ವಾ ಬ್ರಹ್ಮಣೋ ವಚನಾತ್ತದಾ ।
ಜಲಸಂಹರಣಂ ಕೃತ್ವಾ ಮಮಾಧಾರಮುಪಾಗತಃ ॥ ೭ ॥

೪-೫. ಶ್ರೀವರಾಹ—ನನ್ನ ದೇವಿ, ಸುಂದರಿ, ಸ್ತುತ್ಯೆ, ಭೂಮಿ, ಕುಬ್ಜಾಮ್ರಕದ ಪುಷ್ಟಿಯನ್ನೂ, ಅಲ್ಲಿರುವ ತೀರ್ಥಗಳನ್ನೂ ನಿಜವಾಗಿ ಹೇಳುತ್ತೇನೆ ಕುಬ್ಜಾಮ್ರಕವೆಂಬುದು ಹೇಗಾಯಿತೆಂಬುದನ್ನೂ, ಬಳಿಕ ಕ್ರಮವಾಗಿ ಅಲ್ಲಿರುವ ತೀರ್ಥಗಳನ್ನೂ, ಅಲ್ಲಿ ಮಾಡಬೇಕಾದ ಕರ್ಮಗಳನ್ನೂ, ಅಲ್ಲಿ ಸ್ನಾನಮಾಡಿದವನೂ, ಮೃತನಾದವನೂ ಯಾವ ಗತಿಯನ್ನು ಪಡೆಯುವನೆಂಬುದನ್ನೂ ಹೇಳುತ್ತೇನೆ. ಸರ್ವಲೋಕ ಸುಖಕರವಾದ ಅದೆಲ್ಲವನ್ನೂ ಪೂರ್ತಿಯಾಗಿ ಕೇಳು.

೬-೭. ಭೂದೇವಿ, ಹದಿನೇಳನೆಯ ಯುಗದಲ್ಲಿ ಭೂಮಿಯಾದ ನಿನ್ನನ್ನು ಉದ್ಧರಿಸಿ, ಒಬ್ಬದೇವಿಯನ್ನಾಗಿ ಮಾಡಿ, ಬ್ರಹ್ಮನ ಪ್ರಾರ್ಥನೆಯಂತೆ ಮಧುಕೈಟಭರೆಂಬ ರಾಕ್ಷಸರನ್ನು ಕೊಂದು, ನೀರನ್ನೂ ಕಡಿಮೆಮಾಡಿ ನನ್ನ ನೆಲೆಗೆ ಬಂದೆನು.

ಪಶ್ಯಾಮಿ ತಂ ನತಂ ಭೂಮೇ ರೈಭ್ಯಂ ನಾಮ ಮಹಾಮುನಿಂ ।
ಮಮೈವಾರಾಧನೇ ಯುಕ್ತಂ ಸರ್ವಕರ್ಮಸು ನಿಷ್ಠಿತಂ ।
ಯುಕ್ತಿಮಂತಂ ಗುಣಜ್ಞಂ ಚ ಶುಚಿಂ ದಕ್ಷಂ ಜಿತೇಂದ್ರಿಯಂ ॥ ೮ ॥

ದಶವರ್ಷಸಹಸ್ರಾಣಿ ಊರ್ಧ್ವಬಾಹುಸ್ಸ ತಿಷ್ಠತಿ ॥ ೯ ॥

ಸಹಸ್ರಂ ಚಾಂಬುಭಕ್ಷೇಣ ತಥಾ ಶೈವಾಲಭಕ್ಷಣಂ ।
ವರ್ಷಾಣಾಂ ಚ ಶತಂ ಪಂಚ ತಿಷ್ಠತೇ ಸ ಮಹಾಮುನಿಃ ॥ ೧೦ ॥

ತತಃ ಪ್ರೀತೋಽಸ್ಮ್ಯಹಂ ದೇವಿ ರೈಭ್ಯಸ್ಯ ಚ ಮಹಾತ್ಮನಃ ।
ಭಕ್ತ್ಯಾ ಚ ಪರಯಾ ಚೈವತೇನ ಚಾರಾಧಿತೋ ಹ್ಯಹಂ ॥ ೧೧ ॥

ತತೋ ವೈ ತಪ್ಯಮಾನಂ ತಂ ಗಂಗಾದ್ವಾರಮುಪಾಗತಂ ।
ಆಮ್ರವೃಕ್ಷಂ ಸಮಾಸಾದ್ಯ ದೃಷ್ಟಸ್ಸ ಮುನಿಪುಂಗವಃ ॥ ೧೨ ॥

---

೮ ಭೂಮೀ, ಅಲ್ಲಿ ನನಗೆ ವಂದಿಸಿದ, ನನ್ನ ಆರಾಧನೆಯಲ್ಲೇ ನಿರತನೂ, ಸರ್ವಕರ್ಮಸುನಿಷ್ಠನೂ, ಯುಕ್ತಿವಂತನೂ, ಗುಣಜ್ಞನೂ, ಪರಿಶುದ್ಧನೂ, ದಕ್ಷನೂ, ಜಿತೇಂದ್ರಿಯನೂ ಆದ ರೈಭ್ಯನೆಂಬ ಮಹರ್ಷಿಯನ್ನು ನೋಡಿದೆನು.

೯-೧೦. ಆತನು ತೋಳುಗಳನ್ನು ಮೇಲೆತ್ತಿ ಹತ್ತುಸಾವಿರವರ್ಷವೂ, ಜಲಾಹಾರನಾಗಿ ಒಂದುಸಾವಿರವರ್ಷವೂ, ಪಾಚಿಯನ್ನು ತಿಂದು ಐನೂರು ವರ್ಷವೂ ನಿಂತು ತಪಸ್ಸನ್ನು ಮಾಡುತ್ತಿದ್ದನು.

೧೧. ದೇವಿ, ಪರಮಭಕ್ತಿಯಿಂದ ಆರಾಧಿತನಾದ ನಾನು ಆ ಮಹಾತ್ಮನಾದ ರೈಭ್ಯನ ವಿಷಯದಲ್ಲಿ ಪ್ರೀತಿನಾದೆನು.

೧೨. ಗಂಗಾದ್ವಾರದಲ್ಲಿ ನಿಂತು ತಪಸ್ಸನ್ನು ಮಾಡುತ್ತಿದ್ದ ಆ ಮುನಿವರ್ಯನನ್ನು ನಾನು ಒಂದು ಮಾವಿನಮರ(ಆಮ್ರ)ದ ಮೇಲೆ ನಿಂತು ನೋಡಿದೆನು.

ದರ್ಶಿತೋಽಯಂ ಮಯಾ ಚಾತ್ಮಾ ಹೇತುಮಾತ್ರೇಣ ಕೇನಚಿತ್ ।
ಮಯಾ ಯದಾಶ್ರಿತಶ್ಚಾಮ್ರಃ ತೇನ ಕುಬ್ಜತ್ವಮಾಗತಃ ॥ ೧೩ ॥

ಏವಂ ಕುಬ್ಜಾಮ್ರಕಂ ಖ್ಯಾತಂ ಸ್ಥಾನಮೇತನ್ಮನಸ್ವಿನಿ ।
ಮೃತಾಪಿ ತತ್ರ ಗಚ್ಛಂತಿ ಮಮ ಲೋಕಾಯ ಕೇವಲಂ ॥ ೧೪ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ದೃಷ್ಟ್ವಾ ಸ ಮಾಮೃಷಿಶ್ಚೈವ ಯಾನಿ ವಾಕ್ಯಾನಿ ಭಾಷತೇ ।
ಏವಂ ತತ್ರಮಯಾ ದೃಷ್ಟಃ ಕುಬ್ಜರೂಪಂ ಸಮಾಸ್ಥಿತಃ ॥ ೧೫ ॥

ಜಾನುಭ್ಯಾಮವನಿಂ ಗತ್ವಾ ಕಿಂಚಿದೇವ ಪ್ರಭಾಷತೇ ॥ ೧೬ ॥

ನಮಸ್ಕೃತ್ಯ ಸ್ಥಿತಂ ತಂ ತು ಮುನಿಂ ವೈ ಶಂಸಿತವ್ರತಂ ।
ವರೇಣ ಛಂದಯಾಮಾಸ ಅಹಂ ಪ್ರೀತಮನಾ ಧರೇ ॥ ೧೭ ॥

---

೧೩. ಬಳಿಕ ನಾನು ಯಾವುದೋ ಒಂದು ನೆಪದಿಂದ ಅವನಿಗೆ ಕಾಣಿಸಿಕೊಂಡೆನು. ನಾನು ನಿಂತುದರಿಂದ ಆ ಮಾವಿನಮರವು ಕುಳ್ಳಾಯಿತು.

೧೪. ಮನಸ್ವಿನಿ, ಹೀಗೆ ಆ ಸ್ಥಳವು 'ಕುಬ್ಜಾಮ್ರಕ'(ಕುಳ್ಳುಮಾವಿನಮರವುಳ್ಳುದು) ಎಂದು ಪ್ರಸಿದ್ಧವಾಯಿತು. ಆ ಕ್ಷೇತ್ರದಲ್ಲಿ ಮೃತರಾದವರೂ ನನ್ನ ಲೋಕವನ್ನೇ ಸೇರುವರು.

೧೫. ವಸುಂಧರೇ, ಕುಳ್ಳಾದ ಮಾವಿನಮರದಲ್ಲಿ ನಿಂತು, ನಾನು ಹಾಗೆ ನೋಡಿದ ಆ ಋಷಿಯು, ನನ್ನನ್ನು ನೋಡಿ ಯಾವ ಮಾತುಗಳನ್ನಾಡಿದನೆಂಬ ಬೇರೆಯ ವಿಚಾರವನ್ನೂ ಹೇಳುತ್ತೇನೆ. ಅದನ್ನೂ ಕೇಳು.

೧೬-೧೭. ಮೊಳಕಾಲೂರಿ, ನೆಲದಮೇಲೆ ನಿಂತು, ಆತನು ಸ್ವಲ್ಪವೇ ಮಾತನಾಡಿದನು. ಧರೇ, ಸ್ತುತ್ಯವ್ರತನಾಗಿ, ನಮಸ್ಕರಿಸಿ ನಿಂತ ಆ ಮುನಿಯನ್ನು ಪ್ರೀತಮನನಾದ ನಾನು ವರದಿಂದ ಸಂತೈಸಿದೆನು.

ಮಮೈವ ವಚನಂ ಶ್ರುತ್ವಾ ಸ ಮುನಿಸ್ತಪಸಾನ್ವಿತಃ ।
ಉವಾಚ ಮಧುರಂ ವಾಕ್ಯಂ ಪ್ರಸಾದಾರ್ಥೀ ಮಹಾಯಶಾಃ ॥ ೧೮ ॥

ಯದಿ ಪ್ರಸನ್ನೋ ಭಗವಾನ್ ಲೋಕನಾಥೋ ಜನಾರ್ದನಃ ।
ತವ ಚಾತ್ರ ನಿವಾಸಂ ವೈ ದೇವ ಇಚ್ಛಾಮಿ ನಿತ್ಯಶಃ ॥ ೧೯ ॥

ಯಾವಲ್ಲೋಕಾ ಧರಿಷ್ಯಂತಿ ತಾವಚ್ಚೈವ ಮಹಾಪ್ರಭೋ ।
ಸ್ಥಾನಂ ತವ ಹೃಷೀಕೇಶ ಇಚ್ಛಾಮಿ ಮಧುಸೂದನ ॥ ೨೦ ॥

ತ್ವಯಿ ಭಕ್ತಿಸ್ಸದಾ ಭೂಯಾದ್ಯಾವತ್ ಸ್ಥಾನಂ ಜನಾರ್ದನ ।
ಅನ್ಯಭಕ್ತಿರ್ಮಮ ವಿಭೋ ರೋಚತೇ ನ ಕದಾಚನ ॥ ೨೧ ॥

ಏತದೇವ ಪರಂ ಚಿತ್ತೇ ಮಯಾ ಚೈವ ವಿಧಾರ್ಯತೇ ।
ಉಪೇಂದ್ರ ಯದಿ ತುಷ್ಟೋಽಸಿ ಮಮಾಯಂ ದೀಯತಾಂ ವರಃ ॥ ೨೨ ॥

---

೧೮. ಮಹಾಯಶಸ್ವಿಯೂ, ತಪಸ್ವಿಯೂ, ನನ್ನ ಅನುಗ್ರಹವನ್ನು ಬಯಸುವವನೂ ಆದ ಆ ಮುನಿಯು ನನ್ನ ಮಾತನ್ನು ಕೇಳಿದೊಡನೆಯೇ ಇಂಪಾದ(ಮುಂದಿನ)ಮಾತನಾಡಿದನು.

೧೯. "ಲೋಕನಾಥನೂ, ಜನಾರ್ದನನೂ, ಭಗವಂತನೂ ಆದ ನೀನು ನನಗೆ ಒಲಿದಿರುವೆಯಾದರೆ, ದೇವ, ನೀನು ಯಾವಾಗಲೂ ಇಲ್ಲೇ ನೆಲೆಸಿರಬೇಕೆಂದು ಬಯಸುತ್ತೇನೆ.

೨೦. ಮಧುಸೂದನ, ಹೃಷೀಕೇಶ, ಮಹಾಪ್ರಭೂ, ಲೋಕಗಳಿರುವವರೆಗೂ, ನೀನು ಇಲ್ಲಿ ನೆಲೆಸಬೇಕೆಂದು ಇಚ್ಛಿಸುತ್ತೇನೆ"

೨೧. ಜನಾರ್ದನ, ವಿಭೂ, ನೀನು ಇಲ್ಲಿ ನೆಲೆಸಿರುವವರೆಗೂ ನನಗೆ ನಿನ್ನಲ್ಲಿ ಯಾವಾಗಲೂ ಭಕ್ತಿಯುಂಟಾಗಲಿ. ಅನ್ಯಭಕ್ತಿಯು ನನಗೆಂದೂ ರುಚಿಸುವುದಿಲ್ಲ.

೨೨. ಉಪೇಂದ್ರನೇ, ಇದೇ ನನ್ನ ಮನಸ್ಸಿನಲ್ಲಿ ಅತಿಯಾಗಿ ನೆಲಸಿದೆ ನೀನು ತೃಪ್ತನಾಗಿ ಒಲಿದಿದ್ದರೆ ನನಗೆ ಈ ವರವನ್ನು ನೀಡು."

ತತಸ್ತಸ್ಯ ವಚಃ ಶ್ರುತ್ವಾ ರೈಭ್ಯಸ್ಯರ್ಷೇರಹಂ ಪುನಃ ।
ಬಾಢಮಿತ್ಯೇವ ಬ್ರಹ್ಮರ್ಷೇ ಏವಮೇತದ್ಭವಿಷ್ಯತಿ ॥ ೨೩ ॥

ಮಮೈವಂ ವಚನಂ ಶ್ರುತ್ವಾ ಬ್ರಾಹ್ಮಣಸ್ಸ ವಸುಂಧರೇ ।
ಮುಹೂರ್ತಂ ಧ್ಯಾನಮಾಸ್ಥಾಯ ಮಾಮುವಾಚ ಮುದಾನ್ವಿತಃ ॥ ೨೪ ॥

ಏತಸ್ಯ ತೀರ್ಥವರ್ಯಸ್ಯ ಮಹಿಮಾನಂ ತ್ವಯಾ ಪ್ರಭೋ ।
ಶೃಣು ವೈ ಕಥ್ಯಮಾನಂ ತು ವದ ಲೋಕೋಪಕಾರಕ ॥ ೨೫ ॥

ಅನ್ಯಾನಿ ಯಾನಿ ತೀರ್ಥಾನಿ ಏತತ್ಕ್ಷೇತ್ರಾಶ್ರಿತಾನಿ ತು ।
ತಾನ್ಯಪಿ ಶ್ರೋತುಮಿಚ್ಛಾಮಿ ಕಥ್ಯಮಾನಾನಿ ಚ ತ್ವಯಾ ॥ ೨೬ ॥

ಶೃಣು ತತ್ವೇನ ಮೇ ಬ್ರಹ್ಮನ್ ಯನ್ಮಾಂ ತ್ವಂ ಪರಿಪೃಚ್ಛಸಿ ।
ತೀರ್ಥೇ ಕುಬ್ಜಾಮ್ರಕೇ ಪುಣ್ಯೇ ಮಮ ಲೋಕೇ ಸುಖಾವಹೇ ॥ ೨೭ ॥

---

೨೩. ಆ ರೈಭ್ಯಮುನಿಯ ಆ ಮಾತನ್ನು ಕೇಳಿ, ಬಳಿಕ ನಾನು, "ಬ್ರಹ್ಮರ್ಷಿಯೇ, ನಿಜವಾಗಿಯೂ ನೀನು ಹೇಳಿದಂತಾಗುವುದು" ಎಂದೆನು.

೨೪. ವಸುಂಧರೇ, ನನ್ನ ಮಾತನ್ನು ಕೇಳಿ, ಆ ಬ್ರಾಹ್ಮಣನು ಸ್ವಲ್ಪಕಾಲ ಆಲೋಚಿಸಿ, ಸಂತೋಷದಿಂದ ನನ್ನೊಡನೆ ಮತ್ತೆ ಮಾತನಾಡಿದನು.

೨೫-೨೬. "ಪ್ರಭುವೇ, ಲೋಕೋಪಕಾರೀ, ಶ್ರೇಷ್ಠವಾದ ಈ ತೀರ್ಥದ ಮಹಿಮೆಯನ್ನೂ, ಈ ಕ್ಷೇತ್ರದಲ್ಲಿರುವ ಬೇರೆಯ ತೀರ್ಥಗಳನ್ನೂ ನಿನ್ನ ಬಾಯಿಂದ ಕೇಳಲಿಚ್ಛಿಸುತ್ತೇನೆ. ಹೇಳು."

೨೭. "ಬ್ರಾಹ್ಮಣನೇ, ನನ್ನ ಲೋಕದಲ್ಲಿ ಸುಖವನ್ನುಂಟುಮಾಡುವ ಕುಬ್ಜಾಮ್ರಕ ಕ್ಷೇತ್ರವಿಚಾರದಲ್ಲಿ ನೀನು ನನ್ನನ್ನು ಕೇಳುವುದನ್ನೆಲ್ಲಾ ನಿಜವಾಗಿ ಹೇಳುತ್ತೇನೆ. ಕೇಳು. *[ಎಂದು ಆ ಋಷಿಗೆ ನಾನು ಹೇಳಿದುದನ್ನೇ ಈಗ ನಿನಗೆ ಹೇಳುತ್ತೇನೆ.]

---

* ಹಿಂದು ಮುಂದಿನ ವಾಕ್ಯಗಳು ಸಂಬದ್ಧವಾಗಲು ಆವಶ್ಯವಾಗಿರಬೇಕಾದ [ ] ಈ ಚಿಹ್ನೆಯೊಳಗಿನ ಮಾತನ್ನು ಮೂಲದಲ್ಲಿಲ್ಲವಾದರೂ ಸೇರಿಸಿದೆ.

ತೀರ್ಥಂ ತು ಕುಮುದಾಕಾರಂ ತಸ್ಮಿನ್ಕುಬ್ಜಾಮ್ರಕೇ ಸ್ಥಿತಂ ।
ಸ್ನಾನಮಾತ್ರೇಣ ಸುಶ್ರೋಣಿ ಸ್ವರ್ಗಂ ಪ್ರಾಪ್ನೋತಿ ಮಾನವಃ ॥ ೨೮ ॥

ಕೌಮುದಸ್ಯ ತು ಮಾಸಸ್ಯ ತಥಾ ಮಾರ್ಗಶಿರಸ್ಯ ಚ ।
ವೈಶಾಖಸ್ಯೈವ ಮಾಸಸ್ಯ ಕೃತ್ವಾ ಕರ್ಮ ಸುದುಷ್ಕರಂ ॥ ೨೯ ॥

ಯೋ ವೈ ಪರಿತ್ಯಜೇತ್ಪ್ರಾಣಾನ್ ಸ್ತ್ರೀ ಪುಮಾನ್ವಾ ನಪುಂಸಕಂ ।
ನಿಷ್ಕಲಾಂ ಲಭತೇ ಸಿದ್ಧೀ ಮಮ ಲೋಕಂ ಸ ಗಚ್ಛತಿ ॥ ೩೦ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ತೀರ್ಥಂ ಮಾನಸಮಿತ್ಯೇವ ವಿಖ್ಯಾತಂ ಮಮ ಸುಂದರಿ ।
ಯಸ್ಮಿನ್ ಸ್ನಾತ್ವಾ ವಿಶಾಲಾಕ್ಷೀ ಗಚ್ಛತೇ ನಂದನಂ ವನಂ ॥ ೩೧ ॥

ದಿವ್ಯಂ ವರ್ಷಸಹಸ್ರಂ ವೈ ಮೋದತೇ ಚಾಪ್ಸರೈಸ್ಸಹ ।
ಪೂರ್ಣೇ ವರ್ಷಸಹಸ್ರೇ ತು ಜಾಯತೇ ವಿಪುಲೇ ಕುಲೇ ॥ ೩೨ ॥

ದ್ರವ್ಯವಾನ್ ಗುಣವಾಂಶ್ಚೈವ ಜಾಯತೇ ತತ್ರ ಮಾನವಃ ॥ ೩೩ ॥

---

೨೮. ಸುಶ್ರೋಣಿ, ಆ ಕುಬ್ಜಾಮ್ರಕಕ್ಷೇತ್ರದಲ್ಲಿ ಕುಮುದಾಕಾರತೀರ್ಥವಿದೆ. ಅದರಲ್ಲಿ ಸ್ನಾನಮಾಡಿದ ಮಾತ್ರದಲ್ಲಿ ಮನುಷ್ಯನು ಸ್ವರ್ಗವನ್ನು ಪಡೆಯುವನು.

೨೯-೩೦. ಕಾರ್ತಿಕ, ಮಾರ್ಗಶಿರ, ವೈಶಾಖಮಾಸಗಳಲ್ಲಿ ಅತಿಕಷ್ಟವಾದ ಕರ್ಮವನ್ನಾಚರಿಸಿ, ಅಲ್ಲಿ ಪ್ರಾಣಬಿಡುವ ಸ್ತ್ರೀಪುರುಷನಪುಂಸಕರೆಲ್ಲರೂ ನಿಷ್ಕಳಂಕವಾದ ಸಿದ್ಧಿಯನ್ನು ಪಡೆದು, ನನ್ನ ಲೋಕವನ್ನು ಸೇರುವರು.

೩೧. ವಸುಂಧರೇ, ನನ್ನ ಸುಂದರಿ, ಬೇರೊಂದನ್ನೂ ನಿನಗೆ ಹೇಳುತ್ತೇನೆ. ಅದನ್ನು ಕೇಳು. ಮಾನಸವೆಂದು ವಿಖ್ಯಾತವಾದ ತೀರ್ಥವೊಂದಿದೆ. ವಿಶಾಲಾಕ್ಷಿ, ಅದರಲ್ಲಿ ಸ್ನಾನಮಾಡಿದವನು ನಂದನವನಕ್ಕೆ ಹೋಗುವನು.

೩೨-೩೩. ಅಲ್ಲಿ ದಿವ್ಯಸಹಸ್ರವರ್ಷಕಾಲ ಅಪ್ಸರರೊಡನೆ ಸಂತೋಷಪಟ್ಟು, ಸಾವಿರವರ್ಷವಾದ ಬಳಿಕ ದೊಡ್ಡದಾದ ವಂಶದಲ್ಲಿ ಹುಟ್ಟುವನು. ಅಲ್ಲದೆ ಐಶ್ವರ್ಯವಂತನೂ, ಗುಣವಂತನೂ ಆಗುವನು.

ತತ್ರಾಥ ಮುಂಚತೇ ಪ್ರಾಣಾನ್ ಕೌಮುದಸ್ಯ ತು ದ್ವಾದಶೀಂ |
ಪುಷ್ಕಲಾಂ ಲಭತೇ ಸಿದ್ಧಿಂ ಮಮ ಲೋಕಂ ಸ ಗಚ್ಛತಿ || ೩೪ ||

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ |
ಮಾಯಾತೀರ್ಥಮಿದಂ ಖ್ಯಾತಂ ಯೇನ ಮಾಯಾಂ ವಿಜಾನತೇ || ೩೫ ||

ತಸ್ಮಿನ್ಕೃತೋದಕೋ ದೇವಿ ಮಾಯಾತೀರ್ಥೇ ಮಹಾಯಶಾಃ |
ದಶವರ್ಷಸಹಸ್ರಾಣಿ ಮದ್ಭಕ್ತೋ ಜಾಯತೇ ನರಃ || ೩೬ ||

ಲಭತೇ ಪರಮಾಂ ಪುಷ್ಟಿಂ ಕುಬೇರಭವನಂ ಯಥಾ |
ಏಕಂ ಸಹಸ್ರಂ ವರ್ಷಾಣಾಂ ಸ್ವಚ್ಛಂದಗಮನಸ್ವಯಂ || ೩೭ ||

ಅಥವಾ ಮ್ರಿಯತೇ ತತ್ರ ಮಾಯಾತೀರ್ಥೇ ಯಶಸ್ವಿನಿ |
ಮಾಯಾಯೋಗೀ ತತೋ ಭೂತ್ವಾ ಮಮ ಲೋಕಾಯ ಗಚ್ಛತಿ || ೩೮ ||

---

೩೪. ಅಲ್ಲದೆ ಅಲ್ಲಿ ಕಾರ್ತಿಕಶುದ್ಧ-ದ್ವಾದಶಿಯದಿನ ಪ್ರಾಣಬಿಟ್ಟರೆ ಪೂರ್ಣಸಿದ್ಧಿಯನ್ನು ಪಡೆದು, ನನ್ನ ಲೋಕವನ್ನು ಸೇರುವನು.

೩೫. ವಸುಂಧರೇ, ಯಾವುದರಿಂದ ಮನುಷ್ಯನು ಮಾಯೆಯನ್ನು ತಿಳಿಯುತ್ತಾನೋ ಆ ಮಾಯಾತೀರ್ಥವೆಂಬ ಬೇರೊಂದನ್ನೂ ಕೇಳು.

೩೬. ದೇವಿ, ಅದರಲ್ಲಿ ಸ್ನಾನಮಾಡುವವನು ಮಹಾಯಶಸ್ವಿಯೂ, ಹತ್ತುಸಾವಿರವರ್ಷಕಾಲ ನನ್ನ ಭಕ್ತನೂ ಆಗುವನು.

೩೭. ಕುಬೇರನ ನೆಲೆಯಂತೆ ಪರಮೈಶ್ವರ್ಯವನ್ನೂ, ಒಂದುಸಾವಿರ ವರ್ಷಕಾಲ ಸ್ವೇಚ್ಛಾಗಮನವನ್ನೂ ಪಡೆಯುವನು.

೩೮. ಯಶಸ್ವಿನಿ, ಒಂದುವೇಳೆ ಮಾಯಾತೀರ್ಥದಲ್ಲಿ ಮೃತನಾದರೆ ಬಳಿಕ ಮಾಯಾಯೋಗಿಯಾಗಿ ನನ್ನ ಲೋಕವನ್ನು ಸೇರುವನು.

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ತೀರ್ಥಂ ಸರ್ವಾತ್ಮಕಂ ನಾಮ ಸರ್ವತೀರ್ಥಗುಣಾನ್ವಿತಂ ॥ ೩೯ ॥

ಯಸ್ತತ್ರ ಸ್ನಾತಿ ಕಶ್ಚಿದ್ವೈ ವೈಶಾಖಸ್ಯ ತು ದ್ವಾದಶೀಂ ।
ನಿಷ್ಕಲಂ ಲಭತೇ ಸ್ವರ್ಗಂ ಸಹಸ್ರಂ ದಶ ಪಂಚ ಚ ॥ ೪೦ ॥

ಅನ್ಯತ್ರ ಮುಂಚತೇ ಪ್ರಾಣಾನ್ ತೀರ್ಥೇ ಸಾರ್ಷಪಕೇ ತಥಾ ।
ಸರ್ವಸಂಗಂ ಪರಿತ್ಯಜ್ಯ ಮಮ ಲೋಕಂ ಚ ಗಚ್ಛತಿ ॥ ೪೧ ॥

ಪುನರನ್ಯತ್ಪ್ರವಕ್ಷ್ಯಾಮಿ ಶೃಣುಷ್ವ ಶುಭಲೋಚನೇ ।
ತೀರ್ಥಂ ಪೂರ್ಣಮುಖಂ ನಾಮ ತನ್ನ ಜಾನಾತಿ ಕಶ್ಚನ ॥ ೪೨ ॥

ತತ್ರ ಸರ್ವಾ ಭವೇದ್ಗಂಗಾ ಶೀತಲಂ ಜಾಯತೇ ಜಲಂ ।
ಯತ್ರ ಚೋಷ್ಣಂ ಭವತ್ಯಂಬು ಜ್ಞೇಯಂ ಪೂರ್ಣಮುಖಂ ತಥಾ ॥ ೪೩ ॥

---

೩೯. ವಸುಂಧರೇ, ನಿನಗೆ ಮತ್ತೊಂದನ್ನು ಹೇಳುತ್ತೇನೆ. ಕೇಳು. ಸರ್ವತೀರ್ಥಗುಣಗಳಿಂದ ಕೂಡಿದ 'ಸರ್ವಾತ್ಮಕ'ವೆಂಬ ತೀರ್ಥವೊಂದಿದೆ.

೪೦. ವೈಶಾಖಶುದ್ಧ ದ್ವಾದಶಿಯದಿನ ಅದರಲ್ಲಿ ಸ್ನಾನವಾಡುವ ಒಬ್ಬೊಬ್ಬನೂ ಹತ್ತುಸಾವಿರದಐನೂರುವರ್ಷಕಾಲ ನಿಷ್ಕಲಂಕವಾದ ಸ್ವರ್ಗವನ್ನು ಪಡೆಯುವನು.

೪೧. ಬೇರೆಯದಾದ ಸಾರ್ಷಪಕವೆಂಬ ತೀರ್ಥದಲ್ಲಿ ಪ್ರಾಣವನ್ನು ಬಿಟ್ಟವನು ಸರ್ವಸಂಗಪರಿತ್ಯಾಗಮಾಡಿ, ನನ್ನ ಲೋಕವನ್ನೂ ಸೇರುವನು.

೪೨. ಶುಭನೇತ್ರೇ, ಮತ್ತೊಂದನ್ನು ಹೇಳುತ್ತೇನೆ. ಕೇಳು. ಅಲ್ಲಿ ಪೂರ್ಣಮುಖವೆಂಬ ತೀರ್ಥವೊಂದಿದೆ. ಅದನ್ನು ಯಾರೂ ಅರಿಯರು.

೪೩. ಆ ಕ್ಷೇತ್ರದಲ್ಲಿರುವ ಗಂಗೆಯ ನೀರೆಲ್ಲವೂ ತಣ್ಣಗಿರುತ್ತದೆ. ಅದರೆ ಎಲ್ಲಿ ನೀರು ಬಿಸಿಯಾಗಿರುತ್ತದೆಯೋ ಅದು ಪೂರ್ಣಮುಖತೀರ್ಥ.

ಸ್ನಾತೋ ಗಚ್ಛತಿ ಸುಶ್ರೋಣಿ ಸೋಮಲೋಕೇ ಮಹೀಯತೇ ।
ಸೋಮಂ ತು ಪಶ್ಯತಿ ತದಾ ಸಹಸ್ರಂ ದಶ ಪಂಚ ಚ ॥ ೪೪ ॥

ತತಃ ಸ್ವರ್ಗಪರಿಭ್ರಷ್ಟೋ ಬ್ರಾಹ್ಮಣಶ್ಚೈವ ಜಾಯತೇ ।
ಮದ್ಭಕ್ತಶ್ಶುಚಿಮಾನ್ ದಕ್ಷಃ ಸರ್ವಕರ್ಮಗುಣಾನ್ವಿತಃ ॥ ೪೫ ॥

ಅಥವಾ ಮ್ರಿಯತೇ ತತ್ರ ಮಾಸಿ ಮಾರ್ಗಶಿರೇ ತಥಾ ।
ಶುಕ್ಲಪಕ್ಷೇ ಚ ದ್ವಾದಶ್ಯಾಂ ಮಮ ಲೋಕಂ ಚ ಗಚ್ಛತಿ ॥ ೪೬ ॥

ತತ್ರ ಪಶ್ಯತಿ ಮಾಂ ನಿತ್ಯಂ ದೀಪ್ತಿಮಂತಂ ಚತುರ್ಭುಜಂ ।
ನ ಜನ್ಮ ವಿದ್ಯತೇ ತಸ್ಯ ಮರಣಂ ಚ ಕದಾಚನ ॥ ೪೭ ॥

ಪುನರನ್ಯತ್ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ॥ ೪೮ ॥

---

೪೪ ಸುಶ್ರೋಣಿ, ಅಲ್ಲಿ ಸ್ನಾನಮಾಡಿದವನು ಚಂದ್ರಲೋಕದಲ್ಲಿ ವಾಸಿಸುವನಾಗಿ ಹತ್ತುಸಾವಿರದೈನೂರುವರ್ಷ ಚಂದ್ರನನ್ನು ಸಂದರ್ಶಿಸುತ್ತಿರುವನು.

೪೫. ಬಳಿಕ ಆ ಸ್ವರ್ಗದಿಂದ ಚ್ಯುತನಾಗಿ ಶುದ್ಧನೂ, ದಕ್ಷನೂ ಸರ್ವಕರ್ಮಗುಣಯುತನೂ, ನನ್ನ ಭಕ್ತನೂ ಆದ ಬ್ರಾಹ್ಮಣನಾಗಿ ಜನಿಸುವನು.

೪೬. ಅಥವಾ ಮಾರ್ಗಶಿರಮಾಸದ ಶುಕ್ಲಪಕ್ಷದ್ವಾದಶಿಯ ದಿನ ಆ ಪೂರ್ಣಮುಖತೀರ್ಥದಲ್ಲಿ ಮೃತನಾದರೆ ನನ್ನ ಲೋಕವನ್ನು ಸೇರುವನು.

೪೭. ಅಲ್ಲಿ ತೇಜಸ್ವಿಯೂ, ಚತುರ್ಭುಜನೂ ಆದ ನನ್ನನ್ನು ಯಾವಾಗಲೂ ಸಂದರ್ಶಿಸುವನು. ಅವನಿಗೆ ಮತ್ತೆ ಎಂದಿಗೂ ಜನನಮರಣಗಳಿಲ್ಲ.

೪೮. ವಸುಂಧರೇ, ಇನ್ನೂ ಬೇರೆ ಹೇಳುತ್ತೇನೆ. ಕೇಳು.

ಅನನ್ಯಮಾನಸೋ ಭೂತ್ವಾ ಭಕ್ತೋ ಭಾಗವತೋ ಮಮ |
*ತಸ್ಮಿನ್ತೀರ್ಥೇ ತು ಯಃ ಸ್ನಾತಿ ಕದಾಚಿದಪಿ ಮಾನವಃ |
ದಶವರ್ಷಸಹಸ್ರಾಣಿ ಮೋದತೇ ಹ್ಯಮರಾಲಯೇ || ೪೯ ||

ತತಃ ಸ್ವರ್ಗಾತ್ಪರಿಭ್ರಷ್ಟಸ್ತತ್ತೀರ್ಥಸ್ಯ ಪ್ರಭಾವತಃ |
ದ್ರವ್ಯವಾನ್ಗುಣವಾಂಶ್ಚೈವ ಮದ್ಭಕ್ತಶ್ಚೈವ ಜಾಯತೇ || ೫೦ ||

ವೈಶಾಖಸ್ಯ ತು ಮಾಸಸ್ಯ ಶುಕ್ಲಪಕ್ಷಸ್ಯ ದ್ವಾದಶೀ |
ಯದಿ ಮುಂಚೇತ್ಸ್ವಕಂ ದೇಹಂ ಕೃತ್ವಾ ಕರ್ಮ ಸುದುಷ್ಕರಂ |
ನ ಜನ್ಮ ಮರಣಂ ತಸ್ಯ ನ ಗ್ಲಾನಿರ್ನ ಚ ವೈ ಭಯಂ || ೫೧ ||

ಸರ್ವಸಂಗವಿನಿರ್ಮುಕ್ತೋ ಮಮ ಲೋಕಾಯ ಗಚ್ಛತಿ || ೫೨ ||

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ || ೫೩ ||

---

೪೯. ನನ್ನ ಭಕ್ತನಾದ ಭಾಗವತನು ದೃಢಮನಸ್ಸಿನಿಂದ ಎಂದಾದರೂ ಒಂದುಸಾರಿ *ಆ ತೀರ್ಥದಲ್ಲಿ ಸ್ನಾನಮಾಡಿದರೆ ಅವನು ಹತ್ತುಸಾವಿರ ವರ್ಷಕಾಲ ಸ್ವರ್ಗದಲ್ಲಿ ಸಂತೋಷಪಡುವನು.

೫೦. ಬಳಿಕ ಸ್ವರ್ಗವನ್ನು ಬಿಟ್ಟು ಆ ತೀರ್ಥದ ಪ್ರಭಾವದಿಂದ ಐಶ್ವರ್ಯವಂತನೂ, ಗುಣವಂತನೂ, ನನ್ನ ಭಕ್ತನೂ ಆಗಿ ಜನಿಸುವನು.

೫೧-೫೨. ವೈಶಾಖಶುಕ್ಲ ದ್ವಾದಶಿಯದಿನ ಕಷ್ಟವಾದ ಕರ್ಮವನ್ನು ಮಾಡಿ, ಅಲ್ಲಿ ದೇಹವನ್ನು ಬಿಟ್ಟವನಿಗೆ ಮತ್ತೆ ಜನನಮರಣಗಳಾಗಲಿ, ಕಷ್ಟಭಯಗಳಾಗಲಿ ಇರುವುದಿಲ್ಲ. ಸರ್ವಸಂಗವನ್ನೂ ಬಿಟ್ಟು ನನ್ನ ಲೋಕವನ್ನು ಸೇರುವನು.

೫೩. ವಸುಂಧರೇ, ಇನ್ನೂ ಒಂದನ್ನು ಹೇಳುತ್ತೇನೆ. ಕೇಳು.

---

* ತೀರ್ಥದ ಹೆಸರು ಲುಪ್ತವಾಗಿದೆ.

ಕರವೀರಂ ನಾಮ ತೀರ್ಥಂ ಸರ್ವಲೋಕಸುಖಾವಹಂ ।
ತಸ್ಯ ಚಿಹ್ನಂ ಪ್ರವಕ್ಷ್ಯಾಮಿ ಯೇನ ಜ್ಞಾಪಯತೇ ಶುಭೇ ॥ ೫೪ ॥

ಪುರುಷೋ ಜ್ಞಾನವಾಂಸ್ತ್ವನ್ಮನು ಭಕ್ತಿವಿನಿಶ್ಚಿತಃ ।
ಮಾಘಮಾಸೇ ತು ಸುಶ್ರೋಣಿ ಶುಕ್ಲಪಕ್ಷೇ ತು ದ್ವಾದಶೀಂ ।
ಪುಷ್ಪಿತೇ ಕರವೀರೇ ವೈ ಮಧ್ಯಾಹ್ನೇ ತು ನ ಸಂಶಯಃ ॥ ೫೫ ॥

ತಸ್ಮಿನ್ಕೃತೋದಕಸ್ತೀರ್ಥೇ ಸ್ವಚ್ಛಂದಗಮನಾಲಯಃ ।
ಭ್ರಮೇದ್ವಿಮಾನಮಾರೂಢೋ ಸಹಸ್ರಾಂತರನರ್ತಿತಃ ॥ ೫೬ ॥

ತತ್ರಾಥ ಮ್ರಿಯತೇ ಭೂಮೇ ಮಾಘಮಾಸಸ್ಯ ದ್ವಾದಶೀಂ ।
ಬ್ರಹ್ಮಾಣಂ ಮಾಂ ಚ ಪಶ್ಯೇತ ಪಶ್ಯತೇ ಚ ವೃಷಧ್ವಜಂ ॥ ೫೭ ॥

ಪುನರನ್ಯತ್ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ತಸ್ಯ ಬ್ರಾಹ್ಮಣಮುಖ್ಯಸ್ಯ ಪೂರ್ವಂ ಯತ್ಕಥಿತಂ ಮಯಾ ॥ ೫೮ ॥

---

೫೪. 'ಕರವೀರ' ವೆಂಬ ತೀರ್ಥವು ಸರ್ವಲೋಕಕ್ಕೂ ಸುಖವನ್ನುಂಟು ಮಾಡುವುದಾಗಿದೆ. ಶುಭೇ, ಅದನ್ನು ಅರಿಯಲು ಬೇಕಾದ ಅದರ ಗುರುತನ್ನು ಹೇಳುತ್ತೇನೆ.

೫೫-೫೬. ಸುಶ್ರೋಣಿ, ಜ್ಞಾನಿಯೂ, ನನ್ನಲ್ಲಿ ನಿಶ್ಚಲವಾದ ಭಕ್ತಿಯುಳ್ಳವನೂ ಆದ ಮನುಷ್ಯನು, ಮಾಘಮಾಸದ ಶುಕ್ಲಪಕ್ಷದ ದ್ವಾದಶಿಯದಿನ, ಮಧ್ಯಾಹ್ನದಲ್ಲಿ ಸಂದೇಹವಿಲ್ಲದೆ ಅರಳಿದ ಹೂಗಳುಳ್ಳ ಕಣಿಗಲೆಯ ಗಿಡಗಳಿಂದ ಕೂಡಿರುವ ಆ ತೀರ್ಥದಲ್ಲಿ ಸ್ನಾನಮಾಡಿದರೆ, ವಿಮಾನವನ್ನೇರಿದವನಾಗಿ ಸ್ವೇಚ್ಛೆಯಂತೆ ಆಕಾಶದಲ್ಲಿ ಕುಣಿಸುತ್ತ ಬೇಕಾದೆಡೆಗೆ ಹೋಗುವನು.

೫೭. ಮಾಘಮಾಸದ ಶುಕ್ಲದ್ವಾದಶಿಯದಿನ ಆ ತೀರ್ಥದಲ್ಲಿ ಮೃತನಾದವನು ಬ್ರಹ್ಮನನ್ನೂ, ನನ್ನನ್ನೂ, ರುದ್ರನನ್ನೂ ಸಂದರ್ಶಿಸುವನು.

೫೮. ವಸುಂಧರೇ, ರೈಭ್ಯನೆಂಬ ಆ ಬ್ರಾಹ್ಮಣೋತ್ತಮನಿಗೆ ಪೂರ್ವದಲ್ಲಿ ನಾನು ಹೇಳಿದ ಬೇರೆಯ ವಿಚಾರವನ್ನೂ ಹೇಳುವೆನು. ಕೇಳು.

ತಸ್ಮಿನ್ಕುಬ್ಜಾಮ್ರಕೇ ಭದ್ರೇ ಸ್ಥಾನಂ ತು ಮಮ ರೋಚತೇ ।
ಪುಂಡರೀಕ ಇತಿ ಖ್ಯಾತಂ ತೀರ್ಥಂ ಚೈವ ಮಹತ್ಫಲಂ ॥ ೫೯ ॥

ತಸ್ಯ ಚಿಹ್ನಂ ಪ್ರವಕ್ಷ್ಯಾಮಿ ತಚ್ಛೃಣುಷ್ವ ಶುಚಿಸ್ಮಿತೇ ।
ತಸ್ಯ ತೀರ್ಥಸ್ಯ ಸುಶ್ರೋಣಿ ಮಧ್ಯಾಹ್ನೇ ದ್ವಾದಶೀದಿನೇ ।
ರಥಚಕ್ರಪ್ರಮಾಣೋ ವೈ ಚರತೇ ತತ್ರ ಕಚ್ಛಪಃ ॥ ೬೦ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ಸ್ನಾತ್ವಾ ಪ್ರಾಪ್ನೋತಿ ಸುಶ್ರೋಣಿ ಫಲಂ ತತ್ರ ಮಹಾ ಗುಣಂ ॥ ೬೧ ॥

ಪುಂಡರೀಕಸ್ಯ ಯಜ್ಞಸ್ಯ ಯಜಮಾನಸ್ಯ ಯತ್ಫಲಂ ।
ಪ್ರಾಪ್ನೋತಿ ವಸುಧೇ ತತ್ರ ಏವಮೇವ ನ ಸಂಶಯಃ ॥ ೬೨ ॥

ಅಥವಾ ಮ್ರಿಯತೇ ತತ್ರ ಲಬ್ಧಸಂಜ್ಞೋ ಮಹಾಯಶಾಃ ।
ದಶಾನಾಂ ಪುಂಡರೀಕಾಣಾಂ ಫಲಂ ಪ್ರಾಪ್ನೋತಿ ಮಾನವಃ ॥ ೬೩ ॥

---

೫೯. ಭದ್ರೇ, ಆ ಕುಬ್ಜಾಮ್ರಕಕ್ಷೇತ್ರದಲ್ಲಿರುವುದಕ್ಕೆ ನನಗೆ ಇಷ್ಟ. ಅಲ್ಲಿರುವ 'ಪುಂಡರೀಕ' ವೆಂಬ ತೀರ್ಥವು ಮಹಾಫಲಪ್ರದವಾದುದು.

೬೦. ಮುಗುಳುನಗೆಯುವಳೇ, ಸುಶ್ರೋಣಿ, ಆ ಪುಂಡರೀಕತೀರ್ಥದ ಗುರುತನ್ನು ಹೇಳುತ್ತೇನೆ. ಕೇಳು. ದ್ವಾದಶಿಯದಿನ ಮಧ್ಯಾಹ್ನದಲ್ಲಿ, ಆ ತೀರ್ಥದಲ್ಲಿ ರಥಚಕ್ರದಷ್ಟು ದೊಡ್ಡದಾದ ಆಮೆಯು ಸಂಚರಿಸುತ್ತದೆ.

೬೧-೬೨. ವಸುಂಧರೇ, ನಿನಗೆ ಇನ್ನೂ ಬೇರೆ ವಿಚಾರವನ್ನು ಹೇಳುತ್ತೇನೆ, ಕೇಳು. ಸುಶ್ರೋಣಿ, ವಸುಧೇ, ಆ ಪುಂಡರೀಕತೀರ್ಥದಲ್ಲಿ ಸ್ನಾನಮಾಡುವವನು, ಅದರಿಂದಲೇ, ಪುಂಡರೀಕವೆಂಬ ಯಜ್ಞವನ್ನು ಮಾಡುವವನು ಪಡೆಯುವ ಫಲವನ್ನು ಸಂದೇಹವಿಲ್ಲದೆ ಪಡೆಯುವನು.

೬೩. ಅಥವಾ ಅಲ್ಲಿ ಮೃತನಾದರೆ ಜ್ಞಾನಿಯೂ, ಮಹಾಯಶನೂ ಆಗಿ, ಹತ್ತು ಪುಂಡರೀಕ ಯಜ್ಞಗಳ ಫಲವನ್ನು ಪಡೆಯುವನು.

ಭುಕ್ತ್ವಾ ಯಜ್ಞಫಲಂ ತತ್ರ ಜಾತಿಶುದ್ಧೋ ಮಹಾತಪಾಃ ।
ಸಿದ್ಧಿಶ್ಚ ಲಭತೇ ನಿತ್ಯಂ ಮಮ ಲೋಕಾಯ ಗಚ್ಛತಿ ॥ ೬೪ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ಪ್ರಿಯೇ ತದ್ವೈ ಶೃಣುಷ್ವ ಮೇ ॥ ೬೫ ॥

ಅಗ್ನಿತೀರ್ಥಮಿತಿ ಖ್ಯಾತಂ ಸಿದ್ಧಂ ಕುಬ್ಜಾಮ್ರಕೇ ಸ್ಥಿತಂ ।
ಯದ್ವೈ ಪ್ರಜ್ಞಾಯತೇ ದೇವಿ ದ್ವಾದಶ್ಯಾಂ ಪಾಪವರ್ಜಿತೈಃ ॥ ೬೬ ॥

ಕೌಮುದಸ್ಯ ತು ಮಾಸಸ್ಯ ಮಾಸೇ ಮಾರ್ಗಶಿರಸ್ಯ ಚ ।
ಆಷಾಢಸ್ಯ ತು ಮಾಸಸ್ಯ ಶುಕ್ಲಪಕ್ಷಸ್ಯ ದ್ವಾದಶೀ ॥ ೬೭ ॥

ಯಶ್ಚೈವ ಮಾಧವೇ ಮಾಸಿ ಸಮಯೇಽಹೃದಿ ವರ್ತತೇ ।
ತಸ್ಯಾಂ ತು ಶುಕ್ಲದ್ವಾದಶ್ಯಾಂ ತೀರ್ಥೇ ತಿಷ್ಠತಿ ಯತ್ನತಃ ॥ ೬೮ ॥

---

೬೪. ಯಜ್ಞದ ಫಲವನ್ನನುಭವಿಸಿ, ಜಾತಿಯಲ್ಲಿ ಶುದ್ಧನೂ, ಮಹಾತಪಸ್ವಿಯೂ ಆಗಿ, ಸಿದ್ಧಿಯನ್ನು ಪಡೆದು ನನ್ನ ಲೋಕವನ್ನು ಸೇರುವನು.

೬೫. ಪ್ರಿಯೇ, ನಾನು ಹೇಳುವ ಬೇರೆಯ ತೀರ್ಥವನ್ನೂ ಕೇಳು.

೬೬. ಕುಬ್ಜಾಮ್ರಕಕ್ಷೇತ್ರದಲ್ಲಿ 'ಅಗ್ನಿತೀರ್ಥ' ವೆಂದು ಪ್ರಸಿದ್ಧವಾದ ಸಿದ್ಧತೀರ್ಥವಿದೆ. ಪಾಪವಿಲ್ಲದವರು ದ್ವಾದಶಿಯದಿನ ಆ ತೀರ್ಥವನ್ನೂ ಗುರುತಿಸಿ ತಿಳಿಯಬಹುದು.

೬೭-೬೮. ಕಾರ್ತಿಕ, ಮಾರ್ಗಶಿರ, ಆಷಾಢ ಮತ್ತು ಹಿಂದೆ ಹೇಳಿ, ಜ್ಞಾಪಕದಲ್ಲಿರುವ ವೈಶಾಖ ಈ ಮಾಸಗಳ ಶುಕ್ಲಪಕ್ಷದ ದ್ವಾದಶಿಯದಿನ ಪ್ರಯತ್ನಪೂರ್ವಕವಾಗಿ ಆ ತೀರ್ಥದಲ್ಲಿರಬೇಕು.

ತಸ್ಯ ಚಿಹ್ನಂ ಪ್ರವಕ್ಷ್ಯಾಮಿ ಶೃಣುಷ್ವ ಹಿ ವಸುಂಧರೇ ।
ಯೇನ ಚಿಹ್ನೇನ ವಿಜ್ಞೇಯಂ ತೀರ್ಥಂ ತಚ್ಚೈವ ಮಾಮಕಂ ।
ಏಕಾಗ್ರಂ ತು ಮನಃ ಕೃತ್ವಾ ತಚ್ಛೃಣುಷ್ವ ವಸುಂಧರೇ ॥ ೬೯ ॥

ಮುಕ್ತ್ವಾ ಭಾಗವತಾನ್ ಶುದ್ಧಾನ್ಸಂಹಿತಾಪಾಠಕಾನ್ಮಮ ।
ನ ಹಿ ಕಶ್ಚಿದ್ವಿಜಾನಾತಿ ಶಾಸ್ತ್ರಂ ಮಮ ನಯಂ ಚ ವೈ ॥ ೭೦ ॥

ಫಲಂ ತಸ್ಯ ಪ್ರವಕ್ಷ್ಯಾಮಿ ಮೃತೋಽಪಿ ಸ್ನಾತಕೋಽಪಿ ವಾ ।
ಏಕಚಿತ್ತಂ ಸಮಾಧಾಯ ತಚ್ಛೃಣುಷ್ವ ವಸುಂಧರೇ ॥ ೭೧ ॥

ಅಗ್ನಿತೀರ್ಥೇಷು ಸ್ನಾತೋ ವೈ ಯಸ್ಮಿನ್ಕುಬ್ಜಾಮ್ರಕೇಷು ಚ ।
ಅಗ್ನಿತೀರ್ಥಂ ಮಹಾಭಾಗೇ ದೀಪ್ತಿಮಂತಂ ಸವೈಷ್ಣವಂ ॥ ೭೨ ॥

ಸಪ್ತ ಕೃತ್ವಾಗ್ನಿಮೇಧಾನಾಂ ಯತ್ಫಲಂ ಭವತಿ ಪ್ರಿಯೇ ।
ಪ್ರಾಪ್ನೋತಿ ತನ್ಮಹಾಭಾಗೇ ಸ್ನಾನಮಾತ್ರಾನ್ನ ಸಂಶಯಃ ॥ ೭೩ ॥

---

೬೯. ವಸುಂಧರೇ, ಆ ನನ್ನ ತೀರ್ಥವನ್ನು ಏತರಿಂದ ಅರಿಯ ಬಹುದೋ ಆ ಕುರುಹನ್ನು ಹೇಳುತ್ತೇನೆ. ವಸುಂಧರೇ, ಏಕಾಗ್ರಚಿತ್ತಳಾಗಿ ಅದನ್ನು ಕೇಳು.

೭೦. ಶುದ್ಧರೂ, ಭಾಗವತರೂ, ನನ್ನ ಸಂಹಿತೆಯೆಂಬ ವೇದಭಾಗವನ್ನು ಅಭ್ಯಾಸಮಾಡಿದವರೂ ಅಲ್ಲದೆ ಮತ್ತಾವನೂ ಆ ತೀರ್ಥವನ್ನೂ, ಅದಕ್ಕೆ ಸಂಬಂಧಿಸಿದ ನನ್ನ ಶಾಸ್ತ್ರನೀತಿಗಳೆನ್ನೂ ತಿಳಿಯನು.

೭೧. ಆ ತೀರ್ಥದಲ್ಲಿ ಸ್ನಾನಮಾಡಿದವನು ಅಥವಾ ಮೃತನಾದವನು ಪಡೆಯುವ ಫಲವನ್ನು ಹೇಳುತ್ತೇನೆ. ವಸುಂಧರೇ, ಅದನ್ನು ಗಮನಿಸಿ ಕೇಳು.

೭೨–೭೩. ಮಹಾಭಾಗ್ಯೇ, ಅಗ್ನಿತೀರ್ಥವು ಕಾಂತಿಯುತವಾದುದಲ್ಲದೆ ವಿಷ್ಣುಸಂಬಂಧವುಳ್ಳದು. ಪ್ರಿಯೇ, ಆ ಕುಬ್ಜಾಮ್ರಕದ ಅಗ್ನಿತೀರ್ಥದಲ್ಲಿ ಸ್ನಾನವನ್ನು ಮಾತ್ರವೇ ಮಾಡಿದವನೂ, ಏಳುಸಾರಿ ಅಗ್ನಿಮೇಧವೆಂಬ ಯಜ್ಞವನ್ನು ಮಾಡಿದ ಫಲವನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

ಅಥವಾ ಮ್ರಿಯತೇ ತತ್ರ ಏಕೈಕಾನ್ದ್ವಾದಶೀಕೃತಾನ್ ।
ಸ್ಥಿತ್ವಾ ವಿಂಶತ್ಯಹೋರಾತ್ರಾನ್ ಮಮ ಲೋಕಾಯ ಗಚ್ಛತಿ ॥ ೭೪ ॥

ತೀರ್ಥಸ್ಯ ತಸ್ಯ ವಕ್ಷ್ಯಾಮಿ ಚಿಹ್ನಾನಿ ಶೃಣು ಸುಂದರಿ ।
ಯೇನ ವಿಜ್ಞಾಯತೇ ಪ್ರಾಜ್ಞೈರ್ಮಮ ಭಕ್ತಸುಖಾವಹಂ ॥ ೭೫ ॥

ಉಷ್ಣಂ ಭವಂತಿ ಹೇಮಂತೇ ವಸುಧೇ ತಜ್ಜಲಂ ತಥಾ ।
ಉಷ್ಣಕಾಲೇ ಭವೇಚ್ಛೀತಮೇವಂ ಚಿಹ್ನಂ ತು ತದ್ಭವೇತ್ ॥ ೭೬ ॥

ಏವಂಚಿಹ್ನಂಮಹಾಭಾಗೇ ತೀರ್ಥಮಾಗ್ನೇಯಮುತ್ತರೇ ।
ತರಂತಿ ಮಾನವಾ ಯೇನ ಘೋರಂ ಸಂಸಾರಸಾಗರಂ ॥ ೭೭ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ದೇವಿ ಕುಬ್ಜಾಮ್ರಕೇ ಮಹತ್ ।
ವಾಯುವ್ಯಮಿತಿ ವಿಖ್ಯಾತಂ ತೀರ್ಥಂ ಧರ್ಮಾದ್ವಿನಿಸ್ಸೃತಂ ॥ ೭೮ ॥

---

೭೪. ಅಥವಾ ಇಪ್ಪತ್ತುದಿನಗಳು ಹಗಲು ರಾತ್ರಿ ಅಲ್ಲಿದ್ದು ಮೃತನಾದರೆ ಒಂದೊಂದು ದಿನಕ್ಕೂ ಒಂದೊಂದು ದ್ವಾದಶಿಯವ್ರತದ ಫಲವನ್ನು ಪಡೆದು ನನ್ನ ಲೋಕಕ್ಕೆ ಬರುವನು.

೭೫. ಸುಂದರಿ, ಆ ತೀರ್ಥದ(ಬೇರೆಯ)ಗುರುತುಗಳನ್ನು ಹೇಳುತ್ತೇನೆ. ಕೇಳು, ನನ್ನ ಭಕ್ತರಿಗೆ ಸುಖವನ್ನುಂಟುಮಾಡುವ ಅಗ್ನಿತೀರ್ಥವನ್ನು ಪ್ರಾಜ್ಞರು ಮುಂದಿನ ಈ ಗುರುತಿನಿಂದ ಅರಿಯಬಹುದು.

೭೬. ಭೂದೇವಿ, ಅಗ್ನಿತೀರ್ಥಜಲವು ಹಿಮಂತಋತುವಿನಲ್ಲಿ ಬಿಸಿಯಾಗಿರುವುದು. ಉಷ್ಣಕಾಲದಲ್ಲಿ ತಣ್ಣಗಿರುವುದು. ಇದೇ ಅದಕ್ಕೆ ಕುರುಹು.

೭೭. ಮಹಾಭಾಗ್ಯೇ, ಈ ಅಗ್ನಿತೀರ್ಥವು ಕುಬ್ಜಾಮ್ರಕಕ್ಷೇತ್ರದಲ್ಲಿ ಉತ್ತರಭಾಗದಲ್ಲಿದೆ. ಈ ತೀರ್ಥದಿಂದ ಮನುಷ್ಯರು ಭಯಂಕರವಾದ ಸಂಸಾರ ಸಾಗರವನ್ನು ದಾಟುವರು.

೭೮. ದೇವಿ, ಕುಬ್ಜಾಮ್ರಕದಲ್ಲಿ, ಧರ್ಮದಿಂದುದಿಸಿದ ವಾಯುವ್ಯವೆಂಬ ಪ್ರಸಿದ್ಧವಾದ ತೀರ್ಥವೊಂದಿದೆ.

ತಸ್ಮಿನ್ತೀರ್ಥೇ ತು ಯಃ ಸ್ನಾತಃ ಕೃತನಿತ್ಯೋದಕ ಕ್ರಿಯಃ ।
ವಾಜಪೇಯಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತಿ ನಿಷ್ಕಲಂ ॥ ೭೯ ॥

ಅಥವಾ ಮ್ರಿಯತೇ ತತ್ರ ವಾಯುತೀರ್ಥೇ ಮಹಾಹ್ರದೇ ।
ದಿನಾನಿ ದಶ ಪಂಚೈತತ್ಕೃತಮೇವ ಹಿ ಮಾಮಕಂ ॥ ೮೦ ॥

ಜನ್ಮ ವಾ ಮರಣಂ ವಾಪಿ ಭೂಮೌ ನೈವ ಪುನರ್ಭವೇತ್ ।
ಜಾಯತೇ ಚ ಚತುರ್ಭಾಹುರ್ಮಮ ಲೋಕೇ ಪ್ರತಿಷ್ಠಿತಃ ॥ ೮೧ ॥

ತಸ್ಯ ಚಿಹ್ನಂ ಪ್ರವಕ್ಷ್ಯಾಮಿ ವಾಯುತೀರ್ಥಸ್ಯ ಸುಂದರಿ ।
ಯೇನ ಚಿಹ್ನೇನ ವಿಜ್ಞೇಯಂ ತೀರ್ಥಂ ತಚ್ಚ ಮಹತ್ತರಂ ॥ ೮೨ ॥

ಅಶ್ವತ್ಥವೃಕ್ಷಪತ್ರಾಣಿ ಚಲಂತಿ ನಿತ್ಯಶೋ ವನೇ ।
ಚತುರ್ವಿಂಶತಿದ್ವಾದಶ್ಯಾಂ ಯೇನ ವಿಜ್ಞಾಯತೇ ಖಲು ॥ ೮೩ ॥

---

೭೯. ಆ ತೀರ್ಥದಲ್ಲಿ ಸ್ನಾನಮಾಡಿ, ನಿತ್ಯಕರ್ಮವನ್ನು ಮಾಡಿದವನು ವಾಜಪೇಯವೆಂಬ ಯಜ್ಞದ ಪೂರ್ಣಫಲವನ್ನು ಪಡೆಯುವನು.

೮೦. ಅಲ್ಲದೆ ದೊಡ್ಡ ಮಡುವಾದ ಆ ವಾಯುತೀರ್ಥದಲ್ಲಿ ಮನುಷ್ಯನು ಮಡಿದನಾದರೆ, ನನಗೆ ಇಷ್ಟವಾದ ಹದಿನೈದು ಏಕಾದಶಿಯ ಮತ್ತು ದ್ವಾದಶಿಯ ವ್ರತಗಳನ್ನು ಮಾಡಿದಂತಾಗುವುದು.

೮೧. ಅವನಿಗೆ ಭೂಮಿಯಲ್ಲಿ ಮತ್ತೆ ಜನನಮರಣಗಳಿಲ್ಲವೇ ಇಲ್ಲ. ನನ್ನ ಲೋಕದಲ್ಲಿ ನೆಲಸಿ, ನಾಲ್ಕು ತೋಳುಗಳುಳ್ಳವನಾಗುವನು.

೮೨. ಸುಂದರಿ, ಉತ್ತಮವಾದ ಆ ವಾಯುತೀರ್ಥವನ್ನು ಏತರಿಂದ ಅರಿಯಬಹುದೋ ಅದರ ಆ ಗುರುತನ್ನು ಹೇಳುತ್ತೇನೆ.

೮೩. ಆ(ವನದಲ್ಲಿ)ತೀರ್ಥದ ನೀರಿನಲ್ಲಿ ಅರಳಿಯಮರದೆಲೆಗಳು ಇಪ್ಪತ್ತನಾಲ್ಕು ದ್ವಾದಶಿಯಲ್ಲೂ, ತಪ್ಪದೆ ಚಲಿಸುತ್ತವೆ. ಅದರಿಂದ ಅರಿಯಬಹುದಲ್ಲವೆ !

ಪುನರನ್ಯತ್ಪ್ರವಕ್ಷ್ಯಾಮಿ ತೀರ್ಥಂ ಕುಬ್ಜಾಮ್ರಕೇ ಧರೇ ।
ಶಕ್ರತೀರ್ಥಮಿತಿ ಖ್ಯಾತಂ ಸರ್ವಸಂಸಾರಮೋಕ್ಷಣಂ ॥ ೮೪ ॥

ತಸ್ಮಿಂಸ್ತೀರ್ಥೇ ವರಾರೋಹೇ ಶಕ್ರತೀರ್ಥೇ ವಸುಂಧರೇ ।
ಶಕ್ರಸ್ತು ವಸತೇ ಲೋಕೇ ವಜ್ರಹಸ್ತೋ ನ ಸಂಶಯಃ ॥ ೮೫ ॥

ಅಥವಾ ಮ್ರಿಯತೇ ತತ್ರ ಶಕ್ರತೀರ್ಥೇ ಮಹಾತಪೇ ।
ಉಪೋಷ್ಯ ದಶರಾತ್ರಾಣಿ ಮಮ ಲೋಕಾಯ ಗಚ್ಛತಿ ॥ ೮೬ ॥

ತಸ್ಯ ಚಿಹ್ನಂ ಪ್ರವಕ್ಷ್ಯಾಮಿ ಯೇನ ವಿಜ್ಞಾಯತೇ ತತಃ ।
ಏಕಚಿತ್ತಂ ಸಮಾಧಾಯ ಶೃಣು ಸುಂದರಿ ತತ್ವತಃ ॥ ೮೭ ॥

ಪಂಚ ವೃಕ್ಷಾಸ್ತು ತಿಷ್ಠಂತಿ ತದ್ದಕ್ಷಿಣದಿಶಿ ಕ್ಷಿತೇ ।
ಶಕ್ರತೀರ್ಥಸ್ಯ ಚಿಹ್ನಂ ತೇ ವಸುಧೇ ಪರಿಕೀರ್ತಿತಂ ॥ ೮೮ ॥

---

೮೪. ಧರೇ, ಕುಬ್ಜಾಮ್ರಕದಲ್ಲಿರುವ ಇನ್ನೊಂದು ತೀರ್ಥವನ್ನು ಹೇಳುತ್ತೇನೆ. ಸರ್ವ ಸಂಸಾರವಿಮೋಚಕವಾದ ಶಕ್ರತೀರ್ಥವೆಂದು ಪ್ರಸಿದ್ಧವಾದುದೊಂದಿದೆ.

೮೫. ವಸುಂಧರೇ, ವರಾರೋಹೇ, ಆ ಶಕ್ರತೀರ್ಥದಲ್ಲಿ ವಜ್ರಾಯುಧಧಾರಿಯಾದ ಶಕ್ರ(ಇಂದ್ರ)ನು ನಿಜವಾಗಿಯೂ ವಾಸಿಸುವನು.

೮೬. ಮಹಾತಪದ ಆ ಶಕ್ರತೀರ್ಥದಲ್ಲಿ ಹತ್ತುರಾತ್ರಿಗಳು ಉಪವಾಸ ಮಾಡಿ ಮೃತನಾಗುವವನು ನನ್ನ ಲೋಕಕ್ಕೆ ಬರುವನು.

೮೭. ಸುಂದರಿ, ಶಕ್ರತೀರ್ಥದ ಗುರುತನ್ನು ನಿಜವಾಗಿ ಹೇಳುತ್ತೇನೆ. ಏಕಮನಸ್ಕಳಾಗಿ ಕೇಳು.

೮೮. ಭೂದೇವಿ, ಆ ತೀರ್ಥದ ದಕ್ಷಿಣದಿಕ್ಕಿನಲ್ಲಿ ಐದು ಮರಗಳಿವೆ, ಶಕ್ರತೀರ್ಥದ ಗುರುತನ್ನು ಹೇಳಿದುದಾಯಿತು.

ಅನ್ಯಚ್ಚ ತೀರ್ಥಂ ವಕ್ಷ್ಯಾಮಿ ತಸ್ಮಿನ್ಕುಬ್ಜಾಮ್ರಕೇ ಪರಂ ॥ ೮೯ ॥

ವರುಣೇನ ತಪಸ್ತಪ್ತಂ ಸಹಸ್ರಂ ಪಂಚ ಸಪ್ತ ಚ ॥ ೯೦ ॥

ತತ್ರಸ್ನಾತಸ್ಯ ವಕ್ಷ್ಯಾಮಿ ಜಾಯತೇ ತತ್ರ ಯತ್ಫಲಂ ।
ಯತ್ಪ್ರಾಪ್ನೋತಿ ಮೃತೋ ವಾಪಿ ಪುರುಷಃ ಶಂಸಿತವ್ರತಃ ॥ ೯೧ ॥

ಅಷ್ಟವರ್ಷಸಹಸ್ರಾಣಿ ಗತ್ವಾ ವೈ ವರುಣಾಲಯಂ ।
ಸ್ವಚ್ಛಂದಗಮನೋ ಭೂತ್ವಾ ಏವಮೇವ ನ ಸಂಶಯಃ ॥ ೯೨ ॥

ಅಥ ವೈ ಮ್ರಿಯತೇ ತತ್ರ ವಿಂಶವರ್ಷೋಷಿತೋ ನರಃ ।
ಸರ್ವಸಂಗಂ ಪರಿತ್ಯಜ್ಯ ಮಮ ಲೋಕಂ ಸ ಗಚ್ಛತಿ ॥ ೯೩ ॥

ತಸ್ಯ ಚಿಹ್ನಂ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ತತ್ರ ಧಾರಾ ಪತತ್ಯೇಕಾ ಏಕರೂಪಾ ಸದಾ ಭವೇತ್
ನ ವರ್ಧತೇ ತು ವರ್ಷಾಸು ಘರ್ಮೇ ನ ಹ್ರಸತೇ ಪುನಃ ॥ ೯೪ ॥

---

೮೯. ಆ ಕುಬ್ಜಾಮ್ರಕದಲ್ಲಿರುವ ಮತ್ತೊಂದು ಉತ್ತಮತೀರ್ಥವನ್ನು ಹೇಳುವೆನು.

೯೦. ಅಲ್ಲಿ ವರುಣನು ಹದಿನೇಳು ಸಾವಿರವರ್ಷಕಾಲ ತಪಸ್ಸನ್ನು ಮಾಡಿದನು.

೯೧-೯೩. ಆ ವರುಣತೀರ್ಥದಲ್ಲಿ ಸ್ನಾನಮಾಡುವ ಅಥವಾ ಮೃತನಾಗುವ ಸುವ್ರತನಾದ ಮನುಷ್ಯನು ವರುಣಲೋಕವನ್ನು ಸೇರಿ, ಎಂಟುಸಾವಿರ ವರ್ಷಕಾಲ ಇಷ್ಟಬಂದೆಡೆಯಲ್ಲಿ ಸಂಚರಿಸುವವನಾಗುವನು. ವರುಣತೀರ್ಥದಲ್ಲಿ ಇಪ್ಪತ್ತುವರ್ಷಕಾಲವಿದ್ದು, ಸರ್ವಸಂಗ ಪರಿತ್ಯಾಗಿಯಾಗಿ ಅಲ್ಲಿಯೇ ಮೃತನಾದವನು ನನ್ನ ಲೋಕವನ್ನು ಸೇರುವನು.

೯೪ ವಸುಂಧರೇ, ಆ ತೀರ್ಥದ ಗುರುತನ್ನು ಹೇಳುತ್ತೇನೆ. ಕೇಳು. ಆ ತೀರ್ಥದಲ್ಲಿ ಯಾವಾಗಲೂ ಒಂದೇ ರೀತಿಯಾಗಿರುವ ಒಂದು ಧಾರೆಯು ಬೀಳುತ್ತಿರುತ್ತದೆ. ಅದು ಮಳೆಗಾಲದಲ್ಲಿ ಹೆಚ್ಚುವುದೂ ಇಲ್ಲ. ಬೇಸಗೆಯಲ್ಲಿ ಕುಂದುವುದೂ ಇಲ್ಲ.

ಸಪ್ತಸಾಮುದ್ರಕಂ ನಾಮ ತಸ್ಮಿನ್ಕುಬ್ಜಾಮ್ರಕೇ ಪರಂ ॥ ೯೫ ॥

ತಸ್ಮಿನ್ಕೃತೋದಕೋ ಭೂಮೇ ನರೋ ಧರ್ಮಪರಾಯಣಃ ।
ತ್ರಯಾಣಾಮಶ್ವಮೇಧಾನಾಂ ಫಲಂ ಪ್ರಾಪ್ನೋತಿ ಮಾನವಃ ॥ ೯೬ ॥

ಶೀಘ್ರಂ ಗಚ್ಛತಿ ವೈ ಸ್ವರ್ಗಂ ಸಹಸ್ರಂ ದಶ ಪಂಶ ಚ ॥
ತತಃ ಸ್ವರ್ಗಪರಿಭ್ರಷ್ಟಃ ಕುಲವಾನ್ಜಾಯತೇ ದ್ವಿಜಃ
ವೇದವೇದಾಂಗಕುಶಲಃ ಸೋಮಪಶ್ಚೈವ ಜಾಯತೇ ॥ ೯೭ ॥

ಅಥಾತ್ರ ಮುಂಚತಿ ಪ್ರಾಣಾನ್ಮುಕ್ತಸಂಗೋ ಜಿತೇಂದ್ರಿಯಃ ।
ಉಷಿತ್ವಾ ಸಪ್ತರಾತ್ರಂ ವೈ ಮಮ ಲೋಕಂ ಸ ಗಚ್ಛತಿ ॥ ೯೮ ॥

ತಸ್ಯ ಚಿಹ್ನಂ ಪ್ರವಕ್ಷ್ಯಾಮಿ ತೀರ್ಥಸ್ಯ ಶೃಣು ಸುಂದರಿ ।
ವೈಶಾಖಶುಕ್ಲದ್ವಾದಶ್ಯಾಂ ವಿಭೂತಿಸ್ತತ್ರ ಯಾ ಭವೇತ್ ॥ ೯೯ ॥

೯೫-೯೬. ಸಪ್ತಸಾಮುದ್ರಕವೆಂಬುದು ಕುಬ್ಜಾಮ್ರಕದಲ್ಲಿ ಮತ್ತೊಂದು ತೀರ್ಥ. ಆದರಲ್ಲಿ ಸ್ನಾನಮಾಡುವ ಧರ್ಮಪರಾಯಣನು ಮೂರು ಅಶ್ವಮೇಧಗಳ ಫಲವನ್ನು ಪಡೆಯುವನು.

೯೭. ಬೇಗನೆ ಸ್ವರ್ಗವನ್ನು ಸೇರುವನು. ಸ್ವರ್ಗದಲ್ಲಿ ಹತ್ತುಸಾರದ ದೈನೂರು ವರ್ಷಕಾಲವಿದ್ದು, ಬಳಿಕ ಅಲ್ಲಿಂದ ಹೊರಟು ಕುಲೀನನಾದ ಬ್ರಾಹ್ಮಣನಾಗಿ ಭೂಮಿಯಲ್ಲಿ ಜನಿಸಿ, ವೇದ ವೇದಾಂಗ ವಿಶಾರದನೂ ಸೋಮ ಪಾನಮಾಡುವವನೂ ಆಗುವನು.

೯೮. ಸಂಗತ್ಯಾಗಿಯೂ, ಜಿತೇಂದ್ರಿಯನೂ ಆಗಿ, ಆ ತೀರ್ಥದಲ್ಲಿ ಏಳುರಾತ್ರೆ ವಾಸಮಾಡಿ, ಪ್ರಾಣಬಿಡುವವನು ನನ್ನ ಲೋಕವನ್ನು ಸೇರುವನು.

೯೯. ಸುಂದರಿ, ಆ ತೀರ್ಥದ ಗುರುತನ್ನು ಎಂದರ ವೈಶಾಖ ಶುಕ್ಲದ್ವಾದಶಿಯದಿನ ಅಲ್ಲಾಗುವ ಮಹಿಮೆಯನ್ನು ಹೇಳುತ್ತೇನೆ. ಕೇಳು.

ವಿಮಲಾ ಗಾಂ ಗತಾ ಯತ್ರ ಗಂಗಾ ಜಲವಿಮಿಶ್ರಿತಾ ।
ತಸ್ಮಿಂಸ್ತೀರ್ಥೇ ತದೇವೈತತ್ ಕ್ಷೀರವರ್ಣಂ ಪುನರ್ಭವೇತ್ ॥ ೧೦೦ ॥

ಪುನಶ್ಚ ಪೀತವರ್ಣಾಭಾ ಪುನಾ ರಕ್ತಾಃ ಕದಾ ಭವೇತ್ ।
ಪುನರ್ಮರಕತಾಭಾಸಂ ಪುನರ್ಮುಕ್ತಾಸಮಪ್ರಭಂ
ಏತೈಶ್ಚಿಹ್ನೈಸ್ತು ವಿಜ್ಞೇಯಂ ತತ್ತೀರ್ಥಂ ವಿದಿತಾತ್ಮಭಿಃ ॥ ೧೦೧ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತೀರ್ಥಂ ಕುಬ್ಜಾಮ್ರಕೇ ಮಹತ್ ।
ತೀರ್ಥಂ ಮಾನಸರೋ ನಾಮ ಸರ್ವಭಾಗವತಪ್ರಿಯಂ ॥ ೧೦೨ ॥

ತಸ್ಮಿನ್ ಸ್ನಾತೋ ವರಾರೋಹೇ ಗಚ್ಛತೇ ಮಾನಸಂ ಸರಃ ।
ದೇವಾನ್ಪಶ್ಯತಿ ವೈ ಸರ್ವಾನ್ ರುದ್ರೇಂದ್ರಸಮರುದ್ಗಣಾನ್ ॥ ೧೦೩ ॥

---

೧೦೦. ಅಲ್ಲಿ ಭೂಮಿಗಿಳಿದು ನಿರ್ಮಲಳಾದ ದೇವಗಂಗೆಯು ಆ ತೀರ್ಥೋದಕದೊಡನೆ ಸೇರುವಳು. ಆದುದರಿಂದ ಒಡನೆಯೇ ತೀರ್ಥವು ಹಾಲಿನ ಬಣ್ಣವುಳ್ಳದಾಗುವುದು.

೧೦೧. ಮತ್ತೆ ಹಳದಿಯ ಬಣ್ಣದಿಂದಲೂ, ಆಮೇಲೆ ಕೆಂಪುಬಣ್ಣದಿಂದಲೂ ಆಮೇಲೆ ಪಚ್ಚೆಯ ಬಣ್ಣದಿಂದಲೂ, ಬಳಿಕ ಮುತ್ತಿನ ಬಣ್ಣದಿಂದಲೂ ಹೊಳೆಯುವುದು. ಆತ್ಮಜ್ಞಾನಿಗಳು ಈ ಗುರುತುಗಳಿಂದ ಆ ತೀರ್ಥವನ್ನು ಅರಿಯಬೇಕು.

೧೦೨. ಕುಬ್ಜಾಮ್ರಕದಲ್ಲಿರುವ ಬೇರೊಂದು ಮಹಾತೀರ್ಥವನ್ನು ಹೇಳುತ್ತೇನೆ. ಮಾನಸರಸ್ಸೆಂಬ ಸರ್ವಭಾಗವತರಿಗೂ ಪ್ರಿಯವಾದ ತೀರ್ಥವಿದೆ.

೧೦೩. ವರಾರೋಹೇ, ಅದರಲ್ಲಿ ಸ್ನಾನಮಾಡಿದವನು ಮಾನಸ ಸರೋವರಕ್ಕೆ ಹೋಗುವನಲ್ಲದೆ ರುದ್ರೇಂದ್ರಮರುದ್ಗಣದೊಡಗೂಡಿದ ಸರ್ವ ದೇವತೆಗಳನ್ನೂ ಸಂದರ್ಶಿಸುವನು.

ಅಥ ತತ್ರ ಮೃತೋ ಭೂಮೇ ತ್ರಿಂಶದ್ರಾತ್ರ್ಯೋಷಿತೋ ನರಃ |
ಸರ್ವಸಂಗವಿನಿರ್ಮುಕ್ತೋ ಮಮ ಲೋಕಂ ಸ ಗಚ್ಛತಿ || ೧೦೪ ||

ತಸ್ಯ ಚಿಹ್ನಂ ಪ್ರವಕ್ಷ್ಯಾಮಿ ಯೇನ ತದ್ ಜ್ಞಾಯತೇ ನರೈಃ |
ಪಂಚಾಶತ್ಕ್ರೋಶವಿತತಂ ಮಾನುಷಾಣಾಂ ದುರಾಸದಂ || ೧೦೫ ||

ಏತತ್ತು ಭೂಮೇ ವಿಜ್ಞೇಯಂ ಯಥೈತನ್ಮಾನಸಂ ಸರಃ |
ಶುದ್ಧೈರ್ಭಾಗವತೈರ್ಜ್ಞೇಯಂ ಮಮ ಕರ್ಮಸು ನಿಷ್ಠಿತೈಃ || ೧೦೬ ||

ಏತತ್ತೀರ್ಥಂ ಮಹಾಭಾಗೇ ತಸ್ಮಿನ್ಕುಬ್ಜಾಮ್ರಕೇ ಸ್ಮೃತಂ |
ಸಿದ್ಧಿಕಾಮಸ್ಯ ರೈಭ್ಯಸ್ಯ ವಿಪ್ರಸ್ಯ ಪರಿಕೀರ್ತಿತಂ || ೧೦೭ ||

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ |
ತತ್ರ ಕುಬ್ಜಾಮ್ರಕೇ ವೃತ್ತಂ ಪುರಾಶ್ಚರ್ಯಂ ಮಹಾದ್ಭುತಂ || ೧೦೮ ||

---

೧೦೪. ಭೂಮೀ, ಇದೂ ಅಲ್ಲದೆ ಆ ತೀರ್ಥದಲ್ಲಿ ಮೂವತ್ತು ರಾತ್ರಿಗಳು ವಾಸಮಾಡಿ ಮೃತನಾಗುವವನು ಸರ್ವಸಂಗವಿನಿರ್ಮುಕ್ತನಾಗಿ ನನ್ನ ಲೋಕವನ್ನು ಸೇರುವನು.

೧೦೫. ಮನುಷ್ಯರು ಅದನ್ನು ತಿಳಿಯುವುದಕ್ಕೆ ಬೇಕಾದ ಗುರುತನ್ನು ಹೇಳುತ್ತೇನೆ. ಐವತ್ತುಹರಿದಾರಿಯಷ್ಟು ವಿಸ್ತಾರವಾದ ಅದನ್ನು ತಿಳಿದು ಮನುಷ್ಯರು ಸೇರುವುದು ಕಷ್ಟ.

೧೦೬. ನನ್ನ ಕರ್ಮಗಳಲ್ಲಿ ನಿಷ್ಠರಾದ ಶುದ್ಧ ಭಾಗವತರು ಮಾನಸ ಸರೋವರವನ್ನು ಹೇಗೋ ಹಾಗೆಯೇ ಅದನ್ನೂ ತಿಳಿಯಬೇಕು.

೧೦೭. ಮಹಾಭಾಗ್ಯೇ, ಇವುಗಳೇ ಸಿದ್ಧಿಕಾಮನಾದ ರೈಭ್ಯನಿಗೆ ನಾನು ಹೇಳಿದ, ಕುಬ್ಜಾಮ್ರಕದಲ್ಲಿರುವ ತೀರ್ಥಗಳು.

೧೦೮. ವಸುಂಧರೇ, ಕುಬ್ಜಾಮ್ರಕಕ್ಷೇತ್ರದಲ್ಲಿ ಪೂರ್ವದಲ್ಲಿ ನಡೆದ ಅತ್ಯಾಶ್ಚರ್ಯಕರವಾದ ಬೇರೆಯ ವಿಚಾರವನ್ನು ಹೇಳುತ್ತೇನೆ. ಅದನ್ನು ಕೇಳು.

ಮಮ ನಿರ್ಮಾಲ್ಯಪಾರ್ಶ್ವೇ ವೈ ವ್ಯಾಲೀ ತಿಷ್ಠತಿ ನಿರ್ಭಯಾ ।
ಗಂಧಮಾಲ್ಯೋಪಹಾರ್ಯಾಣಿ ಭಕ್ಷಯಂತೀ ಯದೃಚ್ಛಯಾ ॥ ೧೦೯ ॥

ಕಸ್ಯಚಿತ್ತ್ವಥ ಕಾಲಸ್ಯ ನಕುಲಸ್ತತ್ರ ಚಾಗತಃ ।
ಪಶ್ಯತೇ ಚ ತತಸ್ತತ್ರ ರಮಮಾಣಾಂ ಯದೃಚ್ಛಯಾ ॥ ೧೧೦ ॥

ನಕುಲೇನ ಸಹ ವ್ಯಾಲ್ಯಾಃ ತದಾ ಯುದ್ಧಮಭೂಚ್ಚ ತತ್ ॥ ೧೧೧ ॥

ಸಂಪೂರ್ಣೇ ತೇ ತು ಮಧ್ಯಾಹ್ನೇ ಮಾಘಮಾಸೇ ತು ದ್ವಾದಶೀಂ ।
ತಯಾ ಸ ದಷ್ಟೋ ನಕುಲೋ ನಾಶಾಯ ಮಮ ಮಂದಿರೇ ॥ ೧೧೨ ॥

ತೇನಾಪಿ ವಿಷದಿಗ್ಧೇನ ವ್ಯಾಲೀ ಶೀಘ್ರಂ ನಿಪಾತಿತಾ ।
ಉಭೌ ಚಾನ್ಯೋನ್ಯಯುದ್ಧೇನ ತದಾ ಪಂಚತ್ವಮಾಗತೌ ॥ ೧೧೩ ॥

---

೧೦೯. ಕುಬ್ಜಾಮ್ರಕಕ್ಷೇತ್ರದಲ್ಲಿ ನನ್ನ ನಿರ್ಮಾಲ್ಯದ ಸಮೀಪಕ್ಕೆ ಅಕಸ್ಮಾತ್ತಾಗಿ ಒಂದು ಹೆಣ್ಣುಹಾವು ಬಂದು, ಗಂಧಮಾಲ್ಯೋಪಹಾರಗಳನ್ನು ತಿಂದುಕೊಂಡು ನಿರ್ಭಯದಿಂದ ಅಲ್ಲಿಯೇ ಇರುತ್ತಿದ್ದಿತು.

೧೧೦, ಸ್ವಲ್ಪಕಾಲದಮೇಲೆ ಅಕಸ್ಮಾತ್ತಾಗಿ ಅಲ್ಲಿಗೆ ಬಂದ ಒಂದು ಗಂಡು ಮುಂಗುಸಿಯು ಅಲ್ಲಿ ಆಡುತ್ತಿದ್ದ ಆ ಹಾವನ್ನು ಕಂಡಿತು.

೧೧೧–೧೧೨. ಆಗ ಮುಂಗಸಿಗೂ ಹಾವಿಗೂ ಯುದ್ಧವಾಯಿತು. ಮಾಘ ಮಾಸದ ದ್ವಾದಶಿಯದಿನ ಸರಿಯಾದ ಮಧ್ಯಾಹ್ನಕಾಲದಲ್ಲಿ ಆ ನನ್ನ ಮಂದಿರದಲ್ಲೇ ಹಾವು, ಮುಂಗಸಿಯನ್ನು ಸಾಯುವಂತೆ ಕಚ್ಚಿತು.

೧೧೩. ವಿಷದಿಂದ ಕೂಡಿದ ಮುಂಗಸಿಯೂ ಹಾವನ್ನು ಬೇಗನೆ ಬೀಳಿಸಿತು. ಹಾವುಮುಂಗಸಿಗಳೆರಡೂ ಹೀಗೆ ಒಂದರೊಡನೊಂದು ಜಗಳವಾಡಿ ಸತ್ತುವು.

ವ್ಯಾಲೀ ಪ್ರಾಗ್ಜ್ಯೋತಿಷೇ ಜಾತಾ ರಾಜಪುತ್ರೀ ಯಶಸ್ವಿನೀ ।
ನಕುಲೋಽಜಾಯತ ತದಾ ಕೋಸಲೇಷು ಜನಾಧಿಪಃ
ರೂಪವಾನ್ಗುಣವಾನ್ದೇವಿ ಸರ್ವಶಾಸ್ತ್ರಕಲಾನ್ವಿತಃ ॥ ೧೧೪ ॥

ತೌ ತು ದೀರ್ಘೇಣ ಕಾಲೇನ ಸೌಖ್ಯೇನ ಪರಿರಂಜಿತೌ ।
ಅವರ್ಧೇತಾಂ ಯಥಾಕಾಲಂ ಶುಕ್ಲಪಕ್ಷೇ ಯಥಾ ಶಶೀ ॥ ೧೧೫ ॥

ಸಾ ಕನ್ಯಾ ನಕುಲಂ ದೃಷ್ಟ್ವಾ ಸದ್ಯೋ ಹಂತುಂ ತಥೇಚ್ಛತಿ ।
ವ್ಯಾಲೀಂ ದೃಷ್ಟ್ವಾ ರಾಜಪುತ್ರಃ ಸಹಸಾ ಹಂತುಮಿಚ್ಛತಿ ॥ ೧೧೬ ॥

ಅಥ ತಸ್ಯಾಸ್ತು ಕಾಲೇನ ಕೋಸಲಾಧಿಪತಿಸ್ತಥಾ ।
ಪಾಣಿಂ ಜಗ್ರಾಹ ವಿಧಿವನ್ಮತ್ಪ್ರಸಾದಾದ್ವಸುಂಧರೇ ॥ ೧೧೭ ॥

---

೧೧೪. ಆ ಹಾವು ಪ್ರಾಗ್ಜ್ಯೋತಿಷನಗರದಲ್ಲಿ ರಾಜಪುತ್ರಿಯಾಗಿ ಉದಿಸಿ ಯಶಸ್ಸನ್ನು ಪಡೆಯಿತು. ದೇವಿ, ಮುಂಗಸಿಯು ಕೋಸಲದೇಶದಲ್ಲಿ ರೂಪವಂತನೂ, ಗುಣವಂತನೂ, ಸರ್ವಶಾಸ್ತ್ರಕಲಾವಿದನೂ ಆದ ರಾಜನಾಗಿ ಉದಿಸಿದನು.

೧೧೫. ಆ ರಾಜಕುಮಾರರಾಜಕುಮಾರಿಯರಿಬ್ಬರೂ ಸೌಖ್ಯದಿಂದ ಕಾಲಕ್ರಮದಲ್ಲಿ ಶುಕ್ಲಪಕ್ಷಚಂದ್ರನಂತೆ ಕಾಂತಿವಂತರಾಗಿ ಬೆಳೆದರು.

೧೧೬. ಆ ರಾಜಕುಮಾರಿಯು ಮುಂಗಸಿಯನ್ನು ಕಂಡೊಡನೆಯೇ ಕೊಲ್ಲಲಿಚ್ಛಿಸುತ್ತಿದ್ದಳು. ರಾಜಪುತ್ರನೂ ಹಾಗೆಯೇ ಹಾವನ್ನು ಕಂಡರೆ ಕೂಡಲೆ ಕೊಲ್ಲಲು ಬಯಸುತ್ತಿದ್ದನು.

೧೧೭. ವಸುಂಧರೇ, ಹೀಗಿರಲು ಆ ಕೋಸಲರಾಜಕುಮಾರನು, ಆ ರಾಜಪುತ್ರಿಯನ್ನು ನನ್ನ ಅನುಗ್ರಹದಿಂದ ಸಕಾಲದಲ್ಲಿ ಶಾಸ್ತ್ರೋಕ್ತವಾಗಿ ಮದುವೆ ಮಾಡಿಕೊಂಡನು.

ಕೋಸಲಾಧಿಪತೇಶ್ಚಾಪಿ ರಾಜ್ಞಃ ಪ್ರಾಗ್ಜ್ಯೋತಿಷಸ್ಯ ಚ ।
ಮಹೋತ್ಸವೇನ ಸಂವೃತ್ತಃ ಸಂಬಂಧೋ ಮತ್ಪ್ರಸಾದತಃ ॥ ೧೧೮ ॥

ದೃಢಪ್ರೀತಿಸ್ತಯೋರ್ಜಾತಾ ಯಥಾ ಚ ಜತುಕಾಷ್ಠಯೋಃ ।
ರಮತೋ ಧೂಮಕೇತೋಶ್ಚ ವಹ್ನೇಶ್ಚೈವ ಯಥಾ ತಥಾ ॥ ೧೧೯ ॥

ಯಥಾ ಶಶೀ ಚ ಶಕ್ರಶ್ಚ ರಮಂತೌ ನಂದನೇ ವನೇ ।
ಏವಂ ಚ ದೀರ್ಘಕಾಲಂ ಹಿ ತಯೋಃ ಪ್ರೀತಿರ್ನ ಹೀಯತೇ ॥ ೧೨೦ ॥

ಏವಂ ತೌ ವಿಹರಂತೌ ತು ತಸ್ಮಿನ್ನುಪವನೇ ತತಃ
ವಸೇತೇ ಚ ಯಥಾನ್ಯಾಯಂ ವೇಲಾಮಿವ ಮಹೋದಧಿಃ ॥ ೧೨೧ ॥

ಏವಂ ತಯೋರ್ಗತಃ ಕಾಲೋ ವರ್ಷಾಣಾಂ ಸಪ್ತಸಪ್ತತಿಃ ।
ನ ಬುಧ್ಯತೋಸ್ತಥಾತ್ಮಾನಂ ಮಮ ಮಾಯಾವಿಮೋಹಿತೌ ॥ ೧೨೨ ॥

---

೧೧೮. ಹೀಗೆ ಕೋಸಲದೇಶದ ರಾಜನಿಗೂ, ಪ್ರಾಗ್ಜ್ಯೋತಿಷದೇಶದ ರಾಜನಿಗೂ ನನ್ನ ಅನುಗ್ರಹದಿಂದ ಮಹೋತ್ಸವದಿಂದ ಸಂಬಂಧವಾಯಿತು.

೧೧೯–೧೨೦. ವಿವಾಹಿತರಾಗಿ ರಮಿಸುತ್ತಿದ್ದ ಆ ದಂಪತಿಗಳಿಗೆ ಅರಗಿಗೂ ಕಡ್ಡಿಗೂ ಇರುವಂತೆಯೂ ಧೂಮಕೇತುವಿಗೂ ಅಗ್ನಿಗೂ ಇರುವಂತೆಯೂ ನಂದನವನದಲ್ಲಿ ರಮಿಸುವ ಶಚೀಂದ್ರರಿಗಿರುವಂತೆಯೂ ಪರಸ್ಪರ ದೃಢವಾದ ಪ್ರೀತಿಯುಂಟಾಯಿತು. ಅವರ ಆ ಪ್ರೀತಿಯು ಬಹುಕಾಲದವರೆಗೂ ಕಡಿಮೆಯಾಗಲಿಲ್ಲ.

೧೨೧. ಹೀಗೆ ಅವರಿಬ್ಬರೂ ಅಲ್ಲಿ ತಮ್ಮ ಉಪವನದಲ್ಲಿ ವಿಹರಿಸುತ್ತ, ಮಹಾಸಮುದ್ರ ಸಮುದ್ರತೀರಗಳಂತೆ ಅಗಲದೆ ಇರುತ್ತಿದ್ದರು.

೧೨೨. ನನ್ನ ಮಾಯೆಯಿಂದ ವಿಮೋಹಿತರಾಗಿ, ತಾವು ಯಾರೆಂಬುದನ್ನು (ಆತ್ಮವಿಚಾರವನ್ನು)ಅರಿಯದ ಅವರಿಗೆ ಹೀಗೆ ಪ್ರೀತಿಯಿಂದಲೇ ಎಪ್ಪತ್ತೇಳು ವರ್ಷಗಳು ಕಳೆದುವು.

ಏವಂ ತೌ ವಿಹರಂತೌ ತು ತಸ್ಮಿನ್ನುಪವನೇ ತತಃ ।
ದೃಷ್ಟ್ವಾ ವ್ಯಾಲೀಂ ರಾಜಪುತ್ರಃ ತತೋ ಹಂತುಂ ವ್ಯವಸ್ಥಿತಃ ॥ ೧೨೩ ॥

ಸ ತಯಾ ವಾರ್ಯಮಾಣೋಽಪಿ ವ್ಯಾಲೀಂ ಹಂತುಮಿಹೋದ್ಯತಃ ।
ಗರುಡೋ ಹಂತಿ ನಾಗಾನ್ವೈ ದೃಷ್ಟ್ವೈವ ವಿನತಾತ್ಮಜಃ ॥ ೧೨೪ ॥

ಏವಂ ಸ ವಾರ್ಯಮಾಣೋಽಪಿ ವ್ಯಾಲೀಂ ಹಂತಿಸ್ಮ ದಾರುಣಾಂ ।
ತದಾ ಸಾ ರುಷಿತಾ ದೇವೀ ನ ಕಿಂಚಿದಪಿ ಭಾಷತೇ ॥ ೧೨೫ ॥

ತತಸ್ತಸ್ಯಾಂ ತು ವೇಲಾಯಾಂ ರಾಜಪುತ್ರ್ಯಗ್ರತೋ ಬಿಲಾತ್ ।
ನಕುಲಸ್ತು ವಿನಿರ್ಗತ್ಯ ಆಹಾರಾರ್ಥಂ ಸಮುದ್ಯತಃ ॥ ೧೨೬ ॥

ದೃಷ್ಟ್ವಾ ತು ರಾಜಪುತ್ರೀ ಸಾ ನಕುಲಂ ಸರ್ಪಕಾಂಕ್ಷಿಣಂ ।
ಹೃಷ್ಟಂ ಚಂ ಕ್ರಮಮಾಣಂ ಸಾ ನಕುಲಂ ಶುಭದರ್ಶನಂ ॥ ೧೨೭ ॥

---

೧೨೩. ಬಳಿಕ ಒಂದುದಿನ ಉಪವನದಲ್ಲಿ ಅವರಿಬ್ಬರೂ ವಿನೋದದಿಂದಿರುವಾಗ ರಾಜಪುತ್ರನು ಒಂದು ಹೆಣ್ಣುಹಾವನ್ನು ಕಂಡು, ಕೊಲ್ಲುವುದಕ್ಕೆ ಹೋದನು.

೧೨೪-೧೨೫. ತನ್ನ ಪ್ರಿಯೆಯು ಎಷ್ಟು ಬೇಡವೆಂದರೂ ಕೇಳದೆ ವಿನತೆಯ ಮಗನಾದ ಗರುಡನು ಹಾವುಗಳನ್ನು ಕಂಡೊಡನೆಯೇ ಕೊಲ್ಲುವಂತೆ ಅದನ್ನು ಭಯಂಕರವಾಗಿ ಕೊಂದೇ ಬಿಟ್ಟನು. ಆಗ ಅದರಿಂದ ಸಿಟ್ಟುಗೊಂಡ ಆ ರಾಣಿಯು ಅವನೊಡನೆ ಯಾವ ಮಾತನ್ನೂ ಆಡದೆ ಇದ್ದಳು.

೧೨೬. ಬಳಿಕ ಆಗಲೇ ರಾಜಪುತ್ರಿಯ ಎದುರಿಗೆ ಬಿಲದಿಂದ ಒಂದು ಮುಂಗಸಿಯು ಹೊರಕ್ಕೆ ಬಂದು, ತಿಂಡಿಗಾಗಿ ಹುಡುಕುತ್ತಿದ್ದಿತು.

೧೨೭-೧೨೮. ಸರ್ಪವನ್ನು ಬಯಸುವುದೂ, ಸಂತೋಷದಿಂದಿರುವುದೂ, ಶುಭಕರವಾದ ದರ್ಶನವುಳ್ಳದೂ ಆಗ ಅಲ್ಲಿ ಸಂಚರಿಸುತ್ತಿದ್ದ ಆ

ಕ್ರೋಧಾತ್ತಂ ನಕುಲಂ ಚಾಪಿ ವಿನಿಹಂತುಂ ಪ್ರಚಕ್ರಮೇ ।
ವಾರಿತಾ ರಾಜಪುತ್ರೇಣ ಸುತಾ ಪ್ರಾಗ್ಜ್ಯೋತಿಷಸ್ಯ ವೈ ॥ ೧೨೮ ॥

ನಕುಲಂ ಘಾತಿತಂ ದೃಷ್ಟ್ವಾ ಮಂಗಲ್ಯಂ ಶುಭದರ್ಶನಂ ।
ಕುಪಿತೋ ರಾಜಪುತ್ರೋ ವೈ ರಾಜಪುತ್ರೀಮಭಾಷತ ॥ ೧೨೯ ॥

ಸ್ತ್ರೀಣಾಂ ಭರ್ತಾ ಸದಾ ಮಾನ್ಯಸ್ತಂ ಮಾಮುಲ್ಲಂಘ್ಯ ನಿಷ್ಠುರಂ ।
ದರ್ಶನೀಯಃ ಪ್ರಿಯೋ ರಾಜ್ಞಾಂ ಮಂಗಲ್ಯಶ್ಶುಭದರ್ಶನಃ ।
ಘಾತಿತೋ ನಕುಲಃ ಕಸ್ಮಾನ್ಮಯಾ ವೈ ವಾರ್ಯಮಾಣಯಾ ॥ ೧೩೦ ॥

ಇತಿ ಭರ್ತೃವಚಃ ಶ್ರುತ್ವಾ ಪ್ರಾಗ್ಜ್ಯೋತಿಷಸುತಾ ತದಾ ।
ಪ್ರತ್ಯುವಾಚ ತತಃ ಕ್ರೋಧಾತ್ಕೋಸಲಾಧಿಪತೇಃ ಸುತಂ ॥ ೧೩೧ ॥

ಅಸಕೃದ್ವಾರ್ಯಮಾಣೋಽಪಿ ವ್ಯಾಲೀಂ ಘಾತಿತವಾನ್ಮತಃ ।
ತಸ್ಮಾನ್ಮಯಾಪಿ ನಕುಲೋ ಘಾತಿತಸ್ಸರ್ಪಘಾತುಕಃ ॥ ೧೩೨ ॥

ಮುಂಗಸಿಯನ್ನು ರಾಣಿಯು ಕೊಲ್ಲಲು ಯತ್ನಿಸಿ, ರಾಜಪುತ್ರನು ಬೇಡವೆಂದು ತಡೆದರೂ ಬಿಡದೆ ಕೋಪದಿಂದ ಕೊಂದೇ ಬಿಟ್ಟಳು.

೧೨೯–೧೩೦. ಶುಭಕರ ದರ್ಶನವುಳ್ಳ ಮುಂಗಸಿಯನ್ನು ಕೊಂದುದನ್ನು ಕಂಡು, ಕೋಪಗೊಂಡ ರಾಜಪುತ್ರನು ರಾಣಿಯನ್ನು ನೋಡಿ, "ಹೆಂಗಸರಿಗೆ ಪತಿಯು ಯಾವಾಗಲೂ ಮಾನ್ಯನು. ಪತಿಯಾದ ನನ್ನನ್ನು ಮೀರಿ, ನೋಡುವುದಕ್ಕೆ ಚೆನ್ನಾಗಿಯೂ, ರಾಜರಿಗೆ ಮಂಗಳಕರವಾಗಿಯೂ, ದರ್ಶನದಿಂದ ಶುಭವನ್ನುಂಟು ಮಾಡುವುದಾಗಿಯೂ ಇರುವ ಮುಂಗಸಿಯನ್ನು, ನಾನು ಬೇಡವೆಂದು ತಡೆಯುತ್ತಿದ್ದರೂ ಕಾಠಿಣ್ಯದಿಂದ ನೀನೇಕೆ ಕೊಂದೆ ? !" ಎಂದನು.

೧೩೧-೧೩೨. ಗಂಡನ ಆ ಮಾತನ್ನು ಕೇಳಿ, ಪ್ರಾಗ್ಜ್ಯೋತಿಷ ರಾಜಪುತ್ರಿಯಾದ ಆಕೆ, ಕೋಪದಿಂದ ಅವನಿಗೆ "ಬೇಡವೆಂದು ಹಲವುಸಾರಿ ತಡೆದರೂ ನೀನು ಹಾವನ್ನು ಏಕೆ ಕೊಂದೆಯೋ ಅದಕ್ಕೇ ನಾನೂ ಹಾವನ್ನು ಕೊಲ್ಲುವ ಮುಂಗಸಿಯನ್ನು ಕೊಂದೆನು" ಎಂದು ಉತ್ತರವನ್ನು ಹೇಳಿದಳು.

ರಾಜಪುತ್ರ್ಯಾ ವಚಃ ಶ್ರುತ್ವಾ ರಾಜಪುತ್ರಸ್ತತೋಽಬ್ರವೀತ್ ।
ವಾಗ್ಭಿಃ ಸ ಕಟುಕಾಭಿಶ್ಚ ತರ್ಜಯನ್ನಿವ ತಾಂ ಧರೇ ॥ ೧೩೩ ॥

ಸರ್ಪಸ್ತೀವ್ರವಿಷೋ ಭದ್ರೇ ತೀಕ್ಷ್ಣದಂಷ್ಟ್ರೋ ದುರಾಸದಃ ।
ದಶತೇ ಮಾನುಷಂ ದುಷ್ಟೋ ಯೇನಾಸೌ ಮ್ರಿಯತೇ ಜನೈಃ ॥ ೧೩೪ ॥

ತಸ್ಮಾನ್ಮಯಾ ಹತೋ ಭದ್ರೇಽಹಿತಕಾರೀ ವಿಷೋದ್ಧತಃ ॥ ೧೩೫ ॥

ಪ್ರಜಾಪಾಲಾ ವಯಂ ಭದ್ರೇ ಯೇಽಪಿ ಚೈವಾಪಥೇ ಸ್ಥಿತಾಃ ।
ಸರ್ವಾಂಸ್ತಾನ್ ದಂಡಯಾಮೋಽಹಿ ತೀವ್ರದಂಡೈರ್ಯಥೋಚಿತಂ ॥ ೧೩೬ ॥

ಸಾಧೂನ್ಯೇ ಚಾಪಿ ಹಿಂಸಂತಿ ಹ್ಯಪರಾಧವಿವರ್ಜಿತಾನ್ ।
ಸ್ತ್ರಿಯಂ ಚೈವಾಪಿ ಹಿಂಸಂತಿ ಕಾಮಕಾರಾಶ್ಚ ಯೇ ನರಾಃ ॥ ೧೩೭ ॥

ತೇ ದಂಡ್ಯಾಶ್ಚೈವ ವಧ್ಯಾಶ್ಚ ರಾಜಧರ್ಮಾದ್ಯಥಾರ್ಹತಃ ।
ಮಯಾಪಿ ರಾಜಧರ್ಮೋ ವೈ ಕರ್ತವ್ಯೋ ರಾಜಕರ್ಮಣಿ ॥ ೧೩೮ ॥

---

೧೩೩. ಧರೇ, ರಾಜಪುತ್ರಿಯ ಮಾತನ್ನು ಕೇಳಿ, ರಾಜಪುತ್ರನು ಕಠಿಣವಾದ ಮಾತುಗಳಿಂದ ಅವಳನ್ನು ಗದರಿಸುವನಂತೆ ಹೀಗೆ ಹೇಳಿದನು.

೧೩೪. "ಭದ್ರೇ, ಸರ್ಪವು ಕ್ರೂರವಾದ ವಿಷವೂ ಕೋರೆಹಲ್ಲೂ ಉಳ್ಳದು; ಮನುಷ್ಯರನ್ನು ಕಚ್ಚಿಕೊಲ್ಲುತ್ತದೆ. ಅದರಿಂದ ದುಷ್ಟವೂ ಹತ್ತಿರಹೋಗಲು ಕಷ್ಟಕರವಾದುದೂ ಆದ ಅದನ್ನು ಮನುಷ್ಯರು ಕೊಲ್ಲುತ್ತಾರೆ.

೧೩೫-೧೩೬. ಭದ್ರೇ, ಆದುದರಿಂದ ಅಹಿತಕಾರಿಯೂ, ವಿಷದ ಕೊಬ್ಬುಳ್ಳದೂ ಆದ ಅದನ್ನು ನಾನು ಕೊಂದೆನು. ನಾವು ರಾಜರು; ಕೆಟ್ಟದಾರಿಯಲ್ಲಿರುವವರನ್ನೆಲ್ಲಾ ಅವರ ತಪ್ಪಿಗೆ ತಕ್ಕಂತೆ ಕ್ರೂರವಾದ ದಂಡನೆಗಳಿಂದ ದಂಡಿಸುತ್ತೇವೆ.

೧೩೭-೧೩೮. ಯಾವ ತಪ್ಪೂ ಇಲ್ಲದ ಸಾಧುಗಳನ್ನೂ, ಹೆಂಗಸರನ್ನೂ ಹಿಂಸಿಸುವ ಸ್ವೇಚ್ಛಾಚಾರಿಗಳು ರಾಜಧರ್ಮದಂತೆ ತಕ್ಕ ದಂಡನೆಗೆ ಅರ್ಹರು. ರಾಜಕಾರ್ಯದಲ್ಲಿ ನಾನು ರಾಜಧರ್ಮವನ್ನು ಅನುಸರಿಸಲೇ ಬೇಕು.

ನಕುಲೇನಾಪರಾದ್ಧಂ ಕಿಂ ತದ್ವದತ್ವಂ ಮಮಾಪಿ ಹಿ ।
ದರ್ಶನೀಯಸ್ಸುರೂಪಶ್ಚ ರಾಜ್ಞಾಂ ಯೋಗ್ಯೋ ಗೃಹೇಷು ಚ ॥ ೧೩೯ ॥

ಮಂಗಲ್ಯಶ್ಚ ಪವಿತ್ರಶ್ಚ ನಕುಲಃ ಕಿಂ ಹತಸ್ತ್ವಯಾ ।
ವಾರ್ಯಮಾಣಾಪಿ ಹಿ ಮಯಾ ಘಾತಿತೋ ನಕುಲಸ್ತ್ವತಃ ॥ ೧೪೦ ॥

ತತೋ ಮಮ ನ ಭಾರ್ಯಾಸಿ ನ ಚಾಹಂ ತೇ ಪತಿಃ ಸ್ಥಿತಃ ।
ಕಿಂಚ ತೇನ ನ ಹನ್ಮಿ ತ್ವಾಂ ಸ್ತ್ರಿಯೋಽವಧ್ಯಾಸ್ಸದೈವ ಯತ್ ॥ ೧೪೧ ॥

ಇತ್ಯುಕ್ತ್ವಾ ರಾಜಪುತ್ರಸ್ತಾಂ ನಿವೃತ್ತೋ ನಗರಂ ಪ್ರತಿ ।
ಏವಂ ಕ್ರೋಧಂ ಸಮಾದಾಯ ನಷ್ಟಸ್ನೇಹೌ ಪರಸ್ಪರಂ ॥ ೧೪೨ ॥

ಏವಂ ಪ್ರಚ್ಛತಿ ಕಾಲೇ ವೈ ಕೋಸಲಾಯಾಂ ಜನಾಧಿಪಃ ।
ಶೃಣೋತಿ ತಾಂ ಕಥಾಂ ಸರ್ವಾಂ ವಧಂ ನಕುಲಸರ್ಪಯೋಃ ।
ಏವಂ ಶ್ರುತ್ವಾ ಯಥಾನ್ಯಾಯಂ ಸಕ್ರೋಧೌ ತಾವುಭಾವಪಿ ॥ ೧೪೩ ॥

೧೩೯-೧೪೧. ಮುಂಗಸಿಯು ತಪ್ಪೇನೆಂಬುದನ್ನು ನೀನು ಹೇಳು. ಸುರೂಪವುಳ್ಳುದೂ, ನೋಡಬೇಕಾದುದೂ, ದೊರೆಗಳ ಅರಮನೆಗಳಲ್ಲಿ ಸಾಕತಕ್ಕುದೂ, ಮಂಗಳಕರವೂ, ಪವಿತ್ರವೂ ಆದ ಮುಂಗಸಿಯನ್ನು ನಾನು ಬೇಡವೆಂದರೂ ಏಕೆ ಕೊಂದೆ ?! ಇನ್ನು ನೀನು ನನ್ನ ಹೆಂಡತಿಯೂ ಅಲ್ಲ. ನಾನು ನಿನಗೆ ಪತಿಯೂ ಅಲ್ಲ. ಸ್ತ್ರೀಯರನ್ನು ಎಂದಿಗೂ ಕೊಲ್ಲಬಾರದೆಂಬುದರಿಂದ ನಿನ್ನನ್ನು ನಾನು ಕೊಲ್ಲದೆ ಬಿಟ್ಟಿದ್ದೇನೆ"

೧೪೨. ಹೀಗೆ ಹೇಳಿ ಆ ರಾಜಪುತ್ರನು ಪಟ್ಟಣಕ್ಕೆ ಹಿಂದಿರುಗಿದನು. ಹೀಗೆ ಸಿಟ್ಟಿನಿಂದ ಅವರು ಪರಸ್ಪರವಾಗಿ ಪ್ರೀತಿಯನ್ನೇ ಕಳೆದುಕೊಂಡರು.

೧೪೩-೧೪೪. ಹಾಗೆಯೇ ಕಾಲವು ಕಳೆಯುತ್ತಿರಲು ರಾಜಪುತ್ರನ ತಂದೆಯಾದ ಕೋಸಲೇಶ್ವರನು, ಮಗನೂ, ಸೊಸೆಯೂ ಹಾವು ಮುಂಗಸಿಗಳನ್ನು ಕೊಂದ ಮತ್ತು ಆ ಕೋಪದಿಂದ ಇಬ್ಬರೂ ಒಬ್ಬರಲ್ಲೊಬ್ಬರು ಪ್ರೀತಿಯಿಲ್ಲದೆ ಇರುವ ಆ ಕಥೆಯೆಲ್ಲವನ್ನೂ ಸರಿಯಾಗಿ ಕೇಳಿದನು. ಬಳಿಕ ಎದುರಿಗಿದ್ದ ತನ್ನ

ತತಃ ಕಂಚುಕಿನಶ್ಚೈವ ಸ್ವಾಮಾತ್ಯಾನಪ್ರತಃ ಸ್ಥಿತಾನ್ ।
ಪುತ್ರಂ ಮಮ ವಧೂಂ ಚೈವ ಸಮಾನಯತ ಸತ್ವರಂ ॥ ೧೪೪ ॥

ತತೋ ವೈ ರಾಜಭೃತ್ಯಾಸ್ತು ರಾಜ್ಞೋ ವೈ ಪ್ರಿಯಕಾರಿಣಃ ॥ ೧೪೫ ॥

ರಾಜಾಜ್ಞಾಂ ತಾಂ ಪುರಸ್ಕೃತ್ಯ ವಧೂಂ ಪುತ್ರಂ ಚ ಸಾದರಂ ।
ಆನೀಯ ದರ್ಶಯಾಮಾಸುರ್ಯತ್ರ ರಾಜಾ ಸ್ವಯಂ ಸ್ಥಿತಃ ॥ ೧೪೬ ॥

ವಧೂಪುತ್ರೌ ತತೋ ದೃಷ್ಟ್ವಾ ರಾಜಾ ವಚನಮಬ್ರವೀತ್ ॥ ೧೪೭ ॥

ಪುತ್ರ ಕುತ್ರಗತಂ ಪ್ರೇಮ ಯುವಯೋಸ್ತತ್ಸವಯಹಿತಂ ।
ಸ್ನೇಹಶ್ಚ ಕ್ವ ಗತಃ ಪೂರ್ವೋ ವಿರುದ್ಧಾಚರಣೌ ಕಥಂ ॥ ೧೪೮ ॥

ಆಸೀದ್ಯಾ ಯುವಯೋಃ ಪ್ರೀತಿರನ್ಯೋನ್ಯಂ ಜತುಕಾಷ್ಠವತ್ ।
ದರ್ಪಣೇ ಪ್ರತಿಬಿಂಬಂ ಚ ದೃಶ್ಯತೇ ಯದ್ವದಾತ್ಮನಃ ।
ಸಮ್ಮುಖತ್ವೇನ ಚ ಸದಾ ತದ್ವದ್ವಾಂ ಯಾಭವತ್ಪುರಾ ॥ ೧೪೯ ॥

ಮಂತ್ರಿಗಳನ್ನೂ, ಕಂಚುಕಿಗಳನ್ನೂ ನೋಡಿ, "ನನ್ನ ಮಗನನ್ನೂ ಸೊಸೆಯನ್ನೂ ಬೇಗನೆ ಕರೆದುಕೊಂಡು ಬನ್ನಿ" ಎಂದನು.

೧೪೫-೧೪೬. ಬಳಿಕ ರಾಜನಿಗೆ ಹಿತಕಾರಿಗಳಾದ ಸೇವಕರು ದೊರೆಯ ಅಪ್ಪಣೆಯನ್ನು ಅನುಸರಿಸಿ, ಸೊಸೆಯನ್ನೂ, ಮಗನನ್ನೂ ಆದರದಿಂದ ರಾಜನಿದ್ದೆಡೆಗೆ ಕರೆದುಕೊಂಡು ಬಂದು ತೋರಿಸಿದರು.

೧೪೭. ಬಳಿಕ ದೊರೆಯು ಸೊಸೆಯನ್ನೂ, ಮಗನನ್ನೂ ನೋಡಿ, ಮುಂದಿನಂತೆ ಮಾತನಾಡಿದನು.

೧೪೮. "ಪುತ್ರ, ನಿಮ್ಮಿಬ್ಬರಿಗೂ ಚೆನ್ನಾಗಿದ್ದ ಆ ಪ್ರೇಮವೂ, ಸ್ನೇಹವೂ ಎಲ್ಲಿ ಹೋಯಿತು ? ವಿರೋಧವಾದ ನಡೆವಳಿಯು ಹೇಗುಂಟಾಯಿತು ?

೧೫೦. ಕನ್ನಡಿಯಲ್ಲಿ ಎದುರಿಗೆ ಕಾಣುವ ಆತ್ಮಪ್ರತಿಬಿಂಬದಂತೆ ಪರಸ್ಪರ ಇದ್ದ ನಿಮ್ಮಲ್ಲಿ ಅರಗು ಕಡ್ಡಿಗಳಿಗಿರುವಂತೆ ಹಿಂದೆ ಇದ್ದ ಪರಸ್ಪರ ಪ್ರೀತಿಯು ಏನಾಯಿತು ?

ದಕ್ಷಾ ಸುಶೀಲಾ ಧರ್ಮಿಷ್ಠಾ ನೈನಾಂ ತ್ಯಕ್ತುಂ ತ್ವಮರ್ಹಸಿ ॥ ೧೫೦ ॥

ಅಪ್ರಿಯಂ ನೋಕ್ತಪೂರ್ವಂ ತು ಯಯಾ ಪರಿಜನೇಪಿ ಚ ।
ಮಿಷ್ಟಾನ್ನಸಾಧನೇ ದಕ್ಷಾ ತ್ವಯಾ ತ್ಯಕ್ತುಂ ನ ಯುಜ್ಯತೇ ॥ ೧೫೧ ॥

ಧನಪೂರ್ವಸ್ತು ತೇ ಧರ್ಮಃ ಸ ಚ ಯೋಷಿತ್ಕೃತಃ ಖಲು ।
ಅಹೋ ಸತ್ಯಂ ಜನಾನಾಂ ಚ ಸತು ಸ್ತ್ರೀಭ್ಯಸ್ಸುತಃ ಕುಲಂ ॥ ೧೫೨ ॥

ತತಃ ಪಿತುರ್ವಚಃ ಶ್ರುತ್ವಾರಾಜಪುತ್ರೋ ಯಶಸ್ವಿನಿ ।
ಉಭೌ ತಚ್ಚರಣೌ ಗೃಹ್ಯ ಪಿತರಂ ಪ್ರತ್ಯಭಾಷತ ॥ ೧೫೩ ॥

ದೋಷೋ ನ ವಿದ್ಯತೇ ತಾತ ಸ್ನುಷಾಯಾಂ ಕೋಪಿ ಕುತ್ರಚಿತ್ ।
ಕಿಂ ನೋ ತು ವಾರ್ಯಮಾಣಾಪಿ ನಕುಲಂ ನೋಗ್ರತೋಹನತ್ ॥ ೧೫೪ ॥

ತತೋಭವನ್ಮಮ ಕ್ರೋಧೋ ದೃಷ್ಟ್ವಾ ಪಾತಿತಮಗ್ರತಃ ।
ಕ್ರೋಧಾಸಕ್ತೇನ ತು ಮಯಾ ಯಥೇಯಂ ಪರಿಭಾಷಿತಾ ॥ ೧೫೫ ॥

೧೫೦–೧೫೧. ಸಮರ್ಥಳೂ, ಸುಶೀಲೆಯೂ, ಧರ್ಮಿಷ್ಠೆಯೂ ಆದ ಇವಳನ್ನು ನೀನು ಬಿಡಬಾರದು. ಪರಿಜನರಲ್ಲೂ ಹಿಂದೆಂದೂ ಅಪ್ರಿಯವಾದ (ಅಹಿತವಾದ)ಮಾತನಾಡದವಳೂ, ಮೃಷ್ಟಾನ್ನವನ್ನು ಸಿದ್ಧಪಡಿಸುವುದರಲ್ಲಿ ಸಮರ್ಥಳೂ, ಆದ ಇವಳನ್ನು ನೀನು ತ್ಯಜಿಸುವುದು ಯುಕ್ತವಲ್ಲ.

೧೫೨. ನಿನ್ನ ಧರ್ಮವು ಧನಮೂಲವಾದುದಾದರೂ ಅದು ಪತ್ನಿಯಿಂದಾಗತಕ್ಕುದಲ್ಲವೆ ! ಅಥವಾ ಧನಮೂಲವಾದ ನಿನ್ನ ಧರ್ಮವೇ ಪತ್ನಿಯಾಗಿರುವಳಲ್ಲವೆ ! ಅಹೋ ! ಜನರಿಗೆ ಧರ್ಮವೂ, ಪುತ್ರನೂ, ಕುಲವೂ ನಿಜವಾಗಿ ಸ್ತ್ರೀಯರಿಂದಲೇ. ”

೧೫೩-೧೫೮. ಕೀರ್ತಿವಂತೆ, ತಂದೆಯ ಆ ಮಾತನ್ನು ಕೇಳಿ, ರಾಜಪುತ್ರನು ಆತನ ಎರಡುಕಾಲುಗಳನ್ನೂ ಹಿಡಿದುಕೊಂಡು, “ಅಪ್ಪಾ, ನಿನ್ನ ಸೊಸೆಯಲ್ಲಿ ಯಾವುದರಲ್ಲಿಯೂ ಯಾವ ತಪ್ಪೂ ಇಲ್ಲ. ಆದರೆ ನಾನು ಬೇಡವೆಂದು ಹೇಳಿದರೂ ನನ್ನೆದುರಿಗೇ ಮುಂಗಸಿಯೊಂದನ್ನು ಕೊಂದಳು. ಅದನ್ನು ನೋಡಿ, ಅವಳಮೇಲೆ ನನಗೆ ಕೋಪವುಂಟಾಯಿತು. ಆದರಿಂದ ನೈಮರೆತ ನಾನು ಇವಳಿಗೆ ‘ಇನ್ನು

ಮಮ ಭಾರ್ಯಾ ನ ಭವತೀ ನ ಚಾಹಂ ತವ ವೈ ಪತಿಃ ।
ಏತಚ್ಚ ಕಾರಣಂ ನಾನ್ಯತ್ಕಿಂಚಿದ್ರಾಜನ್ನ ಸಂಶಯಃ ॥ ೧೫೬ ॥

ತತಃ ಪತಿವಚಃ ಶ್ರುತ್ವಾ ಪ್ರಾಗ್ಜ್ಯೋತಿಷಕುಲೋದ್ಭವಾ ।
ಶಿರಸಾ ಪ್ರಣತಿಂ ಕೃತ್ವಾ ಇದಂವಚನಮಬ್ರವೀತ್ ॥ ೧೫೭ ॥

ಅಪರಾಧವಿಹೀನಶ್ಚ ಭೀತಶ್ಚ ಭುಜಗಸ್ತಥಾ ।
ಶತಶೋ ವಾರ್ಯಮಾಣೇನ ಶೀಘ್ರಮೇವ ನಿಪಾತಿತಃ ॥ ೧೫೮ ॥

ತತಃ ಸರ್ಪವಧಂ ದೃಷ್ಟ್ವಾ ಕ್ರೋಧಸಂತಪ್ತಮಾನಸಾ ।
ನಾ ಭಾಷಿತಃ ಕಿಮಪಿ ನೋ ಮಯ್ಯೈತದವಧೇಹಿ ವೈ ॥ ೧೫೯ ॥

ವಧೂಪುತ್ರವಚಃ ಶ್ರುತ್ವಾ ಕೋಸಲಾನಾಂ ಜನೇಶ್ವರಃ ।
ಉವಾಚ ಮಧುರಂ ವಾಕ್ಯಮುಭಯೋರ್ಜನಸಂಸದಿ ॥ ೧೬೦ ॥

ನೀನು ನನ್ನ ಪತ್ನಿಯಲ್ಲ. ನಾನು ನಿನ್ನ ಪತಿಯೂ ಅಲ್ಲ' ಎಂದು ಹೇಳಿದೆನು. ದೊರೆಯೇ, ಇದೇ ಕಾರಣವೇ ಹೊರತು ಮತ್ತಾವಕಾರಣವೂ ನಿಜವಾಗಿಯೂ ಇಲ್ಲ" ಎಂದು ಹೇಳಿದನು.

೧೫೭-೧೫೯. ಪತಿಯು ರಾಜನಿಗೆ ಹೇಳಿದ ಮಾತನ್ನು ಕೇಳಿ, ಬಳಿಕ ಪ್ರಾಗ್ಜ್ಯೋತಿಷರಾಜಕುಮಾರಿಯೂ ಮಾವನಿಗೆ ತಲೆಬಾಗಿ ನಮಿಸಿ, "ನಾನು ಹೇಳುವುದನ್ನು ಕೇಳಬಹುದು. ತಮ್ಮ ಪುತ್ರನು, ಯಾವ ಅಪರಾಧವೂ ಇಲ್ಲದ ಹೆದರಿದ ಹಾವನ್ನು, ನಾನು ನೂರಾರುಸಾರಿ ಬೇಡವೆಂದು ತಡೆದರೂ ಬಿಡದೆ ತಟ್ಟನೆ ಕೊಂದುಹಾಕಿದನು. ಹಾವಿನ ಕೊಲೆಯನ್ನು ನೋಡಿ ಸಂತಾಪಗೊಂಡ ಮನಸ್ಸುಳ್ಳ ನಾನು ಪತಿಯೊಡನೆ ಯಾವ ಮಾತನ್ನೂ ಆಡದೆ ಇದ್ದೆನು" ಎಂದು ಬಿನ್ನಯಿಸಿದಳು.

೧೬೦-೧೬೧. ಕೋಸಲರಾಜನು ಸೊಸೆಯ ಮತ್ತು ಮಗನ ಆ ಮಾತುಗಳನ್ನು ಕೇಳಿ, ಅಲ್ಲಿದ್ದ ಜನರೆದುರಿಗೇ, ಅವರಿಬ್ಬರನ್ನೂ ನೋಡಿ,

ಅನೇನ ನಿಹತಃ ಸರ್ಪಃ ತ್ವಯಾ ಚ ನಕುಲೋ ಹತಃ |
ಕಥಂ ವಾ ಕ್ರಿಯತೇ ಕ್ರೋಧಸ್ತನ್ಮೇ ವಕ್ತುಮಿಹಾರ್ಹಥಃ || ೧೬೧ ||

ಹತೇ ತು ನಕುಲೇ ಪುತ್ರ ಕಿಂ ತೇ ಕ್ರೋಧಸ್ಯ ಕಾರಣಂ |
ರಾಜಪುತ್ರಿ ಹತೇ ಸರ್ಪೇ ಕಿಂ ವಾ ತೇ ಮನ್ಯುಕಾರಣಂ || ೧೬೨ ||

ತತಃ ಪಿತುರ್ವಚಃ ಶ್ರುತ್ವಾ ಕೋಸಲೇಶ್ವರನಂದನಃ |
ಉವಾಚ ಮಧುರಂ ವಾಕ್ಯಂ ರಾಜಪುತ್ರೋ ಮಹಾಯಶಾಃ || ೧೬೩ ||

ಏತೇನ ಕಿಂ ವಾ ಪ್ರಶ್ನೇನ ನೈತತ್ಪ್ರಷ್ಟುಂ ತ್ವಮರ್ಹಸಿ |
ಏನಾಂ ಪೃಚ್ಛ ಮಹಾರಾಜ ಜ್ಞಾಯತೇ ಕಾಯಚೇಷ್ಟಿತಂ || ೧೬೪ ||

ಪುತ್ರಸ್ಯ ವಚನಂ ಶ್ರುತ್ವಾ ಕೋಸಲಾನಾಂ ಜನೇಶ್ವರಃ |
ಉವಾಚ ಮಧುರಂ ವಾಕ್ಯಂ ಧರ್ಮಸಂಯೋಗಸಾಧನಂ || ೧೬೫ ||

ಇಂಪಾದ ಮಾತಿನಿಂದ, "ಇವನು ಹಾವನ್ನು ಕೊಂದನು. ನೀನು ಮುಂಗಸಿಯನ್ನು ಕೊಂದೆ. ಇದರಿಂದ ನಿಮ್ಮಲ್ಲಿ ಪರಸ್ಪರ ಕೋಪವು ಹೇಗುಂಟಾಯಿತೆಂಬುದನ್ನು ಹೇಳಿರಿ.

೧೬೨. ಪುತ್ರನೇ, ಇವಳು ಮುಂಗಸಿಯನ್ನು ಕೊಂದರೆ ನಿನಗೆ ಕೋಪಕ್ಕೆ ಕಾರಣವೇನು ? ರಾಜಕುಮಾರೀ, ಇವನು ಸರ್ಪವನ್ನು ಕೊಂದರೆ ನಿನಗೆ (ದುಃಖಕ್ಕೆ)ಕೋಪಕ್ಕೆ ಕಾರಣವೇನು ? ಅದನ್ನು ಹೇಳಿ'' ಎಂದನು.

೧೬೩–೧೬೪. ಮಹಾಕೀರ್ತಿವಂತನಾದ ಕೋಸಲರಾಜಪುತ್ರನು ತಂದೆಯ ಆ ಮಾತನ್ನು ಕೇಳಿ, ''ಅಪ್ಪಾ ಈ ಪ್ರಶ್ನೆಯಿಂದೇನು ? ಇದನ್ನು ನೀನು ಕೇಳಬಾರದು. ಮಹಾರಾಜ, ಇವಳನ್ನು ಕೇಳು. ದೇಹದ(ಚೇಷ್ಟೆ)ಕಾರ್ಯವು ತಿಳಿಯುತ್ತದೆ'' ಎಂದು ಇಂಪಾಗಿ ಮಾತನಾಡಿದನು.

೧೬೫–೧೬೬. ಮಗನ ಮಾತನ್ನು ಕೇಳಿ ಆ ದೊರೆಯು, ಧರ್ಮ ಸಂಬಂಧಕ್ಕೆ ಸಾಧಕವಾದ ಇಂಪಾದ ಮಾತುಗಳಿಂದ, ಹೀಗೆ ಹೇಳಿದನು.

ಬ್ರೂಹಿ ಪುತ್ರ ಯಥಾನ್ಯಾಯಂ ಯತ್ತೇ ಮನಸಿ ವರ್ತತೇ ।
ಪ್ರೀತಿವಿಚ್ಛೇದಕರಣಂ ಉಭಯೋರಿಹ ಕಥ್ಯತಾಂ ॥ ೧೬೬ ॥

ಜಾತಾಸ್ಸಂಬಂಧಿತಾಃ ಪುತ್ರಾಸ್ಸರ್ವಕಾಮೇಷು ನಿಷ್ಠಿತಾಃ ।
ಪಿತೃಪೃಷ್ಟಂ ತು ಯದ್ಗುಹ್ಯಂ ಗೋಪಯಂತಿ ಸುತಾಧಮಾಃ ॥ ೧೬೭ ॥

ಸತ್ಯಂ ವಾ ಯದಿ ವಾಸತ್ಯಂ ನ ಬ್ರುವಂತಿ ಕದಾಚನ ।
ಪತಂತಿ ನರಕೇ ಘೋರೇ ರೌರವೇ ತಪ್ತವಾಲುಕೇ ॥ ೧೬೮ ॥

ಪಿತ್ರಾ ಪೃಷ್ಟಂ ತು ಯೇ ಬ್ರೂಯುಃ ಶುಭಂ ವಾಶುಭಮೇವ ವಾ ।
ದಿವ್ಯಾಂ ಚ ತೇ ಗತಿಂ ಯಾಂತಿ ಯಾ ಗತಿಃ ಸತ್ಯವಾದಿನಾಂ ॥ ೧೬೯ ॥

" ಮಗನೇ, ನಿನ್ನ ಮನಸ್ಸಿನಲ್ಲಿರುವುದನ್ನು ನ್ಯಾಯವಾಗಿ ಹೇಳು. ನಿಮ್ಮಿಬ್ಬರ ಪ್ರೀತಿವಿಚ್ಛೇದಕ್ಕೆ ಕಾರಣವನ್ನು ತಿಳಿಸು.

೧೬೭. ಹುಟ್ಟಿದ ಗಂಡುಮಕ್ಕಳು ತಂದೆಗೆ ಪೂರ್ಣವಾಗಿ ಸೇರಿದವರು. ಸಕಲೇಷ್ಟಗಳನ್ನೂ ನೆರವೇರಿಸುವುದರಲ್ಲಿ ನಿರತರು. ಹೀಗಿರುವಾಗ ತಂದೆಯು ಕೇಳಿದ ಗುಟ್ಟನ್ನು ಹೇಳದೆ ಮರೆಮಾಚುವವರು ಮಕ್ಕಳಲ್ಲಿ ಹೀನರೆನಿಸಿ ಕೊಳ್ಳುವರು.

೧೬೮. ವಿಚಾರವು ನಿಜವಾದುದೇ ಆಗಲಿ, ಸುಳ್ಳಾದುದೇ ಆಗಲಿ, ಎಂದೇ ಆದರೂ, ತಂದೆಯು ಕೇಳಿದರೂ ಹೇಳದಿರುವ ಅಧಮರು ಕಾದಮರಳಿನ ಘೋರವಾದ ರೌರವನರಕದಲ್ಲಿ ಬೀಳುವರು.

೧೬೯. ವಿಚಾರವು ಒಳ್ಳೆಯದಾಗಲಿ, ಕೆಟ್ಟದೇ ಆಗಲಿ, ತಂದೆಯು ಕೇಳಿದುದನ್ನು ಮರೆಮಾಜದೆ ಹೇಳುವವರು, ಸತ್ಯವಾದಿಗಳು ಪಡೆಯುವ ದಿವ್ಯಗತಿಯನ್ನು ಪಡೆಯುವರು.

ಅವಶ್ಯಮೇವ ತದ್ವಾಕ್ಯಂ ವಕ್ತವ್ಯಂ ಮಮ ಸನ್ನಿಧೌ ।
ಯಸ್ಯ ದೋಷೇಣ ತೇ ಪುತ್ರ ನಷ್ಟಾ ಪ್ರೀತಿರ್ಗುಣಾಕರಾ ॥ ೧೭೦ ॥

ತತಃ ಪಿತುರ್ವಚಃ ಶ್ರುತ್ವಾ ಕೌಸಲಾನಂದವರ್ಧನಃ ।
ಉವಾಚ ಶ್ಲಕ್ಷ್ಣಯಾ ವಾಚಾ ತತ್ರೈವ ಜನಸಂಸದಿ ॥ ೧೭೧ ॥

ಗಚ್ಛತ್ವೇಷ ಜನಸ್ಸರ್ವೋ ಯಥಾನ್ಯಾಯಂ ಗೃಹಾಣಿ ವೈ ।
ಪ್ರಾತಸ್ತ್ವಾಂ ಕಥಯಿಷ್ಯಾಮಿ ಯದ್ವಕ್ತವ್ಯಮವಶ್ಯಕಂ ॥ ೧೭೨ ॥

ಪ್ರಭಾತಾಯಾಂ ತು ಶರ್ವರ್ಯಾಂ ದುಂದುಭೀನಾಂ ನಿನಾದನೈಃ ।
ನಿಬುದ್ಧಃ ಕೋಸಲಶ್ರೇಷ್ಠಃ ಸೂತಮಾಗಧವಂದಿಭಿಃ ॥ ೧೭೩ ॥

ತದಾ ಕಮಲಪತ್ರಾಕ್ಷೋ ರಾಜಪುತ್ರೋ ಮಹಾಯಶಾಃ ।
ಸ್ನಾತ್ವಾ ಚ ಮಂಗಲ್ಯೈರ್ಯುಕ್ತೋ ರಾಜದ್ವಾರಮುಪಾಗತಃ ॥ ೧೭೪ ॥

---

೧೭೦. ಆದುದರಿಂದ, ಪುತ್ರನೇ, ಯಾವ ದೋಷದಿಂದ ನಿನಗೆ ಇವಳಲ್ಲಿ ಗುಣಕ್ಕೆ ಗಣಿಯಾದ ಪ್ರೀತಿಯು ತಪ್ಪಿಹೋಯಿತೆಂಬುದನ್ನು ನನ್ನ ಸನ್ನಿಧಿಯಲ್ಲಿ ಅವಶ್ಯವಾಗಿ ಹೇಳಲೇಬೇಕು”

೧೭೧–೧೭೨. ತಂದೆಯ ಮಾತನ್ನು ಕೇಳಿ, ಕೋಸಲದೇಶದವರ ಆನಂದವನ್ನು ಹೆಚ್ಚಿಸುವ ಆ ಕುಮಾರನು ಬಳಿಕ ಆ ಜನಗಳ ಸಭೆಯಲ್ಲೇ ಮೃದುವಾದ ಮಾತಿನಿಂದ, “ಈ ಜನವೆಲ್ಲ ಸರಿಯಾಗಿ ಮನೆಗಳಿಗೆ ಹೋಗಲಿ. ನಿನಗೆ ಹೇಳಬೇಕಾದುದನ್ನು ಬೆಳಗ್ಗೆ ಹೇಳುವೆನು” ಎಂದನು.

೧೭೩. ರಾತ್ರಿಯು ಕಳೆದು ಬೆಳಗಾಗಲು ಆ ಕೋಸಲಾಧಿಪನು ನಗಾರಿಗಳ ಮತ್ತು ಸೂತಮಾಗಧರ ಧ್ವನಿಗಳಿಂದ ಎಚ್ಚರಗೊಂಡಿದ್ದನು.

೧೭೪. ಆಗ ತಾವರೆಹೂವಿನೆಸಳಿನಂತೆ ಕಣ್ಣುಳ್ಳವನೂ, ಮಹಾ ಯಶಸ್ವಿಯೂ, ಆದ ಆ ರಾಜಕುಮಾರನೂ(ಎದ್ದು)ಸ್ನಾನಮಾಡಿ, ಮಂಗಳಾ ಲಂಕಾರಗಳಿಂದ ಕೂಡಿ ತಂದೆಯ ಮನೆಯ ಬಾಗಿಲಿಗೆ ಬಂದನು.

ತತಸ್ತು ಕಂಚುಕೀ ಗತ್ವಾ ರಾಜ್ಞೀ ಚೈವ ನ್ಯವೇದಯತ್ ।
ದ್ವಾರಿ ತಿಷ್ಠತಿ ಪುತ್ರಸ್ತೇ ತವ ದರ್ಶನಲಾಲಸಃ ॥ ೧೭೫ ॥

ಸ* ಕಂಚುಕಿವಚಃ ಶ್ರುತ್ವಾ ಕೋಸಲಾನಾಂ ಜನೇಶ್ವರಃ ।
ಶೀಘ್ರಂ ಪ್ರವೇಶಯ ಸುತಂ ಕಂಚುಕಿನ್ಸಾ+ಧುವಾಹಿನಂ ॥ ೧೭೬ ॥

ಇತ್ಯುಕ್ತೋ ರಾಜಪುತ್ರಂ ತು ಪ್ರಾವೇಶಯದನುಜ್ಞಯಾ ॥ ೧೭೭ ॥

ರಾಜಪುತ್ರಃ ಪಿತುರ್ವೇಶ್ಮ ಪ್ರವಿಶ್ಯ ನಿಯತಃ ಶುಚಿಃ ।
ವವಂದೇ ಚರಣೌ ಮೂರ್ಧ್ನಾ ನಿಷೀದೇತಿ ಸುತಂ ತತಃ ।
ತಮಬ್ರವೀತ್ಪಿತಾ ಜೀವ ಜಯೇತ್ಯುಕ್ತ್ವಾ ಮುದಾನ್ವಿತಃ ॥ ೧೭೮ ॥

---

೧೭೫. ಬಳಿಕ ಕಂಚುಕಿಯು ಒಳಗೆಹೋಗಿ ದೊರೆಗೆ, "ತಮ್ಮ ದರ್ಶನದಲ್ಲಿ ಕುತೂಹಲವುಳ್ಳವನಾಗಿ ರಾಜಕುಮಾರನು ಬಾಗಿಲಲ್ಲಿ ನಿಂತಿದ್ದಾನೆ" ಎಂದು ಅರಿಕೆಮಾಡಿದನು.

೧೭೬. ಕೋಸಲೇಶ್ವರನು ಕಂಚುಕಿಯ ಮಾತನ್ನು ಕೇಳಿ, "ಕಂಚುಕೀ, ಸಾಧುರಕ್ಷಕನಾದ ಕುಮಾರನನ್ನು ಬೇಗನೆ ಒಳಕ್ಕೆ ಬರಮಾಡು" ಎಂದು ಅಪ್ಪಣೆ ಮಾಡಿದನು.

೧೭೭–೧೭೮. ಕುಂಚುಕಿಯು ಅದರಂತೆ ಅರಮಗನನ್ನು ಒಳಗೆ ಕಳುಹಿಸಿದನು. ನಿಯಮವುಳ್ಳವನೂ, ಪರಿಶುದ್ಧನೂ ಆದ ದೊರೆಮಗನು ತಂದೆಯ ಮನೆಯೊಳಗೆ ಹೋಗಿ, ತಂದೆಯ ಕಾಲುಗಳಿಗೆ ತಲೆಬಾಗಿ ವಂದಿಸಿದನು. ಬಳಿಕ ತಂದೆಯು ಸಂತೋಷದಿಂದ ಮಗನನ್ನು "ಜಯಿಸು ಬಹುಕಾಲ ಜೀವಿಸು" ಎಂದು ಹೇಳಿ ಹರಸಿ, ಬಳಿಕ "ಕುಳಿತುಕೋ" ಎಂದನು.

---

* ಕಂಚುಕೇಸ್ತು ವಚಃ

\+ ಕಂಚುಕೇ

ಪಿತೃಪುತ್ರೌ ತು ವಿಜ್ಞೇಯೌ ಜನೈಸ್ತ್ವೇಕತ್ರ ಸಂಸ್ಥಿತೌ |
ಹರ್ಷಿತಸ್ತ್ವಂತರೋ ಬಾಹ್ಯಃ ಕೃತಕೌತುಕಮಂಗಲಃ ॥ ೧೭೯ ॥

ತತಃ ಪುತ್ರಂ ಪ್ರಹಸ್ಯಾಹ ಕುಮಾರಂ ಸ ಜನಾಧಿಪಃ ॥ ೧೮೦ ॥

ವದ ಪುತ್ರ ಮಹಾಭಾಗ ಪೂರ್ವಂ ಪೃಷ್ಟಂ ಮಯಾ ಹಿ ಯತ್ |
ಯುವಯೋಃ ಪ್ರೀತಿವಿಚ್ಛೇದೇ ಕಾರಣಂ ಗೋಪಿತಂ ಹಿ ಯತ್ ॥ ೧೮೧ ॥

ತತೋ ರಾಜಕುಮಾರಸ್ತಂ ಪಿತರಂ ಪ್ರತ್ಯಭಾಷತ |
ಅವಶ್ಯಮೇವ ವಕ್ತವ್ಯಂ ತ್ವಯಾ ಪೃಷ್ಟೇನ ನಿಷ್ಫಲಂ
ತದ್ಗುಹ್ಯಂ ಹಿ ಮಹಾರಾಜ ಪ್ರೀತಿವಿಚ್ಛೇದ ಕಾರಣಂ ॥ ೧೮೨ ॥

ಯದೀಚ್ಛಸಿ ಮಹಾರಾಜ ಶ್ರೋತುಂ ಗುಹ್ಯಮಿದಂ ಮಹತ್ |
ಆಗಚ್ಛ ತಾತ ಕುಬ್ಜಾಮ್ರೇ ಮಯಾ ಸಹ ಮಹೀಪತೇ ॥ ೧೮೩ ॥

---

೧೭೯. ತಂದೆಮಕ್ಕಳಿಬ್ಬರೂ ಒಂದೆಡೆಯಲ್ಲಿ ಸೇರಿರುವುದನ್ನು ತಿಳಿದು, ಒಳಹೊರಗಿನ ಜನವೆಲ್ಲವೂ ಕುತೂಹಲದಿಂದ ಮಂಗಳವನ್ನು ಮಾಡಿ ಸಂತೋಷಿಸಿತು.

೧೮೦–೧೮೧. ಬಳಿಕ ದೊರೆಯು ರಾಜಕುಮಾರನನ್ನು ನೋಡಿ, ನಕ್ಕು, “ಮಗೂ, ಮಹಾಭಾಗ್ಯನೇ, ನಾನು ಹಿಂದೆ ಕೇಳಿದ, ದಂಪತಿಗಳಾದ ನಿಮ್ಮಿಬ್ಬರ ಪ್ರೀತಿಭಂಗಕ್ಕೆ ಕಾರಣವಾದ ರಹಸ್ಯವನ್ನು ಹೇಳು” ಎಂದನು.

೧೮೨-೧೮೩. ಬಳಿಕ ರಾಜಪುತ್ರನು ಆ ತಂದೆಗೆ, “ಮಹಾರಾಜ, ನೀನು ಕೇಳಿದ, ಪ್ರೀತಿಭಂಗದ ಕಾರಣವನ್ನು ಅವಶ್ಯವಾಗಿ ನಾನು ಹೇಳಲೇಬೇಕು. ನಿನ್ನಲ್ಲಿ ಗುಟ್ಟುಮಾಡುವುದು ವ್ಯರ್ಥ, ಭೂಪತಿಯೇ, ಅಪ್ಪಾ, ಆದರೆ ಈ ದೊಡ್ಡ ಗುಟ್ಟನ್ನು ಕೇಳಲು ನೀನು ಇಷ್ಟಪಡುವುದಾದರೆ, ನನ್ನ ಸಂಗಡ ಕುಬ್ಜಾಮ್ರಕ ಕ್ಷೇತ್ರಕ್ಕೆ ಬಾ.

ತತ್ರ ತೇ ಕಥಯಿಷ್ಯಾಮಿ ಕೋಸಲಾಧಿಪತೇ ತ್ವರನ್ ।
ಯತ್ತ್ವಯಾ ಪೃಚ್ಛಿತಂ ಹ್ಯೇತದ್ಗುಹ್ಯಂ ಪೂರ್ವಮನಿಂದಿತಂ ॥ ೧೮೪ ॥

ತತಸ್ತಸ್ಯ ವಚಃ ಶ್ರುತ್ವಾ ರಾಜಪುತ್ರಸ್ಯ ವೈ ನೃಪಃ ।
ಬಾಢಮಿತ್ಯೇವ ತತ್ರಾಹ ಪುತ್ರಪ್ರೇಮ್ಣಾ ಸಮನ್ವಿತಃ ॥ ೧೮೫ ॥

ರಾಜಪುತ್ರೇ ಗತೇ ಸುಭ್ರು ಅಮಾತ್ಯಾನಾಂ ಚ ಸನ್ನಿಧೌ ।
ಉವಾಚ ಮಧುರಂ ವಾಕ್ಯಂ ಯೇ ವೈ ತತ್ರ ಸಮಾಗತಾಃ ॥ ೧೮೬ ॥

ಅಮಾತ್ಯಾಃ ಶೃಣುತೇಮಂ ಮೇ ವಚನಂ ಕೃತನಿಶ್ಚಯಂ ।
ಕುಬ್ಜಾಮ್ರಕಂ ಪ್ರತಿ ವಯಂ ಗಚ್ಛಾಮಸ್ತಸ್ಯ ಸಾಧನಂ ॥ ೧೮೭ ॥

ಶೀಘ್ರಂ ಸಂಪಾದ್ಯತಾಂ ಚೈವ ಯುಜ್ಯಂತಾಂ ಗಜವಾಜಿನಃ ॥ ೧೮೮ ॥

ರಾಜ್ಞೋ ವಚಸ್ತೇ ಸಂಶ್ರುತ್ಯ ತಮೂಚುಃ ಕೃತಮೇವ ತತ್ ।
ಇತ್ಯುಕ್ತ್ವಾ ಸಪ್ತರಾತ್ರೇಣ ಸರ್ವಂ ಸಂಪಾದ್ಯ ಸಾಧನಂ ॥ ೧೮೯ ॥

---

೧೮೪. ಕೋಸಲೇಶ್ವರ, ನೀನು ಕೇಳಿದ, ದೋಷವಿಲ್ಲದ ಹಿಂದಿನ ಈ ಗುಟ್ಟನ್ನು ಅಲ್ಲಿ ಬೇಗನೆ ಹೇಳುವೆನು, ಎಂದನು.

೧೮೫. ಆ ರಾಜಪುತ್ರನ ಮಾತನ್ನು ಕೇಳಿ ರಾಜನು ಪುತ್ರವಾತ್ಸಲ್ಯದಿಂದ ಕೂಡಿದವನಾಗಿ, ಅವಶ್ಯವಾಗಿಯೂ ಹಾಗೆಯೇ ಆಗಲಿ'' ಎಂದೇ ಹೇಳಿದನು.

೧೮೬-೧೮೮. ಸುಂದರವಾದ ಹುಬ್ಬುಳ್ಳವಳೇ, ಬಳಿಕ ದೊರೆಮಗನು ಅಲ್ಲಿಂದ ಹೊರಟು ಹೋಗಲು, ದೊರೆಯು, ಅಲ್ಲಿಗೆ ಬಂದ ಮಂತ್ರಿಗಳೊಡನೆ, "ಮಂತ್ರಿಗಳೇ, ನಿರ್ಣಯಮಾಡಿರುವ ಈ ನನ್ನ ಮಾತನ್ನು ಕೇಳಿರಿ. ಕುಬ್ಜಾಮ್ರಕ ಕ್ಷೇತ್ರಕ್ಕೆ ನಾವು ಹೋಗಬೇಕಾಗಿದೆ. ಅದಕ್ಕೆ ಬೇಕಾದ ಸಾಧನಗಳನ್ನು ಬೇಗನೆ, ಸಿದ್ಧಪಡಿಸಿರಿ. ಆನೆ ಕುದುರೆಗಳೂ ಸಿದ್ಧವಾಗಲಿ'' ಎಂದು ಹಿತವಾದ ಮಾತಿನಿಂದ ಹೇಳಿದನು.

೧೮೯-೧೯೦. ಆ ಮಂತ್ರಿಗಳು ದೊರೆಯ ಮಾತನ್ನು ಕೇಳಿ, ಅದೆಲ್ಲವೂ ಸಿದ್ಧವಾಗಿದೆಯೆಂದೇ ಆತನಿಗೆ ಬಿನ್ನಯಿಸಿ, ಏಳುರಾತ್ರಿಗಳಲ್ಲಿ ಆನೆ ಕುದುರೆ ಪಶುವಾಹನಾದಿಗಳು, ಕಾರ್ಷಾಪಣವೆಂಬ ಬೆಳ್ಳಿಯ ನಾಣ್ಯಗಳು, ಹಸುಗಳಗುಂಪು

ಗಜಾಂಶ್ಚ ಪಶುಯಾನಾದಿ ಕಾರ್ಷಾಪಣಕಧೇನುಕಂ ।
ಸುವರ್ಣರತ್ನವಸ್ತ್ರಾಣಿ ಅನ್ನಂ ಚಾನ್ಯದಪೇಕ್ಷಿತಂ
ರಾಜಾನಂ ತೇ ಸಮಾಗತ್ಯ ಸಿದ್ಧಮಿತ್ಯೂಚುರೀಶ್ವರಂ || ೧೯೦ ||

ತತಸ್ಸ ರಾಜಶಾರ್ದೂಲಃ ಪುತ್ರಮಾಹ ವಸುಂಧರೇ ।
ರಾಜ್ಯಂ ಶೂನ್ಯಂ ಕಥಂ ತ್ಯಕ್ತ್ವಾ ಗಮಿಷ್ಯಾಮೋ ವಯಂ ಸುತ || ೧೯೧ ||

ತತಃ ಪಿತುರ್ವಚಃ ಶ್ರುತ್ವಾ ರಾಜಪುತ್ರೋ ಮಹಾಯಶಾಃ ।
ಉವಾಚ ಮಧುರಂ ವಾಕ್ಯಂ ಗೃಹೀತ್ವಾ ಚರಣೌ ಪಿತುಃ || ೧೯೨ ||

ಕನೀಯಾನೇಷ ಮೇ ಭ್ರಾತಾ ಏಕೋದರ ಸಮುದ್ಭವಃ ।
ಏತಸ್ಯ ದೀಯತಾಂ ರಾಜ್ಯಂ ಯಥಾನ್ಯಾಯೇನ ಚಾಗತಂ || ೧೯೩ ||

ಪುತ್ರಸ್ಯ ವಚನಂ ಶ್ರುತ್ವಾ ಕೋಸಲಾನಾಂ ಕುಲೋದ್ವಹಃ ।
ವರ್ತಮಾನೇಪಿ ಚ ಜ್ಯೇಷ್ಠೇ ಕನೀಯಾನ್ಕಥಮರ್ಹತಿ || ೧೯೪ ||

ಸುವರ್ಣ, ರತ್ನವಸ್ತ್ರಗಳು, ಆಹಾರಪದಾರ್ಥಗಳು, ಬೇಕಾದ ಇತರ ಪದಾರ್ಥಗಳು ಮೊದಲಾದ ಎಲ್ಲಾ ಸಾಧನವನ್ನೂ ಸಿದ್ಧಪಡಿಸಿ, ದೊರೆಯ ಸಮೀಪಕ್ಕೆ ಬಂದು, ಎಲ್ಲವೂ ಸಿದ್ಧವಾಯಿತೆಂದು ವಿಜ್ಞಾಪಿಸಿದರು.

೧೯೧. ವಸುಂಧರೇ, ಬಳಿಕ ರಾಜೋತ್ತಮನು ಮಗನನ್ನು ಕುರಿತು, "ಮಗೂ, ಆಳುವವರಿಲ್ಲದೆ ರಾಜ್ಯವನ್ನು ಬಿಟ್ಟು ನಾವು ಹೇಗೆ ಹೋಗೋಣ ?" ಎಂದು ಕೇಳಿದನು.

೧೯೨–೧೯೩. ತಂದೆಯ ಮಾತನ್ನು ಕೇಳಿ, ಮಹಾಯಶನಾದ ರಾಜಪುತ್ರನು, ತಂದೆಯ ಕಾಲುಗಳನ್ನು ಹಿಡಿದುಕೊಂಡು, ಇಂಪಾದ ಮಾತಿನಿಂದ "ನನಗೆ ಸಹೋದರನಾದ ಈ ತಮ್ಮನಿಗೆ ನ್ಯಾಯಗತವಾಗಿ ಬಂದಿರುವ ರಾಜ್ಯವನ್ನು ಕೊಡೋಣವಾಗಲಿ" ಎಂದನು.

೧೯೪. ಕೋಸಲೇಶ್ವರನು ಮಗನ ಮಾತನ್ನು ಕೇಳಿ, "ಹಿರಿಯ ಮಗನಿರುವಾಗ ಕಿರಿಯವನು ಹೇಗೆ ರಾಜ್ಯಕ್ಕೆ ಅರ್ಹನಾದಾನು !" ಎಂದನು.

ತತಃ ಪಿತುರ್ವಚಃ ಶ್ರುತ್ವಾ ಕೋಸಲಾರ್ಯಾಃ ಕುಲೋದ್ಭವಃ ।
ಉವಾಚ ಮಧುರಂ ವಾಕ್ಯಂ ಪಿತರಂ ಧರ್ಮಕಾರಣಾತ್ ॥ ೧೯೫ ॥

ಅನುಜಾನಾಮಿ ತೇ ತಾತ ದೀಯಮಾನಾಂ ವಸುಂಧರಾಂ ।
ನಾಸ್ಯ ಧರ್ಮವಿಲೋಪಸ್ಸ್ಯಾತ್ ಭುಂಜಮಾನಸ್ಯ ಮೇದಿನೀಂ ॥ ೧೯೬ ॥

ನಾಹಂ ಕುಬ್ಜಾಮ್ರಕಂ ಗತ್ವಾ ನಿವರ್ತಿಷ್ಯೇ ಕದಾಚನ ।
ಏತತ್ಸತ್ಯಂ ಚ ಧರ್ಮಶ್ಚ ತಾತ ತೇ ಕಥಿತಂ ಮಯಾ ॥ ೧೯೭ ॥

ಪುತ್ರೇಣ ಚಾಭ್ಯನುಜ್ಞಾತಃ ಕನೀಯಾನಭಿಷೇಚಿತಃ ।
ಸ ಮುಖ್ಯೇನಾಭ್ಯನುಜ್ಞಾತೋ ಭೂಮೇ ಭೂಪತಿಸತ್ತಮಃ ॥ ೧೯೮ ॥

ತತೋ ದೀರ್ಘೇಣ ಕಾಲೇನ ಸ್ಥಾನಂ ಕುಬ್ಜಾಮ್ರಕಂ ಗತಃ ।
ಅಂತಃಪುರೇಣ ಸಹಿತಃ ಸರ್ವದ್ರವ್ಯಸಮನ್ವಿತಃ ॥ ೧೯೯ ॥

೧೯೫-೧೯೭. ಕೋಸಲರಾಜವಂಶೀಯನಾದ ಆ ಕುಮಾರನು, ತಂದೆಯ ಆ ಮಾತನ್ನು ಕೇಳಿ, ಆತನಿಗೆ, "ಅಪ್ಪಾ, ಧರ್ಮದ ಕಾರಣದಿಂದ ನನ್ನ ತಮ್ಮನಿಗೆ (ನನಗೆ ಬರಬೇಕಾದ)ರಾಜ್ಯವನ್ನು ನೀನು ಕೊಡಲು ನಾನು ಸಮ್ಮತಿಸುತ್ತೇನೆ. ನಾನು ಸಮ್ಮತಿಸಿ ಕೊಡುವ ರಾಜ್ಯವನ್ನು ಅನುಭವಿಸುವ ಇವನಿಗೆ ಧರ್ಮಲೋಪವೇನೂ ಆಗುವುದಿಲ್ಲ. ತಂದೆಯೇ, ನಾನು ಕುಬ್ಜಾಮ್ರಕಕ್ಷೇತ್ರಕ್ಕೆ ಹೋಗಿ ಎಂದಿಗೂ ಅಲ್ಲಿಂದ ಹಿಂದಿರುಗಲಾರೆನು. ಈ ಸತ್ಯವನ್ನೂ, ಧರ್ಮವನ್ನೂ ನಿನಗೆ ವಿಜ್ಞಾಪಿಸಿದ್ದೇನೆ." ಎಂದು ಇಂಪಾಗಿ ಮಾತನಾಡಿದನು.

೧೯೮. ಭೂಮಿ, ಆ ಭೂಪೋತ್ತಮನು, ಮುಖ್ಯನಾದ ಆ ಹಿರಿಯಮಗನ ಸಮ್ಮತಿಯನ್ನು ಪಡೆದು ಕಿರಿಯಮಗನಿಗೇ ರಾಜ್ಯಾಭಿಷೇಕಮಾಡಿದನು.

೧೯೯. ಬಳಿಕ ಅಂತಃಪುರದೊಡನೆ ಸರ್ವದ್ರವ್ಯಸಹಿತನಾಗಿ ಹೊರಟ ದೊರೆಯು ದೀರ್ಘಕಾಲದಲ್ಲಿ ಕುಬ್ಜಾಮ್ರಕವನ್ನು ಸೇರಿದನು.

ತತಸ್ತೀರ್ಥವಿಧಿಂ ಕೃತ್ವಾ ದತ್ವ ದಾನಾನಿ ಭೂರಿಶಃ |
ಅನ್ನವಸ್ತ್ರಸುವರ್ಣಾನಿ ಗೋಹಸ್ತ್ಯಶ್ವಭುವಸ್ತಥಾ || ೨೦೦ ||

ತತೋ ಬಹುತಿಥೇ ಕಾಲೇ ವ್ಯತೀತೇ ಸತಿ ಧೀಮತಾಂ |
ತತಃ ಕದಾಚಿದ್ಭೂಪಾಲೋ ರಾಜಪುತ್ರಮುಪಸ್ಥಿತಂ
ದಂಪತ್ಯೋಃ ಪ್ರೀತಿವಿಚ್ಛೇದಂ ಗುಹ್ಯಂ ತತ್ಸಮಪೃಚ್ಛತ || ೨೦೧ ||

ಸ್ಥಾನಂ ಪಾವನಕಂ ವತ್ಸ ವಿಷ್ಣೋಃ ಪಾದಸಮಾಶ್ರಯಂ |
ದತ್ತಾನಿ ಧನರತ್ನಾನಿ ಜಾತಸ್ತಸ್ಯ ವಿಧಿಃ ಪರಃ || ೨೦೨ ||

ಇದಾನೀಂ ಬ್ರೂಹಿ ಸತ್ಯಂ ತತ್ ಯತ್ಕೃತೇ ಸುಂದರೀ ಸ್ನುಷಾ |
ಅದುಷ್ಟಕಾರಿಣೀ ಯುಕ್ತಾ ಕುಲಶೀಲಗುಣಾನ್ವಿತಾ || ೨೦೩ ||

ತ್ವಯಾ ಮಿಥ್ಯೈವ ಕಿಂ ತ್ಯಕ್ತ್ವಾ ತದ್ಗುಹ್ಯಂ ವದ ಪುತ್ರಕ || ೨೦೪ ||

---

೨೦೦. ಅಲ್ಲಿ, ತೀರ್ಥಕ್ಷೇತ್ರದಲ್ಲಿ ಮಾಡಬೇಕಾದ ವಿಧಿಗಳನ್ನು ಮಾಡಿ, ಅನ್ನವಸ್ತ್ರ ಸುವರ್ಣಗಳನ್ನೂ, ಆನೆ ಕುದುರೆ ಭೂಮಿಗಳನ್ನೂ ಬೇಕಾದಹಾಗೆ ದಾನಮಾಡಿದನು.

೨೦೧. ಬುದ್ಧಿವಂತರಾದ ಆ ರಾಜ ರಾಜಕುಮಾರರಿಗೆ ಹೀಗೆ ಬಹುದಿನಗಳು ಕಳೆಯಲಾಗಿ, ಬಳಿಕ ಒಂದುದಿನ ದೊರೆಯು ತನ್ನ ಸಮೀಪಕ್ಕೆ ಬಂದ ಮಗನನ್ನು, ದಂಪತಿಗಳ ಪ್ರೀತಿವಿಚ್ಛೇದದ ಆ ಗುಟ್ಟನ್ನು(ಹೇಳೆಂದು)ಕೇಳಿದನು.

೨೦೨. "ಮಗೂ, ವಿಷ್ಣುವಿನ ಪಾದಸನ್ನಿಧಿಯಾದ ಈ ಯೆಡೆಯು ಪವಿತ್ರವಾದುದು. ಇಲ್ಲಿ ಧನರತ್ನಗಳನ್ನು ದಾನಮಾಡಿದುದಾಯಿತು. ಮಾಡಬೇಕಾದ ಉತ್ತಮವಿಧಿಗಳನ್ನೆಲ್ಲಾ ಮಾಡಿ ಆಯಿತು.

೨೦೩–೨೦೪. ಉತ್ತಮಕಾರ್ಯಗಳನ್ನು ಮಾಡುವವಳೂ, ತಿಳಿವಳಿಕೆಯುಳ್ಳವಳೂ, ಕುಲಶೀಲ ಗುಣಯುತೆಯೂ, ಸುಂದರಿಯೂ ಆದ (ನನ್ನ) ಸೊಸೆಯನ್ನು ನೀನು ಏತಕ್ಕೆ ಬಿಟ್ಟೆ ? ಸುಮ್ಮನೆಯೇ ಬಿಟ್ಟೆಯಾ ? ಆ ಗುಟ್ಟನ್ನು ಹೇಳು"

ತತಸ್ಸ ಪಿತರಂ ಪ್ರಾಹ ರಾತ್ರಿರ್ಗಚ್ಛತು ಸುಪ್ಯತಾಂ ।
ಶ್ವಃ ಪ್ರಭಾತೇ ತತಸ್ಸರ್ವಂ ಕಥಯಿಷ್ಯಾಮಿ ತತ್ಪುನಃ ॥ ೨೦೫ ॥

ತತೋ ರಾತ್ರ್ಯಾಂ ವ್ಯತೀತಾಯಾಂ ಉದಿತೇ ಚ ದಿವಾಕರೇ ।
ಕೃತೋದಕಸ್ತು ಗಂಗಾಯಾಂ ಕ್ಷೌಮವಸ್ತ್ರವಿಭೂಷಿತಃ ॥ ೨೦೬ ॥

ಅರ್ಚಯಿತ್ವಾ ಯಥಾನ್ಯಾಯಂ ಮಾಂ ಚೈವ ಗುರುವತ್ಸಲಃ ।
ಪಿತುಃ ಪ್ರದಕ್ಷಿಣಂ ಕೃತ್ವಾ ವಾಕ್ಯಮೇತದುದಾಹರತ್ ॥ ೨೦೭ ॥

ಏಹ್ಯೇಹಿ ತಾತ ಗಚ್ಛಾಮಃ ಯತ್ತ್ವಂ ಗುಹ್ಯಾನಿ ಪೃಚ್ಛಸಿ ।
ಶೃಣು ತತ್ತ್ವೇನ ಮೇ ರಾಜನ್ ಯತ್ತ್ವಯಾ ಪೂರ್ವಪೃಚ್ಛಿತಂ ॥ ೨೦೮ ॥

ರಾಜಪುತ್ರಶ್ಚ ವೈ ರಾಜಾ ಸಾ ಚ ಪಂಕಜಲೋಚನಾ ।
ಗತ್ವಾ ನಿರ್ಮಾಲ್ಯಕೂಟಂ ತೇ ಯತ್ತದ್ವೃತ್ತಂ ಪುರಾತನಂ ॥ ೨೦೯ ॥

---

೨೦೫. ಬಳಿಕ ಅರಸುಮಗನು ತಂದೆಗೆ, ''ಮಲಗಿ ನಿದ್ದೆಮಾಡು. ರಾತ್ರಿಯು ಕಳೆಯಲಿ. ನಾಳೆಬೆಳಗ್ಗೆ ಅದೆಲ್ಲವನ್ನೂ ಹೇಳುವೆನು" ಎಂದನು

೨೦೬-೨೦೭. ಬಳಿಕ ರಾತ್ರಿಯು ಕಳೆದು(ಬೆಳಗಾಗಲಾಗಿ)ಸೂರ್ಯೋದಯವಾಗಲಾಗಿ, ಗುರುಭಕ್ತನಾದ ಆ ರಾಜಕುಮಾರನು ಗಂಗೆಯಲ್ಲಿ ಸ್ನಾನಮಾಡಿ, ಪಟ್ಟೆಯ ಮಡಿಯಿಂದಲಂಕೃತನಾಗಿ, ವಿಧಿಪೂರ್ವಕವಾಗಿ ನನ್ನನ್ನು ಪೂಜಿಸಿ, ತಂದೆಗೆ ಪ್ರದಕ್ಷಿಣಮಾಡಿ, ಮುಂದಿನ ಮಾತನ್ನು ಹೇಳಿದನು.

೨೦೮. "ಅಪ್ಪಾ, ನನ್ನ ದೊರೆಯೇ, ನೀನು ಹಿಂದೆಯೇ ಕೇಳಿ, ಈಗಲೂ ಕೇಳುತ್ತಿರುವ ರಹಸ್ಯವನ್ನು ನಿಜವಾಗಿ ತಿಳಿಯುವೆ ಬಾ ಹೋಗೋಣ ಎಂದನು.

೨೦೯. ಆ ರಾಜಪುತ್ರನೂ, ರಾಜನೂ, ಆ ಕಮಲನೇತ್ರೆಯಾದ ರಾಜಪುತ್ರಿಯೂ ಹಿಂದಿನ ವೃತ್ತಾಂತವು ನಡೆದಿದ್ದ ನಿರ್ಮಾಲ್ಯದ ರಾಶಿಯಿದೆಡ್ಡೆಗೆ ಹೋದರು.

ನಿರ್ಮಾಲ್ಯಂ ತು ಸಮಾಸಾದ್ಯ ರಾಜಪುತ್ರೋ ಮಹಾತಪಾಃ ।
ಉಭೌ ತೌ ಚರಣೌ ಗೃಹ್ಯ ಪಿತರಂ ಪ್ರತ್ಯಭಾಷತ ॥ ೨೧೦ ॥

ನಕುಲೋಽಹಂ ಮಹಾರಾಜ ವಸಾಮಿ ಕದಲೀತಲೇ ।
ತತೋಽಹಂ ಕಾಲಸಂಯುಕ್ತಃ ಪ್ರಾಪ್ತೋ ನಿರ್ಮಾಲ್ಯಕೂಟಕಂ ॥ ೨೧೧ ॥

ತತಸ್ತ್ವಾಶೀ ವಿಷಾ ಸರ್ಪೀ ಸರ್ಪತೇತ್ರ ಜನಾಧಿಪ ।
ಭಕ್ಷಯಂತೀ ಸುಗಂಧಾನಿ ಪುಷ್ಪಾಣಿ ವಿವಿಧಾನಿ ಚ ॥ ೨೧೨ ॥

ದೃಷ್ಟ್ವಾ ತು ತಾಂ ಮಹಾವ್ಯಾಲಿಂ ಕ್ರೋಧಸಂರಕ್ತಲೋಚನಃ ।
ಅಚಿರೇಣೈವ ಕಾಲೇನ ತಸ್ಯಾಂತಕಂ ಸಹಸಾ ಗತಃ ॥ ೨೧೩ ॥

ತಯಾ ಸಹ ಮಹಾರಾಜ ಘೋರಂ ಯುದ್ಧಮವರ್ತತ ।
ಮಾಘಮಾಸಸ್ಯ ದ್ವಾದಶ್ಯಾಂ ತತ್ರ ಕಶ್ಚಿನ್ನ ಪಶ್ಯತಿ ॥ ೨೧೪ ॥

---

೨೧೦. ಮಹಾತಪಸ್ವಿಯಾದ ರಾಜಪುತ್ರನು ನಿರ್ಮಾಲ್ಯದ ಹತ್ತಿರ ಹೋಗಿ, ತಂದೆಯ ಎರಡು ಕಾಲುಗಳನ್ನೂ ಹಿಡಿದುಕೊಂಡು ಹೇಳಿದನು.

೨೧೧. "ಮಹಾರಾಜ, ನಾನು ಹಿಂದೆ ಮುಂಗಸಿಯಾಗಿ ಬಾಳೆಯಮರದ ಬುಡದಲ್ಲಿ ವಾಸಮಾಡುತ್ತಿದ್ದೆನು. ಬಳಿಕ ಕಾಲವೊದಗಿದವನಾಗಿ ಈ ನಿರ್ಮಾಲ್ಯದ ರಾಶಿಯೆಡೆಗೆ ಬಂದೆನು.

೨೧೨. ದೊರೆಯೇ, ಇಲ್ಲಿ ವಿಷಧರೆಯಾದ ಹಾವು ಬಗೆ ಬಗೆಯಾದ ಸುಗಂಧಗಳನ್ನೂ ಹೂವುಗಳನ್ನೂ ತಿನ್ನುತ್ತ ಸಂಚರಿಸುತ್ತಿದ್ದಿತು.

೨೧೩. ಆ ದೊಡ್ಡ ಹೆಣ್ಣುಹಾವನ್ನು ನೋಡಿ ಮುಂಗಸಿಯಾದ ನಾನು ಸಿಟ್ಟಿನಿಂದ ಕೆಂಪೇರಿದ ಕಣ್ಣುಳ್ಳವನಾಗಿ ಸ್ವಲ್ಪಕಾಲದಲ್ಲಿಯೇ ತಟ್ಟನೆ ಆ ಹಾವಿನ ಹತ್ತಿರ ಹೋದೆನು.

೨೧೪–೨೧೫. ಮಹಾರಾಜ, ಆ ಹಾವಿನೊಡನೆ ಘೋರಯುದ್ಧವಾಯಿತು. ಅಲ್ಲಿ ಯಾರೂ ನೋಡಲಿಲ್ಲ. ಮಾಘಮಾಸದ ದ್ವಾದಶಿಯದಿನ ಯುದ್ಧಮಾಡುತ್ತ,

ಯುಧ್ಯಮಾನಸ್ಯ ಮೇ ತತ್ರ ಗಾತ್ರಂ ಚೈವ ನಿಗೂಹತಃ ।
ನಾಸಾವಂಶೇ ತಯಾ ದಷ್ಟೋ ಭುಜಂಗ್ಯಾ ಚ ತದಂತರೇ ॥ ೨೧೫ ॥

ಮಯಾಪಿ ವಿಷದಿಗ್ಧೇನ ನಿಹಿತಾಚ ಭುಜಂಗಮಾ ।
ಉಭೌ ಪ್ರಾಣಾನ್ಪರಿತ್ಯಜ್ಯ ಉಭೌ ಪಂಚತ್ವಮಾಗತೌ ॥ ೨೧೬ ॥

ಮೃತೌ ಸ್ವಕಾಲೇ ರಾಜೇಂದ್ರ ಕ್ರೋಧಮೋಹಪರಿಚ್ಯುತೌ ।
ಜಾತೋಽಹಂ ತವ ಪುತ್ರಸ್ತು ಕೋಸಲಾಧಿಪತೇಃ ಪ್ರಿಯಃ ॥ ೨೧೭ ॥

ಏವಂ ಮೇ ಘಾತಿತಸ್ಸರ್ಪಸ್ತತ್ಕ್ರೋಧವಿಷನಿಶ್ಚಯಾತ್ ।
ಏತದ್ಗುಹ್ಯಂ ಮಹಾರಾಜ ಯತ್ತ್ವಯಾ ಪೂರ್ವಪೃಚ್ಛಿತಂ ॥ ೨೧೮ ॥

ರಾಜಪುತ್ರವಚಃ ಶ್ರುತ್ವಾ ವಧೂರ್ವಚನಮಬ್ರವೀತ್ ॥ ೨೧೯ ॥

ಅಹಂ ಸರ್ಪೀ ಮಹಾರಾಜ ಪುರಾ ನಿರ್ಮಾಲ್ಯಕೂಟಿಕೇ ।
ಯುಧ್ಯಮಾನಾ ತು ತೇನೈವ ನಕುಲೇನ ನಿಪಾತಿತಾ
ಪ್ರಾಗ್ಜ್ಯೋತಿಷಕುಲೇ ಜಾತಾ ಜಾತಾ ತವ ವಧೂಸ್ತತಃ ॥ ೨೨೦ ॥

ಮಯ್ಯನ್ನು ಕಚ್ಚದಂತೆ ಮರಸಿಕೊಳ್ಳುತ್ತಿದ್ದ ನನ್ನ ಮೂಗಿನಮೇಲೆ ಆ ಭುಜಂಗಿಯು ಕಚ್ಚಿತು.

೨೧೬–೨೧೭. ಅಷ್ಟರಲ್ಲಿಯೇ ವಿಷದಿಂದ ನೆನೆದ ನಾನೂ ಆ ಹಾವನ್ನು ಕೊಂದೆನು. ಇಬ್ಬರೂ ಪ್ರಾಣಗಳನ್ನೂ ಬಿಟ್ಟೆವು. ರಾಜೇಂದ್ರನೇ, ಹೀಗೆ ಕ್ರೋಧಮೋಹಪರಿಚ್ಯುತರಾದ ನಾವು ನಮಗೆ ಕಾಲವೊದಗಿದಾಗ ಮೃತರಾದೆವು. ನಾನು ಕೋಸಲಾಧಿಪತಿಯಾದ ನಿನ್ನ ಪ್ರೀತಿಪುತ್ರನಾಗಿ ಜನಿಸಿದೆನು.

೨೧೮. ದೊರೆಯೇ, ಹಾವಿನ(ಮೇಲಿನ)ಆ ಕೋಪವಿಷಬಲದಿಂದ (ಉದ್ಯಾನವನದ)ಹಾವನ್ನು ನಾನು ಕೊಂದೆನು. ಇದೇ ನೀನು ನನ್ನನ್ನು ಹಿಂದೆ ಕೇಳಿದ ರಹಸ್ಯ"

೨೧೯–೨೨೦. ರಾಜಕುಮಾರನ ಮಾತನ್ನು ಕೇಳಿ ಸೊಸೆಯೂ, "ಮಹಾರಾಜನೇ, ಪೂರ್ವದಲ್ಲಿ ಈ ನಿರ್ಮಾಲ್ಯರಾಶಿಯಲ್ಲಿ ನಾನು ಹೆಣ್ಣು ಹಾವಾಗಿದ್ದೆನು. ಆ ಮುಂಗಸಿಯೊಡನೆ ಕಚ್ಚಾಡುತ್ತಿರುವಾಗ ಅದೇ ನನ್ನನ್ನು ಕೊಂದು, ಬೀಳಿಸಿತು. ಬಳಿಕ ಪ್ರಾಗ್ಜ್ಯೋತಿಷ ರಾಜಕುಲದಲ್ಲಿ ಜನಿಸಿ ನಿನ್ನ

ತೇನ ಕ್ರೋಧೇನ ನೃಪತೇ ಮೂರ್ಛಿತಾ ಮರಣಂ ಪ್ರತಿ ।
ಘಾತಿತೋ ನಕುಲಶ್ಚೈತದ್ಗುಹ್ಯಂ ಪ್ರೋಕ್ತಂ ತವ ಪ್ರಭೋ ॥ ೨೨೧ ॥

ವಧೂಪುತ್ರವಚಃ ಶ್ರುತ್ವಾ ಸ ರಾಜಾ ಶಂಸಿತವ್ರತಃ ।
ಮಾಯಾತೀರ್ಥಂ ಸಮಾಸಾದ್ಯ ತತಃ ಪಂಚತ್ವಮಾಗತಾಃ ॥ ೨೨೨ ॥

ರಾಜಪುತ್ರೋ ವಿಶಾಲಾಕ್ಷೀ ರಾಜಪುತ್ರೀ ಯಶಸ್ವಿನೀ ।
ಪಾಂಡರೀಕೇ ತತಸ್ತೀರ್ಥೇ ತೇಽಪಿ ಪಂಚತ್ವಮಾಗತಾಃ ॥ ೨೨೩ ॥

ಗತಾಸ್ತೇ ಪರಮಂ ಸ್ಥಾನಂ ಯತ್ರ ದೇವೋ ಜನಾರ್ದನಃ ।
ರಾಜಾ ವಾ ರಾಜಪುತ್ರಶ್ಚ ರಾಜಪುತ್ರೀ ಯಶಸ್ವಿನೀ ॥ ೨೨೪ ॥

ಮಮ ಚೈವ ಪ್ರಸಾದೇನ ತಪಸಶ್ಚ ಬಲೇನ ಚ ।
ಕೃತ್ವಾ ಸುದುಷ್ಕರಂ ಕರ್ಮಶ್ವೇತದ್ವೀಪಮುಪಾಗತಾಃ ॥ ೨೨೫ ॥

ಸೊಸೆಯಾದೆನು. ದೊರೆಯೇ, ಹಿಂದಿನ ಆ ಸಿಟ್ಟಿನಿಂದ ಮೈಮರೆತ ನಾನು ಉದ್ಯಾನವನದಲ್ಲಿ ಮುಂಗಸಿಯನ್ನು ಸಾಯುವಂತೆ ಹೊಡೆದೆನು. ಪ್ರಭುವೇ, ಈ ಗುಟ್ಟನ್ನು ನಿನಗೆ ಹೇಳಿದ್ದೇನೆ" ಎಂದಳು.

೨೨೨. ಶ್ಲಾಘ್ಯವ್ರತಿಯಾದ ಆ ದೊರೆಯು, ಸೊಸೆಯ ಮತ್ತು ಮಗನ ಮಾತನ್ನು ಕೇಳಿ, ಮಾಯಾತೀರ್ಥಕ್ಕೆ ಹೋಗಿ, ಬಳಿಕ ಅಲ್ಲಿ ಮೃತನಾದನು.

೨೨೩. ರಾಜಪುತ್ರನೂ, ವಿಶಾಲಾಕ್ಷಿಯೂ ಕೀರ್ತಿವಂತೆಯೂ ಆದ ಆ ರಾಜಪುತ್ರಿಯೂ, ಬಳಿಕ ಪಾಂಡರೀಕ ತೀರ್ಥದಲ್ಲಿ ಮೃತರಾದರು.

೨೨೪-೨೨೫. ರಾಜನೂ, ರಾಜಪುತ್ರನೂ, ಕೀರ್ತಿವಂತೆಯಾದ ರಾಜಪುತ್ರಿಯೂ, ಅತಿಕಷ್ಟವಾದ ಕರ್ಮಗಳನ್ನು ಮಾಡಿ, ತಪೋಬಲದಿಂದಲೂ, ನನ್ನ ಅನುಗ್ರಹದಿಂದಲೂ, ಜನಾರ್ದನನಾದ ನಾನಿರುವ ಪರಮಸ್ಥಾನವಾದ ಶ್ವೇತದ್ವೀಪ(ವೈಕುಂಠ)ವನ್ನು ಸೇರಿದರು.

ಯೋಽಸೌ ಪರಿಜನೋ ದೇವಿ ಕೃತ್ವಾ ತು ಸುಕೃತಂ ಮಹತ್ ।
ಸೋಽಪಿ ಸಿದ್ಧಿಂ ಪರಾಂ ಪ್ರಾಪ್ತಃ ಶ್ವೇತದ್ವೀಪಮುಪಾಗತಃ ॥ ೨೨೬ ॥

ಏಷಾ ತೇ ಕಥಿತಾ ದೇವಿ ಪೃಷ್ಟ್ಯಾಃ ಕುಬ್ಜಾಮ್ರಕಸ್ಯ ಚ ।
ತಸ್ಯ ಬ್ರಾಹ್ಮಣಮುಖ್ಯಸ್ಯ ರೈಭ್ಯಸ್ಯ ಕಥಿತಾ ಮಯಾ ॥ ೨೨೭ ॥

ಏತತ್ಪುಣ್ಯಂ ಪರಂ ಜಪ್ಯಂ ಚಾತುರ್ವರ್ಣ್ಯೇನ ಸರ್ವದಾ ।
ಸರ್ವಕರ್ಮಸು ಮುಖ್ಯಂ ಚ ಏತದೇವ ವಿಶಿಷ್ಯತೇ ॥ ೨೨೮ ॥

ತೇಜಸಾಂ ಚ ಮಹತ್ತೇಜಃ ತಪಸಾಂ ಚ ಮಹತ್ತಪಃ ॥ ೨೨೯ ॥

ಏತನ್ನ ಮೂರ್ಖಮಧ್ಯೇ ತು ಪಠೇಚ್ಚಾಪಿ ಕದಾಚನ ।
ನ ಪಠೇದ್ಗೋಘ್ನಮಧ್ಯೇ ತು ವೇದವೇದಾಂಗನಿಂದಕೇ ॥ ೨೩೦ ॥

ನ ಪಠೇದ್ಗುರುವಿದ್ವಿಷ್ಟೇ ನ ಪಠೇಚ್ಛಾಸ್ತ್ರದೂಷಕೇ ॥ ೨೩೧ ॥

---

೨೨೬. ದೇವಿ, ಅವರ ಪರಿಜನರೂ ಕೂಡ(ಕುಬ್ಜಾಮ್ರಕದಲ್ಲಿ) ಮಹಾಪುಣ್ಯವನ್ನು ಮಾಡಿ, ಪರಮಸಿದ್ಧಿಯನ್ನು ಪಡೆದು, ಶ್ವೇತದ್ವೀಪಕ್ಕೆ ಬಂದರು.

೨೨೭. ದೇವಿ, ಬ್ರಾಹ್ಮಣೋತ್ತಮನಾದ ರೈಭ್ಯನಿಗೆ ಹಿಂದೆ ನಾನು ಹೇಳಿದ್ದ ಈ ಕುಬ್ಜಾಮ್ರಕ ಮಹಿಮೆಯನ್ನು ನಿನಗೆ ಹೇಳಿದ್ದೇನೆ.

೨೨೮. ಈ ಪುಣ್ಯಚರಿತ್ರೆಯು, ಚತುರ್ವರ್ಣದವರೂ, ಯಾವಾಗಲೂ ಜಪಿಸಲು ತಕ್ಕುದು. ಸರ್ವಕರ್ಮಗಳಲ್ಲೂ ಮುಖ್ಯವಾದ ಇದೇ ವಿಶೇಷ ವಾದುದು.

೨೨೯. ತೇಜಸ್ಸುಗಳಲ್ಲಿ ಮಹಾತೇಜಸ್ಸೂ, ತಪಸ್ಸುಗಳಲ್ಲಿ ಮಹಾತಪಸ್ಸೂ ಇದೇ.

೨೩೦-೩೩೧. ಇದನ್ನು ಎಂದಿಗೂ ಮೂರ್ಖರ ಮಧ್ಯದಲ್ಲೂ, ವೇದ ವೇದಾಂಗಳನ್ನು ನಿಂದಿಸುವವನ ಹತ್ತಿರವೂ, ಗೋಹತ್ಯಮಾಡಿದವರ ನಡುವೆಯೂ ಗುರುದ್ರೋಹಿಯ ಹತ್ತಿರವೂ, ಶಾಸ್ತ್ರದೂಷಕನ ಸಮೀಪದಲ್ಲೂ ಓದಬಾರದು. ಅಥವಾ ಹೇಳಬಾರದು.

ಪಠೇದ್ಭಾಗವತಾನಾಂ ಚ ಮಧ್ಯೇ ದೀಕ್ಷಾವತಾಂ ತಥಾ ।
ಯ ಏತತ್ಪಠತೇ ಭೂಮೇ ಕಲ್ಯಮುತ್ಥಾಯ ಮಾನವಃ
ತಾರಯೇಚ್ಚ ಸ್ವಕುಲಜಾನ್ ದಶ ಪೂರ್ವಾನ್ದಶಾಪರಾನ್ ॥ ೨೩೨ ॥

ಏತತ್ತು ಪಠಮಾನೋ ವೈ ಯಸ್ತು ಪ್ರಾಣಾನ್ವಿಮುಂಚತಿ ।
ಚತುರ್ಭುಜಶ್ಚ ಜಾಯೇತ ಮಲ್ಲೋಕೇಷು ಪ್ರತಿಷ್ಠಿತಃ ॥ ೨೩೩ ॥

ಏತತ್ತೇ ಕಥಿತಂ ಭೂಮೇ ಸ್ಥಾನಂ ಕುಬ್ಜಾಮ್ರಕೇ ತಥಾ ।
ಮಮ ಭಕ್ತಸುಖಾರ್ಥಾಯ ಕಿಮನ್ಯತ್ಪರಿಪೃಚ್ಛಸಿ ॥ ೨೩೪ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಕುಬ್ಜಾಮ್ರಕ ಮಾಹಾತ್ಮ್ಯೇ ರೈಭ್ಯಾನುಗ್ರಹಣಂ ನಾಮ ಷಡ್ವಿಂಶತ್ಯಧಿಕ ಶತತಮೋಽಧ್ಯಾಯಃ

---

೨೩೨ ಭಗವದ್ಭಕ್ತರ ಮತ್ತು ದೀಕ್ಷಿತರ ಮಧ್ಯದಲ್ಲಿ ಓದಬೇಕು. ಅಥವಾ ಹೇಳಬೇಕು. ಭೂದೇವಿ, ಪ್ರಾತಃಕಾಲದಲ್ಲೆದ್ದು, ಇದನ್ನು ಓದುವವನು ಅಥವಾ ಹೇಳುವವನು ತನ್ನ ವಂಶದ ಹಿಂದಿನ ಮತ್ತು ಮುಂದಿನ ಹತ್ತು ತಲೆಯುವರನ್ನೂ ಉತ್ತಾರಣಮಾಡುವನು.

೨೩೩. ಇದನ್ನು ಹೇಳುತ್ತ ಪ್ರಾಣಗಳನ್ನು ಬಿಡುವವನು ನನ್ನ ಲೋಕದಲ್ಲಿ ನೆಲಸಿ ಚತುರ್ಭುಜನೂ ಆಗುವನು.

೨೩೪. ಭೂದೇವಿ, ನನ್ನ ಭಕ್ತರ ಸುಖಾರ್ಥವಾಗಿ ಕುಬ್ಜಾಮ್ರಕದಲ್ಲಿರುವ ಈ ತೀರ್ಥಸ್ಥಾನವನ್ನು ನಿನಗೆ ಹೇಳಿದೆನು. ಬೇರೇನನ್ನು ಕೇಳುತ್ತೀಯೆ ?

ಅಧ್ಯಾಯದ ಸಾರಾಂಶ :—

ಕುಬ್ಜಾಮ್ರಕಕ್ಷೇತ್ರದ ಮಹಿಮೆಯನ್ನು ಪೂರ್ಣವಾಗಿ ಹೇಳಬೇಕೆಂದು ಪ್ರಾರ್ಥಿಸಿದ ಭೂದೇವಿಗೆ ಶ್ರೀವರಾಹನು, ಕುಬ್ಜಾಮ್ರಕವೆಂದು ಹೆಸರು ಬರಲು ಕಾರಣವನ್ನೂ, ರೈಭ್ಯಮುನಿಗೆ ತಾನು ಹಿಂದೆ ಹೇಳಿದ್ದ ಕುಬ್ಜಾಮ್ರಕ ಕ್ಷೇತ್ರದಲ್ಲಿರುವ ಹಲವು ತೀರ್ಥಗಳ ಮಹಿಮೆಯನ್ನೂ, ಆ ಕ್ಷೇತ್ರದಲ್ಲಿ ಜಗಳವಾಡಿ ಸತ್ತು, ರಾಜಕುಮಾರ ರಾಜಕುಮಾರಿಯರಾಗಿ ಜನಿಸಿದ ಮುಂಗಸಿ ಹಾವುಗಳ ಚರಿತ್ರೆಯನ್ನೂ, ಆ ಕ್ಷೇತ್ರಮಹಿಮೆಯ ಶ್ರವಣಪಠನಾದಿಗಳ ಫಲವನ್ನೂ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರ ಇಪ್ಪತ್ತಾರನೆಯ ಅಧ್ಯಾಯ.

|| ಶ್ರೀಃ ||

–x–

ಸಪ್ತವಿಂಶತ್ಯಧಿಕಶತತಮೋಧ್ಯಾಯಃ

ಅಥ ಬ್ರಾಹ್ಮಣದೀಕ್ಷಾಸೂತ್ರವರ್ಣನಂ

|| ಸೂತ ಉವಾಚ ||

ಏವಂ ಧರ್ಮಾಂಸ್ತತಃ ಶ್ರುತ್ವಾ* ಬಹೂನ್ಮೋಕ್ಷಾರ್ಥಕಾರಣಾತ್ ।
ಪ್ರತ್ಯುವಾಚ ತತೋ ಭೂಮಿಲೋಕನಾಥಂ ಜನಾರ್ದನಂ ॥ ೧ ॥

ಅಹೋ ಪ್ರಭಾವಃ ಕ್ಷೇತ್ರಸ್ಯ ಕಥ್ಯಮಾನೋತಿಪುಷ್ಕಲಂ ।
ಅಹಂ ಭಾರಭರಾಕ್ರಾಂತಾ ಲಘುರ್ಜಾತಾಸ್ಮಿ ಮಾಧವ ॥ ೨ ॥

ವಿಮೋಹಾ ಚ ವಿಶುದ್ಧಾ ಚ ಶೃಣ್ವಾನಾಹಂ ತ್ವಿಮಾಂ ಪ್ರಭೋ ।
ಅಹಂ ಲೋಕೇಷು ವಿಖ್ಯಾತಾ ಮುಖಾತ್ತ್ವವ ವಿನಿಃ ಸೃತಾ ॥ ೩ ॥

ನೂರಿಪ್ಪತ್ತೇಳನೆಯ ಅಧ್ಯಾಯ.

ಬ್ರಾಹ್ಮಣದೀಕ್ಷಾಸೂತ್ರವರ್ಣನೆ.

೧. ಸೂತಮುನಿ—ಭೂದೇವಿಯು ಹೀಗೆ ಜನರ ಮೋಕ್ಷಾರ್ಥವಾಗಿ ಶ್ರೀ ವರಾಹನಿಂದ ಹಲವು ಧರ್ಮಗಳನ್ನು ಕೇಳಿ, ಬಳಿಕ ಲೋಕನಾಥನಾದ ಆ ವಿಷ್ಣುವನ್ನು ನೋಡಿ, ಮತ್ತೆ ಮಾತನಾಡಿದಳು.

೨–೩. ಮಾಧವಾ, ಅತಿಯಾಗಿ ಬೇಕಾದಹಾಗೆ ನೀನು ಹೇಳುತ್ತಿರುವ (ಆ ಕುಬ್ಜಾಮ್ರಕ) ಕ್ಷೇತ್ರಮಹಿಮೆಯು ಆಶ್ಚರ್ಯಕರವಾಗಿದೆ. ಪ್ರಭುವೇ, ಹೆಚ್ಚಾದ ಭಾರವನ್ನು ಹೊತ್ತುಕೊಂಡಿರುವ ನನಗೆ ಇದನ್ನು ಕೇಳಿ, ಹಗುರವಾದಂತಾಗಿ ಮೈ ಲಘುವಾಗಿದೆ. ಪರಿಶುದ್ಧಳೂ, ಮೋಹವನ್ನು ಕಳೆದುಕೊಂಡವಳೂ ಆಗಿದ್ದೇನೆ. ನಿನ್ನ ಮುಖದಿಂದ ಪಾತಾಳದಿಂದ ಹೊರಗೆ ಬಂದ ನಾನು ಲೋಕಗಳಲ್ಲಿ ಪ್ರಸಿದ್ಧಳಾಗಿದ್ದೇನೆ.

---

* ಕೃತ್ವಾ

ಪುನಃ ಪೃಚ್ಛಾಮಿ ತೇ ದೇವ ಸಂಶಯಂ ಧರ್ಮಸಂಹಿತಂ ।
ಯೇನ ಧರ್ಮವಿಧಾನೇನ ದೀಕ್ಷಾ ಪ್ರಾಪ್ಯೇತ ಪುಷ್ಕಲಾ ॥ ೪ ॥

ಏತನ್ಮೇ ಪರಮಂ ಗುಹ್ಯಂ ಪರಂ ಕೌತೂಹಲಂ ಚ ಮೇ ।
ಧರ್ಮಸಂಗ್ರಹಣಾರ್ಥಾಯ ತದ್ಭವಾನ್ವಕ್ತುಮರ್ಹಸಿ ॥ ೫ ॥

ತತೋ ಮಹೀವಚಃ ಶ್ರುತ್ವಾ ಮೇಘದುಂದುಭಿನಿಸ್ವನಃ ।
ವರಾಹರೂಪಿ ಭಗವಾನ್ ಪ್ರತ್ಯುವಾಚ ವಸುಂಧರಾಂ ॥ ೬ ॥

॥ ಶ್ರೀವರಾಹ ಉವಾಚ ॥

ಶೃಣು ತತ್ತ್ವೇನ ಮೇ ದೇವಿ ಮಮ ಧರ್ಮಂ ಸನಾತನಂ ।
ದೇವಾ ಏತನ್ನ ಜಾನಂತಿ ಯೇ ಚ ಯೋಗವ್ರತೇ ಸ್ಥಿತಾಃ ॥ ೭ ॥

ಏತಂ ಧರ್ಮಂ ವರಾರೋಹೇ ಮಂಗಲ್ಯಂ ಮುಖನಿಸ್ಸೃತಂ ।
ಅಹಮೇಕೋ ವಿಜಾನಾಮಿ ಮದ್ಭಕ್ತಾ ಯೇ ಜನಾ ಭುವಿ ॥ ೮ ॥

೪–೫. ದೇವ, ಧರ್ಮಯುತವಾದ ಸಂದೇಹವನ್ನು ನಿನ್ನಲ್ಲಿ ಮತ್ತೆ ಕೇಳುತ್ತೇನೆ. ಯಾವ ಧರ್ಮವಿಧಿಯಿಂದ ಮನುಷ್ಯನು ಪೂರ್ಣದೀಕ್ಷೆಯನ್ನು ಪಡೆಯಬಹುದು? ಕೇಳಲು ಬಹಳ ಆಸೆಯಾಗಿರುವ ಈ ಪರಮರಹಸ್ಯವನ್ನು ಧರ್ಮ(ಜ್ಞಾನ)ಸಂಪಾದನೆಗಾಗಿ ನೀನು ನನಗೆ ಹೇಳಬೇಕು.

೬. ವರಾಹರೂಪಿಯಾದ ಭಗವಂತನು ಭೂದೇವಿಯ ಆ ಮಾತನ್ನು ಕೇಳಿ, ಮೇಘಭೇರಿಗಳ ಗಂಭೀರಧ್ವನಿಯಿಂದ ಆ ವಸುಂಧರೆಗೆ ಹೇಳಿದನು.

೭. ಶ್ರೀವರಾಹ—ನನ್ನ ದೇವಿ, ಸನಾತನವಾದ ನನ್ನ ಧರ್ಮವನ್ನು ನಿಜವಾಗಿ ಕೇಳು. ಯೋಗವ್ರತದಲ್ಲಿರುವವರೂ, ದೇವತೆಗಳೂ ಇದನ್ನು ಅರಿಯರು.

೮. ವರಾರೋಹೇ ನನ್ನ ಬಾಯಿಂದ ಬಂದ ಮಂಗಳಕರವಾದ ಈ ಧರ್ಮವನ್ನು ನಾನೊಬ್ಬ ಬಲ್ಲೆನು. ಭೂಲೋಕದಲ್ಲಿರುವ ನನ್ನ ಭಕ್ತರು ಬಲ್ಲರು.

ಯಚ್ಚ ಪೃಚ್ಛಸಿ ಮೇ ಭದ್ರೇ ಧೀಕ್ಷಾಂ ಭಾಗವತೀಂ ಕಥಾಂ ।
ತಚ್ಛೃಣುಷ್ವ ವರಾರೋಹೇ ಕರ್ಮ ಸಂಸಾರಮೋಕ್ಷಣಂ ॥ ೯ ॥

ಮಾಯೋಕ್ತಾಂ ಲಭತೇ ಕಶ್ಚಿದ್ದೀಕ್ಷಾಂ ಚೈವ ಸುಖಾವಹಾಂ ।
ಚಾತುರ್ವರ್ಣ್ಯವಿಧಾನೇನ ತಾಂ ದೀಕ್ಷಾಂ ಶೃಣು ಸುಂದರಿ ॥ ೧೦ ॥

ಮಯಿ ಶಾಂತಂ ಮನಃ ಕೃತ್ವಾ ತದುತ್ಕೃಷ್ಟಂ ಚ ಸುಂದರಿ ।
ಅಭಿಗಚ್ಛೇದ್ಗುರುಂ ದೇವಿ ಶಾಧಿ ಶಿಷ್ಯೋಽಸ್ಮಿ ಮಾಂ ಗುರೋ ॥ ೧೧ ॥

ತದಾಜ್ಞಾಂ ತು ಪುರಸ್ಕೃತ್ಯ ದೀಕ್ಷಾದ್ರವ್ಯಾನ್ ತಥಾಹರೇತ್ ।
ಲಾಜಾ ಮಧು ಕುಶಾಂಶ್ಚೈವ ಘೃತಂ ಚಾಮೃತಸನ್ನಿಭಂ ॥ ೧೨ ॥

ಗಂಧಂ ಸುಮನಸೋ ಧೂಪಂ ದೀಪಂ ಪ್ರಾಪಣಕಾದಿಕಂ ।
ಕೃಷ್ಣಾಜಿನಂ ಚ ಪಾಲಾಶಂ ದಂಡಂ ಚೈವ ಕಮಂಡಲುಂ ॥ ೧೩ ॥

---

೯. ಭದ್ರೇ ವರಾರೋಹೇ, ಭಗವದ್ಭಕ್ತರಿಗೆ ಸಂಬಂಧಪಟ್ಟ ದೀಕ್ಷೆಯ ಕಥೆಯನ್ನು ತಿಳಿಯಲು ಇಚ್ಛಿಸಿದೆಯಷ್ಟೆ. ಸಂಸಾರಮೋಕ್ಷವಾದ ಆ ದೀಕ್ಷಾ ಕರ್ಮವನ್ನು ಕೇಳು.

೧೦. ನಾನು ಹೇಳುವ ಸುಖಕರವಾದ ದೀಕ್ಷೆಯನ್ನು ಯಾರೋ ಕೆಲವರು ಪಡೆಯುವರು. ಸುಂದರಿ, ನಾಲ್ಕುವರ್ಣದವರಿಗೂ ವಿಹಿತವಾದ ಆ ದೀಕ್ಷೆಯ ಕ್ರಮವನ್ನು ಕೇಳು.

೧೧-೧೨. ಸುಂದರಿ, ಶಾಂತವೂ, ಉತ್ತಮವೂ ಆದ ಮನವನ್ನು ನನ್ನಲ್ಲಿರಿಸಿ, ಉತ್ತಮನಾದ ಗುರುವಿನ ಬಳಿಗೆ ಹೋಗಿ, "ಗುರುವೇ ನಿನಗೆ ಶಿಷ್ಯನಾಗಿದ್ದೇನೆ. ನನಗೆ ಉಪದೇಶಿಸು(ಅಪ್ಪಣೆಮಾಡು)" ಎಂದು ಪ್ರಾರ್ಥಿಸಿ, ಆತನ ಅಪ್ಪಣೆಯನ್ನು ಪಡೆದು, ದೀಕ್ಷಾಕರ್ಮಕ್ಕೆ ಬೇಕಾದ ದ್ರವ್ಯಗಳನ್ನು ತರಬೇಕು. ಅರಳು, ಜೇನುತುಪ್ಪ, ದರ್ಭೆ, ಅಮೃತದಂತಿರುವ ತುಪ್ಪ, ಗಂಧ, ಹೂ, ಧೂಪ, ದೀಪ, ನೈವೇದ್ಯ ಮೊದಲಾದುವುಗಳನ್ನೂ, ಕೃಷ್ಣಾಜಿನ, ಮುತ್ತುಗದ ಕೋಲು (ಪಾಲಾಶದಂಡ), ಕಮಂಡಲು, ಕೊಡ, ವಸ್ತ್ರ, ಪಾದುಕೆ, ಬೆಳ್ಳಗಿರುವ ಯಜ್ಞೋ

ಘಟಂ ವಾಸಃ ಪಾದುಕೇ ಚ ಶುಕ್ಲಯಜ್ಞೋಪವೀತಕಂ ।
ಯಂತ್ರಿಕಾಮರ್ಘ್ಯಪಾತ್ರಂ ಚ ಚರುಸ್ಥಾಲೀಂ ಸದರ್ವಿಕಾಂ ॥ ೧೪ ॥

ತಿಲವ್ರೀಹಿಯವಾಂಶ್ಚೈವ ವಿವಿಧಂ ಚ ಫಲೋದಕಂ ।
ಭಕ್ಷ್ಯಭೋಜ್ಯಾನ್ನಪಾನಂ ಚ ಕರ್ಮಣ್ಯಾಂಶ್ಚೈವ ಸಂಚಯಾನ್ ॥ ೧೫ ॥

ದೀಕ್ಷಿತಾ ಯದಿ ಭುಂಜಂತಿ ಮಮ ಕರ್ಮಪರಾಯಣಾಃ ।
ಯಾನಿ ಕಾನಿ ಚ ಬೀಜಾನಿ ರತ್ನಾನಿ ವಿವಿಧಾನಿ ಚ ॥ ೧೬ ॥

ಕಾಚಕಾದೀನಿ ಸುಶ್ರೋಣಿ ತಾನಿ ಶೀಘ್ರಮುಪಾ ಹರೇತ್ ।
ಏತಾನ್ಯೇವೋಪಹಾರ್ಯಾಣಿ ಗುರುಮೂಲೇ ತತಃ ಪರಂ ॥ ೧೭ ॥

ಸ್ನಾತ್ವಾ ಮಂಗಲಸಂಯುಕ್ತೋ ದೀಕ್ಷಾಕಾಮಶ್ಚ ಬ್ರಾಹ್ಮಣಃ ।
ಗುರೋಸ್ತು ಚರಣೌ ಗೃಹ್ಯ ಬ್ರೂಹಿ ಕಿಂ ಕರವಾಣಿ ತೇ ॥ ೧೮ ॥

ತತಸ್ತು ಗುರ್ವನುಜ್ಞಾತೋ ವೇದೀಂ ಕುರ್ಯಾಚ್ಚ ಪುಷ್ಕಲಾಂ ।
ಬ್ರಾಹ್ಮಣೋ ದೀಕ್ಷಮಾಣಸ್ತು ಚತುರಸ್ರಾಂ ತು ಷೋಡಶ ।
ಹಸ್ತಾನ್ಕೃತ್ವಾ ತು ತತ್ರೈವ ಕಲಶೋಪರಿ ಯುಂಜಯೇತ್ ॥ ೧೯ ॥

ಪವೀತ, ಅರ್ಘ್ಯಪಾತ್ರೆ, ಹೋಮಮಾಡುವುದಕ್ಕೆ ಬೇಕಾದ ಅನ್ನವಿರುವ ಪಾತ್ರೆ, ಅದರ ಸೌಟು, ಎಳ್ಳು, ಬತ್ತ ಯವೆ, ಬಗೆಬಗೆಯ ಹಣ್ಣುಕಾಯಿಗಳು ಇವುಗಳನ್ನೂ ನನ್ನ ಕರ್ಮಗಳಲ್ಲಿ ಆಸಕ್ತರಾದ ದೀಕ್ಷಿತರು ಊಟಮಾಡುವುದಾದರೆ ಕರ್ಮಾರ್ಹವಾದ ಭಕ್ಷ್ಯಭೋಜ್ಯಾನ್ನಪಾನಗಳನ್ನೂ, ಕೆಲವು ಬೀಜಗಳನ್ನೂ, ಬಗೆಬಗೆಯ ರತ್ನಗಳನ್ನೂ ಕಾಚಕಾದಿ(ಕನ್ನಡಿ ಮೊದಲಾದುವು)ಗಳನ್ನೂ ಬೇಗನೆ ಸಿದ್ಧಗೊಳಿಸಿ ತರಬೇಕು. ಆಮೇಲೆ ಇವುಗಳನ್ನೇ ಗುರುವಿನ ಸನ್ನಿಧಿಯಲ್ಲಿ ಒಪ್ಪಿಸಬೇಕು.

೧೮. ದೀಕ್ಷೆಯನ್ನು ಬಯಸುವ ಬ್ರಾಹ್ಮಣನು ಸ್ನಾನಮಾಡಿ, ಮಂಗಳಯುತನಾಗಿ, ಗುರುವಿನ ಪಾದಗಳನ್ನು ಹಿಡಿದುಕೊಂಡು ನಮಿಸಿ, " ನಿನಗೆ ನಾನು ಮಾಡಬೇಕಾದುದೇನು ? " ಎಂದು ಪ್ರಾರ್ಥಿಸಬೇಕು.

೧೯-೨೧. ಬಳಿಕ ಗುರುವಿನ ಅಪ್ಪಣೆಯನ್ನು ಪಡೆದು, ದೀಕ್ಷೆಯನ್ನು ವಹಿಸುವ ಆ ಬ್ರಾಹ್ಮಣನು, ಚಚ್ಚೌಕವಾಗಿ ಹದಿನಾರು ಮೊಳದಳತೆಯುಳ್ಳ ದೊಡ್ಡದಾದ ದೀಕ್ಷಾವೇದಿಕೆ (ಜಗಲಿ) ಯನ್ನು ರಚಿಸಬೇಕು. ಆ ಜಗಲಿ

ಪ್ರತಿಷ್ಠಾಪ್ಯ ವಿಧಾನೇನ ಧಾನ್ಯೋಪರಿ ದೃಢಂನವಂ ।
ಜಲೇನ ಪೂರಿತಂ ಮಂತ್ರೈಃ ಪುಷ್ಪಪಲ್ಲವಶೋಭಿತಂ ॥ ೨೦ ॥

ತಸ್ಯೋಪರಿ ತಿಲೈಃ ಪೂರ್ಣಪಾತ್ರಂ ಸ್ಥಾಪ್ಯ ವಿಧಾನತಃ ।
ಪೂಜಯೇನ್ಮಾಂ ಗುರುರ್ದ್ರವ್ಯೈಃ ಶಿಷ್ಯೇಣೈವೋಪಕಲ್ಪಿತೈಃ ॥ ೨೧ ॥

ತತ್ರಾರ್ಚನವಿಧಿಂ ಕೃತ್ವಾ ಗುರುರ್ಧರ್ಮವಿನಿಶ್ಚಯಃ ।
ಪೂರ್ವೋಕ್ತಾನಿ ಚ ದ್ರವ್ಯಾಣಿ ವೇದಿಮಧ್ಯಮುಪಾಹರೇತ್ ॥ ೨೨ ॥

ಚತುರಃ ಕಲಶಾನ್ದದ್ಯಾತ್ ಚತುಷ್ಪಾರ್ಶ್ವೇಷು ಸುಂದರಿ ।
ವಾರಿಪೂರ್ಣಾನ್ನ್ವಿಜಾನ್ಯುದ್ಧಾನ್ಸಹಕಾರವಿಭೂಷಿತಾನ್ ॥ ೨೩ ॥

ಸರ್ವತಃ ಶುಕ್ಲಸೂತ್ರೇಣ ವೇಷ್ಟಯೇತ ತಥಾನಘೇ ।
ಪೂರ್ಣಪಾತ್ರಾಣಿ ಚತ್ವಾರಿ ಚತುಷ್ಪಾರ್ಶ್ವೇಷು ಸ್ಥಾಪಯೇತ್ ॥ ೨೪ ॥

ಯಲ್ಲಿಯೇ ಕಲಶವನ್ನು ಇರಿಸಬೇಕು. ಧಾನ್ಯದ ಮೇಲೆ, ದೃಢವೂ, ಹೊಸದೂ, ಮಂತ್ರಪೂರ್ವಕವಾಗಿ ನೀರಿಂದ ತುಂಬಿದುದೂ, ಹೂಗಳಿಂದಲೂ, ಚಿಗುರುಗಳಿಂದಲೂ ಅಲಂಕೃತವೂ ಆದ ಕಲಶವನ್ನು ವಿಧಿಯಂತೆ ಸ್ಥಾಪಿಸಿ, ಆ ಕಲಶದಮೇಲೆ ಎಳ್ಳಿನಿಂದ ತುಂಬಿದ ಪಾತ್ರೆಯನ್ನು ಇಟ್ಟು, ಗುರುವು, ಶಿಷ್ಯನು ತಂದ ದ್ರವ್ಯಗಳಿಂದಲೇ ನನ್ನನ್ನು ಪೂಜಿಸಬೇಕು.

೨೨–೨೪. ಸುಂದರಿ, ಧರ್ಮನಿರ್ಣಯವುಳ್ಳ ಗುರುವು ಅಲ್ಲಿ ಪೂಜಾವಿಧಿಯನ್ನು ಮಾಡಿ, ಹಿಂದೆ ಹೇಳಿದ ಪದಾರ್ಥಗಳನ್ನು ವೇದಿಕೆಯ ಮಧ್ಯಕ್ಕೆ ತರಿಸಬೇಕು. ವೇದಿಕೆಯ ನಾಲ್ಕು ಪಕ್ಕಗಳಲ್ಲೂ, ನೀರಿಂದ ತುಂಬಿ, ಮಾವಿನ ಚಿಗುರಿನಿಂದ ಅಲಂಕೃತವಾದ ನಾಲ್ಕು ಶುದ್ಧವಾದ ಕಲಶಗಳನ್ನು ಇಡಬೇಕು. ದೋಷರಹಿತೆ, ಆ ಕಲಶಗಳ ಸುತ್ತಲೂ ಬಿಳಿಯ ನೂಲನ್ನು ಸುತ್ತಬೇಕು. ನಾಲ್ಕು ಪಕ್ಕಗಳಲ್ಲೂ ನಾಲ್ಕು ಪೂರ್ಣ ಪಾತ್ರೆಗಳನ್ನು ಸ್ಥಾಪಿಸಬೇಕು.

ಏವಂ ಮಂತ್ರಂ ತತಃ ಕೃತ್ವಾ ದದ್ಯಾದ್ದೀಕ್ಷಾಂ ಪ್ರಯೋಜಕಃ ॥ ೨೫ ॥

ಸ ಚ ಮಂತ್ರೋ ಯಥಾನ್ಯಾಯಂ ಯೇನ ವಾ ತುಷ್ಯತೇ ಗುರುಃ ।
ಯಥಾನ್ಯಾಯಂ ಚ ಸಂಗೃಹ್ಯ ಗುರುಕರ್ಮವಿನಿಶ್ಚಿತಃ ॥ ೨೬ ॥

ಪ್ರಪದ್ಯಾವಸಥಂ ವಿಷ್ಣೋರ್ದೀಕ್ಷಾಣಾಂ ಪರಿಕಾಂಕ್ಷಿಣಃ ।
ಉಪಸ್ಪೃಶ್ಯ ಯಥಾನ್ಯಾಯಂ ಭೂತ್ವಾ ಪೂರ್ವಮುಖಸ್ತತಃ ।
ಸರ್ವಾಂಸ್ತು ಶ್ರಾವಯೇಂಚ್ಛಿಷ್ಯಾನ್ ದೀಕ್ಷಾರ್ಥಂ ತು ನ ಸಂಶಯಃ॥ ೨೭ ॥

ಯಸ್ತು ಭಾಗವತಾನ್ದೃಷ್ಟ್ವಾ ಸ್ವಯಂ ಭಾಗವತಶ್ಶುಚಿಃ ।
ಅಭ್ಯುತ್ಥಾನಂ ನ ಕುರ್ವೀತ ತೇನಾಹಂ ತು ವಿಹಿಂಸಿತಃ ॥ ೨೮ ॥

ಕನ್ಯಾಂ ದತ್ವಾ ಪುನಸ್ತಾಂ ತು ಕರ್ಮಣಾ ನೋಪಪಾದಯೇತ್ ।
ಅಷ್ಟೌ ಪಿತೃಗಣಾಸ್ತೇನ ಹಿಂಸಿತಾ ನಾತ್ರ ಸಂಶಯಃ ॥ ೨೯ ॥

೨೫–೨೬. ಗುರುವು ಹೀಗೆ ಮಂತ್ರವಿಧಿಯನ್ನು ಮಾಡಿ, ಬಳಿಕ ದೀಕ್ಷೆಯನ್ನು ಕೊಡಬೇಕು. ಆ ಮಂತ್ರವು, ನ್ಯಾಯವಾಗಿ ಕರ್ಮನಿಯಮವುಳ್ಳ ಗುರುವು ತಾನು ಸಂಗ್ರಹಿಸಿದ ಯಾವುದರಿಂದ ಸಂತೋಷಿಸುವನೋ ಅದಾಗಬಹುದು.

೨೭. ಗುರುವು ವಿಷ್ಣುಸನ್ನಿಧಿಗೆ ಹೋಗಿ, ದೀಕ್ಷೆಯನ್ನಪೇಕ್ಷಿಸುವವರನ್ನು ವಿಧಿಪೂರ್ವಕವಾಗಿ ಮುಟ್ಟಿ, ಬಳಿಕ ಪೂರ್ವಾಭಿಮುಖನಾಗಿ ನಿಂತು, ದೀಕ್ಷೆಗಾಗಿ ಶಿಷ್ಯರೆಲ್ಲರಿಗೂ ನಿಜವಾಗಿ ಮುಂದಿನ ವಿಚಾರವನ್ನು ಹೇಳಿ ತಿಳಿಸಬೇಕು.

೨೮. ನಿಜವಾಗಿಯೂ ಭಗವದ್ಭಕ್ತನೂ, ಶುದ್ಧನೂ ಆದವನು ಬೇರೆಯ ಭಾಗವತರನ್ನು ನೋಡಿ ಎದಿರುಗೊಂಡೇಳದಿದ್ದರೆ ಅವನು ನನ್ನನ್ನು ಹಿಂಸೆಮಾಡಿ ದಂತಾಗುವುದು.

೨೯. ಕನ್ಯೆಯನ್ನು ಕೊಡುವುದಾಗಿ ವಾಗ್ದಾನಮಾಡಿ, ಮತ್ತೆ ವಿವಾಹ ಮಾಡಿಕೊಡದಿದ್ದರೆ ಅವನು ತನ್ನ ಹಿಂದಿನ ಎಂಟುತಲೆಯ ಪಿತೃಗಳನ್ನೂ ಹಿಂಸಿಸಿದಂತಾಗುವುದರಲ್ಲಿ ಸಂಶಯವಿಲ್ಲ.

ಭಾರ್ಯಾಂ ಪ್ರಿಯಸಖೀಂ ಯಸ್ತು ಸಾಧ್ವೀಂ ಹಿಂಸತಿ ನಿರ್ಘೃಣಃ ।
ನ ತೇನ ತಾಂ ಪ್ರಾಪ್ನುವಂತಿ ಹಿಂಸಕಾ ದುಷ್ಟಯೋನಿಜಾಃ ।
ಬ್ರಹ್ಮಘ್ನಶ್ಚ ಕೃತಘ್ನಶ್ಚ ಗೋಘ್ನಶ್ಚ ಕೃತಪಾತಕಾಃ ॥ ೩೦ ॥

ಏತಾನ್ ಶಿಷ್ಯಾನ್ ವಿವರ್ಜೀತ ಉಕ್ತಾ ಯೇ ಚಾನ್ಯಪಾತಕಾಃ ॥ ೩೧ ॥

ಬಿಲ್ವವೃಕ್ಷೋದುಂಬರೌ ಚ ತಥಾ ಚಾನ್ಯೇ ಕದಾಚನ ॥
ಕರ್ಮಣ್ಯಾಶ್ಚೈವ ಯೇ ವೃಕ್ಷಾ ನ ಚ್ಛೇತ್ತವ್ಯಾಃ ಕದಾಚನ ॥ ೩೨ ॥

ಯದೀಚ್ಛೇತ್ಪರಮಾಂ ಸಿದ್ಧಿಂ ಮೋಕ್ಷಧರ್ಮಂ ಸನಾತನಂ ॥ ೩೩ ॥

ಭಕ್ಷ್ಯಾಭಕ್ಷ್ಯಂ ಚ ತಂ ಶಿಷ್ಯಂ ವೇದಿತವ್ಯಂ ತದಂತರೇ ॥ ೩೪ ॥

ಕರೀರಸ್ಯ ವಧಃ ಶಸ್ತಃ ಫಲಾನ್ಯೌದುಂಬರಸ್ಯ ಚ ॥
ಸದ್ಯೋಭಕ್ಷೀ ಭವೇತ್ತೇನ ಅಭಕ್ಷ್ಯಾ ಪೂತಿವಾಸಿಕಾ ॥ ೩೫ ॥

---

೩೦. ಪ್ರಿಯಸಖಿಯೂ, ಪತಿವ್ರತೆಯೂ ಆದ ಹೆಂಡತಿಯನ್ನು ಹಿಂಸಿಸುವ ನಿರ್ಘೃಣನೂ, ದುಷ್ಟರಲ್ಲುದಿಸಿದವರೂ, ಹಿಂಸಕರೂ, ಬ್ರಹ್ಮಹತ್ಯ ಮಾಡಿದವನೂ ಪಾಪಿಗಳು. ಅವರು (ತಮ್ಮ ಪಾಪದಿಂದ) ವೈಷ್ಣವದೀಕ್ಷೆಯನ್ನು ಪಡೆಯಲನರ್ಹರು.

೩೧. ಮೇಲೆ ಹೇಳಿದ ಪಾಪಗಳಲ್ಲಿ ಯಾವುದನ್ನೇ ಆಗಲಿ, ಬೇರೆ ಪಾಪಗಳನ್ನೇ ಆಗಲಿ ಮಾಡಿರುವ ಶಿಷ್ಯರನ್ನು ಪರಿತ್ಯಜಿಸಬೇಕು.

೩೨-೩೩. ಸನಾತನಮೋಕ್ಷಧರ್ಮವನ್ನೂ, ಪರಮಸಿದ್ಧಿಯನ್ನೂ ಬಯಸುವುದಾದರೆ, ಬಿಲ್ವಪತ್ರೆಯ ಮರವನ್ನೂ, ಅತ್ತಿಯ ಮರವನ್ನೂ, ಕರ್ಮಾರ್ಹವಾದ ಬೇರೆಯ ಮರಗಳನ್ನೂ ಎಂದಿಗೂ ಕಡಿಯಬಾರದು.

೩೪-೩೫. ಆಗಲೇ ಆ ಶಿಷ್ಯನು ಭಕ್ಷ್ಯಾಭಕ್ಷ್ಯಗಳನ್ನೂ ಅರಿಯಬೇಕು. ಮುಳ್ಳುಗಿಡಗಳನ್ನೂ, ಬಿದಿರುಮೊಳಕೆಯನ್ನೂ ಕತ್ತರಿಸುವುದು ಉತ್ತಮ. ಅತ್ತಿಯ ಹಣ್ಣನ್ನು ಕಿತ್ತೊಡನೆಯೇ ತಿನ್ನಬಹುದು. ದುರ್ಗಂಧವುಳ್ಳದನ್ನು ತಿನ್ನಬಾರದು.

ನ ಭಕ್ಷಣೀಯಂ ವಾರಾಹಂ ಮಾಂಸಂ ಮತ್ಸ್ಯಾಶ್ಚ ಸರ್ವಶಃ ।
ಅಭಕ್ಷ್ಯಾ ಬ್ರಾಹ್ಮಣೈರೇತೇ ದೀಕ್ಷಿತೈಶ್ಚ ನ ಸಂಶಯಃ ॥ ೩೬ ॥

ಪರೀವಾದಂ ನ ಕುರ್ವೀತ ನ ಹಿಂಸಾಂ ವಾ ಕದಾಚನ ।
ಪೈಶುನ್ಯಂ ನ ಚ ಕರ್ತವ್ಯಂ ಸ್ತೈನ್ಯಂ ವಾಪಿ ಕದಾಚನ ॥ ೩೭ ॥

ಅತಿಥಿಂ ಚಾಗತಂ ದೃಷ್ಟ್ವಾ ದೂರಾಧ್ವಾನಂ ಗತಂ ಕ್ವಚಿತ್ ।
ಸಂವಿಭಾಗಸ್ತು ಕರ್ತವ್ಯೋ ಯೇನ ಕೇನಾಪಿ ಪುತ್ರಕ ॥ ೩೮ ॥

ಗುರುಪತ್ನೀ ರಾಜಪತ್ನೀ ಬ್ರಾಹ್ಮಣಸ್ತ್ರೀ ಕದಾಚನ ।
ಮನಸಾಪಿ ನ ಗಂತವ್ಯಾ ಏವಂ ವಿಷ್ಣುಃ ಪ್ರಭಾಷತೇ ॥ ೩೯ ॥

ಕನಕಾದೀನಿ ರತ್ನಾನಿ ಯೌವನಸ್ಥಾ ಚ ಕಾಮಿನೀ ।
ತತ್ರ ಚಿತ್ತಂ ನ ಕರ್ತವ್ಯಮೇವಂ ವಿಷ್ಣುಃ ಪ್ರಭಾಷತೇ ॥ ೪೦ ॥

---

೩೬. ಹಂದಿಯ ಮಾಂಸವನ್ನೂ, ಮೀನುಗಳನ್ನೂ ಯಾರೂ ತಿನ್ನಬಾರದು. ಅದರಲ್ಲೂ ಬ್ರಾಹ್ಮಣರೂ, ದೀಕ್ಷಿತರೂ ಇವುಗಳನ್ನು ತಿನ್ನಬಾರದೆಂಬುದರಲ್ಲಿ ಸಂದೇಹವಿಲ್ಲ.

೩೭. ಪರರನ್ನು ಎಂದಿಗೂ ನಿಂದಿಸಬಾರದು. ಹಿಂಸಿಸಲೂ ಬಾರದು. ಕ್ರೌರ್ಯ ಅಥವಾ ಚಾಡಿಕೋರತನವನ್ನೂ, ಕಳ್ಳತನವನ್ನೂ ಎಂದೂ ಮಾಡಬಾರದು.

೩೮. ಅತಿಥಿಯಾದವನು ಬಂದುದನ್ನು ನೋಡಿದರೆ, ಒಂದುವೇಳೆ ಅವನು ದೂರ ಹೊರಟುಹೋಗಿದ್ದರೂ ಕರೆದು ಯಾವುದರಿಂದಲಾದರೂ ಅವನನ್ನು ಆದರಿಸಬೇಕು.

೩೯. "ಗುರುಪತ್ನಿಯನ್ನೂ, ರಾಜಪತ್ನಿಯನ್ನೂ, ಬ್ರಾಹ್ಮಣಪತ್ನಿಯನ್ನೂ ಎಂದಿಗೂ ಕಾಮಿಸಬಾರದು" ಎಂದು ವಿಷ್ಣುವು ಹೇಳುತ್ತಾನೆ.

೪೦. ಇತರರ ಚಿನ್ನವೇ ಮೊದಲಾದುವುಗಳಲ್ಲೂ, ರತ್ನಗಳಲ್ಲೂ, ಯೌವನದ ಪರವನಿತೆಯಲ್ಲೂ ಆಸೆಮಾಡಬಾರದೆಂದೂ ವಿಷ್ಣುವು ಹೇಳಿರುವನು.

ದೃಷ್ಟ್ವಾ ಪರಸ್ಯ ಭಾಗ್ಯಾನಿ ಆತ್ಮನೋ ವ್ಯಸನಂ ತಥಾ ।
ತತ್ರ ಮನ್ಯುರ್ನ ಕರ್ತವ್ಯ ಏವಂ ಧರ್ಮಸ್ಸನಾತನಃ ॥ ೪೧ ॥

ಏವಂ ತತಃ ಶ್ರಾವಯೀತ ದೀಕ್ಷಾಕಾಮಂ ವಸುಂಧರೇ ।
ಛತ್ರಂ ಚೋಪಾನಹಂ ಚೈವ ಮನಸಾ ಚೋಪಕಲ್ಪಯೇತ್ ॥ ೪೨ ॥

ಔದುಂಬರಸ್ಯ ಪತ್ರೇ ದ್ವೇ ವೇದಿಮಧ್ಯೇ ತು ಸ್ಥಾಪಯೇತ್ ।
ಕ್ಷುರಂ ಚೈವ ವರಾರೋಹೇ ಜಲಪೂರ್ಣಂ ಚ ಭಾಜನಂ ।
ಮಮಾವಾಹನಪೂರ್ವಂ ತು ಮಂತ್ರೇಣ ವಿಧಿನಾರ್ಚಯೇತ್ ॥ ೪೩ ॥

ಮಂತ್ರಃ—
ಓಂ ಸಪ್ತ ಸಾಗರಾಶ್ಚ ಸಪ್ತದ್ವೀಪಾನಿ ಸಪ್ತ ಪರ್ವತಾಶ್ಚ
ದಶ ಸ್ವರ್ಗಸಹಸ್ರಾಶ್ಚ ಸಮಸ್ತಾಶ್ಚ ನಮೋಸ್ತು
ಸರ್ವಾಸ್ತೇ ಹೃದಯೇ ವಸಂತಿ ।
ಯಶ್ಚೈತದ್ವರ್ಷತಿ ಪುನರುನ್ನಮತಿ ॥ ೪೪ ॥

---

೪೧. ಮತ್ತೊಬ್ಬನ ಭಾಗ್ಯವನ್ನೂ, ತನ್ನ ವ್ಯಸನ ಅಥವಾ ಕಷ್ಟವನ್ನೂ ನೋಡಿ, ಅದಕ್ಕಾಗಿ ದುಃಖಿಸಬಾರದು. ಇದೆಲ್ಲವೂ ಸನಾತನಧರ್ಮವು.

೪೨. ಹೀಗೆ ದೀಕ್ಷೆಯನ್ನು ಬಯಸುವವನಿಗೆ ಹೇಳಬೇಕು. ವಸುಂಧರೇ, ಛತ್ರಿಪಾದರಕ್ಷೆಗಳನ್ನು ವೇದಿಕೆಯ ಮೇಲೆ ತರದೆ ಮನಸ್ಸಿನಲ್ಲೇ ಕಲ್ಪಿಸಿಕೊಳ್ಳಬೇಕು.

೪೩. ಎರಡು ಅತ್ತಿಯ ಎಲೆಗಳನ್ನು ವೇದಿಕೆಯ ನಡುವೆ ಇಡಬೇಕು. ವರಾರೋಹೇ, ಕ್ಷೌರದ ಕತ್ತಿಯನ್ನೂ, ನೀರು ತುಂಬಿದ ಪಾತ್ರೆಯನ್ನೂ, ನನ್ನನ್ನು ಆವಾಹಿಸಿ, ಮಂತ್ರದಿಂದ ವಿಧಿಪೂರ್ವಕವಾಗಿ ಅರ್ಚಿಸಬೇಕು.

೪೪-೪೬. "ಓಂ ಸಪ್ತ (ಏಳು) ಸಾಗರಗಳೂ ಸಪ್ತದ್ವೀಪಗಳೂ ಸಪ್ತಪರ್ವತಗಳೂ ಹತ್ತುಸಾವಿರ ಸ್ವರ್ಗಗಳೂ ಈ ಲೋಕಕ್ಕೆ ಮಳೆಯನ್ನು ಸುರಿಸುವ ಮತ್ತು ಮತ್ತೆ ನೀರನ್ನು ಸೆಳೆದುಕೊಳ್ಳುವ ಸೂರ್ಯನೂ ಸಮಸ್ತವೂ ನಿನ್ನ ಹೃದಯದಲ್ಲಿವೆ.

ಓಂ ಭಗವಾನ್ವಾಸುದೇವ ಮನ್ವೈತತ್ಸಾರಯ ಯುಕ್ತಂ
ವರಾಹರೂಪಸ್ಸೃಷ್ಟೇನ ಪೃಥಿವ್ಯಾಂ ತು ಮಂತ್ರಾನುಸ್ಮರಣಂ ಚ
ಯ ಆಜ್ಞಾಪಯಾನುಭಾವನಾಸ್ಮಾಕಮಾಜ್ಞಪ್ತಮನುಚಿಂತಯಿತ್ವಾ
ಭಗವನ್ನಾಗಚ್ಛ ದೀಕ್ಷಾಕಾಮವಿಪ್ರಸ್ತ್ವತ್ಪ್ರಸಾದಾತ್ತು ದೀಕ್ಷತಿ || ೪೫ ||

ಏತನ್ಮಂತ್ರಮುದಾಹೃತ್ಯ ಶಿರಸಾ ಜಾನುಭ್ಯಾಂ |
ಅವನಿಂಗತೇನ ಭವಿತವ್ಯಂ || ೪೬ ||

ಓಂ ಸ್ವಾಗತಂ ಸ್ವಾಗತವಾನಿತಿ || ೪೭ ||

ತತ ಏತೇನ ಮಂತ್ರೇಣ ಆನಯಿತ್ವಾ ವಸುಂಧರೇ |
ಅರ್ಘ್ಯಂ ಪಾದ್ಯಂ ಚ ದಾತವ್ಯಂ ಮಂತ್ರೇಣ ವಿಧಿನಿಶ್ಚಯಾತ್ || ೪೮ ||

ಮಂತ್ರಃ—
ಅಕೃತಘ್ನೇ ದೇವಾನಸುರಾಕೃತಘ್ನರುದ್ರೇಣ ಬ್ರಾಹ್ಮಣಾಯ
ಚಲಬ್ಧಂ ಸರ್ವಮಿಮಾಂ ಭಗವತೇಸ್ತು ದತ್ತಂ |
ಪ್ರತಿಗೃಹ್ಣೀಷ್ವ ಚ ಲೋಕನಾಥ || ೪೯ ||

ನಿನಗೆ ನಮಸ್ಕಾರ. ಓಂ ಭಗವಂತ, ವಾಸುದೇವ, ವರಾಹರೂಪದಿಂದ ಉದ್ಧೃತವಾದ ಈ ಪೃಥ್ವಿಯಲ್ಲಿ ನಮಗೆ ನೀನು ಆಜ್ಞಾಪಿಸಿರುವುದನ್ನು ಜ್ಞಾಪಿಸಿಕೊಂಡು ಯುಕ್ತವಾದ ಮಂತ್ರವನ್ನು ಅನುಗ್ರಹಿಸು. ಭಗವಂತನೇ ಇಲ್ಲಿ ದಯಮಾಡಿಸು. ದೀಕ್ಷೆಯನ್ನು ಬಯಸುತ್ತಿರುವ ಈ ಬ್ರಾಹ್ಮಣನು ನಿನ್ನ ಅನುಗ್ರಹದಿಂದ ದೀಕ್ಷೆಯನ್ನು ವಹಿಸುತ್ತಾನೆ." ಎಂಬ ಅರ್ಥವುಳ್ಳ "ಓಂ ಸಪ್ತಸಾಗರಾಶ್ಚ......ದೀಕ್ಷತಿ" ಎಂಬ ಮೇಲಿನ ೪೪-೪೫ನೇ ಮಂತ್ರವನ್ನು ಹೇಳಿ, ಮೊಳಕಾಲುಗಳನ್ನು ನೆಲದ ಮೇಲೂರಿ, ತಲೆಯನ್ನೂ ಭೂಮಿಗೆ ತಗುಲಿಸಿ ವಂದಿಸಬೇಕು.

೪೭-೪೯. ವಸುಂಧರೇ, ಬಳಿಕ "ಓಂ ಸ್ವಾಗತಂ ಸ್ವಾಗತವಾನ್" (ಸುಖಾಗಮನದಿಂದ ಇಲ್ಲಿ ದಯೆಮಾಡಿಸಿದ್ದಾನೆ.) ಎಂಬೀ ಮಂತ್ರದಿಂದ ನನ್ನನ್ನು ಆವಾಹನೆ ಮಾಡಿ ವಿಧಿನಿರ್ಣಯದಂತೆ "ಅಕೃತಘ್ನೇ ದೇವಾನಸುರಾಕೃತಘ್ನರುದ್ರೇಣ ಬ್ರಾಹ್ಮಣಾಯ ಚ ಲಬ್ಧಂ ಸರ್ವಮಿಮಾಂ ಭಗವತೇಸ್ತುದತ್ತಂ ಪ್ರತಿಗೃಹ್ಣೀಷ್ವ ಚ ಲೋಕನಾಥ" ಎಂಬೀ ಮಂತ್ರದಿಂದ ಅರ್ಘ್ಯಪಾದ್ಯಗಳನ್ನರ್ಪಿಸಬೇಕು.

ಏವಂ ಭೂಮೇ ತತೋ ದತ್ವಾ ಅರ್ಘ್ಯಂ ಪಾದ್ಯಂ ಚಕರ್ಮಣಾ ।
ಕ್ಷುರಂ ಗೃಹ್ಯ ಯಥಾನ್ಯಾಯಂ ಇಮಂ ಮಂತ್ರಮುದೀರಯೇತ್ ॥ ೫೦ ॥

ಮಂತ್ರಃ—
ಏವಂ ವರುಣಃ ಪಾತು ಶಿಷ್ಯ ತೇ ವಪತಃ ಶಿರಃ ।
ಜಲೇನ ವಿಷ್ಣುಯುಕ್ತೇನ ದೀಕ್ಷಾ ಸಂಸಾರಮೋಕ್ಷಣಂ ॥ ೫೧ ॥

ಏಕಸ್ಯ ಕಲಶಂ ದದ್ಯಾತ್ಕರ್ಮಕಾರಸ್ಯ ಸುಂದರಿ ।
ನಿಷ್ಕಲಂ ತು ಶಿರಃ ಕೃತ್ವಾ ಶೋಣಿತೇನ ವಿವರ್ಜಿತಂ ॥ ೫೨ ॥

ಪುನಃ ಸ್ನಾನಂ ತತಃ ಕೃತ್ವಾ ಶೀಘ್ರಮೇವ ನ ಸಂಶಯಃ
ಏತಸ್ಯ ವಿಧಿವತ್ಕೃತ್ವಾ ದೀಕ್ಷಾಕಾಮಸ್ಯ ಸುಂದರಿ ॥
ದದ್ಯಾತ್ ಸಂಸಾರಮೋಕ್ಷಾಯ ಸರ್ವಕಾಮವಿನಿಶ್ಚಿತಃ ॥ ೫೩ ॥

---

೫೦. ಭೂದೇವಿ, ಹೀಗೆ ಈ ಮಂತ್ರದಿಂದ ಅರ್ಘ್ಯಪಾದ್ಯಗಳನ್ನು ಅರ್ಪಿಸಿ, ಆಯುಷ್ಕರ್ಮಕ್ಕಾಗಿ ಸರಿಯಾಗಿ ಕತ್ತಿಯನ್ನು ತೆಗೆದುಕೊಂಡು ಮುಂದಿನ ಮಂತ್ರವನ್ನು ಹೇಳಬೇಕು

೫೧–೫೩. ಸುಂದರೀ, " ಶಿಷ್ಯನೇ, ವಿಷ್ಣುಯುಕ್ತವಾದ ನೀರನ್ನು ಹಾಕಿ, ವಪನಮಾಡುವ ನಿನ್ನ ತಲೆಯನ್ನು ವರುಣನು ಹೀಗೆಯೇ ರಕ್ಷಿಸಲಿ. ಈ ದೀಕ್ಷೆಯು ಸಂಸಾರಮೋಕ್ಷಕವಾದುದು " ಎಂಬ ಅರ್ಥವುಳ್ಳ " ಏವಂ ವರುಣಃ . . . . . . ಸಂಸಾರಮೋಕ್ಷಣಂ " ಎಂಬ ಮೇಲಿನ ೫೧ನೆಯ ಮಂತ್ರವನ್ನು ಹೇಳಿ, ಆಯುಷ್ಕರ್ಮಮಾಡುವವನಿಗೆ ಜಲಪೂರ್ಣವಾದ ಕಲಶವನ್ನು ಕೊಡಬೇಕು. ತಲೆಯನ್ನು ಕೂದಲಿಲ್ಲದಂತೆಯೂ, ರಕ್ತವು ಬಾರದಂತೆಯೂ ಶುದ್ಧವಾಗಿ ವಪನಮಾಡಿಸಿಕೊಂಡು, ಸಂಶಯಪಡದೆ ಮತ್ತೆ ಬೇಗನೆ ಸ್ನಾನಮಾಡಬೇಕು. ಸುಂದರಿ, ಸರ್ವೇಷ್ಟನಿಶ್ಚಯವುಳ್ಳ ಗುರುವು, ದೀಕ್ಷೆಯನ್ನು ಅಪೇಕ್ಷಿಸುವವನಿಗೆ ಈ ವಿಧಿಯಂತೆ ಸಂಸಾರವಿಮೋಚನೆಗಾಗಿ ದೀಕ್ಷೆಯನ್ನು ಕೊಡಬೇಕು.

ಜಾನುಭ್ಯಾಮವನಿಂ ಗತ್ವಾ ಇಮಂ ಮಂತ್ರಮುದೀರಯೇತ್ ॥ ೫೪ ॥

ಮಂತ್ರಃ—

ಓಂ ವೇದಾಮ್ಯಹಂ ಭಾಗವತಾಂಶ್ಚ ಸರ್ವಾನ್
ಸುದೀಕ್ಷಿತಾ ಯೇ ಗುರುವಶ್ಚ ಸರ್ವೇ
ವಿಷ್ಣುಪ್ರಸಾದೇನ ಚ ಲಬ್ಧದೀಕ್ಷಾ
ಮಮ ಪ್ರಸೀದಂತು ನಮಾಮಿ ಸರ್ವಾನ್ ॥ ೫೫ ॥

ನತ್ವಾ ತು ಭಗವದ್ಭಕ್ತಾನ್ ಪ್ರಜ್ವಾಲ್ಯ ಚ ಹುತಾಶನಂ
ಘೃತೇನ ಮಧುಮಿಶ್ರೇಣ ಲಾಜಕೃಷ್ಣತಿಲೈಸ್ತಥಾ ।
ಸಪ್ತವಾರಾಂಸ್ತತೋ ದತ್ವಾ ವಿಂಶತಿಂ ಚ ತಿಲೋದನಂ ॥ ೫೬ ॥

ಜಾನುಭ್ಯಾಮವನಿಂ ಗತ್ವಾ ಇಮಂ ಮಂತ್ರಮುದಾಹರೇತ್ ॥ ೫೭ ॥

ಮಂತ್ರಃ— ಅಶ್ವಿನೌ ದಿಶಃ ಸೋಮಸೂರ್ಯೌ
ಸಾಕ್ಷಿಮಾತ್ರಂ *ಯೂಯಂ ಪ್ರಸನ್ನಾಃ ಶೃಣ್ವಂತು ।
ಮೇ ಸತ್ಯವಾಕ್ಯಂ ವದಾಮಿ ॥ ೫೮ ॥

೫೪–೫೫. ದೀಕ್ಷೆಯನ್ನು ಪಡೆದವನು ನೆಲದ ಮೇಲೆ ಮೊಣಕಾಲೂರಿ ವಂದಿಸಿ, "ಓಂ ಸುದೀಕ್ಷಿತರೂ ಗುರುಗಳೂ ಆದ ಭಾಗವತರೆಲ್ಲರನ್ನೂ ಧ್ಯಾನಿಸಿ ವಂದಿಸುತ್ತೇನೆ. ವಿಷ್ಣುವಿನ ಅನುಗ್ರಹದಿಂದ ದೀಕ್ಷೆಯನ್ನು ಪಡೆದ ಅವರೆಲ್ಲರೂ ನನಗೆ ಅನುಗ್ರಹಿಸಲಿ" ಎಂಬ ಅರ್ಥದ "ಓಂ ವೇದಾಮ್ಯಹಂ" ಎಂಬ ಮೇಲಿನ (೫೫ ನೆಯ) ಮಂತ್ರವನ್ನು ಹೇಳಬೇಕು.

೫೬–೫೮ ಹೀಗೆ ಭಗವದ್ಭಕ್ತರನ್ನು ವಂದಿಸಿ, ಅಗ್ನಿಯನ್ನು ಪ್ರತಿಷ್ಠೆಮಾಡಿ, ಚೆನ್ನಾಗಿ ಉರಿಯುವಂತೆ ಮಾಡಿ, ಜೇನುತುಪ್ಪದೊಡನೆ ಬೆರೆತ ತುಪ್ಪದಿಂದಲೂ, ಅರಳು ಕರಿಯಎಳ್ಳುಗಳಿಂದಲೂ ಏಳು ಸಾರಿ ಹೋಮಮಾಡಿ, ಇಪ್ಪತ್ತುಸಾರಿ ಎಳ್ಳನ್ನದಿಂದ ಹೋಮಮಾಡಿ, ನೆಲದಲ್ಲಿ ಮೊಳಕಾಲೂರಿ ಬಾಗಿ, "ಅಶ್ವಿನೀ ದೇವತೆಗಳೇ, ದಿಕ್ಕುಗಳೇ, ಚಂದ್ರಸೂರ್ಯರೇ, ನೀವು ಪ್ರಸನ್ನರಾಗಿ ನಾನು ಹೇಳುವ ಸತ್ಯವಾಕ್ಯವನ್ನು ಸಾಕ್ಷಿಗಳಾಗಿ ಕೇಳಿರಿ" ಎಂಬರ್ಥವುಳ್ಳ "ಅಶ್ವಿನೌದಿಶಃ ....ವದಾಮಿ" ಎಂಬ ಮೇಲಿನ (೫೮ ನೆಯ) ಮಂತ್ರವನ್ನು ಹೇಳಬೇಕು.

---

* ವಯಂ.

ಸತ್ಯೇನ ಧಾರ್ಯತೇ ಭೂಮಿಃ ಭೂಮಿಸ್ಸತ್ಯೇನ ತಿಷ್ಠತಿ ।
ಸತ್ಯೇನ ಗಚ್ಛತೇ ಸೂರ್ಯೋ ವಾಯುಃ ಸತ್ಯೇನ ವಾತಿ ಚ ॥ ೫೯ ॥

ಏವಂ ಸತ್ಯಂ ತತಃ ಕೃತ್ವಾ ಬ್ರಾಹ್ಮಣೋ ವೀಕ್ಷಣಂ ಪುನಃ ।
ಗುರುಂ ಪ್ರಸಾದಯೇತ್ತತ್ರ ಮಂತ್ರೇಣ ವಿಧಿನಾರ್ಚಯನ್ ॥ ೬೦ ॥

ತಿಸ್ರಃ ಪ್ರದಕ್ಷಿಣಾಃ ಕೃತ್ವಾ ದೇವಂ ಭಾಗವತಂ ಗುರುಂ ।
ಗುರುಪಾದೌ ತು ಸಂಗೃಹ್ಯ ಇಮಂ ಮಂತ್ರಮುದೀರಯೇತ್ ॥ ೬೧ ॥

ಮಂತ್ರಃ—

ಗುರುದೇವಪ್ರಸಾದೇನ ಲಬ್ಧಾ ದೀಕ್ಷಾ ಯದೃಚ್ಛಯಾ ।
ಯಚ್ಚೈವಾಪಕೃತಂ ಕಿಂಚಿದ್ಗುರುರ್ಮರ್ಷಯತಾಂ ಮಮ ॥ ೬೨ ॥

ಏವಂ ಪ್ರಸಾದಯಿತ್ವಾ ತು ಶಿಷ್ಯೋ ಮಂತ್ರೇಣ ಸುಂದರಿ ।
ವೇದಿಮಧ್ಯೇ ಸ್ಥಾಪಯಿತ್ವಾ ಭೂತ್ವಾ ಪೂರ್ವಮುಖಸ್ತತಃ ॥ ೬೩ ॥

೫೯–೬೨. “ಸತ್ಯವೇ ಭೂಮಿಯನ್ನು ಧರಿಸಿದೆ. ಭೂಮಿಯು ಸತ್ಯದಿಂದಲೇ ನಿಂತಿದೆ. ಸೂರ್ಯನು ಸತ್ಯದಿಂದ ಸುತ್ತುವನು. ವಾಯುವು ಸತ್ಯದಿಂದಲೇ ಬೀಸುವುದು.” ಎಂದು ದೀಕ್ಷೆಯನ್ನು ವಹಿಸಿದ ಬ್ರಾಹ್ಮಣನು ಸತ್ಯವನ್ನು ಮಾಡಿ, ಬಳಿಕ ಗುರುವನ್ನು ನೋಡಿ, ಸಂತೋಷಪಡಿಸಬೇಕು. ಬಳಿಕ ಮಂತ್ರಗಳಿಂದ ವಿಧಿಪೂರ್ವಕವಾಗಿ ಅರ್ಚಿಸಿ, ದೇವನನ್ನೂ, ಭಾಗವತನಾದ ಗುರುವನ್ನೂ ಮೂರುಸಾರಿ ಪ್ರದಕ್ಷಿಣಮಾಡಿ, ಗುರುವಿನ ಪಾದಗಳನ್ನು ಹಿಡಿದುಕೊಂಡು, “ಗುರುದೇವನ ಅನುಗ್ರಹದಿಂದ ನನಗೆ ಅಕಸ್ಮಾತ್ತಾಗಿ ದೀಕ್ಷೆಯು ಲಭಿಸಿತು. ನನ್ನಿಂದ ಏನಾದರೂ ಅಪಚಾರವಾಗಿದ್ದರೆ ಗುರುವು ಕ್ಷಮಿಸಲಿ.” ಎಂಬರ್ಥವುಳ್ಳ ಮೇಲಿನ ೬೨ನೆಯ ಮಂತ್ರವನ್ನು ಹೇಳಬೇಕು.

೬೩–೬೫. ಸುಂದರಿ, ಹೀಗೆ ಶಿಷ್ಯನು ಮಂತ್ರದಿಂದ ಗುರುವನ್ನು ಸಂತೋಷಪಡಿಸಿ, ವೇದಿಕೆಯ ಮಧ್ಯದಲ್ಲಿ ನಿಲ್ಲಿಸಬೇಕು. ಬಳಿಕ ಗುರುವು

ಶಿಷ್ಯಮೇವ ತತೋ ದೃಷ್ಟ್ವಾ ಗೃಹೀತ್ವಾ ಚ ಕಮಂಡಲುಂ ।
ಶುಕ್ಲಯಜ್ಞೋಪವೀತಂ ಚ ಇಮಂ ಮಂತ್ರಮುದೀರಯೇತ್ ॥ ೬೪ ॥

ಮಂತ್ರಃ— ವಿಷ್ಣುಪ್ರಸಾದೇನ ಗತೋಽಸಿ ಸಿದ್ಧಿಂ
ಪ್ರಾಪ್ತಾ ಚ ದೀಕ್ಷಾ ಸಕಮಂಡಲುಶ್ಚ
ಗೃಹೀತ್ವಾ ತು ಕರಾಭ್ಯಾಂ ಯುಕ್ತೋಽಸಿ ।
ಕರ್ಮಣಾ ಕ್ರಿಯಯಾ ಚೈವ ॥ ೬೫ ॥

ತತೋ ಮುಖಂ ಪದೇ ಕೃತ್ವಾ ದೀಕ್ಷಿತೋ ಗುರುಣಾ ತಥಾ ।
ಸರ್ವಪ್ರದಕ್ಷಿಣಂ ಕೃತ್ವಾ ಇಮಂ ಮಂತ್ರಮುದಾಹರೇತ್ ॥ ೬೬ ॥
ಅಧೋಽಧೋ ಭೂತ್ವಾ ಯದ್ಯಹಂ ಭ್ರಾಮ್ಯಂಲ್ಲಬ್ಧೋ
ಗುರುರ್ವಿಷ್ಣುದೀಕ್ಷಾಚ ಲಬ್ಧಾ ತವ ಪ್ರಸಾದಾಚ್ಚ
ಗುರೋ ಯಥಾ ಚ ।
ಏತೇನ ಮಂತ್ರೇಣ ಮುಖಂ*ಪದೇ ಕಾರಯೇತ್ ॥ ೬೭ ॥

ಪೂರ್ವಾಭಿಮುಖನಾಗಿ ನಿಂತು, ಶಿಷ್ಯನನ್ನೇ ನೋಡುತ್ತ, ಕಮಂಡಲುವನ್ನೂ, ಬಿಳಿಯದಾದ ಯಜ್ಞೋಪವೀತವನ್ನೂ ಕೈಗೆ ತೆಗೆದುಕೊಂಡು "ನೀನು ವಿಷ್ಣುವಿನ ಅನುಗ್ರಹದಿಂದ ದೀಕ್ಷೆಯನ್ನು ವಹಿಸಿ, ಸಿದ್ಧಿಯನ್ನು ಪಡೆದಿದ್ದೀಯೆ. ಕಮಂಡಲು ಮೊದಲಾದುವುಗಳನ್ನು ಕೈಗಳಿಂದ ತೆಗೆದುಕೊಂಡು ವೈಷ್ಣವ ಕರ್ಮವನ್ನೂ ವಿಷ್ಣುವಿನ ಮತ್ತು ವೈಷ್ಣವರ ಸೇವೆಯನ್ನೂ ಮಾಡುವುದಕ್ಕೂ ಅರ್ಹನಾಗಿದ್ದೀಯೆ" ಎಂಬರ್ಥದ "ವಿಷ್ಣುಪ್ರಸಾದೇನ........ಕ್ರಿಯಯಾಚೈವ" ಎಂಬ ಮೇಲಿನ (೬೫ ನೆಯ) ಮಂತ್ರವನ್ನು ಹೇಳಬೇಕು.

೬೬-೬೭. ಬಳಿಕ ದೀಕ್ಷಿತನಾದ ಶಿಷ್ಯನು ತನ್ನ ಮುಖವನ್ನು ದೇವರ ಮತ್ತು ಗುರುವಿನ ಪಾದದಲ್ಲಿರಿಸಿ, ಗುರುವಿನಿಂದ ಕೂಡಿ ಸರ್ವವನ್ನೂ ಪ್ರದಕ್ಷಿಣಮಾಡಿ, "ಅಧೋಽಧೋ ಭೂತ್ವಾ ಯದ್ಯಹಂ ಭ್ರಾಮ್ಯಂಲ್ಲಬ್ಧೋ ಗುರುರ್ವಿಷ್ಣುದೀಕ್ಷಾ ಚ ಲಬ್ಧಾ ತವ ಪ್ರಸಾದಾಚ್ಚ ಗುರೋ ಯಥಾ ಚ" ಎಂಬ ಮಂತ್ರವನ್ನು ಹೇಳಿ, ಮುಖವನ್ನು ದೇವರ ಮತ್ತು ಗುರುವಿನ ಪಾದದಲ್ಲಿಡಬೇಕು.

---

* ಪದಂ. (ಕ.)

ಶೌಚಸೇಕೇ ನ್ವೈ ಕುರ್ಯಾತ್* ದೇವಂತಂತುವಾಸಸಂ ॥ ೬೮ ॥

ಏವಂ ನ್ವೈ ವಾಸ ಆದತ್ತೇ ಗೃಹ್ಣ ವತ್ಸ ಕಮಂಡಲಂ ।
ಇಮಂ ಲೋಕೇಷು ವಿಖ್ಯಾತಂ ಶೋಧನಂ ಸರ್ವಕರ್ಮಸು ॥ ೬೯ ॥

ಮಂತ್ರಃ—

ಗೃಹ್ಣೀಷ್ವ ಗಂಧಪತ್ರಾಣಿ ಸರ್ವಗಂಧಂ ಸುಖೋಚಿತಂ ।
ಸರ್ವವೈಷ್ಣವಕಂ ಶುದ್ಧಂ ಸರ್ವಸಂಸಾರಮೋಕ್ಷಣಂ ।
ಮಧುಪರ್ಕಂ ಗೃಹೀತ್ವಾ ಚ ತ್ವಿಮಂ ಮಂತ್ರಮುದೀರಯೇತ್ ॥ ೭೦ ॥

ಮಂತ್ರಃ—

ಗೃಹಾಣ ಮಧುಪರ್ಕಂ ಚ ಪ್ರಾರ್ಥಕಾಯ ವಿಶೋಧನಂ ॥ ೭೧ ॥

೬೮-೬೯. ಗುರುವು ಶುಚಿಗಾಗಿ ಶಿಷ್ಯನಿಗೆ ಪ್ರೋಕ್ಷಿಸಿ, ಹೀಗೆ ವಸ್ತ್ರವನ್ನು ತೆಗೆದುಕೊಟ್ಟು, ವತ್ಸ, ಸರ್ವಕರ್ಮಗಳಲ್ಲೂ ಶುದ್ಧಿಕರವಾದ ಲೋಕಪ್ರಸಿದ್ಧವಾದ ಈ ಕಮಂಡಲವನ್ನು ತೆಗೆದುಕೊ" ಎಂದು ಯಜ್ಞೋಪವೀತವಸ್ತ್ರಧಾರಿಯನ್ನಾಗಿ ಮಾಡಬೇಕು.

೭೦. (ಬಳಿಕ ಶಿಷ್ಯನು ಗಂಧಪತ್ರಪುಷ್ಪಗಳನ್ನು ಕೈಗೆ ತೆಗೆದುಕೊಂಡು,) ಸರ್ವಗಂಧವುಳ್ಳವೂ, ಸುಖಕರವೂ, ಶುದ್ಧವೂ, ವಿಷ್ಣುಸಂಬಂಧವಾದುವೂ, ಸರ್ವ ಸಂಸಾರ ಮೋಕ್ಷಣವೂ, ಆದ ಗಂಧಪತ್ರಪುಷ್ಪಗಳನ್ನು ಸ್ವೀಕರಿಸು" ಎಂಬ ಅರ್ಥದ "ಗೃಹ್ಣೀಷ್ವಗಂಧಪತ್ರಾಣಿ ಮೋಕ್ಷಣಂ" ಎಂಬ ಮೇಲಿನ ೭೦ ನೆಯ ಮಂತ್ರವನ್ನು ಹೇಳಿ, (ದೇವರಿಗೂ ಗುರುವಿಗೂ) ಅರ್ಪಿಸಬೇಕು.

೭೧. ಮಧುಪರ್ಕವನ್ನು ತೆಗೆದುಕೊಂಡು, "ಗೃಹಾಣ ಮಧುಪರ್ಕಂ ಚ ಪ್ರಾರ್ಥಕಾಯ ವಿಶೋಧನಂ ।" ಎಂಬ ಮಂತ್ರವನ್ನು ಹೇಳಬೇಕು.

---

* ದ್ದೇವಾನ್ ಕರಿತುವಾಸನಂ (ಕ.)

ತತೋ ಗೃಹೀತ್ವಾ ಚರಣೌ ಗುರೋರ್ಯತ್ನಾತ್ಸ್ತೋಷಯೇತ್
ಶಿರಸಾ ಚಾಂಜಲಿಂ ಕೃತ್ವಾಮನಶ್ಚೈವ ಸುಸಂಯುತಂ ।
ಗುರೂಪದಿಷ್ಟಂ ಸಂಧಾರ್ಯ ಇಮಂ ಮಂತ್ರಮುದೀರಯೇತ್ ॥ ೭೨ ॥

ಮಂತ್ರಃ— ಶೃಣ್ವಂತು ಮೇ ಭಾಗವತಾಸ್ತು ಸರ್ವೇ
ಗುರುಶ್ಚ ಮೇ ಸರ್ವಕಾಮಕ್ಷಯಂ ಚಕಾರ
ಅಹಂ ಶಿಷ್ಯೋ ದಾಸಭೂತಸ್ತಥೈವ ।
ದೇವಸಮೋ ಗುರುಶ್ಚ ಮೇ ತಥೋಪಪನ್ನಂ ॥ ೭೩ ॥

ಏಷಾಗಮೋ ಬ್ರಾಹ್ಮಣಸ್ಯ ದೀಕ್ಷಾ ಭೂಮೇ ಹ್ಯುದಾಹೃತಾ ।
ತ್ರಯಾಣಾಮಥ ವರ್ಣಾನಾಂ ಮಮ ದೀಕ್ಷಾವಿಧಿಂ ಶೃಣು ॥ ೭೪ ॥

೭೨-೭೩. ಬಳಿಕ ಗುರುವಿನ ಪಾದಗಳನ್ನು ಪ್ರಯತ್ನ ಪೂರ್ವಕವಾಗಿ ಹಿಡಿದುಕೊಂಡು ಸಂತೋಷಪಡಿಸಬೇಕು. ಮನಸ್ಸನ್ನು ಸಮಾಧಾನದಿಂದ ಸ್ವಾಧೀನದಲ್ಲಿಟ್ಟುಕೊಂಡು, ತಲೆಬಾಗಿ ಕೈಮುಗಿದು ವಂದಿಸಿ, ಗುರುವು ಉಪದೇಶಿದುದನ್ನು ಚೆನ್ನಾಗಿ ಗ್ರಹಿಸಿ, " ಸರ್ವಭಾಗವತರೂ ನನ್ನ ವಿಜ್ಞಾಪನೆಯನ್ನು ಲಾಲಿಸಿರಿ. ದೇವಸಮಾನನಾದ ನನ್ನ ಗುರುವು ನನ್ನ ಸರ್ವಕಾಮಗಳನ್ನೂ ನಿವಾರಣೆಮಾಡಿದ್ದಾನೆ. ನಾನು ಈ ಗುರುವಿಗೆ ಶಿಷ್ಯನೂ ದಾಸನೂ ಆಗಿದ್ದೇನೆ " ಎಂಬ ಅರ್ಥವುಳ್ಳ " ಶೃಣ್ವಂತು ಮೇ ಭಾಗವತಾಸ್ತು ಸರ್ವೇ " ಎಂಬ ಮೇಲಿನ ೭೩ ನೆಯ ಮಂತ್ರವನ್ನು ಹೇಳಬೇಕು.

೭೪. ಭೂದೇವಿ, ಬ್ರಾಹ್ಮಣನಿಗೆ ಈ ದೀಕ್ಷೆಯನ್ನು ಆಗಮದಲ್ಲಿ ಹೇಳಿದೆ. ಇನ್ನು ಉಳಿದ ಮೂರು ವರ್ಣದವರು ನನ್ನ ದೀಕ್ಷೆಯನ್ನು ಪಡೆಯುವ ವಿಧಾನವನ್ನು ನೀನು ಮುಂದೆ ಕೇಳು(ವೆ).

ಏತೇನೈವ ವಿಧಾನೇನ ದೀಕ್ಷಯೇತ ವಸುಂಧರೇ ।
ಉಭೌ ಚ ಪ್ರಾಪ್ನುತಾಂ ಸಿದ್ಧಿಂ ಆಚಾರ್ಯಶ್ಶಿಷ್ಯ ಏವ ಚ ॥ ೭೫ ॥

ಇತಿ ಶ್ರೀವರಾಹಪುರಾಣೇ ಬ್ರಾಹ್ಮಣದೀಕ್ಷಾಸೂತ್ರಂ ನಾಮ
ಸಪ್ತವಿಂಶತ್ಯಧಿಕಶತತಮೋಽಧ್ಯಾಯಃ

---

೭೫. ವಸುಂಧರೇ, ಈ ವಿಧಾನದಿಂದಲೇ ಯಾರು ದೀಕ್ಷೆಯನ್ನು ಕೊಡುವನೊ, ಯಾರು ಪಡೆಯುವನೋ ಆ ಗುರುಶಿಷ್ಯರಿಬ್ಬರೂ ಸಿದ್ಧಿಯನ್ನು ಪಡೆಯಲಿ.

ಅಧ್ಯಾಯದ ಸಾರಾಂಶ:—

ಭೂದೇವಿಯು, ಮೋಕ್ಷಕಾರಣವಾದ ಧರ್ಮವನ್ನೂ, ದೀಕ್ಷಾಕ್ರಮವನ್ನೂ, ಕೇಳಲಾಗಿ, ಶ್ರೀವರಾಹನು ಅವಳಿಗೆ, ದೀಕ್ಷಿತರ ಧರ್ಮಗಳನ್ನೂ, ಬ್ರಾಹ್ಮಣ ದೀಕ್ಷೆಯ ವಿಧಾನವನ್ನೂ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರ ಇಪ್ಪತ್ತೇಳನೆಯ ಅಧ್ಯಾಯ.

॥ ಶ್ರೀಃ ॥

–X–

ಅಷ್ಟಾವಿಂಶತ್ಯಧಿಕಶತತಮೋಽಧ್ಯಾಯಃ

ಅಥ ಕಂಕತಾಂಜನದರ್ಪಣಂ

॥ ಶ್ರೀವರಾಹ ಉವಾಚ ॥

ಕ್ಷತ್ರಿಯಸ್ಯ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ತ್ಯಕ್ತ್ವಾ ಪ್ರಹರಣಾನ್ಸರ್ವಾನ್ ಯತ್ಕಿಂಚಿತ್ಪೂರ್ವಶಿಕ್ಷಿತಂ ।
ಪೂರ್ವಮಂತ್ರೇಣ ಮೇ ಭೂಮೇ ತಸ್ಯ ದೀಕ್ಷಾಂ ಚ ಕಾರಯೇತ್ ॥ ೧ ॥

ಮಯಾ ಚ ಪೂರ್ವಮುಕ್ತಾನಿ ಯಾನಿ ಸಂಸಾರಕಾಣಿ ಚ ।
ತಾನಿ ಸರ್ವಾಣಿಚಾನೀಯ ಏಕಂ ವರ್ಜ್ಯಂ ಯಶಸ್ವಿನಿ ॥ ೨ ॥

ನ ದದ್ಯಾತ್ಕೃಷ್ಣಸಾರಸ್ಯ ಚರ್ಮ ತತ್ರ ಕದಾಚನ ।
ಪಾಲಾಶಂ ದಂಡಕಾಷ್ಠಂ ಚ ದೀಕ್ಷಾಯಾಂ ನತು ಕಾರಯೇತ್ ॥ ೩ ॥

ನೂರಿಪ್ಪತ್ತೆಂಟನೆಯ ಅಧ್ಯಾಯ

ಕಂಕತಾಂಜನದರ್ಪಣ

೧. ಶ್ರೀವರಾಹ—ವಸುಂಧರೇ, ಕ್ಷತ್ರಿಯನ ದೀಕ್ಷಾಕ್ರಮವನ್ನು ಹೇಳುತ್ತೇನೆ. ಕೇಳು. ಪೂರ್ವದಲ್ಲಿ ಕಲಿತಿರುವ ಆಯುಧಗಳೆಲ್ಲವನ್ನೂ ಪೂರ್ತಿಯಾಗಿ ಪರಿತ್ಯಜಿಸಿದ ಬಳಿಕ ಕ್ಷತ್ರಿಯನಿಗೆ, ಮುಂಚೆ ಹೇಳಿರುವ ಮಂತ್ರದಿಂದಲೇ ದೀಕ್ಷೆಯನ್ನು ಮಾಡಿಸಬೇಕು.

೨–೪. ಕೀರ್ತಿವಂತೆ, ಬ್ರಾಹ್ಮಣದೀಕ್ಷೆಗೆ ನಾನು ಹೇಳಿದ ದ್ರವ್ಯಗಳಲ್ಲಿ ಒಂದೆರಡನ್ನು ಮಾತ್ರ ಬಿಟ್ಟು ಉಳಿದುದೆಲ್ಲವನ್ನೂ ತರಬೇಕು. ಕ್ಷತ್ರಿಯ ದೀಕ್ಷೆಯಲ್ಲಿ ಕೃಷ್ಣಾಜಿನವನ್ನೂ, ಮುತ್ತುಗ(ಪಾಲಾಶ)ದ ಕೋಲನ್ನೂ ಎಂದಿಗೂ

ಭಾಗಸ್ಯ ಚೈವ ಕೃಷ್ಣಸ್ಯ ಚರ್ಮ ತತ್ರ ಪ್ರದಾಪಯೇತ್ |
ಅಶ್ವತ್ಥಂ ದಂಡಕಾಷ್ಠಂ ತು ದೀಕ್ಷಾಯಾಂ ತದನಂತರಂ ॥ ೪ ॥

ಕೃತ್ವಾ ದ್ವಾದಶಹಸ್ತಾಂ ತು ವೇದೀಂ ತತ್ರೋಪಲೇಪಯೇತ್ ।
ಸರ್ವಂ ಮಮೋಕ್ತಂ ಕರ್ತವ್ಯಂ ಯಜ್ಞೇ ಮೇ ಪೂರ್ವಭಾಷಿತಂ ॥ ೫ ॥

ಏವಂ ಕ್ಷತ್ರಿಯದೀಕ್ಷಾಯಾಂ ಸರ್ವಂ ಸಂಪಾದ್ಯ ಯತ್ನತಃ ।
ಚರಣೌ ಮಮ ಸಂಗೃಹ್ಯ ಇಮಂ ಮಂತ್ರಮುದಾಹರೇತ್ ॥ ೬ ॥

ಮಂತ್ರಃ— ತ್ಯಕ್ತಾನಿ ವಿಷ್ಣೋ ಶಸ್ತ್ರಾಣಿ
ತ್ಯಕ್ತಂ ಸರ್ವಂ ಕ್ಷತ್ರಿಯಕರ್ಮ ಸರ್ವಂ ತ್ಯಕ್ತ್ವಾ ।
ದೇವಂ ವಿಷ್ಣುಂ ಪ್ರಪನ್ನೋಽಥ ಸಂಸಾರಾದ್ವೈ ಜನ್ಮನಾಂ ತಾರಯಸ್ವ ॥೭॥

ಏವಂ ತತೋ ವಚಶ್ಚೋಕ್ತ್ವಾ ಕ್ಷತ್ರಿಯೋ ಮಮ ಪಾರ್ಶ್ವತಃ ॥ ೮ ॥

ಉಪಯೋಗಿಸಕೂಡದು. ಅದಕ್ಕೆ ಬದಲಾಗಿ ಕರಿಯಹೋತನ ಚರ್ಮವನ್ನೂ, ಅಶ್ವತ್ಥದಂಡವನ್ನೂ (ಅರಳಿಯ ಕೋಲನ್ನೂ) ಉಪಯೋಗಿಸಬೇಕು.

೫. ಹನ್ನೆರಡು ಮೊಳದಳತೆಯ ಚಚ್ಚೌಕವಾದ ವೇದಿಕೆಯನ್ನು ರಚಿಸಿ, ಸಾರಿಸಿ, ಹಿಂದೆ ಬ್ರಾಹ್ಮಣದೀಕ್ಷೆಯಲ್ಲಿ ನಾನು ಹೇಳಿರುರುವುದೆಲ್ಲವನ್ನೂ ಅಲ್ಲಿ ಮಾಡಬೇಕು.

೬–೭. ಹೀಗೆ ಕ್ಷತ್ರಿಯ ದೀಕ್ಷೆಯಲ್ಲಿ ಪ್ರಯತ್ನಪೂರ್ವಕವಾಗಿ ಎಲ್ಲವನ್ನೂ ಸಂಪಾದಿಸಿ, ದೀಕ್ಷೆಯನ್ನು ಪಡೆಯುವವನು ನನ್ನ ಪಾದಗಳನ್ನು ಹಿಡಿದುಕೊಂಡು, " ವಿಷ್ಣುವೇ, ನಾನು ಶಸ್ತ್ರಗಳನ್ನು ತ್ಯಜಿಸಿದ್ದೇನೆ. ಕ್ಷತ್ರಿಯಕರ್ಮವೆಲ್ಲವನ್ನೂ ತ್ಯಜಿಸಿದ್ದೇನೆ. ಎಲ್ಲವನ್ನೂ ಬಿಟ್ಟು ವಿಷ್ಣುವಾದ ನಿನ್ನನ್ನು ಮರೆಹೊಕ್ಕಿದ್ದೇನೆ. ಇನ್ನು ಜನ್ಮಸಂಸಾರದಿಂದ ದಾಟಿಸು " ಎಂಬರ್ಥವುಳ್ಳ ಮೇಲಿನ " ತ್ಯಕ್ತಾನಿ.... ತಾರಯಸ್ವ " ಎಂಬ ಮೇಲಿನ ೭ ನೆಯ ಮಂತ್ರವನ್ನು ಹೇಳಬೇಕು.

೮-೧೦. ಹೀಗೆ ಹೇಳಿ, ಕ್ಷತ್ರಿಯನು ಮತ್ತೆ ಪಕ್ಕದಿಂದ ನನ್ನ ಎರಡು ಕಾಲುಗಳನ್ನೂ ಹಿಡಿದುಕೊಂಡು, " ದೇವದೇವ, ನಾನು ಇನ್ನು ಶಸ್ತ್ರವನ್ನು

ಉಭೌ ಚ ಚರಣೌ ಗೃಹ್ಯ ಇಮಂ ಮಂತ್ರಮುದೀರಯೇತ್ ॥ ೯ ॥

ಮಂತ್ರಃ— ನಾಹಂ ಶಸ್ತ್ರಂ ದೇವದೇವ ಸ್ಪೃಶಾಮಿ
ಪರಾಪವಾದಂ ನ ಚ ದೇವ ಬ್ರವೀಮಿ
ಕರ್ಮ ಕರೋಮಿ ಸಂಸಾರಮೋಕ್ಷಣಂ ।
ತ್ವಯಾ ಚೋಕ್ತಮೇವ ವರಾಹಸಂಸ್ಥಾನ್ ॥ ೧೦ ॥

ತತ ಏವಂ ವಚೋ ಬ್ರೂತೇ ಸರ್ವಂ ಚೈವಾತ್ರ ಪೂಜಯೇತ್ ।
ವಿಧಿಧೈರ್ಗಂಧಪತ್ರೈಶ್ಚ ಧೂಪೈಶ್ಚೈವ ಯಥೋದಿತಂ ॥ ೧೧ ॥

ಯಥೋಕ್ತೇನೈವ ತಾನ್ಭೂಮೇ ಭೋಜಯೇತ್ತದನಂತರಂ ।
ಶುದ್ಧಾನ್ಭಾಗವತಾಂಶ್ಚೈವ ಏವಮೇತನ್ನ ಸಂಶಯಃ ॥ ೧೨ ॥

ಏಷಾ ವೈ ಕ್ಷತ್ರಿಯೇ ದೀಕ್ಷಾ ದೇವಿ ಸಂಸಾರಮೋಕ್ಷಣಂ ।
ಮತ್ಪ್ರಸಾದೇನ ಕರ್ತವ್ಯಂ ಯದೀಚ್ಛೇತ್ಸಿದ್ಧಿಮುತ್ತಮಾಂ ॥ ೧೩ ॥

ಮುಟ್ಟುವುದಿಲ್ಲ. ಪರದೂಷಣೆಯನ್ನು ಮಾಡುವುದಿಲ್ಲ. ವರಾಹರೂಪಿಯಾದ ನೀನು ಹೇಳಿದ ಸಂಸಾರವಿಮೋಚಕವಾದ ಕರ್ಮವನ್ನೇ ಮಾಡುತ್ತೇನೆ." ಎಂಬರ್ಥದ ಮೇಲಿನ ೧೦ ನೆಯ ಮಂತ್ರವನ್ನು ಹೇಳಬೇಕು.

೧೧. ಹೀಗೆ ಮಂತ್ರವಾಕ್ಯವನ್ನು ಹೇಳಿ, ಬಳಿಕ, ಹಿಂದೆ ಹೇಳಿರುವಂತೆ ಬಗೆಬಗೆಯ ಗಂಧಪತ್ರಧೂಪ ಮೊದಲಾದುವುಗಳೆಲ್ಲದರಿಂದಲೂ ಪೂಜಿಸಬೇಕು.

೧೨. ಭೂದೇವಿ, ಬಳಿಕ ಶುದ್ಧರಾದ ಭಗವದ್ಭಕ್ತರಿಗೂ ಹೀಗೆಯೇ ಹಿಂದೆ ಹೇಳಿರುವ ಪದಾರ್ಥಗಳಿಂದಲೇ ಭೋಜನವನ್ನು ಮಾಡಿಸಬೇಕು.

೧೩. ದೇವಿ, ಇದೇ ಕ್ಷತ್ರಿಯನಿಗೆ ಸಂಸಾರಮೋಕ್ಷಕವಾದ ದೀಕ್ಷೆ, ನನ್ನ ಅನುಗ್ರಹದಿಂದ ಉತ್ತಮವಾದ ಸಿದ್ಧಿಯನ್ನು ಬಯಸುವುದಾದರೆ ಇದನ್ನು ಪಡೆಯಬೇಕು.

ವೈಶ್ಯಸ್ಯ ಚೈವ ವಕ್ಷ್ಯಾಮಿ ಶೃಣು ತತ್ವೇನ ಸುಂದರಿ ।
ದೀಕ್ಷಾ ಚ ಯಾದೃಶೀ ತಸ್ಯ ಯಥಾ ಭವತಿ ಸುಂದರಿ ॥ ೧೪ ॥

ತ್ಯಕ್ತ್ವಾ ತು ವೈಶ್ಯಕರ್ಮಾಣಿ ಮಮ ಕರ್ಮಪರಾಯಣಃ ।
ಯಥಾ ಚ ಲಭತೇ ಸಿದ್ಧಿಂ ತೃತೀಯಾಂ ವರ್ಣಸಂಸ್ಥಿತಿಃ ॥ ೧೫ ॥

ಸರ್ವಂ ತತ್ರ ಸಮಾನೀಯ ಯನ್ಮಯಾ ಪೂರ್ವಭಾಷಿತಂ ।
ದಶಹಸ್ತಾಂ ತತಃ ಕೃತ್ವಾ ವೇದೀಂ ವೇದವಿಚಕ್ಷಣಃ ॥ ೧೬ ॥

ಲೇಪಯೋದ್ಗೋಮಯೇನಾದೌ ಪೂರ್ವನ್ಯಾಯೇನ ತತ್ರ ವೈ ।
ಚರ್ಮಣಾಪಿ ತು ಛಾಗಸ್ಯ ಸ್ವಗಾತ್ರಂ ಪರಿವೇಷ್ಟಯೇತ್ ॥ ೧೭ ॥

ಉದುಂಬರಂ *ದಂಡಕಾಷ್ಠಂ ಗೃಹೀತ್ವಾ ದಕ್ಷಿಣೇ ಕರೇ ।
ಶುದ್ಧಭಾಗವತಾನಾಂ ಚ ಕೃತ್ವಾ ತ್ರಿಃ ಪರಿವರ್ತನಂ ॥ ೧೮ ॥

---

೧೪. ಸುಂದರಿ, ಇನ್ನು ವೈಶ್ಯನಿಗೆ ದೀಕ್ಷೆಯು ಹೇಗೆಂಬುದನ್ನು ಸರಿಯಾಗಿ ಹೇಳುತ್ತೇನೆ. ಕೇಳು.

೧೫. ಮೂರನೆಯ ವರ್ಣದವನಾದ ವೈಶ್ಯನು ನನ್ನ ಕರ್ಮಪರಾಯಣ ನಾಗಿದ್ದು, ಹೇಗೆ ಸಿದ್ಧಿಯನ್ನು ಪಡೆಯುವನೆಂಬುದನ್ನು ಹೇಳುತ್ತೇನೆ.

೧೬–೧೭. ವೇದದಿಂದ ತಿಳಿವಳಿಕೆಯನ್ನು ಪಡೆದವನು ಹತ್ತುಮೊಳ ದಳತೆಯ ಚೌಕವಾದ ದೀಕ್ಷಾವೇದಿಕೆಯನ್ನು ಮಾಡಿಸಿ, ಮೊದಲು ಗೋಮಯ ದಿಂದ ಸಾರಿಸಿ, ನಾನು ಹಿಂದೆ ಹೇಳಿರುವ ಪದಾರ್ಥಗಳೆಲ್ಲವನ್ನು ಅಲ್ಲಿಗೆ ತಂದಿರಿ ಸಬೇಕು.ದೀಕ್ಷೆಯನ್ನು ಪಡೆಯುವ ವೈಶ್ಯನು ಗಂಡು ಆಡಿನ ಚರ್ಮವನ್ನು ಧರಿಸಬೇಕು.

೧೮–೨೨. ಅತ್ತಿಯ ಕೋಲನ್ನು ಬಲಗಯ್ಯಲ್ಲಿ ಹಿಡಿದುಕೊಂಡು, ಶುದ್ಧ ರಾದ ಭಾಗವತರನ್ನೂ, ದೇವರನ್ನೂ ಮೂರುಸಾರಿ ಪ್ರದಕ್ಷಿಣಮಾಡಿ, ಬಳಿಕ

---

* ದಂತಕಾಷ್ಠಂ

ಜಾನುಭ್ಯಾಮವನಿಂ ಗತ್ವಾ ಇಮಂ ಮಂತ್ರಮುದೀರಯೇತ್ || ೧೯ ||

ಮಂತ್ರಃ— ಅಹಂ ಹಿ ವೈಶ್ಯೋ ಭವಂತಮುಪಾಗತಃ
ಪ್ರಮುಚ್ಯ ಕರ್ಮಾಣಿ ಚ ವೈಶ್ಯಯೋಗಂ |
ದೀಕ್ಷಾ ಚ ಲಬ್ಧಾ ಭಗವತ್ಪ್ರಸಾದಾತ್ ।
ಪ್ರಸೀದತಾಂ ಮೇ ಭವಬಂಧಮೋಕ್ಷಣಂ ॥ ೨೦ ॥

ಮಾಮೇವಂ ಸೋಽಪಿ ಚೋಕ್ತ್ವಾತ್ವೈ ಮಮ ಕರ್ಮಪ್ರಸಾದವಾನ್ ।
ಗುರೋಶ್ಚ ಚರಣೌ ಗೃಹ್ಯ ಇಮಂ ಮಂತ್ರಮುದಾಹರೇತ್ || ೨೧ ||

ತ್ಯಕ್ತ್ವಾ ವೈ ಕೃಷಿಗೋರಕ್ಷಾ ವಾಣಿಜ್ಯಕ್ರಯವಿಕ್ರಯಂ |
ಲಬ್ಧಾ ಚ ತ್ವತ್ಪ್ರಸಾದೇನ ವಿಷ್ಣುದೀಕ್ಷಾ ಮಯಾಧುನಾ || ೨೨ ||

ದೇವಾಭಿವಾದನಂ ಕೃತ್ವಾ ಪುರೋ ಭಾಗವತೇಷು ಚ ।
ಪಶ್ಚಾತ್ತು ಭೋಜನಂ ದದ್ಯಾದಪರಾಧಬಹಿಷ್ಕೃತಂ ॥ ೨೩ ॥

ಏವಂ ದೀಕ್ಷಾ ತು ವೈಶ್ಯಾನಾಂ ಮಮ ಮಾರ್ಗಾನುಸಾರಿಣಾಂ ।
ಯಯಾ ಮುಚ್ಯಂತಿ ಸುಶ್ರೋಣಿ ಘೋರಸಂಸಾರಸಾಗರಾತ್ ॥ ೨೪ ॥

ನೆಲದ ಮೇಲೆ ಮೊಳಕಾಲೂರಿ ಬಾಗಿ, "ವೈಶ್ಯನಾದ ನಾನು ವೈಶ್ಯಕರ್ಮಗಳನ್ನೂ, ಸಂಬಂಧವನ್ನೂ ತ್ಯಜಿಸಿ, ನಿನ್ನನ್ನು ಆಶ್ರಯಿಸಿದ್ದೇನೆ. ಭಗವದನುಗ್ರಹದಿಂದ ದೀಕ್ಷೆಯೂ ಲಭಿಸಿತು. ನನಗೆ ಸಂಸಾರಬಂಧನದಿಂದ ಬಿಡುಗಡೆಯನ್ನು ದಯೆಪಾಲಿಸು" ಎಂಬರ್ಥದ ೧೯ ನೆಯ ಮಂತ್ರವನ್ನು ಹೇಳಿ, ನನ್ನನ್ನು ಪ್ರಾರ್ಥಿಸಿ, ಗುರುವಿನ ಪಾದಗಳನ್ನು ಹಿಡಿದುಕೊಂಡು, "ಕೃಷಿ, ಗೋರಕ್ಷಣ, ವಾಣಿಜ್ಯಕ್ರಯ ವಿಕ್ರಯಗಳನ್ನು ಪರಿತ್ಯಜಿಸಿ, ನಿನ್ನ ಅನುಗ್ರಹದಿಂದ ಈಗ ವಿಷ್ಣುದೀಕ್ಷೆಯನ್ನು ಪಡೆದೆನು" ಎಂಬರ್ಥದ ಮೇಲಿನ (೨೨ ನೆಯ) ಮಂತ್ರವನ್ನು ಹೇಳಬೇಕು.

೨೩. ಬಳಿಕ ದೇವರಿಗೂ, ಭಗವದ್ಭಕ್ತರ ಸಮೂಹದೆದುರಿಗೂ ವಂದಿಸಿ, ಅನಂತರ ದೋಷರಹಿತವಾದ ಭೋಜನವನ್ನು ಮಾಡಿಸಬೇಕು.

೨೪. ಸುಶ್ರೋಣಿ, ಇದೇ, ನನ್ನ ಮಾರ್ಗವನ್ನನುಸರಿಸುವ ವೈಶ್ಯರು ಘೋರವಾದ ಸಂಸಾರಸಾಗರದಿಂದ ಪಾರಾಗುವ ದೀಕ್ಷೆ.

ಶೂದ್ರಸ್ಯಾಪಿ ಪ್ರವಕ್ಷ್ಯಾಮಿ ಮದ್ಭಕ್ತಸ್ಯ ವರಾಂಗನೇ ।
ಯಸ್ತು ದೀಕ್ಷಾಂ ಸಮಾಸಾದ್ಯ ಮುಚ್ಯತೇ ಸರ್ವಕಿಲ್ಬಿಷೈಃ ॥ ೨೫ ॥

ಸರ್ವಸಂಸ್ಕಾರದ್ರವ್ಯಾಣಿ ಮಯಾ ಪೂರ್ವೋದಿತಾನಿ ಚ ।
ದೀಕ್ಷಾಕಾಮಸ್ಯ ಶೂದ್ರಸ್ಯ ಶೀಘ್ರಂ ತಾನಿ ಪ್ರಕಲ್ಪಯೇತ್ ॥ ೨೬ ॥

ಅಷ್ಟಹಸ್ತಾಂ ತತೋ ದೇವಿ ಸಂಲಿಪ್ಯ ನೀಯತಾಂ ತತಃ ।
ಚರ್ಮ ನೀಲಸ್ಯ ಛಾಗಸ್ಯ ಕಲ್ಪಯೇಚ್ಛೂದ್ರಯೋನಯೇ ॥ ೨೭ ॥

ದಂಡಂ ಚ *ವೈಣವಂ ದದ್ಯಾನ್ನೀಲಂ ವಸ್ತ್ರಂ ಚ ತಸ್ಯ ವೈ ॥ ೨೮ ॥

ಏವಂ ಗೃಹೀತ್ವಾ ಶೂದ್ರೋಽಪಿ ದೀಕ್ಷಾಯಾಃ ಕಾರಣಂ ಪರಂ ।
ಮಮೈವ ಶರಣಂ ಗತ್ವಾ ಇಮಂ ಮಂತ್ರಮುದಾಹರೇತ್ ॥ ೨೯ ॥

---

೨೫. ವರಾಂಗನೇ, ನನ್ನ ಭಕ್ತನಾದ ಶೂದ್ರನು ಹೇಗೆ ದೀಕ್ಷೆಯನ್ನು ಪಡೆದು, ಸರ್ವಪಾಪಗಳಿಂದಲೂ ಮುಕ್ತನಾಗಬಹುದೋ ಆ ಕ್ರಮವನ್ನು ಹೇಳುತ್ತೇನೆ.

೨೬–೨೮. ದೇವಿ, ಎಂಟುಮೊಳದಳತೆಯ ಚೌಕವಾದ ವೇದಿಕೆಯನ್ನು ಮಾಡಿಸಿ, ಗೋಮಯದಿಂದ ಸಾರಿಸಿ, ನಾನು ಹಿಂದೆ ಹೇಳಿರುವ ಬ್ರಾಹ್ಮಣ ದೀಕ್ಷಾಸಂಸ್ಕಾರದ್ರವ್ಯಗಳೆಲ್ಲವನ್ನೂ ಶೂದ್ರದೀಕ್ಷೆಗೂ ಸಿದ್ಧಮಾಡಿ, ಆ ವೇದಿಕೆಯಲ್ಲಿ ತಂದಿರಿಸಬೇಕು. ಶೂದ್ರಜಾತಿಯವನಿಗೆ ನೀಲಿಯಬಣ್ಣದ ಹೋತನ ಚರ್ಮವನ್ನೂ, ಬಿದಿರಿನ ಕೋಲನ್ನೂ, ನೀಲಿಯಬಣ್ಣದ ವಸ್ತ್ರವನ್ನೂ ದೀಕ್ಷೆಯಲ್ಲಿ ಧರಿಸಲು ಕೊಡಬೇಕು.

೨೯–೩೦. ಶೂದ್ರನು ಅವುಗಳನ್ನು ದೀಕ್ಷೆಗಾಗಿ ತೆಗೆದುಕೊಂಡು, ನನ್ನನ್ನೇ ಮುಖ್ಯವಾಗಿ ಮರೆಹೊಕ್ಕು, “ಶೂದ್ರನಾದ ನಾನು ಶೂದ್ರಕರ್ಮಗಳನ್ನೂ,

---

* ವೈಷ್ಣವಂ.

ಮಂತ್ರಃ—
ಶೂದ್ರೋಽಹಂ ಶೂದ್ರಕರ್ಮಾಣಿ ಮುಕ್ತ್ವಾಽಭಕ್ಷ್ಯಂ ಚ ಸರ್ವಶಃ |
ಭಕ್ಷ್ಯಾಭಕ್ಷ್ಯಂ ತತಸ್ತ್ಯಕ್ತ್ವಾ ತ್ಯಕ್ತ್ವಾ ವೈ ಶೂದ್ರಕರ್ಮ ಚ || ೩೦ ||

ಏವಂ ವದೇತ್ತತೋ ದೇವಂ ಶೂದ್ರೋ ದೀಕ್ಷಾಭಿಕಾಂಕ್ಷಿಣಂ
ವಿಮುಕ್ತಸ್ಸರ್ವಪಾಪೇಭ್ಯೋ ಲಬ್ಧಸಂಜ್ಞೋ ಗತಸ್ಪೃಹಃ |
ಉಭೌತೌ ಚರಣೌ ಗೃಹ್ಯ ಗುರೋರ್ವೈ ತದನಂತರಂ || ೩೧ ||

ಗುರೋಃ ಪ್ರಸಾದನಾರ್ಥಾಯ ಇಮಂ ಮಂತ್ರಮುದಾಹರೇತ್ || ೩೨ ||

ಮಂತ್ರಃ— ವಿಷ್ಣುಪ್ರಸಾದೇ ಗುಹ್ಯಂ ಪ್ರಸನ್ನಾತ್ಪೂರ್ವವಚ್ಚ |
ಲಬ್ಧಾ ಚೈವ ಸಂಸಾರಮೋಕ್ಷಣಾಯ ಕರೋಮಿ ಕರ್ಮ ಪ್ರಸೀದ || ೩೩ ||

ಏತನ್ಮಂತ್ರಂ ಸಮುಚ್ಚಾರ್ಯ ಕುರ್ಯಾತ್ತತ್ರ ಪ್ರದಕ್ಷಿಣಾಂ |
ಚತುರಶ್ಚ ಯಥಾನ್ಯಾಯಂ ಪುನಶ್ಚೈವಾಭಿವಾದಯೇತ್ || ೩೪ ||

ಅಭಕ್ಷ್ಯಭಕ್ಷಣಾದಿಗಳನ್ನೂ ಬಿಟ್ಟು, ಬಂದಿದ್ದೇನೆ" ಎಂಬರ್ಥವುಳ್ಳ ಮೇಲಿನ "ಶೂದ್ರೋಽಹಂ ....ಶೂದ್ರಕರ್ಮಚ" ಎಂಬ (ಮೇಲಿನ ೩೦ ನೆಯ) ಮಂತ್ರವನ್ನು ಹೇಳಬೇಕು.

೩೧-೩೩. ಅದರಿಂದ ಸರ್ವಪಾಪಗಳನ್ನೂ ಕಳೆದುಕೊಂಡು, ಬೇರೆಯ ಆಸೆಗಳನ್ನುಳಿದು, ಜ್ಞಾನವನ್ನು ಪಡೆದ ಅವನು ಗುರುವಿನ ಅನುಗ್ರಹಕ್ಕಾಗಿ ಆತನ ಎರಡು ಕಾಲುಗಳನ್ನೂ ಹಿಡಿದುಕೊಂಡು, "ವಿಷ್ಣುಪ್ರಸಾದೇ ಗುಹ್ಯಂ ಪ್ರಸನ್ನಾತ್ಪೂರ್ವವಚ್ಚ ಲಬ್ಧಾ ಚೈವ ಸಂಸಾರಮೋಕ್ಷಣಾಯ ಕರೋಮಿ ಕರ್ಮ ಪ್ರಸೀದ" ಎಂಬ ಈ (ಮೇಲಿನ ೩೩ ನೆಯ) ಮಂತ್ರವನ್ನು ಹೇಳಬೇಕು.

೩೪. ಈ ಮಂತ್ರವನ್ನು, ಹೇಳಿ ಕ್ರಮವಾಗಿ ನಾಲ್ಕುಸಾರಿ ಅಲ್ಲಿ ಪ್ರದಕ್ಷಿಣ ಮಾಡಿ, ಮತ್ತೆ ನಮಸ್ಕರಿಸಬೇಕು.

ಅನಂತರತ್ನತಃ ಕುರ್ಯಾದ್ಗಂಧಮಾಲ್ಯೇನ ಚಾರ್ಚನಂ ।
ಭೋಜಯೇಚ್ಚ ಯಥಾನ್ಯಾಯಮಪರಾಧವಿವರ್ಜಿತಃ ॥ ೩೫ ॥

ದೀಕ್ಷಾ ಏಷಾ ಚ ಶೂದ್ರಾಣಾಮುಪಚಾರಶ್ಚ ಈದೃಶಃ ।
ಚತುರ್ಣಾಮಪಿ ವರ್ಣಾನಾಂ ದುಃಖಸಂಸಾರಮೋಕ್ಷಣಂ ॥ ೩೬ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ಚತುರ್ಣಾಮಪಿ ವರ್ಣಾನಾಂ ಯಥಾ ಛತ್ರಂ ಪ್ರದೀಯತೇ ॥ ೩೭ ॥

ಬ್ರಾಹ್ಮಣೇ ಪಾಂಡುರಂ ಛತ್ರಂ ಕ್ಷತ್ರಿಯೇ ರಕ್ತಮೇವ ಚ ।
ವೈಶ್ಯಾಯ ಪೀತಂ ವೈ ದದ್ಯಾನ್ನೀಲಂ ಶೂದ್ರಾಯ ದಾಪಯೇತ್ ॥ ೩೮ ॥

---

೩೫. ಅನಂತರತ್ನಗಳಿಂದಲೂ, ಗಂಧಮಾಲ್ಯಾದಿಗಳಿಂದಲೂ ದೇವನನ್ನೂ ಗುರುವನ್ನೂ ಅರ್ಚಿಸಿ, ದೋಷವಿಲ್ಲದಂತೆ ವಿಧಿವತ್ತಾಗಿ ಭೋಜನವನ್ನು ಮಾಡಿಸಬೇಕು.

೩೬. ಶೂದ್ರರ ದೀಕ್ಷೆಯ ಕ್ರಮವೂ, ಅವರು ಮಾಡಬೇಕಾದ ಉಪಚಾರ ಕ್ರಮವೂ ಇದೇ. ನಾಲ್ಕುವರ್ಣದವರಿಗೂ ಈ ದೀಕ್ಷೆಯು ದುಃಖ ಸಂಸಾರ ಮೋಕ್ಷಕವಾದುದು.

೩೭. ವಸುಂಧರೇ, ನಾಲ್ಕುವರ್ಣದವರಿಗೂ ಎಂತಹ ಛತ್ರಿಯನ್ನು ಕೊಡಬೇಕೆಂಬ ಬೇರೊಂದು ವಿಚಾರವನ್ನೂ ಹೇಳುತ್ತೇನೆ. ಕೇಳು.

೩೮ ಬ್ರಾಹ್ಮಣನಿಗೆ ಬಿಳಿಯ ಕೊಡೆಯನ್ನೂ, ಕ್ಷತ್ರಿಯನಿಗೆ ಕೆಂಪುಕೊಡೆಯನ್ನೂ, ವೈಶ್ಯನಿಗೆ ಹಳದಿಯ(ಪೀತವರ್ಣದ) ಕೊಡೆಯನ್ನೂ, ಶೂದ್ರನಿಗೆ ನೀಲಿಯ ಕೊಡೆಯನ್ನೂ ಕೊಡಬೇಕು.

|| ಸೂತ ಉವಾಚ ||

ಚಾತುರ್ವರ್ಣ್ಯಸ್ಯ ಶ್ರುತ್ವಾ ವೈ ಸಾ ಮಹೀ ಶಂಸಿತವ್ರತಾ |
ವರಾಹಂ ಪುನರಪ್ಯಾಹ ನತ್ವಾ ಸಾ ಧರಣೀ ತದಾ || ೩೯ ||

|| ಧರೋವಾಚ ||

ಶ್ರುತಾ ದೀಕ್ಷಾ ಯಥಾನ್ಯಾಯಂ ಚಾತುರ್ವರ್ಣ್ಯಸ್ಯ ಕೇಶವ |
ದೀಕ್ಷಿತೈಃ ಕಿಂ ನು ಕರ್ತವ್ಯಂ ತವ ಕರ್ಮಪರಾಯಣೈಃ || ೪೦ ||

ತತೋ ಮಹೀವಚಃ ಶ್ರುತ್ವಾ ಮೇಘದುಂದುಭಿನಿಸ್ವನಃ |
ವರಾಹರೂಪೀ ಭಗವಾನುವಾಚ ಸ ಮಹಾದ್ಯುತಿಃ || ೪೧ ||

|| ಶ್ರೀವರಾಹ ಉವಾಚ ||

ಶೃಣು ತತ್ತ್ವೇನ ಕಲ್ಯಾಣಿ ಯನ್ಮಾಂ ತ್ವಂ ಪರಿಪೃಚ್ಛಸಿ |
ಸರ್ವತ್ರ ಚಿಂತನೀಯೋಽಹಂ ಗುಹ್ಯಮೇವ ಗಣಾಂತಿಕಂ || ೪೨ ||

---

೩೯. ಸೂತಮುನಿ—ಸ್ತೋತ್ರಾರ್ಹವ್ರತೆಯಾದ ಆ ಭೂದೇವಿಯು ನಾಲ್ಕು ವರ್ಣದವರ ದೀಕ್ಷೆಯ ವಿಚಾರವನ್ನೂ ಕೇಳಿ, ಶ್ರೀವರಾಹನಿಗೆ ನಮಸ್ಕರಿಸಿ, ಮತ್ತೆ ನುಡಿದಳು.

೪೦. ಭೂದೇವಿ—ಕೇಶವಾ, ಬ್ರಾಹ್ಮಣಾದಿ ನಾಲ್ಕುವರ್ಣದವರ ದೀಕ್ಷೆಯ ವಿಚಾರವನ್ನು ಕ್ರಮವಾಗಿ ಕೇಳಿದೆನು. ನಿನ್ನ ಕರ್ಮಗಳಲ್ಲಾಸಕ್ತರಾದ ದೀಕ್ಷಿತರ ಕರ್ತವ್ಯವೇನು ?

೪೧. ಭೂದೇವಿಯ ಮಾತನ್ನು ಕೇಳಿ, ವರಾಹರೂಪಿಯೂ, ಮಹಾಕಾಂತಿವಂತನೂ, ಮೇಘದುಂದುಭಿಗಳಂತೆ ಗಂಭೀರವಾದ ಧ್ವನಿಯುಳ್ಳವನೂ ಆದ ಭಗವಂತನು ಆಕೆಗೆ ಹೇಳಿದನು.

೪೨. ಶ್ರೀವರಾಹ—ಕಲ್ಯಾಣಿ, ನೀನು ನನ್ನಲ್ಲಿ ಪ್ರಶ್ನಿಸಿರುದನ್ನು ನಿಜವಾಗಿ ಕೇಳು. ಎಲ್ಲೂ ಯಾವಾಗಲೂ ನನ್ನನ್ನೇ ಧ್ಯಾನಿಸಬೇಕು. ಈ ಗಣಾಂತಿಕವೆಂಬುದು ಗೂಢವಾದುದು.

ನಾರಾಯಣವಚಃ ಶ್ರುತ್ವಾ ಧರಣೀ ಶಂಸಿತವ್ರತಾ ।
ಹೃಷ್ಟತುಷ್ಟಮನಾಸ್ತತ್ರ ಶ್ರುತ್ವಾ ತತ್ರ ಮಹೌಜಸಂ ॥ ೪೩ ॥

ಶುಚಿರ್ಭಾಗವತಶ್ರೇಷ್ಠಾ ತವ ಕರ್ಮಣಿ ನಿತ್ಯಶಃ ।
ತತಃ ಕಮಲಪತ್ರಾಕ್ಷೀ ಭಕ್ತಾಭಕ್ತೇಷು ವತ್ಸಲಾ ॥ ೪೪ ॥

ಕರಾಭ್ಯಾಮಂಜಲಿಂ ಕೃತ್ವಾ ನಾರಾಯಣಮಥಾಬ್ರವೀತ್ ॥ ೪೫ ॥

॥ ಧರಣ್ಯುವಾಚ ॥

ತ್ವದ್ಭಕ್ತೇನ ಮಹಾಭಾಗ ವಿಧಿನಾ ದೀಕ್ಷಿತೇನ ಚ ।
ತವ ಚಿಂತಾಪರೇಣಾತ್ರ ಕಿಂ ಕರ್ತವ್ಯಂ ಚ ಮಾಧವ ॥ ೪೬ ॥

ಕೇನ ಚಿಂತಯಿತವ್ಯಸ್ತ್ವಮಚಿಂತ್ಯೋ ಮಾನುಷ್ಯೈಃ ಪರಃ ।
ಕಿಂ ಚ ಭಾಗವತೈಃ ಕಾರ್ಯಂ ಯಥಾ ವಿತ್ತಂ ನ ಶಕ್ಯತೇ ॥ ೪೭ ॥

೪೩-೪೫. ನಾರಾಯಣನ ಮಾತನ್ನು ಕೇಳಿ, ಸತ್ಯವ್ರತೆಯೂ, ಶುದ್ಧೆಯೂ, ಭಗವದ್ಭಕ್ತರಲ್ಲಿ ಶ್ರೇಷ್ಠಳೂ, ಸದಾ ಕರ್ಮಾಸಕ್ತಳೂ, ಭಕ್ತರಲ್ಲೂ, ಅಭಕ್ತರಲ್ಲೂ ವಾತ್ಸಲ್ಯವುಳ್ಳವಳೂ, ಕಮಲದಳನೇತ್ರೆಯೂ, ಆದ ಭೂದೇವಿಯು ಅತಿ ತೇಜೋಬಲಗಳುಳ್ಳ ಗಣಾಂತಿಕವೆಂಬುದನ್ನು ಕೇಳಿ, ಸಂತೋಷದಿಂದುಬ್ಬಿದ ಮನವುಳ್ಳವಳಾಗಿ, ಕೈಗಳನ್ನು ಮುಗಿದುಕೊಂಡು ಆ ನಾರಾಯಣನಿಗೆ ಮತ್ತೆ ನುಡಿದಳು.

೪೬-೪೭. ಭೂದೇವಿ— ಮಹಾಭಾಗ, ಮಾಧವ, ನಿನ್ನ ಭಕ್ತನೂ, ವಿಧಿಪೂರ್ವಕವಾಗಿ ದೀಕ್ಷಿತನೂ, ನಿನ್ನ ಧ್ಯಾನಾಸಕ್ತನೂ ಆದವನು ಈ ಲೋಕದಲ್ಲಿ ಮಾಡಬೇಕಾದುದೇನು? ಪರನೂ, ಅಚಿಂತ್ಯನೂ ಆದ ನಿನ್ನನ್ನು ಯಾರು ಹೇಗೆ ಚಿಂತಿಸಬೇಕು? ಧನವಿಲ್ಲದೆ ಭಾಗವತರು ಮಾಡಬೇಕಾದುದೇನು?

ತತೋ ಭೂಮ್ಯಾ ವಚಃ ಶ್ರುತ್ವಾ ಆದಿರವ್ಯಕ್ತಸಂಭವಃ ।
ಮಧುರಂ ಸ್ವರಮಾದಾಯ ಪ್ರತ್ಯುವಾಚ ವಸುಂಧರಾಂ ॥ ೪೮ ॥

॥ ಶ್ರೀವರಾಹ ಉವಾಚ ॥

ದೇವಿ ತತ್ತ್ವೇನ ವಕ್ಷ್ಯಾಮಿ ಯನ್ಮಾಂ ತ್ವಂ ಪರಿಪೃಚ್ಛಸಿ ।
ಯೇನ ಚಿಂತಯಸೇ ಚಿಂತಾಂ ಮಮ ಕರ್ಮಪರಾಯಣಾ ॥ ೪೯ ॥

ಏಷಾ ಗಣಾಂತಿಕಾ ನಾಮ ದೀಕ್ಷಾಂಗಬೀಜನಿಸ್ಸೃತಾ ।
ಏತದ್ಗುಹ್ಯಾಂ ಮಹಾಭಾಗೇ ಮಮ ಚಿಂತಾಂ ವಿಚಿಂತಯೇತ್ ॥ ೫೦ ॥

ದೀಕ್ಷಿತೇನ ತು ಶುದ್ಧೇನ ಮಮ ನಿಶ್ಚಿತಕರ್ಮಣಾ ।
ಗೃಹೀತವ್ಯಂ ವಿಶಾಲಾಕ್ಷಿ ಮಂತ್ರೇಣ ವಿಧಿನಾತ್ರ ವೈ ॥ ೫೧ ॥

ಯಸ್ತು ಭಾಗವತೋ ಭೂತ್ವಾ ತದ್ಗೃಹ್ಣಾತಿ ಗಣಾಂತಿಕಂ ।
ಜನಸ್ಯ ದರ್ಶನಸ್ಪರ್ಶಸಂಯುಕ್ತಾಂ ನಾಮಸಂಯುತಾಂ ॥ ೫೨ ॥

---

೪೮. ಭೂದೇವಿಯ ಮಾತನ್ನು ಕೇಳಿ, ಲೋಕಕ್ಕೆ ಆದಿಯೂ, ಅವ್ಯಕ್ತ ಜನ್ಮನೂ ಆದ ಶ್ರೀವರಾಹನು ಇಂಪಾದ ಧ್ವನಿಯಿಂದ ಆ ವಸುಂಧರೆಗೆ ಉತ್ತರ ವಿತ್ತನು.

೪೯. ಶ್ರೀವರಾಹ—ದೇವಿ, ನನ್ನ ಕರ್ಮದಲ್ಲಿ ನಿರತಳಾದ ನೀನು ಹೀಗೆ ಚಿಂತಿಸುತ್ತಿರುವೆಯಾದುದರಿಂದ ನನ್ನನ್ನು ಕೇಳುತ್ತಿರುವುದನ್ನು ನಿಜವಾಗಿ ಹೇಳುತ್ತೇನೆ.

೫೦. ನಾನು ಹೇಳುವ ಈ ಗಣಾಂತಿಕವೆಂಬ ದೀಕ್ಷೆಯು ಅಂಗಬೀಜದಿಂದ ಉದಿಸಿದುದು. ಮಹಾಭಾಗ್ಯೇ, ರಹಸ್ಯವಾದ ಆ ಗಣಾಂತಿಕವನ್ನೇ ನನ್ನ ಧ್ಯಾನ ವೆಂದು ತಿಳಿಯಬೇಕು.

೫೧. ವಿಶಾಲಾಕ್ಷಿ, ಸ್ಥಿರಕರ್ಮನೂ, ಶುದ್ಧನೂ ನನ್ನ ದೀಕ್ಷಿಕನೂ ಆದ ವನು, ಮಂತ್ರವಿಧಿಯಿಂದ ಅದನ್ನು ಪರಿಗ್ರಹಿಸಬೇಕು.

೫೨-೫೪. ಸುಂದರಿ, ಯಾರು ಭಾಗವತನಾಗಿದ್ದೂ, ಸಾಮಾನ್ಯಜನರು ನೋಡಿ ಮುಟ್ಟಿರುವ ಅಥವಾ ಮುಟ್ಟುವಂತೆ ಶಾಸ್ತ್ರವಿರುದ್ಧವಾಗಿ ಅಥವಾ ಪ್ರತಿ

ತಸ್ಯ ಧರ್ಮೋನ ವಿದ್ಯೇತ ದೀಕ್ಷಾ ತಸ್ಯ ಮಹಾಫಲಾ ।
ಯಸ್ತು ಗೃಹ್ಣಾತಿ ಸುಶ್ರೋಣಿ ಮಂತ್ರಾಪೂತಾಂ ಗಣಾಂತಿಕಾಂ ॥ ೫೩ ॥

ಆಸುರೀ ನಾಮ ಸಾ ದೀಕ್ಷಾ ಯಯಾ ಧರ್ಮಃ ಪ್ರವರ್ತತೇ ।
ತಸ್ಮಾದ್ಗಣಾಂತಿಕಾಂ ಗುಹ್ಯಾಂ ಚಿಂತಯೇಚ್ಛುದ್ಧಮಾನಸಃ ॥ ೫೪ ॥

ಗುಹ್ಯಾಂ ಗಣಾಂತಿಕಾಂ ಯೋ ಮಾಂ ಚಿಂತಯೇತ್ಸ ಬುಧೋತ್ತಮಃ ।
ಜನ್ಮಾಂತರಸಹಸ್ರಾಣಿ ಚಿಂತಿತಾ ತೇನ ತೇನ ಸಃ ॥ ೫೫ ॥

ಗ್ರಹಣಸ್ಯ ಪ್ರವಕ್ಷ್ಯಾಮಿ ಯಥಾ ಶಿಷ್ಯಾಯ ದೀಯತೇ ।
ಮಂತ್ರಂ ಲೋಕಸುಖಾರ್ಥಾಯ ತಚ್ಛೃಣುಷ್ವ ವಸುಂಧರೇ ॥ ೫೬ ॥

ಕೌಮುದಸ್ಯ ತು ಮಾಸಸ್ಯ ಮಾರ್ಗಶೀರ್ಷಸ್ಯ ವಾಪ್ಯಥ
ವೈಶಾಖಸ್ಯಾಪಿ ಮಾಸಸ್ಯ ಶುಕ್ಲಪಕ್ಷೇ ತು ದ್ವಾದಶೀ ॥ ೫೭ ॥

ಕೂಲವಾಗಿ ಗಣಾಂತಿಕದೀಕ್ಷಾಮಾಲೆಯನ್ನು ಧರಿಸುವನೋ ಅವನಿಗೆ ಧರ್ಮವೂ ಇರುವುದಿಲ್ಲ. ಮಹಾಫಲವನ್ನುಂಟುಮಾಡುವ ದೀಕ್ಷೆಯೂ ಇರುವುದಿಲ್ಲ. ಮಂತ್ರದಿಂದ ಪವಿತ್ರವಲ್ಲದ ಎಂದರೆ ಅಮಂತ್ರಕವಾದ ಗಣಾಂತಿಕವನ್ನು ಪರಿಗ್ರಹಿಸುವುದು ಆಸುರೀ (ರಾಕ್ಷಸ) ದೀಕ್ಷೆಯೆನಿಸುವುದು. ಆದುದರಿಂದ ಧರ್ಮಪ್ರವರ್ತಕವಾದ ಗಣಾಂತಿಕವನ್ನು ಶುದ್ಧಮನದಿಂದ ಸಮಂತ್ರಕವಾಗಿ ಭಾವಿಸಬೇಕು.

೫೫. ಯಾವನು ಗಣಾಂತಿಕವನ್ನೇ ನನ್ನನ್ನಾಗಿ ಭಾವಿಸುವನೋ (ಅಥವಾ ಗಣಾಂತಿಕವನ್ನು ಧರಿಸಿ, ನನ್ನನ್ನು ಧ್ಯಾನಿಸುವನೋ) ಅವನು ಪಂಡಿತೋತ್ತಮನು. ಅವನು ಸಾವಿರಜನ್ಮಗಳಲ್ಲಿ ನನ್ನನ್ನು ಧ್ಯಾನಿಸಿದಂತಾಗುವುದು.

೫೬. ವಸುಂಧರೇ, ಗಣಾಂತಿಕವನ್ನು ಹೇಗೆ ಗ್ರಹಿಸಬೇಕು, ಶಿಷ್ಯನಿಗೆ ಅನುಗ್ರಹಿಸಬೇಕು ಎಂಬುದನ್ನೂ, ಅದಕ್ಕೆ ಬೇಕಾದ ಮಂತ್ರವನ್ನೂ ಲೋಕೋಪಕಾರಕ್ಕಾಗಿ ಹೇಳುತ್ತೇನೆ. ಕೇಳು.

೫೭–೫೮. ಕಾರ್ತಿಕಮಾಸ, ಮಾರ್ಗಶಿರಮಾಸ, ಅಥವಾ ವೈಶಾಖಮಾಸದ ಶುಕ್ಲಪಕ್ಷದ ದ್ವಾದಶಿಯದಿನ, ಮೂರು ದಿನಗಳಿಂದಲೂ ಮಾಂಸಾಹಾರವನ್ನು

ಕುರ್ಯಾರ್ನ್ನಿರಾಮಿಷಂ ತತ್ರ ದಿನಾನಿ ತ್ರೀಣಿ ನಿಶ್ಚಿತಃ
ತಸ್ಮಿನ್ಗಣಾಂತಿಕಂ ಗ್ರಾಹ್ಯಂ ಮಮ ಧರ್ಮವಿನಿಶ್ಚಯಾತ್ ॥ ೫೮ ॥

ಮಮಾಗ್ರತೋ ವರಾರೋಹೇ ಪ್ರಜ್ವಾಲ್ಯ ಚ ಹುತಾಶನಂ ।
ಕುಶೈರಾಸ್ತರಣಂ ಕೃತ್ವಾ ಸ್ಥಾಪಯಿತ್ವಾ ಗಣಾತಿಕಂ ॥ ೫೯ ॥

ತತಶ್ಶಿಷ್ಯೋ ಗುರುಶ್ಚೈವ ದೀಕ್ಷಿತಶ್ಶುಚಿರುತ್ತಮಃ ।
ನಮೋ ನಾರಾಯಣೇತ್ಯುಕ್ತ್ವಾ ಇಮಂ ಮಂತ್ರಮುದೀರಯೇತ್ ॥ ೬೦ ॥

ಮಂತ್ರಃ— ಯಾ ಧಾರಿತಾ ಪೂರ್ವಪಿತಾಮಹೇನ
ಬ್ರಹ್ಮಣ್ಯದೇವೇನ ಭವೋದ್ಭವೇನ ।
ನಾರಾಯಣಾದ್ದಕ್ಷಿಣಗಾತ್ರಜಾತಾಂ
ಸ್ವಶಿಷ್ಯ ಗೃಹ್ಣೀಷ್ವ ಸ ವೈ ತ್ವಮೇವ ॥ ೬೧ ॥

ತತ ಏತೇನ ಮಂತ್ರೇಣ ಗುರುರ್ಗೃಹ್ಯ ಗಣಾಂತಿಕಂ ।
ಶಿಷ್ಯಾಯ ದತ್ವಾ ಸ್ನಿಗ್ಧಾಯ ಇಮಂ ಮಂತ್ರಮುದೀರಯೇತ್ ॥ ೬೨ ॥

ಮುಟ್ಟದವನಾಗಿ, ಧರ್ಮದಲ್ಲಿ ನಂಬಿಕೆಯುಳ್ಳವನಾಗಿ ಸ್ಥಿರಮನಸ್ಸಿನಿಂದ ಗಣಾಂತಿಕವನ್ನು ಪರಿಗ್ರಹಿಸಬೇಕು.

೫೯-೬೩. ವರಾರೋಹೇ, ನನ್ನೆದುರಿಗೆ ಅಗ್ನಿಯನ್ನು ಪ್ರತಿಷ್ಠೆಮಾಡಿ, ಉರಿಸಿ, ಅಗ್ನಿಯ ಸಮೀಪದಲ್ಲಿ ದರ್ಭೆಗಳನ್ನು ಹಾಸಿ, ಗಣಾಂತಿಕವನ್ನು ಸ್ಥಾಪಿಸಿ, ಬಳಿಕ ದೀಕ್ಷಿತರಾದ ಗುರುಶಿಷ್ಯರು 'ನಮೋ ನಾರಾಯಣಾಯ' ಎಂದು ಹೇಳಿ, "ಯಾ ಧಾರಿತಾ ಪೂರ್ವಪಿತಾಮಹೇನ । ....ಸ್ವಶಿಷ್ಯ ಗೃಹ್ಣೀಷ್ವ ಸ ವೈ ತ್ವಮೇವ ॥" ಎಂಬ ಮೇಲಿನ ೬೧ನೆಯ ಮಂತ್ರದಿಂದ ಗುರುವು ಗಣಾಂತಿಕಮಾಲೆಯನ್ನು ಕೈಗೆತ್ತಿಕೊಂಡು, ಪ್ರೀತಿಪಾತ್ರನಾದ ಶಿಷ್ಯನಿಗೆ ಕೊಟ್ಟು,

ಮಂತ್ರಃ— ನಾರಾಯಣಸ್ಯ ದಕ್ಷಿಣಗಾತ್ರಜಾತಾಂ
ಸ್ವಶಿಷ್ಯ ಗೃಹ್ಣೀಷ್ವ ಸಮಯೇನ ದೇವೀಂ ।
ಏತದ್ಧಿ ಚಿಂತ್ಯಾಪರ ಏವ ಭೂತ್ವಾ
ಭವೇ ಪುನರ್ಭಾವನಮೇತಿ ನೈವ ॥ ೬೩ ॥

॥ ಧರಣ್ಯುವಾಚ ॥

ಸ್ನಾನೋಪಕಲ್ಪನಾಂತೇಷು ಕಿಂ ಕರ್ತವ್ಯಂ ತು ಮಾಧವ ।
ಪ್ರಸಾಧನವಿಧಿಂ ಚೈವ ಕೇನ ಮಂತ್ರೇಣ ಕಲ್ಪಯೇತ್ ॥ ೬೪ ॥

ಅಕರ್ಮಣ್ಯೇನ ಮುಚ್ಯೇತ ತವ ಕರ್ಮಪರಾಯಣಃ ॥ ೬೫ ॥

ತತೋ ಭೂಮ್ಯಾ ವಚಃ ಶ್ರುತ್ವಾ ಲೋಕನಾಥೋ ಜನಾರ್ದನಃ ।
ಧರ್ಮಸಂಯುಕ್ತವಾಕ್ಯೇನ ಪ್ರತ್ಯುವಾಚ ವಸುಂಧರಾಂ ॥ ೬೬ ॥

॥ ಶ್ರೀವರಾಹ ಉವಾಚ ॥

ದೇವಿ ತತ್ವೇನ ವಕ್ಷ್ಯಾಮಿ ಯನ್ಮಾಂ ತ್ವಂ ಪರಿಪೃಚ್ಛಸಿ ।
ಸ್ನಾನಸ್ಯೈವೋಪಚಾರಾಣಿ ಯಾನಿ ಕುರ್ವಂತಿ ಕರ್ಮಿಣಃ ॥ ೬೭ ॥

"ನಾರಾಯಣಸ್ಯ ದಕ್ಷಿಣಗಾತ್ರಜಾತಾಂ । ....ಭವೇ ಪುನರ್ಭಾವನಮೇತಿ ನೈವ ॥" ಎಂಬ ಮೇಲಿನ ೬೩ ನೆಯ ಮಂತ್ರವನ್ನು ಹೇಳಬೇಕು.

೬೪-೬೫. ಭೂದೇವಿ—ಮಾಧವ, ನಿನಗೆ ಸ್ನಾನವನ್ನು ಮಾಡಿಸಿದನಂತರ ಏನು ಮಾಡಬೇಕು? ಅಲಂಕಾರಕಾರ್ಯವನ್ನು ಯಾವ ಮಂತ್ರದಿಂದ ಮಾಡಬೇಕು? ನಿನ್ನ ಕರ್ಮಗಳಲ್ಲಿ ನಿರತನಾದವನು ಹೇಗೆ ನಡೆದರೆ ಕರ್ಮಾನರ್ಹ ವಿಷಯಗಳಿಂದ ತಪ್ಪಿಸಿಕೊಳ್ಳುವನು?

೬೬. ಲೋಕನಾಥನಾದ ಶ್ರೀ ವರಾಹನು ಭೂದೇವಿಯ ಮಾತನ್ನು ಕೇಳಿ, ಬಳಿಕ ಧರ್ಮಯುಕ್ತವಾದ ಮಾತುಗಳಿಂದ ಅವಳಿಗೆ ಮತ್ತೆ ಹೇಳಿದನು.

೬೭. ಶ್ರೀ ವರಾಹ—ದೇವಿ, ನೀನು ಕೇಳುವುದರಿಂದ ಕರ್ಮಾಸಕ್ತರು ಮಾಡುವ ಸ್ನಾನದ ಉಪಚಾರಗಳನ್ನೇ ಹೇಳುತ್ತೇನೆ.

ವೃತ್ತೇಷ್ವೇವೋಪಚಾರೇಷು ಜಲಪ್ರಾಧಾನಿಕೇಷು ಚ |
ಕಂಕತೀಂ ಚಾಂಜನಂ ಚೈವ ದರ್ಪಣಂ ಚೈವ ಸುಂದರಿ || ೧೮ ||

ಯಥಾಮಂತ್ರೇಣ ದಾತವ್ಯಂ ತಚ್ಛೃಣುಷ್ವ ವಸುಂಧರೇ || ೧೯ ||

ಸ್ಪೃಷ್ಟ್ವಾ ತು ಮಮ ಗಾತ್ರಾಣಿ ಕ್ಷೌಮವಸ್ತ್ರೇಣ ಸಂವೃತಃ |
ಅಂಜನಂ ಕಂಕತೀಂ ಚೈವ ಶೀಘ್ರಮೇವ ಪ್ರಸಾದಯೇತ್ || ೨೦ ||

ತತೋ ಜಾನುಸ್ಥಿತೋ ಭೂತ್ವಾ ಮಮ ಕರ್ಮಪರಾಯಣಃ |
ಅಂಜಲೌ ಕಂಕತೀಂ ಗೃಹ್ಯ ಇಮಂ ಮಂತ್ರಮುದಾಹರೇತ್ || ೨೧ ||

ಮಂತ್ರಃ— ಏತಾಂ ಕಂಕತೀಮಂಜಲಿಸ್ಥಾಂ |
ಪ್ರಗೃಹ್ಯ ಪ್ರಸೀದ ನಾರಾಯಣ ಶಿರಃ ಪ್ರಸಾಧಿ ಹಿ || ೨೨ ||

೧೮-೧೯. ಸುಂದರಿ, ಮುಖ್ಯವಾಗಿ ನೀರನ್ನುಪಯೋಗಿಸಿ ಮಾಡುವ ಉಪಚಾರಗಳೆಲ್ಲಾ ನಡೆದ ಮೇಲೆ, ಬಾಚಣಿಗೆಯನ್ನೂ, ಕಣ್ಣುಕಪ್ಪನ್ನೂ, ಕನ್ನಡಿಯನ್ನೂ ಹೇಗೆ ಮಂತ್ರದಿಂದ ಅರ್ಪಿಸಬೇಕೆಂಬುದನ್ನು ಕೇಳು.

೨೦. ಪಟ್ಟೆಯ ವಸ್ತ್ರವನ್ನು ಧರಿಸಿದವನಾಗಿ, ನನ್ನ ಅವಯವಗಳನ್ನು ಮುಟ್ಟಿ, ಕಾಡಿಗೆಯನ್ನೂ, ಬಾಚಣಿಗೆಯನ್ನೂ ಬೇಗನೆ ಅಲಂಕರಿಸಬೇಕು.

೨೧-೨೨. ನನ್ನ ಕರ್ಮಗಳಲ್ಲಿ ನಿರತನಾದ ಅವನು ಮೊಳಕಾಲೂರಿ ನಿಂತು ಬೊಗಸೆಯಲ್ಲಿ ಬಾಚಣಿಗೆಯನ್ನು ಇಟ್ಟುಕೊಂಡು, " ನಾರಾಯಣ, ನನ್ನ ಬೊಗಸೆಯಲ್ಲಿರುವ ಈ ಬಾಚಣಿಗೆಯನ್ನು ಪರಿಗ್ರಹಿಸಿ, ಶಿರಸ್ಸನ್ನು ಅಲಂಕರಿಸು. " ಎಂಬರ್ಥವುಳ್ಳ " ಏತಾಂ ಕಂಕತೀಂ.........ಪ್ರಸಾಧಿ ಹಿ " ಎಂಬ ಮಂತ್ರವನ್ನು ಹೇಳಬೇಕು.

ಮಹಾನುಭಾವ ವಿಶ್ವನೇತ್ರೇ ಸ್ವನೇತ್ರೇ
ಯಾಭ್ಯಾಂ ಪಶ್ಯಸಿ ತ್ವಂ ತ್ರಿಲೋಕೀಂ
ಲೋಕಪ್ರಭೋ ಸರ್ವಲೋಕಪ್ರಧಾನ ।
ಏಷೋಂಜನಮಂಜನಂ ಲೋಕನಾಥ ॥ ೭೩ ॥

ತತಸ್ಸಂಸ್ನಾಪಯೇದ್ದೇವಂ ಮಂತ್ರೇಣಾನೇನ ಸುವ್ರತಃ ॥ ೭೪ ॥

ಮಂತ್ರಃ— ದೇವ ದೇವ ಸ್ನಾನೀಯಮಿದಂ ।
ಮಮ ಕಲ್ಪಿತಂ ಸುವರ್ಣಕಲಶಂ ಗೃಹಾಣ ಪ್ರಸೀದ ।
ಏಷೋಂಜಲಿರ್ಮಯಾ ಪರಿಕಲ್ಪಿತಃ ಸ್ನಾಹಿ ಸ್ನಾಹೀತಿ ॥೭೫॥

ನಮೋ ನಾರಾಯಣೇತ್ಯುಕ್ತ್ವಾ ಇಮಂ ಮಂತ್ರಮುದೀರಯೇತ್ ॥ ೭೬ ॥

---

೭೩. “ಮಹಾನುಭಾವ, ಲೋಕಪ್ರಭೂ, ಸರ್ವಲೋಕಪ್ರಧಾನ, ಲೋಕನಾಥ, ಯಾವುದರಿಂದ ನೀನು ಮೂರು ಲೋಕವನ್ನೂ ನೋಡುತ್ತೀಯೋ ಆ, ಪ್ರಪಂಚನೇತ್ರವಾದ ನಿನ್ನ ನೇತ್ರಕ್ಕೆ ಈ ಕಪ್ಪು, ಕಣ್ಣುಕಪ್ಪು” ಎಂಬರ್ಥದ “ಮಹಾನುಭಾವ........ಲೋಕನಾಥ” ಎಂಬ ಮಂತ್ರವನ್ನು ಹೇಳಿ, ಕಣ್ಣುಕಪ್ಪನ್ನು ಅರ್ಪಿಸಬೇಕು.

೭೪-೭೫. ಬಳಿಕ ಸುವ್ರತಿಯಾದವನು, “ದೇವದೇವ, ನಾನು ಸಿದ್ಧಪಡಿಸಿರುವ ಸುವರ್ಣಕಲಶದ ಸ್ನಾನೋದಕವನ್ನು ಪರಿಗ್ರಹಿಸು. ಪ್ರಸನ್ನನಾಗು. ಕೈ ಮುಗಿಯುತ್ತೇನೆ. ಸ್ನಾನಮಾಡು, ಸ್ನಾನಮಾಡು” ಎಂಬರ್ಥವುಳ್ಳ “ದೇವದೇವ........ಸ್ನಾಹಿ” ಎಂಬ ಮಂತ್ರದಿಂದ ಅಭಿಷೇಕ ಮಾಡಬೇಕು.

೭೬-೭೭. ‘ನಮೋ ನಾರಾಯಣಾಯ’ ಎಂದು ಹೇಳಿ, “ಮಾಧವ, ನಿನ್ನ ಅನುಗ್ರಹದಿಂದಲೂ, ಗುರುವಿನ ಅನುಗ್ರಹದಿಂದಲೂ ಈ ಮಂತ್ರಪೂಜೆಯೂ

ಮಂತ್ರಃ— ಏಷಾ ಮಯಾ ಮಾಧವ ತ್ವತ್ಪ್ರಸಾದಾ
ದ್ಗುರುಪ್ರಸಾದಾಚ್ಚ ಹಿ ಮಂತ್ರಪೂಜಾ
ಪ್ರಾಪ್ತಾ ಮಯ್ಯೈಷಾ ಚ ಗಣಾಂತಿಕಾ ವೈ ।
ಭವೇದಧರ್ಮೋ ನ ಚ ಮೇಕದಾಚಿತ್ ॥ ೭೭ ॥

ಯ ಏತೇನ ವಿಧಾನೇನ ಮಮ ಕರ್ಮಣಿ ದೀಕ್ಷಿತಃ ।
ಗುರೋರ್ಗೃಹೀತ್ವಾ ಮಹತೋ ಮ[illegible] ಲೋಕಾಯ ಗಚ್ಛತಿ ॥ ೭೮ ॥

ಕುಶಿಷ್ಯಾಯ ನ ದಾತವ್ಯಾ ಪಿಶುನಾಯ ಶಠಾಯ ಚ
*ಏಷಾ ಚೈವ ವರಾರೋಹೇ ಗೃಹೀತ್ವಾ ಗಣನಾಂತಿಕಾ ।
ಸುಶಿಷ್ಯಾಯ ಚ ದಾತವ್ಯಾ ಹಸ್ತೇ ಚೈವ ಗಣಾಂತಿಕಾ ॥ ೭೯ ॥

ಉತ್ತಮಾಷ್ಟಾಧಿಕಶತಂ ಪಂಚಾಶತ್ತುರ್ಯಮಧ್ಯಮಾ ।
ತದರ್ಧಂ ಸ್ಯಾತ್ಕನಿಷ್ಠಾ ಪಿ ಪರಿಮಾಣೇನ ಸುಂದರಿ ॥ ೮೦ ॥

ಗಣಾಂತಿಕವೂ ನನಗೆ ಲಭಿಸಿತು. ಎಂದಿಗೂ ನನ್ನದು ಅಧರ್ಮವಾಗದಿರಲಿ." ಎಂದು ಅರ್ಥವುಳ್ಳ "ಏಷಾಮಯಾ........" ಎಂಬ ಮೇಲಿನ ೭೭ ನೆಯ ಮಂತ್ರ ವನ್ನು ಹೇಳಬೇಕು

೭೮. ಯಾರು ಈ ವಿಧಾನದಿಂದ ಮಹಾತ್ಮನಾದ ಗುರುವಿನಿಂದ ಗಣಾಂತಿಕವನ್ನು ಪಡೆದು, ನನ್ನ ಕರ್ಮದಲ್ಲಿ ದೀಕ್ಷಿತನಾಗಿರುವನೋ ಅವನು ನನ್ನ ಲೋಕವನ್ನು ಸೇರುವನು.

೭೯. ಗುರುವು ಈ *ಗಣಾಂತಿಕವನ್ನು ಪಿಶುನನೂ, ದುಷ್ಟನೂ, ಆದ ಕೆಟ್ಟ ಶಿಷ್ಯನಿಗೆ ಕೊಡಬಾರದು. ಯೋಗ್ಯನಾದ ಶಿಷ್ಯನ ಕೈಯಲ್ಲೇ ಕೊಡಬೇಕು

೮೦–೮೧. ದೇವಿ, ರುದ್ರಾಕ್ಷಿಗಳಾದರೆ ಉತ್ತಮ, ಪುತ್ರಜೀವಮಣಿಗಳು ಮಧ್ಯಮ, ತಾವರೆಯಮಣಿಗಳು ಅಧಮ. ಗಣಾಂತಿಕಮಾಲೆಯನ್ನು ಈ ಮಣಿ

---

* ಗಣಾಂತಿಕದೀಕ್ಷೆಯ ವಿಚಾರವು ಸ್ಪಷ್ಟವಾಗಿ ತಿಳಿಯುವಂತಿಲ್ಲ. ರುದ್ರಾಕ್ಷಿ ಪುತ್ರ ಜೀವಕಾದಿ ಮಣಿಗಳಿಂದ ಮಾಡಬೇಕೆಂದಿರುವುದರಿಂದ ವೈಷ್ಣವ ದೀಕ್ಷೆಯನ್ನು ಪಡೆದವನು ಬಳಿಕ ಪಡೆಯಬಹುದಾದ ಧ್ಯಾನ (ಜಪ) ಮಾಲಾಧಾರಣವ್ರತವೆಂದು ತೋರುತ್ತದೆ.

ರುದ್ರಾಕ್ಷೈರುತ್ತಮಾ ಸಾ ತು ಮಧ್ಯಮಾ ಪುತ್ರಜೀವಕೈಃ ।
ಜ್ಞೇಯಾ ಕನಿಷ್ಠಾ ಪದ್ಮಾಕ್ಷೈಃ ದೇವಿ ತೇ ಕಥಿತಾ ಮಯಾ ॥ ೮೧ ॥

ಏತತ್ಕಶ್ಚಿನ್ನ ಜಾನಾತಿ ಜನ್ಮಾಂತರ ಶತೈರಪಿ ।
ಸರ್ವಲೋಕಾಹಿತಾಂ ಶುದ್ಧಾಂ ಮೋಕ್ಷಕಾಮಾಂ ಗಣಾಂತಿಕಾಂ ॥ ೮೨ ॥

ನೋಚ್ಛಿಷ್ಟಸ್ಸಂಸ್ಪೃಶೇತ್ತಾಂ ತು ಸ್ತ್ರೀಣಾಂ ಹಸ್ತೇ ನ ಕಾರಯೇತ್ ।
ಆಕಾಶೇ ಸ್ಥಾಪನಂ ಕುರ್ಯಾನ್ನ ಚ ವಾಮೇನ ಸಂಸ್ಪೃಶೇತ್ ॥ ೮೩ ॥

ನ ದರ್ಶಯೇಚ್ಚ ಕಸ್ಯಾಪಿ ಚಿಂತಯಿತ್ವಾತು ಪೂಜಯೇತ್ ।
ಏತತ್ತೇ ಪರಮಂ ಗುಹ್ಯಮಾಖ್ಯಾತಂ ಮೋಕ್ಷದಾಯಕಂ ॥ ೮೪ ॥

ಏವಂ ಹಿ ವಿಧಿಪೂರ್ವೇಣ ಪಾಲಯೇತ ಗಣಾಂತಿಕಾಂ ।
ವಿಶುದ್ಧೋ ಮಮ ಭಕ್ತಶ್ಚ ಮಮ ಲೋಕಂ ಸ ಗಚ್ಛತಿ ॥ ೮೫ ॥

ಗಳಲ್ಲಿ ನೂರೆಂಟರಿಂದ ಮಾಡುವುದು ಉತ್ತಮ. ಐವತ್ತನಾಲ್ಕರಿಂದಲಾದರೆ ಮಧ್ಯಮ. ಇಪ್ಪತ್ತೇಳರಿಂದ ಕನಿಷ್ಠವೆನಿಸುವುದು.

೮೨. ಸರ್ವಲೋಕಹಿತವೂ, ಶುದ್ಧವೂ, ಮೋಕ್ಷಕಾಮಕವೂ ಆದ ಗಣಾಂತಿಕದೀಕ್ಷೆಯನ್ನು ನೂರು ಜನ್ಮಗಳಿಂದಲೂ ಯಾವನೂ ತಿಳಿಯನು.

೮೩–೮೪. ಗಣಾಂತಿಕಮಾಲೆಯನ್ನು ಎಂಜಲಿಗೆಯವನು ಮುಟ್ಟಬಾರದು. ಸ್ತ್ರೀಯರ ಕೈಯಲ್ಲೂ ಮುಟ್ಟಿಸಬಾರದು. ಧರಿಸದೆ ಇರುವಾಗ ನೆಲಕ್ಕೆ ತಾಕದಂತೆ ತೂಗುಹಾಕಬೇಕು. ಎಡಗಯ್ಯಿಂದ ಅಥವಾ ಶಾಸ್ತ್ರವಿರುದ್ಧ ರೀತಿಯಿಂದ ಮುಟ್ಟಬಾರದು. ಯಾರಿಗೂ ತೋರಿಸಬಾರದು. ಧ್ಯಾನಿಸಿ (ಜಪವನ್ನು ಮಾಡಿ) ಪೂಜಿಸಬೇಕು. ಮೋಕ್ಷವನ್ನು ಕೊಡುವ ಈ ಪರಮ ರಹಸ್ಯವನ್ನು ನಿನಗೆ ಹೇಳಿದ್ದೇನೆ.

೮೫. ಹೀಗೆ ವಿಧಿಪೂರ್ವಕವಾಗಿ ಗಣಾಂತಿಕದೀಕ್ಷೆಯನ್ನು ಪರಿಪಾಲಿಸುವ ಪರಿಶುದ್ಧನಾದ ನನ್ನ ಭಕ್ತನು ನನ್ನ ಲೋಕವನ್ನು ಸೇರುವನು.

ಏವಂ ವಿಷ್ಣೋರ್ವಚಃ ಶ್ರುತ್ವಾ ಧರಣೀ ಶಂಸಿತವ್ರತಾ ।
ಪ್ರತ್ಯುವಾಚ ಪರಂ ಶ್ರೇಷ್ಠಂ ಲೋಕನಾಥಂ ಮಹೌಜಸಂ || ೮೬ ||

ದರ್ಪಣಂ ತೇ ಕಥಂ ದೇಯಂ ತನ್ಮಮಾಖ್ಯಾಹಿ ಮಾಧವ |
ಯೇನ ತುಷ್ಟೋ ನಿಜಂ ರೂಪಂ ಪಶ್ಯಸೇ ಚಿಂತಿತಃ ಪ್ರಭೋ || ೮೭ ||

ಧರಣ್ಯಾಸ್ತದ್ವಚಃ ಶ್ರುತ್ವಾ ವರಾಹಃ ಪುನರಬ್ರವೀತ್ |
ಶೃಣು ಮೇ ದರ್ಪಣವಿಧಿಂ ಯಥಾವದ್ದೇವಿ ಸುವ್ರತೇ || ೮೮ ||

ನಮೋ ನಾರಾಯಣೇತ್ಯುಕ್ತ್ವಾ ಇಮಂ ಮಂತ್ರಮುದೀರಯೇತ್ || ೮೯ ||

ಮಂತ್ರಃ— ಶ್ರುತಿರ್ಭಾಗವತೀ ಶ್ರೇಷ್ಠಾ
ಶ್ರುತೀ ಅಗ್ನಿರ್ದ್ವಿಜಶ್ಚ ತವ ಮುಖಂ ನಾಸೇಶ್ವಿನೌ ನಯನೇ
ಚಂದ್ರಸೂರ್ಯೌ ಮುಖಂ ಚ ಚಂದ್ರ ಇವ
ಗಾತ್ರಾಣಿ ಜಗತ್ಪ್ರಧಾನಾನೀಮಂ ಚ ದರ್ಪಣಂ ।
ಪಶ್ಯ ಪಶ್ಯ ರೂಪಂ || ೯೦ ||

---

೮೬. ವಿಷ್ಣುವಿನ ಈ ಮಾತನ್ನು ಕೇಳಿ, ಸ್ತುತ್ಯವ್ರತೆಯಾದ ಭೂದೇವಿಯು ಮಹಾತೇಜನೂ, ಪರನೂ, ಶ್ರೇಷ್ಠನೂ ಆದ ಆ ಲೋಕನಾಥನನ್ನು ನೋಡಿ ಮಾತನಾಡಿದಳು.

೮೭. “ಪ್ರಭುವೇ, ಮಾಧವಾ, ನಿನಗೆ ಮನಸ್ಸಾದರೆ ಸಂತೋಷದಿಂದ ನಿನ್ನ ರೂಪವನ್ನು ನೋಡಿಕೊಳ್ಳಲನುಕೂಲವಾದ ಕನ್ನಡಿಯನ್ನು ನಿನಗೆ ಹೇಗೆ ಅರ್ಪಿಸಬೇಕೆಂಬುದನ್ನು ನನಗೆ ಹೇಳು.”

೮೮. ಭೂದೇವಿಯ ಮಾತನ್ನು ಕೇಳಿ, ಶ್ರೀವರಾಹನು ಆಕೆಗೆ ಮತ್ತೆ ಹೇಳಿದನು. ಸುವ್ರತೆ, ದೇವಿ, ನನಗೆ ಕನ್ನಡಿಯನ್ನರ್ಪಿಸುವ ಕ್ರಮವನ್ನು ಸರಿಯಾಗಿ ಕೇಳು.

೮೯–೯೦. ‘ನಮೋ ನಾರಾಯಣಾಯ’ ಎಂದು ಹೇಳಿ, “ಶ್ರುತಿರ್ಭಾಗವತೀ ಶ್ರೇಷ್ಠಾ ಶ್ರುತೀ ಅಗ್ನಿರ್ದ್ವಿಜಶ್ಚ ತವ ಮುಖಂ ನಾಸೇಶ್ವಿನೌನಯನೇ ಚಂದ್ರಸೂರ್ಯೌ ಮುಖಂ ಚ ಚಂದ್ರ ಇವಗಾತ್ರಾಣಿ ಜಗತ್ಪ್ರಧಾನಾನೀಮಂ ಚ ದರ್ಪಣಂ ಪಶ್ಯ ಪಶ್ಯ ರೂಪಂ |” ಎಂಬ ಮಂತ್ರವನ್ನು ಹೇಳಬೇಕು.

ಯ ಏತೇನ ವಿಧಾನೇನ ಮಮ ಕರ್ಮಪರಾಯಣಃ ।
ಕರೋತಿ ಮಮ ಕರ್ಮಾಣಿ ತಾರಿತಂ ಕುಲಸಪ್ತಕಂ ॥ ೯೧ ॥

ಮಂತ್ರೇಣೈತೇನ ವೈ ಭೂಮೇ ಉಪಚಾರಸ್ತು ಈದೃಶಃ ।
ಹೃಷ್ಟತುಷ್ಟೇನ ಕರ್ತವ್ಯೋ ಯದೀಚ್ಛೇತ್ಪರಮಾಂ ಗತಿಂ ॥ ೯೨ ॥

ಇತಿ ಶ್ರೀವರಾಹಪುರಾಣೇ ಕಂಕತಾಂಜನ ದರ್ಪಣಂ ನಾಮ ಅಷ್ಟಾವಿಂಶತ್ಯಧಿಕ ಶತತಮೋಽಧ್ಯಾಯಃ

---

೯೧. ನನ್ನ ಕರ್ಮಗಳಲ್ಲಿ ನಿರತನಾದ ಯಾರು ಈ ವಿಧಾನದಿಂದ ನನ್ನ ಪೂಜಾದಿಕರ್ಮವನ್ನು ಮಾಡುವನೋ ಅವನು ತನ್ನ ಏಳುಕುಲದವರನ್ನೂ ಸಂಸಾರಸಾಗರದಿಂದ ದಾಟಿಸುವನು.

೯೨. ಭೂಮೀ, ಪರಮಗತಿಯನ್ನು ಬಯಸುವುದಾದರೆ ಭಕ್ತಿಸಂತೋಷಗಳಿಂದ ಈ ಮಂತ್ರದಿಂದ ನನಗೆ ಹೀಗೆ ಉಪಚಾರವನ್ನು ಮಾಡಬೇಕು.

ಅಧ್ಯಾಯದ ಸಾರಾಂಶ:—

ಶ್ರೀವರಾಹನು ಭೂದೇವಿಗೆ ಕ್ಷತ್ರಿಯ ವೈಶ್ಯ ಶೂದ್ರರ ದೀಕ್ಷಾಕ್ರಮವನ್ನೂ ದೀಕ್ಷಿತರ ಕರ್ತವ್ಯಗಳನ್ನೂ, ದೇವರಿಗೆ ಮಾಡಬೇಕಾದ ಉಪಚಾರಕ್ರಮವನ್ನೂ ಹೇಳುವಲ್ಲಿಗೆ ಶ್ರೀವರಾಹ ಪುರಾಣದಲ್ಲಿ ನೂರ ಇಪ್ಪತ್ತೆಂಟನೆಯ ಅಧ್ಯಾಯ.

॥ ಶ್ರೀಃ ॥

—x—

ಊನತ್ರಿಂಶದಧಿಕಶತತಮೋಽಧ್ಯಾಯಃ

ಅಥ ಚತುರ್ವರ್ಣದೀಕ್ಷೆ

॥ ಶ್ರೀವರಾಹ ಉವಾಚ ॥

ಭೂಷಿತಾಲಂಕೃತಂ ಕೃತ್ವಾ ಮಮ ಕರ್ಮಪರಾಯಣಃ
ಶುಕ್ಲಂ ಯಜ್ಞೋಪವೀತಂ ಚ ದೇಯಂ ನವಗುಣಂ ತಥಾ ।
ಗಂಧೇನ ತಿಲಕಂ ದದ್ಯಾಲ್ಲಲಾಟೇ ಮಮ ಸುಂದರಿ ॥ ೧ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ಕರ್ಮ ಲೋಕಸುಖಾವಹಂ ।
ಯೇನ ಮಂತ್ರೇಣ ದಾತವ್ಯಂ ಲಲಾಟೇ ತಿಲಕಂ ಮಮ ॥ ೨ ॥

ನೂರಿಪ್ಪತ್ತೊಂಬತ್ತನೆಯ ಅಧ್ಯಾಯ

ಚತುರ್ವರ್ಣದೀಕ್ಷೆ.

೧. ಶ್ರೀವರಾಹ—ಸುಂದರಿ, ನನ್ನ ಕರ್ಮದಲ್ಲಿ ನಿರತನಾದವನು, ನನಗೆ ಭೂಷಣಗಳಿಂದಲಂಕಾರಮಾಡಿ, ಒಂಬತ್ತು ನೂಲುಗಳಿಂದಾದ ಬಿಳಿಯ ಯಜ್ಞೋಪವೀತವನ್ನೂ ಧರಿಸಬೇಕು. ಅಲ್ಲದೆ ಗಂಧದಿಂದ ನನ್ನ ಹಣೆಗೆ ತಿಲಕವನ್ನಿಡಬೇಕು.

೨. ಯಾವ ಮಂತ್ರದಿಂದ ತಿಲಕವನ್ನಿಡಬೇಕೆಂಬ ಲೋಕಸುಖಕರವಾದ ಕರ್ಮವನ್ನು ಹೇಳುತ್ತೇನೆ.

ಮಂತ್ರಃ— ಮುಖಮಂಡನಂ *ಚಿಂತಯ ವಾಸುದೇವ |
ತ್ವಯಾ ಪ್ರಯುಕ್ತೈಶ್ಚ ಮಯೋಪನೀತಂ || ೩ ||

ಏತೇನ ಚಿತ್ರಂ ಕುರು ವಾಸುದೇವ |
ಮಮ ಚೈವಂ ಕುರು ಸಂಸಾರಮೋಕ್ಷಂ || ೪ ||

ಏತೇನ ಚಿತ್ರೇಣ ಹಿ ಚಿತ್ರಕಂ ಮೇ |
ದದ್ಯಾಲ್ಲಲಾಟೇ ತಿಲಕಂ ಧರಿತ್ರಿ || ೫ ||

ತತಃ ಸುಮನಸೋ ಗೃಹ್ಯ ಇಮಂ ಮಂತ್ರಮುದೀರಯೇತ್ || ೬ ||

ಮಂತ್ರಃ— ಇಮಾಃ ಸುಮನಸಃ
ಸೌಮನಸ್ಯಾಯ ಭಗವನ್ ಸರ್ವಂ ಸುಮನಸಂ
ಕುರು ತ್ವಯ್ಯೈತೇ ಸೌಮನಸ್ಯಾಯ ನಿರ್ಮಿತಾ |
ಗೃಹೀತಾಃ ಸ್ವಾಹಾ || ೭ ||

೩–೫. ವಾಸುದೇವ, ನಿನ್ನಿಂದಲೇ ಪ್ರೇರಿತನಾಗಿ ನಾನು ತಂದಿರುವ ಮುಖಾಲಂಕಾರವನ್ನು ಮನಸ್ಸಿಗೆ ತಂದುಕೊ. ಇದರಿಂದ ನಿನ್ನ ಮುಖಕ್ಕೆ ಚಿತ್ರವನ್ನೂ ನನಗೆ ಸಂಸಾರಮೋಕ್ಷವನ್ನೂ ಮಾಡು" ಎಂಬರ್ಥವುಳ್ಳ "ಮುಖಮಂಡನಂ......... ....ಸಂಸಾರಮೋಕ್ಷಂ" ಎಂಬ (೩-೪ ನೆಯ) ಮಂತ್ರದಿಂದ ನನ್ನ ಹಣೆಗೆ ತಿಲಕವನ್ನು ಇಡಬೇಕು.

೬–೭. ಬಳಿಕ ಹೂವನ್ನು ತೆಗೆದುಕೊಂಡು, "ಇಮಾಃ ಸುಮನಸಃ ಸೌಮನಸ್ಯಾಯ ಭಗವನ್ ಸರ್ವಂ ಸುಮನಸಂ ಕುರು ತ್ವಯ್ಯೈತೇ ಸೌಮನಸ್ಯಾಯ ನಿರ್ಮಿತಾ ಗೃಹೀತಾಃ ಸ್ವಾಹಾ ||" ಎಂಬ ಈ ಮಂತ್ರವನ್ನು ಹೇಳಿ ಹೂಗಳನ್ನು ಅರ್ಪಿಸಬೇಕು.

---

* ಚಿಂತಯಾ

ಏವಂ ಸುಮನಸೋ ದತ್ವಾ ಧೂಪಂ ಚೈವ ನಿವೇದಯೇತ್ ।
ತತೋ ಗೃಹೀತ್ವಾ ಧೂಪಂ ತು ಸುಗಂಧಂ ಸುಮನೋಹರಂ ।
ನಮೋ ನಾರಾಯಣೇತ್ಯುಕ್ತ್ವಾ ಇಮಂ ಮಂತ್ರ ಮುದೀರಯೇತ್॥ ೮ ॥

ಮಂತ್ರಃ —ಸುಗಂಧಾನಿ ತವಾಂಗಾನಿ ಸ್ವಭಾವೇನೈವ ಕೇಶವ ।
ಅಮುನಾ ಚೈವ ಧೂಪೇನ ಧೂಪಿತಾನಿ ತವಾನಘ ॥ ೯ ॥

ತವಾಂಗಾನಾಂ ಸುಗಂಧೇನ ಸರ್ವಂ ಸೌಗಂಧಿಕಂ ಕುರು ।
ಗೃಹಾಣೇಮಂ ಚ ಮೇ ಧೂಪಂ ಸರ್ವಸಂಸಾರಮೋಕ್ಷಣಂ॥೧೦॥

ಪುನರನ್ಯತ್ಪ್ರವಕ್ಷ್ಯಾಮಿ ಯಥಾ ದೀಪಂ ನಿವೇದಯೇತ್ ।
ಯಥಾವೃತ್ತಂ ತು ಗೃಹ್ಣಾಮಿ ಮಮಭಕ್ತ್ಯಾಃ ಸುಖಾವಹಂ ॥ ೧೧ ॥

ಕೃತ್ವಾ ತು ಮಮ ಕರ್ಮಾಣಿ ಗೃಹ್ಯ ದೀಪಮನುತ್ತಮಂ ।
ಜಾನುಸಂಸ್ಥಂ ತತಃ ಕೃತ್ವಾ ಇಮಂ ಮಂತ್ರಮುದೀರಯೇತ್ ॥ ೧೨ ॥

೮–೧೦. ಹೀಗೆ ಹೂಗಳನ್ನರ್ಪಿಸಿ, ಬಳಿಕ ಧೂಪವನ್ನರ್ಪಿಸಬೇಕು. ಸುಗಂಧವುಳ್ಳ ಬಹು ಮನೋಹರವಾದ ಧೂಪವನ್ನು ಹಿಡಿದುಕೊಂಡು, 'ನಮೋ ನಾರಾಯಣಾಯ' ಎಂದು ಹೇಳಿ, "ಕೇಶವನೇ, ಅನಘನೇ, ಸಹಜವಾಗಿಯೇ ಸುಗಂಧವುಳ್ಳ ನಿನ್ನ ಅಂಗಗಳನ್ನು, ಈ ಧೂಪದಿಂದಲೂ ಸುಗಂಧವುಳ್ಳವನ್ನಾಗಿ ಮಾಡುತ್ತಿದ್ದೇನೆ. ನಿನ್ನ ಅಂಗಗಳ ಸುವಾಸನೆಯಿಂದ ಸರ್ವವನ್ನೂ ಸುವಾಸನೆಯುಳ್ಳದನ್ನಾಗಿ ಮಾಡು. ಸರ್ವಸಂಸಾರಮೋಕ್ಷಕವಾದ ಈ ಧೂಪವನ್ನು ಪರಿಗ್ರಹಿಸು" ಎಂಬರ್ಥದ ಮೇಲಿನ 'ಸುಗಂಧಾನಿತವಾಂಗಾನಿ........ಸರ್ವಸಂಸಾರಮೋಕ್ಷಣಂ' ಎಂಬ (೯-೧೦) ಮಂತ್ರವನ್ನು ಹೇಳಬೇಕು.

೧೧. ನನಗೆ ದೀಪವನ್ನು ಹೇಗೆ ಅರ್ಪಿಸಬೇಕು, ನನ್ನ ಭಕ್ತರು ಅರ್ಪಿಸುವ ದೀಪವು ಎಂತಹುದಾಗಿದ್ದು ಸುಖಕರವಾಗಿದ್ದರೆ ನಾನು ಅದನ್ನು ಪರಿಗ್ರಹಿಸುವೆನು ಎಂಬ ಬೇರೊಂದು ವಿಚಾರವನ್ನು ಹೇಳುತ್ತೇನೆ.

೧೨–೧೪. ನನ್ನ ಪೂಜೆಯನ್ನು ಮಾಡುತ್ತ ಉತ್ತಮವಾದ ದೀಪವನ್ನು ತೆಗೆದುಕೊಂಡು, ಮೊಳಕಾಲವರೆಗೆತ್ತಿ, "ವಿಷ್ಣುವೇ, ತೇಜೋರೂಪನೂ

ಮಂತ್ರಃ — ನಮೋ ಭಗವತೇ ತೇಜಸೇ ವಿಷ್ಣೋ ।
ಸರ್ವದೇವಾಸ್ತ್ವಗ್ನಿಸಂಸ್ಥಾಃ ಪ್ರತಿಷ್ಠಾಃ ।
ಏವಂ ಚಾಗ್ನಿಸ್ತವ ತೇಜಸಾ ಪ್ರತಿಷ್ಠಿತಃ ।
ತೇಜಶ್ಚಾತ್ಮಾ ಸ್ವಯಮೇವ ಮಂತ್ರಶ್ಚ ॥ ೧೩ ॥

ತೇಜಃ ಸಂಸಾರಾನ್ಮೋಚಯಿತುಂ ದೇವ ।
ಗೃಹ್ಣೀಷ್ವ ದೀಪಂ ದ್ಯುತಿಮಂತಂ ಚ ।
ಮೂರ್ತಿಶ್ಚ ಭೂತ್ವಾ ಇದಂ ಕರ್ಮ ನಿಷ್ಕಲಂ ॥ ೧೪ ॥

ಮಾಂ ಕರೋತಿ ಯಥಾನ್ಯಾಯಂ ದೀಪಕಂ ದದತೇ ನರಃ ।
ತಾರಿತಾಃ ಪಿತರಸ್ತೇನ ನಿಷ್ಕಲಾಶ್ಚ ಪಿತಾಮಹಾಃ ॥ ೧೫ ॥

ನಾರಾಯಣವಚಃ ಶ್ರುತ್ವಾ ವಿಸ್ಮಿತಾ ಚ ವಸುಂಧರಾ ।
ವರಹಾರೂಪಿಣಂ ದೇವಂ ಪ್ರತ್ಯುವಾಚ ವಸುಂಧರಾ ॥ ೧೬ ॥

ಭಗವಂತನೂ ಆದ ನಿನಗೆ ನಮಸ್ಕಾರ. ಸರ್ವದೇವತೆಗಳೂ ಅಗ್ನಿಯಲ್ಲಿ ನೆಲಸಿರುವರು. ಅಗ್ನಿಯು ನಿನ್ನ ತೇಜಸ್ಸಿನಿಂದ ಆಗಿದೆ. ತೇಜಸ್ಸೂ ಮಂತ್ರವೂ ಎಲ್ಲವೂ ನೀನೆ. ತೇಜೋರೂಪನೇ, ದೇವ, ನನ್ನನ್ನು ಸಂಸಾರದಿಂದ ವಿಮೋಚನೆಮಾಡುವುದಕ್ಕಾಗಿ ಮೂರ್ತೀಭವಿಸಿ ಕಾಂತಿಯುತವಾದ ಈ ದೀಪವನ್ನೂ ನಿಷ್ಕಲವಾದ ಈ ಕರ್ಮವನ್ನೂ ಪರಿಗ್ರಹಿಸು" ಎಂಬರ್ಥವುಳ್ಳ "ನಮೋ ಭಗವತೇ ....ಇದಂ ಕರ್ಮನಿಷ್ಕಲಂ" ಎಂಬ ಮೇಲಿನ (೧೩–೧೪ ನೆಯ) ಮಂತ್ರವನ್ನು ಹೇಳಬೇಕು.

೧೫. ಹೀಗೆ ಸರಿಯಾಗಿ ದೀಪವನ್ನರ್ಪಿಸುವವನು ಅವನ ಪಿತೃಗಳನ್ನೂ, ಪಿತಾಮಹರನ್ನೂ ಪಾಪರಹಿತರನ್ನಾಗಿಸಿ, ಸಂಸಾರಸಾಗರದಿಂದ ದಾಟಿಸುವನು.

೧೬. ಭೂದೇವಿಯು ವರಾಹರೂಪಿಯಾದ ನಾರಾಯಣನ ಮಾತನ್ನು ಕೇಳಿ ಆಶ್ಚರ್ಯಪಟ್ಟು, ಅವನೊಡನೆ ಮತ್ತೆ ಮಾತನಾಡಿದಳು.

ಶ್ರುತಾ ಮಯಾ ಭಾಗವತಾಸ್ತವ ಕರ್ಮಪರಾಯಣಾಃ |
ಶೇಷಸಂಶ್ರವಣಾರ್ಥಾಯ ಮನೋ ಧಾವತಿ ಸತ್ಪಥೇ || ೧೭ ||

ತವ ಪ್ರಾಪಣಕಂ ಕೃತ್ಯಂ ಕೇಷು ಪಾತ್ರೇಷು ಕಾರಯೇತ್ |
ಏತದಾಚಕ್ಷ್ವ ತತ್ತ್ವೇನ ಯೇನ ತುಷ್ಯಸಿ ಮಾಧವ || ೧೮ ||

ತತೋ ಭೂಮೇರ್ವಚಃ ಶ್ರುತ್ವಾ ಲೋಕನಾಥೋಽಬ್ರವೀದಿದಂ |
ಶೃಣು ತತ್ತ್ವೇನ ಮೇ ದೇವಿ ಯಾನಿ ಪಾತ್ರಾಣಿ ರೋಚತೇ |
ತಾನಿ ತೇ ಕಥಯಿಷ್ಯಾಮಿ ತ್ವಯಾ ಮೇ ಪೂರ್ವಪೃಚ್ಛಿತಂ || ೧೯ ||

ಸೌವರ್ಣಂ ರಾಜತಂ ಕಾಂಸ್ಯಂ ಯೇಷು ದದ್ಯಾತ್ಪ್ರಾಪಣಕಂ |
ಸರ್ವಾಣಿ ತಾನಿ ತ್ಯಕ್ತ್ವೇಹ ತಾಮ್ರಂ ಚ ಮಮ ರೋಚತೇ || ೨೦ ||

ಏತನ್ನಾರಾಯಣಾಚ್ಛ್ರುತ್ವಾ ಧರ್ಮಕಾಮಾ ವಸುಂಧರಾ |
ಉವಾಚ ಮಧುರಂ ವಾಕ್ಯಂ ಲೋಕನಾಥಂ ಜನಾರ್ದನಂ || ೨೧ ||

---

೧೭. ಮಾಧವಾ, ನಿನ್ನ ಕರ್ಮಗಳಲ್ಲಿ ನಿರತರಾದ ಭಾಗವತರ ವಿಚಾರವನ್ನು ಕೇಳಿದೆನು. ಉಳಿದುದನ್ನು ಕೇಳಬೇಕೆಂದು ನನ್ನ ಮನಸ್ಸು ಒಳ್ಳೆಯ ದಾರಿಯಲ್ಲಿ ಓಡುತ್ತಿದೆ.

೧೮. ನಿನಗೆ ನೈವೇದ್ಯವನ್ನು ಯಾವ ಪಾತ್ರೆಯಲ್ಲಿ ಸಮರ್ಪಿಸಬೇಕು ? ಮಾಧವಾ, ಯಾವುದರಿಂದ ನಿನಗೆ ತೃಪ್ತಿಯಾಗುವುದು ಎಂಬುದನ್ನು ನಿಜವಾಗಿ ಹೇಳು.

೧೯. ಭೂದೇವಿಯು ಈ ಮಾತನ್ನು ಕೇಳಿ, ಲೋಕನಾಥನು ಮುಂದಿನಂತೆ ಹೇಳಿದನು. "ದೇವಿ, ನನಗೆ ಯಾವ ಪಾತ್ರೆಗಳು ನಿಜವಾಗಿಯೂ ಇಷ್ಟವೆಂಬುದನ್ನು ಕೇಳಿದೆಯಲ್ಲವೆ ! ಅದನ್ನು ಹೇಳುತ್ತೇನೆ. ಗಮನಿಸು."

೨೦. ಚಿನ್ನದ ಬೆಳ್ಳಿಯ ಅಥವಾ ಕಂಚಿನಪಾತ್ರೆಗಳಲ್ಲಿ ಅರ್ಪಿಸುವ ನೈವೇದ್ಯಗಳೆಲ್ಲಕ್ಕಿಂತಲೂ ತಾಮ್ರದ ಪಾತ್ರೆಯದೇ ನನಗೆ ರುಚಿಸುತ್ತದೆ.

೨೧–೨೨. ನಾರಾಯಣನಿಂದ ಈ ಮಾತನ್ನು ಕೇಳಿ, ಧರ್ಮದಲ್ಲಿ ಆಸಕ್ತಳಾದ ಭೂದೇವಿಯು ಲೋಕನಾಥನಾದ ಆತನನ್ನು ಹಿತಕರವಾದ ಧ್ವನಿ

ಏತನ್ಮೇ ಪರಮಂ ಗುಹ್ಯಂ ತಾಮ್ರಂ ತೇ ರೋಚತೇ ಕಥಂ ॥ ೨೨ ॥

ತತೋ ಭೂಮೇರ್ವಚಃ ಶ್ರುತ್ವಾ ಅನಾದಿರಪರಾಜಿತಃ ।
ಲೋಕಾನಾಂ ಪ್ರವರಃ ಶ್ರೇಷ್ಠಃ ಪ್ರತ್ಯುವಾಚ ವಸುಂಧರಾಂ ॥ ೨೩ ॥

ಶೃಣು ತತ್ತ್ವೇನ ಮೇ ಭೂಮೇ ಕಥ್ಯಮಾನಂ ಮಯಾನಘೇ ।
ಏಕಾಗ್ರಂ ಚಿತ್ತಮಾಧಾಯ ಯೇನ ತಾಮ್ರಂ ಮಮ ಪ್ರಿಯಂ ॥ ೨೪ ॥

ಯುಗಸಪ್ತಸಹಸ್ರಾಣಿ ಆದಿಕಾಲೇಥ ಮಾಧವಿ ।
ಯಥಾ ತಾಮ್ರಂ ಸಮುತ್ಪನ್ನಂ ಯಥೈವ ಪ್ರಿಯದರ್ಶನಂ ॥ ೨೫ ॥

ಪೂರ್ವಂ ಕಮಲಪತ್ರಾಕ್ಷಿ ಗುಡಾಕೇಶೋ ಮಹಾಸುರಃ ।
ತಾಮ್ರರೂಪಂ ಸಮಾದಾಯ ಮಮೈವಾರಾಧನೇ ರತಃ ॥ ೨೬ ॥

ಯಿಂದ, "ತಾಮ್ರವು ನಿನಗೆ ಅಷ್ಟು ಇಷ್ಟವಾಗಲು ಕಾರಣವೇನು? ಈ ಪರಮ ರಹಸ್ಯವನ್ನು ನನಗೆ ಹೇಳು" ಎಂದು ಕೇಳಿದಳು.

೨೩. ಭೂದೇವಿಯ ಮಾತನ್ನು ಕೇಳಿ, ಅನಾದಿಯೂ, ಅಜೇಯನೂ, ಲೋಕೋತ್ತಮನೂ, ಶ್ರೇಷ್ಠನೂ ಆದ ದೇವನು ಆಕೆಗೆ ಮುಂದಿನಂತೆ ನುಡಿದನು.

೨೪. ಭೂಮೀ, ಪಾಪರಹಿತೆ, ತಾಮ್ರವು ನನಗೆ ಏಕೆ ಪ್ರಿಯವಾದುದೆಂಬುದನ್ನು ನಿಜವಾಗಿ ಹೇಳುತ್ತೇನೆ. ಮನಸ್ಸಿಟ್ಟು ಕೇಳು.

೨೫. ಆದಿಕಾಲದಲ್ಲಿ ಏಳುಸಾವಿರ ಯುಗಗಳಾದ ಬಳಿಕ ತಾಮ್ರವು ಹೇಗೆ ಉದಿಸಿತು, ಹೇಗೆ ನನಗೆ ಇಷ್ಟವಾಯಿತು ಎಂಬುದನ್ನು ಕೇಳು.

೨೬. ಕಮಲದಳನೇತ್ರೇ, ಪೂರ್ವದಲ್ಲಿ ಗುಡಾಕೇಶನೆಂಬ ಮಹಾಸುರನಿದ್ದನು. ಅವನು ತಾಮ್ರರೂಪವನ್ನು ಪಡೆದು ನನ್ನ ಆರಾಧನದಲ್ಲಿಯೇ ಆಸಕ್ತನಾಗಿದ್ದನು.

ತತ ಆರಾಧಿತಸ್ತೇನ ವರ್ಷಾಣಾಂ ತು ಚತುರ್ದಶ ।
ಸಹಸ್ರಾಣಿ ವಿಶಾಲಾಕ್ಷಿ ಧರ್ಮಕಾಮೇನ ನಿಶ್ಚಲಂ ।
ಅಹಂ ತು ತಪಸಾ ತುಷ್ಟಃ ತೀವ್ರೇಣ ಕೃತನಿಶ್ಚಯಾತ್ ॥ ೨೭ ॥

ತತಸ್ತಾಮ್ರಮಯೋ ರಮ್ಯೋ ಯತ್ರ ತಾಮ್ರಸಮುದ್ಭವಃ ।
ದೃಷ್ಟ್ವಾಶ್ರಮಂ ಮಹಾದೇವಿ ಕಿಂಚಿದೇವ ಸುಭಾಷಿತಂ ॥ ೨೮ ॥

ತತೋ ಜಾನುಸ್ಥಿತೋ ಭೂತ್ವಾ ಮಮ ಏಷ ವಿಚಿಂತಯತ್ ।
ಚತುರ್ಬಾಹುಂ ಚ ಮಾಂ ದೃಷ್ಟ್ವಾ ಮಮ ಕರ್ಮಪರಾಯಣಃ ।
ಪ್ರಣತಃ ಪ್ರಾಂಜಲಿಃ ಪ್ರಾಹ ಶಿರೋ ಭೂಮೌ ನಿಧಾಯ ಸಃ ॥ ೨೯ ॥

ತಂ ಚ ದೃಷ್ಟ್ವಾ ಮಯಾ ಪ್ರೋಕ್ತಂ ಪ್ರಸನ್ನೇನಾಂತರಾತ್ಮನಾ ॥ ೩೦ ॥

---

೨೭. ವಿಶಾಲಾಕ್ಷಿ, ಧರ್ಮಕಾಮನೂ, ದೃಢಸಂಕಲ್ಪವುಳ್ಳವನೂ ಆದ ಅವನಿಂದ ಹದಿನಾಲ್ಕುಸಹಸ್ರವರ್ಷಕಾಲ ಆರಾಧಿತನಾದ ನಾನು ಅವನ ಉಗ್ರವಾದ ತಪಸ್ಸಿನಿಂದ ತೃಪ್ತನಾದೆನು.

೨೮. ಮಹಾದೇವಿ, ಬಳಿಕ ಎಲ್ಲಿ ತಾಮ್ರವು ಉದಿಸಿತೋ ಆ ತಾಮ್ರಮಯವಾದ ರಮ್ಯಪ್ರದೇಶದಲ್ಲಿ ಅವನ ಆಶ್ರಮವನ್ನು ನೋಡಿ, ನಾನು ಸ್ವಲ್ಪವಾಗಿ ಒಳ್ಳೆಯ ಮಾತನಾಡಿದೆನು.

೨೯. ಬಳಿಕ, ನನ್ನ ಕರ್ಮದಲ್ಲಿ ನಿರತನಾದ ಗುಡಾಕೇಶನು ನನ್ನ ಧ್ವನಿಯೆಂದು ಆಲೋಚಿಸಿ, ಮೊಳಕಾಲೂರಿ ನಿಂತು, ಚತುರ್ಭುಜನಾದ ನನ್ನನ್ನು ನೋಡಿ, ತಲೆಯನ್ನು ನೆಲಕ್ಕೆ ತಾಕಿಸಿ ನನಗೆ ವಂದಿಸಿ, ಕೈಮುಗಿದುಕೊಂಡು ಪ್ರಾರ್ಥಿಸಿದನು.

೩೦–೩೧. ಅವನನ್ನು ನೋಡಿ, ಒಲಿದ ಮನದಿಂದ ನಾನು, " ಮಹಾಭಾಗ್ಯನಾದ ಗುಡಾಕೇಶನೇ, ಸುವ್ರತನೆ, ನನ್ನನ್ನು ಆರಾಧಿಸುವುದು ಕಷ್ಟ

ಗುಡಾಕೇಶ ಮಹಾಭಾಗ ಬ್ರೂಹಿ ಕಿಂ ಕರವಾಣಿ ತೇ ।
ತೋಷಿತೋಽಸ್ಮ್ಯನಯಾ ಭಕ್ತ್ಯಾ ದುರಾರಾಧ್ಯೋಽಪಿ ಸುವ್ರತ ॥ ೩೧ ॥

ಯತ್ತ್ವಯಾ ಚಿಂತಿತಂ ಸೌಮ್ಯ ಕರ್ಮಣಾ ಮನಸಾ ಗಿರಾ ।
ವರಂ ಬ್ರೂಹಿ ಮಹಾಭಾಗ ತುಭ್ಯಂ ಯದ್ರೋಚತೇಽನಘ ॥ ೩೨ ॥

ಏವಂ ಮಮ ವಚಃ ಶ್ರುತ್ವಾ ಗುಡಾಕೇಶೋಽಬ್ರವೀದಿದಂ ।
ಕರಾಭ್ಯಾಮಂಜಲಿಂ ಕೃತ್ವಾ ವಿಶುದ್ಧೇನಾಂತರಾತ್ಮನಾ ॥ ೩೩ ॥

ಯದಿತುಷ್ಟೋಽಸಿ ಮೇ ದೇವ ಸಮಸ್ತೇನಾಂತರಾತ್ಮನಾ ।
ಜನ್ಮನಾಂ ತು ಸಹಸ್ರಾಣಿ ತ್ವಯಿ ಭಕ್ತಿರ್ದೃಢಾಸ್ತು ಮೇ ॥ ೩೪ ॥

ಚಕ್ರೇಣ ವಧಮಿಚ್ಛಾಮಿ ತ್ವಯಾ ಮುಕ್ತೇನ ಕೇಶವ ।
ಚಕ್ರೇಣ ಪಾತಿತಸ್ಯೈತದ್ವಸಾಮಾಂಸಾನಿ ಕಿಂಚನ ।
ತಾಮ್ರಂ ನಾಮ ಭವೇದ್ದೇವ ಪವಿತ್ರೀಕರಣಂ ಶುಭಂ ॥ ೩೫ ॥

ವಾದರೂ ನಿನ್ನ ಭಕ್ತಿಯಿಂದ ತೃಪ್ತನಾಗಿದ್ದೇನೆ. ನಿನಗೆ ಏನು ಮಾಡಲಿ? ಹೇಳು.

೩೨. ಸೌಮ್ಯನೇ, ಮಹಾಭಾಗ, ಮನೋವಾಕ್ಕರ್ಮಗಳಿಂದ ನಿನಗೆ ಬೇಕಾದುದೇನು? ಅನಘನೇ, ನಿನಗೆ ಇಷ್ಟವಾದ ವರವನ್ನು ಬೇಡು" ಎಂದೆನು.

೩೩. ಗುಡಾಕೇಶನು ನನ್ನ ಈ ಮಾತನ್ನು ಕೇಳಿ, ಕೈಗಳನ್ನು ಮುಗಿದು ಕೊಂಡು, ಪರಿಶುದ್ಧವಾದ ಮನಸ್ಸಿನಿಂದ ಮುಂದಿನ ಈ ಮಾತನಾಡಿದನು.

೩೪. "ದೇವ, ನೀನು ಪೂರ್ಣಮನಸ್ಸಿನಿಂದ ನನ್ನಲ್ಲಿ ತೃಪ್ತನಾಗಿ ಒಲಿದಿರುವೆಯಾದರೆ, ನಿನ್ನಲ್ಲಿ ನನಗೆ ಭಕ್ತಿಯು ಸಾವಿರಜನ್ಮಗಳಲ್ಲೂ ಸ್ಥಿರವಾಗಿ ದೃಢವಾಗಿರಲಿ.

೩೫. ಕೇಶವಾ, ನೀನು ಬಿಡುವ ಚಕ್ರದಿಂದ ನನ್ನ ಕೊಲೆಯನ್ನು ಬಯಸುತ್ತೇನೆ. ಚಕ್ರದಿಂದ ಬೀಳಿಸಿದ ಈ ನನ್ನ ದೇಹದ ಮಾಂಸವಸೆಗಳೆಲ್ಲವೂ ಪರಿಶುದ್ಧವೂ, ಶುಭಕರವೂ ಆದ ತಾಮ್ರವೆಂಬ ಲೋಹವಾಗಲಿ.

ತೇನ ಪಾತ್ರಂ ತತಃ ಕೃತ್ವಾ ಶುಭಧರ್ಮವಿನಿಶ್ಚಿತಃ ॥ ೩೬ ॥

ತಸ್ಮಿನ್ ಪ್ರಾಪಣಕಂ ಕೃತ್ವಾ ಶುದ್ಧೇ ವೈ ತಾಮ್ರಭಾಜನೇ ।
ನಿವೇದಿತಂ ಪರಾ ಪ್ರೀತಿರ್ಭವತ್ವೇತನ್ಮನೋಗತಂ ॥ ೩೭ ॥

ಪ್ರಸನ್ನೋಯದಿ ಮೇ ದೇವ ಹ್ಯೇಷ ಮೇ ದೀಯತಾಂ ವರಃ ।
ಯಚ್ಚಿಂತಿತೋಸಿ ದೇವೇಶ ಉಗ್ರೇ ತಪಸಿ ತಿಷ್ಠತಾ ॥ ೩೮ ॥

ಬಾಢಮಿತ್ಯೇವ ಸೋಪ್ಯುಕ್ತೋ ಯಾವಲ್ಲೋಕಸ್ಥಿತಿರ್ಮಯಾ ।
ತಾವತ್ತಾಮ್ರಸ್ಥಿತೋ ಭೂತ್ವಾ ಮಮ ಸಂಸ್ಥೋ ಭವಿಷ್ಯಸಿ ॥ ೩೯ ॥

ತತಃ ಪ್ರಭೃತಿ ತಾಮ್ರಾತ್ಮಾ ಗುಡಾಕೇಶೋ ವ್ಯವಸ್ಥಿತಃ ॥ ೪೦ ॥

ತತ್ತಾಮ್ರಭಾಜನೇ ಮಹ್ಯಂ ದೀಯತೇ ಯತ್ತು ಪುಷ್ಕಲಂ ।
ಅತುಲಾ ತೇನ ಮೇ ಪ್ರೀತಿರ್ಭೂಮೇ ಜಾನೀಹಿ ಸುವ್ರತೇ ॥ ೪೧ ॥

೩೬-೩೭. ಶುಭಧರ್ಮಗಳ ನಿರ್ಣಯವುಳ್ಳವನು ಆ ತಾಮ್ರದಿಂದ ಪಾತ್ರೆಯನ್ನು ಮಾಡಿಸಿ, ಶುದ್ಧವಾದ ಆ ತಾಮ್ರಪಾತ್ರೆಯಲ್ಲಿ ನೈವೇದ್ಯಪದಾರ್ಥವನ್ನಿಟ್ಟು, ನಿನಗೆ ಅರ್ಪಿಸಿದರೆ ಅದು ನಿನಗೆ ಅತಿಪ್ರೀತಿಕರವಾಗಲಿ ಎಂಬುದು ನನ್ನ ಇಷ್ಟ.

೩೮. ದೇವನೇ, ಉಗ್ರವಾದ ತಪಸ್ಸಿನಲ್ಲಿದ್ದು ನಾನು ಧ್ಯಾನಿಸಿದುದರಿಂದ ನೀನು ಪ್ರಸನ್ನನಾಗಿದ್ದರೆ ನನಗೆ ಈ ವರವನ್ನು ಕೊಡು" ಎಂದು ಬೇಡಿದನು.

೩೯. "ನಿಜವಾಗಿಯೂ, ಲೋಕವಿರುವವರೆಗೂ ನೀನು ತಾಮ್ರದಲ್ಲಿದ್ದುಕೊಂಡು ನನ್ನಲ್ಲಿರುವೆ." ಎಂದು ನಾನೂ ಅವನಿಗೆ ಹೇಳಿದೆನು.

೪೦–೪೧. ಅದು ಮೊದಲುಗೊಂಡು ಗುಡಾಕೇಶನು ತಾಮ್ರಾತ್ಮನಾಗಿರುವನು. ಆದುದರಿಂದ ಸುವ್ರತೇ, ಭೂದೇವಿ, ತಾಮ್ರಪಾತ್ರೆಯಲ್ಲಿ ನನಗೆ ಬೇಕಾದ ಹಾಗೆ ಅರ್ಪಿಸುವ ನೈವೇದ್ಯದಿಂದ ನನಗೆ ಅನುಪಮಪ್ರೀತಿಯುಂಟಾಗುವುದೆಂದು ತಿಳಿ.

ಮಂಗಲ್ಯಂ ಚ ಪವಿತ್ರಂ ಚ ತಾಮ್ರಂ ತೇನ ಪ್ರೀಯಂ ಮಮ || ೪೨ ||

ತ್ವಂ ಚ ದ್ರಕ್ಷ್ಯಸಿ ತಚ್ಚಕ್ರಂ ಮಧ್ಯಸಂಸ್ಥೇ ದಿವಾಕರೇ ।
ವೈಶಾಖಸ್ಯ ತು ಮಾಸಸ್ಯ ಶುಕ್ಲಪಕ್ಷೇ ತು ದ್ವಾದಶೀ || ೪೩ ||

ಮಮ ತೇಜೋಮಯಂ ಚಕ್ರಂ ತ್ವಾಂ ವಧಿಷ್ಯತ್ಯಸಂಶಯಂ ।
ಏಷ್ಯಸೇ ಮಮ ಲೋಕಾಯ ಏವಮೇತನ್ನ ಸಂಶಯಃ ।
ಏವಮುಕ್ತ್ವಾ ಗುಡಾಕೇಶಂ ತತ್ರೈವಾಂತರ್ಹಿತೋ ಭವಂ || ೪೪ ||

ಚಕ್ರಾದ್ವಧಮಭೀಪ್ಸನ್ವೈ ಸೋಽಪಿ ಮತ್ಕರ್ಮಣಿ ಸ್ಥಿತಃ ।
ದಿನೇ ದಿನೇ ವಿಶಿಷ್ಟಂತು ಶುಭಂ ಕುರ್ವಂಸ್ತಪಸ್ಯತಿ ।
ವಿಷ್ಣುಸಂಸ್ಥೋ ಭವಿಷ್ಯಾಮಿ ಕದಾಹಮಿತಿ ಚಿಂತಯನ್ || ೪೫ ||

---

೪೨. ಆದುದರಿಂದಲೇ ಮಂಗಳಕರವೂ, ಪವಿತ್ರವೂ ಆದ ತಾಮ್ರವು ನನಗೆ ಪ್ರಿಯವಾದುದು.

೪೩–೪೪. "ವೈಶಾಖಮಾಸದ ಶುಕ್ಲಪಕ್ಷದ ದ್ವಾದಶಿಯ ದಿನ ಸೂರ್ಯನು ಮಧ್ಯಾಹ್ನದಲ್ಲಿರುವಾಗ ನೀನು ಒಂದು ಚಕ್ರವನ್ನು ನೋಡುವೆ. ನನ್ನ ತೇಜೋಮಯವಾದ ಆ ಚಕ್ರವು ನಿನ್ನನ್ನು ನಿಜವಾಗಿಯೂ ಕೊಲ್ಲುವುದು. ಬಳಿಕ ನನ್ನ ಲೋಕವನ್ನು ಸೇರುವೆ. ಇದರಲ್ಲಿ ಸಂದೇಹವಿಲ್ಲ" ಎಂದು ಆ ಗುಡಾಕೇಶನಿಗೆ ಹೇಳಿ, ಅಲ್ಲಿಯೇ ಕಣ್ಮರೆಯಾದೆನು.

೪೫. ನನ್ನ ಕರ್ಮಗಳಲ್ಲಾಸಕ್ತನಾದ ಅವನೂ ನನ್ನ ಚಕ್ರದಿಂದ ವಧೆಯನ್ನು ಹೊಂದಲು ಇಚ್ಛೆಯುಳ್ಳವನಾಗಿ, ದಿನದಿನವೂ ಉತ್ತಮವಾದ ಶುಭಕರ್ಮಗಳನ್ನು ಮಾಡುತ್ತಾ, 'ಯಾವಾಗ ವಿಷ್ಣುವನ್ನು ಸೇರುವೆನೋ' ಎಂದು ಚಿಂತಿಸುತ್ತ ತಪಸ್ಸನ್ನು ಮಾಡುತ್ತಿದ್ದನು.

ಏವಂ ಸ್ಥಿತಸ್ಯ ತಸ್ಯಾಥ ವೈಶಾಖಸ್ಯ ತು ದ್ವಾದಶೀ |
ಶುಕ್ಲಪಕ್ಷಸ್ಯ ಸಂಪ್ರಾಪ್ತಾ ತಸ್ಯಾಂ ಧರ್ಮವಿನಿಶ್ಚಿತಃ ॥ ೪೬ ॥

ವಿಷ್ಣುಪೂಜಾಂ ತತಃ ಕೃತ್ವಾ ಪ್ರಾರ್ಥಯಾಮಾಸ ಮಾಂ ಪ್ರತಿ ।
ಮುಂಚ ಮುಂಚ ಪ್ರಭೋ ಚಕ್ರಮಪಿ ವಹ್ನಿಸಮಪ್ರಭಂ ॥ ೪೭ ॥

ಆತ್ಮಾ ಮೇ ನೀಯತಾಂ ಶೀಘ್ರಂ ನಿಕೃತ್ಯಾಂಗಾನಿ ಸರ್ವಶಃ ॥ ೪೮ ॥

ತದೈವ ಚಕ್ರೇಣ ವಿಪಾಟಿತೋಽಸೌ ।
ಪ್ರಾಪ್ತೋಽಪಿ ಮಾಂ ಭಾಗವತಪ್ರಧಾನಃ ॥ ೪೯ ॥

ತಾಮ್ರಂ ತು ತಸ್ಯಾಂಸಮಸೃಕ್ಸುವರ್ಣ
ಮಸ್ಥೀನಿ ರೂಪ್ಯಂ ಬಹುಧಾತವಶ್ಚ
ರಂಗಂ ಚ ಸೀಸಂ ತ್ರಪುಧಾತುಸಂಸ್ಥಂ |
ಕಾಂಸ್ಯಂ ಚ ರೀತಿಶ್ಚ ಮಲಸ್ತು ತೇಷಾಂ ॥ ೫೦ ॥

೪೬–೪೮. ಅವನು ಹೀಗಿರುತ್ತಿರಲು, ವೈಶಾಖಶುದ್ಧದ್ವಾದಶಿಯು ಬಂದಿತು. ಆ ದಿನ ಧರ್ಮನಿಶ್ಚಯವುಳ್ಳ ಗುಡಾಕೇಶನು ವಿಷ್ಣುವಾದ ನನ್ನನ್ನು ಪೂಜಿಸಿ, "ಪ್ರಭುವೇ, ಅಗ್ನಿಗೆ ಸಮವಾದ ಕಾಂತಿಯುಳ್ಳ ಚಕ್ರವನ್ನು ಬಿಡು. ಬಿಡು. ನನ್ನ ಅಂಗಗಳನ್ನು ಕತ್ತರಿಸಿ, ಬೇಗನೆ ನನ್ನ ಆತ್ಮವನ್ನು ನಿನ್ನ ಬಳಿಗೆ ತೆಗೆದುಕೊ," ಎಂದು ಪ್ರಾರ್ಥಿಸಿದನು.

೪೯. ಒಡನೆಯೇ ಚಕ್ರದಿಂದ ಕತ್ತರಿಸಲ್ಪಟ್ಟ ಆ ಭಾಗವತೋತ್ತಮನು ನನ್ನನ್ನು ಸೇರಿದನು.

೫೦. ಅವನ ದೇಹದ ಮಾಂಸವು ತಾಮ್ರವಾಗಿಯೂ, ರಕ್ತವು ಚಿನ್ನವಾಗಿಯೂ, ಎಲುಬುಗಳು ಬೆಳ್ಳಿಯಾಗಿಯೂ, ಮೇದಸ್ಸೇ ಮೊದಲಾದ ಹಲವು ಧಾತುಗಳು ತವರ, ಸೀಸ, ಕಂಚುಗಳಾಗಿಯೂ, ಮಾಂಸ ಮೊದಲಾದುವುಗಳಲ್ಲಿದ್ದ ಮಲವು ಕಬ್ಬಿಣದ ಅದಿರಾಗಿಯೂ ಆದುವು.

ತಾಮ್ರಪಾತ್ರೇಣ ವೈ ಭೂಮೇ ಪ್ರಾಪಣಂ ಯತ್ಪ್ರದೀಯತೇ ।
ಸಿಕ್ಥೇ ಸಿಕ್ಥೇ ಫಲಂ ತಸ್ಯ ಶೃಣುಷ್ವ ಗದತೋ ಮಮ ॥ ೫೧ ॥

ಸಿಕ್ಥಾನಿ ತತ್ರ ಯಾವಂತಿ ತಾಮ್ರಪ್ರಾಪಣಕೇ ಧರೇ ।
ತಾವದ್ವರ್ಷಸಹಸ್ರಾಣಿ ಮಮ ಲೋಕೇ ಸ ಮೋದತೇ * ॥ ೫೨ ॥

ಏತದ್ಭಾಗವತೈಃ ಕಾರ್ಯಂ ಮಮ ಪ್ರಿಯಕರೈಃ ಸದಾ ॥ ೫೩ ॥

ಏವಂ ತಾಮ್ರಂ ಸಮುತ್ಪನ್ನಮಿತಿ ಮೇ ರೋಚತೇ ಹಿ ತತ್ ।
ದೀಕ್ಷಿತೈರ್ವೈ ಭಾಗವತೈಃ ಪಾದ್ಯಾರ್ಘ್ಯಾದೌ ಚ ದೀಯತೇ ॥ ೫೪ ॥

---

೫೧. ಭೂದೇವಿ, ನಾನು ಹೇಳುವುದನ್ನು ಕೇಳು. ತಾಮ್ರದಪಾತ್ರೆಯಲ್ಲಿ ನನಗೆ ಅರ್ಪಿಸುವ ನೈವೇದ್ಯದಲ್ಲಿರುವ ಒಂದೊಂದು ಅಗುಳಿಗೂ ಫಲವಿರುವುದು.

೫೨. ಧರೇ, ತಾಮ್ರದ ಪಾತ್ರೆಯಲ್ಲಿ ಅರ್ಪಿಸುವ ನೈವೇದ್ಯದಲ್ಲಿ ಎಷ್ಟು ಅಗುಳುಗಳಿರುವುವೋ ಅಷ್ಟುಸಾವಿರ ವರ್ಷಕಾಲ, ಅರ್ಪಿಸುವವನು ನನ್ನ ಲೋಕದಲ್ಲಿ ಸಂತೋಷಪಡುವನು. *

೫೩. ಆದುದರಿಂದ, ನನಗೆ ಪ್ರಿಯವಾದುದನ್ನು ಮಾಡುವ ಭಾಗವತರು ಯಾವಾಗಲೂ ತಾಮ್ರದಪಾತ್ರೆಯಲ್ಲಿ ನೈವೇದ್ಯವನ್ನರ್ಪಿಸಬೇಕು.

೫೪. ತಾಮ್ರವು ಹೀಗೆ ಉತ್ಪನ್ನವಾದುದರಿಂದ ಅದು ನನಗೆ ಇಷ್ಟವಾಗಿದೆ. ದೀಕ್ಷಿತರಾದ ಭಾಗವತರು ಅರ್ಘ್ಯಪಾದ್ಯಾದಿಗಳನ್ನು ತಾಮ್ರದ ಪಾತ್ರೆಯಲ್ಲಿಯೇ ಅರ್ಪಿಸುವರು.

---

* ಈ ಶ್ಲೋಕವು ಬೊಂ. ಕ. ಪುಸ್ತಕಗಳೆರಡರಲ್ಲೂ ೫೪ ನೆಯ ಶ್ಲೋಕವಾದ ಬಳಿಕ ಇದೆ. ಆ ಸಂದರ್ಭಕ್ಕೆ ಹೊಂದದೆ ಇರುವುದರಿಂದ ಬದಲಾಯಿಸಿದೆ.

ಏವಂ ದೀಕ್ಷಾವಿಧಿಃ ಪ್ರೋಕ್ತಾ ಏವಂ ತಾಮ್ರಸಮುದ್ಭವಃ ।
ದೇವಿ ತತ್ತ್ವೇನ ಕಥಿತಃ ಕಿಮನ್ಯತ್ಪರಿಪೃಚ್ಛಸಿ ॥ ೫೫ ॥

॥ ಭೂಮಿರುವಾಚ ॥

ದೇವದೇವ ಕಥಂ ಸಂಧ್ಯಾಂ ದೀಕ್ಷಿತಃ ಕುರುತೇ ವದ ।
ಕೇನ ಮಂತ್ರೇಣ ವಾ ಭಕ್ತಸ್ತವ ಕರ್ಮಪರಾಯಣಃ ॥ ೫೬ ॥

॥ ಶ್ರೀವರಾಹ ಉವಾಚ ॥

ಶೃಣು ಮಾಧವಿ ತತ್ತ್ವೇನ ಸಂಧ್ಯಾಮಂತ್ರಮನುತ್ತಮಂ ॥ ೫೭ ॥

ಯಥಾ ವದಂತಿ ವೈ ಸೂರ್ಯಂ ಸಂಧ್ಯಾಂ ಪೂರ್ವಾಂ ಪರಾಂ ತಥಾ ।
ಜಲಾಂಜಲಿಂ ಗೃಹೀತ್ವಾ ತು ಮಮ ಭಕ್ತ್ಯಾ ವ್ಯವಸ್ಥಿತಃ ।
ಮುಹೂರ್ತಂ ಧ್ಯಾನಮಾಸ್ಥಾಯ ಇಮಂ ಮಂತ್ರಮುದೀರಯೇತ್ ॥೫೮॥

---

೫೫. ದೇವಿ, ಹೀಗೆ ದೀಕ್ಷಾವಿಧಿಯನ್ನೂ ತಾಮ್ರದ ಉತ್ಪತ್ತಿಯನ್ನೂ ಸರಿಯಾಗಿ ಹೇಳಿದೆನು. ಇನ್ನೇನನ್ನು ಕೇಳುವೆ ?

೫೬. ಭೂದೇವಿ—ದೇವದೇವ, ನಿನ್ನ ಕರ್ಮದಲ್ಲಿ ನಿರತನಾದ ಭಕ್ತ ದೀಕ್ಷಿತನು ಯಾವ ಮಂತ್ರದಿಂದ ಹೇಗೆ ಸಂಧ್ಯಾವಂದನೆಯನ್ನು ಮಾಡಬೇಕೋ ಅದನ್ನು ಹೇಳು.

೫೭–೫೮. ಶ್ರೀವರಾಹ—ಮಾಧವೀ, ಅತ್ಯುತ್ತಮವಾದ ಸಂಧ್ಯಾಮಂತ್ರವನ್ನು ಸರಿಯಾಗಿ ಕೇಳು. ಸೂರ್ಯನ ಪೂರ್ವಸಂಧ್ಯೆ ಪಶ್ಚಿಮಸಂಧ್ಯೆಗಳೆಂದು ಹೇಳುವಾಗ ನನ್ನ ಭಕ್ತಿಯಲ್ಲಿ ನಿರತನಾದವನು ಬೊಗಸೆಯಲ್ಲಿ ನೀರನ್ನು ತೆಗೆದುಕೊಂಡು, ಮುಹೂರ್ತಕಾಲ ನನ್ನನ್ನು ಧ್ಯಾನಿಸಿ, "ಭವೋದ್ಭವಮಾದಿವ್ಯಕ್ತ

ಮಂತ್ರಃ ॥

ಭವೋದ್ಭವಮಾದಿವ್ಯಕ್ತರೂಪಮಾದಿತ್ಯಂ
ಸರ್ವೇ ದೇವಾ ಬ್ರಹ್ಮರುದ್ರೇಂದ್ರಾಸ್ತ್ವಾಂ ಚ
ಕೃಷ್ಣೇ ಯಥಾಸೀದ್ಧ್ಯಾನಯೋಗಸ್ಥಿತಾಸ್ತೇ ।
ಸಂಧ್ಯಾ ಸಂಸ್ಥಾ ವಾಸುದೇವ ನಮಂತಿ ॥
ವಯಂ ದೇವಮಾದಿಮವ್ಯಕ್ತರೂಪಂ
ಕೃತ್ವಾ ಚಾತ್ಮನಿ ದೇವಸಂಸ್ಥಾಸ್ತಥಾಪಿ
ಸಂಸಾರಾರ್ಥಂ ಕರ್ಮ ತತ್ಕರಣಮೇವ ।
ಸಂಧ್ಯಾ ಸಂಸ್ಥಾ ವಾಸುದೇವ ನಮೋನಮಃ ॥ ೫೯ ।

ಅನೇನೈವ ಹಿ ಮಂತ್ರೇಣ ಸಂಧ್ಯಾಂ ಕುರ್ಯಾತ್ತು ದೀಕ್ಷಿತಃ ॥ ೬೦ ।

ಇತಿ ಶ್ರೀವರಾಹಪುರಾಣೇ ಚತುರ್ವರ್ಣದೀಕ್ಷಾ ತಾಮ್ರವರ್ಣನಂ
ನಾಮ ಊನತ್ರಿಂಶದಧಿಕಶತತಮೋಧ್ಯಾಯಃ

ರೂಪಮಾದಿತ್ಯಂ । ಸಂಧ್ಯಾ ಸಂಸ್ಥಾ ವಾಸುದೇವ ನಮೋ ನಮಃ ॥ " ಎಂಬ (ಮೇಲಿನ ೫೯ ನೆಯ) ಮಂತ್ರವನ್ನು ಹೇಳಬೇಕು.

೬೦. ದೀಕ್ಷಿತನು ಇದೇ ಮಂತ್ರದಿಂದ ಸಂಧ್ಯಾವಂದನೆಯನ್ನು ಮಾಡಬೇಕು.

ಅಧ್ಯಾಯದ ಸಾರಾಂಶ :—

ಶ್ರೀವರಾಹನು ಭೂದೇವಿಗೆ, ವಿಷ್ಣುಪೂಜೆಯ ಕ್ರಮವನ್ನು ಎಂದರೆ ಗಂಧ ಪುಷ್ಪಾದಿಗಳನ್ನು ಹೇಗೆ ಅರ್ಪಿಸಬೇಕೆಂಬುದನ್ನೂ, ತಾಮ್ರದ ಪಾತ್ರೆಯಲ್ಲಿ ನೈವೇದ್ಯವನ್ನು ಅರ್ಪಿಸುವುದರ ಮೇಲ್ಮೆಯನ್ನೂ, ತಾಮ್ರೋತ್ಪತ್ತಿಯ ಕಥೆಯನ್ನೂ, ಅದರ ಮಹಿಮೆಯನ್ನೂ, ದೀಕ್ಷಿತರ ಸಂಧ್ಯಾವಂದನ ಕ್ರಮವನ್ನೂ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರಿಪ್ಪತ್ತೊಂಭತ್ತನೆಯ ಅಧ್ಯಾಯ.

॥ ಶ್ರೀಃ ॥

—x—

ತ್ರಿಂಶದಧಿಕಶತತಮೋಽಧ್ಯಾಯಃ

ಅಥ ರಾಜಾನ್ನಭೋಗೇ ಪ್ರಾಯಶ್ಚಿತ್ತಂ

॥ ಸೂತ ಉವಾಚ ॥

ಏವಂ ದೀಕ್ಷಾಂ ತತಃ ಶ್ರುತ್ವಾ ನಾರಾಯಣಮುಖಾನ್ಮಹೀ ।
ವಿಶುದ್ಧಮಾನಸಾ ದೇವೀ ನಾರಾಯಣಮಥಾಬ್ರವೀತ್ ॥ ೧ ॥

॥ ಧರಣ್ಯುವಾಚ ॥

ಅಹೋ ತೇ ದೀಕ್ಷಾಮಾಹಾತ್ಮ್ಯಂ ಯಸ್ಯ ವ್ಯೈ ವ್ಯುಷ್ಟಿರುತ್ತಮಾ ।
ಶ್ರುತ್ವಾಹಂ ತು ಮಹಾಭಾಗ ಜಾತಾಸ್ಮಿ ವಿಮಲಾ ವಿಭೋ ॥ ೨ ॥

ನೂರಮೂವತ್ತನೆಯ ಅಧ್ಯಾಯ.

ರಾಜಾನ್ನ ಭೋಜನಪ್ರಾಯಶ್ಚಿತ್ತ.

೧. ಸೂತ—ನಾರಾಯಣನ ಬಾಯಿಂದ, ಹೀಗೆ ದೀಕ್ಷೆಯ ವಿಚಾರವನ್ನು ಕೇಳಿ, ಪರಿಶುದ್ಧಮನಳಾದ ಭೂದೇವಿಯು, ಅವನೊಡನೆ ಮುಂದಿನ ಮಾತ ನಾಡಿದಳು.

೨. ಭೂದೇವಿ—ಮಹಾಭಾಗ್ಯನೇ, ವಿಭುವೇ, ಉತ್ತಮವಾದ ಫಲ ಸಮೃದ್ಧಿಯುಳ್ಳ ನಿನ್ನ ದೀಕ್ಷೆಯ ಮಹಿಮೆಯು ಆಶ್ಚರ್ಯಕರವಾಗಿದೆ. ಅದನ್ನು ಕೇಳಿಯೇ ನಾನು ಪರಿಶುದ್ಧಳಾದೆನು.

ಅಹೋ ದೇವಸ್ಯ ಮಾಹಾತ್ಮ್ಯಂ ಲೋಕನಾಥಸ್ಯ ತತ್ವತಃ ।
ಯೇನ ಸಾ ಕಾರಿತಾ ದೀಕ್ಷಾ ಚಾತುರ್ವರ್ಣ್ಯಸುಖಾವಹಾ ॥ ೩ ॥

ಏಕಂ ಮೇ ಪರಮಂ ಗುಹ್ಯಂ ಯದೀಶ ಹೃದಿ ವರ್ತತೇ ।
ಭವಭಕ್ತಸುಖಾರ್ಥಾಯ ತತ್ತ್ವಂ ಮೇ ವಕ್ತುಮರ್ಹಸಿ ॥ ೪ ॥

ದೇವ ಪೂರ್ವಾಪರಾಧಾಸ್ತೇ ದ್ವಾತ್ರಿಂಶದಪಿ ಕೀರ್ತಿತಾಃ ।
ಏವಂ ಕೃತ್ವಾಪರಾಧಾನಿ ಮನುಜಾ ಹ್ಯಲ್ಪಚೇತಸಃ ॥ ೫ ॥

ಕರ್ಮಣಾ ಕೇನ ಶುದ್ಧ್ಯಂತಿ ಅಪರಾಧಸ್ಯ ಕಾರಿಣಃ ।
ತನ್ಮಮಾಚಕ್ಷ್ವ ತತ್ತ್ವೇನ ಮಮ ಪ್ರೀತ್ಯಾ ಚ ಮಾಧವ ॥ ೬ ॥

ತದ್ವೈ ಭೂಮ್ಯಾ ವಚಃ ಶ್ರುತ್ವಾ ಹೃಷೀಕೇಶೋ ಮಹಾಮನಾಃ ।
ದಿವ್ಯಂ ಧ್ಯಾನಂ ಸಮಾದಾಯ ಪ್ರತ್ಯುವಾಚ ವಸುಂಧರಾಂ ॥ ೭ ॥

---

೩. ನಾಲ್ಕುವರ್ಣದವರಿಗೂ ಸುಖಕರವಾದ ಆ ದೀಕ್ಷೆಯನ್ನು ಸೃಷ್ಟಿ ಮಾಡಿದ ಜಗದೊಡೆಯನಾದ ದೇವನ ಮಹಿಮೆಯು ಅದ್ಭುತವಾದುದು.

೪. ಈಶನೇ, ನನ್ನ ಮನಸ್ಸಿನಲ್ಲಿ ಕೇಳಬೇಕೆನಿಸಿರುವ ಅತಿರಹಸ್ಯವಿಚಾರವೊಂದನ್ನು, ಸಂಸಾರಿಗಳಾಗಿರುವ ಭಕ್ತರ ಸುಖಕ್ಕಾಗಿ ನೀನು ನನಗೆ ಹೇಳಬೇಕು.

೫–೬. ದೇವ, ನೀನು ಹಿಂದೆ ಮೂವತ್ತೆರಡು ಅಪರಾಧ(ತಪ್ಪುಗಳನ್ನು) ಹೇಳಿದೆಯಷ್ಟೆ. ಮಾಧವಾ, ಅಲ್ಪಬುದ್ಧಿಯುಳ್ಳ ಮನುಷ್ಯರು, ಆ ತಪ್ಪುಗಳನ್ನು ಮಾಡಿದರೆ, ಯಾವ ಕರ್ಮದಿಂದ ಶುದ್ಧರಾಗುವರೆಂಬುದನ್ನು ನಿಜವಾಗಿ, ನನ್ನಲ್ಲಿ ನಿನಗಿರುವ ಪ್ರೀತಿಯಿಂದಲೂ ಹೇಳು.

೭. ಭೂದೇವಿಯ ಆ ಮಾತನ್ನು ಕೇಳಿ, ಮಹಾಮನನಾದ ಹೃಷೀಕೇಶನು, ದಿವ್ಯಧ್ಯಾನವನ್ನು ಮಾಡಿ, ಬಳಿಕ ಅವಳಿಗೆ ಮುಂದಿನಂತೆ ಹೇಳಿದನು.

॥ ಶ್ರೀವರಾಹ ಉವಾಚ ॥

ಶುದ್ಧಾ ಭಾಗವತಾ ಭೂತ್ವಾ ಮಮ ಕರ್ಮಪರಾಯಣಾಃ ।
ಯೇ ತು ಭುಂಜಂತಿ ರಾಜಾನ್ನಂ ಲೋಭೇನ ಚ ಭಯೇನ ವಾ ॥ ೮ ॥

ಆಪದ್ಗತಾ ಹಿ ಭುಂಜಂತಿ ರಾಜಾನ್ನಂತು ವಸುಂಧರೇ ।
ದಶವರ್ಷಸಹಸ್ರಾಣಿ ಪಚ್ಯಂತೇ ನರಕೇ ನರಾಃ ॥ ೯ ॥

ಭಗವದ್ವಚನಂ ಶ್ರುತ್ವಾ ಕಂಪಿತಾ ಚ ವಸುಂಧರಾ ।
ದಿನಾನಿ ಸಪ್ತದಶ ಚ ಭಯಂ ತೀವ್ರಮಜಾಯತ ॥ ೧೦ ॥

ತತೋ ದೀನಮನಾ ಭೂತ್ವಾ ಸಾ ಮಹೀ ಶಂಸಿತವ್ರತಾ ।
ಉವಾಚ ಮಧುರಂ ವಾಕ್ಯಂ ಸರ್ವಲೋಕಸುಖಾವಹಂ ॥ ೧೧ ॥

॥ ಧರಣ್ಯುವಾಚ ॥

ಶೃಣು ತತ್ತ್ವೇನ ಮೇ ದೇವ ಹೃದಯೇ ಹಿ ವ್ಯವಸ್ಥಿತಂ ।
ಕೋ ನು ದೋಷೋಽಸ್ತಿರಾಜ್ಞಾಂ ಹಿ ತನ್ಮೇ ತ್ವಂ ವಕ್ತುಮರ್ಹಸಿ ॥ ೧೨ ॥

೮-೯ ಶ್ರೀ ವರಾಹ—ವಸುಂಧರೇ, ನನ್ನ ಕರ್ಮಗಳಲ್ಲಿ ನಿರತರಾದ ಶುದ್ಧರಾದ ಭಾಗವತರಾಗಿದ್ದರೂ ಯಾರು ಆಸೆಯಿಂದಾಗಲಿ, ಭಯದಿಂದಲೇ ಆಗಲಿ, ತೊಂದರೆಗೊಳಗಾಗಿಯೇ ಆಗಲಿ, ದೊರೆಯ ಅನ್ನವನ್ನು ತಿನ್ನುವರೋ, ಅವರು ಹತ್ತುಸಾವಿರವರ್ಷಕಾಲ ನರಕದಲ್ಲಿ ಬೇಗೆಗೊಳ್ಳುವರು.

೧೦. ಭಗವಂತನ ಮಾತನ್ನು ಕೇಳಿ ಭೂದೇವಿಯು ನಡುಗಿದಳು. ಹದಿನೇಳು ದಿನಗಳವರೆಗೂ ಅವಳಿಗೆ ಬಹಳ ಭಯವಾಗಿದ್ದಿತು.

೧೧. ಬಳಿಕ, ಸ್ತುತ್ಯವ್ರತೆಯಾದ ಅವಳು ದೀನಮನದವಳಾಗಿ ಸರ್ವ ಲೋಕಸುಖಕರವಾದ ಇಂಪಾದ ನುಡಿಗಳನ್ನು ಅವನೊಡನೆ ಹೇಳಿದಳು.

೧೨. ಭೂದೇವಿ—ದೇವ, ನನ್ನ ಮನದಲ್ಲಿರುವುದನ್ನು ನಿಜವಾಗಿ ಕೇಳು. ರಾಜರಲ್ಲಿ ಅಥವಾ ರಾಜಾನ್ನದಲ್ಲಿ ಇರುವ ದೋಷವೇನೋ ಅದನ್ನು ನನಗೆ ಹೇಳು.

ತತೋ ಭೂಮ್ಯಾ ವಚಃ ಶ್ರುತ್ವಾ ಸರ್ವಧರ್ಮವಿದಾಂ ವರಃ ।
ಪ್ರಾಹ ನಾರಾಯಣೋ ವಾಕ್ಯಂ ಧರ್ಮಕಾಮಾಂ ವಸುಂಧರಾಂ ॥ ೧೩ ॥

॥ ಶ್ರೀವರಾಹ ಉವಾಚ ॥

ಶೃಣು ಸುಂದರಿ ತತ್ವೇನ ಗುಹ್ಯಮೇತದನಿಂದಿತೇ ।
ರಾಜಾನ್ನಂ ತು ನ ಭೋಕ್ತವ್ಯಂ ಶುಭೈರ್ಭಾಗವತೈಸ್ಸದಾ ॥ ೧೪ ॥

ಯದ್ಯಪ್ಯೇಷ ಸಮತ್ವೇನ ರಾಜಾ ಲೋಕೇ ಪ್ರವರ್ತತೇ ।
ರಾಜಸಂ ತಾಮಸಂ ವಾಪಿ ಕುರ್ವನ್ಕರ್ಮ ಸುದಾರುಣಂ ॥ ೧೫ ॥

ಅಪಿ ವಾ ಗರ್ಹಿತಂ ತೇನ ರಾಜಾನ್ನಂ ತು ವಸುಂಧರೇ ।
ಧರ್ಮಸಂಧಾರಣಾರ್ಥಾಯ ನ ತು ಮೇ ರೋಚತೇ ಭುವಿ ॥ ೧೬ ॥

ತತೋ ಯದ್ಯತ್ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ಯಥಾ ರಾಜ್ಞಾಂ ತು ಭೋಜ್ಯಂ ವೈ ಶುದ್ಧೈರ್ಭಾಗವತೈರ್ನರೈಃ ॥ ೧೭ ॥

---

೧೩. ಧರ್ಮಗಳೆಲ್ಲವನ್ನೂ ಅರಿತವರಲ್ಲಿ ಮೇಲಾದ ನಾರಾಯಣನು ಭೂದೇವಿಯ ಮಾತನ್ನು ಕೇಳಿ, ಧರ್ಮದಲ್ಲಿ ಆಸಕ್ತಳಾದ ಅವಳಿಗೆ ಮುಂದಿನ ವಾಕ್ಯವನ್ನು ಹೇಳಿದನು.

೧೪. ಶ್ರೀವರಾಹ—ಸುಂದರಿ, ದೋಷರಹಿತೆ, ನಿಜವಾಗಿ ಈ ಗುಟ್ಟನ್ನು ಕೇಳು, ಶುಭರಾದ ಭಾಗವತರು ಎಂದಿಗೂ ರಾಜಾನ್ನವನ್ನು ಊಟಮಾಡಬಾರದು.

೧೫–೧೬. ಪ್ರಾಯಕವಾಗಿ ದೊರೆಯು ಲೋಕದಲ್ಲಿ ಸಮವಾಗಿ ವರ್ತಿಸುತ್ತಿದ್ದರೂ, ಬಹು ಘೋರವಾದ ರಾಜಸ ತಾಮಸಕರ್ಮಗಳನ್ನು ಮಾಡುವನಾದುದರಿಂದ ಅವನ ಅನ್ನವು ನಿಂದ್ಯವಾದುದು. ವಸುಂಧರೇ, ಆದುದರಿಂದ ಲೋಕದಲ್ಲಿ ಧರ್ಮಸಂಸ್ಥಾಪನೆಯ ದೃಷ್ಟಿಯಿಂದ ರಾಜಾನ್ನವು ನನಗೆ ಇಷ್ಟವಿಲ್ಲ.

೧೭. ವಸುಂಧರೇ, ಶುದ್ಧರಾದ ಭಾಗವತರೂ ರಾಜಾನ್ನವನ್ನು ಹೇಗೆ ಭುಜಿಸಬಹುದೆಂಬುದೇ ಮೊದಲಾಗಿ ನಾನು ಇನ್ನೂ ಏನೇನು ಹೇಳುವೆನೋ ಅದನ್ನೆಲ್ಲಾ ಕೇಳು.

ಸ್ಥಾಪಯಿತ್ವಾ ತು ಮಾಂ ದೇವಿ ವಿಧಿದೃಷ್ಟೇನ ಕರ್ಮಣಾ ।
ಧನಧಾನ್ಯಸಮೃದ್ಧಾನಿ ದತ್ವಾ ಭಾಗವತೈರಪಿ ॥ ೧೮ ॥

ಸಿದ್ಧಂ ಭಾಗವತೈಶ್ಚಾನ್ನಂ ಮಮ ಪ್ರಾಪಣಶೇಷಕಂ ।
ಭುಂಜಾನಸ್ತು ವರಾರೋಹೇ ನ ಸ ಪಾಪೇನ ಲಿಪ್ಯತೇ ॥ ೧೯ ॥

ಏವಂ ವಿಷ್ಣುವಚಃ ಶ್ರುತ್ವಾ ಧರಣೀ ಶಂಸಿತವ್ರತಾ ।
ವರಾಹರೂಪಿಣಂ ದೇವಂ ಪ್ರತ್ಯುವಾಚ ವರಾನನಾ ॥ ೨೦ ॥

॥ ಧರಣ್ಯುವಾಚ ॥

ರಾಜಾನ್ನಂ ತು ನರೋ ಭುಕ್ತ್ವಾ ಶುದ್ಧೋ ಭಾಗವತಶ್ಶುಚಿಃ ।
ಕರ್ಮಣಾ ಕೇನ ಶುದ್ಧ್ಯೇತ ತನ್ಮೇ ಬ್ರೂಹಿ ಜನಾರ್ದನ ॥ ೨೧ ॥

೧೮–೧೯. ದೇವಿ, ನನ್ನನ್ನು ವಿಧ್ಯುಕ್ತಕರ್ಮದಿಂದ ಸ್ಥಾಪಿಸಿ, ದೊರೆಯು ಬೇಕಾದ ಹಾಗೆ ಕೊಡುವ ದನಧಾನ್ಯಗಳಿಂದ ಭಗವದ್ಭಕ್ತರೇ ಸಿದ್ಧಮಾಡಿ, ಭಾಗವತರೇ ನನಗೆ ಅರ್ಪಿಸಿದ ಬಳಿಕ ಶೇಷಾನ್ನವನ್ನು ಊಟಮಾಡುವವನಿಗೆ ಯಾವ ಪಾಪವೂ ಅಂಟುವುದಿಲ್ಲ.

೨೦ ಸ್ತೋತ್ರಾರ್ಹವ್ರತೆಯೂ, ಸುಂದರಮುಖಿಯೂ ಆದ ಭೂದೇವಿಯು ವಿಷ್ಣುವಿನ ಈ ಮಾತನ್ನು ಕೇಳಿ, ವರಹಾರೂಪಿಯಾದ ಆ ದೇವನೊಡನೆ ಮತ್ತೆ ಮಾತನಾಡಿದಳು.

೨೧ "ಜನಾರ್ದನ, ಪರಿಶುದ್ಧನಾದ ಭಾಗವತನು ಒಂದುವೇಳೆ ರಾಜಾನ್ನವನ್ನು ತಿಂದನಾದರೆ, ಅವನು ಯಾವ ಕರ್ಮದಿಂದ ಮತ್ತೆ ಶುದ್ಧನಾಗುವನೋ ಅದನ್ನು ನನಗೆ ಹೇಳು."

|| ಶ್ರೀವರಾಹ ಉವಾಚ ||

ಶೃಣು ತತ್ತ್ವೇನ ಮೇ ದೇವಿ ಯನ್ಮಾಂ ತ್ವಂ ಭೀರು ಭಾಷಸೇ ।
ತರಂತಿ ಪುರುಷಾ ಯೇನ ರಾಜಾನ್ನಸ್ಯೋಪಭುಂಜಕಾಃ || ೨೨ ||

ಏಕಂ ಚಾಂದ್ರಾಯಣಂ ಕೃತ್ವಾ ಸಪ್ತಕೃಚ್ಛ್ರಂ ತು ಪುಷ್ಕಲಂ ।
ಕುರ್ಯಾತ್ಸಾಂತಪನಂ ಚೈಕಂ ಶೀಘ್ರಂ ಮುಚ್ಯಂತಿ ಕಿಲ್ಬಿಷಾತ್ ।
ನ ತಸ್ಯ ಚಾಪರಾಧೋಽಸ್ತಿ ವಸುಧೇ ವೈ ವಚೋ ಮಮ || ೨೩ ||

ಏವಮೇವ ನ ಭೋಕ್ತವ್ಯಂ ರಾಜಾನ್ನಂ ವೈ ಕದಾಚನ ।
ಮಮಾತ್ರ ಪೂಜಾಕಾಮೇನ ಯದೀಚ್ಛೇತ್ಪರಮಾಂ ಗತಿಂ || ೨೪ ||

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ರಾಜಾನ್ನಪ್ರಾಯಶ್ಚಿತ್ತಂ ನಾಮ ತ್ರಿಂಶದಧಿಕ ಶತತಮೋಽಧ್ಯಾಯಃ

---

೨೨. ನನ್ನ ದೇವಿ, ಭಯಶೀಲೆ, ನೀನು, ನನ್ನನ್ನು ಪ್ರಶ್ನಿಸುತ್ತಿರುವ, ರಾಜಾನ್ನವನ್ನು ತಿನ್ನುವವರು ಆ ಪಾಪದಿಂದ ಹೇಗೆ ಪಾರಾಗುವರೆಂಬುದನ್ನು ಸರಿಯಾಗಿ ಹೇಳುತ್ತೇನೆ. ಕೇಳು.

೨೩. ರಾಜಾನ್ನಭೋಜನವನ್ನು ಮಾಡಿದವನು, ಒಂದು ಚಾಂದ್ರಾಯಣ ವ್ರತವನ್ನೂ, ಪೂರ್ಣವಾದ ಏಳು ಕೃಚ್ಛ್ರವ್ರತಗಳನ್ನೂ, ಒಂದು ಸಾಂತಪನ ವ್ರತವನ್ನೂ ಮಾಡಿದರೆ ಬೇಗನೆ ಆ ಪಾಪದಿಂದ ಬಿಡುಗಡೆಯನ್ನು ಹೊಂದುವನು. ಇದು ನನ್ನ ಮಾತು. ವಸುಧೇ, ಈ ಪ್ರಾಯಶ್ಚಿತ್ತವಾದ ಬಳಿಕ ಅವನಿಗೆ ಪಾಪ ವೇನೂ ಇರುವುದಿಲ್ಲ.

೨೪. ಹೀಗಿರುವುದರಿಂದ ನನ್ನನ್ನು ಪೂಜಿಸಿ ಪರಮಗತಿಯನ್ನು ಪಡೆಯಲು ಬಯಸುವವನು ಎಂದೂ ರಾಜಾನ್ನವನ್ನೂಟಮಾಡಬಾರದು.

ಅಧ್ಯಾಯದ ಸಾರಾಂಶ—

ಶ್ರೀ ವರಾಹನು ಭೂದೇವಿಗೆ, ಭಕ್ತನು ರಾಜನ ಅನ್ನವನ್ನು ಊಟಮಾಡು ವುದು ಪಾಪವೆಂದು, ಅದಕ್ಕೆ ಪ್ರಾಯಶ್ಚಿತ್ತವನ್ನು ಹೇಳುವಲ್ಲಿಗೆ ಶ್ರೀ ವರಾಹ ಪುರಾಣದಲ್ಲಿ ನೂರಮೂವತ್ತನೆಯ ಅಧ್ಯಾಯ.

॥ ಶ್ರೀಃ ॥

–x–

ಏಕತ್ರಿಂಶದಧಿಕಶತತಮೋಧ್ಯಾಯಃ

ಅಥ ದಂತಕಾಷ್ಠಾಚರ್ವಣಪ್ರಾಯಶ್ಚಿತ್ತಂ

॥ ಶ್ರೀವರಾಹ ಉವಾಚ ॥

ದಂತಕಾಷ್ಠಮಚರ್ವಿತ್ವಾ ಯೋ ಹಿ ಮಾಮುಪಸರ್ಪತಿ ।
ಪೂರ್ವಕಾಲಕೃತಂ ಕರ್ಮ ತೇನ ಚೈಕೇನ ನಶ್ಯತಿ ॥ ೧ ॥

ನಾರಾಯಣವಚಃ ಶ್ರುತ್ವಾ ಪೃಥಿವೀ ಧರ್ಮಸಂಶ್ರಿತಾ ।
ವಿಷ್ಣುಭಕ್ತಸುಖಾರ್ಥಾಯ ಹೃಷೀಕೇಶಮುವಾಚ ಹ ॥ ೨ ॥

ನೂರ ಮೂವತ್ತೊಂದನೆಯ ಅಧ್ಯಾಯ

ಹಲ್ಲನ್ನುಜ್ಜದೇ ಇರುವುದಕ್ಕೆ ಪ್ರಾಯಶ್ಚಿತ್ತ

೧. ಶ್ರೀವರಾಹ—ವಿಧಿಯಲ್ಲಿ ಹೇಳಿರುವ ಕಡ್ಡಿಯಿಂದ ಹಲ್ಲನ್ನುಜ್ಜದೇ ನನ್ನ ಹತ್ತಿರ ಬಂದರೆ ಆದೊಂದು ತಪ್ಪಿನಿಂದ, ಆವರು ಹಿಂದೆಮಾಡಿದ ಸತ್ಕರ್ಮವೆಲ್ಲವೂ ಹಾಳಾಗುವುದು.

೨. ಧರ್ಮವನ್ನೇ ಆಶ್ರಯಿಸಿರುವ ಭೂದೇವಿಯು ನಾರಾಯಣನ ಈ ಮಾತನ್ನು ಕೇಳಿ, ವಿಷ್ಣುಭಕ್ತರ ಸುಖಾರ್ಥವಾಗಿ, ಇಂದ್ರಿಯಾಧಿಪನಾದ ಆತನೊಡನೆ ಮುಂದಿನ ಮಾತನಾಡಿದಳು.

॥ ಧರಣ್ಯುವಾಚ ॥

ಸರ್ವಕಾಲಕೃತಂ ಕರ್ಮ ಕ್ಲೇಶೇನ ಮಹತಾನಘ ।
ಕಥಮೇಕಾಪರಾಧೇನ ಸರ್ವಮೇವ ಪ್ರಣಶ್ಯತಿ ॥ ೧ ॥

॥ ಶ್ರೀವರಾಹ ಉವಾಚ ॥

ಶೃಣು ಸುಂದರಿ ತತ್ವೇನ ಕಥ್ಯಮಾನಂ ಮಯಾನಘೇ ।
ಯೇನ ಚೈಕಾಪರಾಧೇನ ಪೂರ್ವಕರ್ಮ ಪ್ರಣಶ್ಯತಿ ॥ ೪ ॥

ಮನುಷ್ಯಃ ಕಿಲ್ಬಿಷೀ ಭದ್ರೇ ಕಫಪಿತ್ತಸಮನ್ವಿತಃ ।
ಪೂಯಶೋಣಿತಸಂಪೂರ್ಣಂ ದುರ್ಗಂಧಿ ಮುಖಮಸ್ಯ ತತ್ ॥ ೫ ॥

ತತ್ಸರ್ವಬೀಜಂ ನಶ್ಯೇತ ದಂತಕಾಷ್ಠಸ್ಯ ಭಕ್ಷಣಾತ್ ।
ಶುದ್ಧಿರ್ಭಾಗವತೀ ಚೈವ ಆಚಾರೇಣಾಪ್ಯವರ್ಜಿತಾ ॥ ೬ ॥

---

೧. ಭೂದೇವಿ—ದೋಷರಹಿತನೇ, ಹೆಚ್ಚಾದ ಕಷ್ಟದಿಂದ ಯಾವಾಗಲೂ ಮಾಡಿದ ಪುಣ್ಯಕರ್ಮವೆಲ್ಲವೂ ಒಂದು ಅಪರಾಧದಿಂದ ಹೇಗೆ ಹಾಳಾಗುವುದು?

೪. ಶ್ರೀವರಾಹ—ಸುಂದರಿ, ಪುಣ್ಯಶಾಲಿನಿ, ಹಲ್ಲನ್ನುಜ್ಜದ ಒಂದು ತಪ್ಪಿನಿಂದ ಏಕೆ ಹಿಂದಿನ ಸತ್ಕರ್ಮವು ನಾಶವಾಗುವುದೆಂಬುದನ್ನು ನಾನು ನಿಜವಾಗಿ ಹೇಳುತ್ತೇನೆ ಕೇಳು.

೫–೬. ಭದ್ರೇ, ಮನುಷ್ಯನು ಕಲ್ಮಷವುಳ್ಳವನು. ಕಫಪಿತ್ತಗಳಿಂದ ಕೂಡಿದವನು. ಅವನ ಬಾಯಿ ಗೀಜುರಕ್ತಗಳಿಂದ ಕೂಡಿ ಕೆಟ್ಟ ನಾತವುಳ್ಳುದಾಗಿರುವುದು. ಹಲ್ಲುಜ್ಜುವ ಕಡ್ಡಿಯನ್ನು ಅಗಿದು, ಹಲ್ಲುಜ್ಜುವುದರಿಂದ ದುರ್ಗಂಧ ಬೀಜವೆಲ್ಲವೂ ನಾಶವಾಗುವುದು. ಅಲ್ಲದೆ ಅದು ಆಚಾರಯುಕ್ತವಾದ ಭಗವತ್ಸಂಬಂಧವಾದ ಶುದ್ಧಿಯೂ ಆಗಿರುವುದು.

|| ಧರಣ್ಯುವಾಚ ||

ದಂತಕಾಷ್ಠಮಖಾದಿತ್ವಾ ಯಃ ಕರ್ಮಾಣಿ ಕರೋತಿ ತೇ |
ಪ್ರಾಯಶ್ಚಿತ್ತಂ ಚ ಮೇ ಬ್ರೂಹಿ ಯೇನ ಧರ್ಮೋ ನ ನಶ್ಯತಿ || ೭ ||

|| ಶ್ರೀವರಾಹ ಉವಾಚ ||

ಏವಮೇತನ್ಮಹಾಭಾಗೇ ಯನ್ಮಾಂ ತ್ವಂ ಪರಿಪೃಚ್ಛಸಿ |
ಕಥಯಿಷ್ಯಾಮಿ ಹೀದಂ ತೇ ಯಥಾ ಶುದ್ಧ್ಯಂತಿ ಮಾನವಾಃ || ೮ ||

ಆಕಾಶಶಯನಂ ಕೃತ್ವಾ ದಿನಾನಿ ದ್ವೇ ಚ ಪಂಚ ಚ ।
ಅಭುಕ್ತದಂತಕಾಷ್ಠಾಶ್ಚ ಏವಂ ಶುದ್ಧ್ಯಂತಿ ಮಾನವಾಃ || ೯ ||

ಏವಂ ತೇ ಕಥಿತಂ ಭದ್ರೇ ದಂತಕಾಷ್ಠಸ್ಯ ಭಕ್ಷಣಂ || ೧೦ ||

---

೭. ಭೂದೇವಿ—ಹಲ್ಲುಕಡ್ಡಿಯನ್ನಗಿದು ಹಲ್ಲುಜ್ಜದೇ ನಿನ್ನ ಕರ್ಮಗಳನ್ನು ಮಾಡುವವನಿಗೆ ಪ್ರಾಯಶ್ಚಿತ್ತವನ್ನು ಹೇಳು. ಯಾವ ಕರ್ಮದಿಂದ ಅವನ ಧರ್ಮವು ನಾಶವಾಗದೇ ಇರುವುದು ?

೮. ಶ್ರೀವರಾಹ—ಮಹಾಭಾಗ್ಯೇ, ನೀನು ಹೀಗೆ ನನ್ನಲ್ಲಿ ಇದನ್ನು ಕೇಳುವುದರಿಂದ ಆ ಅಪರಾಧಮಾಡಿದ ಮನುಷ್ಯರು ಹೇಗೆ ಶುದ್ಧರಾಗುವರೆಂಬುದನ್ನು ಹೇಳುತ್ತೇನೆ.

೯. ಏಳು ದಿನಗಳು ಬಯಲಿನಲ್ಲಿ ಹಾಸಿಗೆ ಹೊದಿಕೆಗಳಿಲ್ಲದೆ (ಆಕಾಶ ಶಯನ) ಮೇಲ್ಮುಖನಾಗಿ ಮಲಗಿರುವುದರಿಂದ ಹಲ್ಲುಕಡ್ಡಿಯನ್ನಗಿದು ಬಾಯನ್ನು ಶುದ್ಧಿಮಾಡಕೊಳ್ಳದವರೂ ಶುದ್ಧರಾಗುವರು.

೧೦. ಮಂಗಳೇ, ನಿನಗೆ ಹೀಗೆ ಹಲ್ಲುಕಡ್ಡಿಯನ್ನು ಕಚ್ಚಿ ಹಲ್ಲನ್ನು ಉಜ್ಜುವುದನ್ನು ಹೇಳಿದೆನು.

ಯ ಏತೇನ ವಿಧಾನೇನ ಪ್ರಾಯಶ್ಚಿತ್ತಂ ಸಮಾಚರೇತ್ ।
ಕುತಸ್ತಸ್ಯಾಪರಾಧೋಽಸ್ತಿ ಏವಮೇವ ನ ಸಂಶಯಃ ॥ ೧೧ ॥

ಇತಿ ಶ್ರೀವರಾಹಪುರಾಣೇ ದಂತಕಾಷ್ಠಾಚರ್ವಣಪ್ರಾಯಶ್ಚಿತ್ತಂ ನಾಮ ಏಕತ್ರಿಂಶದಧಿಕ ಶತತಮೋಽಧ್ಯಾಯಃ

---

೧೧. ಈ ಬಗೆಯಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವವನಿಗೆ ಪಾಪ ವಿರುವುದಿಲ್ಲವೆಂಬುದರಲ್ಲಿ ಸಂದೇಹವಿಲ್ಲ.

ಅಧ್ಯಾಯದ ಸಾರಾಂಶ—

ಶ್ರೀವರಾಹನು ಭೂದೇವಿಗೆ, ಬಾಯಿಹಲ್ಲುಗಳನ್ನು ಶುದ್ಧಿಮಾಡಿಕೊಳ್ಳದೇ ದೇವಸನ್ನಿಧಿಗೆ ಹೋಗುವವರಿಗೆ ಉಂಟಾಗುವ ದೋಷವನ್ನೂ ಅದಕ್ಕೆ ಮಾಡಿಕೊಳ್ಳಬೇಕಾದ ಪ್ರಾಯಶ್ಚಿತ್ತವನ್ನೂ ಹೇಳುವಲ್ಲಿಗೆ ಶ್ರೀವರಾಹ ಪುರಾಣದಲ್ಲಿ ನೂರಮೂವತ್ತೊಂದನೆಯ ಅಧ್ಯಾಯ.

॥ ಶ್ರೀಃ ॥

–X–

ದ್ವಾತ್ರಿಂಶದಧಿಕಶತತಮೋಽಧ್ಯಾಯಃ

ಅಥ ಮೃತಕಸ್ಪರ್ಶಾದಿದೋಷಪ್ರಾಯಶ್ಚಿತ್ತಂ

॥ ಶ್ರೀವರಾಹ ಉವಾಚ ॥

ಗತ್ವಾ *ಯೋ ಮೈಥುನಂ ಭದ್ರೇ +ಅಸ್ನಾತೋ ಕೇಶವಂ ಸ್ಪೃಶೇತ್ ।
ರೇತಃ ಪಿಬತಿ ದುರ್ಬುದ್ಧಿಃ ಸಹಸ್ರಂ ನವ ಪಂಚ ಚ ॥ ೧ ॥

ವರ್ಷಂ ನಾರಾಯಣಾಚ್ಛ್ರುತ್ವಾ ಸಾ ಮಹೀ ಶಂಸಿತವ್ರತಾ ।
ತತೋ ದಿನಮನಾ ಭೂತ್ವಾ ಪ್ರೋವಾಚ ಮಧುಸೂದನಂ ॥ ೨ ॥

ನೂರ ಮೂವತ್ತೆರಡನೆಯ ಅಧ್ಯಾಯ

ಶವವನ್ನು ಮುಟ್ಟಿದುದೇ ಮೊದಲಾದ ದೋಷಗಳಿಗೆ ಪ್ರಾಯಶ್ಚಿತ್ತ

೧. ಶ್ರೀವರಾಹ—ಭದ್ರೇ, ಸ್ತ್ರೀಸಂಗವನ್ನು ಮಾಡಿ, ಸ್ನಾನಮಾಡದೆ ನನ್ನನ್ನು ಮುಟ್ಟುವ ದುರ್ಬುದ್ಧಿಯು ಹದಿನಾಲ್ಕುಸಹಸ್ರ ವರ್ಷಕಾಲ ರೇತಸ್ಸನ್ನು ಪಾನಮಾಡುವನು.

೨. ನಾರಾಯಣನಿಂದ ಈ ಮಾತನ್ನು ಕೇಳಿದ ಸ್ತುತ್ಯವ್ರತೆಯಾದ ಆ ಭೂದೇವಿಯು ದೀನಮನಳಾಗಿ ಆ ಮಧುಸೂದನನನ್ನು ನೋಡಿ, ಹೇಳಿದಳು.

---

* ತು.

+ ಅಸ್ನಾತೋ ಯಃ ಶವಂ ಸ್ಪೃಶೇತ್ (ಬೊಂ.)

ಅಸ್ನಾತೋ ಯಃ ಸಮಸ್ಪೃಶೇತ್ (ಕ.)

|| ಧರಣ್ಯುವಾಚ ||

ಕಿಮಿದಂ ಭಾಷಸೇ ದೇವ ಧರ್ಮಂ ಭೀಷಣಸಂಕಟಂ |
ಕಥಮೇವಂ ಪುಮಾನ್ಸ್ತ್ರೈ ಸ ರೇತಃಪಾನಪರೋ ಭವೇತ್ |
ಏತನ್ಮೇ ಪರಮಂ ದುಃಖಂ ತದ್ಭವಾನ್ವಕ್ತುಮರ್ಹತಿ || ೩ ||

|| ಶ್ರೀವರಾಹ ಉವಾಚ ||

ಶೃಣು ತತ್ತ್ವೇನ ಮೇ ದೇವಿ ಇದಂ ಗುಹ್ಯಮನುತ್ತಮಂ |
ಚಿಹ್ನಮೇತದ್ವರಾರೋಹೇ ಅಧಿಚಾರವಿನಿಶ್ಚಯಃ || ೪ ||

ಪುರುಷಃ ಸ್ತ್ರೀಷುಕರ್ಮಾಣಿ ಯೋ ವಿಕುರ್ವೀತ ನಿರ್ಘೃಣಃ |
ದೃಷ್ಟಂ ತಸ್ಯಾಪರಾಧಸ್ಯ ಫಲಂ ಪ್ರಾಪ್ನೋತಿ ಮಾನವಃ || ೫ ||

ಏವಮೇತದ್ವರಾರೋಹೇ ಯನ್ಮಾಂ ತ್ವಂ ಪರಿಪೃಚ್ಛಸಿ |
ಅಪರಾಧಸ್ಯ ದೋಷೇಣ ವಿಶುದ್ಧಿಶ್ಚ ನ ಜಾಯತೇ || ೬ ||

ಪ್ರಾಯಶ್ಚಿತ್ತಂ ಪ್ರವಕ್ಷ್ಯಾಮಿ ರಾಗದೋಷೇಣ ದೂಷಿತಂ || ೭ ||

---

೩. ಭೂದೇವಿ—ದೇವ, ಇದೇನು! ಘೋರಸಂಕಟದ ಧರ್ಮವನ್ನು ಹೇಳುತ್ತೀಯೆ. ಆ ಪಾಪಮಾಡಿದವನು ನೀನು ಹೇಳಿದಂತೆ ಹೇಗೆ ರೇತಸ್ಸನ್ನು ಕುಡಿಯುವುದರಲ್ಲಿ ಆಸಕ್ತನಾಗುವನು? ಇದು ನನಗೆ ಪರಮದುಃಖವಾಗಿದೆ. ಆದುದರಿಂದ ನೀನದನ್ನು ಹೇಳಬೇಕು.

೪. ಶ್ರೀವರಾಹ—ವರಾರೋಹೇ, ನನ್ನ ದೇವಿ, ರಹಸ್ಯವೂ, ಉತ್ತಮವೂ ದುಷ್ಕರ್ಮವನ್ನು ನಿರ್ಣಯಿಸುವುದೂ ಆದ ಈ ಗುರುತನ್ನು ಕೇಳು.

೫. ಪುರುಷನು ಕಾಮದಿಂದ ನಿರ್ಘೃಣನಾಗಿ ಸ್ತ್ರೀಯರಲ್ಲಿ ಅಕ್ರಮಸಂಗ ಮಾಡುತ್ತಿರುವುದೇ ಅವನ ಅಪರಾಧಕ್ಕೆ ದೃಷ್ಟವಾದ ದುಷ್ಫಲವಾಗಿದೆ. ಆ ಪಾಪಿಯು ಅದೃಷ್ಟವಾದ ದುಷ್ಫಲವನ್ನೂ ಪಡೆಯುವನು.

೬-೭. ವರಾರೋಹೇ, ನೀನು ನನ್ನನ್ನು ಕೇಳಿದ ಅದು ಹಾಗೆಯೇ ಸರಿ. ಅಪರಾಧದ ದೋಷದಿಂದ ಅದಕ್ಕೆ ಸಾಮಾನ್ಯವಾಗಿ ಶುದ್ಧಿಯುಂಟಾಗುವುದಿಲ್ಲ. ರಾಗದೋಷದಿಂದಾದ ಆ ಅಪರಾಧಕ್ಕೆ ಪ್ರಾಯಶ್ಚಿತ್ತವನ್ನು ಹೇಳುತ್ತೇನೆ.

ಗೃಹಸ್ಥಾಃ ಪುರುಷಾ ಭದ್ರೇ ಮಮ ಕರ್ಮಪರಾಯಣಾಃ |
ಯಾವಕೇನ ತ್ರ್ಯಹಂ ಕ್ಷಿಪ್ತ್ವಾ ಪಿಣ್ಯಾಕೇನ ದಿನತ್ರಯಂ |
ವಾಯುಭಕ್ಷಂ ದಿನಂ ತ್ವೇಕಂ ತತೋ ಮುಚ್ಯೇತ ಕಿಲ್ಬಿಷಾತ್ ॥ ೮ ॥

ಯ ಏವಂ ಕುರುತೇ ಭೂಮೇ ವಿಧಿದೃಷ್ಟೇನ ಕರ್ಮಣಾ |
ಜ್ಞಾತ್ವಾ ಕರ್ಮಾಪರಾಧಂ ತು ನ ಸ ಪಾಪೇನ ಲಿಪ್ಯತೇ ॥ ೯ ॥

ಏತತ್ತೇ ಕಥಿತಂ ಭದ್ರೇ ಮಿಥುನಂ ಯೋಽಭಿಗಚ್ಛತಿ |
ಪ್ರಾಯಶ್ಚಿತ್ತಂ ಮಹಾಭಾಗೇ ಮಮ ಲೋಕಸುಖಾವಹಂ ॥ ೧೦ ॥

ಸ್ಪೃಷ್ಟ್ವಾ ತು ಮೃತಕಂ ಭದ್ರೇ ನರಂ ಪಂಚತ್ವಮಾಗತಂ |
ಮಮ ಶಾಸ್ತ್ರಂ ಬಹಿಷ್ಕೃತ್ಯ ಯಃ ಶ್ಮಶಾನಂ ಪ್ರಪದ್ಯತೇ ॥ ೧೧ ॥

ಪಿತರಸ್ತಸ್ಯ ಸುಶ್ರೋಣಿ ಆತ್ಮನಶ್ಚ ಪಿತಾಮಹಾಃ |
ಶ್ಮಶಾನೇ ಜಂಬುಕಾ ಭೂತ್ವಾ ಭಕ್ಷಯಂತಿ ಶವಾಂಸ್ತಥಾ ॥ ೧೨ ॥

---

೮. ಭದ್ರೇ, ನನ್ನ ಕರ್ಮದಲ್ಲಿ ನಿರತರಾದ ಗೃಹಸ್ಥ ಪುರುಷರು ಸ್ತ್ರೀ ಸಂಗವನ್ನು ಮಾಡಿ, ಸ್ನಾನಮಾಡದೆ ನನ್ನನ್ನು ಮುಟ್ಟಿ ದೋಷಯುಕ್ತರಾದರೆ, ಅಲಸಂದೆಯನ್ನು ತಿಂದು ಮೂರು ದಿನಗಳನ್ನೂ, ಹಿಂಡಿಯನ್ನು ತಿಂದು ಮೂರು ದಿನಗಳನ್ನೂ, ವಾಯುಸೇವನೆಯಿಂದ ಮಾತ್ರವೇ ಒಂದು ದಿನವನ್ನೂ ಕಳೆದರೆ, ಆ ದೋಷವನ್ನು ಕಳೆದುಕೊಳ್ಳುವರು.

೯. ಭೂಮೀ, ತಾನು ಅಪರಾಧಕಾರ್ಯವನ್ನರಿತು, ವಿಧ್ಯುಕ್ತವಾದ ಕರ್ಮ ದಿಂದ ಹೀಗೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವವನಿಗೆ ಪಾಪವು ಅಂಟುವುದಿಲ್ಲ.

೧೦. ಭದ್ರೇ, ಸ್ತ್ರೀಸಮಾಗಮಮಾಡಿ, ಶುದ್ಧನಾಗದೆ ನನ್ನ ಪೂಜೆಯನ್ನು ಮಾಡುವವನಿಗೆ, ಆ ದೋಷವನ್ನು ಹೋಗಲಾಡಿಸಿ, ನನ್ನ ಲೋಕದ ಸುಖ ವನ್ನುಂಟುಮಾಡುವ ಈ ಪ್ರಾಯಶ್ಚಿತ್ತವನ್ನು ನಿನಗೆ ಹೇಳಿದ್ದೇನೆ.

೧೧–೧೨. ಸುಂದರಿ, ಭದ್ರೇ, ನನ್ನ ಶಾಸ್ತ್ರವನ್ನು ಮೀರಿ ಹೆಣವನ್ನು ಮುಟ್ಟುವವನ ಮತ್ತು ಶ್ಮಶಾನಕ್ಕೆ ಹೋಗುವವನ ಪಿತೃಪಿತಾಮಹರು ಸ್ಮಶಾನದಲ್ಲಿ ನರಿಗಳಾಗಿ ಹೆಣಗಳನ್ನು ತಿನ್ನುವರು.

ತತೋ ಹರೇರ್ವಚಃ ಶ್ರುತ್ವಾ ಧರ್ಮಕಾಮಾ ವಸುಂಧರಾ ।
ಉವಾಚ ಮಧುರಂ ವಾಕ್ಯಂ ಸರ್ವಲೋಕಹಿತಾಯ ವೈ ॥ ೧೩ ॥

॥ ಧರಣ್ಯುವಾಚ ॥

ತವ ನಾಥ ಪ್ರಪನ್ನಾನಾಂ ಕ್ವ ಪಾಪಂ ವಿದ್ಯತೇ ಪ್ರಭೋ ।
ಪ್ರಾಯಶ್ಚಿತ್ತಂ ಚ ಮೇ ಬ್ರೂಹಿ ಯೇನ ಮುಚ್ಯಂತಿ ಕಿಲ್ಬಿಷಾತ್ ॥ ೧೪ ॥

॥ ಶ್ರೀವರಾಹ ಉವಾಚ ॥

ಶೃಣು ಸುಂದರಿ ತತ್ವೇನ ಯನ್ಮಾಂ ತ್ವಂ ಪರಿಪೃಚ್ಛಸಿ ।
ಕಥಯಿಷ್ಯಾಮಿ ತೇ ಹೀದಂ ಶೋಭನಂ ಪಾಪನಾಶನಂ ॥ ೧೫ ॥

ಏಕಾಹಾರೋ ದಿನಾನ್ಸಪ್ತ ತ್ರಿರಾತ್ರಂ ಚಾಪ್ಯುಪೋಷಿತಃ ।
ಪಂಚಗವ್ಯಂ ತತಃ ಪೀತ್ವಾ ತತೋ ಮುಚ್ಯೇತ ಕಿಲ್ಬಿಷಾತ್ ॥ ೧೬ ॥

---

೧೩. ಹರಿಯ ಆ ಮಾತನ್ನು ಕೇಳಿ, ಧರ್ಮದಲ್ಲಿ ಆಸಕ್ತಳಾದ ಭೂದೇವಿಯು ಸರ್ವಲೋಕಹಿತಾರ್ಥವಾಗಿ ಮುಂದಿನ ಇಂಪಾದ ಮಾತನಾಡಿದಳು.

೧೪. ಭೂದೇವಿ—ನಾಥ, ಪ್ರಭೂ, ನಿನ್ನನ್ನು ಆಶ್ರಯಿಸಿದವರಿಗೆ (ಮರೆಹೊಕ್ಕವರಿಗೆ) ಪಾಪವೆಲ್ಲಿಯದು ? ಆ ಪಾಪದಿಂದ ಬಿಡುವನ್ನು ಹೊಂದುವುದಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ನನಗೆ ಹೇಳು.

೧೫. ಶ್ರೀವರಾಹ—ಸುಂದರಿ, ನೀನು ನನ್ನನ್ನು ಪ್ರಾರ್ಥಿಸುತ್ತಿರುವ, ಶೋಭನವೂ, ಪಾಪನಾಶಕವೂ ಆದ ಇದನ್ನು ನಿಜವಾಗಿ ಹೇಳುತ್ತೇನೆ ಕೇಳು.

೧೬. ಏಳು ದಿನಗಳು, ಒಂದು ಹೊತ್ತು ಮಾತ್ರ ಊಟಮಾಡಿ, ಬಳಿಕ ಮೂರು ದಿನ ಉಪವಾಸಮಾಡಿ, ಅನಂತರ ಪಂಚಗವ್ಯವನ್ನು ಸೇವಿಸಿದರೆ ಪಾಪವನ್ನು ಕಳೆದುಕೊಳ್ಳುವನು.

ಶವೇ ಸ್ಪೃಷ್ಟೇಽಪರಾಧಸ್ಯ ಏಷ ತೇ ಕಥಿತೋ ವಿಧಿಃ ।
ಸರ್ವಥಾ ವರ್ಜನೀಯಂ ವೈ ಸರ್ವಭಾಗವತೇನ ತು ॥ ೧೭ ॥

ಯ ಏತೇನ ವಿಧಾನೇನ ಪ್ರಾಯಶ್ಚಿತ್ತಂ ಸಮಾಚರೇತ್ ।
ವಿಮುಕ್ತಸ್ಸರ್ವಪಾಪೇಭ್ಯೋ ನಾಪರಾಧೋಸ್ತಿ ತಸ್ಯ ವೈ ॥ ೧೮ ॥

ನಾರೀಂ ರಜಸ್ವಲಾಂ ಸ್ಪೃಷ್ಟ್ವಾ ಯೋ ಮಾಂ ಸ್ಪೃಶತಿ ನಿರ್ಭಯಃ ।
ರಾಗಮೋಹೇನ ಸಂಯುಕ್ತಃ ಕಾಮೇನ ಚ ವಶೀಕೃತಃ ।
ವರ್ಷಾಣಾಂತು ಸಹಸ್ರೈಕಂ ರಜಃ ಪಿಬತಿ ನಿರ್ಘೃಣಃ ॥ ೧೯ ॥

ಅಂಧಶ್ಚ ಜಾಯತೇ ದೇವಿ ದರಿದ್ರೋ ಜ್ಞಾನಮೂರ್ಖವಾನ್ ॥ ೨೦ ॥

ನ ಚ ವಿಂದತಿ ಚಾತ್ಮಾನಂ ಪತಿತೋ ನರಕೇ ಯಥಾ ।
ಅಪರಾಧಮಿಮಂ ಕೃತ್ವಾ ತತ್ರೈವಂ ನಾಸ್ತಿ ಸಂಶಯಃ ॥ ೨೧ ॥

---

೧೭. ಹೆಣವನ್ನು ಮುಟ್ಟಿದ ಅಪರಾಧಕ್ಕೆ ಈ ವಿಧಿಯನ್ನು ಹೇಳಿದ್ದೇನೆ. ಭಗವದ್ಭಕ್ತರು ಸರ್ವಥಾ ಶವವನ್ನು ಮುಟ್ಟಿ, ನನ್ನನ್ನು ಪೂಜಿಸಬಾರದು.

೧೮. ಶವವನ್ನು ಮುಟ್ಟಿದವನು ಈ ವಿಧಾನದಿಂದ ಪ್ರಾಯಶ್ಚಿತ್ತವನ್ನು ಮಾಡಿಕೊಂಡರೆ ಸರ್ವಪಾಪಗಳನ್ನೂ ಕಳೆದುಕೊಳ್ಳುವನು. ಅವನ ಅಪರಾಧ ವೇನೂ ಇರುವುದಿಲ್ಲ.

೧೯. ರಜಸ್ವಲೆಯಾದವಳನ್ನು ಮುಟ್ಟಿ, ರಾಗಮೋಹಗಳಿಂದ ಕೂಡಿ ಕಾಮಾಧೀನನಾದ ಯಾವನು ನನ್ನನ್ನು ಮುಟ್ಟುವನೋ ಆ ನಿಷ್ಕರುಣಿಯು ಒಂದು ಸಾವಿರವರ್ಷ ರಜಸ್ಸನ್ನು ಕುಡಿಯುವನು.

೨೦–೨೧. ದೇವಿ, ಇದೂ ಅಲ್ಲದೆ ಈ ಅಪರಾಧವನ್ನು ಮಾಡಿದವನು ಕುರುಡನಾಗಿಯೂ, ದರಿದ್ರನಾದ ಮೂರ್ಖನಾಗಿಯೂ ಹುಟ್ಟಿ, ನರಕದಲ್ಲಿ ಬಿದ್ದವನಂತೆ ಆತ್ಮಜ್ಞಾನವಿಲ್ಲದವನಾಗುವುದರಲ್ಲಿ ಸಂದೇಹವಿಲ್ಲ.

|| ಧರಣ್ಯುವಾಚ ||

ತವ ದೇವ ಪ್ರಪನ್ನಾನಾಂ ಮೋಕ್ಷಂ ಸಂಸಾರಸಾಗರಾತ್ || ೨೨ ||

ಅಪರಾಧಸಮಾಯುಕ್ತಸ್ತವ ಕರ್ಮಪರಾಯಣಃ ।
ಕರ್ಮಣಾ ಯೇನ ಶುದ್ಧ್ಯೇತ ತನ್ಮೇ ಬ್ರೂಹಿ ಜನಾರ್ದನ || ೨೩ ||

|| ಶ್ರೀವರಾಹ ಉವಾಚ ||

ಸ್ಪೃಷ್ಟ್ವಾ ರಜಸ್ವಲಾಂ ನಾರೀಂ ನರೋ ಮದ್ಭಕ್ತಿತತ್ಪರಃ ।
ತಪಃ ಕೃತ್ವಾ ತ್ರಿರಾತ್ರಂ ತು ಆಕಾಶಶಯನೇ ವಸೇತ್ || ೨೪ ||

ಶುದ್ಧೋ ಭಾಗವತೋ ಭೂತ್ವಾ ಮಮ ಕರ್ಮಪರಾಯಣಃ ।
ಏವಂ ಕೃತ್ವಾ ಮಹಾಭಾಗೇ ಪ್ರಾಯಶ್ಚಿತ್ತಂ ಮಮಪ್ರಿಯಂ || ೨೫ ||

ಮುಚ್ಯತೇ ಕಿಲ್ಬಿಷಾದ್ದೇವಿ ಆಚಾರೇಣ ಬಹಿಷ್ಕೃತಃ ।
ಏತತ್ತೇ ಕಥಿತಂ ಭದ್ರೇ ಯತ್ ಸ್ಪೃಷ್ಟ್ವಾ ತು ರಜಸ್ವಲಾಂ || ೨೬ ||

೨೨–೨೩. ಭೂದೇವಿ—ದೇವ, ಜನಾರ್ದನ, ನಿನ್ನನ್ನು ಆಶ್ರಯಿಸಿದವರಿಗೆ ಸಂಸಾರಸಾಗರದಿಂದ ಮೋಕ್ಷವಾಗಬೇಕಲ್ಲವೆ! ಆದುದರಿಂದ ನಿನ್ನ ಕರ್ಮದಲ್ಲಿ ನಿರತನಾದವನು ಅಪರಾಧಿಯಾದರೆ ಯಾವ ಕರ್ಮದಿಂದ ಶುದ್ಧನಾಗುವನೋ ಅದನ್ನು ನನಗೆ ಹೇಳು.

೨೪. ಶ್ರೀವರಾಹ—ನನ್ನ ಭಕ್ತಿಯಲ್ಲಿ ನಿರತನಾದವನು ರಜಸ್ವಲೆಯನ್ನು ಮುಟ್ಟಿದರೆ, ತಪಸ್ಸನ್ನು ಮಾಡಿ, ಮೂರು ರಾತ್ರಿ ಬಯಲಿನಲ್ಲಿ ಹಾಸಿಗೆಹೊದಿಕೆ ಗಳಿಲ್ಲದೆ ಮಲಗಬೇಕು.

೨೫–೨೬. ಶುದ್ಧನಾದ ಭಾಗವತನೂ, ನನ್ನ ಕರ್ಮದಲ್ಲಿ ನಿರತನೂ ಆಗಿದ್ದು ರಜಸ್ವಲೆಯನ್ನು ಮುಟ್ಟಿ ಆಚಾರದಿಂದ (ಬಹಿಷ್ಕೃತನಾದರೆ) ತಪ್ಪಿದವ ನಾದರೆ, ನನಗೆ ಪ್ರಿಯವಾದ ಈ ಪ್ರಾಯಶ್ಚಿತ್ತವನ್ನು ಮಾಡಿ ಪಾಪವನ್ನು ಕಳೆದು ಕೊಳ್ಳುವನು. ಭದ್ರೇ, ಇದನ್ನು ನಿನಗೆ ಹೇಳಿದುದಾಯಿತು.

ಸ್ಪೃಷ್ಟ್ವಾ ತು ಮೃತಕಂ ದೇವಿ ಯೋ ಮತ್ ಕ್ಷೇತ್ರೇಷು ತಿಷ್ಠತಿ ।
ಶತಂ ವರ್ಷಸಹಸ್ರಾಣಿ ಗರ್ಭೇಷು ಪರಿವರ್ತತೇ ॥ ೨೭ ॥

ದಶವರ್ಷಸಹಸ್ರಾಣಿ ಚಂಡಾಲಶ್ಚೈವ ಜಾಯತೇ ।
ಅಂಧಸ್ಸಪ್ತಸಹಸ್ರಾಣಿ ಮಂಡೂಕಶ್ಚ ಶತಂ ಸಮಾಃ ॥ ೨೮ ॥

ಮಕ್ಷಿಕಾ ತ್ರೀಣಿ ವರ್ಷಾಣಿ ಟಿಟ್ಟಿಭ್ಯೈಕಾದಶಂ ಸಮಾಃ ।
ದಂಶೋ ವೈ ಸಪ್ತ ಚಾನ್ಯಾನಿ ಕೃಕಲಾಸೋ ಭವೇತ್ಸಮಾಃ ॥ ೨೯ ॥

ಹಸ್ತೀ ವರ್ಷಶತಂ ಚೈವ ಖರೋದ್ವಾತ್ರಿಂಶಕಂ ಸಮಾಃ ।
ಮಾರ್ಜಾರೋ ನವವರ್ಷಾಣಿ ವಾನರೋ ದಶ ಪಂಚ ಚ ॥ ೩೦ ॥

ಏವಂ ಸ ಚಾತ್ಮದೋಷೇಣ ಮಮ ಕರ್ಮಪರಾಯಣಃ ।
ಪ್ರಾಪ್ನೋತಿ ಸುಮಹದ್ದುಃಖಂ ದೇವಿ ಚೈವಂ ನ ಸಂಶಯಃ ॥ ೩೧ ॥

ತತೋ ಹರೇರ್ವಚಃ ಶ್ರುತ್ವಾ ದುಃಖೇನ ಪರಿಪೃಚ್ಛತಿ ।
ಸರ್ವಸಂಸಾರಮೋಕ್ಷಾಯ ಪ್ರತ್ಯುವಾಚ ವಸುಂಧರಾ ॥ ೩೨ ॥

೨೭–೨೮. ದೇವಿ, ಶವವನ್ನು ಮುಟ್ಟಿ, ಶುದ್ಧನಾಗದೆ ನನ್ನ ಕ್ಷೇತ್ರಗಳಲ್ಲಿ ನಿಲ್ಲುವವನು ಲಕ್ಷವರ್ಷಕಾಲ ಗರ್ಭಗಳಲ್ಲಿ ಹೊರಳುವನು. ಹತ್ತುಸಾವಿರವರ್ಷ ಕಾಲ ಚಂಡಾಲನಾಗಿ ಹುಟ್ಟುವನು. ಏಳುಸಾವಿರವರ್ಷ ಕುರುಡನಾಗುವನು. ನೂರುವರ್ಷ ಕಪ್ಪೆಯಾಗುವನು.

೨೯–೩೦ ಮೂರುವರ್ಷ ನೊಣವೂ, ಹನ್ನೊಂದುವರ್ಷ (ಟಿಟ್ಟಿಭ) ಲಕು ಮುಕೀಹಕ್ಕಿಯೂ, ಏಳುವರ್ಷ ಕಾಡುನೊಣವೂ, ವರ್ಷಕಾಲ ಓತಿಕೇತ ಅಥವಾ ಹಾವುರಾಣಿಯೂ, ನೂರುವರ್ಷ ಆನೆಯೂ, ಮೂವತ್ತೆರಡುವರ್ಷಕಾಲ ಕತ್ತೆಯೂ, ಒಂಭತ್ತುವರ್ಷ ಬೆಕ್ಕೂ, ಹದಿನೈದುವರ್ಷ ಕಪಿಯೂ ಆಗುವನು.

೩೧ ದೇವಿ, ನನ್ನ ಕರ್ಮಪರಾಯಣನು ಹೀಗೆ ತನ್ನ ತಪ್ಪಿನಿಂದ ಅತಿ ದುಃಖವನ್ನು ಪಡೆಯುವುದರಲ್ಲಿ ಸಂದೇಹವಿಲ್ಲ.

೩೨. ಭೂದೇವಿಯು ಹರಿಯ ಈ ಮಾತನ್ನು ಕೇಳಿ, ದುಃಖದಿಂದ ಜನರ ಸಂಸಾರಮೋಕ್ಷಕ್ಕಾಗಿ ಆ ದೇವನನ್ನು ಮುಂದಿನಂತೆ ಬೇಡಿದಳು.

॥ ಧರಣ್ಯುವಾಚ ॥

ಕಿಮಿದಂ ಭಾಷಸೇ ದೇವ ಮಾನುಷಾಣಾಂ ದುರಾಸದಂ ।
ವಾಕ್ಯಂ ಭೀಷಣಮತ್ಯಂತಂ ಮಮ ಮರ್ಮಪ್ರಭೇದಕಂ ॥ ೩೩ ॥

ಆಚಾರಾಚ್ಚ ಪರಿಭ್ರಷ್ಟಸ್ತ್ವ ಕರ್ಮಪರಾಯಣಃ ।
ಯಥಾ ತರತಿ ದುರ್ಗಾಣಿ ಪ್ರಾಯಶ್ಚಿತ್ತಂ ತಥಾ ವದ ॥ ೩೪ ॥

ಶ್ರುತ್ವಾ ಪೃಥ್ವ್ಯಾಸ್ತಥಾ ವಾಕ್ಯಂ ಲೋಕನಾಥೋ ಜನಾರ್ದನಃ ।
ಧರ್ಮಸಂರಕ್ಷಣಾರ್ಥಾಯ ಪ್ರತ್ಯುವಾಚ ವಸುಂಧರಾಂ ॥ ೩೫ ॥

॥ ಶ್ರೀವರಾಹ ಉವಾಚ ॥

ಸ್ಪೃಷ್ಟ್ವಾ ತು ಮೃತಕಂ ಭೂಮೇ ಮಮ ಕರ್ಮಪರಾಯಣಃ ।
ಏಕಾಹಾರಂ ತತಸ್ತಿಷ್ಠೇದ್ದಿನಾನಿ ದಶ ಪಂಚ ಚ ॥ ೩೬ ॥

---

೩೩. ಭೂದೇವಿ—ದೇವ ಇದೇನು ! ಮನುಷ್ಯರು ಪಡೆಯಲು ಕಷ್ಟವೂ, ಅತ್ಯಂತ ಭಯಂಕರವೂ, ನನ್ನ ಮರ್ಮ ಭೇದಕವೂ ಆದ ಮಾತನಾಡುತ್ತೀಯೆ !

೩೪. ನಡೆವಳಿಯಿಂದ ತಪ್ಪಿದ ನಿನ್ನ ಕರ್ಮನಿರತನು, ಕಷ್ಟಗಳಿಂದ ಹೇಗೆ ಪಾರಾಗುವನೋ ಆ ಪ್ರಾಯಶ್ಚಿತ್ತವನ್ನು ಹೇಳು.

೩೫. ಪೃಥ್ವೀದೇವಿಯ ಆ ಮಾತನ್ನು ಕೇಳಿ, ಜಗದೊಡೆಯನಾದ ಜನಾರ್ದನನು, ಧರ್ಮಸಂರಕ್ಷಣಾರ್ಥವಾಗಿ ಆ ಭೂದೇವಿಗೆ ಮುಂದಿನಂತೆ ಹೇಳಿದನು.

೩೬. ಶ್ರೀವರಾಹ—ಭೂಮೀ, ನನ್ನ ಕರ್ಮಾಸಕ್ತನಾದವನು ಶವವನ್ನು ಮುಟ್ಟಿ, ಸ್ನಾನಾದಿಗಳಿಂದ ಶುದ್ಧನಾಗದೆ ನನ್ನನ್ನು ಪೂಜಿಸಿದರೆ, ಆ ದೋಷ ನಿವಾರಣೆಗಾಗಿ ಬಳಿಕ ಹದಿನೈದುದಿನ ಒಂದುಹೊತ್ತುಮಾತ್ರ ಊಟ ಮಾಡುತ್ತಿರಬೇಕು.

ತತ ಏವಂ ವಿಧಿಂ ಕೃತ್ವಾ ಪಂಚಗವ್ಯಂ ತು ಪ್ರಾಶಯೇತ್ ।
ಶುದ್ಧಭಾವಂ ವಿಶುದ್ಧಾತ್ಮಾ ಕರ್ಮಣಾ ಚ ನ ಲಿಪ್ಯತೇ ॥ ೩೭ ॥

ಏತತ್ತೇ ಕಥಿತಂ ದೇವಿ ಸ್ಪೃಷ್ಟ್ವಾ ಮೃತಕಮೇವ ಚ ।
ದೋಷಂ ಚೈವ ವಿಶುದ್ಧ್ಯರ್ಥಂ ಯತ್ತ್ವಯಾ ಪೂರ್ವಪೃಚ್ಛಿತಂ ॥ ೩೮ ॥

ಯ ಏತೇನ ವಿಧಾನೇನ ಪ್ರಾಯಶ್ಚಿತ್ತಂ ಸಮಾಚರೇತ್ ।
ಅಪರಾಧವಿಮುಕ್ತೋ ವೈ ಮಮ ಲೋಕಂ ಸ ಗಚ್ಛತಿ ॥ ೩೯ ॥

ಇತಿ ಶ್ರೀವರಾಹಪುರಾಣೇ ಮೃತಕಸ್ಪರ್ಶಾದಿದೋಷ ಪ್ರಾಯಶ್ಚಿತ್ತಂ ನಾಮ ದ್ವಾತ್ರಿಂಶದಧಿಕ ಶತತಮೋಽಧ್ಯಾಯಃ

---

೩೭. ಆಮೇಲೆ ಶುದ್ಧವಾದ ಭಾವನೆಯಿಂದ ಪಂಚಗವ್ಯವನ್ನು ಸೇವನೆ ಮಾಡಬೇಕು. ಆದರಿಂದ ಪರಿಶುದ್ಧಾತ್ಮನಾದ ಅವನಿಗೆ ಪಾಪಕರ್ಮವು ಅಂಟುವುದಿಲ್ಲ.

೩೮. ದೇವಿ, ಶವವನ್ನು ಮುಟ್ಟುವುದರಿಂದ ಆಗುವ ದೋಷವನ್ನೂ, ನೀನು ಮೊದಲೇ ಕೇಳಿದ ಪರಿಶುದ್ಧಿಗೆ ಬೇಕಾದ ಈ ವಿಚಾರವನ್ನೂ ನಿನಗೆ ಹೇಳಿದ್ದೇನೆ.

೩೯. ಈ ಬಗೆಯಲ್ಲಿ ಪ್ರಾಯಶ್ಚಿತ್ತವನ್ನು ಮಾಡುವವನು ತಪ್ಪನ್ನು ಕಳೆದು ಕೊಂಡು, ನನ್ನ ಲೋಕವನ್ನು ಸೇರುವನು.

ಅಧ್ಯಾಯದ ಸಾರಾಂಶ:—

ಶ್ರೀವರಾಹನು ಭೂದೇವಿಗೆ, ದೈವಭಕ್ತನಾದವನು, ಸ್ತ್ರೀಸಂಗವನ್ನು ಮಾಡಿ, ಶವವನ್ನು ಮುಟ್ಟಿ, ಶ್ಮಶಾನಕ್ಕೆ ಹೋಗಿ, ಅಥವಾ ರಜಸ್ವಲೆಯನ್ನು ಮುಟ್ಟಿ, ಸರಿಯಾಗಿ ಸ್ನಾನಾದಿಗಳಿಂದ ಶುದ್ಧನಾಗದೆ ದೇವರನ್ನು ಪೂಜಿಸಿದರೆ ಅಥವಾ ದೇವರ ಸಮೀಪಕ್ಕೆ ಹೋದರೆ ಉಂಟಾಗುವ ಪಾಪದುರ್ಗತಿಗಳನ್ನೂ, ಆ ಪಾಪ ಪರಿಹಾರಕ್ಕೆ ಅವಶ್ಯವಾದ ಪ್ರಾಯಶ್ಚಿತ್ತವನ್ನೂ ಹೇಳುವಲ್ಲಿಗೆ ಶ್ರೀವರಾಹಪುರಾಣ ದಲ್ಲಿ ನೂರಮೂವತ್ತೆರಡನೆಯ ಅಧ್ಯಾಯ.

॥ ಶ್ರೀಃ ॥

–x–

ತ್ರಯಸ್ತ್ರಿಂಶದಧಿಕಶತತಮೋಧ್ಯಾಯಃ

ಅಥ ಪೂಜಾಸಾಮಯಿಕ ಗುದರವಪುರೀಷೋತ್ಸರ್ಜನಯೋಃ ಪ್ರಾಯಶ್ಚಿತ್ತಂ

॥ ಶ್ರೀವರಾಹ ಉವಾಚ ॥

ಸ್ಪೃಶಮಾನೇನ ಮಾಂ ಭೂಮೇ ವಾತಕರ್ಮ ಪ್ರಮುಚ್ಯತೇ ।
ಏವಂ ಚ ಪುರುಷೋ ಯುಕ್ತೋ ವಾಯುಪೀಡಿತಮಾನಸಃ ॥ ೧ ॥

ಮಕ್ಷಿಕಾ ಪಂಚವರ್ಷಾಣಿ ತ್ರೀಣಿ ವರ್ಷಾಣಿ ಮೂಷಕಃ ।
ಶ್ವಾ ಚೈವ ತ್ರೀಣಿ ವರ್ಷಾಣಿ ಕೂರ್ಮೋ ವೈ ಜಾಯತೇ ನವ ॥ ೨ ॥

ಏಷವೈ ತಾಪನಂ ದೇವಿ ಮೋಹನಂ ಮಮ ಸಾಂಪ್ರತಂ ।
ಯೋ ವೈ ಶಾಸ್ತ್ರಂ ವಿಜಾನಾತಿ ಮಮ ಕರ್ಮಪರಾಯಣಃ ॥ ೩ ॥

ನೂರ ಮೂವತ್ತಮೂರನೆಯ ಅಧ್ಯಾಯ.

ಪೂಜೆಯ ಸಮಯದಲ್ಲಿ ಅಪಾನವಾಯುಶಬ್ದ ಮಲವಿಸರ್ಜನೆಗಳಾದರೆ ಪ್ರಾಯಶ್ಚಿತ್ತ.

೧–೩. ಶ್ರೀವರಾಹ—ಭೂಮೀ, ನನ್ನ ಕರ್ಮಗಳಲ್ಲಿ ನಿರತನಾದ ಶಾಸ್ತ್ರಜ್ಞನು ಪೂಜೆಮಾಡುವಾಗ ನನ್ನನ್ನು ಮುಟ್ಟುತ್ತ ಅಪಾನವಾಯುವಿಸರ್ಜನೆ ಮಾಡಿದನಾದರೆ, ಆತನು (ಮೃತನಾದ ಬಳಿಕ) ಐದು ವರ್ಷ ನೊಣವಾಗಿಯೂ, ಮೂರು ವರ್ಷಕಾಲ ಇಲಿಯಾಗಿಯೂ, ಮೂರುವರ್ಷಕಾಲ ನಾಯಾಗಿಯೂ, ಒಂಬತ್ತುವರ್ಷಕಾಲ ಆಮೆಯಾಗಿಯೂ ಜೀವಿಸುವನು. ದೇವಿ, ಇದೇ ನಾನು ವಿಧಿಸುವ ಯುಕ್ತವಾದ ಮೋಹನತಾಪನ ದಂಡನೆ.

ಶ್ರುತ್ವಾ ವಾಕ್ಯಂ ಹೃಷೀಕೇಶಂ ಪ್ರತ್ಯುವಾಚ ವಸುಂಧರಾ ॥ ೪ ॥

॥ ಧರಣ್ಯುವಾಚ ॥

ಅತುಲಂ ಲಭತೇ ಪಾಪಂ ತವ ಕರ್ಮಪರಾಯಣಃ ।
ತಸ್ಯ ದೇವ ಸುಖಾರ್ಥಾಯ ವಿಶುದ್ಧಿಂ ವಕ್ತುಮರ್ಹಸಿ ॥ ೫ ॥

॥ ಶ್ರೀವರಾಹ ಉವಾಚ ॥

ಶೃಣು ಕಾರ್ತ್ಸ್ನ್ಯೇನ ಮೇ ದೇವಿ ಕಥ್ಯಮಾನಂ ಮಯಾನಘೇ ।
ಅಪರಾಧಮಿಮಂ ಕೃತ್ವಾ ಸಂತರತ್ಯೇನ ಕರ್ಮಣಾ ॥ ೬ ॥

ಪಾವಕೇನ ದಿನಂ ತ್ರೀಣಿ ನಕ್ತಾನಿ ಚ ಪುನಸ್ತ್ರಯಃ ।
ಕರ್ಮ ಚೈವಂ ತತಃ ಕೃತ್ವಾ ಸ ಚ ಮೇ ನಾಪರಾಧ್ಯತಿ ।
ಸರ್ವಸಂಗಂ ಪರಿತ್ಯಜ್ಯ ಮಮ ಲೋಕಂ ಸ ಗಚ್ಛತಿ ॥ ೭ ॥

---

೪. ಈ ಮಾತನ್ನು ಕೇಳಿ ಭೂದೇವಿಯು ಆ ವಿಷ್ಣುವಿಗೆ ಮುಂದಿನಂತೆ ಹೇಳಿದಳು.

೫. ಭೂದೇವಿ—ನಿನ್ನ ಕರ್ಮದಲ್ಲಿ ನಿರತನಾದವನು ಅಮಿತವಾದ ಪಾಪವನ್ನು ಪಡೆಯುವನು! ದೇವ, ಅವನ ಸುಖಾರ್ಥವಾಗಿ ಆ ಪಾಪಕ್ಕೆ ಶುದ್ಧಿಯನ್ನು ನೀನೇ ಹೇಳಬೇಕು.

೬. ಶ್ರೀವರಾಹ—ನನ್ನ ದೇವಿ, ಪಾಪರಹಿತೇ, ಈ ಅಪರಾಧವನ್ನು ಮಾಡಿದವನು ಯಾವ ಕರ್ಮವನ್ನು ಮಾಡಿದರೆ ಅದರಿಂದ ಪಾರಾಗುವನೆಂದು ನಾನು ಹೇಳುವುದನ್ನು ಪೂರ್ತಿಯಾಗಿ ಕೇಳು.

೭. ಮೂರುದಿನ ಹಗಲೂ ರಾತ್ರಿಯೂ ಅಗ್ನಿಯ ಸಮೀಪದಲ್ಲಿಯೇ ಇದ್ದು ಕರ್ಮಮಾಡುವುದರಿಂದ ಅಪಾನವಾಯುವಿಸರ್ಜನೆಮಾಡಿದ ಅಪರಾಧದಿಂದ ವಿಮುಕ್ತನಾಗುವನು. ಅವನು ಸರ್ವಸಂಗವನ್ನೂ ಬಿಟ್ಟು, ನನ್ನ ಲೋಕವನ್ನು ಸೇರುವನು.

ಏತತ್ತೇ ಕಥಿತಂ ಭದ್ರೇ ಮಹಾಕರ್ಮಾಪರಾಧಿನಃ ।
ದೋಷಂ ಚೈವ ಗುಣಂ ಚೈವ ಯತ್ತ್ವಯಾ ಪರಿಪೃಚ್ಛಿತಂ ॥ ೮ ॥

ಶೃಣು ತತ್ತ್ವೇನ ಮೇ ಭೂಮೇ ಕಥ್ಯಮಾನಂ ಮಯಾನಘೇ ।
ಪುರೀಷಂ ಮುಂಚ್ಯತೇ ಯಸ್ತು ಮಮ ಕರ್ಮ ಸಮಾಚರನ್ ॥ ೯ ॥

ದಿವ್ಯವರ್ಷಸಹಸ್ರಂ ತು ರೌರವೇ ನಾರಕೇ ವಸೇತ್ ।
ಪುರೀಷಂ ಭಕ್ಷಯೇತ್ತತ್ರ ಮಮ ಕರ್ಮಪರಾಯಣಃ ॥ ೧೦ ॥

ಪ್ರಾಯಶ್ಚಿತ್ತಂ ವದಾಮ್ಯತ್ರ ಯೇನ ಮುಚ್ಯೇತ ಕಿಲ್ಬಿಷಾತ್ ॥ ೧೧ ॥

ಮಮ ಕರ್ಮಪರಿಭ್ರಷ್ಟೋ ವಿಹ್ವಲೇನಾಂತರಾತ್ಮನಾ
ಏಕಾಂ ಜಲಮಯೀಂ ಶಯ್ಯಾಮೇಕಾಮಾಕಾಶಶಾಯಿನೀಂ ।
ಏವಂ ಕೃತ್ವಾ ವಿಧಾನಂ ತು ಸೋಽಪರಾಧಾತ್ಪ್ರಮುಚ್ಯತೇ ॥ ೧೨ ॥

---

೮. ಭದ್ರೇ, ಮಹಾಕರ್ಮವನ್ನು ಮಾಡಿ, ಅಪರಾಧ ಮಾಡುವವನ ಗುಣವನ್ನೂ, ದೋಷವನ್ನೂ ನೀನು ಕೇಳಿದುದರಿಂದ ಹೀಗೆ ಹೇಳಿದ್ದೇನೆ.

೯–೧೧. ಭೂಮೀ ಪಾಪರಹಿತೇ, ಇನ್ನೂ ನಿಜವಾಗಿ ಹೇಳುವುದನ್ನು ಕೇಳು. ನನ್ನನ್ನು ಪೂಜಿಸುತ್ತ ಮಲವಿಸರ್ಜನೆಮಾಡುವವನು ದಿವ್ಯಸಹಸ್ರ ವರ್ಷಗಳಕಾಲ ರೌರವನರಕದಲ್ಲಿ ಅಮೇಧ್ಯವನ್ನು ತಿನ್ನುತ್ತಾ ವಾಸಿಸುವನು. ನನ್ನ ಕರ್ಮದಲ್ಲಿ ನಿರತನಾದವನು ಆ ಪಾಪದಿಂದ ಬಿಡುಗಡೆಯನ್ನು ಹೊಂದುವ ಪ್ರಾಯಶ್ಚಿತ್ತವನ್ನು ಹೇಳುತ್ತೇನೆ.

೧೨. ಕರ್ಮಪರಿಭ್ರಷ್ಟನಾದ ಅವನು ಪಶ್ಚಾತ್ತಾಪವುಳ್ಳವನಾಗಿ ಒಂದು ರಾತ್ರಿ ಉಸಿರಾಡಲವಕಾಶವಿರುವಂತೆ ನೀರಲ್ಲಿ ಮಲಗಿ, ಮತ್ತೊಂದು ರಾತ್ರಿ ಬಯಲಿನಲ್ಲಿ ಹಾಸಿಗೆ ಹೊದಿಕೆಗಳಿಲ್ಲದೆ ಮಲಗಿದಲ್ಲಿ ಅಪರಾಧವನ್ನು ಕಳೆದುಕೊಳ್ಳುವನು.

ಏತತ್ತೇ ಕಥಿತಂ ಭದ್ರೇ ಪುರೀಷಂ ಯಸ್ಸಮುತ್ಸೃಜೇತ್ ।
ಮದ್ಭಕ್ತೇಷು ವಿಶಾಲಾಕ್ಷಿ ಅಪರಾಧವಿನಿಶ್ಚಯಃ ॥ ೧೩ ॥

**ಇತಿ ಶ್ರೀವರಾಹಪುರಾಣೇ ಪೂಜಾಸಮಯೇ ಗುದರವಪುರೀ
ಷೋತ್ಸರ್ಗಯೋಃ ಪ್ರಾಯಶ್ಚಿತ್ತಂ ನಾಮ ತ್ರಯಸ್ತ್ರಿಂಶ
ದಧಿಕ ಶತತಮೋಽಧ್ಯಾಯಃ**

---

೧೩. ಭದ್ರೇ, ವಿಶಾಲಾಕ್ಷಿ, ನನ್ನ ಭಕ್ತರಲ್ಲಿ ಯಾರು ನನ್ನ ಪೂಜೆಯ ಸಮಯದಲ್ಲಿ ಮಲವಿಸರ್ಜನೆ ಮಾಡುವನೋ ಅವನ ಅಪರಾಧನಿರ್ಣಯವನ್ನು ಹೀಗೆ ನಿನಗೆ ಹೇಳಿದ್ದೇನೆ.

ಅಧ್ಯಾಯದ ಸಾರಾಂಶ :—

ಶ್ರೀವರಾಹನು ಭೂದೇವಿಗೆ, ದೇವರ ಪೂಜೆಯ ಕಾಲದಲ್ಲಿ ಪೂಜಕನು ಅಪಾನವಾಯುವನ್ನಾಗಲಿ, ಮಲವನ್ನಾಗಲಿ ವಿಸರ್ಜಿಸಿದರೆ ಆಗುವ ದುಷ್ಫಲ ವನ್ನೂ, ಆ ಅಪರಾಧಗಳಿಗೆ ಪ್ರಾಯಶ್ಚಿತ್ತವನ್ನೂ ಹೇಳುವಲ್ಲಿಗೆ ಶ್ರೀವರಾಹ ಪುರಾಣದಲ್ಲಿ ನೂರಮೂವತ್ತಮೂರನೆಯ ಅಧ್ಯಾಯ.

|| ಶ್ರೀಃ ||

–x–

ಚತುಸ್ತ್ರಿಂಶದಧಿಕಶತತಮೋಧ್ಯಾಯಃ

ಅಥ ಪೂಜಾದಿಸಾಮಯಿಕಾಪರಾಧೇಷು ಪ್ರಾಯಶ್ಚಿತ್ತಾನಿ

|| ಶ್ರೀವರಾಹ ಉವಾಚ ||

ಮುಕ್ತ್ವಾ ತು ಮಮ ಕರ್ಮಾಣಿ ಮಮ ಕರ್ಮಪರಾಯಣಃ ।
***ಪ್ರಾಯಶ್ಚಿತ್ತವಿಧಿಂ ದೇವಿ ಯಸ್ತು ವಾಕ್ಯಂ ಪ್ರಭಾಷತೇ || ೧ ||**

ಮೂರ್ಖೋ ಭವತಿ ಸುಶ್ರೋಣಿ ಮಮ ಕರ್ಮಪರಾಯಣಃ ।
ಪ್ರಾಯಶ್ಚಿತ್ತವಿಧಿಂ ದೇವಿ ಯೇನ ಮುಚ್ಯೇತ ಕಿಲ್ಬಿಷಾತ್ || ೨ ||

ನೂರಮೂವತ್ತನಾಲ್ಕನೆಯ ಅಧ್ಯಾಯ.

ಪೂಜಾದಿ ಸಮಯದ ಅಪರಾಧಗಳಿಗೆ ಪರಿಹಾರಗಳು.

೧–೨. ಶ್ರೀವರಾಹ—ದೇವಿ, ನನ್ನ ಕರ್ಮದಲ್ಲಿ ನಿರತನಾದವನು ನನ್ನ ಪೂಜೆಯನ್ನು ಮಾಡುತ್ತಿರುವಾಗ ಪೂಜಾಕಾರ್ಯಗಳನ್ನು ಬಿಟ್ಟು, ಇತರರೊಡನೆ ಪ್ರಾಯಶ್ಚಿತ್ತಾರ್ಹವಾದ ಬೇರೆಯ ಮಾತನಾಡುವವನು ಮೂರ್ಖನಾಗುವನು. ಸುಂದರಿ, ಅವನು ಆ ಪಾಪವನ್ನು ಕಳೆದುಕೊಳ್ಳುವುದಕ್ಕೆ ಬೇಕಾದ ಪ್ರಾಯಶ್ಚಿತ್ತವನ್ನು ಹೇಳುತ್ತೇನೆ.

---

* ಇಲ್ಲಿ ಬೇರಾವಪದವೋ ಇರಬೇಕು. ಅದಕ್ಕೆ ಬದಲಾಗಿ ೨ ನೆಯ ಶ್ಲೋಕದ ಉತ್ತರಾರ್ಧದ ಆದಿಪದವನ್ನು ಹಾಕಿರುವಂತಿದೆ.

ಆಕಾಶಶಯನಂ ಕೃತ್ವಾ ದಿನಾನಿ ದಶ ಪಂಚ ಚ ।
ಮುಚ್ಯತೇ ಕಿಲ್ಬಿಷಾತ್ತತ್ರ ದೇವಿ ಚೈವ ನ ಸಂಶಯಃ ॥ ೩ ॥

॥ ಇತಿ ಮೌನತ್ಯಾಗಪ್ರಾಯಶ್ಚಿತ್ತಂ ॥

॥ ಶ್ರೀವರಾಹ ಉವಾಚ ॥

ಭೂಷಿತೋ ನೀಲವಸ್ತ್ರೇಣ ಯೋ ಹಿ ಮಾಮುಪಪದ್ಯತೇ ।
ವರ್ಷಾಣಾಂ ಹಿ ಶತಂ ಪಂಚ ಕ್ರಿಮಿರ್ಭೂತ್ವಾ ಸ ತಿಷ್ಠತಿ ॥ ೪ ॥

ತಸ್ಯ ವಕ್ಷ್ಯಾಮಿ ಸುಶ್ರೋಣಿ ಅಪರಾಧವಿಶೋಧನಂ ।
ಪ್ರಾಯಶ್ಚಿತ್ತಂ ವಿಶಾಲಾಕ್ಷಿ ಯೇನ ಮುಚ್ಯೇತ ಕಿಲ್ಬಿಷಾತ್ ॥ ೫ ॥

ವ್ರತಂ ಚಾಂದ್ರಾಯಣಂ ಕೃತ್ವಾ ವಿಧಿದೃಷ್ಟೇನ ಕರ್ಮಣಾ ।
ಮುಚ್ಯತೇ ಕಿಲ್ಬಿಷಾದ್ಭೂಮೇ ಏವಮೇತನ್ನ ಸಂಶಯಃ ॥ ೬ ॥

---

೩. ದೇವಿ, ನನ್ನ ಪೂಜೆಯಕಾಲದಲ್ಲಿ ಬೇರೆಯ ಮಾತನಾಡಿದವನು ಹದಿನೈದು ದಿನಗಳು ಬಯಲಿನಲ್ಲಿ ಹಾಸಿಗೆಹೊದಿಕೆಗಳಿಲ್ಲದೆ ಮಲಗಿದ್ದರೆ ಆ ಪಾಪವನ್ನು ಕಳೆದುಕೊಳ್ಳುವುದರಲ್ಲಿ ಸಂದೇಹವಿಲ್ಲ.

ಇದು ಮೌನವನ್ನು ಬಿಟ್ಟುದಕ್ಕೆ ಪರಿಹಾರ.

೪. ಶ್ರೀವರಾಹ—ನೀಲಿಯ ಬಣ್ಣದ ಬಟ್ಟೆಯನ್ನು ಧರಿಸಿ ನನ್ನ ಸೇವೆ ಮಾಡುವವನು ಐನೂರು ವರ್ಷಕಾಲ ಕ್ರಿಮಿಯಾಗಿ ಜೀವಿಸುವನು.

೫. ವಿಶಾಲಾಕ್ಷಿ, ಸುಂದರಿ, ನೀಲವಸ್ತ್ರವನ್ನು ಧರಿಸಿ ನನ್ನನ್ನು ಆಶ್ರಯಿಸಿದವನ ಅಪರಾಧವನ್ನು ಹೋಗಲಾಡಿಸುವ ಪ್ರಾಯಶ್ಚಿತ್ತವನ್ನು ಹೇಳುತ್ತೇನೆ.

೬. ಭೂಮೀ, ದೋಷಿಯು ವಿಧಿಯಲ್ಲಿ ಹೇಳಿರುವಂತೆ ಚಾಂದ್ರಾಯಣ ವ್ರತವನ್ನು ಮಾಡಿದರೆ ಆ ಪಾಪವನ್ನು ಕಳೆದುಕೊಳ್ಳುವುದರಲ್ಲಿ ಸಂಶಯವಿಲ್ಲ.

ಅವಿಧಾನೇನ ಸಂಸ್ಪೃಶ್ಯ ಯೋ ಹಿ ಮಾಮುಪಸರ್ಪತಿ ।
ಸಮೂರ್ಖಃ ಪಾಪಕರ್ಮಾ ಚ ಮಮ ವಿಪ್ರಿಯಕಾರಕಃ ॥ ೭ ॥

ತೇನ ದತ್ತಂ ವರಾರೋಹೇ ಗಂಧಮಾಲ್ಯಸುಗಂಧಿತಂ ।
ಪ್ರಾಪಣಂ ಚ ನ ಗೃಹ್ಣಾಮಿ ಮೃಷ್ಟಂ ಚಾಪಿ ಕದಾಚನ ॥ ೮ ॥

ತತೋ ನಾರಾಯಣವಚಃ ಶ್ರುತ್ವಾ ಸಾ ಶಂಸಿತವ್ರತಾ ।
ಉವಾಚ ಮಧುರಂ ವಾಕ್ಯಂ ಧರ್ಮಕಾಮಾ ವಸುಂಧರಾ ॥ ೯ ॥

॥ ಧರಣ್ಯುವಾಚ ॥

ಯನ್ಮಾಂ ತ್ವಂ ಭಾಷಸೇ ನಾಥ ಆಚಾರಸ್ಯ ವ್ಯತಿಕ್ರಮಂ ।
ಉಪಸ್ಪೃಶ್ಯ ಸಮಾಚಾರಂ ರಹಸ್ಯಂ ವಕ್ತುಮರ್ಹಸಿ ॥ ೧೦ ॥

ಕೇನ ಕರ್ಮವಿಧಾನೇನ ಭೂತ್ವಾ ಭಾಗವತಾ ಭುವಿ ।
ಉಪಸ್ಪೃಶ್ಯೋಪಸರ್ಪಂತಿ ತವ ಕರ್ಮಪರಾಯಣಾಃ ॥ ೧೧ ॥

೭-೮. ವರಾರೋಹೇ, ವಿಧಿಯಲ್ಲಿ ಹೇಳಿರುವಂತಲ್ಲದೆ ಅಕ್ರಮವಾಗಿ ನನ್ನನ್ನು ಮುಟ್ಟಿ, ಪೂಜಿಸುವ ಮೂರ್ಖನು ಪಾಪಕರ್ಮನು. ಅವನು ನನಗೆ ಅಹಿತವನ್ನು ಮಾಡುವನು. ಅವನು ಅರ್ಪಿಸುವ ಸುವಾಸನೆಯ ಗಂಧಮಾಲ್ಯಗಳನ್ನೂ ಮೃಷ್ಟಾನ್ನನೈವೇದ್ಯವನ್ನೂ ನಾನು ಎಂದೂ ಪರಿಗ್ರಹಿಸುವುದಿಲ್ಲ.

೯. ನಾರಾಯಣನ ಈ ಮಾತನ್ನು ಕೇಳಿ, ಸ್ತುತ್ಯವ್ರತೆಯೂ, ಧರ್ಮಾಸಕ್ತಳೂ ಆದ ಭೂದೇವಿಯು ಆತನೊಡನೆ ಮುಂದಿನ ಇಂಪಾದ ಮಾತನಾಡಿದಳು.

೧೦. ಭೂದೇವಿ—ನಾಥ, ನಿನ್ನನ್ನು ಮುಟ್ಟಿದರೆ ಆಚಾರವನ್ನು ಅತಿಕ್ರಮಿಸಿದಂತಾಗುವ ಸಮಾಚಾರವನ್ನು ಏನೋ ಹೇಳುತ್ತೀಯೆ ಆ ರಹಸ್ಯವನ್ನು ಹೇಳು.

೧೧-೧೨. ನಿನ್ನ ಕರ್ಮದಲ್ಲಿ ನಿರತರಾದ ಭಾಗವತರು, ಯಾವ ಕರ್ಮವಿಧಾನದಿಂದ ನಿನ್ನನ್ನು ಮುಟ್ಟಿ ಪೂಜಿಸುವರು ? ದೇವ, ಇದು ನನಗೆ ಬಹು

ಏತನ್ಮೇ ಸಂಶಯಂ ದೇವ ಪರಂ ಕೌತೂಹಲಂ ಹಿ ಮೇ ।
ತವ ಭಕ್ತಸುಖಾರ್ಥಾಯ ನಿಷ್ಕಲಂ ವಕ್ತುಮರ್ಹಸಿ ॥ ೧೨ ॥

॥ ಶ್ರೀ ವರಾಹ ಉವಾಚ ॥

ಶೃಣು ತತ್ತ್ವೇನ ಮೇ ದೇವಿ ಯನ್ಮಾಂ ತ್ವಂ ಭೀರು ಭಾಷಸೇ ।
ಕಥಿತಂ ಮಮ ತತ್ತ್ವೇನ ಗುಹ್ಯಮೇತತ್ಪರಂ ಮಹತ್ ॥ ೧೩ ॥

ವಿಮುಚ್ಯ ಸರ್ವಕರ್ಮಾಣಿ ಯೋ ಹಿ ಮಾಮುಪಸರ್ಪತಿ ।
ತಸ್ಯ ವೈ ಶೃಣು ಸುಶ್ರೋಣಿ ಉಪಸ್ಪೃಶ್ಯ ಚ ಯಾ ಕ್ರಿಯಾ ॥ ೧೪ ॥

ಭೂತ್ವಾ ಪೂರ್ವಮುಖಸ್ತತ್ರ ಪಾದೌ ಪ್ರಕ್ಷಾಲ್ಯ ಚಾಂಬುಭಿಃ ।
ಉಪಸ್ಪೃಶ್ಯ ಯಥಾನ್ಯಾಯಂ ತಿಸ್ರೋ ವೈ ಗೃಹ್ಯ ಮೃತ್ತಿಕಾಂ ॥ ೧೫ ॥

ತತಃ ಪ್ರಕ್ಷಾಲಿತಂ ಹಸ್ತಂ ಜಲೇನ ತದನಂತರಂ ।
ಸಪ್ತಕೋಶಂ ತತೋ ಗೃಹ್ಯ ಜಲೇನ ಕ್ಷಾಲಯೇತ್ತತಃ ॥ ೧೬ ॥

ಕುತೂಹಲಕರವಾದ ಸಂದೇಹವಾಗಿದೆ. ನಿನ್ನ ಭಕ್ತರ ಸುಖಾರ್ಥವಾಗಿ ಕಲಂಕವಿಲ್ಲದಂತೆ ನೀನು ಸ್ಪಷ್ಟವಾಗಿ ಹೇಳಬೇಕು.

೧೩. ಶ್ರೀವರಾಹ—ನನ್ನ ದೇವಿ, ಭಯಶೀಲೆ, ನೀನು ನನ್ನನ್ನು ಯಾವುದನ್ನು ಪ್ರಶ್ನಿಸುವೆಯೋ ಆ ಪರಮರಹಸ್ಯವನ್ನು ನಿಜವಾಗಿ ಹೇಳುತ್ತೇನೆ. ಕೇಳು.

೧೪. ಸುಂದರಿ, ಬೇರೆಯ ಕಾರ್ಯಗಳನ್ನು ಬಿಟ್ಟು, ನನ್ನನ್ನು ಪೂಜಿಸುವವನು ಸ್ನಾನಮಾಡಿ ಬಳಿಕ ಮಾಡಬೇಕಾದ ಕಾರ್ಯವನ್ನು ಕೇಳು.

೧೫–೧೬. ಭಕ್ತನು ಪೂರ್ವಾಭಿಮುಖನಾಗಿ ನೀರಿನಿಂದ ಕಾಲುಗಳನ್ನು ತೊಳೆದುಕೊಂಡು, ಕ್ರಮವಾಗಿ ಆಚಮನಮಾಡಿ, ಮೂರುಸಾರಿ ಮಣ್ಣನ್ನು ಕೈಗೆ ಉಜ್ಜಿ ನೀರಿನಿಂದ ತೊಳೆದುಕೊಳ್ಳಬೇಕು. ಬಳಿಕ ಏಳುಸೇರಿ ನೀರನ್ನು ತೆಗೆದುಕೊಂಡು, ಕೈಗಳನ್ನು ಮತ್ತೆಮತ್ತೆ ತೊಳೆದುಕೊಳ್ಳಬೇಕು.

ಪಾದಮೇಕೈಕಶಸ್ತದ್ವತ್ಪಂಚ ಪಂಚ ವದೇತ್ತತಃ ।
ಕೋಶೌ ಸಮ್ಮೃಜ್ಯತಾಂ ತತ್ರ ಯದೀಚ್ಛೇತ್ತು ಮಮ ಪ್ರಿಯಂ ॥ ೧೭ ॥

ತ್ರೀಣಿ ಕೋಶಾನ್ಪಿಬೇತ್ತತ್ರ ಸರ್ವಪಾಪವಿಶೋಧನಂ ।
ಮುಖಂ ಕರಾಭ್ಯಾಂ ಮಾರ್ಜೇತ ಸರ್ವಮಿಂದ್ರಿಯನಿಗ್ರಹಂ ॥ ೧೮ ॥

ಪ್ರಾಣಾಯಾಮಂ ತತಃ ಕೃತ್ವಾ ಮಮ ಚಿಂತಾಪರಾಯಣಃ ।
ಕರ್ಮಣಾ ವಿಧಿದೃಷ್ಟೇನ ಕುರ್ಯಾತ್ಸಂಸಾರಮೋಕ್ಷಣಂ ॥ ೧೯ ॥

ತ್ರೀಣಿ ವಾರಾನ' ಸ್ಪೃಶೇತ್ತತ್ರ ಶಿರೋ ಬ್ರಹ್ಮಣಿ ಸಂಸ್ಥಿತಃ ।
ತ್ರೀಣಿವಾರಾನ್ ಪುನಸ್ತತ್ರ ಉಭೇತೇ ಕರ್ಣನಾಸಿಕೇ ॥ ೨೦ ॥

ಸ್ಪೃಶೇತ್ತು ನಿಷ್ಕಲಸ್ತತ್ರ ಯೋ ಹಿ ಯತ್ರ ಪ್ರತಿಷ್ಠಿತಃ ।
ನಿಕ್ಷಿಪೇತ್ತ್ರೀಣಿ ವಾರಾಣಿ ಸಲಿಲಂ ಪ್ರವರಂ ತ್ರಯಂ ॥ ೨೧ ॥

---

೧೭. ಬಳಿಕ ಕಾಲುಗಳನ್ನೂ ಒಂದೊಂದನ್ನಾಗಿ ಐದ್ಯೆದುಸಾರಿ ತೊಳೆದುಕೊಳ್ಳಬೇಕು. ನನ್ನ ಪ್ರೀತಿಯನ್ನು ಬಯಸುವುದಾದರೆ ಮತ್ತೆ ಕೈಗಳನ್ನು ತೊಳೆದುಕೊಳ್ಳಬೇಕು.

೧೮–೧೯. ಅನಂತರ ಸರ್ವಪಾಪಗಳನ್ನೂ ಹೋಗಲಾಡಿಸುವ ಮೂರು ಸೇರೆ ನೀರನ್ನು ಕುಡಿಯಬೇಕು. ಎಂದರೆ ಆಚಮನಮಾಡಬೇಕು. ಕಯ್ಯಿಂದ ಬಾಯನ್ನೊರಸಿಕೊಂಡು, ಬಳಿಕ ನನ್ನ ಧ್ಯಾನದಲ್ಲಿ ನಿರತನಾಗಿ ಸರ್ವೇಂದ್ರಿಯಗಳನ್ನೂ ನಿಗ್ರಹಿಸುವುದೂ, ಸಂಸಾರಮೋಕ್ಷಕವೂ ಆದ ಪ್ರಾಣಾಯಾಮವನ್ನು ವಿಧಿಯಲ್ಲಿ ಹೇಳಿರುವಂತೆ ಮಾಡಬೇಕು.

೨೦–೨೧. ಪರಬ್ರಹ್ಮನಲ್ಲಿ ಮನಸ್ಸಿಟ್ಟು, ಮೂರುಸಾರಿ ನೆತ್ತಿಯನ್ನು ಮುಟ್ಟಬೇಕು. ಮತ್ತೆ ಮೂರುಸಾರಿ ಕಿವಿಮೂಗುಗಳನ್ನು ಮುಟ್ಟಬೇಕು. ಬಳಿಕ ನಿಷ್ಕಳಂಕನಾಗಿ, ನನ್ನ ಹತ್ತಿರ ಬರುವಾಗ ನನ್ನನ್ನು ಪ್ರತಿಷ್ಠೆಮಾಡಿರುವೆಡೆಯಲ್ಲಿ ಮೂರುಸಾರಿ ನೀರನ್ನು ಮಂತ್ರಪೂರ್ವಕವಾಗಿ ಪ್ರೋಕ್ಷಿಸಬೇಕು.

ಏವಮುಕ್ತಸ್ಯ ಕರ್ತವ್ಯಂ ಮಮಾಭಿಗಮನೇಷು ಚ ।
ಉಪಸ್ಪೃಶ್ಯ ತನುಂ ವಾ ಮೇ ಯದೀಕ್ಷೇತ ಪ್ರಿಯಂ ಮಮ ॥ ೨೨ ॥

ಏವಂ ಚ ಕುರ್ವತಸ್ತಸ್ಯ ಮಮ ಕರ್ಮವ್ಯವಸ್ಥಿತಃ ।
ಅಪರಾಧಂ ನ ವಿಂದೇತ ಏವಂ ದೇವಿ ನ ಸಂಶಯಃ ॥ ೨೩ ॥

ತತೋ ನಾರಾಯಣವಚಃ ಶ್ರುತ್ವಾ ದೇವೀ ವಸುಂಧರಾ ।
ಉವಾಚ ಮಧುರಂ ವಾಕ್ಯಂ ಸರ್ವಭಾಗವತಪ್ರಿಯಂ ॥ ೨೪ ॥

॥ ಧರಣ್ಯುವಾಚ ॥

ಉಪಸ್ಪೃಶ್ಯ ವಿಧಾನೇನ ಯಸ್ತು ಕರ್ಮಾಣಿ ಚಾಪ್ನುಯಾತ್ ।
ತಾಪನಂ ಶೋಧನಂ ಚೈವ ತದ್ಭವಾನ್ವಕ್ತುಮರ್ಹತಿ ॥ ೨೫ ॥

ಸುಂದರಿ, ಬಳಿಕ ನನ್ನ ದೇಹವನ್ನು ಮುಟ್ಟಿ, ನನ್ನನ್ನು ನೋಡಿದರೆ ನನಗೆ ಹಿತವಾಗುವುದು.

೨೩. ದೇವಿ, ನನ್ನ ಕರ್ಮದಲ್ಲಿ ನಿಂತವನು, ಹೀಗೆ ಮಾಡಿದಲ್ಲಿ ಅಪರಾಧವನ್ನು ಪಡೆಯುವುದಿಲ್ಲವೆಂಬುದರಲ್ಲಿ ಸಂಶಯವಿಲ್ಲ.

೨೪. ನಾರಾಯಣನ ಈ ಮಾತನ್ನು ಕೇಳಿ, ಭೂದೇವಿಯು ಬಳಿಕ ಸರ್ವಭಾಗವತರಿಗೂ ಪ್ರಿಯವಾದ ಇಂಪಾದ ಮುಂದಿನ ಮಾತನ್ನು ಆ ದೇವನಿಗೆ ಹೇಳಿದಳು.

೨೫. ಭೂದೇವಿ—ನೀನು ಹೇಳಿದ ವಿಧಿಯಿಂದ ಸ್ನಾನಾಚಮನಗಳನ್ನು ಮಾಡಿ, ನಿನ್ನನ್ನು ಮುಟ್ಟಿ ಪೂಜಾಕರ್ಮಗಳನ್ನು ಮಾಡುವವನಿಗೆ ತಾಪನ ಶೋಧನಗಳನ್ನೂ ನೀನೇ ಹೇಳಬೇಕು.

ನೂರ ಮೂವತ್ತನಾಲ್ಕನೆಯ ಅಧ್ಯಾಯ

॥ ಶ್ರೀವರಾಹ ಉವಾಚ ॥

ಶೃಣು ತತ್ವೇನ ಮೇ ಭೂಮೇ ಇಮಂ ಗುಹ್ಯಮನಿಂದಿತೇ ।
ಯಾಂ ಗತಿಂ ಚ ಪ್ರಪದ್ಯಂತೇ ಮಮ ಕರ್ಮಬಹಿಷ್ಕೃತಾಃ ॥ ೨೬ ॥

ವ್ಯಭಿಚಾರಂ ಚ ಮೇ ಕೃತ್ವಾ ಯಶ್ಚ ಮಾಮುಪಸರ್ಪತಿ ।
ದಶವರ್ಷಸಹಸ್ರಾಣಿ ದಶವರ್ಷಶತಾನಿ ಚ ।
ಕ್ರಿಮಿರ್ಭೂತ್ವಾ ಯಥಾನ್ಯಾಯಂ ತಿಷ್ಠತೇ ನಾತ್ರಸಂಶಯಃ ॥ ೨೭ ॥

ಪ್ರಾಯಶ್ಚಿತ್ತಂ ಪ್ರವಕ್ಷ್ಯಾಮಿ ತಸ್ಯ ಮೂರ್ಖಸ್ಯ ಮಾಧವಿ ।
ಯಚ್ಚ ಕೃತ್ವಾ ಮಹಾಭಾಗೇ ಕೃತಕೃತ್ಯಃ ಪುನರ್ಭವೇತ್ ॥ ೨೮ ॥

ಮಹಾಸಾಂತಪನಂ ಕೃತ್ವಾ ತಪ್ತಕೃಚ್ಛ್ರಂ ಚ ನಿಷ್ಕಲಂ ।
ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯೋ ಮಮ ಯೇ ಚ ಮತೇಸ್ಥಿತಾಃ ॥ ೨೯ ॥

---

೨೬. ಶ್ರೀವರಾಹ—ಸ್ತುತ್ಯೇ, ನನ್ನ ಭೂದೇವಿ, ನನ್ನ ಕರ್ಮಬಾಹಿರರಾದವರು ಯಾವ ಗತಿಯನ್ನು ಪಡೆಯುವರೆಂಬ ನಿಜವಾದ ಈ ರಹಸ್ಯವನ್ನು ಕೇಳು

೨೭. ಬೇರೆಯುಕಡೆ ಮನಸ್ಸಿಟ್ಟು, ಅಥವಾ ಶಾಸ್ತ್ರವಿರುದ್ಧವಾದ ರೀತಿಯಲ್ಲಿ ನಡೆದು, ನನ್ನನ್ನು ಪೂಜಿಸುವವನು ಅಥವಾ ಆಶ್ರಯಿಸುವವನು ಹನ್ನೊಂದು ಸಾವಿರವರ್ಷಕಾಲ ಕ್ರಿಮಿಯಾಗಿರುವುದರಲ್ಲಿ ಸಂದೇಹವಿಲ್ಲ.

೨೮. ಮಾಧವೀ, ಅಂತಹ ಮೂರ್ಖನು ಯಾವುದನ್ನು ಮಾಡಿ, ಮತ್ತೆ ಸುಕೃತಿ(ಪುಣ್ಯಶಾಲಿ)ಯಾಗುವನೋ ಆ ಪ್ರಾಯಶ್ಚಿತ್ತವನ್ನು ಹೇಳುತ್ತೇನೆ.

೨೯. ನನ್ನ ಅಭಿಪ್ರಾಯದಂತೆ ನಡೆಯುವ ಬ್ರಾಹ್ಮಣಕ್ಷತ್ರಿಯವೈಶ್ಯರು (ಮೇಲೆ ಹೇಳಿದ ಅಪರಾಧವನ್ನು ಮಾಡಿದರೆ) ಮಹಾಸಾಂತಪನವೆಂಬುದೇ ಮೊದಲಾದ ತಪ್ತಕೃಚ್ಛ್ರವ್ರತವನ್ನು ದೋಷರಹಿತವಾಗಿ ಮಾಡಬೇಕು.

ಅನೇನ ವಿಧಿನಾ ಕೃತ್ವಾ ಪ್ರಾಯಶ್ಚಿತ್ತಂ ಯಶಸ್ವಿನಿ ।
ಕಿಲ್ಬಿಷಾತ್ತು ಪ್ರಮುಕ್ತಾಸ್ತೇ ಗಚ್ಛಂತಿ ಪರಮಾಂ ಗತಿಂ ॥ ೩೦ ॥

ಯಸ್ತು ಕ್ರೋಧಸಮಾವಿಷ್ಟೋ ಮಮ ಭಕ್ತಿಪರಾಯಣಃ ।
ಸ್ಪೃಶೇತ ಮಮ ಗಾತ್ರಾಣಿ ಚಿತ್ತಂ ಕೃತ್ವಾ ಚಲಾಚಲಂ ॥ ೩೧ ॥

ನ ಚಾಹಂ ರಾಗಮಿಚ್ಛಾಮಿ ಕ್ರುದ್ಧಮೇವ ಯಶಸ್ವಿನಿ ॥ ೩೨ ॥

ಇಚ್ಛಾಮಿ ಚ ಸದಾ ದಾಂತಂ ಶುಭಂ ಭಾಗವತಂ ಶುಚಿಂ ।
ಪಂಚೇಂದ್ರಿಯಸಮಾಯುಕ್ತಂ ಲಾಭಾಲಾಭವಿವರ್ಜಿತಂ ॥ ೩೩ ॥

ಅಹಂಕಾರವಿನಿರ್ಮುಕ್ತಂ ಕರ್ಮಣ್ಯಭಿರತಂ ಮಮ ॥ ೩೪ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ವರಾನನೇ ।
ಮಾಂ ಯದಾ ಲಭತೇ ಕ್ರುದ್ಧಃ ಶುದ್ಧೋ ಭಾಗವತಶ್ಶುಚಿಃ ॥ ೩೫ ॥

---

೩೦. ಯಶಸ್ವಿನಿ, ಈ ವಿಧಿಯಿಂದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವವರು ಪಾಪರಹಿತರಾಗಿ ಪರಮಗತಿಯನ್ನು ಪಡೆಯುವರು.

೩೧-೩೨. ಯಶಸ್ವಿನೀ, ನನ್ನ ಭಕ್ತಿಯಲ್ಲಿ ನಿರತನಾದರೂ ಯಾರು ಕೋಪಗೊಂಡು, ಮನವನ್ನು ಚಂಚಲವಾಗಿ ಮಾಡಿಕೊಂಡು, ನನ್ನ ಅಂಗಗಳನ್ನು ಮುಟ್ಟುವನೋ ಅವನ ಭಕ್ತಿಯನ್ನು ನಾನು ಬಯಸುವುದಿಲ್ಲ. ಕೋಪಿಯಾದ ಅವನನ್ನು ನಾನು ಪ್ರೀತಿಸುವುದಿಲ್ಲ.

೩೩-೩೪. ನಾನು, ಯಾವಾಗಲೂ, ಇಂದ್ರಿಯನಿಗ್ರಹವುಳ್ಳವನೂ ಅಥವಾ ತಪಸ್ಸಿನ ಕಷ್ಟವನ್ನು ಸಹಿಸುವವನೂ, ಶುಭನೂ, ನಿರ್ಮಲನೂ, ಭಾಗವತನೂ, ಪಂಚೇಂದ್ರಿಯಗಳೂ ಸರಿಯಾಗಿರುವವನೂ, ಲಾಭಾಲಾಭಗಳನ್ನು ಪರಿಗಣಿಸದವನೂ, ಅಹಂಕಾರವಿಲ್ಲದವನೂ, ನನ್ನ ಕರ್ಮದಲ್ಲಿ ಅಭಿರುಚಿಯುಳ್ಳವನೂ ಆದವನನ್ನು ಪ್ರೀತಿಸುತ್ತೇನೆ.

೩೫-೩೬. ಸುಂದರಮುಖೀ, ನಿನಗೆ ಇನ್ನೂ ಹೇಳುತ್ತೇನೆ. ಕೇಳು. ಶುದ್ಧನೂ, ಭಾಗವತನೂ, ಶುಚಿಯೂ ಆದವನಾದರೂ ಕೋಪವುಳ್ಳವನಾಗಿ

ಚಿಲ್ಲಿರ್ಜಾತೋ ವರ್ಷಶತಂ ಶ್ಯೇನೋ ವರ್ಷಶತಂ ಪುನಃ ।
ಭೇಕಸ್ತ್ರೀ ಶತವರ್ಷಾಣಿ ಯಾತುಧಾನಃ ಪುನರ್ದಶ ।
ಅಪುಮಾನ್ಷಟ್ ವರ್ಷಾಣಿ ರೇತೋಭಕ್ಷಶ್ಚ ಜಾಯತೇ ॥ ೩೬ ॥

ಅಂಧೋ ಜಾಯೇತ ಸುಶ್ರೋಣಿ ಪಂಚ ಸಪ್ತತಥಾ ನವ ।
ಗೃಧ್ರೋ ದ್ವಾತ್ರಿಂಶವರ್ಷಾಣಿ ಚಕ್ರವಾಕೋ ದಶೈವ ತು ॥ ೩೭ ॥

ಶೈವಾಲಭಕ್ಷಿತಾ ಚೈವ ಹ್ಯಾಕಾಶಗಮನಂ ತಥಾ ॥ ೩೮ ॥

ಬ್ರಾಹ್ಮಣೋ ಜಾಯತೇ ಭೂಮೇ ಕ್ರೋಧಸ್ಯ ಚ ಪಥೇ ಸ್ಥಿತಃ ।
ಆತ್ಮಕರ್ಮಾಪರಾಧೇನ ಪ್ರಾಪ್ತಸ್ಸಂಸಾರಸಾಗರೇ ॥ ೩೯ ॥

॥ ಧರಣ್ಯುವಾಚ ॥

ಅಹೋ ವೈ ಪರಮಂ ಗುಹ್ಯಂ ಯತ್ತ್ವಯಾ ಪೂರ್ವಭಾಷಿತಂ ।
ಜಾತಂ ಮೇ ವಿಹ್ವಲಂ ಚಿತ್ತಂ ನ ಸ್ಥಿರಂ ಜಾಯತೇ ಕ್ವಚಿತ್ ॥ ೪೦ ॥

ನನ್ನನ್ನು ಆಶ್ರಯಿಸಿದರೆ ಅವನು ನೂರುವರ್ಷಕಾಲ ಚಿಲ್ಲಿಹಕ್ಕಿಯಾಗಿಯೂ, ಬಳಿಕ ನೂರುವರ್ಷ ಗಿಡುಗನಾಗಿಯೂ, ನೂರುವರ್ಷ ಹೆಣ್ಣುಕಪ್ಪೆಯಾಗಿಯೂ, ಹತ್ತುವರ್ಷ ನಿಋತಿರಾಕ್ಷಸನಾಗಿಯೂ, ಆರುವರ್ಷ ರೇತಸ್ಸನ್ನು ಭಕ್ಷಿಸುವ ಷಂಡನಾಗಿಯೂ ಆಗುವನು.

೩೭-೩೯. ಸುಂದರಿ, ಇದಲ್ಲದೆ ಹತ್ತೊಂಬತ್ತುವರ್ಷ ಕುರುಡನಾಗಿಯೂ ಮೂವತ್ತೆರಡುವರ್ಷ ಹದ್ದಾಗಿಯೂ, ಹತ್ತುವರ್ಷ ಚಕ್ರವಾಕಪಕ್ಷಿಯಾಗಿಯೂ ಪಾಚಿಯನ್ನು ತಿನ್ನುವನಾಗಿಯೂ, ಆಕಾಶದಲ್ಲಿ ಸಂಚರಿಸುವವನಾಗಿಯೂ ಆಗಿ, ಬಳಿಕ ಕೋಪದ ದಾರಿಯಲ್ಲೇ ನಡೆಯುವ ಬ್ರಾಹ್ಮಣನಾಗಿ ಜನಿಸುವನು. ಭೂಮೀ, ಕೋಪಗೊಂಡು ನನ್ನನ್ನು ಪೂಜಿಸುವವನು ತನ್ನ ಕರ್ಮದ ತಪ್ಪಿನಿಂದ ಹೀಗೆ ಸಂಸಾರಸಾಗರದಲ್ಲಿ ಬೀಳುವನು.

೪೦-೪೧. ಭೂದೇವಿ—ದೇವ, ಅಹೋ ! ನೀನು ಹೇಳಿದುದು ಪರಮ ರಹಸ್ಯವೇ ಸರಿ. ಭಕ್ತರು ಪಡೆಯಲು ಕಷ್ಟವಾದ ನೀನು ಹೇಳಿದ ದುಸ್ತರವಾದ

ಯತ್ತ್ವಯಾ ಭಾಷಿತಂ ಹೀದಂ ಭಕ್ತಾನಾಂ ಚ ದುರಾಸದಂ |
ಶ್ರುತ್ವಾ ಸುದುಸ್ತರಂ ಸಾರಂ ಭೀತಾಸ್ಮಿ ಪರಿದೇವಿತಾ || ೪೧ ||

ನಾಹಮಾಜ್ಞಾಪಯಾಮಿ ತ್ವಾಂ ದೇವದೇವ ಜಗತ್ಪತೇ |
ಮಮ ಚೈವ ಪ್ರಿಯಾರ್ಥಾಯ ಸರ್ವಲೋಕಸುಖಾವಹಂ || ೪೨ ||

ಯೇನ ಮುಚ್ಯಂತಿ ಸಂಶುದ್ಧಾ ಬುಧಾಃ ಕರ್ಮಪರಾಯಣಾಃ
ಅಲ್ಪಸತ್ವಾ ಗತಭಯಾ ಲೋಭಮೋಹಸಮನ್ವಿತಾಃ |
ತರಂತಿ ಯೇನ ದುರ್ಗಾಣಿ ಪ್ರಾಯಶ್ಚಿತ್ತಂ ಚ ಮೇ ವದ || ೪೩ ||

ತತಃ ಕಮಲಪತ್ರಾಕ್ಷೋ ವರಾಹಃ ಸಮ್ಮುಖೇ ಸ್ಥಿತಃ |
ಸನತ್ಕುಮಾರೋ ಮೇ ಭಕ್ತಃ ಪುನರ್ನಾರಾಯಣೋಽಬ್ರವೀತ್ || ೪೪ ||

ತತೋ ಭೂಮ್ಯಾ ವಚಃ ಶ್ರುತ್ವಾ ಬ್ರಹ್ಮಣಶ್ಚ ಸುತೋ ಮುನಿಃ |
ಸನತ್ಕುಮಾರೋ ಯೋಗಜ್ಞಃ ಪ್ರತ್ಯುವಾಚ ವಸುಂಧರಾಂ || ೪೫ ||

ಸಾರವನ್ನು ಕೇಳಿ, ಹೆದರಿ, ಅಳುತ್ತಿದ್ದೇನೆ. ಪರವಶವಾದ ನನ್ನ ಮನವು ಎಂದಿಗೂ ಸಮಾಧಾನಗೊಳ್ಳದು.

೪೨–೪೩. ದೇವದೇವ, ಜಗತ್ಪತೀ, ನಾನು ನಿನಗೆ ಆಜ್ಞಾಪಿಸುವುದಿಲ್ಲ. ಪ್ರಾರ್ಥಿಸುತ್ತೇನೆ. ಅತಿಶುದ್ಧರೂ, ಪಂಡಿತರೂ, ಕರ್ಮನಿರತರೂ ಆಗಿದ್ದರೂ ಅಲ್ಪಸತ್ವವುಳ್ಳವರೂ, ಲೋಭಮೋಹಗಳುಳ್ಳವರೂ, ಭಯಗೊಂಡವರೂ ಆಗಿ, ಅಪರಾಧಮಾಡಿದವನರು ಯಾವುದರಿಂದ ಆ ಅಪರಾಧವನ್ನು ಕಳೆದುಕೊಳ್ಳುವರೋ, ಕಷ್ಟಗಳಿಂದ ಪಾರಾಗುವರೋ, ಅಂತಹ ಸರ್ವಲೋಕಸುಖಕರವಾದ ಪ್ರಾಯಶ್ಚಿತ್ತವನ್ನು ಅವರಿಗಾಗಿಯೂ, ನನ್ನ ಸಂತೋಷಾರ್ಥವಾಗಿಯೂ ಹೇಳು.

೪೪. ಬಳಿಕ, ಕಮಲದಳನೇತ್ರನೂ, ವರಾಹರೂಪಿಯೂ ಆದ ನಾರಾಯಣನು "ನನ್ನ ಭಕ್ತನಾದ ಸನತ್ಕುಮಾರನು ಎದಿರಿಗಿದ್ದಾನೆ" ಎಂದು ಹೇಳಿದನು.

೪೫. ಬಳಿಕ, ಭೂದೇವಿಯ ಮಾತನ್ನು ಕೇಳಿ, ಬ್ರಹ್ಮಪುತ್ರನೂ, ಯೋಗಜ್ಞನೂ ಆದ ಸನತ್ಕುಮಾರಮುನಿಯು ಭೂದೇವಿಗೆ ಹೇಳಿದನು.

ಧನ್ಯಾ ಚೈವ ಸುಭಾಗ್ಯಾ ಚ ಯತ್ತ್ವಯಾ ಪರಿಪೃಚ್ಛಿತಂ ।
ವರಾಹರೂಪೀ ಭಗವಾನ್ ಸರ್ವಮಾಯಾಕರಂಡಕಃ ॥ ೪೬ ॥

ಕಿಂ ತ್ವಯಾ ಭಾಷಿತೋ ದೇವಿ ಸರ್ವಯೋಗಾಂಗಯೋಗವಿತ್ ।
ದೇವೋ ನಾರಾಯಣಸ್ತತ್ರ ಸರ್ವಧರ್ಮವಿದಾಂ ವರಃ ॥ ೪೭ ॥

ಕುಮಾರವಚನಂ ಶ್ರುತ್ವಾ *ಸಾ ಮಹೀ ಪ್ರತ್ಯಭಾಷತ ।
ಶೃಣು ತತ್ತ್ವೇನ ಮೇ ಬ್ರಹ್ಮನ್ಯನ್ಮಯಾ ಪರಿಪೃಚ್ಛಿತಂ ॥ ೪೮ ॥

ಕಾರ್ಯಂ ಕ್ರಿಯಾಂ ಚಯೋಗಂ ಚ ಅಧ್ಯಾತ್ಮ್ಯಂ ಪಾರ್ಥಿವಸ್ಥಿತಂ ।
ಏತನ್ಮೇ ಪೃಚ್ಛ್ಯತೇ ಬ್ರಹ್ಮನ್ದೇವೋ ನಾರಾಯಣಃ ಪ್ರಭುಃ ॥ ೪೯ ॥

ಕ್ರುದ್ಧಾ ಭಾಗವತಾ ಬ್ರಹ್ಮನ್ಯೇನ ಶುದ್ಧ್ಯಂತಿ ಕಿಲ್ಬಿಷಾತ್ ॥ ೫೦ ॥

---

೪೬. "ಸರ್ವಮಾಯಾಕರಂಡಕನೂ, ವರಾಹರೂಪಿಯೂ ಆದ ಭಗವಂತನನ್ನು (ನೀನು) ಪ್ರಾರ್ಥಿಸಿದುದರಿಂದ ನೀನು ಧನ್ಯೆ. ಸುಭಾಗ್ಯೆ.

೪೭. ದೇವಿ, ಸರ್ವಯೋಗಯೋಗಾಂಗಗಳನ್ನೂ ಅರಿತವನೂ, ಸರ್ವಧರ್ಮಗಳನ್ನೂ ಅರಿತವರಲ್ಲಿ ಉತ್ತಮನೂ ಆದ ದೇವನಾದ ನಾರಾಯಣನಲ್ಲಿ ನೀನು ಕೇಳಿದುದೇನು ? " ಎಂದನು.

೪೮. ಸನತ್ಕುಮಾರನ ಮಾತನ್ನು ಕೇಳಿ, ಆ ಭೂದೇವಿಯು ಮಾತನಾಡಿದಳು.—"ಬ್ರಹ್ಮನೇ, ನಾನು ದೇವನಲ್ಲಿ ಏನನ್ನು ಪ್ರಾರ್ಥಿಸಿದೆನೆಂಬುದನ್ನು ನಿಜವಾಗಿ ಕೇಳು.

೪೯-೫೦. ಮನುಷ್ಯರ ಕಾರ್ಯವನ್ನೂ, ಕರ್ಮವನ್ನೂ, ಅಧ್ಯಾತ್ಮಯೋಗವನ್ನೂ, ಪ್ರಭುವೂ ದೇವನೂ ಆದ ನಾರಾಯಣನಲ್ಲಿ ನಾನು ಕೇಳಿದೆನು. ಅಲ್ಲದೆ ಸಿಟ್ಟುಗೊಂಡ ಭಾಗವತರು ಆ ಪಾಪದಿಂದ ಹೇಗೆ ಮುಕ್ತರಾಗುವರು ಎಂಬುದನ್ನೂ ಕೇಳಿದೆನು.

---

* ಸಮಹೀಂ

ತತೋ ಮಾಂ ಭಾಷತೇ ಬ್ರಹ್ಮನ್ವಿಷ್ಣುರ್ಮಾಯಾಕರಂಡಕಃ ।
ಕೃತ್ವಾ ತೇನ ವ್ರತಂ ಚೈವ ಮನು ಕರ್ಮಪರಾಯಣಃ ॥ ೩೧ ॥

ಷಷ್ಠೇ ಕಾಲೇ ತು ಭುಂಜೀತ ಗೃಹಭಿಕ್ಷಾಮನಿಂದಿತಾಂ ।
ಅಷ್ಟೌ ಭಿಕ್ಷಾ ಯಥಾನ್ಯಾಯಂ ಶುದ್ಧಭಾಗವತಾಃ ಗೃಹೇ ॥ ೩೨ ॥

ಯ ಏತೇನ ವಿಧಾನೇನ ಬ್ರಹ್ಮಕರ್ಮಾಣಿ ಕಾರಯೇತ್ ।
ಮುಚ್ಯತೇ ಕಿಲ್ಬಿಷಾತ್ತಸ್ಮಾದೇವಮಾಹ ಜನಾರ್ದನಃ ॥ ೩೩ ॥

ಯದೀಚ್ಛತಿ ಪರಾಂ ಸಿದ್ಧಿಂ ವಿಷ್ಣುಲೋಕಂ ಜನಾರ್ದನಾತ್ ।
ಶೀಘ್ರಮಾರಾಧಯೇದ್ವಿಷ್ಣುಂ ದ್ವಿಜಮುಖ್ಯೋ ನ ಸಂಶಯಃ ॥ ೩೪ ॥

ತತೋ ಭೂಮೇರ್ವಚಃ ಶ್ರುತ್ವಾ ಬ್ರಹ್ಮಣಶ್ಚ ಸುತೋ ಮುನಿಃ ।
ಪ್ರತ್ಯುವಾಚ ವಿಶಾಲಾಕ್ಷೀಂ ಧರ್ಮಕಾಮೋ ವಸುಂಧರಾಂ ॥ ೩೫ ॥

೩೧-೩೩. ಬ್ರಹ್ಮನೇ, ಬಳಿಕ ಮಾಯೆಯ ಭರಣಿಯಾದ ವಿಷ್ಣುವು ನನ್ನೊಡನೆ ಮಾತನಾಡಿದನು. 'ನನ್ನ ಕರ್ಮದಲ್ಲಿ ನಿರತನಾದವನು, ಶಾಸ್ತ್ರೋಕ್ತವಿಧಾನದಿಂದ ವ್ರತವನ್ನು ಮಾಡಿ, ಶುದ್ಧರಾದ ಎಂಟುಜನ ಭಾಗವತರ ಮನೆಯಲ್ಲಿ ನ್ಯಾಯವಾಗಿ ಭಿಕ್ಷಮಾಡಿ, ದೋಷವಿಲ್ಲದ ಆ ಭಿಕ್ಷದ ಆಹಾರವನ್ನು ರಾತ್ರಿ ಊಟಮಾಡಬೇಕು. ಯಾವನು ಈ ವಿಧಾನದಿಂದ ಬ್ರಹ್ಮಕರ್ಮವನ್ನು ಮಾಡುವನೋ (ಮಾಡಿಸುವನೋ) ಅವನು ಪಾಪದಿಂದ ಮುಕ್ತನಾಗುವನು.' ಎಂದು ಜನಾರ್ದನನು ಹೇಳಿದನು.

೩೪. ಆದುದರಿಂದ ನಾರಾಯಣನಿಂದ ಪರಮಸಿದ್ಧಿಯನ್ನೂ, ವಿಷ್ಣುಲೋಕವನ್ನೂ ಬಯಸುವುದಾದರೆ ದ್ವಿಜಮುಖ್ಯನು ವಿಷ್ಣುವನ್ನು ಬೇಗನೆ ಆರಾಧಿಸಬೇಕು. ಇದರಲ್ಲಿ ಸಂಶಯವಿಲ್ಲ." (ಎಂದಳು.)

೩೫-೩೬. ಭೂದೇವಿಯ ಮಾತನ್ನು ಕೇಳಿ, ಬ್ರಹ್ಮಪುತ್ರನಾದ ಸನತ್ಕುಮಾರಮುನಿಯು ಧರ್ಮದಲ್ಲಿ ಇಷ್ಟವುಳ್ಳವನಾಗಿ ವಿಶಾಲಾಕ್ಷಿಯಾದ ಆ ಭೂದೇವಿಗೆ

ಅಹೋ ಗುಹ್ಯಂ ರಹಸ್ಯಂ ಚ ಯತ್ತ್ವಯಾ ದೇವಿ ಭಾಷಿತಂ ।
ತಸ್ಯ ಯೋ ಮುಖನಿಷ್ಕ್ರಾಂತಾ ಧರ್ಮಾಸ್ತಾನ್ವಕ್ತುಮಹಸಿ ॥ ೫೬ ॥

॥ ಧರಣ್ಯುವಾಚ ॥

ತತಸ್ಸ ಪುಂಡರೀಕಾಕ್ಷಃ ಶಂಖಚಕ್ರಗದಾಧರಃ ।
ವರಾಹರೂಪೀ ಭಗವಾನ್ ಲೋಕನಾಥೋ ಜನಾರ್ದನಃ ॥ ೫೭ ॥

ಉವಾಚ ಮಧುರಂ ವಾಕ್ಯಂ ಮೇಘದುಂದುಭಿನಿಸ್ವನಃ ।
ಭಕ್ತಕರ್ಮಸುಖಾರ್ಥಾಯ ಗುಣವಿತ್ತಸಮನ್ವಿತಂ ॥ ೫೮ ॥

ಅನೇನೈವ ವಿಧಾನೇನ ಆಚಾರೇಣ ಸಮನ್ವಿತಃ ।
ದೇವಿ ಕಾರಯತೇ ಕರ್ಮ ಮಮ ಲೋಕಂ ಸ ಗಚ್ಛತಿ ॥ ೫೯ ॥

ಕ್ರುದ್ಧೇನ ನ ಚ ಕರ್ತವ್ಯಂ ಲೋಭೇನ ತ್ವರಯಾ ನ ಚ ।
ಮತ್ಪೂಜನಂ ವಿಧಾನೇನ ಯದೀಚ್ಛೇತ್ಪರಮಾಂ ಗತಿಂ ॥ ೬೦ ॥

"ದೇವಿ, ನೀನು ಹೇಳಿದ ರಹಸ್ಯವಿಚಾರವು ಅದ್ಭುತವಾದುದು. ಆ ದೇವನ ಬಾಯಿಂದಲೇ ಬಂದ ಇತರ ಧರ್ಮಗಳನ್ನೂ ನೀನು ಹೇಳಬೇಕು" ಎಂದನು.

೫೭–೫೮. ಭೂದೇವಿ—ಬೆಳ್ದಾವರೆಯಂತೆ ಕಣ್ಣುಳ್ಳವನೂ, ಶಂಖಚಕ್ರಗದಾಧರನೂ, ವರಾಹರೂಪಿಯೂ, ಜಗದೊಡೆಯನೂ, ಜನಾರ್ದನನೂ ಆದ ಭಗವಂತನು, ಮೇಘಭೇರಿಗಳ ಗಂಭೀರವಾದ ಧ್ವನಿಯಿಂದ ಇಂಪಾಗಿ ಭಕ್ತರ ಕರ್ಮಸುಖಕ್ಕಾಗಿ ಗುಣಧನಯುಕ್ತವಾದ ಮುಂದಿನ ವಾಕ್ಯವನ್ನು ಹೇಳಿದನು.

೫೯–೬೧. 'ದೇವಿ, ಈ ವಿಧಾನದಿಂದಲೇ ಆಚಾರಯುತನಾಗಿ ಕರ್ಮವನ್ನಾಚರಿಸುವವನು ನನ್ನ ಲೋಕವನ್ನು ಸೇರುವನು. ನನ್ನ ಪೂಜಾವಿಧಿಯಿಂದ ಪರಮಗತಿಯನ್ನು ಬಯಸುವುದಾದರೆ ಕೋಪದಿಂದಲೂ, ದುರಾಸೆಯಿಂದಲೂ, ತ್ವರೆಯಿಂದಲೂ ನನ್ನ ಪೂಜೆಯನ್ನು ಮಾಡಬಾರದು. ದೇವಿ, ಯಾರು

ಯೇ ಮಾಂ ದೇವಿ ಯಜಿಷ್ಯಂತಿ ಕ್ರೋಧಂ ತ್ಯಕ್ತ್ವಾ ಜಿತೇಂದ್ರಿಯಾಃ |
ಸಂಸಾರಂ ತೇ ನ ಗಚ್ಛಂತಿ ಅಪರಾಧವಿವರ್ಜಿತಾಃ || ೬೧ ||

|| ಶ್ರೀವರಾಹ ಉವಾಚ ||

ಅಕರ್ಮಣ್ಯೇನ ಪುಷ್ಪೇಣ ಯೋ ಮಾಮರ್ಚಯತೇ ಭುವಿ |
ಪಾತನಂ ತಸ್ಯ ವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ || ೬೨ ||

ನಾಹಂ ತತ್ಪ್ರತಿಗೃಹ್ಣಾಮಿ ನ ಚ ತೇ ವೈ ಮಮ ಪ್ರಿಯಾಃ |
ಮೂರ್ಖಾ ಭಾಗವತಾ ದೇವಿ ಮಮ ವಿಪ್ರಿಯಕಾರಿಣಃ || ೬೩ ||

ಪತಂತಿ ನರಕೇ ಘೋರೇ ರೌರವೇ ತದನಂತರಂ |
ಅಜ್ಞಾನಸ್ಯ ಚ ದೋಷೇಣ ದುಃಖಾನ್ಯನುಭವಂತಿ ಚ || ೬೪ ||

ವಾನರೋ ದಶವರ್ಷಾಣಿ ಮಾರ್ಜಾರಶ್ಚ ತ್ರಯೋದಶ |
ಮೂಕಃ ಪಂಚ ಚ ವರ್ಷಾಣಿ ಬಲೀವರ್ದಶ್ಚ ದ್ವಾದಶ || ೬೫ ||

ಜಿತೇಂದ್ರಿಯರಾಗಿ ಕೋಪವನ್ನು ಬಿಟ್ಟು ನನ್ನನ್ನು ಪೂಜಿಸುವರೋ ಆ ದೋಷ ರಹಿತರು ಮತ್ತೆ ಸಂಸಾರಕ್ಕೆ ಹೋಗುವುದಿಲ್ಲ' ಎಂದನು.

೬೨. ಶ್ರೀವರಾಹ—ವಸುಂಧರೇ, ಭೂಮಿಯಲ್ಲಿ ಕರ್ಮಾರ್ಹವಲ್ಲದ ಹೂಗಳಿಂದ ನನ್ನನ್ನು ಪೂಜಿಸುವವನಿಗಾಗುವ ಅಧೋಗತಿಯನ್ನು ಹೇಳುತ್ತೇನೆ. ಕೇಳು.

೬೩. ದೇವಿ, ನಾನು ಆ ಪೂಜೆಯನ್ನು ಸ್ವೀಕರಿಸುವುದಿಲ್ಲ. ಕರ್ಮಾನರ್ಹವಾದ ಹೂಗಳಿಂದ ಪೂಜಿಸುವವರು ನನಗೆ ಬೇಕಾದವರೂ ಅಲ್ಲ. ಮೂರ್ಖರಾದ ಆ ಭಾಗವತರು ಅದರಿಂದ ನನಗೆ ಅಪ್ರಿಯವನ್ನು ಮಾಡುವರು.

೬೪. ಅಜ್ಞಾನದ ದೋಷದಿಂದ ಅವರು ಮರಣಾನಂತರ ಭಯಂಕರವಾದ ರೌರವವೆಂಬ ನರಕದಲ್ಲಿ ಬೀಳುವರು. ಬೇರೆಯ ದುಃಖಗಳನ್ನೂ ಅನುಭವಿಸುವರು.

೬೫-೬೬. ಅನರ್ಹವಾದ ಹೂಗಳಿಂದ ನನ್ನನ್ನು ಪೂಜಿಸುವವನು ಹತ್ತು ವರ್ಷಕಾಲ ಕಪಿಯಾಗಿಯೂ, ಹದಿಮೂರುವರ್ಷ ಬೆಕ್ಕಾಗಿಯೂ, ಐದು ವರ್ಷ

ಭಾಗಶ್ಚೈವಾಷ್ಟವರ್ಷಾಣಿ ಮಾಸಂ ವೈ ಗ್ರಾಮಕುಕ್ಕುಟಃ ।
ತ್ರೀಣಿ ವರ್ಷಾಣಿ ಮಹಿಷೋ ಭವತ್ಯೇವ ನ ಸಂಶಯಃ ॥ ೬೬ ॥

ಏತತ್ತೇ ಕಥಿತಂ ಭದ್ರೇ ಪುಷ್ಪಂ ಯನ್ಮೇ ನ ರೋಚತೇ ।
ಅಕರ್ಮಣ್ಯಂ ವಿಶಾಲಾಕ್ಷಿ ಪುಷ್ಪಂ ಯೋ ದದತೇ ಚ ವೈ ॥ ೬೭ ॥

॥ ಧರಣ್ಯುವಾಚ ॥

ಭಗವನ್ಯದಿ ತುಷ್ಟೋಽಸಿ ವಿಶುದ್ಧೇನಾಂತರಾತ್ಮನಾ ।
ಯೇನ ಶುದ್ಧ್ಯಂತಿ ತೇ ಭಕ್ತಾಸ್ತವ ಕರ್ಮಪರಾಯಣಾಃ ॥ ೬೮ ॥

॥ ಶ್ರೀವರಾಹ ಉವಾಚ ॥

ಶೃಣು ತತ್ತ್ವೇನ ಮೇ ದೇವಿ ಯನ್ಮಾಂ ತ್ವಂ ಪರಿಪೃಚ್ಛಸಿ ।
ಪ್ರಾಯಶ್ಚಿತ್ತಂ ಮಹಾಭಾಗೇ ಯೇನ ಶುದ್ಧ್ಯಂತಿ ಮಾನವಾಃ ॥ ೬೯ ॥

ಮೂಗನಾಗಿಯೂ, ಹನ್ನೆರಡುವರ್ಷ ಎತ್ತಾಗಿಯೂ, ಎಂಟುವರ್ಷ ಹೋತ ನಾಗಿಯೂ, ಒಂದು ತಿಂಗಳು ಊರಿನ ಕೋಳಿಯಾಗಿಯೂ, ಮೂರುವರ್ಷ ಕೋಣನಾಗಿಯೂ ಆಗುವುದರಲ್ಲಿ ಸಂದೇಹವೇ ಇಲ್ಲ.

೬೭. ಭದ್ರೇ, ವಿಶಾಲಾಕ್ಷೀ, ಯಾವುದು ನನಗೆ ಇಷ್ಟವಿಲ್ಲದುದೋ ಅದು ಕರ್ಮಾನರ್ಹವಾದ ಹೂವೆನಿಸುವುದು. ಅಂತಹ ಹೂವನ್ನು ನನಗೆ ಅರ್ಪಿಸುವವರಿಗೆ ಆಗುವ ಗತಿಯನ್ನು ನಿನಗೆ ಹೇಳಿದ್ದೇನೆ.

೬೮. ಧರಣೀದೇವಿ—ಭಗವಂತನೇ, ಪರಿಶುದ್ಧಾಂತರಾತ್ಮದಿಂದ ನೀನು ಸಂತುಷ್ಟನಾಗಿದ್ದರೆ, ನಿನ್ನ ಕರ್ಮನಿರತರಾದ ಆ ಭಕ್ತರು ಏತರಿಂದ ಶುದ್ಧ ರಾಗುವರೋ ಹೇಳು.

೬೯. ಶ್ರೀ ವರಾಹ—ನನ್ನ ದೇವಿ, ಮಹಾಭಾಗ್ಯೇ, ನೀನು ನನ್ನನ್ನು ಕೇಳುವುದರಿಂದ, ಅಪರಾಧಮಾಡಿದ ಮನುಷ್ಯರು ಅದನ್ನು ಕಳೆದುಕೊಂಡು ಶುದ್ಧ ರಾಗುವ ಪ್ರಾಯಶ್ಚಿತ್ತವನ್ನು ನಿಜವಾಗಿ ಹೇಳುತ್ತೇನೆ. ಕೇಳು.

ಏಕಾಹಾರಂ ತತಃ ಕೃತ್ವಾ ಮಾಸಮೇಕಂ ವರಾನನೇ ।
ವೀರಾಸನವಿಧಿಂ ಚೈವ ಕಾರಯೇತ್ಸಪ್ತ ಸಪ್ತ ಚ ॥ ೭೦ ॥

ಚತುರ್ಥಂ ಭಕ್ಷ್ಯಮೇಕೇನ ಮಾಸೇನ ಘೃತಪಾಯಸಂ ।
ಯಾವಕಾನ್ನಂ ತ್ರೀಣ್ಯಹಾನಿ ವಾಯುಭಕ್ಷೋ ದಿನತ್ರಯಂ ॥ ೭೧ ॥

ಯ ಏತೇನ ವಿಧಾನೇನ ದೇವಿ ಕರ್ಮಾಣಿ ಕಾರಯೇತ್ ।
ಸರ್ವಪಾಪಪ್ರಮುಕ್ತಶ್ಚ ಮಮ ಲೋಕಂ ಸ ಗಚ್ಛತಿ ॥ ೭೨ ॥

ಇತಿ ಶ್ರೀವರಾಹಪುರಾಣೇ ಪೂಜಾದಿಸಾಮಯಿಕಾಪರಾಧ ಪ್ರಾಯಶ್ಚಿತ್ತಂ ನಾಮ ಚತುಸ್ತ್ರಿಂಶದಧಿಕ ಶತತಮೋಧ್ಯಾಯಃ

---

೭೦. ಸುಂದರಮುಖೀ, ಮೇಲೆ ಹೇಳಿದ ಅಪರಾಧಿಯು, ಒಂದು ತಿಂಗಳ ಕಾಲ ಒಂದು ಹೊತ್ತು ಮಾತ್ರವೇ ಊಟಮಾಡಿ, ಬಳಿಕ ಹದಿನಾಲ್ಕು ದಿನಗಳು ವೀರಾಸನವಿಧಿಯನ್ನು ಆಚರಿಸಬೇಕು.

೭೧. ಒಂದು ತಿಂಗಳು ತುಪ್ಪವನ್ನು ಸೇರಿಸಿದ ಪಾಯಸವನ್ನು ಮಾತ್ರ ಅಪರಾಹ್ಣದಲ್ಲಿ ಸೇವಿಸಬೇಕು ಬಳಿಕ ಮೂರುದಿನ ಅಲಂದೆಯನ್ನು ತಿಂದು, ಆಮೇಲೆ ಮೂರುದಿನ ವಾತಾಹಾರನಾಗಿರಬೇಕು. ಎಂದರೆ ಏನನ್ನೂ ತಿನ್ನದೇ ಇರಬೇಕು

೭೨. ದೇವಿ, ಈ ರೀತಿಯಾಗಿ ಪ್ರಾಯಶ್ಚಿತ್ತಕರ್ಮಗಳನ್ನು ಮಾಡಿಕೊಳ್ಳುವವನು ಪಾಪಗಳೆಲ್ಲವನ್ನೂ ಕಳೆದುಕೊಂಡು, ನನ್ನ ಲೋಕವನ್ನು ಸೇರುವನು.

ಅಧ್ಯಾಯದ ಸಾರಾಂಶ—

ಶ್ರೀವರಾಹನು ಭೂದೇವಿಗೆ, ದೇವರ ಪೂಜೆಯ ಕಾಲದಲ್ಲಿ ಪೂಜಕರು ಮಾಡುವ ಅಪರಾಧಗಳನ್ನೂ, ಆ ಅಪರಾಧಗಳಿಂದಾಗುವ ದುರ್ಗತಿಗಳನ್ನೂ, ಆ ಅಪರಾಧಗಳನ್ನು ಹೋಗಲಾಡಿಸುವ ಪ್ರಾಯಶ್ಚಿತ್ತಗಳನ್ನೂ ಹೇಳುವಲ್ಲಿಗೆ ಶ್ರೀ ವರಾಹ ಪುರಾಣದಲ್ಲಿ ನೂರಮೂವತ್ತನಾಲ್ಕನೆಯ ಅಧ್ಯಾಯ.

|| ಶ್ರೀಃ ||

—x—

ಪಂಚತ್ರಿಂಶದಧಿಕಶತತಮೋಽಧ್ಯಾಯಃ

ಅಥ *ಇತರಾಪರಾಧ ಪ್ರಾಯಶ್ಚಿತ್ತಂ

|| ಶ್ರೀವರಾಹ ಉವಾಚ ||

ರಕ್ತವಸ್ತ್ರೇಣ ಸಂಯುಕ್ತೋ ಯೋ ಹಿ ಮಾಮುಪಸರ್ಪತಿ |
ತಸ್ಯಾಪಿ ಶೃಣು ಸುಶ್ರೋಣಿ ಕರ್ಮ ಸಂಸಾರಮೋಕ್ಷಣಂ || ೧ ||

ರಜಸ್ವಲಾಸು ನಾರೀಷು ರಜೋ ಯತ್ತತ್ಪ್ರವರ್ತತೇ |
ತೇನಾಸೌ ರಜಸಾ ಪುಷ್ಟೋ ಕರ್ಮದೋಷೇಣ ಜಾನತಃ || ೨ ||

ವರ್ಷಾಣಿ ದಶ ಪಂಚೈವ ವಸತೇ ತತ್ರ ನಿಶ್ಚಯಾತ್ |
ರಜೋ ಭೂತ್ವಾ ಮಹಾಭಾಗೇ ರಕ್ತವಸ್ತ್ರಪರಾಯಣಃ || ೩ ||

ನೂರ ಮೂವತ್ತೈದನೆಯ ಅಧ್ಯಾಯ

ಇತರಾಪರಾಧಗಳ ಪ್ರಾಯಶ್ಚಿತ್ತ

೧. ಶ್ರೀವರಾಹ—ಸುಂದರಿ, ಕೆಂಪುಬಟ್ಟೆಯನ್ನುಟ್ಟು ಅಥವಾ ಹೊದೆದು, ನನ್ನನ್ನು ಪೂಜಿಸುವವನಿಗೆ ಆ ತಪ್ಪಿನಿಂದಾಗುವ ಸಂಸಾರವನ್ನು ವಿಮೋಚನೆ ಮಾಡುವ ಕರ್ಮವನ್ನು ಕೇಳು.

೨–೩. ಮಹಾಭಾಗ್ಯೇ, ಕೆಂಪುಬಟ್ಟೆಯಲ್ಲಿ ಆಸಕ್ತಿಯುಳ್ಳ ಪೂಜಕನು ರಜಸ್ಸಾಗಿ ಜನಿಸಿ, ರಜಸ್ವಲೆಯರಾದ ಹೆಂಗಸರಲ್ಲಿ ಉಂಟಾಗುವ ರಜಸ್ಸಿನಿಂದ ಪುಷ್ಟನಾಗಿ, ತನ್ನ ಕರ್ಮದೋಷದಿಂದ ಆ ಸ್ಥಿತಿಯನ್ನು ತಿಳಿಯುತ್ತ ಹದಿನೈದು ವರ್ಷಕಾಲ ಅಲ್ಲಿ ನಿಜವಾಗಿಯೂ ವಾಸಿಸುವನು.

---

* ಜಾಲಪಾದ ಭಕ್ಷಣಾಪರಾಧ (ಬೊಂ.)

ಪ್ರಾಯಶ್ಚಿತ್ತಂ ಪ್ರವಕ್ಷ್ಯಾಮಿ ತಸ್ಯ ಕಾಯವಿಶೋಧನಂ ।
ಯೇ ನ ಶುದ್ಧ್ಯಂತಿ ತೇ ಭೂಮೇ ಪುರುಷಾಶ್ಶಾಸ್ತ್ರನಿಶ್ಚಿತಾಃ ॥ ೪ ॥

ಏಕಾಹಾರಂ ತತಃ ಕೃತ್ವಾ ದಿನಾನಿ ದಶ ಸಪ್ತ ಚ ।
ವಾಯುಭಕ್ಷಸ್ತ್ರೀಣ್ಯಹಾನಿ ದಿನಮೇಕಂ ಜಲಾಶನಃ ॥ ೫ ॥

ಏವಂ ಸ ಮುಚ್ಯತೇ ಭೂಮೇ ಮಮ ವಿಪ್ರಿಯಕಾರಕಃ ।
ಪ್ರಾಯಶ್ಚಿತ್ತಂ ತತಃ ಕೃತ್ವಾ ಮಮಾಸೌ ರೋಚತೇ ಸ ಹ ॥ ೬ ॥

ಏತತ್ತೇ ಕಥಿತಂ ಭೂಮೇ ರಕ್ತವಸ್ತ್ರವಿಭೂಷಿತೇ ।
ಪ್ರಾಯಶ್ಚಿತ್ತಂ ಮಹಾಭಾಗೇ ಸರ್ವಸಂಸಾರಮೋಕ್ಷಣಂ ॥ ೭ ॥

ಯಸ್ತು ಮಾಮಂಧಕಾರೇಷು ವಿನಾ ದೀಪೇನ ಸುಂದರಿ ।
ಸ್ಪೃಶತೇ ಚ ವಿನಾ ಶಾಸ್ತ್ರಂ ತ್ವರಮಾಣೋ ವಿಮೋಹಿತಃ ॥ ೮ ॥

---

೪. ಭೂಮೀ, ಶಾಸ್ತ್ರಗಳಲ್ಲಿ ನಂಬಿಕೆಯುಳ್ಳ, ವಸ್ತ್ರಾಪರಾಧದ ಮನುಷ್ಯರು ಯಾವುದರಿಂದ ಶುದ್ಧರಾಗುವರೋ ಅಂತಹ ದೇಹವಿಶೋಧಕವಾದ ಪ್ರಾಯಶ್ಚಿತ್ತವನ್ನು ಹೇಳುತ್ತೇನೆ.

೫–೬. ಭೂಮೀ, ನನಗೆ ಆ ಅಹಿತವನ್ನು ಮಾಡಿದವನು, ಹದಿನೇಳು ದಿನಗಳು ಒಂದು ಹೊತ್ತು ಮಾತ್ರ ಊಟಮಾಡಿ, ಬಳಿಕ ಆಹಾರವಿಲ್ಲದ ವಾಯುಸೇವನೆಯಿಂದ ಮೂರು ದಿನಗಳಿದ್ದು ಒಂದು ದಿನ ನೀರನ್ನು ಮಾತ್ರವೇ ಕುಡಿದು ಇದ್ದರೆ ಆ ಪಾಪವನ್ನು ಕಳೆದುಕೊಳ್ಳುವನು. ಈ ಪ್ರಾಯಶ್ಚಿತ್ತವನ್ನು ಮಾಡಿಕೊಂಡ ಬಳಿಕ ಅವನು ನನಗೆ ಇಷ್ಟನಾಗುವನು.

೭. ಮಹಾಭಾಗ್ಯೇ, ರಕ್ತವಸ್ತ್ರಾಲಂಕೃತನಾಗಿ ಪೂಜೆಮಾಡಿದವನ ಸಂಸಾರಮೋಕ್ಷಕವಾದ ಈ ಪ್ರಾಯಶ್ಚಿತ್ತವನ್ನು ನಿನಗೆ ಹೇಳಿದ್ದೇನೆ.

೮–೯. ಸುಂದರಿ, ಯಾರು ಶಾಸ್ತ್ರವಿಧಿಯಂತಲ್ಲದೆ ಕತ್ತಲೆಯಲ್ಲಿ ದೀಪವೂ ಇಲ್ಲದೆ ತ್ವರೆಯಿಂದ ಅಜ್ಞಾನವುಳ್ಳವನಾಗಿ ನನ್ನನ್ನು ಮುಟ್ಟುವನೋ ಅವನ

ಪತನಂ ತಸ್ಯ ವಕ್ಷ್ಯಾಮಿ ಶೃಣುಷ್ವ ತ್ವಂ ವಸುಂಧರೇ ।
ತೇನ ಕ್ಲೇಶಂ ಸಮಾಸಾದ್ಯ ಕ್ಲಿಶ್ಯತೇ ಚ ನರಾಧಮಃ ॥ ೯ ॥

ಅಂಧೋ ಭೂತ್ವಾ ವರಾರೋಹೇ ಏಕಂ ಜನ್ಮ ತಮೋಮಯಃ ।
ಸರ್ವಾಶೀ ಸರ್ವಭಕ್ಷಶ್ಚ ಮಾನವಸ್ತೋಽಭಿಜಾಯತೇ ॥ ೧೦ ॥

ಅನನ್ಯಮಾನಸೋ ಭೂತ್ವಾ ಭೂಮೇ ಹ್ಯೇತತ್ಪ್ರಸಾಧಯೇತ್
ಪ್ರಾಯಶ್ಚಿತ್ತಂ ಪ್ರವಕ್ಷ್ಯಾಮಿ ಅಂಧಕಾರೇತು ಯಃ ಪುರಾ ।
ಸಂಸ್ಪೃಶೇತ್ಸೋಽಪಿ ಧರ್ಮಾತ್ಮಾ ಯೇನ ಲೋಕಂ ಮಮ ವ್ರಜೇತ್ ॥೧೧॥

ಅಕ್ಷ್ಣೋರಾಚ್ಛಾದನಂ ಕೃತ್ವಾ ದಿನಾನಿ ದಶ ಪಂಚ ಚ ।
ಏಕಾಹಾರಂ ತತಃ ಕೃತ್ವಾ ದಿನವಿಂಶಂ ಸಮಾಹಿತಃ ॥ ೧೨ ॥

ಯಸ್ಯಕಸ್ಯಾಪಿ ಮಾಸಸ್ಯ ಏಕಾಮೇವ ಚ ದ್ವಾದಶೀಂ ।
ಏಕಾಹಾರಸ್ತತೋ ಭೂತ್ವಾ ನಿಷೀದೇಚ್ಚ ಜಲಾಶನಃ ॥ ೧೩ ॥

ಪತನವನ್ನು ಹೇಳುತ್ತೇನೆ ಕೇಳು. ವಸುಂಧರೇ, ಹಾಗೆ ಮುಟ್ಟುವುದರಿಂದ ಆ ನರಾಧಮನು ದುಃಖವನ್ನು ಪಡೆದು ಕಷ್ಟಪಡುವನು.

೧೦. ಮಹಾಭಾಗ್ಯೇ, ಅವನು ಒಂದು ಜನ್ಮದಲ್ಲಿ ತಮೋಮಯನಾದ ಕುರುಡನಾಗಿ ಬಳಿಕ ಸರ್ವಭಕ್ಷಕನಾದ ಮನುಷ್ಯನಾಗಿ ಹುಟ್ಟುವನು

೧೧. ಭೂಮೀ, ಆದುದರಿಂದ ಮೊದಲು ನನ್ನನ್ನು ಕತ್ತಲೆಯಲ್ಲಿ ಮುಟ್ಟಿದವನೂ ಧರ್ಮಾತ್ಮನಾಗಿ ಯಾವುದರಿಂದ ನನ್ನ ಲೋಕವನ್ನು ಸೇರುವನೋ ಆ ಪ್ರಾಯಶ್ಚಿತ್ತವನ್ನು ಹೇಳುತ್ತೇನೆ. ತಪ್ಪು ಮಾಡಿದವನು ಮನಸ್ಸಿಟ್ಟು ಇದನ್ನು ಸಾಧಿಸಬೇಕು.

೧೨-೧೪. ಕತ್ತಲೆಯಲ್ಲಿ ನನ್ನನ್ನು ಮುಟ್ಟಿದವನು ಹದಿನೈದು ದಿನಗಳವರೆಗೆ ಕಣ್ಣನ್ನು ಕಟ್ಟಿಕೊಂಡಿದ್ದು, ಬಳಿಕ ಇಪ್ಪತ್ತುದಿನ ಒಪ್ಪತ್ತುಂಡು, ಶಾಂತನಾಗಿದ್ದು ಯಾವುದಾದರೊಂದು ದ್ವಾದಶಿಯದಿನವೂ ಒಂದು ಹೊತ್ತು ಮಾತ್ರ ಊಟಮಾಡಿ, ಬಳಿಕ ಜಲಾಹಾರನಾಗಿದ್ದು, ಆಮೇಲೆ ಹಸುವಿನ ಗಂಜಲದಲ್ಲಿ ಬೇಯಿಸಿದ

ತತೋ *ಯವಾನ್ನಂ ಭುಂಜೀತ ಗೋಮೂತ್ರೇಣ ತು ಪಾಚಿತಂ ।
ಪ್ರಾಯಶ್ಚಿತ್ತೇನ ಚೈತೇನ ಮುಚ್ಯತೇ ಪಾತಕಾತ್ತತಃ ॥ ೧೪ ॥

ಯಃ ಪುನಃ ಕೃಷ್ಣವಸ್ತ್ರೇಣ ಮಮ ಕರ್ಮಪರಾಯಣಃ ।
ದೇವಿ ಕರ್ಮಾಣಿ ಕುರ್ವೀತ ತಸ್ಯ ವೈ ಪಾತನಂ ಶೃಣು ॥ ೧೫ ॥

ಘುಣೋ ವೈ ಪಂಚವರ್ಷಾಣಿ ಲಾಜವಾಸ್ತು ಸಮಾಶ್ರಯಃ ।
ಪಂಚವರ್ಷಾಣಿ ನಕುಲೋ ದಶವರ್ಷಾಣಿ ಕಚ್ಛಪಃ ॥ ೧೬ ॥

ಏವಂ ಭ್ರಮತಿ ಸಂಸಾರೇ ಮಮ ಕರ್ಮಪರಾಯಣಃ ।
ಪಾರಾವತೇಷು ಜಾಯೇತ ನವವರ್ಷಾಣಿ ಪಂಚ ಚ ॥ ೧೭ ॥

ಜಾತೋ ಮಮಾಪರಾಧೇನ ಸ್ಥಿತಃ ಪಾರಾವತೋ ಭುವಿ ।
ಮಮ ತಿಷ್ಠತಿ ಪಾರ್ಶ್ವೇಷು ಯತ್ರೈವಾಹಂ ಪ್ರತಿಷ್ಠಿತಃ । ॥ ೧೮ ॥

ಯವೆಯ ಅನ್ನವನ್ನು ತಿನ್ನಬೇಕು. ಈ ಪ್ರಾಯಶ್ಚಿತ್ತದಿಂದ ಆ ಪಾಪವನ್ನು ಕಳೆದುಕೊಳ್ಳುವನು

೧೫. ದೇವಿ, ನನ್ನ ಕರ್ಮದಲ್ಲಿ ನಿರತನಾದ ಯಾರು ಕರಿಯ ಬಟ್ಟೆಯನ್ನುಟ್ಟು, ನನ್ನ ಕರ್ಮಗಳನ್ನು ಮಾಡುವನೋ ಅವನ ಅಧೋಗತಿಯನ್ನು ಕೇಳು.

೧೬–೧೮. ಅವನು ಐದು ವರ್ಷಕಾಲ ಅರಳಿನಲ್ಲೂ, ಮನೆಗಳಲ್ಲೂ ಇರುವ ಹುಳುವಾಗಿಯೂ, ಐದುವರ್ಷ ಮುಂಗುಸಿಯಾಗಿಯೂ, ಹತ್ತುವರ್ಷ ಆಮೆಯಾಗಿಯೂ ಇದ್ದು ಸಂಸಾರದಲ್ಲಿ ತೊಳಲುವನು. ನನ್ನ ಕರ್ಮದಲ್ಲಿ ನಿರತನಾದ ಅವನು ನನಗೆ ಮಾಡಿದ ಅಪರಾಧದಿಂದ ಬಳಿಕ ಪಾರಿವಾಳವಾಗಿ ಹುಟ್ಟಿ, ಹದಿನಾಲ್ಕು ವರ್ಷಕಾಲ ಭೂಮಿಯಲ್ಲಿದ್ದು, ನನ್ನನ್ನು ಪ್ರತಿಷ್ಠೆಮಾಡಿರುವೆಡೆಯಲ್ಲಿಯೇ ನನ್ನ ಪಕ್ಕದಲ್ಲೇ ಎಂದರೆ ದೇವಾಲಯದ ಗೋಪುರವಿಮಾನಗಳಲ್ಲಿ ಇರುವನು.

---

* ಯವಾನ್ನ ಭುಂಜೀತ.

ಪ್ರಾಯಶ್ಚಿತ್ತಂ ಪ್ರವಕ್ಷ್ಯಾಮಿ ತಸ್ಯ ಸಂಸಾರಮೋಕ್ಷಣೇ |
ಯೇನಾಸೌ ಲಭತೇ ಸಿದ್ಧಿಂ ಕೃಷ್ಣವಸ್ತ್ರಾಪರಾಧತಃ || ೧೯ ||

ಸಪ್ತಾಹಂ ಯಾವಕಂ ಭುಕ್ತ್ವಾ ತ್ರಿರಾತ್ರಂ ಸಕ್ತುಪಿಂಡಿಕಾಂ |
ತ್ರೀಣಿ ಪಿಂಡಾಂಸ್ತ್ರಿರಾತ್ರಂ ತು ಏವಂ ಮುಚ್ಯೇತ ಕಿಲ್ಬಿಷಾತ್ || ೨೦ ||

ಯ ಏತೇನ ವಿಧಾನೇನ ದೇವಿ ಕರ್ಮಾಣಿ ಕಾರಯೇತ್ || ೨೧ ||

ಶುಚಿರ್ಭಾಗವತೋ ಭೂತ್ವಾ ಮಮ ಮಾರ್ಗಾನುಸಾರಕಃ |
ನ ಸ ಗಚ್ಛತಿ ಸಂಸಾರಂ ಮಮ ಲೋಕಂ ಸ ಗಚ್ಛತಿ || ೨೨ ||

ವಾಸಸಾ ಚಾಪ್ಯಧೌತೇನ ಯೋ ಮೇ ಕರ್ಮಾಣಿ ಕಾರಯೇತ್ |
ಶುಚಿರ್ಭಾಗವತೋ ಭೂತ್ವಾ ಮಮ ಮಾರ್ಗಾನುಸಾರಕಃ || ೨೩ ||

ತಸ್ಯ ದೋಷಂ ಪ್ರವಕ್ಷ್ಯಾಮಿ ಅಪರಾಧಂ ವಸುಂಧರೇ |
ಪತಂತಿ ಯೇನ ಸಂಸಾರಂ ವಾಸಸೋಚ್ಛಿಷ್ಟಕಾರಿಣಃ || ೨೪ ||

---

೧೯. ಕಪ್ಪು ಬಟ್ಟೆಯನ್ನುಟ್ಟು ಪೂಜಿಸಿ, ಅಪರಾಧ ಮಾಡಿದವನಿಗೆ ಆಗುವ ಸಂಸಾರವನ್ನು ತಪ್ಪಿಸಿ, ಸಿದ್ಧಿಯನ್ನುಂಟುಮಾಡುವ ಪ್ರಾಯಶ್ಚಿತ್ತವನ್ನು ಹೇಳುತ್ತೇನೆ.

೨೦. ಅವನು ಏಳುದಿನ ಅಲಸಂದೆಯನ್ನು ತಿಂದು ಬಳಿಕ ಮೂರುರಾತ್ರಿ ಹುರಿಹಿಟ್ಟಿನ ಒಂದೊಂದು ಉಂಡೆಯನ್ನು ಒಂದೊಂದು ರಾತ್ರಿಯೂ ತಿಂದು ಇದ್ದರೆ ಪಾಪವನ್ನು ಕಳೆದುಕೊಳ್ಳುವನು

೨೧–೨೨. ದೇವಿ, ನನ್ನ ಮಾರ್ಗವನ್ನನುಸರಿಸುವ ಶುಚಿಯಾದ ಭಾಗವತನಾಗಿದ್ದು ಈ ವಿಧಿಯಿಂದ ಕರ್ಮಗಳನ್ನು ಮಾಡುವವನು ಸಂಸಾರಕ್ಕೆ ಹೋಗದೆ ನನ್ನ ಲೋಕವನ್ನು ಸೇರುವನು.

೨೩–೨೪. ಶುಚಿಯೂ ಭಾಗವತನೂ, ನನ್ನ ದಾರಿಯನ್ನನುಸರಿಸುವವನೂ ಆಗಿದ್ದರೂ ಮೈಲಿಗೆಯ ಬಟ್ಟೆಯಿಂದಲೇ ನನ್ನ ಪೂಜೆಯೇ ಮೊದಲಾದ ಕರ್ಮಗಳನ್ನು ಮಾಡುವವನಿಗೆ ಆ ತಪ್ಪಿನಿಂದಾಗುವ ದೋಷವನ್ನು ಎಂದರೆ ಮೈಲಿಗೆ ಬಟ್ಟೆಯಿಂದ ಕರ್ಮಮಾಡುವವರು ಸಂಸಾರದಲ್ಲಿ ಬೀಳುವುದನ್ನು ಹೇಳುತ್ತೇನೆ.

ದೇವಿ ಭೂತ್ವಾ ಗಜೋ ಮತ್ತಸ್ತಿಷ್ಠತ್ಯೇಕಂ ನರೋ ಭುವಿ ॥ ೨೫ ॥

ಉಷ್ಟ್ರಶ್ಚೈಕಂ ಭವೇಜ್ಜನ್ಮ ಜನ್ಮ ಚೈಕಂ ವೃಕಸ್ತಥಾ ।
ಗೋಮಾಯುರೇಕಂ ಜನ್ಮಾಪಿ ಜನ್ಮ ಚೈಕಂ ಹಯಸ್ತಥಾ ।
ಸಾರಂಗಸ್ತ್ವೇಕಜನ್ಮಾನ್ಯೈ ಮೃಗೋ ಭವತಿ ನೈತತಃ ॥ ೨೬ ॥

ಸಪ್ತ ಜನ್ಮಾಂತರಂ ಪಶ್ಚಾತ್ತತೋ ಭವತಿ ಮಾನುಷಃ । ॥ ೨೭ ॥

ಮದ್ಭಕ್ತಶ್ಚ ಗುಣಜ್ಞಶ್ಚ ಮಮ ಕರ್ಮಪರಾಯಣಃ ।
ದಕ್ಷೋ ನಿರಪರಾಧಶ್ಚ ಅಹಂಕಾರವಿವರ್ಜಿತಃ ॥ ೨೮ ॥

॥ ಧರಣ್ಯುವಾಚ ॥

ಶ್ರುತಮೇತನ್ಮಯಾ ದೇವ ಯತ್ತ್ವಯಾ ಸಮುದಾಹೃತಂ ।
ಸಂಸಾರಂ ವಾಸಸೋಚ್ಛಿಷ್ಟಾ ಯೇನ ಗಚ್ಛಂತಿ ಮಾನುಷಾಃ ॥ ೨೯ ॥

---

೨೫. ದೇವಿ, ಮೈಲಿಗೆ ಬಟ್ಟೆಯಲ್ಲಿ ಪೂಜೆಮಾಡುವ ಮನುಷ್ಯನು ಮುಂದಿನ ಒಂದು ಜನ್ಮದಲ್ಲಿ ಆನೆಯಾಗಿ ಹುಟ್ಟಿ ಮತ್ತನಾಗಿರುವನು.

೨೬. ಇದ್ದೊಂದು ಜನ್ಮದಲ್ಲಿ ಒಂಟೆಯಾಗಿಯೂ, ಮತ್ತೊಂದರಲ್ಲಿ ತೋಳನಾಗಿಯೂ, ಬೇರೊಂದರಲ್ಲಿ ನರಿಯಾಗಿಯೂ, ಆಮೇಲೆ ಕುದುರೆಯಾಗಿಯೂ, ಬಳಿಕ ಚಾತಕಪಕ್ಷಿಯಾಗಿಯೂ, ಆಮೇಲೆ ಜಿಂಕೆಯಾಗಿಯೂ ಹುಟ್ಟುವನು.

೨೭–೨೮. ಹೀಗೆ ಏಳು ಜನ್ಮಗಳು ಕಳೆದ ಬಳಿಕ ತಿರುಗಿ ನನ್ನ ಭಕ್ತನೂ, ಗುಣಜ್ಞನೂ, ನನ್ನ ಕರ್ಮಗಳಲ್ಲಿ ನಿರತನೂ, ದಕ್ಷನೂ, ನಿರಪರಾಧನೂ, ಅಹಂಕಾರವಿಲ್ಲದವನೂ ಆದ ಮನುಷ್ಯನಾಗಿ ಹುಟ್ಟುವನು.

೨೯. ಭೂದೇವಿ—ದೇವ, ಮೈಲಿಗೆಯ ಬಟ್ಟೆಯುಟ್ಟು ಪೂಜಿಸುವವರು ಹೇಗೆ ಜನ್ಮಸಂಸಾರವನ್ನು ಪಡೆಯುವರೆಂದು ನೀನು ಹೇಳಿದುದನ್ನು ಕೇಳಿದೆನು.

ಪ್ರಾಯಶ್ಚಿತ್ತಂ ಚ ಮೇ ಬ್ರೂಹಿ ಸರ್ವಕರ್ಮಸುಖಾವಹಂ |
ಕಿಲ್ಬಿಷಾದ್ಯೇನ ಮುಚ್ಯಂತೇ ತವ ಕರ್ಮಪರಾಯಣಾಃ ॥ ೩೦ ॥

॥ ಶ್ರೀವರಾಹ ಉವಾಚ ॥

ಶೃಣು ತತ್ವೇನ ಮೇ ದೇವಿ ಕಥ್ಯಮಾನಂ ಮಯಾನಘೇ ।
ಪ್ರಾಯಶ್ಚಿತ್ತಂ ಪ್ರವಕ್ಷ್ಯಾಮಿ ಮಮ ಕರ್ಮಪರಾಯಣಃ ॥ ೩೧ ॥

ಯಾವಕೇನ ತ್ರೀಣ್ಯಹಾನಿ ಪಿಣ್ಯಾಕೇನ ದಿನತ್ರಯಂ
ಪರ್ಣಭಕ್ಷಸ್ತ್ರೀಣ್ಯಹಾನಿ ಪಯೋಭಕ್ಷೋ ದಿನತ್ರಯಂ ।
ಪಾಯಸೇನ ತ್ರಿರಾತ್ರಂ ತು ವಾಯುಭಕ್ಷೋ ದಿನತ್ರಯಂ ॥ ೩೨ ॥

ಏವಂ ಕೃತ್ವಾ ಮಹಾಭಾಗೇ ವಾಸಸೋಚ್ಛಿಷ್ಟಕಾರಿಣಃ ।
ಅಪರಾಧಂ ನ ವಿಂದೇರನ್ಸಂಸಾರಂ ನ ಪ್ರಯಾಂತಿ ಚ ॥ ೩೩ ॥

---

೩೦. ನಿನ್ನ ಕರ್ಮಗಳಲ್ಲಿ ಆಸಕ್ತರಾದವರು, ಆ ಪಾಪದಿಂದ ವಿಮುಕ್ತರಾಗಲು ಅವಶ್ಯಕವೂ, ಸರ್ವಕರ್ಮಗಳಲ್ಲೂ ಸುಖವನ್ನುಂಟುಮಾಡುವುದೂ ಆದ ಪ್ರಾಯಶ್ಚಿತ್ತವನ್ನು ನನಗೆ ಹೇಳು.

೩೧-೩೩. ಶ್ರೀವರಾಹ—ನನ್ನ ದೇವಿ, ದೋಷರಹಿತೇ, ನಿಜವಾಗಿ ನಾನು ಹೇಳುವ ಪ್ರಾಯಶ್ಚಿತ್ತವನ್ನು ಕೇಳು. ಮಹಾಭಾಗ್ಯೇ, ನನ್ನ ಕರ್ಮದಲ್ಲಿ ನಿರತರಾದವರು ಅಲಸಂದೆಯನ್ನು ತಿಂದು ಮೂರುದಿನವೂ, ಹಿಂಡಿಯನ್ನು ತಿಂದು ಮೂರುದಿನವೂ, ಎಲೆಗಳನ್ನು ತಿಂದು ಮೂರುದಿನವೂ, ಹಾಲಿನಿಂದ ಮೂರುದಿನವೂ, ಪಾಯಸದಿಂದ ಮೂರುದಿನವೂ, ವಾಯುಸೇವನೆಯಿಂದಲೇ ಮೂರುದಿನವೂ ಇದ್ದರೆ ಮೈಲಿಗೆಯ ಬಟ್ಟೆಯಲ್ಲಿ ಪೂಜಿಸಿದ ಅಪರಾಧವನ್ನು ಪಡೆಯುವುದಿಲ್ಲ. ಮೊದಲು ಹೇಳಿದ ಜನ್ಮಾಂತರಗಳನ್ನೂ ಪಡೆಯುವುದಿಲ್ಲ.

ಶ್ವಾನೋಚ್ಛಿಷ್ಟಂ ತು ಯೋ ದದ್ಯಾನ್ಮಮ ಕರ್ಮಪರಾಯಣಃ ।
ಪಾಪಂ ತಸ್ಯ ಪ್ರವಕ್ಷ್ಯಾಮಿ ಸಂಸಾರೇ ಚ ಮಹದ್ಭಯಂ ॥ ೩೪ ॥

ಶ್ವಾನೋ ವೈ ಸಪ್ತ ಜನ್ಮಾನಿ ಗೋಮಾಯುಸ್ಸಪ್ತ ವೈ ತಥಾ ।
ಉಲೂಕಸ್ಸಪ್ತವರ್ಷಾಣಿ ಪಶ್ಚಾಜ್ಜಾಯೇತ ಮಾನುಷಃ ॥ ೩೫ ॥

ವಿಶುದ್ಧಾತ್ಮಾ ಶ್ರುತಿಜ್ಞಶ್ಚ ಮದ್ಭಕ್ತಶ್ಚೈವ ಜಾಯತೇ ।
ಗೃಹೇ ಭಾಗವತೋತ್ಕೃಷ್ಟೇ ಅಪರಾಧವಿವರ್ಜಿತಃ ॥ ೩೬ ॥

ಶೃಣು ತತ್ವೇನ ವಸುಧೇ ಪ್ರಾಯಶ್ಚಿತ್ತಂ ಮಹೌಜಸಂ ।
ತರಂತಿ ಮಾನುಷಾ ಯೇ ನ ತ್ಯಕ್ತ್ವಾ ಸಂಸಾರಸಾಗರಂ ॥ ೩೭ ॥

ಮೂಲಭಕ್ಷೋ ದಿನತ್ರಯ್ಯಾಂ ಫಲಾಹಾರೋ ದಿನತ್ರಯಂ ।
ಶಾಕಭಕ್ಷ್ಯೋ ದಿನತ್ರಯ್ಯಾಂ ಪಯೋಭಕ್ಷ್ಯೋ ದಿನತ್ರಯಂ ॥ ೩೮ ॥

---

೩೪. ನನ್ನ ಕರ್ಮಾಸಕ್ತನಾದವನು, ನಾಯಿತಿಂದು ಮಿಕ್ಕುದನ್ನು ಅಥವಾ ಎಂಜಲುಮಾಡಿದುದನ್ನು ನನಗೆ ಅರ್ಪಿಸಿದರೆ ಅವನಿಗಾಗುವ ಪಾಪವನ್ನೂ, ಸಂಸಾರದ ಭಯವನ್ನೂ ಹೇಳುತ್ತೇನೆ.

೩೫–೩೬. ಆ ಪಾಪಿಯು ಏಳುಜನ್ಮಗಳಲ್ಲಿ ನಾಯೂ, ಮತ್ತೇಳು ಜನ್ಮಗಳಲ್ಲಿ ನರಿಯೂ, ಬಳಿಕ ಏಳುವರ್ಷ ಗೂಬೆಯೂ ಆಗಿದ್ದು, ಆಮೇಲೆ ತಪ್ಪನ್ನು ಕಳೆದುಕೊಂಡು, ಭಾಗವತರ ಉತ್ಕೃಷ್ಟವಾದ ಮನೆಯಲ್ಲಿ ಮನುಷ್ಯನಾಗಿ ಜನಿಸಿ ಪರಿಶುದ್ಧಾತ್ಮನೂ, ದೇವಜ್ಞನೂ, ನನ್ನ ಭಕ್ತನೂ ಆಗುವನು.

೩೭. ಭೂದೇವಿ, ಅವನು ಯಾವುದರಿಂದ ಈಗ ಹೇಳಿದ ಸಂಸಾರಸಾಗರವನ್ನು ತಪ್ಪಿಸಿಕೊಳ್ಳಬಹುದೋ ಆ ಅತಿಬಲವುಳ್ಳ ಪ್ರಾಯಶ್ಚಿತ್ತವನ್ನು ನಿಜವಾಗಿ ಕೇಳು.

೩೮–೪೦. ಆ ಅಪರಾಧಿಯು ಪ್ರತಿದಿನವೂ ಸ್ನಾನಮಾಡಿ, ಮೂರುದಿನ ಗೆಣಸನ್ನೂ, ಮೂರುದಿನ ಹಣ್ಣುಕಾಯಿಗಳನ್ನೂ, ಮೂರುದಿನ ಕಾಯಿಪಲ್ಯ

ದಧ್ಯಾಹಾರೋ ದಿನತ್ರಯ್ಯಾಂ ಪಾಯಸೇನ ದಿನತ್ರಯಂ ।
ವಾಯ್ವಾಹಾರೋ ದಿನತ್ರಯ್ಯಾಂ ಸ್ನಾನಂ ಕೃತ್ವಾ ದೃಢವ್ರತಃ || ೩೯ ||

ಏವಂ ದಿನಾನ್ಯೇಕವಿಂಶತ್ಕೃತ್ವಾ ವೈ ಶುಭಲಕ್ಷಣಂ ।
ಅಪರಾಧಂ ನ ವಿಂದೇತ ಮಮ ಲೋಕಂ ಸ ಗಚ್ಛತಿ || ೪೦ ||

ಭುಕ್ತ್ವಾ ವರಾಹಮಾಂಸಂ ತು ಯಶ್ಚ ಮಾಮಿಹ ಸರ್ಪತಿ ।
ಪಾತನಂ ತಸ್ಯ ವಕ್ಷ್ಯಾಮಿ ಯಥಾ ಭವತಿ ಸುಂದರಿ || ೪೧ ||

ವರಾಹೋ ದಶವರ್ಷಾಣಿ ಕೃತ್ವಾನುಚರತೇ ವನೇ ।
ವ್ಯಾಧೋ ಭೂತ್ವಾ ಮಹಾಭಾಗೇ ಸಮಾಃ ಪಂಚ ಚ ಸಪ್ತ ಚ || ೪೨ ||

ತತಶ್ಚ ಮೂಷಕೋ ಭೂತ್ವಾ ವರ್ಷಾಣಿ ಚ ಚತುರ್ದಶ ।
ಊನವಿಂಶತಿವರ್ಷಾಣಿ ಯಾತುಧಾನಶ್ಚ ಜಾಯತೇ || ೪೩ ||

ಗಳನ್ನೂ ತಿಂದು, ಬಳಿಕ ಮೂರುದಿನ ಹಾಲನ್ನೂ, ಮೂರುದಿನ ಮೊಸರನ್ನೂ, ಮೂರುದಿನ ಪಾಯಸವನ್ನೂ ಕುಡಿದು, ಆಮೇಲೆ ಮೂರುದಿನ ವಾಯ್ವಾಹಾರನಾಗಿ (ಉಪವಾಸಮಾಡಿ) ಇದ್ದು, ಹೀಗೆ ಇಪ್ಪತ್ತೊಂದು ದಿನ ದೃಢವ್ರತನಾಗಿದ್ದರೆ ದೋಷವನ್ನು ಪಡೆಯುವುದಿಲ್ಲ. ಶುಭಲಕ್ಷಣವುಳ್ಳ ನನ್ನ ಲೋಕವನ್ನು ಸೇರುವನು.

೪೧. ಸುಂದರಿ, ಹಂದಿಯ ಮಾಂಸವನ್ನು ತಿಂದು, ನನ್ನನ್ನು ಪೂಜಿಸುವವನಿಗೆ ಅಥವಾ ಸೇವಿಸುವವನಿಗೆ ಆಗುವ ಅಧೋಗತಿಯನ್ನು ಹೇಳುತ್ತೇನೆ.

೪೨–೪೩. ಅವನು ಹಂದಿಯಾಗಿ ಹುಟ್ಟಿ, ಹತ್ತುವರ್ಷಗಳಕಾಲ ಕಾಡಿನಲ್ಲಿ ಅಲೆಯುವನು. ಬೇಡನಾಗಿ ಹನ್ನೆರಡುವರ್ಷಕಾಲವಿದ್ದು, ಬಳಿಕ ಇಲಿಯಾಗಿ ಹದಿನಾಲ್ಕು ವರ್ಷಗಳಿದ್ದು, ಆಮೇಲೆ ರಾಕ್ಷಸನಾಗಿ ಹತ್ತೊಂಬತ್ತು ವರ್ಷಗಳಿರುವನು.

ಸಲ್ಲಕೀ ಚಾಷ್ಟವರ್ಷಾಣಿ ಜಾಯತೇ ಭವನೇ ಬಹು ।
ವ್ಯಾಘ್ರಸ್ತ್ರಿಂಶಚ್ಚ ವರ್ಷಾಣಿ ಜಾಯತೇ ಪಿಶಿತಾಶನಃ ॥ ೪೪ ॥

ಏವಂ ಸಂಸಾರಿತಾಂ ಗತ್ವಾ ವರಾಹಾಮಿಷಭಕ್ಷಕಃ ।
ಜಾಯತೇ ವಿಪುಲೇ ಸಿದ್ಧೇ ಕುಲೇ ಭಾಗವತೇ ತಥಾ ॥ ೪೫ ॥

ಹೃಷೀಕೇಶವಚಃ ಶ್ರುತ್ವಾ ಸರ್ವಂ ಸಂಪೂರ್ಣಲಕ್ಷಣಂ ।
ಶಿರಸಾ ಚಾಂಜಲಿಂ ಕೃತ್ವಾ ವಾಕ್ಯಂ ಚೇದಮುವಾಚ ಹ ॥ ೪೬ ॥

ಏತನ್ಮೇ ಪರಮಂ ಗುಹ್ಯಂ ತವ ಭಕ್ತಸುಖಾವಹಂ ।
ವರಾಹಮಾಂಸಭಕ್ಷಸ್ತು ಯೇನ ಮುಚ್ಯೇತ ಕಿಲ್ಬಿಷಾತ್ ॥ ೪೭ ॥

ತರಂತಿ ಮಾನುಷಾ ಯೇನ ತಿರ್ಯಕ್ಸಂಸಾರಸಾಗರಾತ್ ॥ ೪೮ ॥

---

೪೪. ಅನಂತರ ಎಂಟುವರ್ಷ ಸಲ್ಲಕೀವೃಕ್ಷವಾಗಿ ಹಲವುಕಡೆ ಹುಟ್ಟುವನು. ಆಮೇಲೆ ಮಾಂಸಾಹಾರಿಯಾದ ಹುಲಿಯಾಗಿ ಮೂವತ್ತು ವರ್ಷಗಳಿರುವನು.

೪೫. ಹಂದಿಯ ಮಾಂಸವನ್ನು ತಿಂದ ಪೂಜಕನು ಹೀಗೆ ಜನ್ಮಗಳನ್ನೆತ್ತಿ, ಬಳಿಕ ಸಿದ್ಧರಾದ ಭಾಗವತರ ಸದ್ವಂಶದಲ್ಲಿ ದೊಡ್ಡ ಮನೆಯಲ್ಲಿ ಮನುಷ್ಯನಾಗಿ ಹುಟ್ಟುವನು.

೪೬. ಭೂದೇವಿಯು, ಶ್ರೀವರಾಹನ ಸಂಪೂರ್ಣಲಕ್ಷಣವುಳ್ಳ ಮಾತೆಲ್ಲವನ್ನೂ ಕೇಳಿ, ತಲೆಬಾಗಿ ಕೈಮುಗಿದು ಈ ಮಾತನಾಡಿದಳು.—

೪೭–೪೮. ಹಂದಿಯ ಮಾಂಸವನ್ನು ತಿಂದ ಪೂಜಕನು ಆ ಪಾಪವನ್ನು ಏತರಿಂದ ಕಳೆದುಕೊಂಡು ತಿರ್ಯಗ್ಜನ್ಮಸಂಸಾರಸಾಗರಕ್ಕೆ ಬೀಳದಿರುವನೋ, ನಿನ್ನ ಭಕ್ತರಿಗೆ ಸುಖವನ್ನುಂಟುಮಾಡುವ ಆ ಅತಿರಹಸ್ಯವಾದ ಪ್ರಾಯಶ್ಚಿತ್ತವನ್ನು ಹೇಳು.

ಗೋಮಯೇನ ದಿನಂ ಪಂಚ ಕಣಾಹಾರೇಣ ಸಪ್ತ ವೈ |
ಪಾನೀಯಂ ತು ತತೋ ಭುಕ್ತ್ವಾ ತಿಷ್ಠೇತ್ಸಪ್ತದಿನಂ ತತಃ || ೪೯ ||

ಅಕ್ಷಾರಲವಣಂ ಸಪ್ತ ಸಕ್ತುಭಿಶ್ಚ ತಥಾ ತ್ರಯಃ |
ತಿಲಭಕ್ಷ್ಯೋ ದಿನಾನ್ಸಪ್ತ ಪಾಷಾಣಸ್ಯ ಚ ಭಕ್ಷಕಃ || ೫೦ ||

ಪಯೋ ಭುಕ್ತ್ವಾದಿನಂ ಸಪ್ತ ಕಾರಯೇದ್ಬುದ್ಧಿಮಾನ್ನರಃ |
ಕ್ಷಾಂತಂ ದಾಂತಂ ತಥಾ ಕೃತ್ವಾ ಅಹಂಕಾರವಿವರ್ಜಿತಃ | || ೫೧ ||

ದಿನಾನ್ಯೇಕೋನಪಂಚಾಶಚ್ಚರೇತ್ಕೃತವಿನಿಶ್ಚಯಃ
ವಿಮುಕ್ತಸ್ಸರ್ವಪಾಪೇಭ್ಯಃ ಸಸಂಜ್ಞೋ ವಿಗತಜ್ವರಃ |
ಕೃತ್ವಾ ಮಮ ಚ ಕರ್ಮಾಣಿ ಮಮ ಲೋಕಂ ಸ ಗಚ್ಛತಿ || ೫೨ ||

ಜಾಲಪಾದಂ ಭಕ್ಷಯಿತ್ವಾ ಯಸ್ತು ಮಾಮುಪಸರ್ಪತಿ |
ಜಾಲಪಾದಸ್ತತೋ ಭೂತ್ವಾ ವರ್ಷಾಣಿ ದಶ ಪಂಚ ಚ || ೫೩ ||

೪೯-೫೨. ಆ ಅಪರಾಧಿಯು ಐದುದಿನ ಹಸುವಿನ ಸಗಣಿಯನ್ನು ತಿಂದೂ, ಬಳಿಕ ಏಳುದಿನ ನುಚ್ಚನ್ನು ತಿಂದೂ, ಆಮೇಲೆ ಏಳುದಿನ ನೀರನ್ನು ಮಾತ್ರವೇ ಕುಡಿದೂ, ಅನಂತರ ಏಳುದಿನ ಉಪ್ಪುಕಾರಗಳಿಲ್ಲದ ಆಹಾರವನ್ನು ತಿಂದೂ, ಮೂರುದಿನ ಹುರಿಹಿಟ್ಟನ್ನು ತಿಂದೂ, ಏಳು ದಿನಗಳು ಎಳ್ಳನ್ನು ತಿಂದೂ, (ಆರು ದಿನ) ಕಲ್ಲನ್ನು ತಿಂದೂ, ಕಡೆಯಲ್ಲಿ ಏಳುದಿನ ಹಾಲನ್ನು ಕುಡಿದೂ, ಬುದ್ಧಿವಂತನೂ, ಅಹಂಕಾರವಿಲ್ಲದವನೂ ಆಗಿ ಮನಸ್ಸನ್ನೂ, ಇಂದ್ರಿಯಗಳನ್ನೂ ನಿಗ್ರಹಿಸಿಕೊಂಡು ದೃಢಸಂಕಲ್ಪನಾಗಿ ಹೀಗೆ ನಲವತ್ತೊಂಬತ್ತು ದಿನಗಳು ನಿಯಮದಿಂದಿದ್ದರೆ ಸರ್ವ ಪಾಪತಾಪಗಳನ್ನೂ ಕಳೆದುಕೊಂಡು, ನನ್ನ ಕರ್ಮಗಳನ್ನು ಮಾಡಿ, ಬಳಿಕ ನನ್ನ ಲೋಕವನ್ನು ಸೇರುವನು.

೫೩-೫೪. (ಬಾತೇ ಮೊದಲಾದ) ಜಾಲಪಾದದ ಪ್ರಾಣಿಗಳ ಮಾಂಸವನ್ನು ತಿಂದು, ನನ್ನನ್ನು ಪೂಜಿಸುವವನು ಅಪರಾಧದಿಂದ ಮರಣಾನಂತರ ಹದಿನೈದುವರ್ಷಕಾಲ ಜಾಲಪಾದದ ಪ್ರಾಣಿಯಾಗಿಯೂ, ಹತ್ತುವರ್ಷ ಮೊಸಳೆ

ಕುಂಭೀರೋ ದಶವರ್ಷಾಣಿ ಪಂಚವರ್ಷಾಣಿ ಸೂಕರಃ ।
ತಾವದ್ಭ್ರಮತಿ ಸಂಸಾರೇ ಮಮ ಚೈವಾಪರಾಧತಃ || ೫೪ ||

ಕೃತ್ವಾ ತು ದುಷ್ಕರಂ ಕರ್ಮ ಜಾಯತೇ ವಿಪುಲೇ ಕುಲೇ ।
ಶುದ್ಧೋ ಭಾಗವತಶ್ರೇಷ್ಠೋ ಹ್ಯಪರಾಧವಿವರ್ಜಿತಃ ।
ಸರ್ವಕರ್ಮಾಣ್ಯತಿಕ್ರಮ್ಯ ಮಮ ಲೋಕಂ ಸ ಗಚ್ಛತಿ || ೫೫ ||

ಪ್ರಾಯಶ್ಚಿತ್ತಂ ಪ್ರವಕ್ಷ್ಯಾಮಿ ಜಾಲಪಾದಸ್ಯ ಭಕ್ಷಣೇ ।
ತರಂತಿ ಮನುಜಾ ಯೇನ ಘೋರಸಂಸಾರಸಾಗರಾತ್ || ೫೬ ||

ಯಾವಕಾನ್ನಂ ದಿನತ್ರಯ್ಯಾಂ ವಾಯುಭಕ್ಷೋ ದಿನತ್ರಯಂ ।
ಫಲಭಕ್ಷೋ ದಿನತ್ರಯ್ಯಾಂ ತಿಲಭಕ್ಷೋ ದಿನತ್ರಯಂ || ೫೭ ||

ಅಕ್ಷಾರಲವಣಾನ್ನಾಶೀ ಪುನಸ್ತತ್ರ ದಿನತ್ರಯಂ ।
ದಶಪಂಚ ದಿನಾನ್ಯೇವಂ ಪ್ರಾಯಶ್ಚಿತ್ತಂ ಸಮಾಚರೇತ್ || ೫೮ ||

(ಅಥವಾ ಹಾವು) ಆಗಿಯೂ, ಐದುವರ್ಷ ಹಂದಿಯಾಗಿಯೂ ಸಂಸಾರದಲ್ಲಿ ತೊಳಲುವನು.

೫೫. ಆ ಜನ್ಮಗಳಲ್ಲಿ ಕಷ್ಟಪಟ್ಟು, ಅಪರಾಧವನ್ನು ಕಳೆದುಕೊಂಡು, ದೊಡ್ಡದಾದ ವಂಶದಲ್ಲಿ ಶುದ್ಧನಾದ ಭಾಗವತೋತ್ತಮನಾಗಿ ಜನಿಸುವನು. ಬಳಿಕ ಸರ್ವಕರ್ಮಗಳನ್ನೂ ಅತಿಕ್ರಮಿಸಿ, ನನ್ನ ಲೋಕವನ್ನು ಸೇರುವನು.

೫೬. ಜಾಲಪಾದದ ಪ್ರಾಣಿಯ ಮಾಂಸವನ್ನು ತಿಂದ ಅಪರಾಧಿಗಳು, ಭಯಂಕರವಾದ ಸಂಸಾರಸಾಗರಕ್ಕೆ ಬೀಳದೆ ತಪ್ಪಿಸಿಕೊಳ್ಳುವುದಕ್ಕೆ ಬೇಕಾದ ಪ್ರಾಯಶ್ಚಿತ್ತವನ್ನು ಹೇಳುತ್ತೇನೆ.

೫೭-೫೮. ಮೂರುದಿನ ಅಲಸಂದೆಯ ಅನ್ನವನ್ನು ತಿಂದ ಬಳಿಕ ಮೂರು ದಿನ ವಾತಾಹಾರನಾಗಿ(ಉಪವಾಸಮಾಡಿ) ಆಮೇಲೆ ಮೂರುದಿನ ಫಲಾಹಾರ ಮಾಡಿ, ಇನ್ನು ಮೂರುದಿನ ಎಳ್ಳನ್ನು ತಿಂದು, ಮತ್ತೆ ಮೂರುದಿನ ಉಪ್ಪುಕಾರಗಳಿಲ್ಲದೆ ಅನ್ನವನ್ನು ತಿಂದು, ಹೀಗೆ ಹದಿನೈದುದಿನಗಳು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು.

ಜಾಲಪಾದಾಪರಾಧಸ್ಯ ಏವಂ ಕುರ್ವೀತ ಶೋಧನಂ ।
ವಿನೀತಾತ್ಮಾ ಶುಚಿರ್ಭೂತ್ವಾ ಯ ಇಚ್ಛೇತ್ಸುಶುಭಾಂ ಗತಿಂ ॥ ೫೯ ॥

ಇತಿ ಶ್ರೀವರಾಹಪುರಾಣೇ ಅಪರಾಧಪ್ರಾಯಶ್ಚಿತ್ತಂ ನಾಮ
ಪಂಚತ್ರಿಂಶದಧಿಕ ಶತತಮೋಽಧ್ಯಾಯಃ

---

೫೯ ಅತಿಶುಭವಾದ ಗತಿಯನ್ನು ಬಯಸುವವನು, ಜಾಲಪಾದವನ್ನು ತಿಂದು ನನ್ನನ್ನು ಪೂಜಿಸಿದ ಅಪರಾಧಪರಿಹಾರಕ್ಕೆ ವಿನೀತಾತ್ಮನೂ, ನಿರ್ಮಲನೂ ಆಗಿ, ಹೀಗೆ ದೇಹಶೋಧನ(ಪ್ರಾಯಶ್ಚಿತ್ತ)ವನ್ನು ಮಾಡಬೇಕು.

ಅಧ್ಯಾಯದ ಸಾರಾಂಶ :—

ಶ್ರೀವರಾಹನು, ಭೂದೇವಿಗೆ—ಭಕ್ತನಾದವನು ಕೆಂಪುಬಟ್ಟೆ, ಕಪ್ಪುಬಟ್ಟೆ, ಅಥವಾ ಮೈಲಿಗೆಯ ಬಟ್ಟೆಯನ್ನು ಉಟ್ಟು ದೇವರನ್ನು ಪೂಜಿಸುವುದು, ಕತ್ತಲೆಯಲ್ಲಿ ದೀಪವಿಲ್ಲದೆ ದೇವವಿಗ್ರಹವನ್ನು ಮುಟ್ಟುವುದು, ನಾಯಿ ಮುಟ್ಟಿದುದೇ ಮೊದಲಾದ ಅಶುಚಿ ಪದಾರ್ಥವನ್ನು ದೇವರಿಗೆ ಅರ್ಪಿಸುವುದು, ಇವೇ ಮೊದಲಾದ ಅಪರಾಧಗಳನ್ನು ಮಾಡುವವನಿಗೆ ಆಗುವ ಹೀನಗತಿಗಳನ್ನೂ, ಅವುಗಳನ್ನು ತಪ್ಪಿಸಿಕೊಳ್ಳಲು ಬೇಕಾದ ಪ್ರಾಯಶ್ಚಿತ್ತವನ್ನೂ ವಿವರವಾಗಿ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರಮೂವತ್ತೈದನೆಯ ಅಧ್ಯಾಯ.

|| ಶ್ರೀಃ ||

—x—

ಷಟ್ತ್ರಿಂಶದಧಿಕಶತತಮೋಧ್ಯಾಯಃ

ಅಥ ಪ್ರಾಯಶ್ಚಿತ್ತಕರ್ಮಸೂತ್ರಂ

|| ಶ್ರೀವರಾಹ ಉವಾಚ ||

ದೀಪಂ ಸ್ಪೃಷ್ಟ್ವಾ ತು ಯೋ ದೇವಿ ಮಮ ಕರ್ಮಾಣಿ ಕಾರಯೇತ್ ।
ತಸ್ಯಾಪರಾಧಾದ್ವೈ ಭೂಮೇ ಪಾಪಂ ಪ್ರಾಪ್ನೋತಿ ಮಾನವಃ ।
ತಚ್ಛೃಣುಷ್ವ ಮಹಾಭಾಗೇ ಕಥ್ಯಮಾನಂ ಮಯಾನಘೇ || ೧ ||

ಜಾಯತೇ ಷಷ್ಟಿವರ್ಷಾಣಿ ಕುಷ್ಠೀ ಗಾತ್ರಪರಿಪ್ಲುತಃ ।
ಚಾಂಡಾಲಸ್ಯ ಗೃಹೇ ತತ್ರ ಏವಮೇತನ್ನ ಸಂಶಯಃ || ೨ ||

ನೂರಮೂವತ್ತಾರನೆಯ ಅಧ್ಯಾಯ.

ಪ್ರಾಯಶ್ಚಿತ್ತಕರ್ಮಸೂತ್ರ.

೧. ಶ್ರೀವರಾಹ—ಮಹಾಭಾಗ್ಯೇ, ದೋಷರಹಿತೇ, ಭೂದೇವಿ, ದೀಪವನ್ನು ಮುಟ್ಟಿ, ಕೈತೊಳೆದುಕೊಳ್ಳದೆ ನನ್ನ ಪೂಜಾದಿಕರ್ಮಗಳನ್ನು ಮಾಡುವವನು ಆ ತಪ್ಪಿನಿಂದ ಎಂತಹ ಪಾಪವನ್ನು ಪಡೆಯುವನೆಂಬುದನ್ನು ನಾನು ಹೇಳುತ್ತೇನೆ. ಕೇಳು.

೨. ದೀಪವನ್ನು ಮುಟ್ಟಿ, ಪೂಜಾದಿಕರ್ಮಗಳನ್ನು ಮಾಡುವವನು ಹೊಲೆಯನ ಮನೆಯಲ್ಲಿ ಹುಟ್ಟಿ, ಅಲ್ಲಿ ಕುಷ್ಠರೋಗದಿಂದ ಕೊಳೆತು ಕದಲಾಡುತ್ತಿರುವ ಮಯ್ಯುಳ್ಳವನಾಗಿ ಅರವತ್ತು ವರ್ಷಕಾಲವಿರುವುದರಲ್ಲಿ ಸಂದೇಹವಿಲ್ಲ.

ಏವಂ ಭುಕ್ತ್ವಾ ತು ತತ್ಕರ್ಮ ಮಮ ಕ್ಷೇತ್ರೇ ಮೃತೋ ಯದಿ ।
ಮದ್ಭಕ್ತಶ್ಚೈವ ಜಾಯೇತ ಶುದ್ಧೇ ಭಾಗವತೇ ಗೃಹೇ ॥ ೩ ॥

ಪ್ರಾಯಶ್ಚಿತ್ತಂ ಪ್ರವಕ್ಷ್ಯಾಮಿ ದೀಪಸ್ಯ ಸ್ಪರ್ಶನಾದ್ಭುವಿ ।
ತರಂತಿ ಮನುಜಾ ಯೇನ ಕಷ್ಟಂ ಚಾಂಡಾಲಯೋನಿಷು ॥ ೪ ॥

ಯಸ್ಯ ಕಸ್ಯಾಪಿ ಮಾಸಸ್ಯ ದ್ವಾದಶ್ಯಾಂ ಶುಕ್ಲಪಕ್ಷಕೇ ।
ಚತುರ್ಥಭಕ್ತಮಾಹಾರಮಾಕಾಶಶಯನೇ ಸ್ವಪೇತ್ ॥ ೫ ॥

*ದೀಪಸ್ಪರ್ಶಾಪರಾಧಾದ್ವೈ ತರಂತಿ ಮನುಜಾ ಭುವಿ ।
ಶುಚಿರ್ಭೂತ್ವಾ ಯಥಾನ್ಯಾಯಂ ಮಮ ಕರ್ಮಪಥೇ ಸ್ಥಿತಃ ॥ ೬ ॥

---

೩. ಹಾಗೆ ಆ ಪಾಪಕರ್ಮವನ್ನು ಅನುಭವಿಸಿ, ಬಳಿಕ ನನ್ನ ಕ್ಷೇತ್ರದಲ್ಲಿ ಮೃತನಾದರೆ ಶುದ್ಧವಾದ ಭಾಗವತರ ಮನೆಯಲ್ಲಿ ನನ್ನ ಭಕ್ತನಾಗಿಯೇ ಜನಿಸುವನು.

೪. ಲೋಕದಲ್ಲಿ ಮನುಷ್ಯರು ದೀಪವನ್ನು ಮುಟ್ಟಿ ಕೈತೊಳದುಕೊಳ್ಳದೆ ದೇವಪೂಜೆಮಾಡಿದ ದೋಷದಿಂದ ಚಾಂಡಾಲಜನ್ಮದಲ್ಲಿ ಹುಟ್ಟಿ ಕಷ್ಟಪಡುವುದನ್ನು ಯಾವುದರಿಂದ ತಪ್ಪಿಸಿಕೊಳ್ಳಬಹುದೋ ಆ ಪ್ರಾಯಶ್ಚಿತ್ತವನ್ನು ಹೇಳುತ್ತೇನೆ.

೫. ಯಾವುದಾದರೊಂದು ತಿಂಗಳ ಶುಕ್ಲದ್ವಾದಶಿಯ ದಿನ ನಾಲ್ಕರಲ್ಲಿ ಒಂದುಭಾಗ ಆಹಾರವನ್ನು ತೆಗೆದುಕೊಂಡು, ಬಯಲಿನಲ್ಲಿ ಹಾಸಿಗೆಹೊದಿಕೆಗಳಿಲ್ಲದೆ ಮಲಗಬೇಕು.

೬. ಹಾಗೆ ಮಾಡುವುದರಿಂದ ದೀಪಸ್ಪರ್ಶಾಪರಾಧಿಗಳಾದವರು ಆ ಅಪರಾಧವನ್ನು ಕಳೆದುಕೊಳ್ಳುವರು. ಬಳಿಕ ಶುದ್ಧರಾಗಿ, ಕ್ರಮವಾಗಿ ನನ್ನ ಕರ್ಮಮಾರ್ಗದಲ್ಲಿರುವರು.

---

* ದೀಪಂ ದತ್ವಾ,

ಏತತ್ತೇ ಕಥಿತಂ ಭದ್ರೇ ಸ್ಪರ್ಶನೇ ದೀಪಕಸ್ಯ ತು ।
ಸಂಸಾರಶೋಧನಂ ಚೈವ ಯತ್ಕೃತ್ವಾ ಲಭತೇ ಶುಭಂ ॥ ೭ ॥

ಶ್ಮಶಾನಂ ಯೋ ನರೋ ಗತ್ವಾ ಅಸ್ನಾತ್ವೈವ ತು ಮಾಂ ಸ್ಪೃಶೇತ್ ।
ಮಮ ದೋಷಾಪರಾಧಸ್ಯ ಶೃಣು ತತ್ವೇನ ಯತ್ಫಲಂ ॥ ೮ ॥

ಜಂಬುಕೋ ಜಾಯತೇ ಭೂಮೌ ವರ್ಷಾಣಾಂ ನವ ಪಂಚ ।
ಗೃಧ್ರಸ್ತು ಸಪ್ತವರ್ಷಾಣಿ ಜಾಯತೇ ಖಚರೇಶ್ವರಃ ॥ ೯ ॥

ಚರಂತೌ ಮಾನುಷಂ ಮಾಂಸಮುಭೌ ತೌ ಗೃಧ್ರಜಂಬುಕೌ ।
ಪಿಶಾಚೋ ಜಾಯತೇ ತತ್ರ ವರ್ಷಾಣಿ ನವ ಪಂಚ ಚ ॥ ೧೦ ॥

ತತಸ್ತು ಕುಣಪೋಚ್ಛಿಷ್ಟಂ ತ್ರಿಂಶದ್ವರ್ಷಾಣಿ ಖಾದತಿ ॥ ೧೧ ॥

ತತೋ ನಾರಾಯಣಾಚ್ಛ್ರುತ್ವಾ ಧರಣೀ ವಾಕ್ಯಮಬ್ರವೀತ್ ॥ ೧೨ ॥

---

೭. ಭದ್ರೆ, ದೀಪವನ್ನು ಮುಟ್ಟುವುದರಿಂದ ಉಂಟಾಗುವ ಸಂಸಾರ (ಕಷ್ಟ)ವನ್ನು ಹೋಗಲಾಡಿಸುವುದೂ, ಶುಭವನ್ನುಂಟುಮಾಡುವುದೂ ಆದ ಇದನ್ನು ನಿನಗೆ ಹೇಳಿದ್ದೇನೆ.

೮. ಶ್ಮಶಾನಕ್ಕೆ ಹೋಗಿ, ಸ್ನಾನಮಾಡದೆ ನನ್ನನ್ನು ಮುಟ್ಟುವವನು, ನನಗೆ ಮಾಡಿದ ದೋಷದ ಅಪರಾಧದಿಂದ ಯಾವ ದುಷ್ಫಲವನ್ನು ಪಡೆಯುವನೋ ಕೇಳು.

೯-೧೧. ಅವನು ಭೂಮಿಯಮೇಲೆ ಹದಿನಾಲ್ಕುವರ್ಷ ನರಿಯಾಗಿರುವನು. ಏಳುವರ್ಷ ಪಕ್ಷಿರಾಜನಾದ ಹದ್ದಾಗುವನು. ನರಿಯಾಗಿರುವಾಗಲೂ ಹದ್ದಾಗಿರುವಾಗಲೂ ಮನುಷ್ಯಮಾಂಸವನ್ನು ತಿನ್ನುತ್ತಿದ್ದು, ಬಳಿಕ ಪಿಶಾಚವಾಗಿ ಹುಟ್ಟಿ ಹದಿನಾಲ್ಕುವರ್ಷಕಾಲವಿರುವನು. ಬಳಿಕ ಮೂವತ್ತುವರ್ಷಕಾಲ ಹೆಣದ ಎಂಜಲನ್ನು ತಿನ್ನುವನು.

೧೨. ಭೂದೇವಿಯು ನಾರಾಯಣನಿಂದ ಇದನ್ನು ಕೇಳಿ ಅವನೊಡನೆ ಮಾತನಾಡಿದಳು.

ಏತನ್ಮೇ ಪರಮಂ ಗುಹ್ಯಂ ಲೋಕನಾಥ ಜನಾರ್ದನ ।
ಪರಂ ಕೌತೂಹಲಂ ದೇವ ನಿಖಿಲಂ ವಕ್ತುಮರ್ಹಸಿ ॥ ೧೩ ॥

ಶ್ಮಶಾನಂ ಪುಂಡರೀಕಾಕ್ಷ ಈಶ್ವರೇಣ ಪ್ರಶಂಸಿತಂ ।
ಕಿಂ ತ್ವತ್ರ ತ್ರಿಗುಣಂ ದೇವ ಪವಿತ್ರೇ ಶಿವಭಾಷಿತೇ ॥ ೧೪ ॥

ಸ ತತ್ರ ರಮತೇ ನಿತ್ಯಂ ಭಗವಾಂಸ್ತು ಮಹಾಮತಿಃ ।
ಕಪಾಲಂ ಗೃಹ್ಯ ದೇವೋತ್ರ ದೀಪ್ತಿಮಂತಂ ಮಹೌಜಸಂ ॥ ೧೫ ॥

ಪ್ರಶಂಸಿತಂ ಚ ರುದ್ರೇಣ ಭವತಾ ಕಿಂ ವಿನಿಂದಿತಂ ।
ಶ್ಮಶಾನಂ ಪದ್ಮಪತ್ರಾಕ್ಷ ರುದ್ರಸ್ಯ ಚ ನಿಶಿ ಪ್ರಿಯಂ ॥ ೧೬ ॥

॥ ಶ್ರೀವರಾಹ ಉವಾಚ ॥

ಶೃಣು ತತ್ವೇನ ಮೇ ದೇವಿ ಇದಮಾಖ್ಯಾನಮುತ್ತಮಂ ।
ಅದ್ಯಾಪಿ ತೇ ನ ಜಾನಂತಿ ಹ್ಯನಘೇ ಶಂಸಿತವ್ರತೇ ।
ಕೃತ್ವಾ ಸುದುಷ್ಕರಂ ಕರ್ಮ ಸರ್ವಭೂತಪತಿಂ ಹರಂ ॥ ೧೭ ॥

---

೧೩. "ಲೋಕನಾಥ, ಜನಾರ್ದನ, ದೇವ, ನನಗೆ ಬಹು ಕುತೂಹಲವುಂಟಾಗಿದೆ. ನನಗೆ ಈ ಪರಮರಹಸ್ಯವಿಚಾರವೆಲ್ಲವನ್ನೂ ನೀನು ಹೇಳಬೇಕು.

೧೪–೧೫. ಪುಂಡರೀಕಾಕ್ಷ, ಶ್ಮಶಾನವು ಈಶ್ವರನು ಹೊಗಳಿರುವುದಾಗಿದೆ. ದೇವ, ಶಿವನು ಹೊಗಳಿರುವ ಪವಿತ್ರವಾದ ಶ್ಮಶಾನದಲ್ಲಿ ಮಹಾಬುದ್ಧಿವಂತನೂ, ಭಗವಂತನೂ, ಆದ ಆ ದೇವನು ಅಲ್ಲಿ ಹೊಳೆಯುವ ಅತಿದೃಢವಾದ ಕಪಾಲವನ್ನು, ಧರಿಸಿ ಯಾವಾಗಲೂ ಕ್ರೀಡಿಸುತ್ತಿರುವನು.

೧೬. ಕಮಲದಳನೇತ್ರ, ರುದ್ರನಿಗೆ ರಾತ್ರಿಯ ವೇಳೆಯಲ್ಲಿ ಪ್ರಿಯವಾದುದಾಗಿ ಅವನು ಹೊಗಳಿರುವ ಶ್ಮಶಾನವನ್ನು ನೀನೇಕೆ ತೆಗಳುತ್ತೀಯೆ ?

೧೭. ಶ್ರೀವರಾಹ—ನನ್ನ ದೇವಿ, ಸ್ತುತ್ಯವ್ರತೇ, ಪಾಪರಹಿತೇ, ಉತ್ತಮವಾದ ಈ ಚರಿತ್ರೆಯನ್ನು ಸರಿಯಾಗಿ ಕೇಳು. ಮಾಡಲು ಅತಿಕಷ್ಟವಾದ ಕರ್ಮಗಳನ್ನು ಮಾಡಿದವರೂ ಈಗಲೂ ಸರ್ವಭೂತಪತಿಯಾದ ಹರನನ್ನು ಸರಿಯಾಗಿ ಅರಿಯರು.

ಹತ್ವಾ ಚ ಬಾಲಾನ್ವೃದ್ಧಾಂಶ್ಚ ತ್ರಿಪುರೇ ರೂಪಿಣೀಃ ಸ್ತ್ರಿಯಃ ।
ತೇನ ಪಾಪೇನ ಸಂಬದ್ಧೋ ನ ಶಕ್ನೋತಿ ವಿಚೇಷ್ಟಿತುಂ ॥ ೧೮ ॥

ಪ್ರಣಷ್ಟಮಾನಸ್ಯೈಶ್ವರ್ಯೋ ನಷ್ಟಾ ಮಾಯಾ ಚ ಯೋಗಿನಃ ।
ವಿವರ್ಣವದನೋ ಭೂತ್ವಾ ತಿಷ್ಠತೇ ಸ ಮಹೇಶ್ವರಃ ॥ ೧೯ ॥

ತತ್ರ ಸ್ಥಾನೇ ಶಿವೋ ಭೂಮೇ ಗಣೈಸ್ಸರ್ವೈಸ್ಸಮಾವೃತಃ ॥ ೨೦ ॥

ನಷ್ಟಮಾಯಂ ತತೋ ದೇವಿ ಚಿಂತಯಾಮಿ ವಸುಂಧರೇ ।
ತತೋ ಧ್ಯಾತೋ ಮಯಾ ದೇವಿ ಶಂಕರಃ ಪುನರೇಷ್ಯತಿ ॥ ೨೧ ॥

ಯಾವತ್ಪಶ್ಯಾಮಿ ತಂ ದೇವಂ ದೇವಿ ದಿವ್ಯೇನ ಚಕ್ಷುಷಾ ॥ ೨೨ ॥

ನಷ್ಟಮಾಯಾಬಲಂ ರುದ್ರಂ ಸರ್ವಭೂತಮಹೇಶ್ವರಂ ।
ತತೋಽಹಂ ತತ್ರ ಗತ್ವಾ ತು ಯಷ್ಟುಕಾಮಂ ತ್ರಿಯಂಬಕಂ ॥ ೨೩ ॥

---

೧೮. ತ್ರಿಪುರದಲ್ಲಿ ರುದ್ರನು ಬಾಲರನ್ನೂ, ವೃದ್ಧರನ್ನೂ, ರೂಪವತಿಯರಾದ ವನಿತೆಯರನ್ನೂ ಕೊಂದು, ಆ ಪಾಪವನ್ನು ಚೆನ್ನಾಗಿ ಕಟ್ಟಿಕೊಂಡು ಕೆಲಸಮಾಡಲೂ, ಚಲಿಸಲೂ ಆರದೆ ಇದ್ದನು.

೧೯–೨೦. ಯೋಗಿಯಾದ ಅವನ ಮಾಯೆಯು ಹಾಳಾಯಿತು. ಮನಶ್ಶಕ್ತ್ಯೈಶ್ವರ್ಯಗಳನ್ನೂ ಕಳೆದುಕೊಂಡ ಆ ಮಹೇಶ್ವರನು ಬಣ್ಣಗೆಟ್ಟ ಮುಖವುಳ್ಳವನಾಗಿ ಸರ್ವಗಣಗಳೊಡಗೂಡಿ ಅಲ್ಲೇ ಇದ್ದನು.

೨೧. ದೇವಿ, ವಸುಂಧರೇ, ಬಳಿಕ ಶಿವನ ಮಾಯೆಯು ನಾಶವಾಯಿತೆಂಬುದನ್ನು ಅರಿತ ನಾನು, ಆ ಶಂಕರನೇ ನನ್ನ ಹತ್ತಿರ ಬರುವನೆಂದು ಅವನನ್ನು ಧ್ಯಾನಿಸಿದೆನು.

೨೨–೨೩. ಆದರೆ, ದೇವಿ, ನಾನು ದಿವ್ಯದೃಷ್ಟಿಯಿಂದ ಸರ್ವಭೂತಮಹೇಶ್ವರನೂ, ತ್ರಿನೇತ್ರನೂ ಆದ ಆ ರುದ್ರನು ಮಾಯಾಬಲವನ್ನು ಕಳೆದುಕೊಂಡಿರುವನೆಂಬುದನ್ನೂ, ಯಜ್ಞವನ್ನು ಮಾಡಲಿಷ್ಟವುಳ್ಳವನಾಗಿರುವನೆಂಬುದನ್ನೂ ನೋಡುತ್ತಲೂ ನಾನೇ ಅವನಿದ್ದಲ್ಲಿಗೆ ಹೋದೆನು.

ತತ ಈಶೋ ಮಯಾ ಚೋಕ್ತೋ ವಾಕ್ಯಮೇವಂ ಸುಖಾವಹಂ ।
ಕಿಮಿದಂ ಕ್ಲಿಶ್ಯಸೇ ರುದ್ರ ಕಶ್ಮಲೇನ ಸಮಾವೃತಃ ॥ ೨೪ ॥

ತ್ವಂ ಕರ್ತಾ ಚ ವಿಕರ್ತಾ ಚ ವಿಕಾರಾಕಾರ ಏವ ಚ ।
ತ್ವಂ ವೈಶಾಖ್ಯಂ ನಿಯೋಗಶ್ಚ ತ್ವಂ ಯೋನಿಸ್ತ್ವಂ ಪರಾಯಣಂ ।
ತ್ವಮುಗ್ರದೇವದೇವಾದಿಸ್ತ್ವಂ ಸಾಮ ತ್ವಂ ತಥಾ ದಿಶಃ ॥ ೨೫ ॥

ಕಿಂ ನ ಬುಧ್ಯತಿ ಚಾತ್ಮಾನಂ ಗಣೈಃ ಪರಿವೃತೋ ಭವಾನ್ ।
ಕಿಮಿದಂ ದೇವದೇವೇಶ ವಿವರ್ಣಃ ಪೃಥುಲೋಚನಃ ।
ತನ್ಮಮಾಚಕ್ಷ್ವ ತತ್ವೇನ ಯತ್ಪೃಷ್ಟೋಽಸಿ ಮಯಾ ಭವಾನ್ ॥ ೨೬ ॥

ಸ್ಮರ ಯೋಗಂ ಚ ಮಾಯಾಂ ಚ ಪಶ್ಯ ವಿಷ್ಣೋರ್ಮಹಾತ್ಮನಃ ।
ತವ ಚೈವ ಪ್ರಿಯಾರ್ಥಾಯ ಯೇನಾಹಮಿಹ ಚಾಗತಃ ॥ ೨೭ ॥

೨೪–೨೬. ಬಳಿಕ ನಾನು, ಈಶ್ವರನನ್ನು ನೋಡಿ ಹಿತಕರವಾದ ಮಾತಿನಿಂದ ಹೇಳಿದೆನು–"ರುದ್ರನೇ, ಇದೇಕೆ ಕಶ್ಮಲದಿಂದ ಕೂಡಿದವನಾಗಿದ್ದೀಯೆ? ನೀನು ಕರ್ತೃವೂ, ವಿಕರ್ತೃವೂ, ವಿಕೃತಾಕೃತಿಯೂ ಆಗಿದ್ದೀಯೆ. ನೀನು ವೈಶಾಖನೂ, ಉತ್ತಮವಾದ ಯೋಗವೂ, ಕಾರಣನೂ, ಪರಾಯಣನೂ, ಉಗ್ರನೂ, ದೇವದೇವನೂ, ಆದಿಯೂ, ಸಾಮವೂ, ದಿಕ್ಕುಗಳೂ, ಆಗಿದ್ದೀಯೆ. ಗಣಗಳಿಂದ ಪರಿವೃತನಾದ ನೀನು ನಿನ್ನನ್ನು ಯಾರೆಂದರಿಯೆಯಾ! ದೇವದೇವೇಶ, ಇದೇಕೆ ವಿವರ್ಣನೂ, ಕಂಗೆಟ್ಟವನೂ ಆಗಿದ್ದೀಯೆ? ನಾನು ಕೇಳಿದುದನ್ನು ನಿಜವಾಗಿ ಹೇಳು.

೨೭. ಯೋಗವನ್ನೂ, ಮಾಯೆಯನ್ನೂ ಸ್ಮರಿಸು. ನಿನ್ನ ಹಿತಾರ್ಥವಾಗಿಯೇ ಇಲ್ಲಿಗೆ ಬಂದಿರುವುದರಿಂದ ಮಹಾತ್ಮನೂ, ವಿಷ್ಣುವೂ ಆದ ನನ್ನನ್ನು ನೋಡು."

ತತೋ ಮಮ ವಚಃ ಶ್ರುತ್ವಾ ಲಬ್ಧಸಂಜ್ಞೋ ಮಹೇಶ್ವರಃ ।
ಉವಾಚ ಮಧುರಂ ವಾಕ್ಯಂ ಪಾಪಸಂತಪ್ತಲೋಚನಃ ॥ ೨೮ ॥

ಶೃಣು ತತ್ತ್ವೇನ ಮೇ ದೇವ ಕೋನ್ಯೋಪ್ಯೇವಂ ಕರಿಷ್ಯತಿ ।
ದೇವಂ ನಾರಾಯಣಂ ಚೈಕಂ ಸರ್ವಲೋಕಮಹೇಶ್ವರಂ ॥ ೨೯ ॥

ಹೇ ವಿಷ್ಣೋ ತ್ವತ್ಪ್ರಸಾದೇನ ದೇವ ತ್ವಂ ಚೈವ ಮಾಧವ ।
ಲಬ್ಧೋ ಯೋಗಶ್ಚ ಸಾಂಖ್ಯಂ ಚ ಜಾತೋಸ್ಮಿ ವಿಗತಜ್ವರಃ ॥ ೩೦ ॥

ತ್ವತ್ಪ್ರಸಾದೇನ ಜಾತೋಸ್ಮಿ ಪೂರ್ಣಾಂಬುರಿವ ಸಾಗರಃ ।
ಅಹಂ ತ್ವಾಂ ತು ವಿಜಾನಾಮಿ ಮಾಂ ತ್ವಂ ಜಾನಾಸಿ ಮಾಧವ ॥ ೩೧ ॥

ಆವಯೋರಂತರಂ ಕೋಪಿ ನ ಪಶ್ಯತಿ ಜನಾರ್ದನ ।
ಬ್ರಹ್ಮಾಣಂ ತು ವಿಜಾನಾತಿ ನಾವಯೋರಂತರೇಣ ಹಿ ॥ ೩೨ ॥

---

೨೮. ಬಳಿಕ ನನ್ನ ಮಾತನ್ನು ಕೇಳಿ, ಬುದ್ಧಿಪಡೆದ ಮಹೇಶ್ವರನು, ಪಾಪದಿಂದ ಸಂತಾಪಗೊಂಡ ಮನಸ್ಸುಳ್ಳವನಾಗಿ ನನ್ನೊಡನೆ ಇಂಪಾದ ಮಾತನ್ನು ನುಡಿದನು.—

೨೯. "ನನ್ನ ದೇವನೇ, ನಿಜವಾಗಿ ಹೇಳುತ್ತೇನೆ. ಕೇಳು. ಸರ್ವಲೋಕಗಳಿಗೂ ಮಹೇಶ್ವರನಾದ ನಾರಾಯಣದೇವನೊಬ್ಬನು ಹೊರತು ಬೇರಾವನು ಹೀಗೆ ಉಪಕಾರ ಮಾಡುವನು!

೩೦. ವಿಷ್ಣುವೇ, ಮಾಧವಾ, ನಿನ್ನ ಅನುಗ್ರಹದಿಂದ ನನಗೆ ದೇವತ್ವವೂ, ಸಾಂಖ್ಯವೂ, ಯೋಗವೂ ಲಭಿಸಿತು. ತಾಪವನ್ನು ಕಳೆದುಕೊಂಡೆನು.

೩೧. ಮಾಧವಾ, ನಿನ್ನ ಪ್ರಸಾದದಿಂದ ನೀರುತುಂಬಿದ ಸಾಗರದಂತಾಗಿದ್ದೇನೆ. ನಾನು ನಿನ್ನನ್ನು ಚೆನ್ನಾಗಿ ಬಲ್ಲೆನು. ನನ್ನನ್ನು ನೀನು ಬಲ್ಲೆ.

೩೨–೩೪. ಜನಾರ್ದನಾ, ನಮ್ಮಿಬ್ಬರಿಗೂ ಇರುವ ಅಂತರವನ್ನು ಬ್ರಹ್ಮನೊಬ್ಬನು ಬಲ್ಲನು. ಅವನನ್ನು ಹೊರತು ಮತ್ತಾವನೂ ಅರಿಯನು.

ಸಾಧು ವಿಷ್ಣೋ ಮಹಾಭಾಗ ಸರ್ವಮಾಯಾಕರಂಡಕ ।
ಏವಂ ಮಹ್ಯಂ ಹರೋ ವಾಕ್ಯಮುಕ್ತ್ವಾ ಭೂತಮಹೇಶ್ವರಃ ॥ ೩೩ ॥

ಮುಹೂರ್ತಂ ಧ್ಯಾನಮಾಸ್ಥಾಯ ಪುನಃ ಪ್ರೋವಾಚ ಮಾಧವಿ ॥ ೩೪ ॥

ತವ ವಿಷ್ಣೋಃ ಪ್ರಸಾದೇನ ಮಯಾ ತತ್ತ್ರಿಪುರಂ ಹತಂ ।
ನಿಹತಾ ದಾನವಾಸ್ತತ್ರ ಗರ್ಭಿಣ್ಯಶ್ಚ ನಿಪಾತಿತಾಃ ।
ಬಾಲವೃದ್ಧಾ ಹತಾಸ್ತತ್ರ ವಿಸ್ಫುರಂತೋ ದಿಶೋ ದಶ ॥ ೩೫ ॥

ತಸ್ಯ ಪಾಪಸ್ಯ ದೋಷೇಣ ನ ಶಕ್ನೋಮಿ ವಿಚೇಷ್ಟಿತುಂ ।
ಪ್ರಣಷ್ಟಯೋಗಮಾಯಶ್ಚ ನಷ್ಟೈಶ್ವರ್ಯಶ್ಚ ಮಾಧವ ॥ ೩೬ ॥

ಕಿಂ ಕರ್ತವ್ಯಂ ಮಯಾ ವಿಷ್ಣೋ ಪಾಪಾವಸ್ಥೇನ ಸಂಪ್ರತಿ ॥ ೩೭ ॥

ವಿಷ್ಣೋ ತತ್ತ್ವೇನ ಮೇ ಬ್ರೂಹಿ ಶೋಧನಂ ಪಾಪನಾಶನಂ ।
ಯೇನ ವೈ ಕೃತಮಾತ್ರೇಣ ಶುದ್ಧೋ ಮುಚ್ಯೇತ ಕಿಲ್ಬಿಷಾತ್ ॥ ೩೮ ॥

ಸೊಗಸಾಯಿತು. ವಿಷ್ಣುವೇ, ಮಹಾಭಾಗ್ಯನೇ, ಸರ್ವಮಾಯಾಕರಂಡಕಾ, ಭಾಪು ! " ಎಂದು ಹೀಗೆ ಭೂತಮಹೇಶ್ವರನಾದ ಹರನು ನನಗೆ ಹೇಳಿ, ಸ್ವಲ್ಪ ಹೊತ್ತು ಯೋಚಿಸಿ, (ಧ್ಯಾನಾಸಕ್ತನಾಗಿ) ಮತ್ತೆ ನನ್ನೊಡನೆ ಮಾತನಾಡಿದನು.

೩೫. " ಮಾಧವಾ, ವಿಷ್ಣುವಾದ ನಿನ್ನ ಅನುಗ್ರಹದಿಂದ ನಾನು ಆ ತ್ರಿಪುರವನ್ನು ಹಾಳುಮಾಡಿದೆನು. ಅಲ್ಲಿ ರಾಕ್ಷಸರನ್ನು ಕೊಂದೆನು. ಗರ್ಭಿಣಿಯರನ್ನೂ ಕೊಂದುಹಾಕಿದೆನು. ದಿಕ್ಕುದಿಕ್ಕಿಗೆ ಓಡುತ್ತಿದ್ದ ಮಕ್ಕಳನ್ನೂ, ಮುದುಕರನ್ನೂ ಕೊಂದೆನು.

೩೬. ಮಾಧವಾ, ಪಾಪದೋಷದಿಂದ ಯೋಗಮಾಯೆಗಳನ್ನೂ, ಐಶ್ವರ್ಯವನ್ನೂ ಪೂರ್ತಿಯಾಗಿ ಕಳೆದುಕೊಂಡವನಾಗಿ ಚಲಿಸಲು ಶಕ್ತಿಯಿಲ್ಲದೆ ಇದ್ದೇನೆ.

೩೭-೩೮. ವಿಷ್ಣುವೇ, ಪಾಪದಲ್ಲಿರುವ ನಾನು ಈಗ ಏನು ಮಾಡಲಿ ? ! ವಿಷ್ಣೋ, ಪಾಪವನ್ನು ಹೋಗಲಾಡಿಸುವ ಪ್ರಾಯಶ್ಚಿತ್ತವನ್ನು ಸರಿಯಾಗಿ ಹೇಳು. ಯಾವ ಪ್ರಾಯಶ್ಚಿತ್ತವನ್ನು ಮಾಡಿದಮಾತ್ರದಲ್ಲಿಯೇ ಪಾಪವನ್ನು ಕಳೆದುಕೊಂಡು ಶುದ್ಧನಾಗುವೆನು ? " (ಎಂದನು)

ಏವಂ ಚಿಂತಾತ್ಮನಸ್ತಸ್ಯ ಮಯಾ ರುದ್ರಸ್ಯ ಭಾಷಿತಂ |
ಕಪಾಲಮಾಲಾಂ ಸಂಗೃಹ್ಯ ಸಮಲಂ ಗಚ್ಛ ಶಂಕರ || ೩೯ ||

ಮಮೈವಂ ವಚನಂ ಶ್ರುತ್ವಾ ಭಗವಾನ್ಪರಮೇಶ್ವರಃ |
ಉವಾಚ ಮಾಂ ಪುನರ್ವ್ಯಕ್ತಂ ಮಾಂ ಬೋಧಯ ಜಗತ್ಪತೇ |
ಕೀದೃಶಸ್ಸಮಲೋ ವಿಷ್ಣೋ ಯತ್ರ ಗಚ್ಛಾಮಹೇ ವಯಂ || ೪೦ ||

ತತಸ್ತಸ್ಯ ವಚಃ ಶ್ರುತ್ವಾ ಶಂಕರಸ್ಯ ಮಹೇಶ್ವರಿ |
ತತ್ಪಾಪಶೋಧನಾರ್ಥಾಯ ಮಯಾ ವಾಕ್ಯಂ ಪ್ರಭಾಷಿತಂ || ೪೧ ||

ಶ್ಮಶಾನಂ ಸಮಲಂ ರುದ್ರ ಪೂತಿಕೋ ವ್ರಣಗಂಧಿಕಃ |
ಸ್ವಯಂ ತಿಷ್ಠಂತಿ ವೈ ತತ್ರ ಮನುಜಾ ವಿಗತಸ್ಪೃಹಾಃ || ೪೨ ||

ತತ್ರ ಗೃಹ್ಯ ಕಪಾಲಾನಿ ರಮ ತತ್ರೈವ ಶಂಕರ |
ತತ್ರ ವರ್ಷಸಹಸ್ರಾಣಿ ದಿವ್ಯಾನ್ಯೇವ ದೃಢವ್ರತಃ || ೪೩ ||

---

೩೯. ಹೀಗೆ ಚಿಂತೆಯಿಂದ ಕೂಡಿದ ಆ ರುದ್ರನಿಗೆ ನಾನು, "ಶಂಕರನೇ, ಕಪಾಲ ಮಾಲೆಯನ್ನು ಧರಿಸಿ, ಕಶ್ಮಲಪ್ರದೇಶಕ್ಕೆ ಹೋಗು" ಎಂದು ಹೇಳಿದೆನು.

೪೦. ನನ್ನ ಈ ಬಗೆಯ ಮಾತನ್ನು ಕೇಳಿ, ಭಗವಂತನಾದ ಪರಮೇಶ್ವರನು, ನನ್ನನ್ನು ನೋಡಿ, ಮತ್ತೆ, "ಜಗತ್ಪತೀ, ನನಗೆ ವ್ಯಕ್ತವಾಗಿ ತಿಳಿಸು. ವಿಷ್ಣುವೇ, ಕಶ್ಮಲಪ್ರದೇಶವೆಂದರಾವುದು ? ನಾವು ಎಲ್ಲಿಗೆ ಹೋಗಬೇಕು ?" ಎಂದನು.

೪೧. ಮಹೇಶ್ವರೀ, ಆ ಶಂಕರನ ಮಾತನ್ನು ಕೇಳಿ, ಅವನ ಪಾಪವನ್ನು ಹೋಗಲಾಡಿಸುವುದಕ್ಕಾಗಿ ನಾನು ಹೀಗೆ ಹೇಳಿದೆನು.—

೪೨. "ರುದ್ರನೇ, ವ್ರಣಗಳ ಕೆಟ್ಟನಾತವುಳ್ಳ ಶ್ಮಶಾನವೇ ಕಶ್ಮಲದಿಂದ ಕೂಡಿದುದು. ಆಸೆಯನ್ನು ಬಿಟ್ಟ ಮನುಷ್ಯರು ತಾವು ಅಲ್ಲಿರುವರು.

೪೩. ಶಂಕರನೇ, ಅಲ್ಲಿ ತಲೆಯ ಚಿಪ್ಪ(ಕಪಾಲ)ಗಳನ್ನು ತೆಗೆದುಕೊಂಡು ದಿವ್ಯಸಹಸ್ರವರ್ಷಗಳು ದೃಢವ್ರತನಾಗಿ ಅಲ್ಲಿಯೇ ಆಡುತ್ತಿರು.

ತತೋ ಭಕ್ಷಯ ಮಾಂಸಾನಿ ಪಾಪಕ್ಷಯಚಿಕೀರ್ಷಕಃ ।
ಹತಾನಾಂ ಚೈವ ಮಾಂಸಾನಿ ಯೇ ಚ ಭೋಜ್ಯಾಸ್ತವ ಪ್ರಿಯಾಃ ॥ ೪೪ ॥

ಏವಂ ಸರ್ವೈರ್ಗಣೈಸ್ಸಾರ್ಧಂ ವಸ ತತ್ರ ಸುನಿಶ್ಚಿತಃ ॥ ೪೫ ॥

ಪೂರ್ಣೇ ವರ್ಷಸಹಸ್ರೇ ತು ಸ್ಥಿತ್ವಾ ತ್ವಂ ಸಮಲೇ ಪುನಃ ।
ಗಚ್ಛಾಶ್ರಮಪದಂ ಪಶ್ಚಾದ್ಗೌತಮಸ್ಯ ಮಹಾಮುನೇಃ ॥ ೪೬ ॥

ತತ್ರ ಜ್ಞಾಸ್ಯಸಿ ಚಾತ್ಮಾನಂ ಗೌತಮಾಶ್ರಮಸಂಸ್ಥಿತಃ ।
ಪ್ರಸಾದಾದ್ಗೌತಮಮುನೇಃ ಭವತೋ ಗತಕಿಲ್ಬಿಷಃ ॥ ೪೭ ॥

ಸತತಂ ಪಾಪಸಂಪನ್ನಂ ಕಪಾಲಂ ಶಿರಸಿ ಸ್ಥಿತಂ ।
ಋಷಿಃ ಪಾತಯಿತುಂ ಶಕ್ತಸ್ತ್ವತ್ಪ್ರಸಾದಾನ್ನ ಸಂಶಯಃ ॥ ೪೮ ॥

೪೪-೪೫. ಪಾಪನಾಶವನ್ನು ಮಾಡಿಕೊಳ್ಳುವುದಕ್ಕಾಗಿ, ಅಲ್ಲಿ ಕೊಲ್ಲುವ ಪ್ರಾಣಿಗಳ ಮಾಂಸಗಳಲ್ಲಿ, ತಿನ್ನಬಹುದಾಗಿದ್ದು, ನಿನಗೆ ಇಷ್ಟವಾದುವುಗಳನ್ನು ತಿನ್ನುತ್ತ ಹೀಗೆ ಸರ್ವಗಣಗಳೊಡನೆ ಅಲ್ಲಿ ಸ್ಥಿರಸಂಕಲ್ಪನಾಗಿ ವಾಸಿಸುತ್ತಿರು.

೪೬. ನೀನು ಕಶ್ಮಲಯುಕ್ತವಾದ ಶ್ಮಶಾನದಲ್ಲಿದ್ದು, ಸಾವಿರವರ್ಷಗಳು ಪೂರ್ತಿಯಾಗಿ ಕಳೆದ ಬಳಿಕ ಗೌತಮಮಹಾಮುನಿಯ ಆಶ್ರಮಕ್ಕೆ ಹೋಗು.

೪೭. ಗೌತಮರ ಆಶ್ರಮದಲ್ಲಿರುವ ನೀನು ಅಲ್ಲಿ ಪೂಜ್ಯನಾದ ಆ ಗೌತಮ ಋಷಿಯ ಅನುಗ್ರಹದಿಂದ ಪಾಪವನ್ನು ಕಳೆದುಕೊಂಡವನಾಗಿ, ಆತ್ಮಸ್ವರೂಪವನ್ನು ತಿಳಿಯುವೆ.

೪೮. ಪಾಪದಿಂದ ತುಂಬಿ, ಯಾವಾಗಲೂ ನಿನ್ನ ತಲೆಯಮೇಲಿರುವ ಕಪಾಲವನ್ನು ಆ ಮುನಿಯು ಅನುಗ್ರಹದಿಂದ ಕೆಳಗೆ ಬೀಳಿಸಲು ಶಕ್ತನಾಗುವುದರಲ್ಲಿ ಸಂದೇಹವಿಲ್ಲ" (ಎಂದು ಹೇಳಿದೆನು).

ಏವಂ ರುದ್ರಂ ವರಂ ದತ್ವಾ ತತ್ರೈವಾಂತರ್ಹಿತೋಽಭವಂ ।
ರುದ್ರೋಽಪಿ ಭ್ರಮತೇ ತತ್ರ ಶ್ಮಶಾನೇ ಪಾಪಸಂವೃತೇ ॥ ೪೯ ॥

ಅತೋ ನ ರೋಚತೇ ಭೂಮೇ ಶ್ಮಶಾನಂ ಮೇ ಕದಾಚನ ।
ತತ್ರ ರುದ್ರಕೃತಂ ಪಾಪಂ ಸ್ಥಿತಂ ಕಿಲ ಭಯಾವಹಂ ॥ ೫೦ ॥

ಏತತ್ತೇ ಕಥಿತಂ ಭದ್ರೇ ಶ್ಮಶಾನಂ ಮೇ ಜುಗುಪ್ಸಿತಂ ।
ವಿನಾ ತು ಕೃತಸಂಸ್ಕಾರೋ ಮಮ ಕರ್ಮಪರಾಯಣಃ ॥ ೫೧ ॥

ಪ್ರಾಯಶ್ಚಿತ್ತಂ ಪ್ರವಕ್ಷ್ಯಾಮಿ ಯೇನ ಶುದ್ಧ್ಯತಿ ಕಿಲ್ಬಿಷಾತ್ ।
ಕೃತ್ವಾ ಚತುರ್ಥಭಕ್ತಂ ತು ದಿನಾನಿ ದಶ ಪಂಚ ಚ ॥ ೫೨ ॥

---

೪೯. ಹೀಗೆ ರುದ್ರನಿಗೆ ವರವನ್ನು ಕೊಟ್ಟು, ನಾನು ಅಲ್ಲೇ ಕಣ್ಮರೆಯಾದೆನು ರುದ್ರನು ಪಾಪಮಯವಾದ ಶ್ಮಶಾನದಲ್ಲಿ ಅಲೆಯುತ್ತಿದ್ದಾನೆ.

೫೦. ಭೂದೇವಿ, ಶ್ಮಶಾನದಲ್ಲಿ ರುದ್ರನು ಮಾಡಿದ ಭಯಂಕರವಾದ ಪಾಪವಿದೆಯಲ್ಲವೆ ! ಆದುದರಿಂದ ಶ್ಮಶಾನವೆಂದರೆ ಯಾವಾಗಲೂ ನನಗಾಗದು.

೫೧. ಭದ್ರೇ, ಶ್ಮಶಾನವು ನನಗೆ ಏಕೆ ಜುಗುಪ್ಸೆಯನ್ನುಂಟುಮಾಡುವುದೆಂಬುದನ್ನೂ, ನನ್ನ ಕರ್ಮಾಸಕ್ತನು ಅಲ್ಲಿಗೆ ಹೋಗಿ ಬಂದರೆ ಸ್ನಾನಾದಿಗಳಿಂದ ಶುದ್ಧನಾಗದೆ ನನ್ನ ಕರ್ಮವನ್ನು ಮಾಡಲು ಅನರ್ಹನೆಂಬುದನ್ನೂ ನಿನಗೆ ಹೇಳಿದ್ದೇನೆ.

೫೨–೫೩. ಶ್ಮಶಾನಕ್ಕೆ ಹೋಗಿ ಬಂದು, ಶುದ್ಧನಾಗದೆ ನನ್ನ ಪೂಜೆಯನ್ನು ಮಾಡಿ, ದೋಷಿಯಾದವನು ಆ ದೋಷವನ್ನು ಕಳೆದುಕೊಂಡು ಶುದ್ಧನಾಗಲು ಬೇಕಾದ ಪ್ರಾಯಶ್ಚಿತ್ತವನ್ನು ಹೇಳುತ್ತೇನೆ. ಹದಿನೈದು ದಿನಗಳು ನಾಲ್ಕರಲ್ಲೊಂದುಭಾಗ ಆಹಾರವನ್ನು ಮಾತ್ರವೇ ತೆಗೆದುಕೊಳ್ಳುತ್ತಾ, ಒಂದು

ಆಕಾಶಶಯನಂ ಕುರ್ಯಾದೇಕವಸ್ತ್ರಃ ಕುಶಾಸನೇ
ಪ್ರಭಾತೇ ಪಂಚಗವ್ಯಂ ಚ ಪಾತವ್ಯಂ ಕರ್ಮಶೋಧನಂ ।
ವಿಮುಕ್ತಸ್ಸರ್ವಪಾಪೇಭ್ಯೋ ಮಮ ಲೋಕಂ ಸ ಗಚ್ಛತಿ ॥ ೫೩ ॥

ಪಿಣ್ಯಾಕಂ ಭಕ್ಷಯಿತ್ವಾ ತು ಯೋ ದೇವಮುಪಸರ್ಪತಿ ।
ತಸ್ಯ ವೈ ಶೃಣು ಸುಶ್ರೋಣಿ *ಪ್ರಾಯಶ್ಚಿತ್ತಂ ಸುಶೋಧನಂ ॥ ೫೪ ॥

ಉಲೂಕೋ ದಶವರ್ಷಾಣಿ ಕಚ್ಛಪಸ್ತು ಸಮಾಸ್ತ್ರಯಃ ।
ಜಾಯತೇ ಮಾಸವಸ್ತತ್ರ ಮಮ ಕರ್ಮಪರಾಯಣಃ ॥ ೫೫ ॥

ಯಾಂಸ್ತು ದೋಷಾನ್ಪ್ರಪಶ್ಯಂತೇ ಸಂಸಾರೇಸ್ಮಿನ್ವಸುಂಧರೇ ॥ ೫೬ ॥

ತಸ್ಯ ವಕ್ಷ್ಯಾಮಿ ಸುಶ್ರೋಣಿ ಪ್ರಾಯಶ್ಚಿತ್ತಂ ಮಹೌಜಸಂ ।
ಕಿಲ್ಬಿಷಾದ್ಯೇನ ಮುಚ್ಯೇತ ಸಂಸಾರಾಂತಂ ಚ ಗಚ್ಛತಿ ॥ ೫೭ ॥

ಬಟ್ಟೆಯನ್ನು ಧರಿಸಿ, ದರ್ಭೆಯ ಹಾಸಿಗೆಯಲ್ಲಿ, ಹೊದಿಕೆಯಿಲ್ಲದೆ ಬಯಲಲ್ಲಿ ಮಲಗಬೇಕು. ಮೂರನೆಯ ಬೆಳಗ್ಗೆ ಪಾಪಕರ್ಮವನ್ನು ಹೋಗಲಾಡಿಸುವ ಪಂಚಗವ್ಯವನ್ನು ಕುಡಿಯಬೇಕು. ಹೀಗೆ ಮಾಡುವುದರಿಂದ ಪಾಪವೆಲ್ಲವನ್ನೂ ಕಳೆದುಕೊಂಡು, ನನ್ನ ಲೋಕವನ್ನು ಸೇರುವನು.

೫೪. ಸುಂದರಿ, ಹಿಂಡಿಯನ್ನು ತಿಂದು, ದೇವರನ್ನು ಸಮೀಪಿಸುವವನಿಗೆ ಆ ಅಪರಾಧಕ್ಕೆ ಆಗುವ ದುಷ್ಫಲವನ್ನು ಹೇಳುತ್ತೇನೆ. ಕೇಳು.

೫೫. ಹಿಂಡಿಯ ಪಾಪವನ್ನು ಮಾಡಿದ ನನ್ನ ಕರ್ಮಾಸಕ್ತನು ಹತ್ತು ವರ್ಷ ಕಾಲ ಗೂಬೆಯೂ, ಮೂರು ವರ್ಷ ಕಾಲ ಆಮೆಯೂ ಆಗಿ ಜೀವಿಸುವನು.

೫೬–೫೭. ವಸುಂಧರೇ, ಈ ಜನ್ಮಸಂಸಾರದ ದೋಷಗಳನ್ನರಿತು, ಅದರಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಆ ಪಾಪದಿಂದ ಮುಕ್ತರಾಗಲು ಅವಶ್ಯವಾದ ಅತಿಬಲವುಳ್ಳ ಪ್ರಾಯಶ್ಚಿತ್ತವನ್ನು ಹೇಳುತ್ತೇನೆ.

---

* ಅಪರಾಧಸ್ಯ ಯತ್ಫಲಂ ಎಂದಿರಬೇಕು.

ಯಾವಕೇನ ದಿನ್ಯೈಕಂ ತು ಗೋಮೂತ್ರೇಣ ಚ ಕಾರಯೇತ್ ।
ರಾತ್ರೌ ವೀರಾಸನಂ ಕುರ್ಯಾದಾಕಾಶಶಯನೇ ವಸೇತ್ ॥ ೫೮ ॥

ನ ಸ ಗಚ್ಛತಿ ಸಂಸಾರಂ ಮಮ ಲೋಕಂ ಸ ಗಚ್ಛತಿ ॥ ೫೯ ॥

ವರಾಹಮಾಂಸೇನ ತು ಯೋ ಮಮ ಕುರ್ವೀತ ಪ್ರಾಪಣಂ
ಮೂರ್ಖಸ್ಸ ಪಾಪಕರ್ಮಾ ಚ ಮಮ ಕರ್ಮಪರಾಯಣಃ ।
ಯಾಂಸ್ತು ದೋಷಾನ್ಪ್ರಪದ್ಯೇತ ಸಂಸಾರಂ ಚ ವಸುಂಧರೇ ॥ ೬೦ ॥

ಯಾವದ್ರೋಮ ವರಾಹಸ್ಯ ಮಮ ಗಾತ್ರೇಷು ಸಂಸ್ಥಿತಂ ।
ತಾವದ್ವರ್ಷಸಹಸ್ರಾಣಿ ನರಕೇ ಪಚ್ಯತೇ ಭುವಿ ॥ ೬೧ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ॥ ೬೨ ॥

೫೮-೫೯. ಹಿಂಡಿಯನ್ನು ತಿಂದವನು, ಅಲಸಂದೆ ಮತ್ತು ಹಸುವಿನ ಗಂಜಲದ ಆಹಾರದಿಂದ ಒಂದುದಿನವಿದ್ದು, ಆ ದಿನ ರಾತ್ರಿಯೆಲ್ಲಾ ಬಯಲಿನಲ್ಲಿ ಹೊದಿಕೆಯಿಲ್ಲದೆ ವೀರಾಸನದಲ್ಲಿ ಕುಳಿತಿರಬೇಕು. ಹೀಗೆ ಮಾಡುವವನು ಮೇಲೆ ಹೇಳಿದ ಸಂಸಾರವನ್ನು ಪಡೆಯದೆ ನನ್ನ ಲೋಕವನ್ನು ಸೇರುವನು.

೬೦. ವಸುಂಧರೇ, ನನ್ನ ಕರ್ಮದಲ್ಲಿ ನಿರತನಾದರೂ, ಹಂದಿಯಮಾಂಸದಿಂದ ನನಗೆ ನೈವೇದ್ಯವನ್ನು ಅರ್ಪಿಸುವ ಪಾಪಕರ್ಮನಾದ ಮೂಢನು ಯಾವ ದೋಷಗಳನ್ನೂ, ಸಂಸಾರವನ್ನೂ ಪಡೆಯುವನೆಂಬುದನ್ನು ಕೇಳು.

೬೧. ಆ ಪಾಪಿಯು, ವರಾಹರೂಪಿಯಾದ ನನ್ನ ದೇಹದಲ್ಲಿ ಎಷ್ಟು ರೋಮಗಳಿವೆಯೋ ಅಷ್ಟುಸಾವಿರವರ್ಷಕಾಲ ನರಕದಲ್ಲಿ ಬೇಯುವನು.

೬೨. ವಸುಂಧರೇ, ಇನ್ನೂ ಬೇರೆ ಹೇಳುತ್ತೇನೆ. ಕೇಳು.

ವಾರಾಹೇಣ ತು ಮಾಂಸೇನ ಯಸ್ತು ಕುರ್ವೀತ ಪ್ರಾಪಣಂ ।
ಯಾವತ್ತತ್ತನುಸಂಸ್ಥಂ ತು ಭಜತೇ ತು ಪ್ರತಿಷ್ಠಿತಂ ।
ತಾವತ್ಸ ಪತತೇ ದೇವಿ ಸೌಕರೀಂ ಯೋನಿಮಾಸ್ಥಿತಃ ॥ ೬೩ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ಯಾಂ ಗತಿಂ ಸಂಪ್ರಪದ್ಯೇತ ಮಮ ಕರ್ಮಪರಾಯಣಃ ॥ ೬೪ ॥

ಅಂಧೋ ಭೂತ್ವಾ ತತೋ ದೇವಿ ಜನ್ಮ ಚೈವಂ ಪ್ರತಿಷ್ಠಿತಂ ।
ಏವಂ ಗತ್ವಾ ತು ಸಂಸಾರಂ ವರಾಹಮಾಂಸಪ್ರಾಪಣಾತ್ ॥ ೬೫ ॥

ಜಾಯತೇ ವಿಪುಲೇ ಸಿದ್ಧೇ ಕುಲೇ ಭಾಗವತೇ ಶುಚಿಃ ।
ವಿನೀತಃ ಕೃತಸಂಸ್ಕಾರೋ ಮಮ ಕರ್ಮಪರಾಯಣಃ ।
ದ್ರವ್ಯವಾನ್ಗುಣವಾಂಶ್ಚೈವ ರೂಪವಾನ್ಶೀಲವಾನ್ಶುಚಿಃ ॥ ೬೬ ॥

---

೬೩. ಹಂದಿಯ ಮಾಂಸದಿಂದ ನನಗೆ ನೈವೇದ್ಯಮಾಡುವವನು ಆ ಹಂದಿಯ ದೇಹದ ಎಷ್ಟು ಭಾಗದ ಮಾಂಸವನ್ನು ತೆಗೆದುಕೊಳ್ಳುವನೋ ಅಷ್ಟು ಭಾಗದಲ್ಲಿ ಎಷ್ಟು ರೋಮಗಳಿರುವುವೋ ಅಷ್ಟುವರ್ಷಕಾಲ ಹಂದಿಯ ಜನ್ಮವನ್ನು ಪಡೆಯುವನು.

೬೪. ವಸುಂಧರೇ, ನನ್ನ ಕರ್ಮನಿರತನಾದವನು ಹಂದಿಯ ಮಾಂಸವನ್ನು ನೈವೇದ್ಯಮಾಡಿದ ಅಪರಾಧದಿಂದ ಪಡೆಯುವ ಗತಿಯನ್ನೂ ಹೇಳುತ್ತೇನೆ. ಅದನ್ನೂ ಕೇಳು.

೬೫-೬೬. ಹಂದಿಯಮಾಂಸವನ್ನು ನೈವೇದ್ಯಮಾಡಿದುದರಿಂದ, ಅವನು ಬಳಿಕ ಕುರುಡನಾಗಿ ಒಂದು ಜನ್ಮವನ್ನು ಕಳೆದು, ಆಮೇಲೆ ಭಾಗವತರಾದ ಸಿದ್ಧರ ದೊಡ್ಡದಾದ ಕುಲದಲ್ಲಿ ಶುಚಿಯೂ, ವಿನಯವುಳ್ಳವನೂ, ಸಂಸ್ಕೃತನೂ, ನನ್ನ ಕರ್ಮಗಳಲ್ಲಿ ನಿರತನೂ, ಐಶ್ವರ್ಯವಂತನೂ, ಗುಣವಂತನೂ, ರೂಪವಂತನೂ, ಸುಶೀಲವಂತನೂ ಆಗಿ ಜನಿಸುವನು.

ಪ್ರಾಯಶ್ಚಿತ್ತಂ ಪ್ರವಕ್ಷ್ಯಾಮಿ ತಸ್ಯ ಕಾಯವಿಶೋಧನಂ ।
ಕಿಲ್ಬಿಷಾದ್ಯೇನ ಮುಚ್ಯೇತ ಮಮ ಕರ್ಮಪರಾಯಣಃ ॥ ೬೭ ॥

ಫಲಾಹಾರೋ ದಿನಾನ್ಸಪ್ತ ಸಪ್ತ ಮೂಲಾಶನಸ್ತಥಾ ।
ದಿನಾನಿ ಸಪ್ತ ತಿಷ್ಠೇತ ಸಪ್ತ ವೈ ಪಾಯಸೇನ ಚ ॥ ೬೮ ॥

ತಕ್ರೇಣ ಸಪ್ತದಿವಸಾನ್ಸಪ್ತ *ಯಾವಕಭೋಜನಃ ।
ಪ್ರಾಯಶ್ಚಿತ್ತಾನ್ಮಹಾಭಾಗೇ ಮಮ ಲೋಕಂ ಸ ಗಚ್ಛತಿ ॥ ೬೯ ॥

ಮದ್ಯಂ ಪೀತ್ವಾ ವರಾರೋಹೇ ಯಸ್ತು ಮಾಮುಪಸರ್ಪತಿ ।
ತತ್ರ ದೋಷಂ ಪ್ರವಕ್ಷ್ಯಾಮಿ ಶೃಣು ಸುಂದರಿ ತತ್ತ್ವತಃ ॥ ೭೦ ॥

---

೬೭. ಹಂದಿಯ ಮಾಂಸವನ್ನು ಅರ್ಪಿಸಿ, ಅಪರಾಧಿಯಾದ ನನ್ನ ಕರ್ಮಾಸಕ್ತನೂ, ಆ ಅಪರಾಧವನ್ನು ಕಳೆದುಕೊಳ್ಳುವುದಕ್ಕೆ ಬೇಕಾದ ದೇಹ ಶೋಧಕವಾದ ಪ್ರಾಯಶ್ಚಿತ್ತವನ್ನು ಹೇಳುತ್ತೇನೆ.

೬೮–೬೯. ಮಹಾಭಾಗ್ಯೇ, ವರಾಹಮಾಂಸಾರ್ಪಣಾಪರಾಧವನ್ನು ಮಾಡಿದವನು, ಒಂದುವಾರಕಾಲ ಹಣ್ಣುಕಾಯಿಗಳನ್ನೂ, ಮತ್ತೊಂದುವಾರ (ಏಳುದಿನ) ಗೆಣಸನ್ನೂ ತಿಂದು, ಆಮೇಲೆ ಒಂದುವಾರ ಪಾಯಸವನ್ನೂ, ಮುಂದೆ ಒಂದುವಾರ ಮಜ್ಜಿಗೆಯನ್ನೂ ಕುಡಿದು, ಕಡೆಯ ಒಂದುವಾರ ಯಾವಕವನ್ನು(ಅಲಸಂದೆಯನ್ನು) ತಿಂದು ಜೀವಿಸುವ ಪ್ರಾಯಶ್ಚಿತ್ತದಿಂದ ಪಾಪವನ್ನು ಕಳೆದುಕೊಂಡು ನನ್ನ ಲೋಕವನ್ನು ಸೇರುವನು.

೭೦. ವರಾರೋಹೇ, ಮದ್ಯವನ್ನು ಕುಡಿದು ನನ್ನ ಸೇವೆಮಾಡುವವನಿಗೆ ಬರುವ ಪಾಪವನ್ನು ನಿಜವಾಗಿ ಹೇಳುತ್ತೇನೆ. ಸುಂದರಿ, ಕೇಳು.

---

* ಪಾವಕ ಎಂದು ಬೊಂ. ಕ. ಪ್ರತಿಗಳಲ್ಲಿದೆ. ದೇವನಾಗರಿ ಲಿಪಿಯಲ್ಲಿ ಪ ಮತ್ತು ಯ ಗಳಿಗೆ ಹೆಚ್ಚಾದ ಸಾಮ್ಯವಿರುವುದರಿಂದಲೂ, ಪಾವಕ ಭೋಜನವು ಅಸಾಧ್ಯವಾದುದರಿಂದಲೂ ಯಾವಕ ಎಂದಿರಬಹುದೆಂದು ಭಾವಿಸಿ ತಿದ್ದಿದೆ.

ದಶವರ್ಷಸಹಸ್ರಾಣಿ ದರಿದ್ರೋ ಜಾಯತೇ ಪುನಃ ।
ತತೋ ಭವೇತ್ಸ ಪೂತಾತ್ಮಾ ಮದ್ಭಕ್ತಸ್ಸ ನ ಸಂಶಯಃ ॥ ೭೧ ॥

ಯಸ್ತು ಭಾಗವತೋ ಭೂತ್ವಾ ಕಾಮರಾಗೇಣ ಮೋಹಿತಃ ।
ದೀಕ್ಷಿತಃ ಪಿಬತೇ ಮದ್ಯಂ ಪ್ರಾಯಶ್ಚಿತ್ತಂ ನ ವಿದ್ಯತೇ ॥ ೭೨ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
***ಅಗ್ನಿವರ್ಣಾಂ ಸುರಾಂ ಪೀತ್ವಾ ತೇನ ಮುಚ್ಯೇತ ಕಿಲ್ಬಿಷಾತ್ ॥ ೭೩ ॥**

ಯ ಏತೇನ ವಿಧಾನೇನ ಪ್ರಾಯಶ್ಚಿತ್ತಂ ಸಮಾಚರೇತ್ ।
ನ ಸ ಲಿಪ್ಯತಿ ಪಾಪೇನ ಸಂಸಾರಂ ಚ ನ ಗಚ್ಛತಿ ॥ ೭೪ ॥

---

೭೧. ಅವನು ಹತ್ತುಸಾವಿರವರ್ಷಕಾಲ ಮತ್ತೆಮತ್ತೆ ದರಿದ್ರನಾಗಿ ಹುಟ್ಟುವನು. ಬಳಿಕ ಪರಿಶುದ್ಧಾತ್ಮನೂ, ನನ್ನ ಭಕ್ತನೂ ಆಗುವುದರಲ್ಲಿ ಸಂಶಯವಿಲ್ಲ.

೭೨. ಭಾಗವತನೂ, ದೀಕ್ಷಿತನೂ, ಆದವನು ಕಾಮರಾಗದಿಂದ ಮೋಹಿತನಾಗಿ ಆಸೆಯಿಂದ ಮದ್ಯಪಾನವನ್ನು ಮಾಡಿದರೆ ಆ ಅಪರಾಧಕ್ಕೆ ಪ್ರಾಯಶ್ಚಿತ್ತವೇ ಇಲ್ಲ.

೭೩. ವಸುಂಧರೇ, ಆದರೆ ಬೇರೊಂದು ವಿಚಾರವನ್ನು ಹೇಳುತ್ತೇನೆ. ಕೇಳು. ಭಾಗವತನಾದ ದೀಕ್ಷಿತನು, ಉದ್ದೇಶದಿಂದಲ್ಲದೆ, ತಿಳಿಯದೆ ಅಕಸ್ಮಾತ್ತಾಗಿ ಮದ್ಯವನ್ನು ಕುಡಿದನಾದರೆ, *ಅಗ್ನಿವರ್ಣದ ಮದ್ಯವನ್ನು ಕುಡಿದು ಆ ಪಾಪವನ್ನು ಕಳೆದುಕೊಳ್ಳುವನು.

೭೪. ಈ ಬಗೆಯಿಂದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವವನು ಪಾಪವನ್ನು ಅಂಟಿಸಿಕೊಳ್ಳುವುದಿಲ್ಲ. ಸಂಸಾರಕ್ಕೂ ಬೀಳುವುದಿಲ್ಲ.

---

* ಅಗ್ನಿವರ್ಣದ ಮದ್ಯವೆಂದರೆ ಎಂತಹುದೋ ?

ಕೌಸುಂಭಂ ಚೈವ ಯಶ್ಶಾಕಂ ಭಕ್ಷಯೇನ್ಮಮ ಪೂಜಕಃ ।
ನರಕೇ ಪಚ್ಯತೇ ಘೋರೇ ದಶ ಪಂಚ ಚ ಸೂಕರಃ ॥ ೭೫ ॥

ತತೋ ಗಚ್ಛೇಚ್ಛ್ವಯೋನೌ ಚ ತ್ರೀಣಿ ವರ್ಷಾಣಿ ಜಂಬುಕಃ ।
ವರ್ಷಮೇಕಂ ತತಶ್ಶುದ್ಧ್ಯೇನ್ಮತ್ಕರ್ಮಣಿ ರತಶ್ಶುಚಿಃ ।
ಮಮ ಲೋಕಮವಾಪ್ನೋತಿ ಶುದ್ಧೋ ಭೂತ್ವಾ ವಸುಂಧರೇ ॥ ೭೬ ॥

ತತೋ ಭೂಮಿರ್ವಚಃ ಶ್ರುತ್ವಾ ಪ್ರತ್ಯುವಾಚ ಪುನರ್ಹರಿಂ ॥ ೭೭ ॥

ಕುಸುಂಭಶಾಕನೈವೇದ್ಯಪ್ರಾಶನೇನ ಚ ಕಿಲ್ಬಿಷಾತ್ ।
ಕಥಂ ಮುಚ್ಯೇತ ದೇವೇಶ ಪ್ರಾಯಶ್ಚಿತ್ತಂ ವದ ಪ್ರಭೋ ॥ ೭೮ ॥

॥ ಶ್ರೀವರಾಹ ಉವಾಚ ॥

ಯೋ ಮೇ ಕುಸುಂಭಶಾಕೇನ ಪ್ರಾಶನಂ ಕುರುತೇ ನರಃ ।
ದಶವರ್ಷಸಹಸ್ರಾಣಿ ನರಕೇ ಪರಿಪಚ್ಯತೇ ॥ ೭೯ ॥

೭೫-೭೬. ಭೂಮೀ, ಕುಸುಬೆಯ ಬಣ್ಣದ ಕಾಯಿಪಲ್ಯವನ್ನು ತಿನ್ನುವ ನನ್ನ ಪೂಜಕನು ಘೋರವಾದ ನರಕದಲ್ಲಿ ಬೇಯುವನು. ಹದಿನೈದುವರ್ಷ ಕಾಲ ಹಂದಿಯಾಗಿದ್ದು, ಬಳಿಕ ನಾಯಾಗಿ ಮೂರುವರ್ಷವಿದ್ದು, ಬಳಿಕ ಒಂದು ವರ್ಷ ನರಿಯಾಗಿರುವನು. ಬಳಿಕ ನನ್ನ ಕರ್ಮಾಸಕ್ತನಾದ ಅವನು ಶುದ್ಧನಾಗಿ ನನ್ನ ಲೋಕವನ್ನು ಸೇರುವನು.

೭೭-೭೮. ಹರಿಯ ಮಾತನ್ನು ಕೇಳಿ, ಭೂದೇವಿಯು ಮತ್ತೆ ಅವನನ್ನು ಕುರಿತು, " ದೇವೇಶ, ಪ್ರಭುವೇ, ಕುಸುಬೆಯ ಬಣ್ಣದ ಕಾಯಿಪಲ್ಯವನ್ನು ನಿನಗೆ ಅರ್ಪಿಸುವುದರಿಂದುಂಟಾಗುವ ಪಾಪವನ್ನು ಕಳೆದುಕೊಳ್ಳುವುದಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಹೇಳು " ಎಂದು ಹೇಳಿದಳು.

೭೯. ಶ್ರೀವರಾಹ—ನನಗೆ ಕುಸುಬೆಯ ಬಣ್ಣದ ಕಾಯಿಪಲ್ಯವನ್ನು ನೈವೇದ್ಯಮಾಡುವವನು ಹತ್ತುಸಾವಿರವರ್ಷಕಾಲ ನರಕದಲ್ಲಿ ಚೆನ್ನಾಗಿ ಬೇಯುವನು.

ಪ್ರಾಯಶ್ಚಿತ್ತಂ ಪ್ರವಕ್ಷ್ಯಾಮಿ ತಚ್ಚ ಮೇ ವದತಃ ಶೃಣು || ೮೦ ||

ಭಕ್ಷಣೇ ತು ಕೃತೇ ಕುರ್ಯಾಚ್ಚಾಂದ್ರಾಯಣಮತಂದ್ರಿತಃ ।
ಪಾಪಣೇ ತು ಕೃತೇ ಕುರ್ಯಾದ್ದ್ವಾದಶಾಹಂ ಪಯೋವ್ರತಂ || ೮೧ ||

ಯ ಏತೇನ ವಿಧಾನೇನ ಪ್ರಾಯಶ್ಚಿತ್ತಂ ಸಮಾಚರೇತ್ ।
ನ ಸ ಲಿಪ್ಯೇತ ಪಾಪೇನ ಮಮ ಲೋಕಂ ಚ ಗಚ್ಛತಿ ॥ ೮೨ ॥

ಯಃ ಪಾರಕ್ಯೇಣ ವಸ್ತ್ರೇಣ ನ ಧೂತೇನ ಚ ಮಾಧವಿ || ೮೩ ||

ಪ್ರಾಯಶ್ಚಿತ್ತೀ ಭವೇನ್ಮೂರ್ಖೋ ಮಮ ಕರ್ಮಪರಾಯಣಃ ।
ಕರೋತಿ ಮಮ ಕರ್ಮಾಣಿ ಸ್ಪೃಶತೇ ಮಾಂ ತದಾ ಸ್ಥಿತಃ || ೮೪ ||

ಮೃಗೋ ವೈ ಜಾಯತೇ ದೇವಿ ವರ್ಷಾಣಿ ತ್ರೀಣಿ ಸಪ್ತ ಚ ।
ಹೀನಪಾದೇನ ಜಾಯೇತ ಚೈಕಂ ಜನ್ಮ ವಸುಂಧರೇ ।
ಮೂರ್ಖಶ್ಚ ಕ್ರೋಧನಶ್ಚೈವ ಮದ್ಭಕ್ತಶ್ಚೈವ ಜಾಯತೇ || ೮೫ ||

೮೦–೮೧. ಪ್ರಾಯಶ್ಚಿತ್ತವನ್ನು ಹೇಳುತ್ತೇನೆ. ಅದನ್ನು ಕೇಳು. ಕುಸುಬೆಯ ಬಣ್ಣದ ಕಾಯಿಪಲ್ಯವನ್ನು ತಿಂದವನು ಜಾಗರೂಕನಾಗಿ ಚಾಂದ್ರಾಯಣವ್ರತವನ್ನು ಮಾಡಬೇಕು. ಅದನ್ನು ನನಗೆ ಅರ್ಪಿಸಿದರೆ, ಅರ್ಪಿಸಿದವನು ಹನ್ನೆರಡುದಿನ ಹಾಲನ್ನು ಮಾತ್ರ ಕುಡಿದು ಬೇರೆ ಆಹಾರವಿಲ್ಲದೇ ಇರಬೇಕು.

೮೨. ಹೀಗೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವವನು ಪಾಪವನ್ನಂಟಿಸಿಕೊಳ್ಳದೆ ನನ್ನ ಲೋಕವನ್ನು ಸೇರುವನು.

೮೩–೮೪. ಮಾಧವಿ, ನನ್ನ ಕರ್ಮಾಸಕ್ತನಾದ ಯಾರು ಪರರ ಬಟ್ಟೆಯನ್ನಾಗಲಿ, ಕೊಡವದ ಬಟ್ಟೆಯನ್ನಾಗಲಿ ಉಟ್ಟು ನನ್ನ ಕರ್ಮಗಳನ್ನು ಮಾಡುವನೋ ಅಥವಾ ನನ್ನನ್ನು ಮುಟ್ಟುವನೋ ಆ ಮೂರ್ಖನು ಪ್ರಾಯಶ್ಚಿತ್ತಕ್ಕೆ ಅರ್ಹನಾಗುವನು.

೮೫. ವಸುಂಧರೇ, ಅವನು ಹತ್ತುವರ್ಷಕಾಲ ಮೃಗವಾಗಿ ಜೀವಿಸುವನು. ಒಂದು ಜನ್ಮದಲ್ಲಿ ಕುಂಟನಾಗಿದ್ದು ಬಳಿಕ ಮೂರ್ಖನೂ, ಕೋಪಿಯೂ, ನನ್ನ ಭಕ್ತನೂ ಆಗಿ ಹುಟ್ಟುವನು.

ತಸ್ಯ ವಕ್ಷ್ಯಾಮಿ ಸುಶ್ರೋಣಿ ಪ್ರಾಯಶ್ಚಿತ್ತಂ ಮಹೌಜಸಂ ।
ಯೇನ ಗಚ್ಛತಿ ಸಂಸಾರಂ ಮಮ ಭಕ್ತ್ಯಾ ವ್ಯವಸ್ಥಿತಃ ॥ ೮೬ ॥

ಅಷ್ಟಭಕ್ತಂ ತತಃ ಕೃತ್ವಾ ಮಮ ಭಕ್ತಿಪರಾಯಣಃ ।
ಮಾಘಸ್ಯೈವ ತು ಮಾಸಸ್ಯ ಶುಕ್ಲಪಕ್ಷಸ್ಯ ದ್ವಾದಶೀಂ ॥ ೮೭ ॥

ತಿಷ್ಠೇಜ್ಜಲಾಶಯೇ ಗತ್ವಾ ಶಾಂತೋದಾಂತೋ ಯತವ್ರತಃ ।
ಅನನ್ಯಮಾನಸೋ ಭೂತ್ವಾ ಮಮ ಚಿಂತಾಪರಾಯಣಃ ॥ ೮೮ ॥

ಪ್ರಭಾತಾಯಾಂ ತು ಶರ್ವರ್ಯಾಮುದಿತೇ ತು ದಿವಾಕರೇ ।
ಪಂಚಗವ್ಯಂ ತತಃ ಪೀತ್ವಾ ಮಮ ಕರ್ಮಾಣಿ ಕಾರಯೇತ್ ॥ ೮೯ ॥

ಯ ಏತೇನ ವಿಧಾನೇನ ಪ್ರಾಯಶ್ಚಿತ್ತಂ ಸಮಾಚರೇತ್ ।
ಸರ್ವಪಾಪವಿನಿರ್ಮುಕ್ತೋ ಮಮ ಲೋಕಂ ಸ ಗಚ್ಛತಿ ॥ ೯೦ ॥

---

೮೬. ಸುಂದರಿ, ನನ್ನ ಭಕ್ತಿಯಲ್ಲಿ ನಿರತನಾಗಿದ್ದವನಿಗೆ ಮೇಲಿನ ಸಂಸಾರವನ್ನುಂಟುಮಾಡುವ ಆ ಪಾಪಕ್ಕೆ ಹೆಚ್ಚುಬಲವುಳ್ಳ ಪ್ರಾಯಶ್ಚಿತ್ತವನ್ನು ಹೇಳುತ್ತೇನೆ.

೮೭–೮೮. ನನ್ನ ಭಕ್ತಿಯಲ್ಲಿ ನಿರತನಾದ ಆ ದೋಷಿಯು ಎಂಟನೆಯ ಒಂದುಭಾಗ ಆಹಾರವನ್ನು ಮಾತ್ರ ತೆಗೆದುಕೊಂಡು, ಮಾಘಮಾಸದ ಶುಕ್ಲ ಪಕ್ಷದ ದ್ವಾದಶಿಯದಿನ ರಾತ್ರಿ (ಕೆರೆಕೊಳ ಮೊದಲಾದ ಯಾವುದಾದರೂ) ಜಲಾಶಯಕ್ಕೆ ಹೋಗಿ, ಶಾಂತನೂ, ಜಿತೇಂದ್ರಿಯನೂ, ಬೇರೆಯಕಡೆಯಲ್ಲಿ ಮನಸ್ಸನ್ನು ಬಿಡದೆ ನನ್ನ ಧ್ಯಾನದಲ್ಲಿಯೇ ನಿರತನೂ ಆಗಿ ನಿಲ್ಲಬೇಕು.

೮೯. ರಾತ್ರಿಯು ಕಳೆದು, ಸೂರ್ಯೋದಯವಾಗಿ ಬೆಳಕಾದಮೇಲೆ ಪಂಚಗವ್ಯವನ್ನು ಕುಡಿದು, ನನ್ನ ಕರ್ಮಗಳನ್ನು ಮಾಡಬೇಕು.

೯೦. ಈ ವಿಧಾನದಿಂದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವವನು ಎಲ್ಲಾ ಪಾಪಗಳನ್ನೂ ಕಳೆದುಕೊಂಡು ನನ್ನ ಲೋಕವನ್ನು ಸೇರುವನು.

ತತೋ ಭಾಗವತೋ ಭೂತ್ವಾ ನವಾನ್ನಂ ಯೋ ನ ಕಾರಯೇತ್ ।
ಪಿತರಸ್ತಸ್ಯ ನಾಶ್ನಂತಿ ವರ್ಷಾಣಿ ದಶ ಪಂಚ ಚ ॥ ೯೧ ॥

ಅದತ್ವಾ ಯಸ್ತು ಭುಂಜೀತ ನವಾನ್ನಾನಿ ಕದಾಚನ ।
ನ ತಸ್ಯ ಧರ್ಮೋ ವಿದ್ಯೇತ ಏವಮೇತನ್ನ ಸಂಶಯಃ ॥ ೯೨ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ಯೇನ ತಸ್ಮಾತ್ಪ್ರಮುಚ್ಯತೇ ।
ಪ್ರಾಯಶ್ಚಿತ್ತಂ ಮಹಾಭಾಗೇ ಮಮ ಭಕ್ತಸುಖಾವಹಂ ॥ ೯೩ ॥

ಉಪವಾಸಂ ತ್ರಿರಾತ್ರಂ ತು ತತ ಏಕೇನ ವಾ ಪುನಃ ।
ಆಕಾಶಶಯನಂ ಕೃತ್ವಾ ಚತುರ್ಥೇಽಹನಿ ಶುಧ್ಯತಿ ॥ ೯೪ ॥

ಏವಂ ತತ್ರ ವಿಧಿಂ ಕೃತ್ವಾ ಉದಿತೇ ಚ ದಿವಾಕರೇ ।
ಪಂಚಗವ್ಯಂ ತತಃ ಪೀತ್ವಾ ಶೀಘ್ರಂ ಮುಚ್ಯೇತ ಕಿಲ್ಬಿಷಾತ್ ॥ ೯೫ ॥

೯೧–೯೨. ಭಗವದ್ಭಕ್ತನಾಗಿದ್ದೂ ಹೊಸ ಅನ್ನವನ್ನು ನನಗೂ, ಪಿತೃಗಳಿಗೂ ಅರ್ಪಿಸದೆ ಎಂದಾದರೂ ಊಟಮಾಡಿದನಾದರೆ ಅವನ ಪಿತೃಗಳು ಬಳಿಕ ಹದಿನೈದುವರ್ಷಗಳು ಊಟಮಾಡದಿರುವರು. ಅವನಿಗೆ ಧರ್ಮವಿರುವುದಿಲ್ಲ ವೆಂಬುದರಲ್ಲಿ ಸಂದೇಹವಿಲ್ಲ.

೯೩. ಮಹಾಭಾಗ್ಯೇ, ಯಾವುದರಿಂದ ಆ ಪಾಪವನ್ನು ಕಳೆದುಕೊಳ್ಳಬಹುದೋ ಆ ಭಕ್ತಸುಖಕರವಾದ ಪ್ರಾಯಶ್ಚಿತ್ತವನ್ನು ನಿನಗೆ ಹೇಳುತ್ತೇನೆ.

೯೪–೯೫. ಹೊಸದಾದ ಅನ್ನವನ್ನು ದೇವಪಿತೃಗಳಿಗರ್ಪಿಸದ ಅಪರಾಧಿಯು ಮೂರುದಿನ ಉಪವಾಸವನ್ನು ಮಾಡಿ, ಮೂರನೆಯ ದಿನ ರಾತ್ರಿ ಬಯಲಲ್ಲಿ ಹಾಸಿಗೆಹೊದಿಕೆಗಳಿಲ್ಲದೆ ಮಲಗಿದ್ದರೆ ನಾಲ್ಕನೆಯದಿನ ಶುದ್ಧನಾಗುವನು. ಆ ನಾಲ್ಕನೆಯ ದಿನ ಬೆಳಗ್ಗೆ ಪಂಚಗವ್ಯವನ್ನು ಕುಡಿದು ಬೇಗನೆ ಪಾಪವನ್ನು ಕಳೆದುಕೊಳ್ಳುವನು

ಯ ಏತೇನ ವಿಧಾನೇನ ಪ್ರಾಯಶ್ಚಿತ್ತಂ ಸಮಾಚರೇತ್ ।
ಸರ್ವಸಂಗಂ ಪರಿತ್ಯಜ್ಯ ಮಮ ಲೋಕಂ ಸ ಗಚ್ಛತಿ ॥ ೯೬ ॥

ಅದತ್ವಾ ಗಂಧಮಾಲ್ಯಾನಿ ಯೋ ಮೇ ಧೂಪಂ ಪ್ರಯಚ್ಛತಿ ।
ಕುಣಪೋ ಜಾಯತೇ ಭೂಮೇ ಯಾತುಧಾನೋ ನ ಸಂಶಯಃ ॥ ೯೭ ॥

ವರ್ಷಾಣಿ ಚೈಕವಿಂಶಾನಿ ಅಯಸ್ಕಾರನಿವಾಸಕಃ ।
ತಿಷ್ಠತೇತ್ರ ಮಹಾಭಾಗೋ ಏವಮೇತನ್ನ ಸಂಶಯಃ ॥ ೯೮ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ಪ್ರಾಯಶ್ಚಿತ್ತಂ ಪ್ರವಕ್ಷ್ಯಾಮಿ ಯೇನ ಮುಚ್ಯೇತ ಕಿಲ್ಬಿಷಾತ್ ॥ ೯೯ ॥

ಯಸ್ಯ ಕಸ್ಯಾಪಿ ಮಾಸಸ್ಯ ಶುಕ್ಲಪಕ್ಷಸ್ಯ ದ್ವಾದಶೀಂ ।
ಉಪೋಷ್ಯ ಚಾಷ್ಟಭಕ್ತಂ ತು ದಶ್ಯೈಕಾದಶಮೇವಚ ॥ ೧೦೦ ॥

---

೯೬. ಮೇಲೆ ಹೇಳಿದ ಅಪರಾಧಮಾಡಿದ ಯಾರು ಈ ವಿಧಿಯಿಂದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವನೋ ಅವನು ಸರ್ವಸಂಗವನ್ನೂ ಪರಿತ್ಯಜಿಸಿ ನನ್ನ ಲೋಕವನ್ನು ಸೇರುವನು.

೯೭-೯೮. ಭೂಮೀ, ನನಗೆ ಗಂಧಪುಷ್ಪಗಳನ್ನರ್ಪಿಸದೆ(ಮೊದಲು)ಧೂಪವನ್ನು ಅರ್ಪಿಸುವ ಪೂಜಕನು ಹೆಣವಾಗಿ ಹುಟ್ಟಿ, ಬಳಿಕ ರಾಕ್ಷಸನಾಗಿ ಜನಿಸಿ, ಇಪ್ಪತ್ತೊಂದು ವರ್ಷಕಾಲ ಕಬ್ಬಿಣದ ಕೆಲಸಮಾಡುವೆಡೆಯಲ್ಲಿ ನೆಲಸುವುದರಲ್ಲಿ ಸಂದೇಹವಿಲ್ಲ.

೯೯. ವಸುಂಧರೇ, ಆ ಅಪರಾಧಕ್ಕೆ, ಪಾಪದಿಂದ ಬಿಡುಗಡೆಯನ್ನು ಹೊಂದುವ ಪ್ರಾಯಶ್ಚಿತ್ತವನ್ನು ಹೇಳುತ್ತೇನೆ. ಕೇಳು.

೧೦೦-೧೦೧. ಯಾವುದಾದರೂ ತಿಂಗಳ ದಶಮಿ ಏಕಾದಶಿಗಳಲ್ಲಿ ಉಪವಾಸಮಾಡಿ, ದ್ವಾದಶಿಯದಿನ ಎಂಟನೆಯ ಒಂದು ಭಾಗದಷ್ಟನ್ನು ಮಾತ್ರ

ಪ್ರಭಾತಾಯಾಂ ತು ಶರ್ವರ್ಯಾಮುದಿತೇ ರವಿಮಂಡಲೇ |
ಪಂಚಗವ್ಯಂ ತತಃ ಪೀತ್ವಾ ಶೀಘ್ರಂ ಮುಚ್ಯತಿ ಕಿಲ್ಬಿಷಾತ್ || ೧೦೧ ||

ಯ ಏತೇನ ವಿಧಾನೇನ ಪ್ರಾಯಶ್ಚಿತ್ತಂ ಸಮಾಚರೇತ್ |
ತಾನಿ ತಾನಿ ತರೇತ್ಯೇವಂ ಸರ್ವ ಏವ ಪಿತಾಮಹಾಃ || ೧೦೨ ||

ಸಹನ್ನುಪಾನಹೌ ಪದ್ಭ್ಯಾಂ ಯಸ್ತು ಮಾಮುಪಚಕ್ರಮೇತ್ |
ಚರ್ಮಕಾರಸ್ತು ಜಾಯೇತ ವರ್ಷಾಣಾಂ ತು ತ್ರಯೋದಶ || ೧೦೩ ||

ತಜ್ಜನ್ಮನಃ ಪರಿಭ್ರಷ್ಟಃ ಸೂಕರೋ ಜಾಯತೇ ಪುನಃ |
ಸೂಕರತ್ವಾತ್ಪರಿಭ್ರಷ್ಟಃ ಶ್ವಾ ಭವೇಚ್ಚ ಜುಗುಪ್ಸಿತಃ || ೧೦೪ ||

ತತಃ ಶ್ವತ್ವಾತ್ಪರಿಭ್ರಷ್ಟೋ ಮಾನುಷೇಷೂಪಜಾಯತೇ || ೧೦೫ ||

ಊಟಮಾಡುತ್ತಿದ್ದು, ಆ ರಾತ್ರಿಯು ಕಳೆದು ಸೂರ್ಯೋದಯವಾದ ಬಳಿಕ ಪಂಚಗವ್ಯವನ್ನು ಕುಡಿದು ಬೇಗನೆ ಮೊದಲು ಧೂಪವನ್ನರ್ಪಿಸಿದ ಪಾಪವನ್ನು ಕಳೆದುಕೊಳ್ಳುವನು.

೧೦೨. ಯಾರು ಈ ಬಗೆಯಲ್ಲಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವನೋ ಅವನ ಪಿತಾಮಹರು ಯಾವುದಾದರೂ ತೊಂದರೆಗೊಳಗಾಗಿದ್ದರೆ ಅವುಗಳಿಂದ ಪಾರಾಗುವನು.

೧೦೩. ಪಾದರಕ್ಷೆಗಳನ್ನು ಹಾಕಿಕೊಂಡು ನನ್ನ ಹತ್ತಿರ ಬರುವವನು ಮೂವತ್ತುವರ್ಷಗಳು ಚಮ್ಮಾರನಾಗುವನು.

೧೦೪. ಆ ಜನ್ಮವು ಕಳೆದ ಬಳಿಕ ಹಂದಿಯಾಗಿ ಹುಟ್ಟುವನು. ಹಂದಿಯ ಜನ್ಮವನ್ನೂ ಕಳೆದುಕೊಂಡು ಅಸಹ್ಯಕರವಾದ ನಾಯಾಗುವನು.

ಮದ್ಭಕ್ತಶ್ಚ ವಿನೀತಶ್ಚ ಅಪರಾಧವಿವರ್ಜಿತಃ ।
ಮುಕ್ತಸ್ತು ಸರ್ವಸಂಸಾರಾನ್ಮಮ ಲೋಕಂ ಸ ಗಚ್ಛತಿ ॥ ೧೦೬ ॥

*ಯ ಏತೇನ ವಿಧಾನೇನ ವಸುಧೇ ಕರ್ಮ ಕಾರಯೇತ್ ।
ನ ಸ ಲಿಪ್ಯೇತ ಪಾಪೇನ ಏವಮೇತನ್ನ ಸಂಶಯಃ ॥ ೧೦೭ ॥

ಭೇರೀಶಬ್ದಮಕೃತ್ವಾ ತು ಯಸ್ತು ಮಾಂ ಪ್ರತಿಬೋಧಯೇತ್ ।
ಬಧಿರೋ ಜಾಯತೇ ಭೂಮೇ ಏಕಂ ಜನ್ಮ ನ ಸಂಶಯಃ ॥ ೧೦೮ ॥

ತಸ್ಯ ವಕ್ಷ್ಯಾಮಿ ಸುಶ್ರೋಣಿ ಪ್ರಾಯಶ್ಚಿತ್ತಂ ಮಮ ಪ್ರಿಯಂ ।
ಕಿಲ್ಬಿಷಾದ್ಯೇನ ಮುಚ್ಯೇತ ಭೇರೀತಾಡನಮೋಹಿತಃ ॥ ೧೦೯ ॥

೧೦೫–೧೦೬. ಬಳಿಕ ನಾಯಿ ಜನ್ಮವನ್ನು ಕಳೆದುಕೊಂಡು ಮನುಷ್ಯನಾಗಿ ಜನಿಸಿ, ನನ್ನ ಭಕ್ತನೂ, ವಿನಯವುಳ್ಳವನೂ, ಪಾಪವಿಲ್ಲದವನೂ ಆಗಿ, ಸರ್ವ ಸಂಸಾರವಿಮುಕ್ತನಾಗಿ ನನ್ನ ಲೋಕವನ್ನು ಸೇರುವನು.

೧೦೭. *ಭೂದೇವಿ, ಈ ವಿಧಾನದಿಂದ ಪ್ರಾಯಶ್ಚಿತ್ತಕರ್ಮವನ್ನು ಮಾಡಿ ಕೊಳ್ಳುವವನಿಗೆ ಪಾಪವು ಅಂಟುವುದಿಲ್ಲವೆಂಬುದಲ್ಲಿ ಸಂದೇಹವಿಲ್ಲ.

೧೦೮. ಭೂಮೀ, ನಗಾರಿ (ಭೇರಿ) ಯ ಶಬ್ದವನ್ನು ಮಾಡದೆ ನನ್ನನ್ನು ಎಚ್ಚರಗೊಳಿಸುವವನು ಮುಂದೆ ಒಂದು ಜನ್ಮದಲ್ಲಿ ಕಿವುಡನಾಗಿ ಹುಟ್ಟುವುದರಲ್ಲಿ ಸಂಶಯವಿಲ್ಲ.

೧೦೯. ಸುಂದರಿ, ನಗಾರಿಯನ್ನು ಬಾರಿಸದೆ ಮರೆತವನು ಆ ತಪ್ಪಿನಿಂದ ಬಿಡುಗಡೆಯನ್ನು ಹೊಂದಲು ಬೇಕಾದ, ನನಗೆ ಪ್ರಿಯವಾದ ಪ್ರಾಯಶ್ಚಿತ್ತವನ್ನು ಹೇಳುತ್ತೇನೆ.

---

* ಪಾವರಕ್ಷೆಯನ್ನು ಹಾಕಿಕೊಂಡು ದೇವರ ಸಮೀಪಕ್ಕೆ ಹೋದ ಅಪರಾಧದ ಪ್ರಾಯಶ್ಚಿತ್ತ ವಾಕ್ಯವು ಲೋಪವಾಗಿದೆ.

ಯಸ್ಯ ಕಸ್ಯಾಪಿ ಮಾಸಸ್ಯ ದ್ವಾದಶ್ಯಾಂ ಶುಕ್ಲಪಕ್ಷಕೇ ।
ಆಕಾಶಶಯನಂ ಕೃತ್ವಾ ಶೀಘ್ರಂ ಮುಚ್ಯೇತ ಕಿಲ್ಬಿಷಾತ್ ॥ ೧೧೦ ॥

ಯ ಏತೇನ ವಿಧಾನೇನ ವಸುಧೇ ಕರ್ಮ ಕಾರಯೇತ್ ।
ಅಪರಾಧಂ ನ ಗಚ್ಛೇತ್ತು ಮಮ ಲೋಕಂ ಸ ಗಚ್ಛತಿ ॥ ೧೧೧ ॥

ಅನ್ನಂ ಭುಕ್ತ್ವಾ ಬಹುತರಂ ಅಜೀರ್ಣೇನ ಪರಿಪ್ಲುತಃ ।
ಉದ್ಗಾರೇಣ ಸಮಾಯುಕ್ತಃ ಅಸ್ನಾತ ಉಪಸರ್ಪತಿ ॥ ೧೧೨ ॥

ಏಕಜನ್ಮನಿ ಶ್ವಾ ಚೈವ ವಾನರಶ್ಚೈವ ಜಾಯತೇ ।
ಏಕಸ್ಮಿನ್ ಜನ್ಮನಿ ಛಾಗಃ ಸೃಗಾಲಶ್ಚೈಕಜನ್ಮನಿ ॥ ೧೧೩ ॥

ಏಕಜನ್ಮ ಭವೇದಂಧೋ ಮೂಷಕೋ ಜಾಯತೇ ಪುನಃ ।
ತಾರಿತೋ ಹ್ಯೇಷ ಸಂಸಾರಾಜ್ಜಾಯತೇ ವಿಪುಲೇ ಕುಲೇ ।
ಶುದ್ಧೋ ಭಾಗವತಶ್ರೇಷ್ಠಸ್ತ್ವಪರಾಧವಿವರ್ಜಿತಃ ॥ ೧೧೪ ॥

---

೧೧೦. ಯಾವುದಾದರೊಂದು ಮಾಸದ ಶುಕ್ಲಪಕ್ಷದ ದ್ವಾದಶಿಯದಿನ ಬಯಲಿನಲ್ಲಿ ಹಾಸಿಗೆಹೊದಿಕೆಗಳಿಲ್ಲದೆ ಮಲಗಿದ್ದರೆ ಪಾಪದಿಂದ ಮುಕ್ತನಾಗುವನು.

೧೧೧. ಭೂದೇವಿ, ಹೀಗೆ ಪ್ರಾಯಶ್ಚಿತ್ತಕರ್ಮವನ್ನು ಮಾಡಿಕೊಳ್ಳುವವನು ದೋಷವನ್ನು ಪಡೆಯದೆ ನನ್ನ ಲೋಕವನ್ನು ಸೇರುವನು.

೧೧೨–೧೧೩. ಆಹಾರವನ್ನು ಹೆಚ್ಚಾಗಿ ತಿಂದು, ಅಜೀರ್ಣದಿಂದ ಕಳವಳಗೊಂಡು, ತೇಗುತ್ತ ಅಥವಾ ಓಕರಿಸುತ್ತ, ಸ್ನಾನಮಾಡದೆ ನನ್ನನ್ನು ಆಶ್ರಯಿಸುವವನು ಅಥವಾ ಪೂಜಿಸುವವನು ಮುಂದೆ ಒಂದು ಜನ್ಮದಲ್ಲಿ ನಾಯಾಗಿಯೂ, ಬಳಿಕ ಕಪಿಯಾಗಿಯೂ, ಆಮೇಲೆ ಹೋತನಾಗಿಯೂ, ಅನಂತರ ನರಿಯಾಗಿಯೂ ಹುಟ್ಟುವನು.

೧೧೪. ನರಿಯ ಜನ್ಮವಾದ ಬಳಿಕ ಒಂದು ಜನ್ಮದಲ್ಲಿ ಕುರುಡನಾಗಿದ್ದು ಆಮೇಲೆ ಇಲಿಯಾಗಿ ಹುಟ್ಟುವನು. ಆ ಜನ್ಮಗಳೆಲ್ಲವನ್ನೂ ದಾಟಿದ ಬಳಿಕ ಪಾಪವನ್ನು ಕಳೆದುಕೊಂಡು, ದೊಡ್ಡದಾದ ವಂಶದಲ್ಲಿ ಹುಟ್ಟಿ, ಶುದ್ಧನೂ, ಭಾಗವತ ಶ್ರೇಷ್ಠನೂ ಆಗುವನು.

ಪ್ರಾಯಶ್ಚಿತ್ತಂ ಪ್ರವಕ್ಷ್ಯಾಮಿ ಮಮ ಭಕ್ತಸುಖಾವಹಂ ।
ಕಿಲ್ಬಿಷಾದ್ಯೇನ ಮುಚ್ಯೇತ ಮಮ ಭಕ್ತಿಪರಾಯಣಃ ॥ ೧೧೫ ॥

ತ್ರಿದಿನಂ *ಯಾವಕಾಹಾರೋ ಮೂಲಾಹಾರೋ ದಿನತ್ರಯಂ ॥ ೧೧೬ ॥

ಪಾಯಸೇನ ದಿನತ್ರಯ್ಯಾಂ ತ್ರಿದಿನಂ ಸಕ್ತುನಾ ತಥಾ ।
ತ್ರಿದಿನಂ ವಾಯುಭಕ್ಷೋಽಪಿ ಆಕಾಶಶಯನಸ್ತ್ರಿಕಂ ॥ ೧೧೭ ॥

ಉತ್ಥಾಯಾಪರರಾತ್ರೇ ತು ಕೃತ್ವಾ ವೈ ದಂತಧಾವನಂ ।
ಪಂಚಗವ್ಯಂ ಪಿಬೇಚ್ಚೈವ ಶರೀರಪರಿಶೋಧನಂ ॥ ೧೧೮ ॥

ಯ ಏತೇನ ವಿಧಾನೇನ ಪ್ರಾಯಶ್ಚಿತ್ತಂ ಸಮಾಚರೇತ್ ।
ನ ಸ ಲಿಪ್ಯೇತ ಪಾಪೇನ ಮಮ ಲೋಕಂ ಸ ಗಚ್ಛತಿ ॥ ೧೧೯ ॥

---

೧೧೫. ನನ್ನ ಭಕ್ತಿಯಲ್ಲಿ ನಿರತನಾದವನು, ಅಜೀರ್ಣದಲ್ಲಿ ಪೂಜಿಸಿದ ಪಾಪವನ್ನು ಯಾವುದರಿಂದ ಕಳೆದುಕೊಳ್ಳುವನೋ ಆ, ನನ್ನ ಭಕ್ತರಿಗೆ ಸುಖಕರವಾದ ಪ್ರಾಯಶ್ಚಿತ್ತವನ್ನು ಹೇಳುತ್ತೇನೆ.

೧೧೬–೧೧೮. ಮೂರುದಿನ ಯಾವಕವನ್ನೂ, (ಅಲಸಂದೆಯನ್ನೂ) ಮೂರುದಿನ ಗೆಣಸನ್ನೂ ತಿಂದು ಬಳಿಕ ಮೂರು ದಿನ ಪಾಯಸವನ್ನು ಕುಡಿದು, ಆಮೇಲೆ ಮೂರುದಿನ ಹುರಿಹಿಟ್ಟನ್ನು ತಿಂದು ಅನಂತರ ಮೂರುದಿನ ಆಹಾರವಿಲ್ಲದೆ ವಾಯುವನ್ನು ಸೇವಿಸುತ್ತ, ಮೂರುರಾತ್ರಿಗಳು ಬಯಲಲ್ಲಿ ಹಾಸಿಗೆ ಹೊದಿಕೆಗಳಿಲ್ಲದೆ ಮಲಗಿದ್ದು, ಕಡೆಯದಿನ ಬೆಳಗಿನ ಜಾವದಲ್ಲೆದ್ದು, ಹಲ್ಲನ್ನುಜ್ಜಿ, ದೇಹಪರಿಶೋಧಕವಾದ ಪಂಚಗವ್ಯವನ್ನು ಕುಡಿಯಬೇಕು.

೧೧೯. ಹೀಗೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವವನು ಪಾಪವನ್ನು ಅಂಟಿಸಿಕೊಳ್ಳದೆ ನನ್ನ ಲೋಕವನ್ನು ಸೇರುವನು.

---

* ಪಾವಕಾಹಾರೋ.

ಆಖ್ಯಾನಾನಾಂ ಮಹಾಖ್ಯಾನಂ ತಪಸಾಂ ಚ ಪರಂ ತಪಃ ।
ಅತ್ರಾಹಂ ಕೀರ್ತಯಿಷ್ಯಾಮಿ ಬ್ರಾಹ್ಮಣೇಭ್ಯೋ ಮಹೇಶ್ವರಿ ॥ ೧೨೦ ॥

ಏಷ ಧರ್ಮಶ್ಚ ಕೀರ್ತಿಶ್ಚ ಆಚಾರಾಣಾಂ ಮಹೌಜಸಾಂ ।
ಗುಣಾನಾಂ ಚ ಪರಂ ಶ್ರೇಷ್ಠಂ ಋತೀನಾಂ ಚ ಮಹಾಋತಿಃ ॥ ೧೨೧ ॥

ಯ ಏತತ್ಪಠತೇ ನಿತ್ಯಂ ಕಲ್ಯಮುತ್ಥಾಯ ಮಾನವಃ ।
ಸ ಪಿತೄನ್ತಾರಯೇಜ್ಜಂತುರ್ದಶ ಪೂರ್ವಾನ್ದಶಾಪರಾನ್ ॥ ೧೨೨ ॥

ಆರೋಗ್ಯಾಣಾಂ ಮಹಾರೋಗ್ಯಂ ಮಂಗಲಾನಾಂ ತು ಮಂಗಲಂ ।
ರತ್ನಾನಾಂ ಪರಮಂ ರತ್ನಂ ಸರ್ವಪಾಪಪ್ರಣಾಶನಂ ॥ ೧೨೩ ॥

ಯಸ್ತು ಭಾಗವತೋ ನಿತ್ಯಂ ಪಠತೇ ಚ ದೃಢವ್ರತಃ ।
ಕೃತ್ವಾ ಸರ್ವಾಪರಾಧಾನಿ ನ ಸ ಪಾಪೇನ ಲಿಪ್ಯತೇ ॥ ೧೨೪ ॥

---

೧೨೦. ಮಹೇಶ್ವರಿ, ಚರಿತ್ರೆಗಳಲ್ಲಿ ಮಹಾಚರಿತ್ರೆಯನ್ನೂ, ತಪಸ್ಸುಗಳಲ್ಲಿ ಪರಮತಪಸ್ಸನ್ನೂ ಇಲ್ಲಿ ಬ್ರಾಹ್ಮರಿಗೋಸ್ಕರ ಹೇಳುತ್ತೇನೆ.

೧೨೧. ಇದು ಧರ್ಮವೂ, ಕೀರ್ತಿಯೂ ಅತ್ಯುಜ್ವಲವಾದ ಆಚಾರಗಳಲ್ಲೂ, ಗುಣಗಳಲ್ಲೂ ಅತಿ ಶ್ರೇಷ್ಠವೂ, ಶುಭಗಳಲ್ಲಿ ಮಹಾಶುಭವೂ ಆಗಿದೆ.

೧೨೨. ನಿತ್ಯವೂ ಬೆಳಗ್ಗೆ ಎದ್ದು ಇದನ್ನು ಹೇಳುವವನು (ಓದುವವನು) ತನ್ನ ಹಿಂದಿನ ಹತ್ತುತಲೆಯುವರನ್ನೂ, ಮುಂದಿನ ಹತ್ತುತಲೆಯುವರನ್ನೂ ಉತ್ತಾರಣಮಾಡುವನು.

೧೨೩–೧೨೪. ಆರೋಗ್ಯಗಳಲ್ಲಿ ಮಹಾರೋಗ್ಯವೂ, ಮಂಗಳಗಳಿಗೆ ಮಂಗಳವೂ, ರತ್ನಗಳಲ್ಲಿ ಪರಮರತ್ನವೂ, ಸರ್ವಪಾಪಗಳನ್ನೂ ಪೂರ್ತಿಯಾಗಿ ನಾಶಗೊಳಿಸುವುದೂ ಆದ ಇದನ್ನು ದೃಢನಿಯಮದಿಂದ ಓದುವ ಅಥವಾ ಹೇಳುವ ಭಾಗವತನು ಸರ್ವಾಪರಾಧಗಳನ್ನು ಮಾಡಿದರೂ ಪಾಪವು ಅವನಿಗೆ ಅಂಟುವುದಿಲ್ಲ

ಏಷ ಜಪ್ಯಃ ಪ್ರಮಾಣಂ ಚ ಸಂಧ್ಯೋಪಾಸನಮೇವ ಚ ।
ಕಲ್ಯಮುತ್ಥಾಯ ಪಠತೇ ಮಮ ಲೋಕಂ ಸ ಗಚ್ಛತಿ ॥ ೧೨೫ ॥

ನ ಪಠೇನ್ಮೂರ್ಖಮಧ್ಯೇ ತು ಕುಶಿಷ್ಯಾಣಾಂ ತಥೈವ ಚ ।
ದದ್ಯಾದ್ಭಾಗವತೇ ಶ್ರೇಷ್ಠೇ ಮಮ ಕರ್ಮಪರಾಯಣೇ ॥ ೧೨೬ ॥

ಏತತ್ತೇ ಕಥಿತಂ ದೇವಿ ಆಚಾರಸ್ಯ ವಿನಿಶ್ಚಯಃ ।
ಪೂರ್ವಂ ತ್ವಯಾ ತು ಯತ್ಪೃಷ್ಟಂ ಕಿಮನ್ಯಚ್ಛ್ರೋತುಮಿಚ್ಛಸಿ ॥ ೧೨೭ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಪ್ರಾಯಶ್ಚಿತ್ತಕರ್ಮಸೂತ್ರಂ ನಾಮ ಷಟ್ತ್ರಿಂಶದಧಿಕಶತತಮೋಽಧ್ಯಾಯಃ

---

೧೨೫. ಇದು ಜಪಿಸತಕ್ಕುದೂ, ಪ್ರಮಾಣವೂ, ಸಂಧ್ಯೋಪಾಸನೆಯೂ ಆಗಿದೆ. ಬೆಳಗ್ಗೆ ಎದ್ದು, ಹೇಳುವವನು(ಓದುವವನು) ನನ್ನ ಲೋಕವನ್ನು ಸೇರುವನು.

೧೨೬. ಇದನ್ನು ಮೂರ್ಖರ ಮಧ್ಯದಲ್ಲಿಯೂ, ಕುತ್ಸಿತರಾದ ಶಿಷ್ಯರಿಗೂ ಹೇಳಕೂಡದು ನನ್ನ ಕರ್ಮಪರಾಯಣನೂ, ಶ್ರೇಷ್ಠನೂ, ಭಾಗವತನೂ ಆದವನಿಗೆ ಹೇಳಬೇಕು.

೧೨೭. ದೇವಿ, ಮೊದಲು ನೀನು ಕೇಳಿದ ಈ ಆಚಾರನಿರ್ಣಯವನ್ನು ಹೇಳಿದ್ದೇನೆ. ಬೇರಾವುದನ್ನು ಕೇಳಲು ಬಯಸುವೆ ?

ಅಧ್ಯಾಯದ ಸಾರಾಂಶ :—

ಶ್ರೀವರಾಹನು ಭೂದೇವಿಗೆ—ಭಗವತ್ಸನ್ನಿಧಿಗೆ ಹೋಗುವಾಗಲೂ, ಪೂಜೆ ಮಾಡುವಾಗಲೂ ಭಗವದ್ಭಕ್ತನಿಗೆ ಸಂಭವಿಸಬಹುದಾದ, ಮೂವತ್ತೆರಡು ಅಪರಾಧಗಳಲ್ಲಿ, ದೀಪವನ್ನು ಮುಟ್ಟಿಯೂ, ಶ್ಮಶಾನಕ್ಕೆ ಹೋಗಿಬಂದೂ ಸರಿಯಾಗಿ ಶುದ್ಧನಾಗದೆ ದೇವಪೂಜೆಯನ್ನು ಮಾಡುವುದೇ ಮೊದಲಾದ ಕೆಲವು ಅಪರಾಧಗಳನ್ನೂ, ಭಕ್ತನಿಗೆ ಅವುಗಳಿಂದ ಆಗುವ ಪಾಪವನ್ನೂ, ಅಧೋಗತಿಯನ್ನು ತಪ್ಪಿಸುವ ಪ್ರಾಯಶ್ಚಿತ್ತಗಳನ್ನೂ ವಿವರವಾಗಿ ಹೇಳುವಲ್ಲಿಗೆ ಶ್ರೀವರಾಹ ಪುರಾಣದಲ್ಲಿ ನೂರಮೂವತ್ತಾರನೆಯ ಅಧ್ಯಾಯ.

|| ಶ್ರೀಃ ||

–x–

ಸಪ್ತತ್ರಿಂಶದಧಿಕಶತತಮೋಽಧ್ಯಾಯಃ

ಅಥ ಗೃಧ್ರಜಂಬೂಕಾಖ್ಯಾನಂ

ತತ್ರ ಆದಿತ್ಯ ವರಪ್ರದಾನಂ

|| ಸೂತ ಉವಾಚ ||

ಶ್ರುತ್ವಾ ತು ವಿಪುಲಂ ಹ್ಯೇತದಪರಾಧವಿಶೋಧನಂ |
ಕರ್ಮ ಭಾಗವತಂ ಶ್ರೇಷ್ಠಂ ಸರ್ವಭಾಗವತಪ್ರಿಯಂ || ೧ ||

ಅಹೋ ಕರ್ಮ ಮಹಾಶ್ರೇಷ್ಠಂ ಭಗವಸ್ತ್ವ ಭಾಷಿತಂ |
ಮಮ ಚೈವ ಪ್ರಿಯಾರ್ಥಾಯ ತವ ಭಕ್ತಸುಖಾವಹಂ || ೨ ||

ಶ್ರುತಂ ಹ್ಯೇವ ಮಹಾಬಾಹೋ ಸರ್ವಧರ್ಮಾರ್ಥಸಾಧಕಂ |
ತವ ಭಕ್ತಸುಖಾರ್ಥಾಯ ತದ್ಭವಾನ್ವಕ್ತುಮರ್ಹತಿ || ೩ ||

ನೂರಮೂವತ್ತೇಳನೆಯ ಅಧ್ಯಾಯ.

ಹದ್ದುನರಿಗಳ ಕಥೆ. ಸೂರ್ಯವರಪ್ರದಾನ.

೧–೪. ಸೂತಮುನಿ—ಭೂದೇವಿಯು, ಶ್ರೀವರಾಹನಿಂದ ಭಾಗವತರೆಲ್ಲರಿಗೂ ಪ್ರಿಯವೂ, ಉತ್ತಮವೂ ಆದ ಭಗವತ್ಕರ್ಮವನ್ನೂ, ವಿಸ್ತಾರವೂ, ಅಪರಾಧಪರಿಹಾರಕವೂ ಆದ ಪ್ರಾಯಶ್ಚಿತ್ತಕರ್ಮವನ್ನೂ ಕೇಳಿ, “ಭಗವಂತನೇ, ಭಾಪು! ನನ್ನ ಸಂತೋಷಕ್ಕಾಗಿ ನೀನು ಹೇಳಿದ ನಿನ್ನ ಭಕ್ತರಿಗೆ ಸುಖವನ್ನುಂಟುಮಾಡುವ ಬಹು ಶ್ರೇಷ್ಠವಾದ ಕರ್ಮವನ್ನು ಕೇಳಿದುದಾಯಿತು. ಮಹಾಬಾಹುವೇ, ನಿನ್ನ ಭಕ್ತರ ಸುಖಾರ್ಥವಾಗಿ ನಾನು ಈಗ ಕೇಳುವ ಸರ್ವಧರ್ಮಾರ್ಥ

ಕಿಮುಚ್ಯತೇ ವ್ರತಂ ಚೈವ ಶುಭಂ ಕುಬ್ಜಾಮ್ರಕೇ ಮಹತ್ ।
ಕತರಚ್ಚಾಪಿ ತಚ್ಛ್ರೇಷ್ಠಂ ಕ್ಷೇತ್ರಂ ಭಕ್ತಸುಖಾವಹಂ ॥ ೪ ॥

॥ ಶ್ರೀವರಾಹ ಉವಾಚ ॥

ಶೃಣು ಮೇ ಪರಮಂ ಗುಹ್ಯಂ ಯತ್ತ್ವಯಾ ಪೃಚ್ಛಿತಂ ಮಮ ।
ಮಮ ಕ್ಷೇತ್ರಂ ಪರಂ ಚೈವ ಶುದ್ಧಂ ಭಾಗವತಪ್ರಿಯಂ ॥ ೫ ॥

ಪರಂ ಕೋಕಾಮುಖಂ ಸ್ಥಾನಂ ತಥಾ ಕುಬ್ಜಾಮ್ರಕಂ ಪರಂ ।
ಪರಂ ಸೌಕರವಂ ಸ್ಥಾನಂ ಸರ್ವಸಂಸಾರಮೋಕ್ಷಣಂ ॥ ೬ ॥

ಯತ್ರ ಸಂಸ್ಥಾ ಚ ಮೇ ದೇವಿ ಹುದ್ಧೃತಾಸಿ ರಸಾತಲಾತ್ ।
ಯತ್ರ ಭಾಗೀರಥೀ ಗಂಗಾ ಮಮ ಸೌಕರವೇ ಸ್ಥಿತಾ ॥ ೭ ॥

ಸಾಧಕವಾದ ಈ ವಿಚಾರವನ್ನು ನೀನು ಹೇಳಬೇಕು. ಕುಬ್ಜಾಮ್ರಕ(ಕ್ಷೇತ್ರ)ದಲ್ಲಿ ಮಾಡಬೇಕಾದ ಶುಭವಾದ ಮಹಾವ್ರತವಾವುದು ? ಭಕ್ತರಿಗೆ ಸುಖಕರವಾದ ಉತ್ತಮಕ್ಷೇತ್ರವಾವುದು ? ” ಎಂದಳು.

೫. ಶ್ರೀವರಾಹ—ದೇವಿ, ನನ್ನನ್ನು ಕೇಳಿದ ಅತಿರಹಸ್ಯವನ್ನು ಎಂದರೆ ಶುದ್ಧವು, ಭಾಗವತರಿಗೆ ಪ್ರಿಯವೂ, ಅತ್ಯುತ್ತಮವೂ ಆದ ನನ್ನ ಕ್ಷೇತ್ರವಾವುದೆಂಬುದನ್ನು ಹೇಳುತ್ತೇನೆ.

೬–೭. ಕೋಕಾಮುಖಕ್ಷೇತ್ರವೂ, ಕುಬ್ಜಾಮ್ರಕಕ್ಷೇತ್ರವೂ ಉತ್ತಮವಾದುವು. ನನ್ನ ದೇವಿ, ರಸಾತಲದಿಂದ ನಾನು ನಿನ್ನನ್ನು ಎಲ್ಲಿ ಉದ್ಧರಿಸಿದೆನೋ, ಎಲ್ಲಿ ಭಾಗೀರಥಿಯಾದ ಗಂಗೆಯಿರುವಳೋ ಆ ಈ ನನ್ನ ಸೌಕರವ ಅಥವಾ ವಾರಾಹಕ್ಷೇತ್ರವು ಅತ್ಯುತ್ತಮವಾದುದು.

|| ಧರೋವಾಚ ||

ಕೇಷು ಲೋಕೇಷು ಯಾಂತೀಶ ಸೌಕರೇಯೇ ಮೃತಾಃ ಪ್ರಭೋ |
ಕಿಂವಾ ಪುಣ್ಯಂ ಭವೇತ್ತತ್ರ ಸ್ನಾತಸ್ಯ ಪಿಬತಸ್ತಥಾ || ೮ ||

ಕತಿ ತೀರ್ಥಾನಿ ಪದ್ಮಾಕ್ಷ ಕ್ಷೇತ್ರೇ ಸೌಕರವೇ ತವ |
ಧರ್ಮಸಂಸ್ಥಾಪನಾರ್ಥಾಯ ತದ್ವಿಷ್ಣೋ ವಕ್ತುಮರ್ಹಸಿ || ೯ ||

|| ಶ್ರೀವರಾಹ ಉವಾಚ ||

ಶೃಣು ತತ್ವೇನ ಮೇ ದೇವಿ ಯತ್ತ್ವಂ ಸಂಪರಿಪೃಚ್ಛಸಿ |
ಯಾಂ ಗತಿಂ ತೇ ಪ್ರಪದ್ಯಂತೇ ನರಾಸ್ಸೌಕರವೇ ಮೃತಾಃ || ೧೦ ||

ಯತ್ರ ಸ್ನಾತಸ್ಯ ಯತ್ಪುಣ್ಯಂ ಗತಸ್ಯ ಚ ಮೃತಸ್ಯ ಚ |
ಯತ್ರ ಯಾನಿ ಚ ತೀರ್ಥಾನಿ ಮಮ ಸಂಸ್ಥಾನಸಂಸ್ಥಿತಾಃ || ೧೧ ||

ಶೃಣು ಪುಣ್ಯಂ ಮಹಾಭಾಗೇ ಮಮ ಕ್ಷೇತ್ರೇಷು ಸುಂದರಿ |
ಪ್ರಾಪ್ನುವಂತಿ ಮಹಾಭಾಗೇ ಗತ್ವಾ ಸೌಕರವಂ ಪ್ರತಿ || ೧೨ ||

---

೮ ಭೂದೇವಿ—ಈಶನೇ, ಪ್ರಭುವೇ. ಸೌಕರ(ವಾರಾಹ)ಕ್ಷೇತ್ರದಲ್ಲಿ ಮೃತರಾದವರು ಯಾವ ಲೋಕಗಳಿಗೆ ಹೋಗುವರು? ಈ ಕ್ಷೇತ್ರತೀರ್ಥದಲ್ಲಿ ಸ್ನಾನಮಾಡಿದವಂಗೂ, ಪಾನಮಾಡಿದವರಿಗೂ ಯಾವ ಪುಣ್ಯವುಂಟಾಗುವುದು ?

೯. ಕಮಲಾಕ್ಷಾ, ನಿನ್ನ ವಾರಾಹಕ್ಷೇತ್ರದಲ್ಲಿ ಎಷ್ಟು ತೀರ್ಥಗಳಿವೆ ? ವಿಷ್ಣುವೇ, ಧರ್ಮವನ್ನು ನೆಲೆಗೊಳಿಸುವುದಕ್ಕಾಗಿ ಇದನ್ನು ನೀನು ಹೇಳಬೇಕು.

೧೦–೧೧. ಶ್ರೀವರಾಹ—ನನ್ನ ದೇವಿ, ನೀನು ಪ್ರಶ್ನಿಸಿದ ಸೌಕರಕ್ಷೇತ್ರದಲ್ಲಿ ಮೃತರಾದವರು ಯಾವ ಗತಿಯನ್ನು ಪಡೆಯುವರು, ನನ್ನ ಕ್ಷೇತ್ರದಲ್ಲಿ ಎಲ್ಲಿ ಯಾವ ತೀರ್ಥಗಳಿವೆ. ಅವುಗಳಲ್ಲಿ ಯಾವ ತೀರ್ಥಕ್ಕೆ ಹೋದವರಿಗೆ ಮತ್ತು ಯಾವ ತೀರ್ಥದಲ್ಲಿ ಮೃತರಾದವರಿಗೆ ಯಾವ ಯಾವ ಪುಣ್ಯವುಂಟಾಗುವುದು ಎಂಬುದನ್ನು ನಿಜವಾಗಿ ಹೇಳುತ್ತೇನೆ. ಕೇಳು.

೧೨. ಸುಂದರಿ, ಮಹಾಭಾಗ್ಯೇ, ನನ್ನ ಕ್ಷೇತ್ರಗಳಲ್ಲಿ ಸೌಕರಕ್ಷೇತ್ರಕ್ಕೆ ಬಂದು(ಹೋಗಿ), ಭಕ್ತರು ಪಡೆಯುವ ಪುಣ್ಯವನ್ನು ಕೇಳು.

ದಶ ಪೂರ್ವಾಪರಾಶ್ಚಾಪಿ ಅಪರೇ ಸಪ್ತ ಪಂಚ ಚ ।
ಸ್ವರ್ಗಂ ಗಚ್ಛಂತಿ ಪುರುಷಾಸ್ತೇಷಾಂ ಯೇ ತತ್ರ ವೈ ಮೃತಾಃ ॥ ೧೩ ॥

ಗಮನಾದೇವ ಸುಶ್ರೋಣಿ ಮುಖಸ್ಯ ಮಮ ದರ್ಶನಾತ್ ।
ಸಪ್ತಜನ್ಮಾಂತರೇ ಭದ್ರೇ ಜಾಯತೇ ವಿಪುಲೇ ಕುಲೇ ॥ ೧೪ ॥

ಧನಧಾನ್ಯಸಮೃದ್ಧೇ ಚ ರೂಪವಾನ್ಗುಣವಾನ್ಶುಚಿಃ ।
ಮದ್ಭಕ್ತಶ್ಚೈವ ಜಾಯೇತ ಮಮ ಕರ್ಮಪರಾಯಣಃ ॥ ೧೫ ॥

ಏವಂ ವೈ ಮಾನುಷೋ ಭೂತ್ವಾ ಅಪರಾಧವಿವರ್ಜಿತಃ ।
ಗಮನಂ ತಸ್ಯ ಕ್ಷೇತ್ರಸ್ಯ ಮರಣಂ ನಾತ್ರ ಕಾರಣಂ ॥ ೧೬ ॥

ಯೇ ಮೃತಾಸ್ತಸ್ಯ ಕ್ಷೇತ್ರಸ್ಯ ಸೌಕರಸ್ಯ ಪ್ರಭಾವತಃ ।
ಶಂಖಚಕ್ರಗದಾಪದ್ಮಧನುರ್ಹಸ್ತಾಶ್ಚತುರ್ಭುಜಾಃ ।
ತ್ಯಕ್ತ್ವಾ ಕಲೇವರಂ ತೂರ್ಣಂ ಶ್ವೇತದ್ವೀಪಂ ಪ್ರಯಾಂತಿ ತೇ ॥ ೧೭ ॥

---

೧೩. ಸೌಕರಕ್ಷೇತ್ರದಲ್ಲಿ ಮೃತರಾದವರ ವಂಶದ ಹಿಂದಿನ ಮತ್ತು ಮುಂದಿನ ಹತ್ತು ತಲೆಯವರೂ ಬೇರೆ ಹನ್ನೆರಡು ತಲೆಯವರೂ ಸ್ವರ್ಗಕ್ಕೆ ಹೋಗುವರು.

೧೪–೧೬. ಭದ್ರೇ, ಸುಶ್ರೋಣಿ, ಸೌಕರಕ್ಷೇತ್ರಕ್ಕೆ ಬಂದು (ಹೋಗಿ), ನನ್ನ ಮುಖದರ್ಶನವನ್ನು ಮಾಡಿದ ಮಾತ್ರದಲ್ಲೇ ಮನುಷ್ಯನು ಮುಂದಿನ ಏಳು ಜನ್ಮಗಳಲ್ಲಿ ದೊಡ್ಡದಾದ ಧನಧಾನ್ಯಸಮೃದ್ಧಿಯುಳ್ಳ ಸದ್ವಂಶದಲ್ಲಿ ಹುಟ್ಟುವನು. ರೂಪವಂತನೂ, ಗುಣವಂತನೂ, ಪರಿಶುದ್ಧನೂ, ನನ್ನ ಭಕ್ತನೂ, ನನ್ನ ಕರ್ಮದಲ್ಲಿ ನಿರತನೂ ಆಗುವನು. ಹೀಗೆ ಸತ್ಪುರುಷನಾಗಿ ಹುಟ್ಟಲು ಸೌಕರಕ್ಷೇತ್ರ ಯಾತ್ರೆಯೇ ಕಾರಣವಾಗುವುದು ಅಲ್ಲಿ ಮರಣವಾಗಬೇಕಾದುದಿಲ್ಲ.

೧೭. ಸೌಕರಕ್ಷೇತ್ರದಲ್ಲಿ ದೇಹವನ್ನು ತ್ಯಜಿಸಿದವರು ಎಂದರೆ ಮೃತರಾದವರು ಆ ಕ್ಷೇತ್ರದ ಮಹಿಮೆಯಿಂದ ಚತುರ್ಭುಜರಾಗಿ, ಶಂಖಚಕ್ರಗದಾಪದ್ಮಧನುರ್ಧಾರಿಗಳಾಗಿ ಬೇಗನೆ ಶ್ವೇತದ್ವೀಪ (ವೈಕುಂಠ)ವನ್ನು ಸೇರುವರು.

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ತೀರ್ಥೇಷು ತೇಷು ಸ್ನಾತಶ್ಚ ಯಾಂ ಪ್ರಾಪ್ನೋತಿ ಪರಾಂ ಗತಿಂ ॥ ೧೮ ॥

ಚಕ್ರತೀರ್ಥಂ ಮಹಾಭಾಗೇ ಯತ್ರ ಚಕ್ರಂ ಪ್ರತಿಷ್ಠಿತೇ ॥ ೧೯ ॥

ಶೃಣು ಪುಣ್ಯಂ ತತ್ರ ಭದ್ರೇ ಪ್ರಾಪ್ನೋತಿ ಪರಮಂ ನರಃ ।
ಚಕ್ರತೀರ್ಥೇ ನರೋಗತ್ವಾ ನಿಯತೋ ನಿಯತಾಶನಃ ॥ ೨೦ ॥

ವೈಶಾಖದ್ವಾದಶೀಂ ಪ್ರಾಪ್ಯ ಸ್ನಾಯಾದ್ಯೋ ವಿಧಿಪೂರ್ವಕಂ ।
ದಶವರ್ಷಸಹಸ್ರಾಣಿ ದಶವರ್ಷಶತಾನಿ ಚ ॥ ೨೧ ॥

ಧನಧಾನ್ಯಸಮೃದ್ಧೋ ಹಿ ಜಾಯತೇ ವಿಪುಲೇ ಕುಲೇ ।
ಮದ್ಭಕ್ತಶ್ಚಾಪಿ ಜಾಯೇತ ಮಮ ಕರ್ಮಪರಾಯಣಃ ॥ ೨೨ ॥

ಅಪರಾಧಂ ವರ್ಜಯತಿ ದೀಕ್ಷಿತಶ್ಚೈವ ಜಾಯತೇ ।
ಭೂತ್ವಾ ವೈ ಮಾನುಷಸ್ತತ್ರ ತೀರ್ಥೇ ಸಂಸಾರಸಾಗರಂ ॥ ೨೩ ॥

೧೮–೧೯. ವಸುಂಧರೇ, ಅಲ್ಲಿನ ತೀರ್ಥಗಳಲ್ಲಿ ಸ್ನಾನಮಾಡಿದವನು ಯಾವ ಪರಗತಿಯನ್ನು ಪಡೆಯುವನೆಂಬ ಬೇರೆಯವಿಚಾರವನ್ನೂ ನಿನಗೆ ಹೇಳು ತ್ತೇನೆ ಕೇಳು. ಮಹಾಭಾಗ್ಯೇ, ಅಲ್ಲಿ ನನ್ನ ಚಕ್ರವಿರುವ ಚಕ್ರತೀರ್ಥವೆಂಬು ದೊಂದಿದೆ.

೨೦–೨೪. ಭದ್ರೇ, ಆ ಚಕ್ರತೀರ್ಥಕ್ಕೆ ಹೋದವನು ಪರಮ ಪುಣ್ಯವನ್ನು ಪಡೆಯುವನು. ಅಲ್ಲಿ ಆಹಾರವ್ಯವಹಾರಗಳಲ್ಲಿ ನಿಯಮವುಳ್ಳವನಾಗಿದ್ದು, ವೈಶಾಖ ಶುದ್ಧ ದ್ವಾದಶಿಯ ದಿನ ಆ ತೀರ್ಥದಲ್ಲಿ ವಿಧಿಪೂರ್ವಕವಾಗಿ ಸ್ನಾನ ಮಾಡುವವನು ಮುಂದೆ ದೊಡ್ಡದಾದ ವಂಶದಲ್ಲಿ ಹುಟ್ಟಿ, ಹನ್ನೊಂದುಸಾವಿರ ವರ್ಷಕಾಲ ಧನಧಾನ್ಯಸಮೃದ್ಧನೂ, ನನ್ನ ಭಕ್ತನೂ, ಕರ್ಮನಿರತನೂ, ದೋಷ ರಹಿತನೂ, ದೀಕ್ಷಿತನೂ ಆಗಿರುವನು. ಕೃತಕೃತ್ಯನು. ಆ ತೀರ್ಥದಲ್ಲಿ ಮೃತನಾಗಿ, ಸಂಸಾರಸಾಗರವನ್ನು ದಾಟಿ, ಚತುರ್ಭುಜನೂ, ಶಂಖಚಕ್ರಗದಾ

ತೀರ್ಥೇ ಚಕ್ರಗದಾಶಂಖಪದ್ಮಪಾಣಿಶ್ಚತುರ್ಭುಜಃ ।
ಮಮ ರೂಪಧರಃ ಶ್ರೀಮಾನ್ಮಮ ಲೋಕೇ ಮಹೀಯತೇ ।
ಚಕ್ರತೀರ್ಥೇ ವಿಶಾಲಾಕ್ಷಿ ಮರಣೇ ಕೃತಕೃತ್ಯತಃ ॥ ೨೪ ॥

ಏತಚ್ಛ್ರುತ್ವಾ ವಚಸ್ತಸ್ಯ ಶ್ರೋತುಕಾಮಾ ವಸುಂಧರಾ ।
ಶಿರಸ್ಯಂಜಲಿಮಾಧಾಯ ಶ್ಲಕ್ಷ್ಣಮೇತದುವಾಚ ಹ ॥ ೨೫ ॥

ತತ್ರ ಸೌಕರವೇ ತೀರ್ಥೇ ಚಂದ್ರಮಾಸ್ತ್ವಾಮತೋಷಯತ್ ।
ಏತದಾಚಕ್ಷ್ವ ತತ್ತ್ವೇನ ಪರಂ ಕೌತೂಹಲಂ ಹಿ ಮೇ ॥ ೨೬ ॥

ವಸುಧಾಯಾ ವಚಃ ಶ್ರುತ್ವಾ ವಿಷ್ಣುರ್ಮಾಯಾಕರಂಡಕಃ ।
ಉವಾಚ ವಾಕ್ಯಂ ಮೇದಿನ್ಯಾಃ ಮೇಘದುಂದುಭಿನಿಸ್ವನಃ ॥ ೨೭ ॥

ಶೃಣು ಭೂಮೇ ಪ್ರಯತ್ನೇನ ಕಥ್ಯಮಾನಂ ಮಯಾನಘೇ ।
ತಸ್ಯ ವೈಕಾರಣಂ ಯೇನ ತೇನ ಚಾರಾಧಿತೋಽಸ್ಮ್ಯಹಂ ॥ ೨೮ ॥

ಪದ್ಮಹಸ್ತನೂ, ನನ್ನ ರೂಪವನ್ನು ಧರಿಸಿದವನೂ, ಶ್ರೀಮಂತನೂ ಆಗಿ ನನ್ನ ಲೋಕದಲ್ಲಿ ವಾಸಿಸುವನು.

೨೫-೨೬. ಭೂದೇವಿಯು, ಶ್ರೀವರಾಹನು ಹೇಳಿದ ಈ ಮಾತನ್ನು ಕೇಳಿ, ಇನ್ನೂ ಕೇಳಲಿಷ್ಟವುಳ್ಳವಳಾಗಿ ತಲೆಯಮೇಲೆ ಕೈಮುಗಿದುಕೊಂಡು ವಂದಿಸಿ, ಮೃದುವಾದ ಮಾತಿನಿಂದ "ಆ ಸೌಕರತೀರ್ಥದಲ್ಲಿ ಚಂದ್ರನು ನಿನ್ನನ್ನು ಸಂತೋಷಪಡಿಸಿದನಲ್ಲವೆ! ಆ ವಿಚಾರವನ್ನು ಸರಿಯಾಗಿ ಹೇಳು. ನನಗೆ ಅತಿ ಕುತೂಹಲವಾಗಿದೆ" ಎಂದಳು.

೨೭. ಭೂದೇವಿಯ ಈ ಮಾತನ್ನು ಕೇಳಿ, ಮಾಯೆಯ ಭರಣಿಯಾದ ವಿಷ್ಣುವು, ಮೇಘಭೇರಿಗಳ ಗಂಭೀರಧ್ವನಿಯಿಂದ ಆಕೆಗೆ ಮುಂದಿನ ಮಾತನ್ನು ಹೇಳಿದನು.

೨೮. "ಪಾಪರಹಿತೇ, ಭೂಮೀ, ಆ ಚಂದ್ರನು ನನ್ನನ್ನು ಆರಾಧಿಸುವುದಕ್ಕೆ ಕಾರಣವೇನೆಂದು ನಾನು ಹೇಳುವುದನ್ನು ಕೇಳು.

ತಸ್ಯ ಪ್ರೀತೋಽಸ್ಮ್ಯಹಂ ದೇವಿ ವಿಶುದ್ಧೇನಾಂತರಾತ್ಮನಾ ।
ದರ್ಶಿತಶ್ಚ ಮಯಾಽಽತ್ಮಾ ಯೋ ಹಿ ದೇವೇಷು ದುರ್ಲಭಃ ॥ ೨೯ ॥

ರೂಪಂ ಸೋಮೋನ ತದ್ದೃಷ್ಟ್ವಾ ವಿಸಂಜ್ಞಸ್ತದನಂತರಂ ।
ಮಾಂ ಸ ದ್ರಷ್ಟುಂ ನ ಶಕ್ನೋತಿ ಮಮ ತೇಜಃಪ್ರಮೋಹಿತಃ ॥ ೩೦ ॥

ತತೋ ನಿಮೀಲಿತಾಕ್ಷೇಣ ಕೃತ್ವಾ ಶಿರಸಿ ಚಾಂಜಲಿಂ ।
ನ ಶಕ್ನೋತಿ ತಥಾ ವಕ್ತುಂ ಭೀರುಸ್ಸಂತ್ರಸ್ತಲೋಚನಃ ॥ ೩೧ ॥

ಏವಮೇತಂ ವಿಚೇಷ್ಟಂತಂ ಬ್ರಾಹ್ಮಣಾನಾಮಧೀಶ್ವರಂ ।
ವಾಣೀಂ ಸೂಕ್ಷ್ಮಾಂ ಸಮಾದಾಯ ಸ ಸೋಮೋ ಚೋದಿತೋ ಮಯಾ ॥
॥ ೩೨ ॥

ಕಿಂ ವಾ ಫಲಂ ಸಮುದ್ದಿಶ್ಯ ತಪ್ಯಸೇ ಸುಮಹತ್ತಪಃ ।
ಬ್ರೂಹಿ ತತ್ತ್ವೇನ ಮೇ ಸೋಮ ಯತ್ತೇ ಮನಸಿ ವರ್ತತೇ ॥ ೩೩ ॥

---

೨೯. ದೇವಿ, ನಾನು ಚಂದ್ರನಿಗೆ ಅವನ ಪರಿಶುದ್ಧವಾದ ಮನಸ್ಸಿನಿಂದ ಒಲಿದು, ದೇವತೆಗಳಿಗೂ ದುರ್ಲಭವಾದ ನನ್ನ ಸ್ವರೂಪವನ್ನು ಕಾಣಿಸಿದೆನು.

೩೦. ಚಂದ್ರನು ಆ ನನ್ನ ರೂಪವನ್ನು ನೋಡಿ, ಪ್ರಜ್ಞೆತಪ್ಪಿದವನಾಗಿಯೂ, ನನ್ನ ತೇಜಸ್ಸಿನಿಂದ ಮೋಹಿತನಾಗಿಯೂ, ನನ್ನನ್ನು ನೋಡಲು ಶಕ್ತಿಯಿಲ್ಲದವನಾದನು.

೩೧. ಹೆದರಿ ನಡುಗುತ್ತಿರುವ ಕಣ್ಣುಳ್ಳವನಾಗಿ ಬಳಿಕ ಕಣ್ಣನ್ನು ಮುಚ್ಚಿಕೊಂಡು ತಲೆಯಮೇಲೆ ಕೈಮುಗಿದುಕೊಂಡು (ನಮಸ್ಕರಿಸಿ), ಆ ಮಾತನಾಡಲೂ ಆರದೆ ಇದ್ದನು.

೩೨–೩೩. ಹಾಗೆ ನಡೆಯುತ್ತಿದ್ದ ದ್ವಿಜರಾಜನಾದ ಆ ಚಂದ್ರನಿಗೆ ನಾನು ಸಣ್ಣದನಿಯಿಂದ, "ಸೋಮನೇ, ಯಾವ ಫಲವನ್ನು ಬಯಸಿ ಮಹಾತಪಸ್ಸನ್ನು ಮಾಡುತ್ತೀಯೇ? ನನಗೆ ನಿಜವಾಗಿ ಹೇಳು. ನಿನ್ನ ಮನಸ್ಸಿನಲ್ಲಿರುವು

ಸರ್ವಂ ಸಂಪಾದಯಿಷ್ಯಾಮಿ ಪ್ರಸಾದಾನ್ನ ಚ ಸಂಶಯಃ ॥ ೩೪ ॥

ಮಮ ವಾಕ್ಯಂ ತತಃ ಶ್ರುತ್ವಾ ಗ್ರಹಾಣಾಂ ಪರಮೇಶ್ವರಃ ।
ಉವಾಚ ಮಧುರಂ ವಾಕ್ಯಂ ಸೋಮತೀರ್ಥಮವಸ್ಥಿತಃ ॥ ೩೫ ॥

ಭಗವನ್ಯದಿ ತುಷ್ಟೋಽಸಿ ಮಮ ಚಾಂತ್ರಾಗತಃ ಪ್ರಭೋ ।
ಯೋಗನಾಥೋ ಜಗಚ್ಛ್ರೇಷ್ಠಃ ಸರ್ವಯೋಗೀಶ್ವರೇಶ್ವರಃ ॥ ೩೬ ॥

ಯಾವಲ್ಲೋಕಾ ಧರಿಷ್ಯಂತಿ ತಾವತ್ತ್ವಯಿ ಜನಾರ್ದನ ।
ಅತುಲಾ ತ್ವಯಿ ಮೇ ಭಕ್ತಿರ್ಭವೇನ್ನಿತ್ಯಂ ಸುನಿಶ್ಚಲಾ ॥ ೩೭ ॥

ಯಚ್ಚಾಪಿ ಮಮ ತದ್ರೂಪಂ ತ್ವಯಾ ಸಂಸ್ಥಾಪಿತಂ ಪ್ರಭೋ ।
ಸಪ್ತದ್ವೀಪೇಷು ದೃಶ್ಯೇತ ತತ್ರ ತತ್ರೈವ ಸಂಸ್ಥಿತಂ ॥ ೩೮ ॥

ದೆಲ್ಲವನ್ನೂ ನಾನು ಅನುಗ್ರಹದಿಂದ ನಿನಗೆ ಒದಗಿಸಿಕೊಡುವೆನು. ಸಂದೇಹ ವಿಲ್ಲ" ಎಂದು ಹೇಳಿದೆನು

೩೫. ಸೋಮತೀರ್ಥದಲ್ಲಿದ್ದ, ಗ್ರಹಗಳಿಗೆ ಮಹಾರಾಜನಾದ ಆ ಚಂದ್ರನು ನನ್ನ ಮಾತನ್ನು ಕೇಳಿ, ಮುಂದಿನಂತೆ ಇಂಪಾಗಿ ನುಡಿದನು.—

೩೬–೩೭ "ಭಗವಂತನೇ, ಪ್ರಭುವೇ, ಜನಾರ್ದನಾ, ಯೋಗನಾಥನೂ, ಜಗತ್ತಿಗೇ ಶ್ರೇಷ್ಠನೂ, ಸರ್ವಯೋಗೀಶ್ವರನೂ, ಈಶ್ವರನೂ ಆದ ನೀನು ನನಗೆ ತೃಪ್ತನಾಗಿ ಒಲಿದು, ನನ್ನ ಹತ್ತಿರ ಬಂದಿರುವೆಯಾದರೆ, ಲೋಕಗಳಿರುವವರೆಗೂ ನಿನ್ನಲ್ಲಿ ನನಗೆ ಅತಿದೃಢವೂ, ಅಸದೃಶವೂ ಆದ ಭಕ್ತಿಯು ಯಾವಾಗಲೂ ಇರುವುದಾಗಲಿ.

೩೮. ಪ್ರಭುವೇ, ನಿನ್ನಿಂದ ಸ್ಥಾಪಿತವಾಗಿ, ಸಪ್ತದ್ವೀಪಗಳಲ್ಲೂ ಕಾಣಿಸುತ್ತಿರುವ ನನ್ನ ಆ ರೂಪವು ಅಲ್ಲಲ್ಲೇ ಇರುವುದಾಗಲಿ.

ಸೋಮ ಇತ್ಯೇವ ಯಜ್ಞೇಷು ಪಿಬಂತು ಮಮ ಬ್ರಾಹ್ಮಣಾಃ ।
ಗತಿಃ ಪಾರಮಿಕಾ ತೇಷಾಂ ದಿವ್ಯಾ ವಿಷ್ಣೋ ಭವೇದ್ಯಥಾ ॥ ೩೯ ॥

ಕ್ಷೀಣಸ್ತತ್ರ ತ್ವಮಾವಸ್ಯಾಂ ತತ್ರ ಪಿಂಡಪಿತೃಕ್ರಿಯಾ ।
ಪ್ರವರ್ತತೇ ಯಥಾನ್ಯಾಯಂ ಭವೇಯಂ ಸೌಮ್ಯದರ್ಶನಃ ॥ ೪೦ ॥

ಅಧರ್ಮೇ ಚ ನ ಮೇ ಬುದ್ಧಿರ್ಭವೇದ್ವಿಷ್ಣೋ ಕದಾಚನ ।
ಪತಿತ್ವಂ ಚಾಥ ಗಚ್ಛೇಯಮೋಷಧೀನಾಂ ತಥಾ ಕುರು ॥ ೪೧ ॥

ಯದಿ ತುಷ್ಟೋ ಮಹಾದೇವ ಆದಿಮಧ್ಯಾಂತವರ್ಜಿತಃ
ಮಮ ಚೈವ ಪ್ರಿಯಾರ್ಥಾಯ ಏತನ್ಮೇ ದೀಯತಾಂ ವರಃ ॥ ೪೨ ॥

ತತಸ್ಸೋಮವಚಃ ಶ್ರುತ್ವಾ ತತ್ರೈವಾಂತರ್ಹಿತೋಭವಂ ।
ಏವಂ ತಪ್ತಂ ಮಹಾಭಾಗೇ ತಪಸ್ಸೋಮೇನ ನಿಶ್ಚಯಾತ್ ॥ ೪೩ ॥

---

೩೯. ವಿಷ್ಣುವೇ, ಬ್ರಾಹ್ಮಣರಿಗೆ ದಿವ್ಯವಾದ ಪರಮಗತಿಯುಂಟಾಗುವಂತೆ ಯಜ್ಞಗಳಲ್ಲಿ ಆ ಬ್ರಾಹ್ಮಣರು 'ಸೋಮ' ಎಂದು ನನ್ನನ್ನು ಪಾನಮಾಡಲಿ.

೪೦. ಅಮಾವಾಸ್ಯೆಯಲ್ಲಿ ನಾನು ಕ್ಷೀಣನಾದಾಗ ಪಿಂಡವನ್ನು ಅರ್ಪಿಸುವ ಪಿತೃಕರ್ಮಗಳು ವಿಧ್ಯುಕ್ತವಾಗಿ ನಡೆಯಲಿ. ನಾನು ಸೌಮ್ಯನಾಗಿ ಕಾಣುವಂತಾಗಲಿ.

೪೧. ವಿಷ್ಣುವೇ, ನನಗೆ ಅಧರ್ಮದಲ್ಲಿ ಬುದ್ಧಿಯು ಎಂದಿಗೂ ಆಗದಿರಲಿ. ನಾನು ಓಷಧಿ(ಗಿಡ, ಬಳ್ಳಿ ಮೊದಲಾದುವು)ಗಳಿಗೆ ಪತಿಯಾಗುವಂತೆ ಮಾಡು.

೪೨ ಮಹಾದೇವ, ಆದಿಮಧ್ಯಾಂತಗಳಿಲ್ಲದ ನೀನು ನನಗೆ ಸಂತುಷ್ಟನಾಗಿದ್ದರೆ ನನ್ನ ಹಿತಾರ್ಥವಾಗಿ ಈ ವರವನ್ನು ನನಗೆ ದಯೆಪಾಲಿಸು."

೪೩–೪೪. ಸೋಮನ ಮಾತನ್ನು ಕೇಳಿ, ಬಳಿಕ ನಾನು ಅಲ್ಲೇ ಕಣ್ಮರೆಯಾದೆನು. ಮಹಾಭಾಗ್ಯೇ, ಚಂದ್ರನು ಸೋಮತೀರ್ಥದಲ್ಲಿ ಹೀಗೆ ತಪಸ್ಸನ್ನು

ಪ್ರಾಪ್ತಾ ಚ ಪರಮಾ ಸಿದ್ಧಿಸ್ಸೋಮತೀರ್ಥೇಽನ್ಯದುರ್ಲಭಾ || ೪೪ ||

ಸ್ನಾಯಾದ್ಯಸ್ಸೋಮತೀರ್ಥೇ ತು ಮಮ ಕರ್ಮಪರಾಯಣಃ
ಅಷ್ಟಮೇನ ತು ಭಕ್ತೇನ ಮಮ ಕರ್ಮವಿಧೌ ಸ್ಥಿತಃ |
ಫಲಂ ತಸ್ಯ ಪ್ರವಕ್ಷ್ಯಾಮಿ ಸೋಮತೀರ್ಥೇ ನರಸ್ಯ ಯತ್ || ೪೫ ||

ಯತ್ರ ತಪ್ತಂ ತಪಸ್ತೇನ ಸೋಮೇನ ಸುಮಹಾತ್ಮನಾ |
ಪಂಚವರ್ಷಸಹಸ್ರಾಣಿ ಏಕಪಾದೇನ ತಿಷ್ಠತಾ |
ಪಂಚವರ್ಷಸಹಸ್ರಾಣಿ ತಥೈವೋರ್ಧ್ವಮುಖಸ್ಥಿತಃ || ೪೬ ||

ಏವಮುಗ್ರಂ ತಪಃ ಕೃತ್ವಾ ಕಾಂತಿಮಾನಭವಚ್ಚ ಸಃ |
ಮಮಾಪರಾಧಾನ್ಮುಕ್ತಶ್ಚ ಬ್ರಾಹ್ಮಣಾನಾಂ ಪತಿಸ್ತಥಾ || ೪೭ ||

ಏವಮೇವ ಮಹಾಭಾಗೇ ಸೋಮತೀರ್ಥೇ ಕೃತೋದಕಃ || ೪೮ ||

ಮಾಡಿ, ನಿಜವಾಗಿಯೂ ಬೇರೆಯವರಿಗೆ ದುರ್ಲಭವಾದ ಪರಮಸಿದ್ಧಿಯನ್ನು ಪಡೆದನು.

೪೫. ನನ್ನ ಕರ್ಮದಲ್ಲಿ ನಿರತನಾದ ಯಾರು ನಿತ್ಯವೂ ಬೇಕಾಗುವ ಆಹಾರದಲ್ಲಿ ಎಂಟನೆಯ ಒಂದುಭಾಗವನ್ನು ಮಾತ್ರ ಸೇವಿಸಿ, ನನ್ನ ಕರ್ಮವನ್ನು ಆಚರಿಸುತ್ತ, ಆ ಸೋಮತೀರ್ಥದಲ್ಲಿ ಸ್ನಾನವನ್ನು ಮಾಡುವನೋ ಆ ಮನುಷ್ಯನಿಗಾಗುವ ಫಲವನ್ನು ಹೇಳುತ್ತೇನೆ.

೪೬. ಅಲ್ಲಿ ಆ ಚಂದ್ರನು ಒಂದುಕಾಲಿನಲ್ಲಿ ನಿಂತು, ಐದುಸಾವಿರವರ್ಷ ಕಾಲವೂ ಹಾಗೆಯೇ ಮೇಲ್ಮುಖನಾಗಿ ನಿಂತು ಐದುಸಾವಿರವರ್ಷವೂ ತಪಸ್ಸನ್ನು ಮಾಡಿದನು.

೪೭. ಬ್ರಾಹ್ಮಣರಿಗೊಡೆಯನಾದ ಚಂದ್ರನು ಹೀಗೆ ಉಗ್ರವಾದ ತಪಸ್ಸನ್ನು ಮಾಡಿ, ಅಪರಾಧದಿಂದ ಬಿಡಲ್ಪಟ್ಟವನಾಗಿ ಕಾಂತಿವಂತನೂ ಆದನು.

೪೮–೫೧. ಮಹಾಭಾಗ್ಯೇ, ಸುಂದರವಾದ ಹುಬ್ಬುಳ್ಳವಳೇ, ಕೀರ್ತಿವಂತೇ, ಸೋಮತೀರ್ಥದಲ್ಲಿ ಸ್ನಾನಾದಿಗಳನ್ನು ಮಾಡಿದವನು ಹೀಗೆಯೇ

ತ್ರಿಂಶದ್ವರ್ಷಸಹಸ್ರಾಣಿ ತ್ರಿಂಶದ್ವರ್ಷಶತಾನಿ ಚ ।
ಜಾಯತೇ ಬ್ರಾಹ್ಮಣಸ್ಸುಭ್ರು ವೇದವೇದಾಂಗಪಾರಗಃ ॥ ೪೯ ॥

ದ್ರವ್ಯವಾನ್ಗುಣವಾಂಶ್ಚೈವ ಸಂವಿಭಾಗೀ ಯಶಸ್ವಿನಿ ।
ಮದ್ಭಕ್ತಶ್ಚೈವ ಜಾಯೇತ ಅಪರಾಧವಿವರ್ಜಿತಃ ॥ ೫೦ ॥

ಸ ಏಷ ಬ್ರಾಹ್ಮಣೋ ಭೂತ್ವಾ ಸಂಸಾರಾದ್ವಿಪ್ರಮುಚ್ಯತೇ ॥ ೫೧ ॥

ತಸ್ಯ ಚಿಹ್ನಂ ಪ್ರವಕ್ಷ್ಯಾಮಿ ಸೋಮತೀರ್ಥಸ್ಯ ಸುಂದರಿ ।
ತತ್ತೀರ್ಥಂ ಯೇನ ವಿಜ್ಞೇಯಂ ಮಮ ಮಾರ್ಗಾನುಸಾರಿಣಾ ॥ ೫೨ ॥

ವೈಶಾಖಸ್ಯ ತು ಮಾಸಸ್ಯ ದ್ವಾದಶ್ಯಾಂ ಶುಕ್ಲಪಕ್ಷಕೇ ।
ಪ್ರವೃತ್ತೇ ಚಾಂಧಕಾರೇ ತು ಯತ್ರ ಕಶ್ಚಿನ್ನ ದೃಶ್ಯತೇ ॥ ೫೩ ॥

ಸೋಮೇನ ಚ ವಿನಾ ಭೂಮಿರ್ದೃಶ್ಯತೇ ಚಂದ್ರಸಪ್ರಭಾ ।
ಆಲೋಕಶ್ಚೈವ ದೃಶ್ಯೇತ ಸೋಮಸ್ತತ್ರ ನ ದೃಶ್ಯತೇ ॥ ೫೪ ॥

ಬ್ರಾಹ್ಮಣನಾಗಿ ಜನಿಸಿ, ವೇದವೇದಾಂಗಪಾರಂಗತನೂ, ಐಶ್ವರ್ಯವಂತನೂ, ಗುಣವಂತನೂ, ವಿವೇಕಿಯೂ, ದೋಷರಹಿತನೂ, ನನ್ನ ಭಕ್ತನೂ ಆಗಿ ಮೂವತ್ತು ಮೂರುಸಾವಿರವರ್ಷಕಾಲವಿದ್ದು ಬಳಿಕ ಸಂಸಾರದಿಂದ ವಿಮುಕ್ತನಾಗುವನು.

೫೨. ಸುಂದರಿ, ನನ್ನ ಮಾರ್ಗವನ್ನನುಸರಿಸುವವನು ಆ ಸೋಮತೀರ್ಥವನ್ನು ತಿಳಿದುಕೊಳ್ಳುವುದಕ್ಕೆ ಬೇಕಾದ ಅದರ ಗುರುತನ್ನು ಹೇಳುತ್ತೇನೆ.

೫೩-೫೪. ವೈಶಾಖಮಾಸದ ಶುಕ್ಲಪಕ್ಷದ ದ್ವಾದಶಿಯದಿನ ರಾತ್ರಿ ಕತ್ತಲೆಯಾಗುತ್ತಲೂ, ಅಲ್ಲಿ ಯಾರೂ (ಯಾವುದೂ) ಕಾಣಿಸುವುದಿಲ್ಲ. ಚಂದ್ರನಿಲ್ಲದೆ ಚಂದ್ರನಿಗೆ ಸಮವಾದ ಕಾಂತಿಯುಳ್ಳ ಭೂಮಿಯು ಕಾಣಿಸುತ್ತದೆ. ಚಂದ್ರನ ಬೆಳಕೂ ಕಾಣಿಸುತ್ತದೆ. ಆದರೆ ಅಲ್ಲಿ ಚಂದ್ರನು ಕಾಣಿಸುವುದೇ ಇಲ್ಲ.

ಏವಂ ತ್ವಾಂ ವಚ್ಮಿ ಹೇ ಭದ್ರೇ ಏಷ ವೈ ವಿಸ್ಮಯಃ ಪರಃ ।
ಏತಚ್ಚಿಹ್ನಂ ಮಹಾಭಾಗೇ ಪುಣ್ಯೇ ಸೌಕರವೇ ಮಮ ।
ಸೋಮತೀರ್ಥೇ ವಿಶಾಲಾಕ್ಷೀ ಯೋ ನ ಮುಚ್ಯಂತಿ ಜಂತವಃ ॥ ೫೫ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ಪ್ರಭಾವಮಸ್ಯ ಕ್ಷೇತ್ರಸ್ಯ ವಿಸ್ಮಯಂ ಪರಮಂ ಮಹತ್ ॥ ೫೬ ॥

ಅಕಾಮಾ ತು ಮೃತಾ ತೀರ್ಥೇ ಆತ್ಮನಃ ಕರ್ಮನಿಶ್ಚಯಾತ್ ।
ಮಮ ಕ್ಷೇತ್ರಪ್ರಭಾವೇಣ ಸೃಗಾಲೀ ಮಾನುಷೀ ಭವೇತ್ ॥ ೫೭ ॥

ರಾಜಪುತ್ರೀ ವಿಶಾಲಾಕ್ಷೀ ಶ್ಯಾಮಾ ಸರ್ವಾಂಗಸುಂದರೀ ।
ಗುಣವದ್ರೂಪಸಂಪನ್ನಾ ಚತುಷ್ಷಷ್ಟಿಕಲಾನ್ವಿತಾ ॥ ೫೮ ॥

ತಸ್ಯ ಪೂರ್ವೇಣ ಪಾರ್ಶ್ವೇನ ತೀರ್ಥಂ ಗೃಧ್ರವಟಂ ಸ್ಮೃತಂ ।
ಯತ್ರಾಕಾಮೋ ಮೃತೋ ಗೃಧ್ರೋ ಮಾನುಷತ್ವಮುಪಾಗತಃ ॥ ೫೯ ॥

---

೫೫. ಭದ್ರೇ, ಬಹು ಆಶ್ಚರ್ಯಕರವಾದ ಇದನ್ನು ನಿನಗೆ ಹೇಳುತ್ತಿದ್ದೇನೆ. ಮಹಾಭಾಗ್ಯೇ, ವಿಶಾಲಾಕ್ಷೀ, ಯಾವುದರಲ್ಲಿ ಸ್ನಾನಾದಿಗಳನ್ನು ಮಾಡುವುದರಿಂದ ಜಂತುಗಳು ಸಂಸಾರವಿಮೋಚನೆಯನ್ನು ಪಡೆಯುವುವೋ, ನನ್ನ ಸೌಕರಕ್ಷೇತ್ರದಲ್ಲಿರುವ ಆ ಸೋಮತೀರ್ಥಕ್ಕೆ ಇದೇ ಗುರುತು.

೫೬. ವಸುಂಧರೇ, ಪರಮಾಶ್ಚರ್ಯಕರವಾದ ಆ ಕ್ಷೇತ್ರದ ಮಹಾಮಹಿಮೆಯನ್ನು ಇನ್ನೂ ಹೇಳುತ್ತೇನೆ. ಕೇಳು.

೫೭-೫೮. ಉದ್ದೇಶವಿಲ್ಲದೆ ತನ್ನ ಕರ್ಮವಶದಿಂದ ಅಕಸ್ಮಾತ್ತಾಗಿ ಸೋಮತೀರ್ಥದಲ್ಲಿ ಸತ್ತ ಹೆಣ್ಣುನರಿಯೊಂದು, ನನ್ನ ಕ್ಷೇತ್ರಮಹಿಮೆಯಿಂದ ಮನುಷ್ಯಜನ್ಮದಲ್ಲಿ ರಾಜಪುತ್ರಿಯಾಗಿ ಉದಿಸಿ, ವಿಶಾಲನೇತ್ರೆಯೂ, ಸರ್ವಾಂಗ ಸುಂದರಿಯೂ, ಗುಣರೂಪಸಂಪನ್ನೆಯೂ, ಅರವತ್ತನಾಲ್ಕುಕಲೆಗಳನ್ನು ಅರಿತವಳೂ ಆದ ಯುವತಿಯಾಯಿತು.

೫೯. ಸೋಮತೀರ್ಥಕ್ಕೆ ಪೂರ್ವದಿಕ್ಕಿನಲ್ಲಿ ಗೃಧ್ರವಟವೆಂಬ ತೀರ್ಥವಿದೆ ಅಲ್ಲಿ ಉದ್ದೇಶವಿಲ್ಲದೆ ಅಕಸ್ಮಾತ್ತಾಗಿ ಪ್ರಾಣ ಬಿಟ್ಟ ಹದ್ದು ಮನುಷ್ಯನಾಗಿ ಜನಿಸಿತು.

ವಾಕ್ಯಂ ನಾರಾಯಣಾಚ್ಛ್ರುತ್ವಾ ಧರಣೀ ಶುಭಲಕ್ಷಣಾ ।
ಉವಾಚ ಮಧುರಂ ವಾಕ್ಯಂ ವಿಷ್ಣುಭಕ್ತಸುಖಾವಹಂ ॥ ೬೦ ॥

ಅಹೋ ತೀರ್ಥಪ್ರಭಾವೋ ವೈ ತ್ವಯಾ ಪ್ರೋಕ್ತೋ ಮಹಾನ್ಮಮ
ಯಸ್ಯ ದೇವ ಪ್ರಭಾವೇಣ ತಿರ್ಯಗ್ಯೋನಿತ್ವಮಾಗತೌ ।
ಗೃಧ್ರಶ್ಚೈವ ಸೃಗಾಲೀ ಚ ಪ್ರಾಪ್ತೌ ವೈ ಮಾನುಷೀಂ ತನುಂ ॥ ೬೧ ॥

ಸ್ನಾನೇನ ತತ್ರ ತೀರ್ಥೇ ಚ ಮರಣಾದ್ವಾ ಜನಾರ್ದನ ।
ಕಾಂ ಗತಿಂ ವೈ ಪ್ರಪದ್ಯಂತೇ ತನ್ಮಮಾಚಕ್ಷ್ವ ಕೇಶವ ॥ ೬೨ ॥

ಚಿಹ್ನಂ ಚ ಕೀದೃಶಂ ತೇಷಾಂ *ಜ್ಞಾಯಂತೇ ಯೇನ ತೇ ತಥಾ ।
ಅಕಾಮಾವಪಿ ತೌ ಕ್ಷೇತ್ರೇ ಪ್ರಾಪ್ತೌ ತು ಪರಮಾಂ ಗತಿಂ ॥ ೬೩ ॥

---

೬೦. ಶುಭಲಕ್ಷಣೆಯಾದ ಭೂದೇವಿಯು ನಾರಾಯಣನ ಈ ಮಾತನ್ನು ಕೇಳಿ, ವಿಷ್ಣುಭಕ್ತರಿಗೆ ಸುಖವನ್ನುಂಟುಮಾಡುವ ಇಂಪಾದ ಮುಂದಿನ ಮಾತ ನಾಡಿದಳು.

೬೧ "ದೇವ, ತಿರ್ಯಗ್ಜಂತುಗಳಾಗಿದ್ದ ಹದ್ದೂ, (ಹೆಣ್ಣು) ನರಿಯೂ ಯಾವುದರ ಮಹಿಮೆಯಿಂದ ಮನುಷ್ಯದೇಹವನ್ನು ಪಡೆದುವೋ, ನೀನು ನನಗೆ ಹೇಳಿದ ಆ ತೀರ್ಥದ ಮಹಾಪ್ರಭಾವವು ಆಶ್ಚರ್ಯಕರವಾಗಿದೆ.

೬೨-೬೩. ಜನಾರ್ದನ, ಕೇಶವ, ಆ ತೀರ್ಥದಲ್ಲಿ ಸ್ನಾನಮಾಡುವುದರಿಂದಾಗಲಿ, ಮೃತರಾಗುವುದರಿಂದಾಗಲಿ, ಯಾವ ಗತಿಯನ್ನು ಪಡೆಯುವರೋ ಅದನ್ನು ನನಗೆ ಹೇಳು. ಉದ್ದೇಶವಿಲ್ಲದಿದ್ದರೂ ಆ ಕ್ಷೇತ್ರದಲ್ಲಿ ಅವರು ಏತರಿಂದ ಮೃತರಾಗಿ ಪರಮಗತಿಯನ್ನು ಪಡೆದರು ? ಅವರು ಹಾಗೆ ಉತ್ತಮಗತಿಯನ್ನು ಪಡೆದರೆಂಬುದಕ್ಕೆ ಗುರುತೇನು ?"

---

* ಜಾಯಂತೇ.

ತತೋ ಮಹೀವಚಃ ಶ್ರುತ್ವಾ ವಿಷ್ಣುರ್ಧರ್ಮವಿದಾಂ ವರಃ |
ಉವಾಚ ಮಧುರಂ ವಾಕ್ಯಂ ಧರ್ಮಕಾಮಾಂ ವಸುಂಧರಾಂ ॥ ೬೪ ॥

ಶೃಣು ತತ್ತ್ವೇನ ಮೇ ಭೂಮೇ ಯನ್ಮಾಂ ತ್ವಂ ಪರಿಪೃಚ್ಛಸಿ |
ಉಭೌ ತೌ ಕಾರಣಾದ್ಯಸ್ಮಾತ್ಪ್ರಾಪ್ತೌ ವೈ ಮಾನುಷೀಂ ಗತಿಂ | ॥ ೬೫ ॥

ತಸ್ಮಿನ್ಕಾಲೇ ಹ್ಯತಿಕ್ರಾಂತೇ ಮಮ ಕರ್ಮವಿನಿಶ್ಚಯಾತ್ |
ತ್ರೇತಾಯುಗೇ ಹ್ಯುಪಕ್ರಾಂತೇ ಜ್ಞಾತೇ ಚ ಹ್ಯುಗಸಂಸ್ಥಿತೌ ॥ ೬೬ ॥

ತತ್ರ ರಾಜಾ ಮಹಾಭಾಗಃ ಸ್ವಧರ್ಮಕೃತನಿಶ್ಚಯಃ |
ಬ್ರಹ್ಮದತ್ತೇತಿ ವಿಖ್ಯಾತಃ ಪುರಂ ಕಾಂಪಿಲ್ಲಮಾಸ್ಥಿತಃ ॥ ೬೭ ॥

ತಸ್ಯ ಪುತ್ರೋ ಮಹಾಭಾಗಸ್ಸರ್ವಧರ್ಮೇಷು ನಿಷ್ಠಿತಃ |
ಸೋಮದತ್ತೇತಿ ವಿಖ್ಯಾತಃ ಕುಮಾರಶ್ಶುಭಲಕ್ಷಣಃ ॥ ೬೮ ॥

---

೬೪. ಧರ್ಮಜ್ಞರಲ್ಲಿ ಉತ್ತಮನಾದ ವಿಷ್ಣುವು ಭೂದೇವಿಯ ಈ ಮಾತನ್ನು ಕೇಳಿ, ಧರ್ಮಾಸಕ್ತಳಾದ ಅವಳಿಗೆ ಇಂಪಾಗಿ ಮುಂದಿನ ಮಾತನ್ನು ಹೇಳಿದನು.

೬೫. "ನನ್ನ ಭೂದೇವಿ, ನೀನು ಕೇಳುವ, ಅವರಿಬ್ಬರೂ ಯಾವ ಕಾರಣ ದಿಂದ ಮನುಷ್ಯತ್ವವನ್ನು ಪಡೆದರೆಂಬುದನ್ನು ನಿಜವಾಗಿ ಕೇಳು.

೬೬–೬೭. ನಾನು ಮಾಡಿರುವ ಕಾರ್ಯನಿರ್ಣಯದಂತೆ ಕೃತಯುಗವು ಕಳೆದು ತ್ರೇತಾಯುಗವು ಆರಂಭವಾಗಿ ಯುಗಸ್ಥಿತಿಯು ತಿಳಿಯುವಂತಾಗಲು ಆಗ ಕಾಂಪಿಲ್ಲವೆಂಬ ಪಟ್ಟಣದಲ್ಲಿ ಮಹಾಭಾಗ್ಯಶಾಲಿಯೂ, ಸ್ವಧರ್ಮನಿರತನೂ ಆದ ಬ್ರಹ್ಮದತ್ತನೆಂದು ಪ್ರಸಿದ್ಧನಾದ ದೊರೆಯಿದ್ದನು.

೬೮. ಆ ಬ್ರಹ್ಮದತ್ತನಿಗೆ, ಬಹು ಭಾಗ್ಯಶಾಲಿಯೂ, ಸರ್ವಧರ್ಮಗಳಲ್ಲಿಯೂ ಆಸಕ್ತನೂ, ಶುಭಲಕ್ಷಣನೂ ಆದ ಸೋಮದತ್ತನೆಂಬ ಪ್ರಸಿದ್ಧನಾದ ಮಗನಿದ್ದನು.

ಪಿತ್ರರ್ಥೇ ಮೃಗಯಾಂ ಯಾತೋ ಮೃಗಲಿಪ್ಸುರ್ವನೇ ತದಾ |
ಅರಣ್ಯೇ ಸ ತದಾ ಗತ್ವಾ ವ್ಯಾಘ್ರಸಿಂಹನಿಷೇವಿತೇ || ೬೯ ||

ನ ತತ್ರ ಲಭತೇ ಕಿಂಚಿತ್ಪಿತೃಕಾರ್ಯೇ ನರಾಧಿಪಃ || ೭೦ ||

ಏವಂ ಹಿ ಭ್ರಮತಸ್ತಸ್ಯ ಸೃಗಾಲೀ *ದಕ್ಷಿಣೇ ತಥಾ
÷ಅಂಗಮಧ್ಯೇ ತು ವಿದ್ಧಾ ಸಾ ಸ್ಫುರಂತೀ ಸರ್ವಮಂಗಲಾ |
ತಥಾ ಸಾ ಬಾಣಸಂತಪ್ತಾ ವ್ಯಥಯಾ ಪರಿಪ್ಲುತಾ || ೭೧ ||

ಪೀತ್ವಾ ಸಾ ಸಲಿಲಂ ತತ್ರ ವೃಕ್ಷಂ ಶಾಕೋಟಕಂ ಗತಾ
ಆತಪೇನ ಪರಿಕ್ಲಾಂತಾ ಬಾಣವಿದ್ಧಾತುರಾ ಭೃಶಂ |
ಅಕಾಮಾ ಮುಂಚತೀ ಪ್ರಾಣಾಂಸ್ತೀರ್ಥಂ ಸೋಮಾತ್ಮಕಂ ಪ್ರತಿ || ೭೨ ||

ಏತಸ್ಮಿನ್ನಂತರೇ ಭದ್ರೇ ರಾಜಪುತ್ರಃ ಕ್ಷುಧಾರ್ದಿತಃ |
ಪ್ರಾಪ್ತೋ ಗೃಧ್ರವಟಂ ತೀರ್ಥಂ ವಿಶ್ರಾಮಂ ತತ್ರ ಚಾಕರೋತ್ || ೭೩ ||

೬೯-೭೦. ಆ ಸೋಮದತ್ತನು ಪಿತೃಗಳಿಗಾಗಿ ಮೃಗವನ್ನು ಪಡೆಯ ಬೇಕೆಂದು ಬೇಟೆಗಾಗಿ, ಹುಲಿಸಿಂಹಗಳಿಂದ ಕೂಡಿದ ಕಾಡಿಗೆ ಹೋದನು. ಅಲ್ಲಿ ಅವನಿಗೆ, ಪಿತೃಗಳಿಗೆ ಬೇಕಾದ ಮೃಗವಾವುದೂ ದೊರೆಯಲಿಲ್ಲ.

೭೧-೭೨. ಸರಳೇ, ಹಾಗೆಯೇ ಸುತ್ತುತ್ತಿದ್ದ ಅವನಿಗೆ ಸರ್ವಮಂಗಳ ಸೂಚಕವಾದ ಹೆಣ್ಣುನರಿಯೊಂದು ಕಾಣಿಸಿಕೊಂಡಿತು. ಅವನು ಅದರ ÷ತಲೆಯ ನಡುವೆ ಬಾಣದಿಂದ ಹೊಡೆದನು. ಹಾಗೆ ಬಾಣದಿಂದ ಸಂತಾಪಗೊಂಡು, ದುಃಖದಿಂದ ಕಳವಳಗೊಂಡು ಕದಲುತ್ತ ಬಿಸಿಲಿನಿಂದಲೂ ಬಳಲಿದ ಆ ನರಿಯು ಆ ಸೋಮತೀರ್ಥದಲ್ಲಿ ನೀರನ್ನು ಕುಡಿದು ತಾರೆಯಮರದಡಿಗೆ ಹೋಗಿ, ಪ್ರಾಣ ವನ್ನು ಬಿಟ್ಟಿತು. ಅದಕ್ಕೆ ಅಲ್ಲಿ ಪ್ರಾಣಬಿಡಬೇಕೆಂಬ ಆಸೆಯೇನೂ ಇರಲಿಲ್ಲ.

೭೩. ಭದ್ರೇ, ಈ ನಡುವೆ, ರಾಜಪುತ್ರನಾದ ಸೋಮದತ್ತನು ಹಸಿವಿನಿಂದ ಪೀಡಿತನಾಗಿ, ಗೃಧ್ರವಟತೀರ್ಥಕ್ಕೆ ಹೋಗಿ, ಅಲ್ಲಿ ವಿಶ್ರಮಿಸಿಕೊಂಡನು.

---

* ದಕ್ಷಿಣೇ = ಬಲಗಡೆಯಲ್ಲಿ ಎಂದೂ ಅರ್ಥವಾಗುವುದು.

÷ ಮುಂದೆ ೨೨೨ನೆಯ ಶ್ಲೋಕದಲ್ಲಿ ಶಿರಸಿ (ತಲೆಯಲ್ಲಿ) ಎಂದಿದೆ.

ಅಥ ಪಶ್ಯತಿ ಗೃಧ್ರಂ ಸಃ ವಟಶಾಖಾಂ ಸಮಾಶ್ರಿತಂ ।
ಏಕೇನ ಸ ತು ಬಾಣೇನ ತಥಾ ಗೃಧ್ರೋ ನಿಪಾತಿತಃ ॥ ೭೪ ॥

ಸ ತತ್ರ ಪತಿತೋ ಗೃಧ್ರೋ ವಟಮೂಲೇ ಯಶಸ್ವಿನಿ ।
ಗತಾಸುರ್ನಷ್ಟಸಂಜ್ಞೋ ವೈ ಬಾಣಭಿನ್ನಸ್ತಥಾ ಹೃದಿ ॥ ೭೫ ॥

ತಂ ದೃಷ್ಟ್ವಾ ಪತಿತಂ ಗೃಧ್ರಂ ರಾಜಪುತ್ರಸ್ತುತೋಷ ಹ ॥ ೭೬ ॥

ತಸ್ಯ ಛಿತ್ವಾ ತಥಾ ಪಕ್ಷೌ ಗೃಹೀತ್ವಾ ರಾಜನಂದನಃ ।
ಬಾಣಪಕ್ಷಾನ್ವಿಧಾತುಂ ಚ ಸೋಮುದತ್ತೋ ಗೃಹಾನ್ಯಯೌ ॥ ೭೭ ॥

ಸೋಪಿ ದೀರ್ಘೇಣ ಕಾಲೇನ ಅಕಾಮೋಪಿ ಮೃತಃ ಖಗಃ ।
ಜಾತಃ ಕಲಿಂಗರಾಜಸ್ಯ ಸುತೋ ಗುಣವಿಭೂಷಿತಃ ॥ ೭೮ ॥

ರೂಪವಾನ್ಪಂಡಿತಶ್ಚೈವ ಪ್ರಜಾನಂದಕರಸ್ಸದಾ ।
ತಸ್ಮಿನ್ರಾಜನಿ ನಾಯಾಸಂ ಕೋಪಿ ಕುತ್ರಾಪಿ ವಿಂದತಿ ॥ ೭೯ ॥

---

೭೪. ಬಳಿಕ ಆ ಆಲದ ಮರದ ಕೊಂಬೆಯಲ್ಲಿ ಕುಳಿತಿದ್ದ ಒಂದು ಹದ್ದನ್ನು ಕಂಡನು. ಕೀರ್ತಿವಂತೇ, ಅವನು ಆ ಹದ್ದನ್ನು ಒಂದು ಬಾಣದಿಂದ ಹೊಡೆದು ಕೆಡವಿದನು.

೭೫–೭೬. ಬಾಣದಿಂದ ಎದೆಯೊಡೆದು, ಜ್ಞಾನತಪ್ಪಿ, ಪ್ರಾಣಬಿಟ್ಟ ಆ ಹದ್ದು ಆಲದ ಮರದ ಬುಡದಲ್ಲಿ ಬಿದ್ದಿತು. ಬಿದ್ದುದನ್ನು ಕಂಡು ರಾಜಕುಮಾರನಿಗೆ ಸಂತೋಷವಾಯಿತು.

೭೭. ಬಳಿಕ ರಾಜಕುಮಾರನು ಅದರ ರಕ್ಕೆಗಳನ್ನು ಕತ್ತರಿಸಿ, ಬಾಣಗಳಿಗೆ ಗರಿಗಳಾಗಿ ಮಾಡುವುದಕ್ಕಾಗಿ ತೆಗೆದುಕೊಂಡು ಮನೆಗೆ ಹೊರಟುಹೋದನು.

೭೮–೭೯. ಬಹುಕಾಲ ಬದುಕಿದ್ದು, ಉದ್ದೇಶವಿಲ್ಲದೆ ಅಕಸ್ಮಾತ್ತಾಗಿ ಗೃಧ್ರವಟತೀರ್ಥದಲ್ಲಿ ಸತ್ತ ಆ ಹದ್ದು ಕಳಿಂಗರಾಜನ ಮಗನಾಗಿ ಜನಿಸಿತು. ಆ ರಾಜಕುಮಾರನು, ಗುಣಾಲಂಕೃತನೂ, ಸುಂದರನೂ ಸದಾ ಪ್ರಜಾರಂಜಕನೂ ಆಗಿದ್ದನು. ಅವನು ದೊರೆಯಾಗಿರುವಾಗ ಯಾರೂ ಎಲ್ಲೂ ಯಾವ ವಿಚಾರದಲ್ಲೂ ತೊಂದರೆಪಡುತ್ತಿರಲಿಲ್ಲ.

ಯಾ ಸಾ ಸೃಗಾಲೀ ಸಂಜಜ್ಞೇ ಕಾಂಚೀರಾಜಸ್ಯ ವೈ ಸುತಾ |
ರೂಪಸಂಯುಕ್ತಾ ಗುಣವತೀ ದಕ್ಷಾ ಸರ್ವಾಂಗಸುಂದರೀ ॥ ೮೦ ॥

ಚತುಷ್ಷಷ್ಟಿಕಲಾಯುಕ್ತಾ ಕೋಕಿಲೇವ ಸುಖಸ್ವರಾ ॥ ೮೧ ॥

ಏವಂ ಪ್ರವರ್ತಿತೇ ತತ್ರ ಕಾಂಚೀರಾಜ್ಯೇ ಕಳಿಂಗಕೇ
ಹಾರ್ದಿಕ್ಯಾತ್ಸೌಹೃದಾತ್ಪ್ರೀತಿರನ್ಯೋನ್ಯಕುಲನಿಶ್ಚಯಾತ್ |
ಭೂಮೇ ಮಮ ಪ್ರಸಾದೇನ ಸಂಬಂಧೋಽಜಾಯತ ಸ್ತತಃ ॥ ೮೨ ॥

ಅಥ ದೀರ್ಘೇಣ ಕಾಲೇನ ಕಾಂಚೀರಾಜಸುತಾ ತಥಾ |
ಕಲಿಂಗರಾಜಪುತ್ರೇಣ ವಿಧಿನಾ ತು ವಿವಾಹಿತಾ ॥ ೮೩ ॥

ಕಾಂಚೀರಾಜಸ್ತಯೋಃ ಪ್ರೀತ್ಯಾ ನಾನಾರತ್ನಾನಿ ಚಾದದಾತ್ |
ಭೂಷಣಾನಿ ಚ ದಿವ್ಯಾನಿ ಗಜಾಶ್ವಮಹಿಷೀಃ ಸ್ತ್ರಿಯಃ ॥ ೮೪ ॥

೮೦-೮೧. ಯಾವುದು ಆ ಹೆಣ್ಣುನರಿಯಾಗಿ ಹುಟ್ಟಿದ್ದಿತೋ ಅದು ಕಾಂಚಿರಾಜನ ಮಗಳಾಗಿ ಹುಟ್ಟಿತು. ಆ ರಾಜಪುತ್ರಿಯು ರೂಪವತಿ. ಗುಣವಂತೆ. ಶಕ್ತಳು. ಸರ್ವಾಂಗಸುಂದರಿ. ಅರವತ್ತುನಾಲ್ಕುಕಲೆಗಳನ್ನೂ ಅರಿತವಳು. ಕೋಗಿಲೆಯಂತೆ ಸುಖಕರವಾದ(ಇಂಪಾದ)ದನಿಯುಳ್ಳವಳು.

೮೨-೮೩. ಭೂಮೀ, ಆ ಕಾಂಚೀಕಳಿಂಗರಾಜ್ಯಗಳಲ್ಲಿ ಹೀಗೆ ನಡೆಯುತ್ತಿರಲಾಗಿ ಆ ಇಬ್ಬರು ರಾಜರಿಗೂ ಸ್ನೇಹಸೌಹಾರ್ದಗಳಿಂದ ಪರಸ್ಪರ ಪ್ರೀತಿಯೂ, ನನ್ನ ಅನುಗ್ರಹದಿಂದ ಅನ್ಯೋನ್ಯಕುಲನಿರ್ಣಯಪೂರ್ವಕವಾಗಿ ಸಂಬಂಧವೂ ಉಂಟಾಯಿತು. ಬಹುದಿನಗಳಮೇಲೆ ಕಳಿಂಗರಾಜಪುತ್ರನು ಕಾಂಚೀರಾಜಪುತ್ರಿಯನ್ನು ಶಾಸ್ತ್ರೋಕ್ತವಾಗಿ ವಿವಾಹಮಾಡಿಕೊಂಡನು

೮೪. ಕಂಚಿಯರಾಜನು ಆ ದಂಪತಿಗಳಿಗೆ ಪ್ರೀತಿಯಿಂದ ಬಗೆಬಗೆಯ ರತ್ನಗಳನ್ನೂ, ದಿವ್ಯಾಭರಣಗಳನ್ನೂ, ಆನೆಕುದುರೆಎಮ್ಮೆಗಳನ್ನೂ, ಸ್ತ್ರೀಯರನ್ನೂ ಕೊಟ್ಟನು.

ತತಃ ಕಲಿಂಗರಾಜೋಽಪಿ ಸವಧೂಕಂ ನಿಜಂ ಸುತಂ |
ಆದಾಯ ಸ್ವಗೃಹಂ ಯಾತಸ್ತೇನ ರಾಜ್ಞಾತಿಮಾನಿತಃ || ೮೫ ||

ಏವಂ ಗಚ್ಛತಿ ಕಾಲೇ ವೈ ದಂಪತ್ಯೋಽಸ್ತು ತಯೋಃ ಮಾಣಯೋಃ |
ಅವಿಚ್ಛಿನ್ನಾ ಭವತ್ಪ್ರೀತಿ ರೋಹಿಣೀಚಂದ್ರಯೋರಿವ || ೮೬ ||

ರೇಮತುಸ್ತೌ ವಿಹಾರೇಷು ದೇವತಾಯತನೇಷು ಚ ।
ವನೇ ಚೋಪವನೇ ಚೈವ ಯೇ ಕೇಚಿನ್ನಂದನೋಪಮಾಃ || ೮೭ ||

ಭರ್ತಾರಂ ಸಾ ನ ಪಶ್ಯೇಚ್ಚೇತ್ಕದಾಚಿದಪಿ ಪಾರ್ಶ್ವತಃ |
ನಷ್ಟಂ ಮನ್ಯೇತ ಚಾತ್ಮಾನಂ ರಾಜಪುತ್ರೀ ಯಶಸ್ವಿನೀ || ೮೮ ||

ಸ ಚೇತ್ಪಶ್ಯತಿ ಭಾರ್ಯಾಂ ಸ್ವಾಂ ಸೋಽಪಿ ರಾಜನ್ಯನಂದನಃ |
ಆತ್ಮಾನಂ ಮನ್ಯತೇ ಪ್ರೀತ್ಯಾ ನಷ್ಟಪ್ರಾಯಂ ವಸುಂಧರೇ || ೮೯ ||

---

೮೫. ಕಲಿಂಗರಾಜನೂ ಪತ್ನೀಸಹಿತನಾದ ತನ್ನ ಪುತ್ರನನ್ನು ಕರೆದುಕೊಂಡು, ಕಂಚಿಯ ರಾಜನಿಂದ ಅತಿಯಾಗಿ ಗೌರವವನ್ನು ಪಡೆದು, ತನ್ನ ಮನೆಗೆ ಹೊರಟುಹೋದನು.

೮೬. ಹೀಗೆ ಕಾಲವು ನಡೆಯುತ್ತಿರಲಾಗಿ ಸಂತೋಷದಿಂದಿದ್ದ ಆ ದಂಪತಿಗಳಿಗೆ, ರೋಹಿಣೀಚಂದ್ರರಿಗಿರುವಂತೆ ಎಡೆಬಿಡದ ಅತಿಯಾದ ಪ್ರೀತಿಯುಂಟಾಯಿತು.

೮೭. ಅವರು, ದೇವಾಲಯಗಳಲ್ಲಿಯೂ, ನಂದನವನದಂತಿರುವ ವನೋಪವನಗಳಲ್ಲಿಯೂ, ವಿಹಾರಗಳಲ್ಲಿಯೂ ಆನಂದಿಸುತ್ತಿದ್ದರು.

೮೮. ಕೀರ್ತಿವಂತೆಯಾದ ಆ ರಾಜಕುಮಾರಿಯು, ಯಾವಾಗಲಾದರೂ ಪಕ್ಕದಲ್ಲಿ ತನ್ನ ಪತಿಯನ್ನು ಕಾಣದಿದ್ದರೆ, ತನ್ನ ಪ್ರಾಣವೇ ಹೋದಂತೆ ಭಾವಿಸುವಳು.

೮೯. ವಸುಂಧರೇ, ಆ ರಾಜಕುಮಾರನೂ ತನ್ನ ಪತ್ನಿಯನ್ನು ಯಾವಾಗಲಾದರೂ ಕಾಣದೆ ಇದ್ದರೆ ಪ್ರೀತಿಯಿಂದ ತನ್ನನ್ನು ಪ್ರಾಣವೇ ಇಲ್ಲದಿರುವವನನ್ನಾಗಿ ಭಾವಿಸಿಕೊಳ್ಳುತ್ತಿದ್ದನು.

ದಿನೇ ದಿನೇ ತಯೋರೇವಂ ವರ್ಧತೇ ಪ್ರೀತಿರುತ್ತಮಾ ।
ನಾಂತರಂ ಪಶ್ಯತೇ ಕಶ್ಚಿತ್ಪುರುಷಃ ಪುಣ್ಯಕರ್ಮಣೋಃ ॥ ೯೦ ॥

ಸೋಽಪಿ ಬುದ್ಧ್ಯಾ ಸುಶೀಲೇನ ಕೃತೇನ ಚ ವಸುಂಧರೇ ।
ಕಳಿಂಗಸ್ತೋಷಯಾಮಾಸ ಪೌರಾನ್ಜಾನಪದಾಂಸ್ತಥಾ ॥ ೯೧ ॥

ಅಂತಃಪುರೇ ತು ಯಾ ನಾರ್ಯಃ ಕಳಿಂಗೇಷು ಧರೇ ತಯೋಃ ।
ತಾಭ್ಯಾಂ ಸಂತೋಷಿತಾಸ್ಸರ್ವಾಃ ಶೀಲೇನ ಸ್ವಗುಣೈಸ್ತಥಾ ॥ ೯೨ ॥

ಏವಂ ಪ್ರವರ್ಧಿತಾ ತಾಭ್ಯಾಂ ಪ್ರೀತಿಃ ಪೂರ್ವಂ ಯಶಸ್ವಿನಿ ।
ರಮತೇ ತತ್ರ ಚಾನ್ಯೋನ್ಯಂ ಶಚೀವಾಸವಯೋರಿವ ॥ ೯೩ ॥

ಅಥ ಪ್ರಣಯಪೂರ್ವಂ ಸಾ ಕಾಂತಂ ಸರ್ವಾಂಗಸುಂದರೀ ।
ವ್ಯಜಿಜ್ಞಪದ್ರಾಜಸುತಂ ಸೌಹೃದೇನ ಯಶಸ್ವಿನೀ ॥ ೯೪ ॥

---

೯೦. ಹೀಗೆ ದಿನದಿನಕ್ಕೂ ಅವರ ಉತ್ತಮವಾದ ಪ್ರೀತಿಯು ಬೆಳೆಯುತ್ತಿದ್ದಿತು ಪುಣ್ಯಕರ್ಮಿಗಳಾದ ಅವರಿಬ್ಬರಿಗೂ ಭೇದವನ್ನು ಯಾರೊಬ್ಬರೂ ಅರಿಯರು.

೯೧. ವಸುಂಧರೇ, ಆ ಕಳಿಂಗರಾಜನು ತನ್ನ ಬುದ್ಧಿಯಿಂದಲೂ, ಸುಶೀಲದಿಂದಲೂ ಕಾರ್ಯದಿಂದಲೂ ಪಟ್ಟಣಿಗರನ್ನೂ, ದೇಶಪ್ರಜೆಗಳನ್ನೂ ಸಂತೋಷಪಡಿಸುತ್ತಿದ್ದನು.

೯೨. ಧರೇ, ಕಳಿಂಗರಾಜನ ಅಂತಃಪುರದಲ್ಲಿ ದಂಪತಿಗಳಾದ ಅವರಿಬ್ಬರಿಗಾಗಿ ಇರುವ ಹೆಂಗಸರೆಲ್ಲರನ್ನೂ ಅವರು ಶೀಲದಿಂದಲೂ, ಸ್ವಗುಣಗಳಿಂದಲೂ, ಸಂತೋಷಪಡಿಸುತ್ತಿದ್ದರು.

೯೩. ಯಶಸ್ವಿನೀ, ಹೀಗೆ ಅವರು ಮೊದಲು ಪ್ರೀತಿಯನ್ನು ಬೆಳೆಸಿದರು. ಅವರು ಅಲ್ಲಿ ಶಚೀಂದ್ರರಂತೆ ಪರಸ್ಪರ ರಮಿಸುವರು.

೯೪. ಹೀಗಿರಲು, ಕೀರ್ತಿವಂತೆಯೂ, ಸರ್ವಾಂಗಸುಂದರಿಯೂ ಆದ ಆ ರಾಜಪುತ್ರಿಯು, ಸೌಹಾರ್ದದಿಂದ ಪ್ರೀತಿಪೂರ್ವಕವಾಗಿ ರಾಜಪುತ್ರನಿಗೆ ವಿಜ್ಞಾಪಿಸಿದಳು —

ಕಿಂಚಿದಿಚ್ಛಾಮಿ ತೇ ವಕ್ತುಂ ರಾಜಪುತ್ರ ಯಶೋಧನ |
ಮಮ ಸ್ನೇಹಾತ್ಪ್ರಿಯಂ ಚೈವ ತದ್ಭವಾನ್ವಕ್ತುಮರ್ಹತಿ ॥ ೯೫ ॥

ತತೋ ಭಾರ್ಯಾವಚಃ ಶ್ರುತ್ವಾ ಕಲಿಂಗಸ್ಯ ಸುತಃ ಪ್ರಭುಃ |
ಉವಾಚ ಮಧುರಂ ವಾಕ್ಯಂ ಪದ್ಮಪತ್ರನಿಭೇಕ್ಷಣಃ ॥ ೯೬ ॥

ಯದ್ವದಿಷ್ಯಸಿ ಭದ್ರೇ ತ್ವಂ ಯಚ್ಚ ತೇಸ್ತಿ ಮನೀಷಿತಂ |
ಸರ್ವಂ ತೇ ಕಥಯಿಷ್ಯಾಮಿ ಶಪೇ ಸತ್ಯೇನ ಸುಂದರಿ ॥ ೯೭ ॥

ಸತ್ಯಂ ಮೂಲಂ ಬ್ರಾಹ್ಮಣಾನಾಂ ವಿಷ್ಣುಸ್ಸತ್ಯೇ ಪ್ರತಿಷ್ಠಿತಃ |
ತಸ್ಯ ಮೂಲಂ ತಪೋ ರಾಜ್ಞಿರಾಜ್ಯಂ ಸತ್ಯೇ ಪ್ರತಿಷ್ಠಿತಂ ॥ ೯೮ ॥

ನಾಹಂ ಮಿಥ್ಯಾ ಪ್ರವಕ್ಷ್ಯಾಮಿ ಕದಾಚಿದಪಿ ಸುಂದರಿ |
ನ ಮಿಥ್ಯಾ ಪೂರ್ವಮುಕ್ತಂ ಮೇ ಬ್ರೂಹಿ ಕಿಂ ಕರವಾಣಿತೇ ॥ ೯೯ ॥

---

೯೫. “ರಾಜಪುತ್ರ, ಯಶೋಧನ, ನನಗೆ ಇಷ್ಟವಾದುದೊಂದನ್ನು ನಿನ್ನನ್ನು ಕೇಳಲು ಬಯಸುತ್ತೇನೆ. ನನ್ನ ಪ್ರೀತಿಯಿಂದ ನೀನು ಅದನ್ನು ಹೇಳಬೇಕು.”

೯೬. ಕಮಲದಳನೇತ್ರನಾದ ಕಳಿಂಗರಾಜಪುತ್ರನು ಹೆಂಡತಿಯ ಆ ಮಾತನ್ನು ಕೇಳಿ, ಇಂಪಾದ ಮುಂದಿನ ಮಾತನಾಡಿದನು.

೯೭ ಭದ್ರೇ, ಸುಂದರೀ, ನೀನು ನಿನ್ನ ಮನಸ್ಸಿಗೆ ಇಷ್ಟವಾದ ಯಾವುದನ್ನು ಕೇಳುವೆಯೋ ಅದೆಲ್ಲವನ್ನೂ ನಿನಗೆ ಹೇಳುತ್ತೇನೆಂದು ಪ್ರಮಾಣ ಮಾಡುತ್ತೇನೆ.

೯೮-೯೯. ರಾಣಿ, ಬ್ರಾಹ್ಮಣರಿಗೆ ಸತ್ಯವೇ ಮೊದಲನೆಯದು(ಮೂಲ). ವಿಷ್ಣುವು ಸತ್ಯದಲ್ಲಿಯೇ ನೆಲಸಿರುವನು. ತಪಸ್ಸಿಗೂ ಸತ್ಯವೇ ಮೂಲವಾದುದು. ರಾಜ್ಯವೂ ಸತ್ಯದಲ್ಲಿಯೇ ನಿಂತಿದೆ. ಸುಂದರಿ, ನಾನು ಎಂದಿಗೂ ಸುಳ್ಳುಹೇಳೆನು, ಹಿಂದೆಂದೂ ಸುಳ್ಳುಹೇಳಿಲ್ಲ. ನಿನಗೆ ನಾನು ಮಾಡಬೇಕಾದುದೇನು? ಹೇಳು.

ಹಸ್ತ್ಯಶ್ವರಥರತ್ನಾನಿ ಯಾನಾನಿ ಚ ಧನಾನಿ ಚ ।
ಅಥವಾ ಪರಮುಗ್ರ್ಯಂ ತು ಪಟ್ಟಬಂಧಂ ಕರೋಮಿ ತೇ ॥ ೧೦೦ ॥

ಸಾ ಭರ್ತೃವಚನಂ ಶ್ರುತ್ವಾ ಕಾಂಚೀರಾಜಸ್ಯ ಚಾತ್ಮಜಾ ।
ಸಂಗೃಹ್ಯ ಚೋಭೌ ಚರಣೌ ಭರ್ತಾರಮಿದಮಬ್ರವೀತ್ ॥ ೧೦೧ ॥

ನ ಚೈವ ರತ್ನಾನೀಚ್ಛಾಮಿ ಹಸ್ತ್ಯಶ್ವರಥಮೇವ ಚ ।
ಪಟ್ಟಬಂಧೇನ ಕಾರ್ಯಂ ಚ ಯಾವದ್ಧ್ರಿಯತಿ ಮೇ ಗುರುಃ ॥ ೧೦೨ ॥

ಏಕಾ ಸ್ವಪಿತುಮಿಚ್ಛಾಮಿ ಮಧ್ಯಾಹ್ನೇ ತು ತಥಾವಿಧೇ ।
ನಚಿರಂ ವಾಲ್ಪಕಾಲಂತು ಯಥಾ ಕಶ್ಚಿನ್ನ ಪಶ್ಯತಿ ॥ ೧೦೩ ॥

ಶ್ವಶುರೋ ಯದಿ ವಾ ಶ್ವಶ್ರ್ವಃ ಯಥೈವಾನ್ಯೋ ನರಾಧಿಪ ।
ಸುಪ್ತಾಂ ನೈವ ಚ ದ್ರಷ್ಟವ್ಯಾ ವ್ರತಮೇತನ್ಮುಹೂರ್ತಕಂ ॥ ೧೦೪ ॥

---

೧೦೦. ಆನೆಕುದುರೆಗಳನ್ನೂ, ರಥರತ್ನವಾಹನಗಳನ್ನೂ, ಧನಗಳನ್ನೂ ಕೊಡಲೇ ? ಅಥವಾ ಪರಮಶ್ರೇಷ್ಠವಾದ ರಾಜ್ಯಪಟ್ಟವನ್ನೇ ನಿನಗೆ ಕಟ್ಟಲೇ ?"

೧೦೧. ಕಂಚಿಯ ರಾಜಪುತ್ರಿಯು ಉತ್ತಮನಾದ ತನ್ನ ಪತಿಯ ಮಾತನ್ನು ಕೇಳಿ, ಅತನ ಎರಡು ಕಾಲುಗಳನ್ನೂ ಗಟ್ಟಿಯಾಗಿ ಹಿಡಿದುಕೊಂಡು ಅವನಿಗೆ ಈ ಮಾತನ್ನು ಹೇಳಿದಳು.

೧೦೨. " ನನಗೆ ರತ್ನಗಳೂ ಬೇಕಿಲ್ಲ. ಆನೆಕುದುರೆಬಂಡಿಗಳೂ ಬೇಕಿಲ್ಲ. ನನ್ನ ಗುರುವು ಧರಿಸಿರುವವರೆಗೂ, ಪಟ್ಟದಿಂದಲೂ ನನಗೇನೂ ಕೆಲಸವಿಲ್ಲ.

೧೦೩. ನಾನೊಬ್ಬಳೇ ಮಧ್ಯಾಹ್ನದಲ್ಲಿ ಬಹಳ ಹೊತ್ತೂ ಅಲ್ಲ. ಸ್ವಲ್ಪ ಕಾಲಮಾತ್ರ ಯಾರೂ ನನ್ನನ್ನು ನೋಡದಿರುವಂತೆ ಮಲಗಲು ಇಚ್ಛಿಸುತ್ತೇನೆ.

೧೦೪–೧೦೫. ದೊರೆಯೇ, ಮಾವಂದಿರಾಗಲಿ, ಅತ್ತೆಯವರಾಗಲಿ, ಇತರ ರಂತೆಯೇ ಮಲಗಿದ ನನ್ನನ್ನು ನೋಡಲೇಕೂಡದು. ಇದು ಮುಹೂರ್ತಕಾಲ

ಆತ್ಮನೋ ವೈ ಗೃಹಜನಾ ಯೇ ಕೇಚಿತ್ಸ್ವಜನೇ ಜನಾಃ ।
ತೇ ಮಾಂ ಪ್ರಸುಪ್ತಾಂ ಪಶ್ಯೇಯುಃ ಕದಾಚಿದಪಿ ಸಂಸ್ಥಿತಾಂ ॥ ೧೦೫ ॥

ತತೋ ಭಾರ್ಯಾವಚಃ ಶ್ರುತ್ವಾ ಕಲಿಂಗೈಶ್ವರ್ಯವರ್ಧನಃ ।
ಬಾಢಮಿತ್ಯೇವ ತಾಂ ವಾಕ್ಯಂ ಪ್ರತ್ಯುವಾಚ ವಸುಂಧರೇ ॥ ೧೦೬ ॥

ವಿಸ್ರಬ್ಧಾ ಭವ ಸುಶ್ರೋಣಿ ಕಲ್ಯಾಣೇನ ಯಶಸ್ವಿನಿ ।
ನತ್ವಾಂ ವೈ ದ್ರಕ್ಷ್ಯತೇ ಕಶ್ಚಿಚ್ಛಯನೀಯೇ ಮಹಾವ್ರತಾಂ ॥ ೧೦೭ ॥

ಏವಂ ಗಚ್ಛತಿ ಕಾಲೇ ತು ತಯೋಸ್ತು ತದನಂತರೇ ।
ಕಲಿಂಗೋ ಜರಯಾ ಯುಕ್ತೋ ಪುತ್ರಂ ರಾಜ್ಯೇಭ್ಯಷೇಚಯತ್ ॥ ೧೦೮ ॥

ರಾಜ್ಯಂ ದತ್ವಾ ವರಾರೋಹೇ ಯಥಾನ್ಯಾಯಂ ಕುಲೋದ್ಭವಂ ।
ಕೃತ್ವಾ ನಿಷ್ಕಂಟಕಂ ರಾಜ್ಯಂ ದತ್ವಾ ಪಂಚತ್ವಮಾಗತಃ ॥ ೧೦೯ ॥

ನನಗೆ ವ್ರತ. ನಮ್ಮ ಮನೆಯವರಾಗಲಿ, ಸ್ವಜನರಾದ ಬೇರೆಯವರೇ ಆಗಲಿ ಬಲುನಿದ್ದೆಯಲ್ಲಿ ಮಲಗಿರುವ ನನ್ನನ್ನು ನೋಡಿ, ಮೃತಳೆಂದು ತಿಳಿದುಕೊಂಡಾರು !"

೧೦೬–೧೦೭. ವಸುಂಧರೇ, ಕಳಿಂಗೈಶ್ವರ್ಯವರ್ಧಕನಾದ ಆ ರಾಜಪುತ್ರನು ಹೆಂಡತಿಯ ಆ ಮಾತನ್ನು ಕೇಳಿ, ಅವಳಿಗೆ, "ನಿಜವಾಗಿಯೂ ಆಗಲಿ. ಸುಂದರಿ, ಕೀರ್ತಿವಂತೆ, ಈ ಮಂಗಳಕಾರ್ಯದಲ್ಲಿ ನಂಬಿಕೆಯುಳ್ಳವಳಾಗಿರು. ಹಾಸಿಗೆಯಲ್ಲಿ ಮಹಾವ್ರತದಿಂದಿರುವ ನಿನ್ನನ್ನು ಯಾರೂ ನೋಡುವುದಿಲ್ಲ." ಎಂದು ಹೇಳಿದನು.

೧೦೮. ಅವರು ಹೀಗೆ ಕಾಲವನ್ನು ಕಳೆಯುತ್ತಿರಲು, ಬಳಿಕ ವೃದ್ಧನಾದ ಕಳಿಂಗರಾಜನು ಆ ರಾಜಕುಮಾರನಿಗೆ ರಾಜ್ಯಾಭಿಷೇಕವನ್ನು ಮಾಡಿದನು.

೧೦೯. ವರಾರೋಹೇ, ವೃದ್ಧರಾಜನು, ರಾಜ್ಯವನ್ನು ನಿಷ್ಕಂಟಕವಾದುದನ್ನಾಗಿ ಮಾಡಿ, ನ್ಯಾಯವಾಗಿ ಆ ಪುತ್ರನಿಗೆ ವಹಿಸಿ, ಸ್ವರ್ಗಸ್ಥನಾದನು.

ಏವಂ ಪ್ರಭುಸ್ತತೋ ರಾಜ್ಯಂ ಪಿತುರ್ದತ್ತಂ ಯಥೋಚಿತಂ ।
*
÷ಏಕಾಕೀ ಸ್ವಪತೇ ತತ್ರ ಯತ್ರ ಕಶ್ಚಿನ್ನ ಪಶ್ಯತಿ ॥ ೧೧೦ ॥

ಸ ತು ದೀರ್ಘೇಣ ಕಾಲೇನ ಕಲಿಂಗಕುಲವರ್ಧನಃ ।
ಸುತಾನಜನಯತ್ಪಂಚ ಆದಿತ್ಯಸಮತೇಜಸಃ ॥ ೧೧೧ ॥

ಏವಂ ತು ಮಾನುಷಂ ಲೋಕಂ ಮಮ ಮಾಯಾಪ್ರಮೋಹಿತಂ ।
ಆತ್ಮಕರ್ಮಸು ಸಂಯುಕ್ತಂ ಚಕ್ರವತ್ಪರಿವರ್ತತೇ ॥ ೧೧೨ ॥

ಜಾತೋ ಜಂತುರ್ಭವೇದ್ಬಾಲೋ ಬಾಲಸ್ತು ತರುಣೋ ಭವೇತ್ ।
ತರುಣೋ ಮಧ್ಯಮಂ ಯಾತಿ ಪಶ್ಚಾದ್ಯಾತಿ ಜರಾಂ ತತಃ ॥ ೧೧೩ ॥

---

೧೧೦. ಆ ದೊರೆಯು ಹಾಗೆ ತಂದೆಯು ನ್ಯಾಯವಾಗಿ ಕೊಟ್ಟ ರಾಜ್ಯವನ್ನು ಪಡೆದು ಜನರಿಗೆ ಸಂತೋಷವಾಗುವಂತೆ ಆಳುತ್ತಿದ್ದನು. ರಾಣಿಯು ಮಧ್ಯಾಹ್ನಕಾಲದಲ್ಲಿ ತನ್ನನ್ನು ಯಾರೂ ನೋಡದಿರುವೆಡೆಯಲ್ಲಿ ಒಬ್ಬಳೇ ಮಲಗುತ್ತಿದ್ದಳು.

೧೧೧. ಕಳಿಂಗಕುಲವರ್ಧನನಾದ ಆ ದೊರೆಯು, ಬಹುಕಾಲದಲ್ಲಿ ಸೂರ್ಯನಂತೆ ತೇಜೋವಂತರಾದ ಐವರು ಗಂಡುಮಕ್ಕಳನ್ನು ಪಡೆದನು.

೧೧೨. ಭೂದೇವೀ, ಹೀಗೆ ನನ್ನ ಮಾಯೆಯಿಂದ ಬಹುಮೋಹಗೊಂಡಿರುವ ಮನುಷ್ಯಲೋಕವು ಆತ್ಮಕರ್ಮದಿಂದ ಕೂಡಿದುದಾಗಿ ಚಕ್ರದಂತೆ ಸುತ್ತುವುದು.

೧೧೩. ಹುಟ್ಟಿದ ಮಗುವು ಬಾಲಕನಾಗುವುದು ಬಾಲಕನು ತರುಣನಾಗುವನು. ತರುಣನು ಮಧ್ಯವಯಸ್ಕನಾಗುವನು. ಬಳಿಕ ಅವನು ಮುಪ್ಪನ್ನೂ ಪಡೆಯುವನು.

---

* ಇಲ್ಲಿರಬೇಕಾದ ಅರ್ಧಶ್ಲೋಕವೋ, ಕೆಲವು ಶ್ಲೋಕಗಳೋ ಇಲ್ಲವೆಂಬುದು ಪ್ರಾಜ್ಞರಿಗೆ ತಿಳಿಯದಿರಲಾರದು.

÷ ಏಕಾಕಿನೀ ಎಂದಿರಬೇಕು. ಏಕಾಕೀ ಎಂಬುದು ಆರ್ಷ.

ಬಾಲೋ ವೈ ಯಾನಿ ಕರ್ಮಾಣಿ ಕರೋತ್ಯಜ್ಞಾನತಃ ಸ್ವಯಂ ।
ನ ಸ ಲಿಪ್ಯತಿ ಪಾಪೇನ ಏವಮೇತನ್ನ ಸಂಶಯಃ ॥ ೧೧೪ ॥

ತತಃ ಕರಿಷ್ಯತೋ ರಾಜ್ಯಂ ನಿಷ್ಕಂಟಕಮನಾಮಯಂ ।
ಸಪ್ತಸಪ್ತತಿವರ್ಷಾಣಿ ಹ್ಯತೀತಾನಿ ಯಶಸ್ವಿನಿ ॥ ೧೧೫ ॥

ಅಷ್ಟಸಪ್ತತಿಕೇ ವರ್ಷೇ ಏಕಾಂತೇ ತು ನರಾಧಿಪಃ ।
ತಮೇವ ಚಿಂತಯನ್ನರ್ಥಂ ಮಧ್ಯಸಂಸ್ಥೇ ದಿವಾಕರೇ ॥ ೧೧೬ ॥

ಮಾಧವಸ್ಯ ತು ಮಾಸಸ್ಯ ದ್ವಾದಶ್ಯಾಂ ಶುಕ್ಲಪಕ್ಷಕೇ ।
ಬುದ್ಧಿಸ್ಸಂಪದ್ಯತೇ ತಸ್ಯ ಪ್ರಿಯಾದರ್ಶನಲಾಲಸಾ ॥ ೧೧೭ ॥

ಕೋಽರ್ಚ್ಯತೇಸ್ತತ್ಕಿಂ ವ್ರತಂ ಚಾಸ್ಯಾ ಏಷಾ ಸ್ವಪಿತಿ ನಿರ್ಜನೇ ।
ನ ಸುಪ್ತಾಯಾ ವ್ರತಂ ಕಿಂಚಿದ್ದೃಶ್ಯತೇ ಧರ್ಮಸಂಚಯಃ ॥ ೧೧೮ ॥

---

೧೧೪. ಬಾಲನು ತಿಳಿವಳಿಕೆಯಿಲ್ಲದೆ ಯಾವ ಕರ್ಮ(ಕಾರ್ಯ)ಗಳನ್ನು ಮಾಡಿದರೂ ಅವನಿಗೆ ಪಾಪವು ಅಂಟುವುದಿಲ್ಲವೆಂಬುದರಲ್ಲಿ ಸಂದೇಹವಿಲ್ಲ.

೧೧೫. ಯಶಸ್ವಿನೀ, ಕಳಿಂಗರಾಜನು ನಿಷ್ಕಂಟಕವಾಗಿ, ರೋಗಾದಿಗಳಿಲ್ಲದಂತೆ ರಾಜ್ಯಭಾರ ಮಾಡುತ್ತಿರಲಾಗಿ ಅವನಿಗೆ ಎಪ್ಪತ್ತೇಳುವರ್ಷಗಳು ಕಳೆದುವು.

೧೧೬-೧೧೭. ಎಪ್ಪತ್ತೆಂಟನೆಯ ವರ್ಷದಲ್ಲಿ ವೈಶಾಖಮಾಸದ ಶುಕ್ಲಪಕ್ಷದ ದ್ವಾದಶಿಯದಿನ ಸೂರ್ಯನು ಮಧ್ಯಾಹ್ನದಲ್ಲಿರುವಾಗ ಅದೇ ವಿಚಾರವನ್ನು ಆಲೋಚಿಸುತ್ತಿದ್ದ ಆ ದೊರೆಗೆ ವ್ರತಸ್ಥೆಯಾಗಿದ್ದ ತನ್ನ ಪ್ರಿಯೆಯನ್ನು ನೋಡುವುದರಲ್ಲಿ ಬಹು ಕುತೂಹಲವುಂಟಾಯಿತು.

೧೧೮-೧೨೦. "ಯಾರನ್ನು ಪೂಜಿಸುತ್ತಾಳೆ? ಇವಳ ವ್ರತವೇನು? ನಿರ್ಜನವಾದೆಡೆಯಲ್ಲಿ ಮಲಗುತ್ತಾಳೆ. ನಿದ್ರಿಸುವವಳಿಗೆ ಯಾವ ವ್ರತವೂ, ಧರ್ಮಸಂಪಾದನೆಯೂ ಕಾಣುವುದಿಲ್ಲವಲ್ಲವೆ! ಇದು ವಿಷ್ಣುವು(ಮಾಡಿರುವ)

ನ ಚ ವಿಷ್ಣುಕೃತಂ ಕರ್ಮ ನ ಚೈವೇಶ್ವರಚೋದಿತಂ ।
ಮನುನಾ ವೈ ಕೃತೋ ಧರ್ಮ ಏಷ ಚೈವ ನ ದೃಶ್ಯತೇ ॥ ೧೧೯ ॥

ನ ಕ್ವಾಪ್ಯಪಿ ಕೃತೋ ಧರ್ಮೋ ಮಹಾನಪಿ ನ ಯೋಗಿನಾಂ ।
ನ ತತ್ರ ಏಷ ವಿದ್ಯೇತ ಯಶ್ಚರೇದ್ವ್ರತಮೀದೃಶಂ ॥ ೧೨೦ ॥

ಬಾರ್ಹಸ್ಪತ್ಯೇಷು ಧರ್ಮೇಷು ಯಾಮ್ಯೇಷು ಚ ನ ವಿದ್ಯತೇ ।
ನ ಏಷ ವಿದ್ಯತೇ ತತ್ರ ಸುಪ್ತಾ ಚರತಿ ಯದ್ವ್ರತಂ ॥ ೧೨೧ ॥

ಭುಕ್ತ್ವಾ ತು ಕಾಮಭೋಗಾನಿ ಭುಕ್ತ್ವಾ ತು ಪಿಶಿತೋದನಂ ।
ತಾಂಬೂಲಂ ರಕ್ತವಸ್ತ್ರಂ ತು ಸುಸೂಕ್ಷ್ಮೇ ಪಟ್ಟವಾಸಸೀ ॥ ೧೨೨ ॥

ಸುಗಂಧೈರ್ಭೂಷಿತಾ ಗಾತ್ರೇ ಸರ್ವರತ್ನಸಮಾಯುತಾ ।
ಮಮ ಕಾಂತಾ ವಿಶಾಲಾಕ್ಷೀ ಕಿಮತ್ರ ಚರತೇ ವ್ರತಂ ॥ ೧೨೩ ॥

ಹೇಳಿರುವ ಕರ್ಮವಲ್ಲ. ಈಶ್ವರನು ಹೇಳಿರುವುದೂ ಅಲ್ಲ. ಇದು ಮನುವು ಮಾಡಿರುವ ಧರ್ಮವಾಗಿಯೂ ಕಾಣುವುದಿಲ್ಲ. ಇದು ಎಲ್ಲೂ ಯಾರೂ ಮಾಡಿದ ಧರ್ಮವಲ್ಲ. ಯೋಗಿಗಳ ಧರ್ಮ ಅಥವಾ ಧರ್ಮಶಾಸ್ತ್ರವು ವಿಸ್ತಾರವಾದುದಾದರೂ ಅದರಲ್ಲಿಯೂ ಇರಲಾರದು. ಯಾರುತಾನೇ ಇಂತಹ ವ್ರತವನ್ನು ಮಾಡುವರು ? !

೧೨೧. ಮಲಗಿ(ದವಳು)ಮಾಡುವ ವ್ರತವು ಬೃಹಸ್ಪತಿಯು ಹೇಳಿರುವ ಧರ್ಮಗಳಲ್ಲೂ, ಯಮನು ಹೇಳಿರುವ ಧರ್ಮಗಳಲ್ಲೂ ಇಲ್ಲ. ಇದು ಅಲ್ಲಿ ಇಲ್ಲವೇ ಇಲ್ಲ.

೧೨೨–೧೨೩. ವಿಶಾಲನೇತ್ರೆಯಾದ ನನ್ನ ಕಾಂತೆಯು ಕಾಮಸುಖಗಳನ್ನು ಅನುಭವಿಸಿ, ಮಾಂಸಾನ್ನವನ್ನು ಊಟಮಾಡಿ, ತಾಂಬೂಲವನ್ನು ಹಾಕಿಕೊಂಡು, ಬಹಳ ತೆಳುವಾದ ಪಟ್ಟೆಯ ಕೆಂಪುಬಣ್ಣದ ವಸ್ತ್ರಗಳನ್ನು ಧರಿಸಿ, ಅಲಂಕರಿಸಿಕೊಂಡು ಇಲ್ಲಿ ಯಾವ ವ್ರತವನ್ನು ಮಾಡುವಳು !

ಕುಪ್ಯೇತಾಪಿತು ಸಂದೃಷ್ಟಾಪ್ರಿಯಾ ಮೇ ಕಮಲೇಕ್ಷಣಾ ।
ಅವಶ್ಯಮೇವ ದ್ರಷ್ಟವ್ಯಾ ಕೀದೃಶಂ ಚರತಿ ವ್ರತಂ ॥ ೧೨೪ ॥

ಕಿನ್ನರ್ಯೈಃ ಸುಪ್ರಲಕ್ಷ್ಯೇತ ವಶೀಕರಣಮುತ್ತಮಂ ।
ಅಥ ಯೋಗೀಶ್ವರೀ ಭೂತ್ವಾ ಯತ್ರ ಗಚ್ಛತಿ ರೋಚತೇ ॥ ೧೨೫ ॥

ಅಥವಾ ಚಾನ್ಯಸಂಸ್ಪೃಷ್ಟಾ ಕಾಮರೋಗೇಣ ಚಾವೃತಾ ।
ಏವಂ ಚಿಂತಯತಸ್ತಸ್ಯ ಅಸ್ತಂ ಪ್ರಾಪ್ತೋ ದಿವಾಕರಃ ॥ ೧೨೬ ॥

ಸಂವೃತ್ತಾ ರಜನೀ ಸುಭ್ರು ಸರ್ವಸಾರ್ಥಸುಖಾವಹಾ ॥ ೧೨೭ ॥

ತತೋ ರಾತ್ರ್ಯಾಂ ವ್ಯತೀತಾಯಾಂ ಪ್ರಭಾತಸಮಯೇ ಶುಭೇ
ಪಠಂತಿ ಮಾಗಧಾ ವಂದಿಸೂತಾ ವೈತಾಲಕಾಸ್ತಥಾ ।
ಶಂಖದುಂದುಭಿನಾದೈಶ್ಚ ಬೋಧಿತೋ ವಸುಧಾಧಿಪಃ ॥ ೧೨೮ ॥

---

೧೨೪. ಕಮಲನೇತ್ರೆಯಾದ ನನ್ನ ಪ್ರಿಯೆಯು ನಾನು ನೋಡಿದರೆ ಕೋಪಿಸಿಕೊಂಡಾಳು. ಆದರೂ ಅವಳು ಎಂತಹ ವ್ರತವನ್ನು ಆಚರಿಸುವಳೋ ನೋಡಬೇಕು.

೧೨೫-೧೨೭. ಅವಳು ಕಿನ್ನರರಿಂದ ಉತ್ತಮವಾದ ವಶೀಕರಣವನ್ನು ತಿಳಿದುಕೊಳ್ಳುವಳೋ ? ಅಥವಾ ಯೋಗೀಶ್ವರಿಯಾಗಿ ಎಲ್ಲಿ ಇಷ್ಟವೋ ಅಲ್ಲಿಗೆ ಹೋಗುವಳೋ, ಅಲ್ಲದಿದ್ದರೆ ಕಾಮರೋಗದಿಂದ ಪೀಡಿತಳಾಗಿರುವಳೋ" ಎಂದು ಚಿಂತಿಸುತ್ತಿರಲು ಸೂರ್ಯನು ಅಸ್ತನಾದನು. ಸುಂದರವಾದ ಹುಬ್ಬಿನವಳೇ, ಸರ್ವಪ್ರಾಣಿಸಮೂಹಕ್ಕೂ ಸುಖವನ್ನುಂಟುಮಾಡುವ ರಾತ್ರಿ ಬಂದಿತು.

೧೨೮. ಬಳಿಕ ರಾತ್ರಿಯು ಕಳೆಯಲು, ಶುಭವಾದ ಪ್ರಾತಃಕಾಲದಲ್ಲಿ ಸೂತಮಾಗಧವೈತಾಳಿಕ ಸ್ತುತಿಪಾಠದಿಂದಲೂ ಶಂಖಭೇರಿಗಳ ನಾದದಿಂದಲೂ, ರಾಜನು ನಿದ್ರೆಯಿಂದ ಎಚ್ಚರಗೊಂಡನು.

ಸರ್ವಲೋಕಹಿತಾರ್ಥಾಯ ಉದಿತೇ ಚ ದಿವಾಕರೇ ॥ ೧೨೯ ॥

ಯತ್ತದಾ ಚಿಂತಿತಂ ಪೂರ್ವಂ ದ್ರಷ್ಟುಕಾಮೇನ ತಾಂ ಪ್ರಿಯಾಂ ।
ಸರ್ವಚಿಂತಾಂ ಪರಿತ್ಯಜ್ಯ ಸಾ ಚಿಂತಾ ಹೃದಿ ವರ್ತತೇ ॥ ೧೩೦ ॥

ಸ್ನಾತಸ್ತು ವಿಧಿನಾ ಸೋಽಥ ಕ್ಷೌಮಾಭ್ಯಾಮುಪಸಂವೃತಃ ।
ಭೂತ್ವಾ ಚೋತ್ಸಾರಯಾಮಾಸ ಆಜ್ಞಾಂ ದತ್ವಾ ಯಥೋಚಿತಂ ॥ ೧೩೧ ॥

ವ್ರತಸ್ಥಂ ಮಾಂ ಸ್ಪೃಶೇದ್ಯಸ್ತು ನಾರೀ ಪುರುಷ ಏವ ಚ ।
ಧರ್ಮಯುಕ್ತೇನ ದಂಡೇನ ಮಮ ವಧ್ಯೋ ಭವೇತ್ತು ಸಃ ॥ ೧೩೨ ॥

ಏವಮಾಜ್ಞಾಪಯಿತ್ವಾ ತು ಕಾಲಿಂಗೋ ನೃಪತಿಃ ಕಿಲ ।
ಗತಶ್ಚ ತ್ವರಯಾ ಧೀಮಾನ್ಪ್ರವಿಷ್ಟಸ್ತತ್ರ ಸುವ್ರತೇ ॥ ೧೩೩ ॥

ಪರ್ಯಂಕಸ್ಯ ತಲೇ ತತ್ರ ರಾಜಾ ದರ್ಶನಲಾಲಸಃ ।
ವಿಲೋಕ್ಯ ತಾಂ ವರಾರೋಹಾಂ ತತಶ್ಚಿಂತಾಪರಾಯಣಾಂ ॥ ೧೩೪ ॥

೧೨೯-೧೩೦. ಸರ್ವಲೋಕಹಿತಕ್ಕಾಗಿ ಸೂರ್ಯನು ಉದಯಿಸಲು, ವ್ರತಮಾಡುತ್ತೇನೆಂದ ಪ್ರಿಯೆಯನ್ನು ನೋಡಲಿಚ್ಛಿಸಿದ ಆ ದೊರೆಯು ಹಿಂದಿನ ದಿನ ಯಾವುದನ್ನು ಚಿಂತಿಸುತ್ತಿದ್ದನೋ ಅದೇ ಚಿಂತೆಯೇ ಹೊರತು ಬೇರಾವ ಚಿಂತೆಯೂ ಆತನಿಗಿರಲಿಲ್ಲ.

೧೩೧. ದೊರೆಯು ವಿಧಿಪೂರ್ವಕವಾಗಿ ಸ್ನಾನಮಾಡಿ, ದುಕೂಲಗಳನ್ನು ಧರಿಸಿ ತಕ್ಕ ಅಪ್ಪಣೆಯನ್ನು ಮಾಡಿ, ಅಲ್ಲಿದ್ದ ಜನರನ್ನು ಆಚೆಗೆ ಕಳುಹಿಸಿದನು.

೧೩೨-೧೩೪. ಸುವ್ರತೇ, "ವ್ರತದಲ್ಲಿರುವ ನನ್ನನ್ನು ಹೆಂಗಸಾಗಲಿ, ಗಂಡಸಾಗಲಿ ಯಾರೇ ಮುಟ್ಟಿದರೂ ಅವರು ಧರ್ಮಯುಕ್ತವಾದ ದಂಡನೆಯಿಂದ ಕೊಲೆಗೊಳಗಾಗುವರು" ಎಂದು ಆಜ್ಞಾಪಿಸಿ, ಬುದ್ಧಿವಂತನಾದ ಆ ಕಳಿಂಗ ರಾಜನು ಪ್ರಿಯೆಯ ವ್ರತವನ್ನು ನೋಡಲು ಅತಿಯಾದ ಆಸೆಯುಳ್ಳವನಾಗಿ, ಅವಳ ಮಂಚವಿದ್ದೆಡೆಗೆ ತ್ವರೆಯಿಂದ ಹೋಗಿ ಪ್ರವೇಶಿಸಿ, ಚಿಂತಾಕ್ರಾಂತಳಾಗಿದ್ದ ಆ ಸುಂದರಿಯನ್ನು ಕಂಡು, ಮಂಚದ ಕೆಳಗಡೆಯೇ (ಅವಳಿಗೆ ಕಾಣಿಸಿಕೊಳ್ಳದಂತೆ) ಕುಳಿತಿದ್ದನು.

ತತಃ ಕಮಲಪತ್ರಾಕ್ಷೀ ವೇದನಾಯಾಸಪೀಡಿತಾ |
ರುಜಾರ್ತಾ ರುದತೇ ತತ್ರ ಶಿರೋವೇದನತಾಡಿತಾ || ೧೩೫ ||

ಕಿಂ ಮಯಾ ತು ಕೃತಂ ಕರ್ಮ ಪೂರ್ವಮೇವ ಸುದುಷ್ಕರಂ |
ಯೇನಾಹಮೀದೃಶೀಂ ಪ್ರಾಪ್ತಾ ದಶಾಂ ಪುಣ್ಯಪರಿಕ್ಷಯಾತ್ || ೧೩೬ ||

ಭರ್ತಾ ಚ ಮೇ ನ ಜಾನಾತಿ ಕ್ಲಿಶ್ಯಮಾನಾಮನಾಥವತ್ |
ಅಥ ಮಾಂ ಕಿಂ ಕಥಂ ಭರ್ತಾ ಮನ್ಯತೇ ಸ್ವಜನೋಽಪಿ ವಾ || ೧೩೭ ||

ಕಥಯೇ ಕಿಂ ಶಯಾನಾ ತು ಸಖೀನಾಂ ಶಯನೇ ಸ್ಥಿತಾ |
ಏವಮತ್ರ ನ ಯುಜ್ಯೇತ ಯನ್ಮಯಾ ಪರಿಚಿಂತಿತಂ || ೧೩೮ ||

ಕಿಂ ಚ ವಾತ್ಮನಿ ದುಃಖಸ್ಯ ಸರ್ವಮೇತಚ್ಚ ಯುಜ್ಯತೇ |
ಕಿಂ ಚ ಮಾಂ ವಕ್ಷ್ಯತೇ ಭರ್ತಾ ಕಿಂ ಚ ಮಾಮಿತರೇ ಜನಾಃ || ೧೩೯ ||

೧೩೫–೧೩೭. ತಲೆನೋವಿನ ರೋಗದಿಂದ ಪೀಡಿತಳಾಗಿದ್ದ ಆ ಕಮಲದಳನೇತ್ರೆಯು ಆಗ ನೋವೂ, ಆಯಾಸವೂ ಉಳ್ಳವಳಾಗಿ ಅಳುತ್ತ, "ಪೂರ್ವದಲ್ಲೇ ನಾನು ಯಾವ ಅತಿದುಷ್ಕರ್ಮವನ್ನು ಮಾಡಿದೆನೋ ! ಪುಣ್ಯನಾಶದಿಂದ ಇಂತಹ ದುರ್ದಸೆಯನ್ನು ನಾನು ಪಡೆದಿದ್ದೇನೆ. ಅನಾಥಳಂತೆ ನಾನು ಸಂಕಟಪಡುತ್ತಿರುವೆನೆಂಬುದು ನನ್ನ ಪತಿಗೆ ತಿಳಿಯದು. ಆದುದರಿಂದ ನನ್ನ ಸ್ವಾಮಿಯೂ, ಸ್ವಜನರೂ ನನ್ನ ವಿಚಾರದಲ್ಲಿ ಏನು ತಿಳಿದುಕೊಳ್ಳುವರೋ ! ಅಥವಾ ಅವರು ನನ್ನ ಸ್ಥಿತಿಯನ್ನು ಹೇಗೆತಾನೆ ತಿಳಿಯುವರು !

೧೩೮–೧೪೦. ಮಲಗಿರುವ ನಾನು ಹಾಸಿಗೆಯಲ್ಲಿದ್ದುಕೊಂಡೇ ಸಖಿಗಳಿಗೆ ಇದನ್ನು ಹೇಳಲೇ ! ಇಲ್ಲಿ ನಾನು ಯೋಚಿಸಿದುದು ಉತ್ತಮವಾಗಲಾರದು. ಅಥವಾ ಆತ್ಮದುಃಖದಲ್ಲಿ ಇದೆಲ್ಲವೂ ಯುಕ್ತವೇ ಆಗುವುದೋ ! ಪತಿಯು ನನ್ನ ವಿಚಾರದಲ್ಲಿ ಏನು ಹೇಳಿಯಾನು ! ಇತರಜನರು ಏನುಹೇಳಿಯಾರು !

ಅನ್ಯಾಯೇನ ವ್ರತಂ ಚೀರ್ಣಂ ಸರ್ವತೋ ವಿಕೃತಂ ಭವೇತ್
ಕದಾಚಿದಪಿ ಕಾಲೇತು ಗಚ್ಛೇತ್ಸೌಕರವಂ ಪ್ರತಿ ।
ತತೋ ಬ್ರೂಯಾಮಿದಂ ವಾಕ್ಯಂ ಯನ್ಮೇ ಹೃದ್ಯವತಿಷ್ಠತೇ ॥ ೧೪೦ ॥

ತತಃ ಪ್ರಿಯಾವಚಃ ಶ್ರುತ್ವಾ ಸಮುತ್ಥಾಯ ತತೋ ನೃಪಃ ।
ದೋರ್ಭ್ಯಾಮಾಲಿಂಗ್ಯ ವೈ ಭಾರ್ಯಾಂ ವಾಕ್ಯಮೇತದುವಾಚಹ॥ ೧೪೧ ॥

ಕಿಮಿದಂ ಭಾಷಸೇ ಭದ್ರೇ ಆತ್ಮಾನಂ ನ ಪ್ರಶಂಸಸಿ ।
ಅಶೋಚ್ಯಾ ಶೋಚತೀ ಯಾತು ಯಚ್ಚ ನಿಂದಸಿ ಚಾತ್ಮನಿ ॥ ೧೪೨ ॥

ಭಿಷಜಃ ಕಿಂ ನ ವಿದ್ಯಂತೇ ಅಷ್ಟಕರ್ಮಸಮಾಹಿತಾಃ ।
ಯೇ ತು ಸಂಸ್ಥಾಪಯೇಯುಸ್ತೇ ಶಿರಸೋ ವೇದನಾಂ ಪರಾಂ ॥ ೧೪೩ ॥

ತ್ವಯಾ ಪೂರ್ವಂ ವ್ರತಮಿಷಾದ್ವೇದನಾ ಯದಿ ಗೋಪಿತಾ ॥ ೧೪೪ ॥

ಅನ್ಯಾಯವಾಗಿ ನಿಶ್ಚಯಮಾಡಿದ ಈ ವ್ರತವು ಎಲ್ಲೂ ವಿಕಾರವಾಗುವುದು. ಯಾವಾಗಲಾದರೂ ಒಂದು ಕಾಲದಲ್ಲಿ ಸೌಕರಕ್ಷೇತ್ರಕ್ಕೆ ಹೋದರೆ, ಬಳಿಕ ಅಲ್ಲಿ ನನ್ನ ಮನಸ್ಸಿನಲ್ಲಿರುವ ಈ ಮಾತನ್ನು ಪತಿಗೆ ಹೇಳುವೆನು" ಎಂದು ತನಗೆತಾನೇ ಹೇಳಿಕೊಂಡಳು.

೧೪೧ ದೊರೆಯು ಪ್ರಿಯೆಯ ಮಾತನ್ನು ಕೇಳಿ, ಬಳಿಕ ಎದ್ದು, ತೋಳುಗಳಿಂದ ಅವಳನ್ನು ಅಪ್ಪಿಕೊಂಡು, ಈ (ಮುಂದಿನ) ಮಾತನಾಡಿದನು.

೧೪೨–೧೪೪. "ಭದ್ರೇ, ಇದೇನು ಹೀಗೆ ಮಾತನಾಡುತ್ತೀಯೆ! ನಿನ್ನನ್ನು ಶ್ಲಾಘಿಸಿಕೊಳ್ಳುವುದಿಲ್ಲ. ಶೋಕಕ್ಕೆ ಅರ್ಹಳಲ್ಲದ ನೀನು ಶೋಕಿಸುತ್ತೀಯೆ. ನಿನ್ನಲ್ಲಿ ನೀನೇ ನಿಂದಿಸಿಕೊಳ್ಳುತ್ತೀಯೆ. ನಿನ್ನ ಅತಿಯಾದ ತಲೆಯನೋವನ್ನು ನಿಲ್ಲಿಸಬಲ್ಲ ಅಷ್ಟಕರ್ಮಸಿದ್ಧಾಂತವನ್ನರಿತಿರುವ ವೈದ್ಯರಿಲ್ಲವೆ! ಆದರೂ ನೀನು ವ್ರತದ ನೆಪದಿಂದ ಮೊದಲು ನೋವನ್ನು ಮರೆಮಾಚಿದೆ.

ಯೇನ ವೈ ಕ್ಲಿಶ್ಯಸೇ ಭದ್ರೇ ಶಿರಸ್ಯಸುಖಪೀಡಿತಾ ।
ವಾಯುನಾ ಕಫಪಿತ್ತೇನ ಶೋಣಿತೇನ ಕಫೇನ ವಾ || ೧೪೫ ||

ಸನ್ನಿಪಾತಸ್ಯ ದೋಷೇಣ ಯೇನೇದಂ ಪೀಡ್ಯತೇ ಶಿರಃ ।
ಕಾಲೇ ವಿಕಾಲೇ ಕೃತ್ವಾ ವೈ ಪಿತ್ತೋದ್ರೇಕಂ ಯಶಸ್ವಿನಿ || ೧೪೬ ||

ಅಶ್ನಾಸಿ ಪಿಶಿತಂ ಚಾನ್ನಂ ತೇನೇದಂ ದೂಷ್ಯತೇ ಶಿರಃ ।
ಕ್ರಿಯತೇತ್ರ ಸಿರಾವೇಧೋ ರುಧಿರಸ್ರಾವ ಏವ ಚ || ೧೪೭ ||

ದೀಯತೇ ಚೇಚ್ಛಿರೋಭ್ಯಂಗಃ ಕಥಂ ತಿಷ್ಠತಿ ವೇದನಾ ।
ಕಿಮೇತದ್ಗೋಪಿತಂ ಭದ್ರೇ ಮಯಿ ತನ್ನನಿವೇದಿತಂ || ೧೪೮ ||

ತ್ವಯಾ ವ್ರತಮಿಷೇಣಾಯಮಾತ್ಮಾ ಸಂಕ್ಲಿಶ್ಯತೇ ವೃಥಾ
ಯಾ ತ್ವಂ ವೈ ಭಾಷಸೇ ವಾಕ್ಯಂ ಸೌಕರೇ ಗಮನಂ ಪ್ರತಿ ।
ತತ್ರ ಗೋಪ್ಯಂ ಕಿಮಸ್ತೀತಿ ಯೇನ ತೇ ಪರಿವೇದನಾ || ೧೪೯ ||

೧೪೫–೧೪೮. ಭದ್ರೇ, ಯಾವಕಾರಣದಿಂದ ತಲೆಯನೋವಿನಿಂದ ಪೀಡಿತಳಾಗಿ ಸಂಕಟಪಡುತ್ತೀಯೆ? ವಾಯುವಿನಿಂದಲೆ? ಕಫಪಿತ್ತದಿಂದಲೆ? ರಕ್ತದಿಂದಲೆ? ಕಫದಿಂದಲೇ? ಸನ್ನಿಪಾತದೋಷದಿಂದಲೆ? ಏತರಿಂದ ಈ ತಲೆನೋವು? ಸಕಾಲವನ್ನು ಬಿಟ್ಟು ಪಿತ್ತೋದ್ರೇಕವಾಗುವಂತೆ ಮಾಡಿಕೊಂಡು ಅಕಾಲದಲ್ಲಿ ಅನ್ನವನ್ನೂ, ಮಾಂಸವನ್ನೂ ತಿನ್ನುತ್ತೀಯೆ. ಆದರಿಂದ ಈ ತಲೆನೋವು. ಈ ತಲೆನೋವನ್ನು ಹೋಗಲಾಡಿಸಲು (ವೈದ್ಯರು) ನರದಲ್ಲಿ ರಂಧ್ರವನ್ನು ಮಾಡಿ ರಕ್ತವನ್ನು ಸುರಿಸುವರು. ತಲೆಗೆ ಅಭ್ಯಂಜನವನ್ನು ಮಾಡಿಕೊಂಡರೆ ತಲೆನೋವು ಹೇಗೆತಾನೆ ಇದ್ದೀತು! ಮಂಗಳೇ. ಅದನ್ನು ನನಗೆ ಹೇಳದೆ ಏತಕ್ಕಾಗಿ ಗುಟ್ಟುಮಾಡಿದೆ?

೧೪೯. ವ್ರತದ ನೆಪದಿಂದ ನೀನು ಸುಮ್ಮನೆ ನಿನ್ನ ಜೀವವನ್ನು ಕ್ಲೇಶ ಪಡಿಸುತ್ತೀಯೆ. ಸೌಕರಕ್ಷೇತ್ರಕ್ಕೆ ಹೋಗುವ ವಿಚಾರದಲ್ಲಿ ನೀನು ಮಾತನಾಡುತ್ತೀಯೆ. ಅಲ್ಲಿ ಯಾವ ರಹಸ್ಯವಿದೆಯೆಂದು ಅದಕ್ಕಾಗಿ ನಿನಗೆ ದುಃಖ?"

ತತಃ ಕಮಲಪತ್ರಾಕ್ಷೀ ಸವ್ರೀಡಾ ದುಃಖಪೀಡಿತಾ ।
ಭರ್ತುರ್ಗೃಹೀತ್ವಾ ಚರಣೌ ಸಾ ಪತಿಂ ಪ್ರತ್ಯಭಾಷತ ॥ ೧೫೦ ॥

ಪ್ರಸೀದ ಮೇ ಮಹಾರಾಜ ನೇದಂ ಪ್ರಷ್ಟುಂ ತ್ವಮರ್ಹಸಿ ।
ಮಮ ಪೂರ್ವಕಥಾಂ ವೀರ ದುಷ್ಟಕರ್ಮಾನುಸಾರಿಣೀಂ ॥ ೧೫೧ ॥

ತತೋ ಭಾರ್ಯಾವಚಃ ಶ್ರುತ್ವಾ ಕಲಿಂಗಾನಾಂ ಜನಾಧಿಪಃ ।
ಉವಾಚ ಮಧುರಂ ವಾಕ್ಯಂ ಸುಹಿತೇನಾಂತರಾತ್ಮನಾ ॥ ೧೫೨ ॥

ಕಿಮಿದಂ ಗೋಪ್ಯತೇ ದೇವಿ ಮಮಾಗ್ರೇ ವರವರ್ಣಿನಿ ।
ತಥ್ಯಮೇವ ಮಹಾಭಾಗೇ ಪೃಚ್ಛ್ಯಮಾನಾ ಯಶಸ್ವಿನಿ ॥ ೧೫೩ ॥

ತತೋ ಭರ್ತೃವಚಃ ಶ್ರುತ್ವಾ ವಿಸ್ಮಯೋತ್ಫುಲ್ಲಲೋಚನಾ ।
ಉವಾಚ ಮಧುರಂ ವಾಕ್ಯಂ ಕಲಿಂಗಾನಾಂ ಮಹಾಧಿಪಂ ॥ ೧೫೪ ॥

---

೧೫೦. ಬಳಿಕ ದುಃಖಪೀಡಿತಳಾಗಿದ್ದ ಆ ಕಮಲದಳನೇತ್ರೆಯು ನಾಚಿಕೆಯುಳ್ಳವಳಾಗಿ, ಪತಿಯು ಕಾಲುಗಳನ್ನು ಹಿಡಿದುಕೊಂಡು, ಅವನಿಗೆ ಹೇಳಿದಳು.

೧೫೧. "ಮಹಾರಾಜ, ನನ್ನಲ್ಲಿ ಪ್ರಸನ್ನನಾಗು. ವೀರನೇ, ದುಷ್ಟಕರ್ಮವನ್ನು ಅನುಸರಿಸಿದ ನನ್ನ ಪೂರ್ವಕಥೆಯನ್ನು ನೀನು ನನ್ನನ್ನು ಕೇಳಬಾರದು."

೧೫೨–೧೫೩. ಪ್ರಿಯೆಯ ಮಾತನ್ನು ಕೇಳಿ, ಕಳಿಂಗರಾಜನು ಅತಿಹಿತಕರವಾದ ಮನಸ್ಸಿನಿಂದ ಅವಳೊಡನೆ ಇಂಪಾದ ಮಾತಿನಿಂದ "ಉತ್ತಮೇ, ದೇವಿ, ಯಶೋವಂತೇ, ಮಹಾಭಾಗ್ಯೇ, ಕೇಳುತ್ತಿದ್ದರೂ ನನ್ನೆದುರಿಗೆ ಈ ನಿಜವನ್ನೇ ಏಕೆ ಮರೆಮಾಚುತ್ತೀಯೇ ?" ಎಂದನು.

೧೫೪. ಪತಿಯು ಮಾತನ್ನು ಕೇಳಿ, ಬಳಿಕ ಆಶ್ಚರ್ಯದಿಂದ ಅರಳಿದ ಕಣ್ಣುಳ್ಳ ಆ ರಾಣಿಯು ಕಲಿಂಗೇಶ್ವರನಾದ ಅವನೊಡನೆ ಇಂಪಾಗಿ ಮುಂದಿನ ಮಾತನಾಡಿದಳು.

ಭರ್ತಾ ಧರ್ಮೋ ಯಶೋ ಭರ್ತಾ ಭರ್ತೈವ ಪ್ರಿಯಮಾತ್ಮನಃ ।
ಅವಶ್ಯಮೇವ ತದ್ವಾಚ್ಯಂ ಯನ್ಮಾಂ ತ್ವಂ ಪರಿಪೃಚ್ಛಸಿ ॥ ೧೫೫ ॥

ತಥಾಪಿ ನೋತ್ಸಹೇ ವಕ್ತುಂ ಹೃದಿ ಯತ್ಪರಿವರ್ತತೇ ।
ತವ ಪೀಡಾಕರಮಿತಿ ತನ್ಮಾಂ ನ ಪ್ರಷ್ಟುಮರ್ಹಸಿ ॥ ೧೫೬ ॥

ಏತದ್ದುಃಖಂ ಮಹಾಭಾಗ ಹೃದಿ ಮೇ ಪರಿವರ್ತತೇ ।
ಸುಖೇ ಹಿ ವರ್ತಸೇ ನಿತ್ಯಂ ಮಹಾರಾಜೋಽಸಿ ಸುಂದರಃ ॥ ೧೫೭ ॥

ಬಹ್ವ್ಯೋ ಮತ್ಸದೃಶಾ ಭಾರ್ಯಾಸ್ತಿಷ್ಠಂತ್ಯಂತಃಪುರೇ ತವ ।
ಪ್ರಾಶ್ನಾಸಿ ಪಿಶಿತಾನ್ನಂಚ ಪ್ರಾವಾರಾನ್ಭೂಷಣಾನಿ ಚ ॥ ೧೫೮ ॥

ಆಚ್ಛಾದಯಸಿ ಯಾನೈಶ್ಚ ಹಸ್ತ್ಯಶ್ವರಥಪೃಷ್ಠಗಃ ।
ಗಚ್ಛಸ್ಯನಾರತಂ ರಾಜನ್ಕಿಂ ಸ್ಥಿತಂ ಚ ಮಯಾ ವಿನಾ ॥ ೧೫೯ ॥

೧೫೫-೧೫೬. "ನನಗೆ ಪತಿಯೇ ಧರ್ಮ. ಪತಿಯೇ ಯಶಸ್ಸು. ಪತಿಯೇ ಪ್ರಿಯವಸ್ತು. ಆದುದರಿಂದ ನೀನು ಕೇಳುವುದನ್ನು ಅವಶ್ಯವಾಗಿ ನಾನು ಹೇಳಬೇಕು. ಆದರೂ ಅದು ನಿನಗೆ ದುಃಖಕರವಾದುದೆಂಬುದರಿಂದ ನನ್ನ ಹೃದಯದಲ್ಲಿ ತುಂಬಿರುವುದನ್ನು ಹೇಳುವುದಕ್ಕೆ ನನಗೆ ಇಷ್ಟವಿಲ್ಲ. ಆದುದರಿಂದ ನೀನು ಅದನ್ನು ಪ್ರಶ್ನಿಸಬೇಡ.

೧೫೭. ಮಹಾಭಾಗ್ಯನೇ, ಈ ದುಃಖವು ನನ್ನ ಹೃದಯದಲ್ಲಿ ಸುತ್ತುತ್ತಿದೆ. ನೀನು ಯಾವಾಗಲೂ ಸುಖದಲ್ಲಿದ್ದೀಯೆ. ಮಹಾರಾಜನೂ, ಸುಂದರನೂ ಆಗಿರುವೆ.

೧೫೮-೧೫೯. ನಿನಗೆ ಅಂತಃಪುರದಲ್ಲಿ ನನ್ನಂತಹ ಹಲವರು ಹೆಂಡಿರಿರುವರು. ಮಾಂಸಾನ್ನವನ್ನು ಭುಜಿಸುವೆ. ಮೇಲುಹೊದಿಕೆಗಳನ್ನೂ, ಆಭರಣಗಳನ್ನೂ ಧರಿಸುವೆ. ಆನೆಕುದುರೆಬಂಡಿಗಳು ನಿನ್ನನ್ನು ಹಿಂಬಾಲಿಸಿ ಬರುತ್ತಿರಲು ನೀನು ವಾಹನಗಳಿಂದ ಯಾವಾಗಲೂ ಸಂಚಾರಮಾಡುವೆ. ದೊರೆಯೇ, ನಾನಿಲ್ಲದಿದ್ದರೆ ನಿಂತುಹೋದುದೇನು ? !

ಆಜ್ಞಾ ಚ ತೇಽಪ್ರತಿಹತಾ ಗಂಧಾನ್ಭೋಗಾಂಶ್ಚ ಸರ್ವಶಃ ।
ಬಿಭರ್ಷಿ ಸ್ವೇಚ್ಛಯಾ ರಾಜನ್ನ ಮಾಂ ಸಂಪ್ರಷ್ಟುಮರ್ಹಸಿ ॥ ೧೬೦ ॥

ತ್ವಂ ಮೇ ದೇವೋ ಗುರುಸ್ಸಾಕ್ಷಾದ್ಭರ್ತಾ ಯಜ್ಞಸ್ಸನಾತನಃ ।
ಧರ್ಮಶ್ಚಾರ್ಥಶ್ಚ ಕಾಮಶ್ಚ ಯಶಃ ಸ್ವರ್ಗಶ್ಚ ಮಾನದ ॥ ೧೬೧ ॥

ಪೃಷ್ಟಯಾ ಮೇ ಸದಾ ವಾಚ್ಯಂ ಸರ್ವಂ ಸತ್ಯಂ ಪ್ರಿಯಂ ತವ ।
ಪತಿವ್ರತಾನಾಂ ಸರ್ವೇಷಾಮೇಷ ಧರ್ಮಸ್ಸನಾತನಃ ॥ ೧೬೨ ॥

ನ ಸಂಶಯೋ ನಿಯೋಕ್ತವ್ಯಃ ಸುಖಸ್ಥೋ ಹಿ ಪತಿಃ ಸ್ತ್ರಿಯಾ ।
ಏತನ್ನಿಶ್ಚಿತ್ಯ ಮೇ ಪೀಡಾಂ ನ ಪ್ರಷ್ಟುಂ ತ್ವಮಿಹಾರ್ಹಸಿ ॥ ೧೬೩ ॥

ತತೋ ಭಾರ್ಯಾವಚಃ ಶ್ರುತ್ವಾ ಕಲಿಂಗಾನಾಂ ಜನಾಧಿಪಃ ।
ಉವಾಚ ಮಧುರಂ ವಾಕ್ಯಂ ಭಾರ್ಯಾಪೀಡಾಭಿಪೀಡಿತಃ ॥ ೧೬೪ ॥

---

೧೬೦. ದೊರೆಯೇ, ನಿನ್ನ ಅಪ್ಪಣೆಯು ಎಲ್ಲೂ ತಡೆಯಿಲ್ಲದುದಾಗಿದೆ ಗಂಧಗಳನ್ನೂ, ಬೇರೆಯ ಭೋಗಗಳನ್ನೂ ನಿನ್ನ ಇಷ್ಟಾನುಸಾರವಾಗಿ ಅನುಭವಿಸುತ್ತೀಯೆ. ಹೀಗಿರುವಾಗ ನೀನು ನನ್ನ ಆ ವಿಚಾರವನ್ನು ಕೇಳಬಾರದು.

೧೬೧-೧೬೩. ಮಾನದ, ನನಗೆ ನೀನೇ ಪ್ರತ್ಯಕ್ಷನಾದ ದೇವನು. ಗುರು. ಸನಾತನಯಜ್ಞ. ಧರ್ಮಾರ್ಥಕಾಮಯಶಸ್ಸೂ, ಸ್ವರ್ಗವೂ ನೀನೇ. ನೀನು ಕೇಳಿದ ಮೇಲೆ ಯಾವಾಗಲೂ, ನಿನಗೆ ಪ್ರಿಯವೂ, ಸತ್ಯವೂ ಆದುದೆಲ್ಲವನ್ನೂ ನಾನು ಹೇಳಬೇಕು. ಪತಿವ್ರತೆಯರೆಲ್ಲರಿಗೂ ಇದು ಶಾಶ್ವತವಾದ ಧರ್ಮ. ಸುಖದಲ್ಲಿರುವ ಪತಿಯನ್ನು ಪತ್ನಿಯು ಸಂದೇಹದಲ್ಲಿ ಸಿಲುಕಿಸಬಾರದು ಎಂಬುದನ್ನು ನೀನು ನಿಶ್ಚಯಿಸಿಕೊಂಡು, ನನ್ನ ಬಾಧೆಯನ್ನು ನೀನು ಇಲ್ಲಿ ಕೇಳದಿರಬೇಕಾಗಿದೆ."

೧೬೪. ಹೆಂಡತಿಯು ಈ ಮಾತನ್ನು ಕೇಳಿ, ಕಳಿಂಗರಾಜನು, ಅವಳ ದುಃಖದಿಂದ ತಾನೂ ದುಃಖಿತನಾಗಿ ಅವಳಿಗೆ ಇಂಪಾದ ಮುಂದಿನ ಮಾತನ್ನು ಹೇಳಿದನು.

ಶೃಣು ತತ್ತ್ವೇನ ಮೇ ಭದ್ರೇ ಶುಭಂ ವಾ ಯದಿ ವಾಶುಭಂ ।
ಅವಶ್ಯಮೇವ ವಕ್ತವ್ಯಂ ಪೃಷ್ಟಯಾ ಪತಿನಾ ಧ್ರುವಂ ॥ ೧೬೫ ॥

ಯಾನಿ ಗುಹ್ಯಾನ್ಯಗುಹ್ಯಾನಿ ಸ್ತ್ರಿಯೋ ಧರ್ಮಪಥೇ ಸ್ಥಿತಾಃ ।
ಭರ್ತಾರಂ ಚ ಸಮಾಸಾದ್ಯ ರಹಸ್ತಾನ್ಗೋಪಯಂತಿ ನ ॥ ೧೬೬ ॥

ಕೃತ್ವಾ ಸುದುಷ್ಕರಂ ಕರ್ಮ *ರಾಗಲೋಭಪ್ರಮೋಹಿತಾ ।
ಯಾ ಸುಗೋಪಾಯತೇ ಗುಹ್ಯಂ ಸತೀ ಸಾ ನೋಚ್ಯತೇ ಬುಧೈಃ ॥೧೬೭॥

ಏವಂ ಚಿಂತ್ಯ ಮಹಾಭಾಗೇ ಬ್ರೂಹಿ ಸತ್ಯಂ ಯಶಸ್ವಿನಿ ।
ಅಧರ್ಮಸ್ತೇ ನ ಭವಿತಾ ಗುಹ್ಯಾರ್ಥಕಥನೇ ಮಮ ॥ ೧೬೮ ॥

ತತೋ ಭರ್ತೃವಚಃ ಶ್ರುತ್ವಾ ಸಾ ದೇವಿ ಪರಮಪ್ರಿಯಾ ।
ಪ್ರತ್ಯುವಾಚ ಪ್ರಿಯಂ ವಾಕ್ಯಂ ರಾಜಾನಂ ಧರ್ಮವಾದಿನಂ ॥ ೧೬೯ ॥

---

೧೬೫. "ನನ್ನ ಮಂಗಳೇ, ತತ್ತ್ವವನ್ನು ಕೇಳು. ಪತಿಯು ಕೇಳಿದರೆ, ಪತ್ನಿಯು, ಒಳ್ಳೆಯದಾಗಲಿ, ಕೆಟ್ಟದೇ ಆಗಲಿ ಅದನ್ನು ಅವಶ್ಯವಾಗಿ ಹೇಳಲೇಬೇಕು.

೧೬೬ ಧರ್ಮಮಾರ್ಗದಲ್ಲಿರುವ ಸ್ತ್ರೀಯರು ಗುಟ್ಟಾದ ಅಥವಾ ಗುಟ್ಟಲ್ಲದ ಯಾವ ವಿಚಾರಗಳನ್ನೇ ಆಗಲಿ ಪತಿಯ ಹತ್ತಿರ ಮುಚ್ಚುಮರೆಮಾಡುವುದಿಲ್ಲ.

೧೬೭–೧೬೮. ಯಾವಳು ಬಹುದುಷ್ಕರವಾದ ಕರ್ಮಗಳನ್ನು ಮಾಡಿ, *ರಾಗಲೋಭಗಳಿಂದ ಮೋಹಿತಳಾಗಿ ಪತಿಯಲ್ಲಿ ರಹಸ್ಯವಿಚಾರವನ್ನು ಹೇಳದೆ ಮರೆಸುವಳೋ ಅವಳನ್ನು ಪಂಡಿತರು ಪ್ರತಿವ್ರತೆಯೆಂದು ಹೇಳುವುದಿಲ್ಲ. ಮಹಾಭಾಗ್ಯೇ, ಇದನ್ನು ಆಲೋಚಿಸಿ, ಸತ್ಯವನ್ನು ಹೇಳು. ಯಶೋವತೀ, ನನಗೆ ರಹಸ್ಯವಿಚಾರವನ್ನು ಹೇಳುವುದರಿಂದ ನಿನಗೆ ಅಧರ್ಮವುಂಟಾಗುವುದಿಲ್ಲ."

೧೬೯. ರಾಜನಿಗೆ ಪರಮಪ್ರಿಯಳಾದ ಆ ದೇವಿಯು ಪತಿಯ ಮಾತನ್ನು ಕೇಳಿ, ಧರ್ಮವಾದಿಯಾದ ಆತನಿಗೆ ಹಿತವಾದ ಮುಂದಿನ ಮಾತನ್ನು ಹೇಳಿದಳು.

---

* ರಾಗ= ಅನುರಾಗ, ಮಾತ್ಸರ್ಯ.

ದೇವೋ ರಾಜಾ ಗುರೂ ರಾಜಾ ಸೋಮೋರಾಜೇತಿ ಪಠ್ಯತೇ |
ಅವಶ್ಯಮೇವ ವಕ್ತವ್ಯಮೇಷ ಧರ್ಮಸ್ಸನಾತನಃ || ೧೭೦ ||

ಯದಿ ಗುಹ್ಯಂ ನ ಮೇ ಕಾರ್ಯಂ ಶ್ರೂಯತಾಂ ರಾಜಸತ್ತಮ |
ಅಭಿಷಿಂಚಸ್ವ ರಾಜ್ಯೇ ಸ್ವೇ ಜ್ಯೇಷ್ಠಪುತ್ರಂ ಕುಲೋಚಿತಂ || ೧೭೧ ||

ಏಹಿ ನಾಥ ಮಯಾ ಸಾರ್ಧಂ ಕ್ಷೇತ್ರಂ ಸೌಕರವಂ ಪ್ರತಿ |
ತತೋ ಭಾರ್ಯಾವಚಃ ಶ್ರುತ್ವಾ ಕಲಿಂಗಾನಾಂ ಜನಾಧಿಪಃ || ೧೭೨ ||

ಬಾಢಮಿತ್ಯೇವ ವಾಕ್ಯೇನ ಛಂದಯಾಮಾಸ ತಾಂ ಪ್ರಿಯಾಂ
ದಾಸ್ಯಾಮಿ ರಾಜ್ಯಂ ಪುತ್ರಾಯ ವಚನಾತ್ತವ ಸುಂದರಿ || ೭೭೩ ||

ಯಥಾ ಪೂರ್ವಂ ಮಯಾ ಲಬ್ಧಂ ಸ್ವಪಿತುರ್ಯದ್ಯಥಾಕ್ರಮಂ || ೧೭೪ ||

೧೭೦–೧೭೨. "ರಾಜನೇ ದೇವನೂ, ಗುರುವೂ, ಚಂದ್ರನೂ ಆಗಿರುವನು. ಪತ್ನಿಯು ರಹಸ್ಯವನ್ನು ಅವಶ್ಯವಾಗಿ ಹೇಳಬೇಕು. ಇದು ಸನಾತನಧರ್ಮ. ಆದರೆ ರಾಜೋತ್ತಮನೇ ಕೇಳು. ನನ್ನ ಬಾಧೆಯ ವಿಚಾರವನ್ನು ನಾನು ಗುಟ್ಟುಮಾಡದಿರಬೇಕಾದರೆ, ಕುಲಕ್ಕೆ ತಕ್ಕವನಾದ ಹಿರಿಯ ಮಗನಿಗೆ ನಿನ್ನ ರಾಜ್ಯದಲ್ಲಿ ಪಟ್ಟಾಭಿಷೇಕವನ್ನು ಮಾಡು. ನಾಥನೇ, ಬಳಿಕ ನನ್ನೊಡನೆ ಸೌಕರ ಕ್ಷೇತ್ರಕ್ಕೆ ಬಾ"

೧೭೩–೧೭೪. ಕಳಿಂಗೇಶನು ಹೆಂಡತಿಯ ಮಾತನ್ನು ಕೇಳಿ, "ನಿಜವಾಗಿಯೂ ಆಗಬಹುದು." ಎಂದು ಹೇಳಿ, ಆ ಪ್ರಿಯೆಯನ್ನು ಸಮಾಧಾನಗೊಳಿಸಿದನು. "ಸುಂದರಿ, ನೀನು ಹೇಳಿದಂತೆ ರಾಜ್ಯವನ್ನು ನಾನು ನನ್ನ ತಂದೆಯಿಂದ ಪೂರ್ವದಲ್ಲಿ ಹೇಗೆ ಪಡೆದೆನೋ ಹಾಗೆಯೇ ಕ್ರಮದಂತೆ ಹಿರಿಯ ಮಗನಿಗೆ ಕೊಡುವೆನು" ಎಂದೂ ಹೇಳಿದನು.

ಇತ್ಯುಕ್ತ್ವಾ ತೌ ಮಹಾಭಾಗೌ ಯುಕ್ತಂ ಚೈವ ಪರಸ್ಪರಂ ।
ರಾಜಾ ಚ ರಾಜಪುತ್ರೀ ಚ ನಿಷ್ಕ್ರಾಂತೌ ತದ್ಗೃಹಾತ್ತತಃ ॥ ೧೭೫ ॥

ತತಃ ಕುಂಚುಕಿನಂ ದೃಷ್ಟ್ವಾ ಪ್ರೋವಾಚೋಚ್ಚಸ್ವರೇಣ ಚ ।
ಅಪಸಾರಯ ಸರ್ವಂ ವೈ ಜನಮಾವೃತ್ಯ ತಿಷ್ಠತಿ ॥ ೧೭೬ ॥

ಜ್ಞಾನಕೌತೂಹಲೋ ಯೋತ್ರ ಶೀಘ್ರಂ ಗಚ್ಛತ್ವಿತೋ ಬಹಿಃ ॥ ೧೭೭ ॥

ತತೋ ಹಲಹಲಾಶಬ್ದಃ ಪ್ರವೃತ್ತೋಽಂತಃಪುರೇ ಮಹಾನ್ ।
ಕಿಮಿದಂ ಕಾರಣಂ ವೃತ್ತಂ ಯೇನ ಚೋತ್ಸರಿತಾ ವಯಂ ॥ ೧೭೮ ॥

ನಾಜ್ಞಾಸ್ತಿ ಚಿಂತಾಲೋಲಾನಾಮಾಗತಾನಾಂ ಸ್ವಕಾರ್ಯತಃ ।
ಅಶ್ರೋತವ್ಯಂ ಭವೇನ್ನೂನಂ ಯೇನ ಚೋತ್ಸಾರಿತಾ ವಯಂ ॥ ೧೭೯ ॥

---

೧೭೫. ಮಹಾಭಾಗ್ಯರಾದ ಆ ರಾಜನೂ ರಾಜಪುತ್ರಿಯೂ ಪರಸ್ಪರವಾಗಿ ಹೀಗೆ ಯುಕ್ತವಾದ ಮಾತನ್ನು ಆಡಿಕೊಂಡು, ರಾಣಿಯು ಮಲಗಿದ್ದ ಆ ಮನೆಯಿಂದ ಹೊರಗೆ ಹೊರಟರು.

೧೭೬-೧೭೭. ಬಳಿಕ ದೊರೆಯು, ಕಂಚುಕಿಯನ್ನು ನೋಡಿ, ಗಟ್ಟಿಯಾದ ದನಿಯಿಂದ "ಜನವನ್ನೆಲ್ಲಾ ಹಿಂದಕ್ಕೆ ಕಳುಹಿಸು. ಸುತ್ತಿಕೊಂಡು ನಿಂತಿದೆ. ವಿಚಾರವನ್ನು ತಿಳಿದುಕೊಳ್ಳಲು ಕುತೂಹಲವುಳ್ಳವರಾಗಿ ಇಲ್ಲಿರುವವರು ಬೇಗನೆ ಇಲ್ಲಿಂದ ಹೊರಗೆಹೋಗಲಿ." ಎಂದು ಹೇಳಿದನು.

೧೭೮-೧೭೯. ಬಳಿಕ ಅಂತಃಪುರದಲ್ಲಿ, "ಇದೇನುಕಾರಣವು ನಡೆಯಿತು ? ಏತಕ್ಕೆ ನಮ್ಮನ್ನು ಹೊರಕ್ಕೆ ಕಳುಹಿಸುತ್ತಿರುವರು ? ಚಿಂತೆಯಿಂದ ಚಂಚಲರಾಗಿ ಸ್ವಕಾರ್ಯಕ್ಕಾಗಿ ಬಂದವರಿಗೆ ಆಜ್ಞೆಯಿಲ್ಲ. ಏತಕ್ಕಾಗಿ ನಮ್ಮನ್ನು ಹೊರಕ್ಕೆ ಕಳುಹಿಸಿದರೋ! ನಿಜವಾಗಿ ನಾವು ಕೇಳಬಾರದ ವಿಚಾರವಾಗಿದ್ದೀತು." ಎಂದು ಹೆಚ್ಚಾದ ಹಲಹಲಶಬ್ದವು ಮೊದಲಾಯಿತು.

ತತೋ ಭೋಜ್ಯಾನ್ನಪಾನಾನಿ ಭುಕ್ತ್ವಾ ರುಚ್ಯಾ ನೃಪಃ ಪ್ರಿಯಾನ್ ।
ಸಮಂ ಮಹಿಷ್ಯಾ ಚಾಚಮ್ಯ ಕ್ಷಣಂ ವಿಶ್ರಮ್ಯ ಪ್ರಾರ್ಥಿವಃ ॥ ೧೮೦ ॥

ಅಮಾತ್ಯಾನಾನಯಾಮಾಸ ಹ್ಯಭಿಷೇಕ್ತುಂ ನಿಜಂ ಸುತಂ ॥ ೧೮೧ ॥

ಸಂಪ್ರಾಪ್ತಾನ್ಸಚಿವಾಂಸ್ತತ್ರ ರಾಜಾ ವಚನಮಬ್ರವೀತ್ ।
ರಾಜಧಾನೀ ಸಂಸ್ಕ್ರಿಯತಾಂ ಮಂಗಲಾಚಾರಪೂರ್ವಕಂ ॥ ೧೮೨ ॥

ವೃದ್ಧಾಮಾತ್ಯಮುಪಸ್ಥಾಯ ಕಲಿಂಗೋ ಧರ್ಮಸಂಹಿತಂ ।
ನೀತಿಶಾಸ್ತ್ರಾರ್ಥತತ್ತ್ವಜ್ಞಮುವಾಚಾವಿಕ್ಲಬಂ ವಚಃ ॥ ೧೮೩ ॥

ಕಲ್ಯಮಿಚ್ಛಾಮ್ಯಹಂ ತಾತ ಪುತ್ರಂ ರಾಜ್ಯೇಽಭಿಷೇಚಿತುಂ ।
ಶೀಘ್ರಂ ಸಜ್ಜಂ ಪ್ರಕುರ್ವಂತು ಅಭಿಷೇಚನಿಕಂ ವಿಧಿಂ ॥ ೧೮೪ ॥

೧೮೦–೧೮೧. ಬಳಿಕ ದೊರೆಯು ರಾಣಿಯೊಡನೆ ತನಗಿಷ್ಟವಾದ ಭೋಜ್ಯಾನ್ನಪಾನಗಳನ್ನು ಆಸಕ್ತಿಯಿಂದ ಭುಜಿಸಿ, ಆಚಮನಮಾಡಿ, ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡು, ತನ್ನ ಮಗನಿಗೆ ಅಭಿಷೇಕಮಾಡುವುದಕ್ಕಾಗಿ ಅಮಾತ್ಯರನ್ನು ಕರೆಸಿದನು.

೧೮೨. ತನ್ನ ಹತ್ತಿರ ಬಂದ ಸಚಿವರಿಗೆ, "ಮಂಗಳಾಚಾರಪೂರ್ವಕವಾಗಿ ರಾಜಧಾನಿಯು ಸರಿಯಾಗಿ ಅಲಂಕೃತವಾಗಲಿ" ಎಂದು ಹೇಳಿದನು.

೧೮೩–೧೮೪. ಧರ್ಮಯುಕ್ತನೂ, ನೀತಿಶಾಸ್ತ್ರಾರ್ಥತತ್ತ್ವಜ್ಞನೂ, ಆದ ವೃದ್ಧಮಂತ್ರಿಗೆ ವಂದಿಸಿ, "ತಾತ, ನಾಳೆ ಬೆಳಗ್ಗೆ ನಾನು ಮಗನಿಗೆ ರಾಜ್ಯಾಭಿಷೇಕವನ್ನು ಮಾಡಲು ಇಚ್ಛಿಸುತ್ತೇನೆ ಅಭಿಷೇಕಕ್ಕೆ ಬೇಕಾದ ವಿಧಾನಗಳೆಲ್ಲವೂ ಬೇಗನೆ ಸಿದ್ಧವಾಗಲಿ" ಎಂದು ಒತ್ತಿಹೇಳಿದನು.

ಭೂತಮಿತ್ಯೇವ ತಂ ಪ್ರಾಹುಸ್ಸಚಿವಾಸ್ತಂ ನರಾಧಿಪಂ
ಅಸ್ಮಾಕಮಪಿ ತಚ್ಚೈವ ರೋಚತೇ ಯತ್ತ್ವಭಾಷಸೇ ।
ಪುತ್ರಸ್ತೇ ರಾಜಶಾರ್ದೂಲ ಸರ್ವಲೋಕಹಿತೇ ರತಃ ॥ ೧೮೫ ॥

ಪ್ರಜಾನುರಾಗವಾಂಚ್ಛೂರೋ ನೀತಿಜ್ಞಸ್ತು ವಿಚಾರಕಃ ।
ಮನೀಷಿತಂ ತವ ವಿಭೋ ಸಮ್ಯಕ್ ನೋ ಮನಸಃ ಪ್ರಿಯಂ ।
ಏವಮುಕ್ತ್ವಾ ಗತಾಮಾತ್ಯಾಃ ಸೂರ್ಯಶ್ಚಾಸ್ತಮುಪಾಗತಃ ॥ ೧೮೬ ॥

ಸುಖೇನ ಸಾ ಗತಾ ರಾತ್ರಿಃ ಗೀತಗಾಂಧರ್ವವಾದಿತ್ರೈಃ
ಬೋಧಿತಸ್ಸ ಚ ರಾಜಾ ತು ಸೂತಮಾಗಧವಂದಿಭಿಃ ।
ವೈತಾಲಿಕೈಶ್ಚ ಸುಶ್ರೋಣಿ ಸರ್ವಮಂಗಲಪಾಠಕೈಃ ॥ ೧೮೭ ॥

ಪ್ರಭಾತಾಯಾಂ ತು ಶರ್ವರ್ಯಾಮುದಿತೇ ಚ ದಿವಾಕರೇ ।
ಮುಹೂರ್ತಂ ಶುಭಮಾಸಾದ್ಯ ಹ್ಯಭಿಷಿಕ್ತಸ್ಸುತಶ್ಶುಚಿಃ ॥ ೧೮೮ ॥

೧೮೫-೧೮೬. ಸಚಿವರು ರಾಜನಿಗೆ ಸಿದ್ಧವಾಯಿತೆಂದು ಹೇಳಿ, ಬಳಿಕ "ರಾಜಶಾರ್ದೂಲ, ನೀನು ಹೇಳುವುದೇ ನಮಗೂ ಇಷ್ಟವಾಗಿದೆ. ನಿನ್ನ ಮಗನು ಸರ್ವಲೋಕಹಿತದಲ್ಲಿ ಆಸಕ್ತನು, ಪ್ರಜೆಗಳಲ್ಲಿ ಅನುರಾಗವುಳ್ಳವನು, ಶೂರ, ನೀತಿಜ್ಞ, ವಿಚಾರಪರ ವಿಭುವೇ, ನಿನ್ನ ಮನಸ್ಸಿಗೆ ಬೇಕಾದುದು ನಮ್ಮ ಮನಸ್ಸಿಗೂ ಬಹು ಪ್ರಿಯವಾಗಿದೆ" ಎಂದು ಹೇಳಿ, ಅಮಾತ್ಯರು ಹೊರಟು ಹೋದರು. ಸೂರ್ಯನೂ ಅಸ್ತಂಗತನಾದನು.

೧೮೭. ಆ ರಾತ್ರಿಯು ಸುಖವಾಗಿ ಕಳೆಯಿತು. ಆ ದೊರೆಯನ್ನು ಸೂತ ಮಾಗಧವಂದಿಗಳೂ, ವೈತಾಳಿಕರೂ, ಸರ್ವಮಂಗಳಪಾಠಕರೂ, ಗೀತವಾದ್ಯಸ್ತುತಿಗಳಿಂದ ಎಚ್ಚರಗೊಳಿಸಿದರು.

೧೮೮. ರಾತ್ರಿಯು ಬೆಳಗಾಗಿ, ಸೂರ್ಯೋದಯವಾಗಲು, ಶುಭಮುಹೂರ್ತವನ್ನು ಪಡೆದು, ಶುಚಿರ್ಭೂತನಾದ ಮಗನಿಗೆ ಪಟ್ಟಾಭಿಷೇಕವನ್ನು ಮಾಡಿದನು.

ಏವಂ ದತ್ವಾ ತದಾ ರಾಜ್ಯಂ ಮೂರ್ಧ್ನಿ ಚಾಘ್ರಾಯ ಧರ್ಮವಿತ್ |
ಉವಾಚ ಮಧುರಂ ವಾಕ್ಯಂ ಪುತ್ರಂ ಪುತ್ರವತಾಂ ವರಃ ॥ ೧೮೯ ॥

ರಾಜ್ಯಸ್ಥೇನಾಪಿ ತೇ ಪುತ್ರ ಕರ್ತವ್ಯಂ ಶೃಣು ತನ್ಮಮ |
ಯದೀಚ್ಛೇಃ ಪರಮಂ ಧರ್ಮಂ ಪಿತೄಣಾಂ ತಾರಣಂ ತಥಾ ॥ ೧೯೦ ॥

ದಾತವ್ಯಂ ನ ಚ ಹಂತವ್ಯಂ ಹಂತವ್ಯಾ ಪಾರದಾರಿಕಾಃ |
ಬಾಲಘಾತಾಶ್ಚ ಹಂತವ್ಯಾ ಹಂತವ್ಯಾಃ ಸ್ತ್ರೀವಿಘಾತಕಾಃ ॥ ೧೯೧ ॥

ನ ಲೋಭಃ ಪರಭಾರ್ಯಾಸು ಬ್ರಾಹ್ಮಣೀಷು ವಿಶೇಷತಃ |
ಸುರೂಪಾಂ ಪರನಾರೀಂ ತು ದೃಷ್ಟ್ವಾ ಚಕ್ಷುರ್ನಿಮೀಲಯೇಃ ॥ ೧೯೨ ॥

ಪರದ್ರವ್ಯೇಷು ಮಾ ಲೋಭಃ ಅನ್ಯಾಯೋಪಾರ್ಜಿತೇಷು ಚ |
ನ ಚಿರಂ ತಿಷ್ಠಸಿ ಕ್ವಾಪಿ ಕಥಂಚನ ನ ಪಶ್ಯಸಿ ॥ ೧೯೩ ॥

---

೧೮೯. ಧರ್ಮಜ್ಞನೂ, ಪುತ್ರವಂತರಲ್ಲಿ ಶ್ರೇಷ್ಠನೂ ಆದ ಆ ದೊರೆಯು ಹೀಗೆ ಮಗನಿಗೆ ಆಗ ರಾಜ್ಯವನ್ನು ಕೊಟ್ಟು, ಮಗನ ನೆತ್ತಿಯನ್ನಾಘ್ರಾಣಿಸಿ, ಅವನಿಗೆ ಇಂಪಾದ ಮುಂದಿನ ಮಾತನ್ನು ಹೇಳಿದನು.—

೧೯೦. "ಮಗುವೇ, ಪರಮಧರ್ಮವನ್ನೂ ಪಿತೃಗಳ ಉತ್ತಾರಣವನ್ನೂ ಎಂದರೆ ಸದ್ಗತಿಯನ್ನೂ ಬಯಸುವೆಯಾದರೆ ದೊರೆಯಾಗಿರುವ ನಿನ್ನ ಕರ್ತವ್ಯವನ್ನು ನಾನು ಹೇಳುತ್ತೇನೆ ಕೇಳು.

೧೯೧ ದಾನಮಾಡುವುದನ್ನು ಬಿಡಬಾರದು. ಪರಸ್ತ್ರೀಸಂಗ ಮಾಡುವವರನ್ನೂ ಶಿಶುಗಳ ಅಥವಾ ಸ್ತ್ರೀಯರ ಕೊಲೆಯನ್ನು ಮಾಡುವವರನ್ನೂ ಕೊಲ್ಲಬೇಕು.

೧೯೨. ಪರವನಿತೆಯರನ್ನು ಅದರಲ್ಲಿಯೂ ಬ್ರಾಹ್ಮಣಸ್ತ್ರೀಯರನ್ನು ಬಯಸಬಾರದು. ಸುಂದರಿಯಾದ ಪರನಾರಿಯನ್ನು ಕಂಡರೆ ಕಣ್ಣನ್ನು ಮುಚ್ಚಿಕೊ.

೧೯೩-೧೯೪. ಪರದ್ರವ್ಯಗಳಲ್ಲಿಯೂ, ಅನ್ಯಾಯವಾದ ಸಂಪಾದನೆಗಳಲ್ಲಿಯೂ ಆಸೆಮಾಡಬಾರದು. ಬಹಳಕಾಲ ಎಲ್ಲೂ ನಿಲ್ಲಬೇಡ. ನಿಲ್ಲುವೆಡೆ

ರಕ್ಷಣೀಯಶ್ಚ ತೇ ದೇಶಃ ಕುಶಲನ್ಯಾಯಸಜ್ಞಿತಃ ।
ನಿತ್ಯೋದ್ಯುಕ್ತೇನ ಸ್ಥಾತವ್ಯಮಮಾತ್ಯವಚನಂ ಕುರು ॥ ೧೯೪ ॥

ಅಮಾತ್ಯೋ ಯದ್ವಚೋ ಬ್ರೂಯಾತ್ತಸ್ಯ ಕಾರ್ಯವಿಮರ್ಶನಂ ।
ಅವಶ್ಯಮೇವ ಕರ್ತವ್ಯಂ ಶರೀರಪರಿರಕ್ಷಣಂ ॥ ೧೯೫ ॥

ಪ್ರಜಾ ಯೇನ ಪ್ರಮೋದಂತಿ ಯೇನ ತುಷ್ಯಂತಿ ಬ್ರಾಹ್ಮಣಾಃ ।
ಏವಂ ತೇ ಪುತ್ರ ಕರ್ತವ್ಯಂ ಮಮ ಪ್ರಿಯಹಿತೈಷಿಣಾ ॥ ೧೯೬ ॥

ಸಪ್ತವ್ಯಸನವರ್ಗೋತ್ರ ದೋಷೋ ರಾಜ್ಞಾಂ ಮಹಾನ್ಭವೇತ್ ।
ಅರ್ಥದೂಷಣಕಂ ಚೈವ ನ ಕರ್ತವ್ಯಂ ಕದಾಚನ ॥ ೧೯೭ ॥

ಅಮಾತ್ಯಂ ನಾಪ್ರಿಯಂ ಬ್ರೂಯಾ ಯಮಿಚ್ಛೇ ರಾಜಕರ್ಮಣಿ ।
ನಾಹಂ ನಿವಾರಣೀಯಸ್ತೇ ಗಮ್ಯನಾಯ ಪಥೇ ಸ್ಥಿತಃ ॥ ೧೯೮ ॥

ಯನ್ನು ಚೆನ್ನಾಗಿ ಪರೀಕ್ಷಿಸದಿರಬೇಡ. ಕ್ಷೇಮದಿಂದಲೂ, ಧರ್ಮವಾದ ನಡತೆಯಿಂದಲೂ ಯುಕ್ತವಾಗಿರುವಂತೆ ದೇಶವನ್ನು ರಕ್ಷಿಸಬೇಕು. ಯಾವಾಗಲೂ ಉದ್ಯೋಗಶೀಲನಾಗಿರು. ಮಂತ್ರಿಯ ಮಾತನ್ನು ನಡೆಯಿಸು.

೧೯೫. ಮಂತ್ರಿಯು ಹೇಳುವ ಮಾತಿನ ವಿಮರ್ಶೆಯೂ, ಸ್ವದೇಹಸಂರಕ್ಷಣೆಯೂ ಅವಶ್ಯವಾಗಿ ಮಾಡಬೇಕಾದುದು.

೧೯೬. ಮಗನೇ, ನನಗೆ ಪ್ರಿಯಹಿತೈಷಿಯಾದ ನೀನು ಬ್ರಾಹ್ಮಣರೂ, ಇತರ ಪ್ರಜೆಗಳೂ ಸಂತೋಷಪಡುವಂತೆ ಮಾಡಬೇಕು.

೧೯೭. ಈ ಲೋಕದಲ್ಲಿ ರಾಜರಿಗೆ ಸ್ತ್ರೀ ಪಾನಾದಿಗಳಾದ ಏಳು ವಿಷಯಗಳಲ್ಲಿ ಅಸಕ್ತಿಯು ಮಹಾದೋಷವಾಗುವುದು. ಅರ್ಥ (ಧನ) ಹಾನಿಕರವಾದುದನ್ನು ಎಂದಿಗೂ ಮಾಡಬಾರದು.

೧೯೮-೧೯೯. ರಾಜಕಾರ್ಯದಲ್ಲಿ ಬೇಕಾದ ಮಂತ್ರಿಗೆ ಅಪ್ರಿಯವಾದುದನ್ನು ಹೇಳಬೇಡ. ಪ್ರಯಾಣಕ್ಕೆ ಸಿದ್ಧನಾಗಿ ಹೊರಟು ನಿಂತಿರುವ ನನ್ನನ್ನು

ಏತನ್ಮೇ ಕ್ರಿಯತಾಂ ಶೀಘ್ರಂ ಯದೀಚ್ಛಸಿ ಮಮ ಪ್ರಿಯಂ ॥ ೧೯೯ ॥

ತತಃ ಪಿತುರ್ವಚಃ ಶ್ರುತ್ವಾ ರಾಜಪುತ್ರೋ ಯಶಸ್ವಿನಿ ।
ಪಿತುಃ ಪಾದೌ ತು ಸಂಗೃಹ್ಯ ಕರುಣಂ ಪ್ರತ್ಯುವಾಚ ತಂ ॥ ೨೦೦ ॥

ಮಮ ಕಿಂ ತಾತ ರಾಜ್ಯೇನ ಕೋಶೇನ ಚ ಬಲೇನ ಚ ।
ಯಸ್ತ್ವಯಾ ರಹಿತಸ್ತಾತ ನ ಶಕ್ನೋಮಿ ವಿಚೇಷ್ಟಿತುಂ ॥ ೨೦೧ ॥

ಅಭಿಷೇಕಂ ರಾಜಶಬ್ದಂ ಮಮ ಸಂಜ್ಞಾಪಿತಂ ತ್ವಯಾ ।
ಏತನ್ನ ಬಹು ಮನ್ಯೇಽಹಂ ವಿನಾ ತಾತ ತ್ವಯಾಹ್ಯಹಂ ॥ ೨೦೨ ॥

ಕ್ರೀಡಾಮೇವಾತ್ರ ಜಾನಾಮಿ ಯೇನ ಕ್ರೀಡಂತಿ ಬಾಲಕಾಃ ।
ರಾಜ್ಯಚಿಂತಾಂ ನ ಜಾನಾಮಿ ರಾಜಾನೋ ಯಾಂ ತು ಕುರ್ವತೇ ॥ ೨೦೩ ॥

ತಡೆಯಬೇಡ. ನನಗೆ ಹಿತವನ್ನು ಬಯಸುವೆಯಾದರೆ ನಾನು ಹೇಳಿದುದನ್ನು ಬೇಗನೆ ಮಾಡು."

೨೦೦. ಕೀರ್ತಿವಂತೆ, ರಾಜಪುತ್ರನು ತಂದೆಯ ಮಾತನ್ನು ಕೇಳಿ, ಆತನ ಕಾಲುಗಳನ್ನು ಹಿಡಿದುಕೊಂಡು, ಬಳಿಕ ಕರುಣೆಯುಂಟಾಗುವಂತೆ ಮಾತನಾಡಿದನು.

೨೦೧–೨೦೨. "ಅಪ್ಪಾ, ನಿನ್ನಿಂದ ಅಗಲಿ ಯಾವ ಕೆಲಸವನ್ನೂ ಮಾಡಲಾರದ ನನಗೆ ರಾಜ್ಯದಿಂದಲೂ, ಕೋಶದಿಂದಲೂ, ಬಲದಿಂದಲೂ ಪ್ರಯೋಜನವೇನು ? ನೀನು ಅಭಿಷೇಕಮಾಡಿ, ನನಗೆ ರಾಜನೆಂಬ ಒಂದು (ಅರ್ಥವಿಲ್ಲದ) ಹೆಸರನ್ನು ಇಟ್ಟೆ. ತಂದೆಯೇ, ನೀನಿಲ್ಲದಮೇಲೆ ಇದನ್ನು ನಾನು ಬಹುಮಾನಿಸುವುದಿಲ್ಲ.

೨೦೩. ಇಲ್ಲಿ ಬಾಲಕರು ಆಡುವ ಆಟವನ್ನು ಮಾತ್ರವೇ ನಾನೂ ಬಲ್ಲೆನು. ರಾಜರು ಮಾಡುವ ರಾಜ್ಯಚಿಂತೆಯನ್ನು ನಾನರಿಯೆನು."

ತತಃ ಪುತ್ರವಚಃ ಶ್ರುತ್ವಾ ಕಲಿಂಗಾನಾಂ ಮಹೀಪತಿಃ ।
ಉವಾಚ ಮಧುರಂ ವಾಕ್ಯಂ ಸಾಮಪೂರ್ವಂ ಯಶಸ್ವಿನಿ ॥ ೨೦೪ ॥

ಯಚ್ಚೇದಂ ಭಾಷಸೇ ಪುತ್ರ ನಾಹಂ ಜಾನಾಮಿ ತದ್ವಚಃ ।
ಪುತ್ರ ಶಿಕ್ಷಾಪಯಿಷ್ಯಂತಿ ಪೌರಜಾನಪದಾಸ್ತವ ॥ ೨೦೫ ॥

ಏವಂ ಸಂದಿಶ್ಯ ತಂ ತತ್ರ ಸ ರಾಜಾ ಧರ್ಮಶಾಸ್ತ್ರತಃ ।
ಗಮನಾಯ ಮತಿಂ ಚಕ್ರೇ ಕ್ಷೇತ್ರಂ ಸೌಕರವಂ ಪ್ರತಿ ॥ ೨೦೬ ॥

ತಂ ಪ್ರಯಾಂತಂ ತತೋದೃಷ್ಟ್ವಾ ಪೌರಜಾನಪದಾಸ್ತದಾ ।
ಸಕಲತ್ರಸುತಾಸ್ಸರ್ವೇಽಪ್ಯನುಯಾಂತಿ ನರಾಧಿಪಂ ॥ ೨೦೭ ॥

ಹಸ್ತ್ಯಶ್ವರಥಯಾನಾನಿ ಸ್ತ್ರಿಯಶ್ಚಾಂತಃ ಪುರೇ ಸ್ಥಿತಾಃ ।
ಸಂಹೃಷ್ಟಮನಸಸ್ಸರ್ವೇ ಅನುಯಾಂತಿ ನರಾಧಿಪಂ ॥ ೨೦೮ ॥

೨೦೪–೨೦೫. ಯಶಸ್ವಿನೀ, ಕಳಿಂಗೇಶನು ಮಗನ ಈ ಮಾತನ್ನು ಕೇಳಿ, ಸಮಾಧಾನಪೂರ್ವಕವಾದ ಇಂಪಾದ ಮಾತನ್ನು ಹೇಳಿದನು—"ಮಗೂ, ನೀನು ನನಗೆ ತಿಳಿಯದು ಎಂದು ಹೇಳುವದನ್ನು ಪಟ್ಟಣಿಗರೂ, ದೇಶದ ಜನರೂ ನಿನಗೆ ಕಲಿಸುವರು."

೨೦೬ ಆ ದೊರೆಯು ಹೀಗೆ ಮಗನಿಗೆ ಧರ್ಮಶಾಸ್ತ್ರದಂತೆ ಉಪದೇಶಿಸಿ, ಸೌಕರಕ್ಷೇತ್ರಕ್ಕೆ ಹೊರಡಲು ಮನಸ್ಸನ್ನು ಮಾಡಿದನು.

೨೦೭. ಬಳಿಕ, ದೊರೆಯು ಹೊರಟುಹೋಗುತ್ತಿರುವುದನ್ನು ಕಂಡು, ಆ ಪಟ್ಟಣದ ಮತ್ತು ದೇಶದ ಜನರೆಲ್ಲರೂ ಹೆಂಡಿರುಮಕ್ಕಳೊಡನೆ ಆಗ ಅವನನ್ನು ಹಿಂಬಾಲಿಸಿದರು.

೨೦೮. ಆನೆ, ಕುದುರೆ, ಬಂಡಿ ಮೊದಲಾದ ವಾಹನಗಳೂ, ರಾಣಿವಾಸದಲ್ಲಿದ್ದ ಹೆಂಗಸರೂ ಸಂತೋಷಗೊಂಡ ಮನಸ್ಸುಳ್ಳವರಾಗಿ ಎಲ್ಲರೂ ದೊರೆಯನ್ನು ಹಿಂಬಾಲಿಸಿದರು.

ಅಥ ದೀರ್ಘೇಣ ಕಾಲೇನ ಪ್ರಾಪ್ಯ ಸೌಕರವಂ ತದಾ ।
ಧನಧಾನ್ಯಸಮೃದ್ಧ್ಯಾದಿ ಪ್ರದದೌ ತತ್ರ ಮಾಧವಿ ॥ ೨೦೯ ॥

ಏವಂ ಗಚ್ಛತಿ ಕಾಲೇ ತು ತಯೋಸ್ತತ್ರ ವಸುಂಧರೇ ।
ಪ್ರವರ್ತಮಾನಯೋರ್ನಿತ್ಯಂ ಧರ್ಮೇ ಕರ್ಮಣಿ ಶುದ್ಧಯೋಃ ॥ ೨೧೦ ॥

ತತಃ ಕಮಲಪತ್ರಾಕ್ಷಃ ಕಲಿಂಗಾನಾಂ ಜನಾಧಿಪಃ ।
ಉವಾಚ ಮಧುರಂ ವಾಕ್ಯಂ ಕಾಂಚೀರಾಜಸುತಾಂ ತದಾ ॥ ೨೧೧ ॥

ಪೂರ್ಣಂ ವರ್ಷಸಹಸ್ರಂ ವೈ ಜೀವಿತಂ ಮಮ ಸುಂದರಿ ।
ಬ್ರೂಹಿ ತತ್ಪರಮಂ ಗುಹ್ಯಂ ಯನ್ಮಯಾ ಪೂರ್ವಪೃಚ್ಛಿತಂ ॥ ೨೧೨ ॥

ತತೋ ಭರ್ತುರ್ವಚಃ ಶ್ರುತ್ವಾ ಪ್ರಹಸ್ಯ ರುಚಿರೇಕ್ಷಣಾ ।
ಉಭೌ ತೌ ಚರಣೌ ಗೃಹ್ಯ ರಾಜಾನಂ ವಾಕ್ಯಮಬ್ರವೀತ್ ॥ ೨೧೩ ॥

---

೨೦೯. ಮಾಧವಿ, ಬಹಳ ದಿನಗಳಮೇಲೆ ದೊರೆಯು ಸೌಕರಕ್ಷೇತ್ರವನ್ನು ಸೇರಿ, ಅಲ್ಲಿ ಆಗ ಧನಧಾನ್ಯಾದಿಗಳನ್ನು ಬೇಕಾದಹಾಗೆ ದಾನಮಾಡಿದನು.

೨೧೦-೨೧೨. ವಸುಂಧರೇ, ಯಾವಾಗಲೂ ಧರ್ಮಕರ್ಮಗಳನ್ನು ಮಾಡುತ್ತ ಶುದ್ಧರಾದ ಆ ರಾಜರಾಣಿಯರು ಕಾಲಕಳೆಯುತ್ತಿರಲು, ಕಮಲದಳ ನೇತ್ರನಾದ ಆ ಕಳಿಂಗರಾಜನು ಕಾಂಚೀರಾಜಪುತ್ರಿಯಾದ ಆ ರಾಣಿಯನ್ನು ನೋಡಿ, "ಸುಂದರಿ, ನನಗೆ ಸಾವಿರವರ್ಷ ವಯಸ್ಸಾಯಿತು. ನಾನು ಹಿಂದೆ ಕೇಳಿದ ಅತಿರಹಸ್ಯವಿಚಾರವನ್ನು ಹೇಳು" ಎಂದು ಇಂಪಾದ ದನಿಯಿಂದ ಕೇಳಿದನು.

೨೧೩-೨೧೪. ಪತಿಯ ಮಾತನ್ನು ಕೇಳಿ, ಆ ಸುಂದರನೇತ್ರೆಯು ನಕ್ಕು, ದೊರೆಯಾದ ಅವನ ಎರಡು ಕಾಲುಗಳನ್ನೂ ಹಿಡಿದುಕೊಂಡು, "ಮಾನದನೇ,

ಏವಮೇತನ್ಮಹಾಭಾಗ ಯನ್ಮಾಂ ತ್ವಂ ಪರಿಪೃಚ್ಛಸಿ |
ಉಪೋಷ್ಯ ತು ತ್ರಿರಾತ್ರಂ ತ್ವಂ ಪಶ್ಚಾಚ್ಛ್ರೋಷ್ಯಸಿ ಮಾನದ || ೨೧೪ ||

ಬಾಢಮಿತ್ಯೇವ ತಾಂ ರಾಜಾ ಪ್ರತ್ಯುವಾಚ ಯಶಸ್ವಿನಿ |
ಪದ್ಮಪತ್ರವಿಶಾಲಾಕ್ಷಿ ಪೂರ್ಣಚಂದ್ರನಿಭಾನನೇ || ೨೧೫ ||

ಯಥಾ ವದಸಿ ಸುಶ್ರೋಣಿ ತಥೈವ ಮಮ ರೋಚತೇ || ೨೧೬ ||

ದಂತಕಾಷ್ಠಂ ಸಮಾದಾಯ ದ್ವಾದಶಾಂಗುಲಮಾಯತಂ |
ಸ್ನಾತ್ವಾ ಸಂಕಲ್ಪಯಾಮಾಸ ತ್ರಿರಾತ್ರಂ ನಿಯಮಾನ್ವಿತಃ |
ಉಪೋಷ್ಯ ತೌ ತ್ರಿರಾತ್ರಂ ತು ವಿಧಿನಾ ನಿಯಮಾನ್ವಿತೌ || ೨೧೭ ||

ತತಃ ಸ್ನಾತೌ ಶುಚಿಃ ಕ್ಷೌಮೇ ಪರಿಧಾಯ ತು ವಾಸಸೀ |
ಪ್ರಣಮ್ಯ ಭೂಷಿತೌ ವಿಷ್ಣುಂ ದಂಪತೀ ತದನಂತರಂ || ೨೧೮ ||

ಮಹಾಭಾಗ್ಯನೇ, ನೀನು ಹೀಗೆ ನನ್ನನ್ನು ಪ್ರಶ್ನಿಸುವ ವಿಚಾರವನ್ನು ಮೂರು ರಾತ್ರಿಗಳು ಉಪವಾಸಮಾಡಿ ಬಳಿಕ ಕೇಳುವೆಯಂತೆ." ಎಂದು ಹೇಳಿದಳು.

೨೧೫–೨೧೬. ಯಶೋವತೀ, ದೊರೆಯು, "ಪದ್ಮದಳವಿಶಾಲನೇತ್ರೇ, ಪೂರ್ಣಚಂದ್ರಮುಖೀ, ಸುಂದರೀ, ನೀನು ಹೇಗೆ ಹೇಳುವೆಯೋ ಹಾಗೆಯೇ ನನಗೂ ಇಷ್ಟ. ಅವಶ್ಯವಾಗಿ ಹಾಗೆಯೇ ಆಗಲಿ" ಎಂದು ಅವಳಿಗೆ ಹೇಳಿದನು.

೨೧೭–೨೧೮. ಆಮೇಲೆ, ಹನ್ನೆರಡಂಗುಲ ಉದ್ದದ ಹಲ್ಲುಜ್ಜುವ ಕಡ್ಡಿಯನ್ನು ತೆಗೆದುಕೊಂಡು, ಹಲ್ಲನ್ನುಜ್ಜಿ ಶುಚಿಯಾಗಿ ಮಾಡಿಕೊಂಡು ಸ್ನಾನಮಾಡಿ ಮೂರುರಾತ್ರಿಯ ಉಪವಾಸವನ್ನು ಸಂಕಲ್ಪಿಸಿ, ಹಾಗೆಯೇ ವಿಧಿಯಂತೆ ನಿಯಮದಿಂದ ಕೂಡಿದವರಾಗಿ ಮೂರುದಿನ ಉಪವಾಸಮಾಡಿ, ಆಮೇಲೆ ಮತ್ತೆ ಸ್ನಾನಮಾಡಿ, ಶುದ್ಧರಾಗಿ, ಪಟ್ಟೆಯ ಮಡಿಗಳನ್ನುಟ್ಟು, ಅಲಂಕೃತರಾಗಿ, ಬಳಿಕ ವಿಷ್ಣುವಾದ ನನ್ನನ್ನು ದಂಪತಿಗಳಿಬ್ಬರೂ ವಂದಿಸಿದರು.

ತತಸ್ಸಾ ಸುಂದರೀ ಭೂಷಾಂ ಸಮುತ್ತಾರ್ಯ ಶುಭೇಕ್ಷಣಾ ।
ಮಹ್ಯಂ ನಿವೇದಯಾಮಾಸ ಪ್ರೋವಾಚ ಚ ಜನೇಶ್ವರಂ ।
ಏಹ್ಯೇಹಿ ನಾಥ ಗಚ್ಛಾವಃ ಪಶ್ಯ ಗೋಪ್ಯಂ ಮನೀಷಿತಂ ॥ ೨೧೯ ॥

ತತೋ ಹಸ್ತೇ ಪತಿಂ ಗೃಹ್ಯ ಉದ್ವಾಹ ಇವ ಸುಂದರೀ ।
ಉವಾಚ ಮಧುರಂ ವಾಕ್ಯಂ ಕಲಿಂಗಾಧಿಪತಿಂ ತದಾ ॥ ೨೨೦ ॥

ಸೃಗಾಲೀ ಪೂರ್ವಮೇವಾಹಂ ತಿರ್ಯಗ್ಯೋನಿವ್ಯವಸ್ಥಿತಾ ।
ವಿದ್ಧಾಸ್ಮಿ ಸೋಮದತ್ತೇನ ಬಾಣೇನ ಮೃಗಲಿಪ್ಸುನಾ ॥ ೨೨೧ ॥

ಏತಂ ಶಿರಸಿ ಮೇ ರಾಜನ್ಪಶ್ಯ ಬಾಣಂ ಸುಸಂಸ್ಕೃತಂ ।
ಯಸ್ಯ ದೋಷೇಣ ಮೇಸ್ಯೇಷಾ ರುಜಾ ಶಿರಸಿ ಸಂಸ್ಥಿತಾ ॥ ೨೨೨ ॥

---

೨೧೯. ಅನಂತರ ಶುಭನೇತ್ರೆಯಾದ ಆ ಸುಂದರಿಯು ಆ ಭೂಷಣವನ್ನು ತೆಗೆದು ನನಗೆ ಅರ್ಪಿಸಿ, ಪತಿಯಾದ ದೊರೆಯನ್ನು ನೋಡಿ, "ನಾಥ, ಬಾ, ಬಾ, ಹೋಗೋಣ. ನಿನ್ನ ಮನಸ್ಸಿಗೆ ಬೇಕಾದ ರಹಸ್ಯವನ್ನು ನೋಡು" ಎಂದು ಹೇಳಿದಳು.

೨೨೦. ಬಳಿಕ ಆ ಸುಂದರಿಯು, ಮದುವೆಯಂತೆ ಪತಿಯ ಕೈಹಿಡಿದು ಕೊಂಡು, ಕಳಿಂಗಾಧಿಪತಿಯಾದ ಆತನಿಗೆ ಇಂಪಾದ ಮಾತನ್ನು ಹೇಳಿದಳು.–

೨೨೧. "ನಾನು ಪೂರ್ವದಲ್ಲಿ ತಿರ್ಯಗ್ಜಂತುವಾದ ಹೆಣ್ಣುನರಿಯಾಗಿದ್ದೆನು. ಮೃಗಗಳನ್ನು ಪಡೆಯಲಿಚ್ಛೆಯುಳ್ಳ ಸೋಮದತ್ತನು ಬಾಣದಿಂದ ನನ್ನನ್ನು ಹೊಡೆದನು.

೨೨೨. ದೊರೆಯೇ, ನನ್ನ ತಲೆಯಲ್ಲಿ ನಾಟಿಕೊಂಡಿರುವ ಬಹಳ ಹರಿತವಾದ ಈ ಬಾಣವನ್ನು ನೋಡು. ಇದರ ದೋಷದಿಂದಲೇ ನನಗೆ ತಲೆನೋವು.

ಕಾಂಚೀರಾಜಕುಲೇ ಜನ್ಮ ಪಿತ್ರಾ ದತ್ತಾ ತವ ಪ್ರಿಯಾ ।
ಕ್ಷೇತ್ರಪ್ರಭಾವಾನ್ಮೇ ಸೈಷಾ ಜಾತಾ ಸಿದ್ಧಿರ್ನಮೋಽಸ್ತು ತೇ ॥ ೨೨೩ ॥

ಸ ತತಃ ಪದ್ಮಪತ್ರಾಕ್ಷಃ ಕಲಿಂಗಾನಾಂ ಜನಾಧಿಪಃ ।
ಶ್ರುತ್ವಾ ರಾಜಾ ಪ್ರಿಯಾವಾಕ್ಯಂ ಪ್ರತ್ಯುವಾಚ ಸ್ಮೃತಿಂ ಗತಃ ॥ ೨೨೪ ॥

ಅಹಂ ಗೃಧ್ರೋ ಮಹಾಭಾಗೇ ತೇನೈವ ವನಚಾರಿಣಾ ।
ಸೋಮದತ್ತೇನ ಬಾಣೇನ ಏಕೇನೈವ ನಿಪಾತಿತಃ ॥ ೨೨೫ ॥

ತತೋ ಜಾತೋಽಸ್ಮ್ಯಹಂ ಭದ್ರೇ ಕಲಿಂಗಾನಾಂ ಜನಾಧಿಪಃ ।
ಜಾತೋಽಸ್ಮಿ ಪರಮಾ ವ್ಯುಷ್ಟಿಃ ಪ್ರಾಪ್ತಂ ರಾಜ್ಯಂ ಮಯಾ ಮಹತ್॥೨೨೬॥

ಸಿದ್ಧಿರ್ಲಬ್ಧಾ ವರಾರೋಹೇ ಮಯಾ ಸರ್ವಾಂಗಸುಂದರಿ ।
ಅಕಾಮಪತಿತೇನಾಪಿ ಪಶ್ಯಕ್ಷೇತ್ರಸ್ಯ ವೈ ಫಲಂ ॥ ೨೨೭ ॥

---

೨೨೩. ನರಿಯಾಗಿದ್ದು ಸತ್ತ ನನಗೆ ಕಾಂಚೀರಾಜನ ಮನೆಯಲ್ಲಿ ಜನ್ಮ ವುಂಟಾಯಿತು. ತಂದೆಯು ಕೊಡಲಾಗಿ ನಿನಗೆ ಪ್ರಿಯಳಾದೆನು ಈ ಕ್ಷೇತ್ರದ ಮಹಿಮೆಯಿಂದ ನನಗೆ ಈ ಸಿದ್ಧಿಯುಂಟಾಯಿತು. ನಿನಗೆ ನಮಸ್ಕಾರ. ."

೨೨೪. ತಾವರೆಯೆಸಳ್ಗಣ್ಣಿನ ಆ ಕಳಿಂಗರಾಜನು ಪ್ರಿಯೆಯ ಮಾತನ್ನು ಕೇಳಿ, ಬಳಿಕ ತನ್ನ ಹಿಂದಿನ ಜನ್ಮದ ಸ್ಮರಣೆಯನ್ನು ಪಡೆದವನಾಗಿ ಅವಳಿಗೆ ಮುಂದಿನ ಮಾತನ್ನು ಹೇಳಿದನು.—

೨೨೫. " ಮಹಾಭಾಗ್ಯೇ, ನಾನೂ ಹಿಂದೆ ಹದ್ದಾಗಿದ್ದೆನು. ಕಾಡಿನಲ್ಲಿ ಬೇಟೆಗಾಗಿ ತಿರುಗುತ್ತಿದ್ದ ಆ ಸೋಮದತ್ತನೇ ನನ್ನನ್ನೂ ಒಂದು ಬಾಣದಿಂದ ಹೊಡೆದು ಕೆಡವಿದನು.

೨೨೬. ಭದ್ರೇ, ಆಮೇಲೆ ನಾನು ಕಳಿಂಗರಾಜಕುಮಾರನಾಗಿ ಹುಟ್ಟಿ, ದೊರೆಯಾಗಿದ್ದೇನೆ. ಉತ್ತಮವಾದ ಫಲವನ್ನೂ, ದೊಡ್ಡ ದೊರೆತನವನ್ನೂ ಪಡೆದೆನು.

೨೨೭. ವರಾರೋಹೇ, ಸರ್ವಾಂಗಸುಂದರಿ, ಉದ್ದೇಶವಿಲ್ಲದೆ ಇಲ್ಲಿ ಬಿದ್ದೂ ನಾನು ಸಿದ್ಧಿಯನ್ನು ಪಡೆದೆನು. ಈ ಕ್ಷೇತ್ರದ ಫಲವನ್ನು ನೋಡಿದೆಯಾ ! "

ಯೇ ಚ ಭಾಗವತಶ್ರೇಷ್ಠಾ ಯೇ ಚ ನಾರಾಯಣಪ್ರಿಯಾಃ ।
ಪೌರಜಾನಪದಾಸ್ಸರ್ವೇ ಶ್ರುತ್ವಾ ತು ತದನಂತರಂ ॥ ೨೨೮ ॥

ಲಾಭಾಲಾಭೌ ಪರಿತ್ಯಜ್ಯ ಸರ್ವಕರ್ಮಾಣ್ಯಕಾರಯನ್ ।
ತತ್ರೈವ ಮರಣಂ ಪ್ರಾಪ್ತುಃ ಸರ್ವಸಂಗವಿವರ್ಜಿತಾಃ ॥ ೨೨೯ ॥

ಶ್ವೇತದ್ವೀಪಂ ತತಃ ಪ್ರಾಪ್ತಾಸ್ಸರ್ವ ಏವ ಚತುರ್ಭುಜಾಃ ।
ಸರ್ವೇ ಶಂಖಧರಾಶ್ಚೈವ ಸರ್ವೇ ಚಾಯುಧಸಂಯುತಾಃ ॥ ೨೩೦ ॥

ತಾಃ ಸ್ತ್ರಿಯಶ್ಚ ವರಾರೋಹೇ ಸ್ತುತಿಮಾನ್ಯಾ ಮಹೌಜಸಃ ।
ಶ್ವೇತದ್ವೀಪೇ ಪ್ರಮೋದಂತೇ ಸರ್ವಭೋಗಸಮನ್ವಿತಾಃ ॥ ೨೩೧ ॥

ಏವಂ ತೇ ಕಥಿತಂ ಭೂಮೇ ವ್ಯುಷ್ಟಿಸ್ಸೌಕರವೇ ಮಹತ್ ।
ಅಕಾಮಪತಿತಾಶ್ಚೈವ ಶ್ವೇತದ್ವೀಪಮುಪಾಗತಾಃ ॥ ೨೩೨ ॥

೨೨೮–೨೨೯. ಭಾಗವತೋತ್ತಮರೂ, ನಾರಾಯಣಪ್ರಿಯರೂ ಆದ, ಅಲ್ಲಿದ್ದ, ಪಟ್ಟಣದ ಮತ್ತು ದೇಶದ ಜನರೆಲ್ಲರೂ ಈ ವೃತ್ತಾಂತವನ್ನು ಕೇಳಿ, ಲಾಭಾಲಾಭಗಳನ್ನು ತೊರೆದು, ಸರ್ವಸತ್ಕರ್ಮಗಳನ್ನೂ ಮಾಡಿ, ಸರ್ವಸಂಗವನ್ನೂ ಪರಿತ್ಯಜಿಸಿ, ಅಲ್ಲೇ ಮರಣವನ್ನು ಹೊಂದಿದರು.

೨೩೦. ಬಳಿಕ ಅವರೆಲ್ಲರೂ ಶ್ವೇತದ್ವೀಪ(ವೈಕುಂಠ)ವನ್ನು ಸೇರಿ, ಎಲ್ಲರೂ ಚತುರ್ಭುಜಗಳುಳ್ಳವರೂ, ಶಂಖಧರರೂ, ಆಯುಧಧಾರಿಗಳೂ ಆದರು.

೨೩೧. ವರಾರೋಹೇ, ಸ್ತೋತ್ರಮರ್ಯಾದೆಗಳಿಗೆ ಅರ್ಹರೂ, ತೇಜಸ್ವಿನಿಯರೂ ಆಗಿ, ದೊರೆಯೊಡನೆ ಬಂದ ಆ ಸ್ತ್ರೀಯರೂ ಸರ್ವಭೋಗಗಳನ್ನೂ ಅನುಭವಿಸುತ್ತ ವೈಕುಂಠದಲ್ಲಿ ಆನಂದಪಡುತ್ತಿರುವರು.

೨೩೨. ಭೂಮೀ, ಉದ್ದೇಶವಿಲ್ಲದೆ ಅಕಸ್ಮಾತ್ತಾಗಿ ಅಲ್ಲಿ ಬಿದ್ದು ಸತ್ತವರೂ ವೈಕುಂಠವನ್ನು ಸೇರಿದರು. ಹೀಗೆ ಸೌಕರಕ್ಷೇತ್ರದ ಮಹಾಫಲಸಮೃದ್ಧಿಯನ್ನು ನಿನಗೆ ಹೇಳಿದ್ದೇನೆ.

ಯ ಏತೇನ ವಿಧಾನೇನ ವಾಸಂ ತೀರ್ಥೇ ತು ಕಾರಯೇತ್ ।
ಮರಣಂ ಚ ವಿಶಾಲಾಕ್ಷಿ ಶ್ವೇತದ್ವೀಪಂ ಸ ಗಚ್ಛತಿ ॥ ೨೩೩ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ಸ್ನಾನಾದಾಖೇಟಕೇ ತೀರ್ಥೇ ಯತ್ಫಲಂ ಸಮುಪಾಶ್ನುತೇ ॥ ೨೩೪ ॥

ದಶವರ್ಷಸಹಸ್ರಾಣಿ ದಶವರ್ಷಶತಾನಿ ಚ ।
ನಂದನಂ ಸಮುಪಾಶ್ರಿತ್ಯ ಮೋದಂತೇ ಚೈವ ಸರ್ವದಾ ॥ ೨೩೫ ॥

ತತಃ ಸ್ವರ್ಗಾತ್ಪರಿಭ್ರಷ್ಟೋ ಜಾಯತೇ ವಿಪುಲೇ ಕುಲೇ ।
ಮದ್ಭಕ್ತಶ್ಚೈವ ಜಾಯೇತ ಏವಮೇತನ್ನ ಸಂಶಯಃ ॥ ೨೩೬ ॥

---

೨೩೩. ವಿಶಾಲಾಕ್ಷೀ, ಯಾರು ಈ ವಿಧಾನದಿಂದ ಆ ತೀರ್ಥದಲ್ಲಿದ್ದು, ಮರಣಹೊಂದುವರೋ ಅವರು ವೈಕುಂಠವನ್ನು ಸೇರುವರು

೨೩೪. ವಸುಂಧರೇ, ಸೌಕರಕ್ಷೇತ್ರದಲ್ಲಿರುವ ಆಖೇಟಕತೀರ್ಥದಲ್ಲಿ ಸ್ನಾನಮಾಡುವವನು ಯಾವ ಫಲವನ್ನು ಪಡೆಯುವನೆಂಬ ಬೇರೊಂದು ವಿಚಾರ ವನ್ನೂ ಹೇಳುತ್ತೇನೆ ಕೇಳು.

೨೩೫. ಆಖೇಟಕತೀರ್ಥದಲ್ಲಿ ಸ್ನಾನಮಾಡಿದವನು ಹನ್ನೊಂದುಸಾವಿರ ವರ್ಷಗಳಕಾಲ ಸ್ವರ್ಗದಲ್ಲಿರುವ ನಂದನವನವನ್ನು ಸೇರಿ, ಯಾವಾಗಲೂ ಸಂತೋಷಿಸುವನು.

೨೩೬. ಅನಂತರ ಸ್ವರ್ಗದಿಂದ ಹಿಂದಿರುಗಿದವನಾಗಿ, ದೊಡ್ಡದಾದ ವಂಶದಲ್ಲಿ ಹುಟ್ಟಿ, ನನ್ನ ಭಕ್ತನಾಗುವನು. ಇದರಲ್ಲಿ ಸಂಶಯವಿಲ್ಲ.

ಪುನರನ್ಯತ್ಪ್ರವಕ್ಷ್ಯಾಮಿ ಸ್ನಾತೋ ಗೃಧ್ರವಟೇ ನರಃ ।
ಯತ್ಫಲಂ ಸಮವಾಪ್ನೋತಿ ಸ್ನಾನಮಾತ್ರಕೃತೋದಕಃ ॥ ೨೩೭ ॥

ನವವರ್ಷಸಹಸ್ರಾಣಿ ನವವರ್ಷಶತಾನಿ ಚ ।
ಇಂದ್ರಲೋಕಂ ಸಮಾಸಾದ್ಯ ಮೋದತೇ ನಿರ್ಜರೈಸ್ಸಹ ॥ ೨೩೮ ॥

ಇಂದ್ರಲೋಕಾತ್ಪರಿಭ್ರಷ್ಟೋ ಮಮ ತೀರ್ಥಪ್ರಭಾವತಃ ।
ಸರ್ವಸಂಗಂ ಪರಿತ್ಯಜ್ಯ ಮದ್ಭಕ್ತಶ್ಚೈವ ಜಾಯತೇ ॥ ೨೩೯ ॥

ಏತತ್ತೇ ಕಥಿತಂ ಭದ್ರೇ ಸ್ನಾನಮಾತ್ರಸ್ಯ ಯತ್ಫಲಂ ।
ಯತ್ತ್ವಯಾ ಪೃಚ್ಛಿತಂ ಪೂರ್ವಂ ಸರ್ವಸಂಸಾರಮೋಕ್ಷಣಂ ॥ ೨೪೦ ॥

ತತೋ ನಾರಾಯಣಾಚ್ಛ್ರುತ್ವಾ ಪೃಥಿವೀ ಶಂಸಿತವ್ರತಾ ।
ಉವಾಚ ಮಧುರಂ ವಾಕ್ಯಂ ಲೋಕನಾಥಂ ಜನಾರ್ದನಂ ॥ ೨೪೧ ॥

೨೩೭–೨೩೮. ತಿರುಗಿ ಇನ್ನೊಂದನ್ನು ಹೇಳುತ್ತೇನೆ. ಗೃಧ್ರವಟತೀರ್ಥದಲ್ಲಿ ಸ್ನಾನವನ್ನು ಮಾತ್ರವೇ ಮಾಡಿದವನೂ ಒಂಬತ್ತುಸಾವಿರದೊಂಬೈನೂರು ವರ್ಷಕಾಲ ಇಂದ್ರಲೋಕದಲ್ಲಿ ಸೇರಿ, ದೇವತೆಗಳೊಡನೆ ಸಂತೋಷಪಡುವನು.

೨೩೯. ಬಳಿಕ ಇಂದ್ರಲೋಕವನ್ನು ಬಿಟ್ಟು, ನನ್ನ ತೀರ್ಥದ ಮಹಿಮೆಯಿಂದ ಭೂಲೋಕದಲ್ಲಿ ಜನಿಸಿ, ಸರ್ವಸಂಗವನ್ನೂ ಬಿಟ್ಟು ನನ್ನ ಭಕ್ತನಾಗುವನು.

೨೪೦. ಭದ್ರೇ, ನೀನು ಕೇಳಿದ, ಸರ್ವಸಂಸಾರಮೋಕ್ಷಕವಾದ, ತೀರ್ಥಸ್ನಾನವನ್ನು ಮಾಡಿದ ಮಾತ್ರಕ್ಕೇ ಆಗುವ ಈ ಫಲವನ್ನು ಹೇಳಿದ್ದೇನೆ.

೨೪೧. ಅತಿತೀಕ್ಷ್ಣವ್ರತೆಯಾದ ಭೂದೇವಿಯು, ನಾರಾಯಣನಿಂದ ಇದನ್ನು ಕೇಳಿ, ಬಳಿಕ ಲೋಕನಾಥನೂ, ಜನಾರ್ದನನೂ ಆದ ಅವನನ್ನು ಕುರಿತು ಇಂಪಾದ ಈ ಮಾತನಾಡಿದಳು.—

ಕೇನ ಕರ್ಮವಿಪಾಕೇನ ತೀರ್ಥಂ ಪುನರವಾಪ್ಯತೇ ।
ಸ್ನಾನಂ ವಾ ಮರಣಂ ದೇವ ಯಥಾವದ್ವಕ್ತುಮರ್ಹಸಿ ॥ ೨೪೨ ॥

॥ ಶ್ರೀವರಾಹ ಉವಾಚ ॥

ಶೃಣು ದೇವಿ ಮಹಾಭಾಗೇ ಪೂರ್ವಧರ್ಮಕೃತೋ ನರಾಃ ।
ಕೇನಚಿತ್ಕರ್ಮದೋಷೇಣ ತಿರ್ಯಗ್ಯೋನಿಮವಾಪ್ಯ ಹಿ ॥ ೨೪೩ ॥

ಜನ್ಮಾಂತರಾರ್ಜಿತೈಃ ಪುಣ್ಯೈಃ ತೀರ್ಥಸ್ನಾನಜಪಾದಿಭಿಃ ।
ಮಹಾದಾನೈಶ್ಚ ಲಭ್ಯೇತ ತೀರ್ಥೇ ಪಂಚತ್ವಮರ್ಚಕೈಃ ॥ ೨೪೪ ॥

ಜನ್ಮಾಂತರಕೃತಂ ಕರ್ಮ ಯತ್ಸ್ವಲ್ಪಮಪಿ ವಾ ಬಹು ।
ತತ್ಕದಾಚಿತ್ಫಲತ್ಯೇವ ನ ತಸ್ಯ ಪರಿಸಂಕ್ಷಯಃ ॥ ೨೪೫ ॥

ಕದಾಚಿದ್ವಾ ಸಹಾಯೋ ವೈ ಪುಣ್ಯತೀರ್ಥಾದಿದರ್ಶನಾತ್ ।
ದುರ್ಬಲಂ ಪ್ರಬಲಂ ಭೂತ್ವಾ ಪ್ರಬಲಂ ದುರ್ಬಲಂ ಭವೇತ್ ॥ ೨೪೬ ॥

---

೨೪೨. "ದೇವ, ಯಾವ ಕರ್ಮಪರಿಪಾಕದಿಂದ ಜೀವಿಗಳಿಗೆ ಆ ತೀರ್ಥವೂ, ಅಲ್ಲಿ ಸ್ನಾನ ಅಥವಾ ಮರಣವೂ ಲಭಿಸುವುದು? ಅದನ್ನು ಕ್ರಮವಾಗಿ ನಿಜವಾಗಿ ಹೇಳಬೇಕು."

೨೪೩-೨೪೫. ಶ್ರೀವರಾಹ—ದೇವಿ, ಮಹಾಭಾಗ್ಯೇ, ಕೇಳು. ಪೂರ್ವದಲ್ಲಿ ಧರ್ಮಮಾಡಿದ ಮನುಷ್ಯರು ಯಾವುದೋ ಒಂದು ಕರ್ಮದೋಷದಿಂದ ತಿರ್ಯಗ್ಜನ್ಮವನ್ನು ಪಡೆದು, ಹಿಂದಿನ ಜನ್ಮದಲ್ಲಿ ತೀರ್ಥಸ್ನಾನ ಜಪ ಮಹಾದಾನಾದಿಗಳಿಂದ ಸಂಪಾದಿಸಿದ ಪುಣ್ಯಗಳಿಂದ (ತಿರ್ಯಗ್ಜನ್ಮದಲ್ಲಿರುವಾಗ) ತೀರ್ಥದಲ್ಲಿ ಮರಣವನ್ನು ಪಡೆಯುವರು. ನನ್ನನ್ನು ಪೂಜಿಸುವವರಿಗೆ ಜನ್ಮಾಂತರದಲ್ಲಿ ಅವರು ಮಾಡಿದ ಕರ್ಮವು ಸ್ವಲ್ಪವಾಗಲಿ, ಹೆಚ್ಚಾಗಲಿ, ಎಂದಾದರೂ ಫಲಿಸಿಯೇ ಫಲಿಸುವುದು. ಅದಕ್ಕೆ ನಾಶವಿಲ್ಲ.

೨೪೬-೨೪೭. ಕೆಲವುವೇಳೆ ದುರ್ಬಲವಾಗಿದ್ದ ಪುಣ್ಯಕರ್ಮವು ಪುಣ್ಯತೀರ್ಥಾದಿಗಳ ದರ್ಶನದ ಪುಣ್ಯದ ಸಹಾಯದಿಂದ ಪ್ರಬಲವಾಗಿಯೂ, ಪ್ರಬಲ

ಪಾಪಾಂತರಂ ಸಮಾಸಾದ್ಯ ಗಹನಾ ಕರ್ಮಣೋ ಗತಿಃ ।
ಯದಲ್ಪಮಿವ ದೃಶ್ಯೇತ ತನ್ಮಹತ್ವಾಯ ಕಲ್ಪತೇ ॥ ೨೪೭ ॥

ಅತ ಏವ ಮನುಷ್ಯತ್ವಂ ಪ್ರಾಪ್ತಂ ರಾಜತ್ವಮೇವ ಚ ।
ಸೃಗಾಲೀ ಚೈವ ಗೃಧ್ರಶ್ಚ ತೀರ್ಥಸ್ಯೈವ ಪ್ರಭಾವತಃ ॥ ೨೪೮ ॥

ಮರಣಾದೇವ ಸಂಪ್ರಾಪ್ಯ ಕ್ಷೀಣಪಾಪೌ ಸ್ಮೃತಿಂ ಪುನಃ ।
ಶ್ವೇತದ್ವೀಪಂ ತತಃ ಪ್ರಾಪ್ತೌ ಜಾನೀಹಿ ತ್ವಂ ವಸುಂಧರೇ ॥ ೨೪೯ ॥

ಪುನರನ್ಯತ್ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ತೀರ್ಥಂ ವೈವಸ್ವತಂ ನಾಮ ಯತ್ರಾರ್ಕಸ್ತಪ್ತವಾಂಸ್ತಪಃ ॥ ೨೫೦ ॥

ಕದಾಚಿತ್ಪುತ್ರಕಾಮೇನ ಮಾರ್ತಂಡೇನ ಮಹತ್ತಪಃ ।
ಕೃತಂ ಚಾಂದ್ರಾಯಣಂ ತತ್ರ ದಶವರ್ಷಸಹಸ್ರಕಂ ॥ ೨೫೧ ॥

ವಾಗಿದ್ದ ಪುಣ್ಯಕರ್ಮವು, ಬೇರೆ ಹೊಸದಾದ ಪಾಪಕರ್ಮದೊಡನೆ ಸೇರಿ ದುರ್ಬಲವಾಗಿಯೂ ಆಗಬಹುದು. ಕರ್ಮಗತಿಯು ಅರಿಯಲಶಕ್ಯವಾದುದು. ಸಣ್ಣದಾಗಿ ಕಾಣುವುದೇ ದೊಡ್ಡದಾಗಿ ಬಿಡುವುದು.

೨೪೮–೨೪೯. ಆದುದರಿಂದಲೇ ನರಿಯೂ, ಹದ್ದೂ, ತೀರ್ಥದ ಮಹಿಮೆಯಿಂದ ಅಲ್ಲಿ ಮರಣಹೊಂದಿದ ಮಾತ್ರದಿಂದಲೇ ಮನುಷ್ಯತ್ವವನ್ನೂ, ರಾಜತ್ವವನ್ನೂ ಪಡೆದು, ಪಾಪಗಳನ್ನು ಕಳೆದುಕೊಂಡು, ಹಿಂದಿನ ಸ್ಮರಣೆಯನ್ನು ಪಡೆದು, ಸೌಕರಕ್ಷೇತ್ರದಲ್ಲಿ ಸ್ನಾನಾದಿಪುಣ್ಯಕರ್ಮಗಳನ್ನು ಮಾಡಿ, ಬಳಿಕ ಶ್ವೇತದ್ವೀಪವನ್ನೂ (ವೈಕುಂಠವನ್ನೂ) ಸೇರಿದುವು. ವಸುಂಧರೇ, ತಿಳಿಯಿತೆ?

೨೫೦. ವಸುಂಧರೇ, ಸೂರ್ಯನು ತಪಸ್ಸನ್ನು ಮಾಡಿದ ವೈವಸ್ವತ ಅಥವಾ ಸೌರವೆಂಬ ಮತ್ತೊಂದು ತೀರ್ಥವನ್ನು ಹೇಳುವೆನು, ಕೇಳು.

೨೫೧-೨೫೨. ಒಂದಾನೊಂದು ಕಾಲದಲ್ಲಿ ಮಕ್ಕಳನ್ನು ಪಡೆಯಲು ಬಯಸಿದ ಸೂರ್ಯನು ಆ ತೀರ್ಥದಲ್ಲಿ ಹತ್ತುಸಾವಿರವರ್ಷಕಾಲ ಉಗ್ರವಾದ

ತತಸ್ಸಪ್ತಸಹಸ್ರಾಣಿ ವಾಯುಭಕ್ಷಸ್ತು ಸಂಸ್ಥಿತಃ ।
ತತಸ್ತುಷ್ಟೋಽಸ್ಮ್ಯಹಂ ಭದ್ರೇ ಸೂರ್ಯಸ್ಯ ಸುಮಹೌಜಸಃ ॥ ೨೫೨ ॥

ವರೇಣ ಛಂದಯಾಮಾಸ ಆದಿತ್ಯಂ ತದನಂತರ ।
ವಿವಸ್ವಂತಂ ಮಹಾಭಾಗಂ ಮಮ ಕರ್ಮಪರಾಯಣಂ ॥ ೨೫೩ ॥

ವರಂ ವರಯ ಭದ್ರಂ ತೇ ಯಸ್ತೇ ಮನಸಿ ವರ್ತತೇ ॥ ೨೫೪ ॥

ತತೋ ಮಮ ವಚಃ ಶ್ರುತ್ವಾ ಕಶ್ಯಪಸ್ಯ ಸುತೋ ಬಲೀ ।
ಮಧುರಂ ಸ್ವರಮಾದಾಯ ಪ್ರತ್ಯುವಾಚ ಮಹದ್ವಚಃ ॥ ೨೫೫ ॥

ಯದಿ ದೇವ ಪ್ರಸನ್ನೋಽಸಿ ಅಯಂ ಮೇ ದೀಯತಾಂ ವರಃ ।
ಪುತ್ರಮಿಚ್ಛಾಮ್ಯಹಂ ದೇವ ಪ್ರಸಾದಾತ್ತೇ ಸುರೇಶ್ವರ ॥ ೨೫೬ ॥

ತಪಸ್ಸನ್ನೂ, ಚಾಂದ್ರಾಯಣ ವ್ರತವನ್ನೂ ಮಾಡಿದನು. ಬಳಿಕ ಏಳುಸಾವಿರವರ್ಷ ನಿರಾಹಾರನಾಗಿ ನಿಂತಿದ್ದನು. ಭದ್ರೇ, ಬಳಿಕ ನಾನು ಅತಿತೇಜಸ್ವಿಯಾದ ಆ ಸೂರ್ಯನಿಗೆ ತೃಪ್ತನಾಗಿ ಒಲಿದೆನು.

೨೫೩–೨೫೪. ಅನಂತರ ಮಹಾಭಾಗ್ಯನೂ, ನನ್ನ ಕರ್ಮದಲ್ಲಿ ನಿರತನೂ, ತನ್ನ ಕಾಂತಿಯಿಂದ ಎಲ್ಲವನ್ನೂ ಆವರಿಸುವವನೂ, ಅದಿತಿ ಪುತ್ರನೂ ಆದ ಆ ಸೂರ್ಯನನ್ನು, “ ನಿನಗೆ ಮಂಗಳವಾಗಲಿ. ನಿನ್ನ ಮನಸ್ಸಿನಲ್ಲಿರುವ ವರವನ್ನು ಬೇಡು.” ಎಂದು ಸಮಾಧಾನಗೊಳಿಸಿದೆನು.

೨೫೫-೨೫೬. ಕಶ್ಯಪಪುತ್ರನೂ, ಬಲಶಾಲಿಯೂ ಆದ ಆತನು ನನ್ನ ಮಾತನ್ನು ಕೇಳಿ, ಇಂಪಾದ ದನಿಯಿಂದ, “ ದೇವನೇ, ಸುರೇಶ್ವರ, ನಿನ್ನ ಅನುಗ್ರಹದಿಂದ ನನಗೆ ಪುತ್ರನಾಗಬೇಕೆಂದು ಬಯಸುತ್ತೇನೆ. ನೀನು ನನಗೆ ಒಲಿದಿರುವೆಯಾದರೆ ಈ ವರವನ್ನು ಕೊಡು” ಎಂದು ಹೇಳಿದನು.

ವಿವಸ್ವದ್ವಚನಂ ಶ್ರುತ್ವಾ ತುಷ್ಟೋಽಹಂ ತಸ್ಯ ಸುಂದರಿ ।
ತಸ್ಯ ಶುದ್ಧೇನ ಮನಸಾ ಪ್ರೋಕ್ತವಾನಸ್ಮಿ ಸುಂದರಿ ॥ ೨೫೭ ॥

ಯಮಶ್ಚ ಯಮುನಾ ಚೈವ ಮಿಥುನಂ ಜನಯಿಷ್ಯಸಿ ।
ಏವಂ ತಸ್ಯ ವರಂ ದತ್ವಾ ಆದಿತ್ಯಸ್ಯ ವಸುಂಧರೇ ॥ ೨೫೮ ॥

ಆತ್ಮಯೋಗಪ್ರಭಾವೇಣ ತತ್ರೈವಾಂತರ್ಹಿತೋಽಭವಂ ।
ಆದಿತ್ಯೋಽಪಿ ಗತೋ ಭದ್ರೇ ವೇಶ್ಮ ಸ್ವಂ ಚ ಮಹಾಧನಂ ॥ ೨೫೯ ॥

ಪುಣ್ಯಂ ಸೌಕರವೇ ಕೃತ್ವಾ ಸುದುಷ್ಕರತರಂ ಮಹತ್ ।
ಅಷ್ಟಮೇನ ತು ಭಕ್ತೇನ ಯಸ್ತು ಸ್ನಾತಿ ವಸುಂಧರೇ ॥ ೨೬೦ ॥

ದಶವರ್ಷಸಹಸ್ರಾಣಿ ಸೂರ್ಯಲೋಕೇ ಮಹೀಯತೇ ॥ ೨೬೧ ॥

ಅಥವಾ ತತ್ರ ಸುಶ್ರೋಣಿ ಮ್ರಿಯತೇ ಪುಣ್ಯವಾನ್ನರಃ ।
ಯಮಲೋಕಂ ನ ಗಚ್ಛೇತ್ತು ತೀರ್ಥಸ್ಯಾಸ್ಯ ಪ್ರಭಾವತಃ ॥ ೨೬೨ ॥

೨೫೭-೨೫೯. ಸುಂದರಿ, ಸೂರ್ಯನ ಮಾತನ್ನು ಕೇಳಿ, ಅವನ ಶುದ್ಧವಾದ ಮನಸ್ಸಿನಿಂದ ತೃಪ್ತನಾಗಿ ಅವನಿಗೆ, "ನಿನಗೆ ಯಮ, ಯಮುನೆ ಎಂಬ ಇಬ್ಬರು ಮಕ್ಕಳು ಹುಟ್ಟುವರು." ಎಂದು ಹೇಳಿ, ವರವನ್ನು ಕೊಟ್ಟು, ನನ್ನ ಯೋಗಮಹಿಮೆಯಿಂದ ಅಲ್ಲಿಯೇ ಕಣ್ಮರೆಯಾದೆನು. ಭದ್ರೇ, ಸೂರ್ಯನೂ ಮಹಾಧನವುಳ್ಳ ತನ್ನ ಮನೆಗೆ ಹೊರಟುಹೋದನು.

೨೬೦-೨೬೧. ವಸುಂಧರೆ, ಸೌಕರಕ್ಷೇತ್ರದಲ್ಲಿ ಮಾಡಲು ಬಹು ಕಷ್ಟವಾದ ಮಹಾಧರ್ಮವನ್ನು ಮಾಡಿ, ಎಂಟನೆಯ ಒಂದುಭಾಗ ಆಹಾರವನ್ನು ಮಾತ್ರ ಸೇವಿಸುತ್ತ ಸೌರತೀರ್ಥದಲ್ಲಿ ಸ್ನಾನಮಾಡುವವನು ಹತ್ತುಸಾವಿರವರ್ಷಕಾಲ ಸೂರ್ಯಲೋಕದಲ್ಲಿ ವಾಸಿಸುವನು.

೨೬೨. ಸುಂದರಿ, ಪುಣ್ಯಶಾಲಿಯಾದವನು ಅಲ್ಲಿ ಒಂದುವೇಳೆ ಸತ್ತರೆ, ಅವನು ಆ ತೀರ್ಥಪ್ರಭಾವದಿಂದ ಯಮಲೋಕಕ್ಕೆ ಹೋಗದಿರುವನು.

ಏತತ್ತೇ ಕಥಿತಂ ಭದ್ರೇ ಸ್ನಾನಸ್ಯ ಮರಣಸ್ಯ ಚ ।
ಫಲಂ ಚೈವ ಯಥಾವೃತ್ತಂ ತೀರ್ಥೇ ಸೌಕರವೇ ಮಮ ॥ ೨೬೩ ॥

ಆಖ್ಯಾನಾನಾಂ ಮಹಾಖ್ಯಾನಂ ಕ್ರಿಯಾಣಾಂ ಚ ಮಹಾಕ್ರಿಯಾ ।
ಏಷ ಜಪ್ಯಃ ಪ್ರಮಾಣಂ ಚ ಸಂಧ್ಯೋಪಾಸನಮೇವ ಚ ।
ಏಷ ತೇಜಶ್ಚ ಮಂತ್ರಶ್ಚ ಸರ್ವಭಾಗವತಪ್ರಿಯಃ ॥ ೨೬೪ ॥

ಪಿಶುನಾಯ ನ ದಾತವ್ಯಂ ಮೂರ್ಖೇ ಭಾಗವತೇನ ತು ।
ನ ಚ ವೈಶ್ಯಾಯ ಶೂದ್ರಾಯ ಯೇ ನ ಜಾನಂತಿ ಮಾಂ ಪರಂ ॥ ೨೬೫ ॥

ಪಂಡಿತಾನಾಂ ಸಭಾಮಧ್ಯೇ ಯೇ ಚ ಭಾಗವತಾ ಭುವಿ ।
ಪಠೇದ್ಬ್ರಾಹ್ಮಣಮಧ್ಯೇ ತು ಯೇ ಚ ವೇದವಿದಾಂ ವರಾಃ ॥ ೨೬೬ ॥

ದೀಕ್ಷಿತಾಯ ಚ ದಾತವ್ಯಂ ಯೇ ಚ ಶಾಸ್ತ್ರಾಣಿ ಜಾನತೇ ।
ಏತತ್ತೇ ಕಥಿತಂ ಭದ್ರೇ ಪುಣ್ಯಂ ಸೌಕರವೇ ಮಹತ್ ॥ ೨೬೭ ॥

---

೨೬೩. ಭದ್ರೇ, ನನ್ನ ಸೌಕರಕ್ಷೇತ್ರದ ತೀರ್ಥದಲ್ಲಿ ಸ್ನಾನದಿಂದಲೂ, ಮರಣದಿಂದಲೂ ಆಗುವ ಫಲವಿಚಾರವನ್ನು ಇದ್ದಂತೆ ನಿನಗೆ ಹೇಳಿದೆನು.

೨೬೪. ಇದು ಚರಿತ್ರೆಗಳಲ್ಲಿ ಮಹಾಚರಿತ್ರೆಯೂ, ಕರ್ಮಗಳಲ್ಲಿ ಮಹಾ ಕರ್ಮವೂ, ಜಪಿಸತಕ್ಕ ಶಾಸ್ತ್ರವೂ, ಸಂಧ್ಯೋಪಾಸನೆಯೂ, ಸರ್ವಭಾಗವತರಿಗೂ ಹಿತವಾದ ತೇಜಸ್ಸೂ ಮಂತ್ರವೂ ಆಗಿದೆ.

೨೬೫. ಭಗವದ್ಭಕ್ತನಾದವನಿಗೇ ಹೊರತು ಇದನ್ನು ಪಿಶುನನಿಗೂ, ಮೂರ್ಖನಿಗೂ ಹೇಳಬಾರದು. ನನ್ನನ್ನು ಪರಮಾತ್ಮನೆಂದು ತಿಳಿಯದ ವೈಶ್ಯನಿಗೂ, ಶೂದ್ರನಿಗೂ ಹೇಳಬಾರದು.

೨೬೬-೨೬೭. ಲೋಕದಲ್ಲಿ ಭಗವದ್ಭಕ್ತರಾಗಿರುವ ಪಂಡಿತರ ಸಭಾಮಧ್ಯದಲ್ಲಿಯೂ, ವೇದಗಳನ್ನರಿತವರಲ್ಲಿ ಉತ್ತಮರಾದ ಬ್ರಾಹ್ಮಣರ ಮಧ್ಯದಲ್ಲಿಯೂ ಹೇಳಬೇಕು. ಶಾಸ್ತ್ರಗಳನ್ನು ತಿಳಿದಿರುವ ದೀಕ್ಷಿತನಿಗೂ ಉಪದೇಶಿಸಬೇಕು. ಭದ್ರೇ, ಸೌಕರ (ವಾರಾಹ) ಕ್ಷೇತ್ರದ ಈ ಮಹಾಪುಣ್ಯವನ್ನು ನಿನಗೆ ಹೇಳಿದ್ದೇನೆ.

ಯ ಏತತ್ಪಠತೇ ಸುಭ್ರು ಕಲ್ಯ ಉತ್ಥಾಯ ಮಾನವಃ ।
ತೇನ ದ್ವಾದಶವರ್ಷಾಣಿ ಚಿಂತಿತೋಽಹಂ ನ ಸಂಶಯಃ ॥ ೨೬೮ ॥

ನ ಸ ಜಾಯೇತ ಗರ್ಭೇಷು ಮುಕ್ತಿಮಾಪ್ನೋತಿ ಶಾಶ್ವತೀಂ ।
ಯಃ ಪಠೇದೇಕಮಧ್ಯಾಯಂ ತಾರಯೇತ್ಸ ಕುಲಾನ್ದಶ ॥ ೨೬೯ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ತೀರ್ಥಮಾಹಾತ್ಮ್ಯೇ ಸೌಕರವೇ ಗೃಧ್ರಜಂಬೂಕಾಖ್ಯಾನ ಆದಿತ್ಯವರಪ್ರದಾನಾದಿಕಂ ನಾಮ ಸಪ್ತತ್ರಿಂಶದಧಿಕ ಶತತಮೋಽಧ್ಯಾಯಃ

---

೨೬೮. ಸುಂದರವಾದ ಹುಬ್ಬುಳ್ಳವಳೇ, ಬೆಳಗ್ಗೆ ಎದ್ದು ಇದನ್ನು ಹೇಳುವವನು ಹನ್ನೆರಡುವರ್ಷಕಾಲ ನನ್ನನ್ನು ಧ್ಯಾನಮಾಡಿದವನಂತಾಗುವನೆಂಬುವರಲ್ಲಿ ಸಂದೇಹವಿಲ್ಲ.

೨೬೯. ಇದೊಂದು ಅಧ್ಯಾಯವನ್ನು ಓದುವವನು ಮತ್ತೆ ಗರ್ಭದಲ್ಲಿ ಜನಿಸುವುದಿಲ್ಲ. ಶಾಶ್ವತವಾದ ಮುಕ್ತಿಯನ್ನು ಪಡೆಯುವನು ಅಲ್ಲದೆ ಅವನು ತನ್ನ ವಂಶದ ಹತ್ತು ತಲೆಯುವರನ್ನು ಸಂಸಾರಸಾಗರದಿಂದ ದಾಟಿಸುವನು.

ಅಧ್ಯಾಯದ ಸಾರಾಂಶ :—

ಭೂದೇವಿಗೆ ಶ್ರೀವರಾಹನು ಸೌಕರ (ವಾರಾಹ) ಕ್ಷೇತ್ರವು ಅತ್ಯುತ್ತಮವಾದುದೆಂದು ಹೇಳಿ, ಅಲ್ಲಿರುವ ಸೋಮ, ಗೃಧ್ರವಟ, ಚಕ್ರ, ಸೌರ ಮೊದಲಾದ ಹಲವು ತೀರ್ಥಗಳ ಮಹಿಮೆಯನ್ನೂ, ಸೋಮ ಸೌರತೀರ್ಥಗಳಲ್ಲಿ ಚಂದ್ರ ಸೂರ್ಯರು ಪಡೆದ ವರಗಳ ವಿಚಾರವನ್ನೂ, ಸೋಮ ಗೃಧ್ರವಟತೀರ್ಥಗಳಲ್ಲಿ ಅಕಸ್ಮಾತ್ತಾಗಿ ಸತ್ತ ನರಿಯೂ, ಹದ್ದೂ, ರಾಜಪುತ್ರಿಯೂ, ರಾಜಪುತ್ರನೂ ಆಗಿ ಜನಿಸಿ ದಂಪತಿಗಳಾದುದನ್ನೂ, ಅವರ ಮುಂದಿನ ಚರಿತ್ರೆಯನ್ನೂ, ವಿವರವಾಗಿ ಹೇಳುವಲ್ಲಿಗೆ ಶ್ರೀ ವರಾಹಪುರಾಣದಲ್ಲಿ ನೂರಮೂವತ್ತೇಳನೆಯ ಅಧ್ಯಾಯ.

|| ಶ್ರೀಃ ||

–X–

ಅಷ್ಟತ್ರಿಂಶದಧಿಕಶತತಮೋಽಧ್ಯಾಯಃ

ಅಥ ಖಂಜರೀಟೋಪಾಖ್ಯಾನಂ

॥ ಸೂತ ಉವಾಚ ॥

ಏತತ್ಪುಣ್ಯತಮಂ ಶ್ರುತ್ವಾ ರಮ್ಯೇ ಸೌಕರವೇ ತದಾ |
ಗುಣಸ್ತವಂ ಚ ಮಾಹಾತ್ಮ್ಯಂ ಜಾತ್ಯಾನಾಂ ಪರಿವರ್ತನಂ || ೧ ||

ತತಃ ಕಮಲಪತ್ರಾಕ್ಷೀ ಸರ್ವಧರ್ಮವಿದಾಂ ವರಾ |
ವಿಸ್ಮಯಂ ಪರಮಂ ಗತ್ವಾ ನಿರ್ವೃತೇನಾಂತರಾತ್ಮನಾ |
ಪುನಃ ಪಪ್ರಚ್ಛ ತಂ ದೇವಂ ವಿಸ್ಮಯಾವಿಷ್ಟಮಾನಸಾ ॥ ೨ ॥

ನೂರ ಮೂವತ್ತೆಂಟನೆಯ ಅಧ್ಯಾಯ

ಗೀಜಗಹಕ್ಕಿಯ ಕಥೆ.

೧-೨. ಸೂತಮುನಿ—ಕಮಲದಳನೇತ್ರೆಯೂ, ಸರ್ವಧರ್ಮಗಳನ್ನೂ ಅರಿತವರಲ್ಲಿ ಉತ್ತಮಳೂ ಆದ ಭೂದೇವಿಯು ಮನೋಹರವಾದ ಸೌಕರ (ವಾರಾಹ) ಕ್ಷೇತ್ರದ ಪುಣ್ಯತಮವಾದ ಈ (ಹಿಂದೆ ಹೇಳಿದ) ಗುಣಸ್ತುತಿಯನ್ನೂ, ಮಹಿಮೆಯನ್ನೂ, ತಿರ್ಯಗ್ಜಂತುಗಳಾಗಿದ್ದು ಮನುಷ್ಯರಾದ ಜನ್ಮದ ಬದಲಾವಣೆಯನ್ನೂ ಕೇಳಿ, ಪರಮಾಶ್ಚರ್ಯಪಟ್ಟು, ಸಂತಸಗೊಂಡ ಮನಸ್ಸಿನಿಂದ ಆ ವರಾಹದೇವನನ್ನು ತಿರುಗಿ ಮುಂದಿನ ವಿಚಾರಗಳನ್ನು ಕೇಳಿದಳು.

ಅಹೋ ತೀರ್ಥಸ್ಯ ಮಾಹಾತ್ಮ್ಯಂ ಕ್ಷೇತ್ರೇ ಸೌಕರವೇ ತವ |
ಅಕಾಮಾನ್ಮ್ರಿಯಮಾಣಸ್ಯ ಮಾನುಷತ್ವಮಜಾಯತ || ३ ||

ಕಿಂ ವಾನ್ಯದ್ವೃತ್ತಮಾಖ್ಯಾಹಿ ಕ್ಷೇತ್ರೇ ಸೌಕರವೇಽಮಲೇ |
ಶೃಣ್ವಂತ್ಯಾ ಮೇ ಮಹಜ್ಜಾತಂ ಚಿತ್ತೇ ಕೌತೂಹಲಂ ಪರಂ || ४ ||

ಗಾಯಮಾನಸ್ಯ ಕಿಂ ಪುಣ್ಯಂ ವಾದ್ಯಮಾನಸ್ಯ ಕಿಂ ಫಲಂ |
ನೃತ್ಯತಃ ಕಿಂ ಭವೇತ್ಪುಣ್ಯಂ ಜಾಗ್ರತೋ ವಾ ಫಲಂ ನು ಕಿಂ || ೫ ||

ಗೋಪ್ರದಾತುರನ್ನದಾತುರ್ವಾ ಜಲದಾತುಸ್ತು ಕಿಂ ಫಲಂ || ೬ ||

ಸಮ್ಮಾರ್ಜನೇ ಲೇಪನೇ ವಾ ಗಂಧಪುಷ್ಪಾದಿದಾನತಃ |
ಧೂಪದೀಪಾದಿನೈವೇದ್ಯೈಃ ಕಿಂ ಫಲಂ ಸಮುದೀರಿತಂ || ೭ ||

೩–೪. ದೇವ, ಪರಿಶುದ್ಧವಾದ ನಿನ್ನ ಸೌಕರಕ್ಷೇತ್ರದ ತೀರ್ಥದ ಮಹಿಮೆಯು ಆಶ್ಚರ್ಯಕರವಾಗಿದೆ ಉದ್ದೇಶವಿಲ್ಲದೆ ಆಕಸ್ಮಾತ್ತಾಗಿ ಅಲ್ಲಿ ಸತ್ತ ಪ್ರಾಣಿಗಳಿಗೆ ಮನುಷ್ಯತ್ವವುಂಟಾಯಿತು. ಇದನ್ನು ಕೇಳಿದ ನನಗೆ ಮನಸ್ಸಿನಲ್ಲಿ ಬಹಳ ಕುತೂಹಲವಾಗಿದೆ. ಇನ್ನು ಆ ಕ್ಷೇತ್ರದ ಯಾವುದಾದರೂ ಬೇರೆ ಚರಿತ್ರೆಯನ್ನು ಹೇಳು.

೫–೬. ಅಲ್ಲದೆ, ಆ ಕ್ಷೇತ್ರದಲ್ಲಿ ಹಾಡುವವನಿಗೆ ಬರುವ ಪುಣ್ಯವಾವುದು? ವಾದ್ಯಮಾಡುವವನಿಗೆ ಆಗುವ ಫಲವೇನು? ಕುಣಿಯುವವನಿಗೆ ಆಗುವ ಪುಣ್ಯವೇನು? ಜಾಗರಣೆ ಮಾಡುವವನಿಗೆ ಫಲವೇನು? ಅಲ್ಲಿ ಗೋದಾನ ಮಾಡುವವನಿಗಾಗಲಿ, ಅನ್ನದಾನ ಮಾಡುವವನಿಗಾಗಲಿ, ಜಲದಾನ ಮಾಡುವವನಿಗಾಗಲಿ ಆಗುವ ಫಲವೇನು?

೭. ನಿನ್ನ ಕ್ಷೇತ್ರವನ್ನು ಗುಡಿಸುವುದರಿಂದಲೂ, ಸಾರಿಸುವುದರಿಂದಲೂ, ಅಲ್ಲಿ ನಿನಗೆ ಗಂಧಪುಷ್ಪಾದಿಗಳನ್ನು ಅರ್ಪಿಸುವುದರಿಂದಲೂ, ಧೂಪದೀಪನೈವೇದ್ಯಗಳನ್ನು ಅರ್ಪಿಸುವುದರಿಂದಲೂ ಯಾವ ಫಲವಾಗುವುದೆಂದು ಹೇಳಿದೆ?

ಅನ್ಯೇನ ಕರ್ಮಣಾ ಚೈವ ಜಪಯಜ್ಞಾದಿನಾಥವಾ ।
ಕಾಂ ಗತಿಂ ಪ್ರತಿಪದ್ಯಂತೇ ಯೇ ಶುದ್ಧಮನಸೋ ಜನಾಃ ।
ತವ ಭಕ್ತಸುಖಾರ್ಥಾಯ ತದ್ಭವಾನ್ವಕ್ತುಮರ್ಹತಿ ॥ ೮ ॥

ತತೋ ಮಹ್ಯಾ ವಚಃ ಶ್ರುತ್ವಾ ಸರ್ವದೇವಮಯೋ ಹರಿಃ ।
ಉವಾಚ ಮಧುರಂ ವಾಕ್ಯಂ ಧರ್ಮಕಾಮಾಂ ವಸುಂಧರಾಂ ॥ ೯ ॥

॥ ಶ್ರೀವರಾಹ ಉವಾಚ ॥

ಶೃಣು ಸುಂದರಿ ತತ್ತ್ವೇನ ಯನ್ಮಾಂ ತ್ವಂ ಪರಿಪೃಚ್ಛಸಿ ।
ಸರ್ವಂ ತೇ ಕಥಯಿಷ್ಯಾಮಿ ಪುಣ್ಯಕರ್ಮ ಸುಖಾವಹಂ ॥ ೧೦ ॥

ತಸ್ಮಿನ್ಸೌಕರವೇ ಪಕ್ಷೀ ಖಂಜರೀಟಸ್ತು ಕೀಟಕಾನ್ ।
ಬಹೂನ್ಭಕ್ತ್ವಾ ಹಿ ವಸುಧೇ ಅಜೀರ್ಣಭೃಶಪೀಡಿತಃ ॥ ೧೧ ॥

ಮರಣಂ ಸಮನುಪ್ರಾಪ್ತಃ ಪತಿತಃ ಸ್ವೇನ ಕರ್ಮಣಾ ॥ ೧೨ ॥

---

೮ ಅಲ್ಲಿ ಜಪ, ಯಜ್ಞ ಮೊದಲಾದ ಬೇರೆಯ ಕರ್ಮಗಳಿಂದ ಶುದ್ಧ ಮನಸ್ಕರಾದವರು ಯಾವ ಗತಿಯನ್ನು ಪಡೆಯುವರು? ನಿನ್ನ ಭಕ್ತರ ಸುಖಕ್ಕಾಗಿ ಇದನ್ನೆಲ್ಲಾ ನೀನು ಹೇಳಬೇಕು.

೯. ಭೂದೇವಿಯ ಈ ಮಾತನ್ನು ಕೇಳಿ, ಸರ್ವದೇವಮಯನಾದ ಆ ಹರಿಯು ಧರ್ಮದಲ್ಲಿ ಆಸಕ್ತಳಾದ ಆಕೆಗೆ ಇಂಪಾದ ಮುಂದಿನ ಮಾತನ್ನು ಹೇಳಿದನು.

೧೦. ಶ್ರೀ ವರಾಹ—ಸುಂದರಿ, ನೀನು ಕೇಳುವ ಸುಖಕರವಾದ ಪುಣ್ಯ ಕರ್ಮವೆಲ್ಲವನ್ನೂ ನಿನಗೆ ನಿಜವಾಗಿ ಹೇಳುತ್ತೇನೆ. ಕೇಳು.

೧೧–೧೨. ಭೂಮೀ, ಆ ಸೌಕರಕ್ಷೇತ್ರದಲ್ಲಿ ಒಂದು ಗೀಜಗಹಕ್ಕಿಯು ಹುಳುಗಳನ್ನು ಬಹಳ ಹೆಚ್ಚಾಗಿ ತಿಂದು, ಅಜೀರ್ಣದಿಂದ ಹೆಚ್ಚಾದ ತೊಂದರೆ ಗೊಳಗಾಗಿ ತನ್ನ ಕರ್ಮದಿಂದ ಮರಣವು ಸಮೀಪಿಸಲಾಗಿ, ಸಾಯುತ್ತ ಕೆಳಗೆ ಬಿದ್ದಿತು.

ಸಂಪ್ರಾಪ್ತಾಸ್ತತ್ರ ವೈ ಬಾಲಾಃ ಕ್ರೀಡಂತಸ್ತಂ ಮೃತಂ ಖಗಂ ।
ಗ್ರಹಿಷ್ಯಾಮ ಇತಿ ಪ್ರೋಚ್ಯ ಧಾವಂತಸ್ತತ್ರ ತತ್ರ ಹ ॥ ೧೩ ॥

ಮಮಾಯಂ ವೈ ಮಮಾಯಂ ವೈ ಜಿಘೃಕ್ಷಂತಃ ಪರಸ್ಪರಂ ।
ಸಂಘರ್ಷಾತ್ಕಲಹಂ ಚಕ್ರುರ್ಭೃಶಂ ಕ್ರೀಡನಕೋತ್ಸುಕಾಃ ॥ ೧೪ ॥

ತತ ಏಕೋ ಗೃಹೀತ್ವೈನಂ ಗಂಗಾಂಭಸಿ ಸಮಾಕ್ಷಿಪತ್ ।
ಯುಷ್ಮಾಕಮೇವ ಭವತು ನಾನೇನಾಸ್ಮತ್ಪ್ರಯೋಜನಂ ॥ ೧೫ ॥

ಏವಂ ಸ ಖಂಜರೀಟೋ ಹಿ ಗಂಗಾತೋಯಾತ್ತತಸ್ತದಾ ।
ಆದಿತ್ಯತೀರ್ಥಸಂಕ್ಲಿನ್ನಶರೀರಸ್ಸ ವಸುಂಧರೇ ॥ ೧೬ ॥

ವೈಶ್ಯಸ್ಯ ತು ಗೃಹೇ ಜಾತೋ ಹ್ಯನೇಕಕ್ರತುಯಾಜಿನಃ ।
ಧನರತ್ನಸಮೃದ್ಧೇ ತು ರೂಪವಾನ್ಗುಣವಾನ್ಶುಚಿಃ ॥ ೧೭ ॥

೧೩–೧೪. ಆ ಹೊತ್ತಿಗೆ ಸರಿಯಾಗಿ ಕೆಲವರು ಹುಡುಗರು ಆಟವಾಡುತ್ತ ಅಲ್ಲಿಗೆ ಬಂದು, ಸಾಯುತ್ತಿದ್ದ ಆ ಹಕ್ಕಿಯನ್ನು ಹಿಡಿದುಕೊಳ್ಳಬೇಕೆಂದು ಅಲ್ಲಲ್ಲಿ ಓಡುತ್ತ, "ಇದು ನನಗೆ, ಇದು ನನಗೆ ಅಥವಾ ಇದು ನನ್ನದು, ಇದು ನನ್ನದು" ಎಂದು ಹೇಳಿ, ಕೈಗೆ ತೆಗೆದುಕೊಳ್ಳುವುದಕ್ಕಾಗಿ ಒಬ್ಬರಮೇಲೊಬ್ಬರು ಬಿದ್ದು, ಆಟದಲ್ಲಿ ಕುತೂಹಲವುಳ್ಳವರಾಗಿ ಬಲವಾಗಿ ಜಗಳವಾಡಿದರು.

೧೫. ಬಳಿಕ ಆ ಬಾಲಕರಲ್ಲೊಬ್ಬನು ಆ ಹಕ್ಕಿಯನ್ನು ಹಿಡಿದುಕೊಂಡು "ಇದು ನಿಮ್ಮದೇ ಆಗಲಿ. ಇದರಿಂದ ನಮಗೇನೂ ಪ್ರಯೋಜನವಿಲ್ಲ." ಎಂದು ಹೇಳಿ ಗಂಗೆಯ ನೀರಿನಲ್ಲಿ ಬಿಸುಟನು.

೧೬. ವಸುಂಧರೇ, ಹೀಗೆ ಆ ಗೀಜಗಹಕ್ಕಿಯು ಗಂಗೆಯ ನೀರಿನಲ್ಲಿ ಒಂದು ಭಾಗವಾದ ಆದಿತ್ಯತೀರ್ಥದಿಂದ ಒದ್ದೆಯಾದ ಮೈಯುಳ್ಳದಾಗಿ ಸತ್ತಿತು.

೧೬–೧೮ ಬಳಿಕ ಅದು ಅನೇಕ ಯಜ್ಞಗಳನ್ನು ಮಾಡಿದವನಾದ ಒಬ್ಬ ವೈಶ್ಯನ ಧನರತ್ನಸಮೃದ್ಧಿಯುಳ್ಳ ಮನೆಯಲ್ಲಿ ಅವನಿಗೆ ಮಗನಾಗಿ ಹುಟ್ಟಿತು.

ವಿಬುದ್ಧಶ್ಚ ಪವಿತ್ರಶ್ಚ ಮದ್ಭಕ್ತಶ್ಚ ವಸುಂಧರೇ ।
ಜಾತಸ್ಯ ತಸ್ಯ ವರ್ಷಾಣಿ ಜಗ್ಮುರ್ದ್ವಾದಶ ಸುವ್ರತೇ ॥ ೧೮ ॥

ಕದಾಚಿದುಪವಿಷ್ಟೌ ತೌ ದೃಷ್ಟ್ವಾ ಬಾಲೋ ಗುಣಾನ್ವಿತಃ ।
ಮಾತರಂ ಪಿತರಂ ಚೋಭೌ ಹರ್ಷೇಣ ಮಹತಾನ್ವಿತೌ ॥ ೧೯ ॥

ಪ್ರಣಮ್ಯ ಶಿರಸಾ ಭೂಮೌ ಬದ್ಧಾಂಜಲಿರಯಾಚತ ॥ ೨೦ ॥

ಮತ್ಪ್ರಿಯಂ ಯದಿ ಕರ್ತವ್ಯಮೇಕೋ ಮೇ ದೀಯತಾಂ ವರಃ
ನ ಚಾಹಂ ವಾರಣೀಯೋ ವೈ ಪಿತ್ರಾ ಮಾತ್ರಾ ಕಥಂಚನ ।
ಸತ್ಯಂ ಶಪಾಮಿ ಗುರುಣಾ ಯಥಾ ನನು ಕೃತಂ ಭವೇತ್ ॥ ೨೧ ॥

ಪುತ್ರಸ್ಯ ವಚನಂ ಶ್ರುತ್ವಾ ದಂಪತೀ ತೌ ಮುದಾನ್ವಿತೌ ।
ಊಚತುಸ್ತತ್ಪ್ರಿಯಂ ವಾಕ್ಯಂ ಬಾಲಂ ಕಮಲಲೋಚನಂ ॥ ೨೨ ॥

ವಸುಂಧರೇ, ಆ ಮಗನು ರೂಪವಂತನೂ, ಗುಣವಂತನೂ, ನಿರ್ಮಲನೂ, ಬುದ್ಧಿವಂತನೂ, ಪವಿತ್ರನೂ, ನನ್ನ ಭಕ್ತನೂ ಆಗಿದ್ದನು. ಸುವ್ರತೇ, ಹುಟ್ಟಿದ ಆ ಮಗನಿಗೆ ಹನ್ನೆರಡು ವರ್ಷಗಳಾದುವು.

೧೯–೨೧. ಆಗ ಒಂದಾನೊಂದು ದಿನ ಹೆಚ್ಚಾದ ಸಂತೋಷದಿಂದ ಸಂಗಡ ಕುಳಿತಿದ್ದ ತಾಯಿತಂದೆಗಳಿಬ್ಬರನ್ನೂ ನೋಡಿ, ಗುಣಶಾಲಿಯಾದ ಆ ಬಾಲಕನು ಅವರಿಗೆ ನೆಲದಮೇಲೆ ತಲೆಬಾಗಿ ವಂದಿಸಿ, ಕೈಮುಗಿದುಕೊಂಡು, “ನೀವು ನನಗೆ ಹಿತವನ್ನು ಮಾಡಬೇಕಾಗಿದ್ದರೆ ಇದೊಂದು ವರವನ್ನು ಕೊಡಬೇಕು. ನನ್ನನ್ನು ತಾಯಾಗಲಿ, ತಂದೆಯಾಗಲಿ ಯಾರೂ ಹೇಗೂ ತಡೆಯಬಾರದು ತಂದೆಯು ಇದನ್ನು ಮಾಡುವ ಹಾಗೆ ನಾನು ಸತ್ಯಮಾಡಿ ಹೇಳುತ್ತೇನೆ.” ಎಂದು ಬೇಡಿದನು.

೨೨. ಮಗನ ಮಾತನ್ನು ಕೇಳಿ, ಸಂತೋಷವುಳ್ಳವರಾದ ಆ ದಂಪತಿಗಳು ತಾವರೆಗಣ್ಣಿನ ಆ ಬಾಲನಿಗೆ ಹಿತವಾದ ಮುಂದಿನ ಮಾತನ್ನು ಹೇಳಿದರು.

ಯದ್ಯತ್ತ್ವಂ ವಕ್ಷ್ಯಸೇ ವತ್ಸ ಯದ್ಯತ್ತೇ ಹೃದಿ ವರ್ತತೇ ।
ಸರ್ವಂ ತತ್ತತ್ಕರಿಷ್ಯಾವೋ ವಿಸ್ರಬ್ಧಂ ವದ ಸಾಂಪ್ರತಂ ॥ ೨೩ ॥

ತ್ರಿಂಶತ್ಸಹಸ್ರಂ ಗಾವೋಹಿ ಸರ್ವಾಶ್ಚ ಶುಭದೋಹನಾಃ ।
ಯದ್ಯತ್ರ ರೋಚತೇ ಪುತ್ರ ದೇಹಿ ತ್ವಮವಿಚಾರಿತಂ ॥ ೨೪ ॥

ಪುನರನ್ಯತ್ಪ್ರವಕ್ಷ್ಯಾಮಿ ಆವಯೋಃ ಪುತ್ರಕಾರಣಾತ್ ।
ವಾಣಿಜ್ಯಂ ನಃ ಸ್ಮೃತಂ ಕರ್ಮ ತತ್ತೇ ಪುತ್ರಯದೀಪ್ಸಿತಂ ॥ ೨೫ ॥

ತತ್ಕುರುಷ್ವ ಯಥಾನ್ಯಾಯಂ ಮಿತ್ರೇಭ್ಯೋ ದೀಯತಾಂ ಧನಂ ।
ಧನಧಾನ್ಯಾನಿ ರತ್ನಾನಿ ದೇಹಿ ಪುತ್ರ ಅವಾರಿತಃ ॥ ೨೬ ॥

ಕನ್ಯಾ ವೈ ರಮಣೀಯಾಶ್ಚ ಸಜಾತೀಯಾಃ ಕುಲೋದ್ಭವಾಃ ।
ಆನಯಿಷ್ಯಾವ ಭದ್ರಂ ತೇ ಉದ್ವಾಹೇನ ಕ್ರಮೇಣ ತೇ ॥ ೨೭ ॥

---

೨೩. "ಮಗೂ, ನಿನ್ನ ಮನಸ್ಸಿನಲ್ಲಿ ಏನೇನಿದೆಯೋ, ನೀನು ಯಾವ ಯಾವುದನ್ನು ಹೇಳುವೆಯೋ ಅದೆಲ್ಲವನ್ನೂ ಮಾಡುವೆವು. ಈಗ ವಿಶ್ವಾಸದಿಂದ ಬೇಕಾದಹಾಗೆ ಹೇಳು.

೨೪. ನಮ್ಮಲ್ಲಿ ಮೂವತ್ತುಸಾವಿರ ಹಸುಗಳು, ಎಲ್ಲವೂ ಬೇಕಾದಹಾಗೆ ಹಾಲು ಕರೆಯುವುವಾಗಿವೆ. ಮಗುವೇ, ಅವುಗಳನ್ನು ದಾನಮಾಡಬೇಕೆಂದು ನಿನಗೆ ಇಷ್ಟವಿದ್ದರೆ ನಮ್ಮನ್ನು ವಿಚಾರಿಸದೆಯೇ ಮಾಡು.

೨೫–೨೬. ನಮ್ಮ ಮಗನಾದ ನಿನಗಾಗಿ ಇನ್ನೂ ಬೇರೆ ಹೇಳುತ್ತೇವೆ. ವ್ಯಾಪಾರವು ನಮಗೆ ಹೇಳಿರುವ ಕರ್ಮವಾಗಿದೆ ಮಗನೇ, ಅದು ಇಷ್ಟವಾದರೆ ಕ್ರಮವಾಗಿ ಅದನ್ನು ಮಾಡು. ಸ್ನೇಹಿತರಿಗೆ ಧನವನ್ನು ಕೊಡು. ಮಗನೇ, ಧನಧಾನ್ಯರತ್ನಗಳನ್ನು ತಡೆಯಿಲ್ಲದೆ ಕೊಡು.

೨೭. ಸಮಾನವಾದ ಜಾತಿಯವರೂ, ಸತ್ಕುಲದಲ್ಲಿ ಹುಟ್ಟಿದವರೂ, ಸುಂದರಿಯರೂ ಆದ ಕನ್ಯೆಯರನ್ನು ತಂದು, ಕ್ರಮವಾಗಿ ನಿನಗೆ ವಿವಾಹ ಮಾಡುವೆವು.

ಯದೀಚ್ಛಸಿ ಪುನಶ್ಚಾನ್ಯೈರ್ಯಜ್ಞೈರ್ಯಷ್ಟುಂ ಸುಪುತ್ರಕ ।
ವಿಧಿನಾ ಪೂರ್ವದೃಷ್ಟೇನ ವೈಶ್ಯಾ ಯೇನ ಯಜಂತಿ ಚ ॥ ೨೮ ॥

ಅಷ್ಟೌ ಸಂಪೂರ್ಣಧುರ್ಯಾಣಾಂ ಹಲಾನಾಂ ತಾವತಾಂ ಶತಂ ।
ವೈಶ್ಯಕರ್ಮ ಸಮಾದಾಯ ಕಿಂ ಪುನಃ ಪ್ರಾಪ್ತುಮಿಚ್ಛಸಿ ॥ ೨೯ ॥

ಯಾವದ್ಭೋಜನತೃಪ್ತಾನ್ವಾ ದ್ವಿಜಾನಿಚ್ಛಸಿ ತರ್ಪಿತುಂ ।
ಸರ್ವಂ ನಿಜೇಚ್ಛಯಾ ಪುತ್ರ ಕರ್ತುಮರ್ಹಸಿ ಸಾಂಪ್ರತಂ ॥ ೩೦ ॥

ಪಿತೃಮಾತೃವಚಃ ಶ್ರುತ್ವಾ ಸ ಬಾಲೋ ಧರ್ಮಸಂಯುತಃ ।
ಚರಣಾವುಪಸಂಗೃಹ್ಯ ಪಿತರೌ ಪುನರಬ್ರವೀತ್ ॥ ೩೧ ॥

ಗೋಪ್ರದಾನೇ ನ ಮೇ ಕಾರ್ಯಂ ಮಿತ್ರಂ ವಾಪಿ ನ ಚಿಂತಿತಂ ।
ಕನ್ಯಾಲಾಭೇ ನ ಚೇಚ್ಛಾಸ್ತಿ ನ ಚ ಯಜ್ಞಫಲೇ ತಥಾ ॥ ೩೨ ॥

---

೨೮. ಸುಪುತ್ರ, ಪೂರ್ವದಲ್ಲೇ ವಿಧಿಯಲ್ಲಿ ಹೇಳಿರುವ ವೈಶ್ಯರು ಮಾಡುವ ಯಜ್ಞಗಳನ್ನು ಮಾಡಲು ಬಯಸುತ್ತೀಯೇನು ?

೨೯. ಹೆಚ್ಚಾದ ಹೊರೆಯನ್ನು ಎಳೆಯುವ ಎಂಟುನೂರು ಎತ್ತು ಅಥವಾ ಕುದುರೆಗಳನ್ನೂ, ಅಷ್ಟೇ ನೇಗಿಲುಗಳನ್ನೂ ತೆಗೆದುಕೊಂಡು ವ್ಯವಸಾಯವೇ ಮೊದಲಾದ ವೈಶ್ಯಕರ್ಮವನ್ನು ಮಾಡಲು ಇಷ್ಟಪಡುತ್ತೀಯೋ ?

೩೦. ಬೇಕಾದಹಾಗೆ ತೃಪ್ತಿಯಾಗುವಂತೆ ಊಟಮಾಡಿಸಿ, ಬ್ರಾಹ್ಮಣರನ್ನು ಸಂತೋಷಪಡಿಸಲು ಆಶಿಸುತ್ತೀಯೋ ? ಮಗನೇ, ಎಲ್ಲವನ್ನೂ ಈಗ ನಿನ್ನ ಇಷ್ಟದಂತೆ ಮಾಡಬಹುದು."

೩೧. ತಂದೆತಾಯಿಗಳ ಈ ಮಾತನ್ನು ಕೇಳಿ, ಧರ್ಮಾತ್ಮನಾದ ಆ ಬಾಲಕನು ಅವರ ಕಾಲುಗಳನ್ನು ಹಿಡಿದುಕೊಂಡು ತಿರುಗಿ ಅವರಿಗೆ ಹೇಳಿದನು.

೩೨. "ಗೋದಾನದಲ್ಲಿ ನನಗೇನೂ ಕೆಲಸವಿಲ್ಲ. ನಾನು ಸ್ನೇಹಿತರನ್ನೂ ಯೋಚಿಸಿಕೊಂಡಿಲ್ಲ. ಕನ್ಯೆಯನ್ನು ಮದುವೆಮಾಡಿಕೊಳ್ಳಬೇಕೆಂಬ ಆಸೆಯೂ ನನಗಿಲ್ಲ. ಯಜ್ಞಫಲವನ್ನು ಪಡೆಯಬೇಕೆಂಬ ಇಚ್ಛೆಯೂ ಇಲ್ಲ.

ನಾಹಂ ವಾಣಿಜ್ಯಮಿಚ್ಛಾಮಿ ಕೃಷಿಗೋರಕ್ಷ್ಯಮೇವ ಚ ।
ನ ಚ ಸರ್ವಾತಿಥಿತ್ವಂ ವಾ ಮಮ ಚಿತ್ತೇ ಪ್ರಸಜ್ಜತಿ ॥ ೩೩ ॥

ಏಕಂ ಮೇ ಪರಮಂ ಚಿಂತ್ಯಂ ಯನ್ಮಮೇಚ್ಛಾ ತಪೋಧೃತೌ ।
ಚಿಂತಾ ನಾರಾಯಣಕ್ಷೇತ್ರಂ ಗಾಢಂ ಸೌಕರವಂ ಪ್ರತಿ ॥ ೩೪ ॥

ತತಃ ಪುತ್ರವಚಃ ಶ್ರುತ್ವಾ ಮಮ ಕರ್ಮಪರಾಯಣೌ ।
ಕರುಣಂ ಪರಿದೇವಂತೌ ರುದಂತೌ ತಾವುಭೌ ತಥಾ ॥ ೩೫ ॥

ಅದ್ಯ ದ್ವಾದಶವರ್ಷಾಣಿ ತವ ಜಾತಸ್ಯ ಪುತ್ರಕ ।
ಕಿಮಿದಂ ಚಿಂತಿತಂ ವತ್ಸ ತ್ವಯಾ ನಾರಾಯಣಾಶ್ರಯಂ ।
ಚಿಂತಯಿಷ್ಯಸಿ ಭದ್ರಂ ತೇ ಯದಾ ತತ್ಪ್ರಾಪ್ಸ್ಯಯಾಂ ವಯಃ ॥ ೩೬ ॥

---

೩೩. ನಾನು ವಾಣಿಜ್ಯ (ವ್ಯಾಪಾರ)ವನ್ನಾಗಲಿ, ಗೋರಕ್ಷಣೆಯನ್ನಾಗಲಿ ಬಯಸೆನು. ಸರ್ವಾತಿಥಿಸತ್ಕಾರವನ್ನು ಮಾಡಬೇಕೆಂಬುದೂ ನನ್ನ ಮನಸ್ಸಿಗೆ ಬಂದಿಲ್ಲ.

೩೪. ನನಗೆ ತಪಸ್ಸನ್ನು ಧರಿಸುವುದರಲ್ಲಿ ಇಚ್ಛೆಯಾಗಿರುವುದರಿಂದ ಸೌಕರವೆಂಬ ನಾರಾಯಣಕ್ಷೇತ್ರಕ್ಕೆ ಹೋಗಬೇಕೆಂಬ ದೃಢವೂ, ಶ್ರೇಷ್ಠವೂ ಆದ ಚಿಂತೆಯೊಂದೇ."

೩೫. ಮಗನ ಈ ಮಾತನ್ನು ಕೇಳಿ, ಸತ್ಕರ್ಮನಿರತರಾದ ತಾಯಿತಂದೆಗಳಿಬ್ಬರೂ ಕರುಣೆಯಿಂದ ಅಥವಾ ಕರುಣೆಯುಂಟಾಗುವಂತೆ ದುಃಖಿಸಿ ಅಳುತ್ತ ಹೇಳಿದರು.

೩೬. "ಮಗುವೇ, ನೀನು ಹುಟ್ಟಿ, ಈಗ ಇನ್ನೂ ಹನ್ನೆರಡುವರ್ಷ. ಕಂದಾ, ಈಗಲೇ ಏತಕ್ಕೆ ನಾರಾಯಣಾಶ್ರಯವನ್ನು ಆಲೋಚಿಸಿದ ? ನಿನಗೆ ಮಂಗಳವಾಗಲಿ. ಆ ವಯಸ್ಸು ಬಂದಾಗ ಅದನ್ನು ಆಲೋಚಿಸುವೆಯಂತೆ.

ಅದ್ಯಾಪಿ ಭೋಜನಂ ಗೃಹ್ಯ ಧಾವಮಾನಾಸ್ಮಿ ಪ್ರಷ್ಠತಃ ।
ಕಿಮಿದಂ ಚಿಂತಿತಂ ವತ್ಸ ಗಮನೇ ಸೌಕರಂ ಪ್ರತಿ ॥ ೩೭ ॥

ಅದ್ಯಾಪಿ ಮತ್ಸ್ತನೌ ಧನ್ಯೌ ಪ್ರಸ್ನುತೌ ಹಿ ದಿವಾ ನಿಶಂ ।
ಪುತ್ರ ತ್ವತ್ಸ್ಪರ್ಶನಾಶಾಯಾಃ ಕಿಮೇತಚ್ಚಿಂತಿತಂ ತ್ವಯಾ ॥ ೩೮ ॥

ರಾತ್ರೌ ಸುಪ್ತೋಽಸಿ ವತ್ಸ ತ್ವಂ ಶಯ್ಯಾಸು ಪರಿವರ್ತಿತಃ ।
ಅಂಬೇತಿ ಭಾಷಸೇದ್ಯಾಪಿ ಕಥಮೇತದ್ವಿಚಿಂತಿತಂ ॥ ೩೯ ॥

ಸ್ಪೃಶಂತಿ ತವ ನಾರ್ಯೋಽಪಿ ಕ್ರೀಡಮಾನಸ್ಯ ಪುತ್ರಕ ।
ಅಪರಾಧೋ ನ ವಿದ್ಯೇತ ಪುತ್ರ ಕ್ಷೇತ್ರಗೃಹೇಷ್ವಪಿ ॥ ೪೦ ॥

ನ ವಾ ಸ್ವಜನಭೃತ್ಯಾದ್ಯೈಃ ಪರುಷಂ ತೇ ಪ್ರಭಾಷಿತಂ ।
ರುಷ್ಟೇನ ವಾಪಿ ಭೀಷಾಯೈ ಗೃಹ್ಯತೇ ಚೈವ ಯಷ್ಟಿಕಾ ॥ ೪೧ ॥

---

೩೭. ಈಗಲೂ ನಿನಗೆ ಊಟಕ್ಕೆ ಹಿಡಿದುಕೊಂಡು, ನಿನ್ನ ಹಿಂದೆ ತಾಯಿಯಾದ ನಾನು ಓಡಬೇಕಾಗಿದೆ. ಹೀಗಿರುವಾಗ ಸೌಕರಕ್ಷೇತ್ರಕ್ಕೆ ಹೋಗಬೇಕೆಂದು ಇದೇಕೆ ಆಲೋಚಿಸಿದೆ ಕಂದಾ! ?

೩೮. ಮಗೂ, ನಿನ್ನನ್ನು ಮುಟ್ಟಬೇಕೆಂಬ ಆಸೆಯುಳ್ಳ ನನ್ನ ಸುಕೃತಿಗಳಾದ ಸ್ತನಗಳಲ್ಲಿ ಈಗಲೂ, ಹಗಲೂ ರಾತ್ರಿಯೂ ಹಾಲು ಸ್ರವಿಸುತ್ತದೆ. ಇದೇಕೆ ನೀನು ಹೀಗೆ ಯೋಚಿಸಿದೆ ?

೩೯. ಕಂದ, ನೀನು ರಾತ್ರಿ ಹಾಸಿಗೆಗಳಲ್ಲಿ ಮಲಗಿ ನಿದ್ದೆಮಾಡುತ್ತಿದ್ದವನು ಹೊರಳಿಕೊಂಡು 'ಅಮ್ಮಾ' ಎಂದು ಇನ್ನೂ ಕೂಗಿಕೊಳ್ಳುತ್ತೀಯೆ. ಹೀಗಿರುವಲ್ಲಿ ಇದೇಕೆ ಹೀಗೆ ಆಲೋಚಿಸಿದೆ ?

೪೦. ಮಗೂ, ಮನೆಗಳಲ್ಲೂ, ಗದ್ದೆತೋಟಗಳಲ್ಲೂ ಆಡುತ್ತಿರುವ ನಿನ್ನ (ಅಂಗಗಳ)ನ್ನು ಹೆಂಗಸರೂ ಮುಟ್ಟುವರು. ಅದರೂ ದೋಷವಿಲ್ಲವಾಗಿದೆ.

೪೧–೪೨. ನಮ್ಮವರಾಗಲಿ, ಸೇವಕರೇ ಮೊದಲಾದವರಾಗಲಿ ನಿನಗೆ ಕಠಿಣವಾದ ಮಾತನಾಡಿಲ್ಲ. ಕೋಪಿಸಿಕೊಂಡರೂ, ನಿನ್ನನ್ನು ಹೆದರಿಸುವು

ಪುತ್ರ ಹೇತುಂ ನ ಪಶ್ಯೇಹಂ ತವ ನಿರ್ವೇದಕಾರಣಂ ॥ ೪೨ ॥

ಇತಿ ಮಾತುರ್ವಚಃ ಶ್ರುತ್ವಾ ಸ ವೈಶ್ಯಕುಲನಂದನಃ ।
ಉವಾಚ ಮಧುರಂ ವಾಕ್ಯಂ ಜನನೀಂ ಶಂಸಿತವ್ರತಃ ॥ ೪೩ ॥

ಉಷಿತೋಽಸ್ಮಿ ತ್ವದಂಗೇಷು ಗರ್ಭಸ್ಥಃ ಕುಕ್ಷಿಸಂಭವಃ ।
ಕ್ರೀಡಿತೋಽಸ್ಮಿ ಯಥಾನ್ಯಾಯಂ ತವೋತ್ಸಂಗೇ ಯಶಸ್ವಿನಿ ॥ ೪೪ ॥

ಸ್ತನೌ ಹ್ಯೇತೌ ಮಯಾ ಪೀತೌ ಲಲಿತೇನ ವಿಜೃಂಭಿತೌ ।
ಅಂಗಂ ತವ ಸಮಾರುಹ್ಯ ಪಾಂಸುಭಿರ್ಗುಂಠಿತಾ ತನುಃ ॥ ೪೫ ॥

ಅಂಬ ತ್ವಂ ಮಯಿ ಕಾರುಣ್ಯಂ ಕುರುಷ್ವ ಖಲು ಚೋಚಿತಂ ।
ಮುಂಚ ಪುತ್ರಕೃತಂ ಶೋಕಂ ತ್ಯಜ ಮಾತರನಿಂದಿತೇ ॥ ೪೬ ॥

ದಕ್ಕಾಗಿಯೂ ನಿಮ್ಮ ತಂದೆಯು ಕೋಲನ್ನು ತೆಗೆದುಕೊಂಡಿಲ್ಲ. ಮಗುವೇ, ನಿನ್ನ ನಿರ್ವೇದ(ದುಃಖ)ಕ್ಕೆ ಕಾರಣವೇನೆಂಬುದೇ ತಿಳಿಯುವುದಿಲ್ಲ."

೪೩. ಹೀಗೆಂಬ ತಾಯಿಯ ಮಾತನ್ನು ಕೇಳಿ, ವೈಶ್ಯಕುಲಕ್ಕೆ ಸಂತೋಷಕರನೂ, ತೀಕ್ಷ್ಣವಾದ ವ್ರತವುಳ್ಳವನೂ ಆದ ಆ ಬಾಲನು ಆಕೆಗೆ ಇಂಪಾದ ಈ ಮಾತನ್ನು ಹೇಳಿದನು.

೪೪–೪೫. "ಯಶೋವಂತೆ, ನಿನ್ನ ಗರ್ಭದಲ್ಲಿದ್ದು, ಜನಿಸಿ, ನಿನ್ನ ತೋಳು ತೊಡೆ ಮೊದಲಾದ ಅಂಗಗಳಲ್ಲಿ ವಾಸಮಾಡಿದ್ದೇನೆ. ವಾತ್ಸಲ್ಯದಿಂದುಬ್ಬಿದ ನಿನ್ನ ಸ್ತನಗಳನ್ನು ಪಾನಮಾಡಿದ್ದೇನೆ. ನಿನ್ನ ಅಂಗದಮೇಲೇರಿ, ನನ್ನ ಮೈ ಧೂಳಿನಿಂದ ನಿನ್ನ ದೇಹವನ್ನು ಮುಸುಕಿದೆನು.

೪೬. ಅಮ್ಮಾ, ನನ್ನಲ್ಲಿ ತಕ್ಕ ಕರುಣೆಯನ್ನು ಮಾಡು, ದೋಷರಹಿತೆಯಾದ ತಾಯಿಯೇ, ಮಗನಾದ ನನಗಾಗಿ ದುಃಖವನ್ನು ಬಿಡು. ನನ್ನನ್ನು ಹೋಗುವುದಕ್ಕೆ ಬಿಡು.

ಆಯಾಂತಿ ಚ ಪುನರ್ಯಾಂತಿ ಗತ್ವಾ ಗಚ್ಛಂತಿ ಚಾಪರೇ |
ದೃಶ್ಯತೇ ಚ ಪುನರ್ನಷ್ಟೋ ನ ದೃಶ್ಯೇತ ಪುನಃ ಕ್ವಚಿತ್ || ೪೭ ||

ಕುತೋ ಜಾತಃ ಕ್ವ (ಸಂಬಂಧಃ) ಸಂಬದ್ಧಃ ಕಸ್ಯಮಾತಾ ಪಿತಾಥವಾ |
ಇಮಾಂ ಯೋನಿಮನುಪ್ರಾಪ್ತೋ ಘೋರೇ ಸಂಸಾರಸಾಗರೇ || ೪೮ ||

ಮಾತಾಪಿತೃಸಹಸ್ರಾಣಿ ಪುತ್ರದಾರಶತಾನಿ ಚ |
ಜನ್ಮಜನ್ಮನಿ ವರ್ತಂತೇ ಕಸ್ಯ ತೇ ಕಸ್ಯ ವಾ ವಯಂ || ೪೯ ||

ಏವಂ ಚಿಂತಾಂ ಸಮಾಸಾದ್ಯ ಮಾಶುಚೋ ಜನನಿ ಕ್ವಚಿತ್ || ೫೦ ||

ಏವಂ ತೌ ಪಿತರೌ ಶ್ರುತ್ವಾ ವಿಸ್ಮಯಾತ್ಪುನರೂಚತುಃ |
ಅಹೋ ಬತ ಮಹದ್ಗುಹ್ಯಂ ಕಿಮೇತತ್ತಾತ ಕಥ್ಯತಾಂ || ೫೧ ||

೪೭–೪೮. ಬೇರೆಯವರು ಎಷ್ಟೋ ಮಂದಿ ಇಲ್ಲಿ ಬರುತ್ತಾರೆ. ಮತ್ತೆ ಹೋಗುತ್ತಾರೆ ಹೋಗಿ ಮತ್ತೆ ಬರುತ್ತಾರೆ. ಕಾಣಿಸಿಕೊಳ್ಳುತ್ತಾರೆ. ನಷ್ಟರಾಗುತ್ತಾರೆ. ಅವರು ಮತ್ತೆ ಎಲ್ಲೂ ಕಾಣಿಸುವುದೇ ಇಲ್ಲ. ಎಲ್ಲಿಯ ಮಗ! ಏನು ಸಂಬಂಧ! ಯಾರಿಗೆ ಯಾರು ತಾಯಿ ಅಥವಾ ತಂದೆ! ಘೋರವಾದ ಸಂಸಾರಸಾಗರದಲ್ಲಿ ಈಗ ಈ ಜನ್ಮವನ್ನು ಪಡೆದಿದ್ದೇನೆ.

೪೯–೫೦. ಸಾವಿರಾರುಜನ ತಾಯಿತಂದೆಗಳೂ, ನೂರಾರುಜನ ಹೆಂಡಿರು ಮಕ್ಕಳೂ ಜನ್ಮಜನ್ಮದಲ್ಲೂ ಇರುತ್ತಾರೆ. ಯಾರಿಗೆ ಅವರು ತಾಯಿತಂದೆಗಳು (ಅಥವಾ ಹೆಂಡಿರುಮಕ್ಕಳು) ? ನಾವು ಯಾರಿಗೆ ಮಕ್ಕಳು ? ತಾಯೇ, ಇದನ್ನು ಯೋಚಿಸಿ, ಎಂದಿಗೂ ದುಃಖಿಸದೆ ಇರು."

೫೧. ತಾಯಿತಂದೆಗಳು ಇದನ್ನು ಕೇಳಿ, ಆಶ್ಚರ್ಯದಿಂದ, "ಅಪ್ಪಾ ಮಗೂ, ಇದೇನೋ ಆಶ್ಚರ್ಯವಾಗಿದೆ ಈ ಮಹಾರಹಸ್ಯವೇನು ? ಹೇಳು", ಎಂದರು.

ಏತದ್ವಚನಮಾಕರ್ಣ್ಯ ಸ ವೈಶ್ಯಕುಲಬಾಲಕಃ ।
ಉವಾಚ ಮಧುರಂ ವಾಕ್ಯಂ ಜನನೀಂ ಪಿತರಂ ತಥಾ ॥ ೫೨ ॥

ಯದಿ ಶ್ರುತೇನ ವಃ ಕಾರ್ಯಂ ಗುಹ್ಯಸ್ಯ ಪರಿನಿಶ್ಚಯಾತ್ ।
ತತ್ಪೃಚ್ಛ್ಯತಾಂ ಭವದ್ಭ್ಯಾಂ ಹಿ ಗುಹ್ಯಂ ಸೌಕರವಂ ಪ್ರತಿ ॥ ೫೩ ॥

ತತ್ರಾಹಂ ಕಥಯಿಷ್ಯಾಮಿ ಸ್ವಸ್ಯ ಗುಹ್ಯಂ ಮಹೌಜಸಂ ।
ಸೂರ್ಯತೀರ್ಥಂ ಸಮಾಸಾದ್ಯ ಯತ್ರಾತ ಪರಿಪೃಚ್ಛಸಿ ।
ಬಾಢಮಿತ್ಯೇವ ಪುತ್ರಂ ತೌ ದಂಪತೀ ಪ್ರೋಚತುಶ್ಚ ತಂ ॥ ೫೪ ॥

ಗಮನೇ ಕೃತಸಂಕಲ್ಪೌ ತತಸ್ಸೌಕರವಂ ಪ್ರತಿ ।
ಸರ್ವದ್ರವ್ಯಸಮಾಯುಕ್ತೋ ಗತಃ ಸೌಕರವಂ ಪ್ರತಿ ॥ ೫೫ ॥

ಗತಸ್ಸ ಪದ್ಮಪತ್ರಾಕ್ಷ ಆಭೀರಾಣಾಂ ಜನೇಶ್ವರಃ ।
ಗಾವೋ ವಿಂಶಸಹಸ್ರಾಣಿ ಪ್ರೇಷಯತ್ಯಗ್ರತೋ ದ್ರುತಂ ॥ ೫೬ ॥

---

೫೨. ಆ ವೈಶ್ಯಬಾಲಕನು ಈ ಮಾತನ್ನು ಕೇಳಿ, ತಾಯಿಗೂ, ತಂದೆಗೂ ಇನಿದಾದ ಮುಂದಿನ ಮಾತನ್ನು ಹೇಳಿದನು.—

೫೩–೫೪. "ಈ ಗುಟ್ಟನ್ನು ನಿಜವಾಗಿ ಕೇಳುವುದರಿಂದ ನಿಮಗೆ ಕಾರ್ಯವೇನಾದರೂ ಇದ್ದರೆ ಸೌಕರಕ್ಷೇತ್ರಕ್ಕೆ ಹೋಗೋಣ. ಅಲ್ಲಿ ನೀವು ಈ ಗುಟ್ಟನ್ನು ಕೇಳಿರಿ. ಅಪ್ಪಾ ನೀನು ಕೇಳುವ ಅತಿಬಲವಾದ ನನ್ನ ಗುಟ್ಟನ್ನು ಅಲ್ಲಿ ನಾನು ಹೇಳುವೆನು. ಸೂರ್ಯತೀರ್ಥವನ್ನು ಸೇರಿ ಹೇಳುವೆನು." 'ಅವಶ್ಯವಾಗಿಯೂ ಆಗಲಿ' ಎಂದು ಆ ದಂಪತಿಗಳು ಮಗನಿಗೆ ಹೇಳಿದರು.

೫೫–೫೬. ಬಳಿಕ ಆ ದಂಪತಿಗಳು ಸೌಕರಕ್ಷೇತ್ರಕ್ಕೆ ಹೋಗಬೇಕೆಂದು ನಿಶ್ಚಯಿಸಿದರು. ಕಮಲದಳನೇತ್ರನೂ, ಗೊಲ್ಲರೊಡೆಯನೂ ಆದ ಆತನು ಸೌಕರಕ್ಷೇತ್ರಕ್ಕೆ ಹೋಗುವಾಗ ಸರ್ವದ್ರವ್ಯಗಳಿಂದಲೂ ಕೂಡಿದವನಾಗಿ, ಹೊರಟನು. ಇಪ್ಪತ್ತುಸಾವಿರ ಹಸುಗಳನ್ನು ತಮಗಿಂತ ಮೊದಲೇ ಬೇಗನೆ

ಅಗ್ರೇ ಸರ್ವಾಸ್ತ್ತಾಃ ಪ್ರಯಯುಃ ದ್ರವ್ಯೇಣ ಚ ಸಮಾಯುತಾಃ ।
ಯಚ್ಚ ಕಿಂಚಿದ್ಗೃಹೇ ವಾಸ್ತಿ ಕೃತಂ ನಾರಾಯಣಂ ಪ್ರತಿ ॥ ೫೭ ॥

ತತಃ ಪೂರ್ವಾರ್ಧಯಾಮೇನ ಮಾಘಮಾಸೇ ತ್ರಯೋದಶೀ ।
ಸರ್ವಂ ಸ್ವಜನಮಾಮಂತ್ರ್ಯ ಸಂಬದ್ಧಂ ಚ ಯಥಾವಿಧಿ ॥ ೫೮ ॥

ಮುಹೂರ್ತೇನ ಚ ತೇನ್ನೈವ ಗಮನಂ ಕುರುತೇ ತತಃ ।
ಸ್ನಾತ್ವಾ ಚ ಕೃತಶೌಚಾಸ್ತೇ ನಾರಾಯಣಮುದಾವಹಾಃ ॥ ೫೯ ॥

ಅಥ ದೀರ್ಘೇಣ ಕಾಲೇನ ನಾರಾಯಣಮುದಾವಹಾಃ ।
ವೈಶಾಖಸ್ಯ ತು ದ್ವಾದಶ್ಯಾಂ ಮಮ ಕ್ಷೇತ್ರಮುಪಾಗತಾಃ ॥ ೬೦ ॥

ಸ್ನಾತಾಸ್ಸಂತರ್ಪ್ಯ ಚ ಪಿತೄನ್ ಮಮ ವಸ್ತ್ರವಿಭೂಷಿತಾಃ ॥ ೬೧ ॥

ಅಲ್ಲಿಗೆ ಕಳುಹಿಸಿದರು. ಸರ್ವದ್ರವ್ಯಗಳೊಡನೆ ಆ ಹಸುಗಳು ಮುಂದೆ ಹೋದುವು. ಮನೆಯಲ್ಲಿದ್ದ ಯಾವುದೊಂದು ವಸ್ತುವೂ ನಾರಾಯಣನಿಗೋಸ್ಕರವಾಯಿತು.

೫೮–೫೯. ಬಳಿಕ ಮಾಘಮಾಸದ ತ್ರಯೋದಶಿಯದಿನ ಪ್ರಾತಃಕಾಲ ಎಲ್ಲಾ ಸ್ವಜನರಿಗೂ, ಸಂಬಂಧಿಗಳಿಗೂ ಹೇಳಿ, ವಿಧ್ಯುಕ್ತವಾಗಿ ಸ್ನಾನಮಾಡಿ ಶುದ್ಧರಾಗಿ, ನಾರಾಯಣನಿಗೆ ಸಂತೋಷವನ್ನುಂಟುಮಾಡುವ ಅವರು ಆ ಪ್ರಾತಃ ಕಾಲವೇ ಶುಭಮುಹೂರ್ತದಲ್ಲಿ ಹೊರಟರು.

೬೦. ಬಳಿಕ ದೀರ್ಘಕಾಲದಲ್ಲಿ ವೈಶಾಖಶುದ್ಧದ್ವಾದಶಿಯದಿನ ಅವರು ನನ್ನ ಸೌಕರಕ್ಷೇತ್ರವನ್ನು ಸೇರಿದರು.

೬೧. ಅಲ್ಲಿ ಅವರು ಸ್ನಾನಮಾಡಿ ವಸ್ತ್ರಗಳಿಂದಲಂಕೃತರಾಗಿ, ನನ್ನನ್ನೂ, ಪಿತೃಗಳನ್ನೂ ತೃಪ್ತಿಗೊಳಿಸಿದರು.

ಗಾವೋ ವಿಂಶತಿಸಾಹಸ್ರಾ ಯಾಃ ಪೂರ್ವಮುಪಕಲ್ಪಿತಾಃ |
ತತ್ರ ಭಂಗುರಸೋ ನಾಮ ಮಮ ಕರ್ಮಪರಾಯಣಃ |
ತೇನೈವ ತಾಗೃಹೀತಾ ವೈ ವಿಧಿದೃಷ್ಟೇನ ಕರ್ಮಣಾ || ೬೨ ||

ತತಸ್ಸ ಪ್ರದದೌ ತಸ್ಯ *ವಿಂಶಾ ಗಾವೋ ಮಹಾಧನಾಃ |
ಮಂಗಲ್ಯಾಶ್ಚ ಪವಿತ್ರಾಶ್ಚ ಸರ್ವಾಶ್ಚ ವರದೋಹನಾಃ || ೬೩ ||

ಪ್ರದದೌ ಧನರತ್ನಾನಿ ನಿತ್ಯಮೇವ ದಿನೇ ದಿನೇ ।
ಮೋದತೇ ಸಹ ಪುತ್ರೇಣ ಭಾರ್ಯಯಾ ಸ್ವಜನೇನ ಚ || ೬೪ ||

ಏವಂ ತು ವಸತಸ್ತಸ್ಯ ವರ್ಷಾಕಾಲ ಉಪಾಗತಃ |
ಪ್ರಾವೃಡುಪಸ್ಥಿತಾ ತತ್ರ ಸರ್ವಸಸ್ಯಪ್ರವರ್ಧಿನೀ || ೬೫ ||

---

೬೨. ಮೊದಲೇ ಅಲ್ಲಿ ಬಂದು ಸಿದ್ಧವಾಗಿದ್ದ ಇಪ್ಪತ್ತುಸಾವಿರ ಹಸುಗಳನ್ನು ಭಂಗುರಸನೆಂಬ ನನ್ನ ಕರ್ಮನಿರತನಾದ ಬ್ರಾಹ್ಮಣನು ವಿಧ್ಯುಕ್ತವಾದ ಕ್ರಮದಿಂದ ದಾನತೆಗೆದುಕೊಂಡನು.

೬೩. ಆ ವೈಶ್ಯನು ಭಂಗುರಸನಿಗೆ ಹೆಚ್ಚು ಬೆಲೆಯುಳ್ಳವೂ, ಮಂಗಳಕರಗಳೂ, ಪರಿಶುದ್ಧವಾದುವುಗಳೂ, ಹೆಚ್ಚು ಹಾಲನ್ನು ಕರೆಯುವುವೂ ಆದ *ಇಪ್ಪತ್ತು (ಸಾವಿರ) ಹಸುಗಳನ್ನು ಬಹುಧನದೊಡನೆ ದಾನಮಾಡಿದನು.

೬೪. ಅಲ್ಲದೆ ಆತನು ನಿತ್ಯವೂ ಧನವನ್ನೂ, ರತ್ನಗಳನ್ನೂ ದಾನಮಾಡುತ್ತ ಪತ್ನೀಪುತ್ರಸ್ವಜನರೊಡನೆ ಸಂತೋಷದಿಂದಿದ್ದನು.

೬೫–೬೬. ಅವನು ಹೀಗೆ ಅಲ್ಲಿ ವಾಸಮಾಡುತ್ತಿರಲು, ಮಳೆಗಾಲವೂ, ಸರ್ವಸಸ್ಯಪ್ರವರ್ಧಕವೂ ಆದ ವರ್ಷಋತುವು ಬಂದಿತು. ಕಡಹದಮರಗಳೂ,

---

* ೬೨ ನೆಯ ಶ್ಲೋಕದಲ್ಲಿ ವಿಂಶತಿಸಾಹಸ್ರಾ (೨೦ ಸಾವಿರ) ಎಂದಿದೆ.

ಪುಷ್ಪಿತಾನಿ ಕದಂಬಾನಿ ಕುಟಜಾರ್ಜುನಕಾನಿ ಚ ।
ಏವಂ ದುಃಖಮನುಪ್ರಾಪ್ತಾಃ ಸ್ತ್ರಿಯೋ ಯಾ ರಹಿತಾಃ ಪ್ರಿಯೈಃ ॥ ೬೬ ॥

ಗರ್ಜತಾಂ ಗುಂಜತಾಂ ಚೈವ ಧಾರಾಪಾತಾ ನಿಪಾತಿತಾಃ ।
ಮೇಘಾಸ್ಸವಿದ್ಯುತಶ್ಚೈವ ಬಲಾಕಾಂಗದ ಭೂಷಿತಾಃ ॥ ೬೭ ॥

ನದೀನಾಂ ಚೈವ ನಿರ್ಘೋಷೋ ಮಯೂರಾಣಾಂ ಚ ನಿಸ್ವನಃ ।
ಕುಟಜಾರ್ಜುನಗಂಧಾಶ್ಚ ಕದಂಬಾರ್ಜುನಪಾದಪಾಃ ॥ ೬೮ ॥

ವಾತಾಃ ಪ್ರವಾಂತಿ ತೇ ತತ್ರ ಶಿಖೀನಾಂ ಚ ಸುಖಾವಹಾಃ ।
ಶೋಕೇನ ಕಾಮಿನೀನಾಂ ಚ ಭರ್ತ್ರಾ ಚ ರಹಿತಾಶ್ಚ ಯಾಃ ॥ ೬೯ ॥

ಗಚ್ಛತ್ಯೇವಂ ಸ ಕಾಲೋಽಹಿ ಮೇಘದುಂದುಭಿನಾದಿತಃ ।
ತತಃ ಶರದನು ಪ್ರಾಪ್ತಾ ಅಗಸ್ತಿರುದಿತೋ ಮಹಾನ್ ॥ ೭೦ ॥

ಮತ್ತಿಯ ಮರಗಳೂ, ಗಿರಿಮಲ್ಲಿಗೆಗಳೂ ಹೂಗಳಿಂದ ಕೂಡಿದುವು. ಪ್ರಿಯರಿಂದ ಅಗಲಿದ ವನಿತೆಯರು ವಿರಹದುಃಖಕ್ಕೊಳಗಾದರು.

೬೭. ಮಿಂಚುಗಳಿಂದ ಕೂಡಿ, ಬೆಳ್ವಕ್ಕಿಗಳೆಂಬ ಭುಜಾಭರಣಗಳಿಂದಲಂಕೃತಗಳಾದ ಮೋಡಗಳು ಸಿಡಿಲು ಗುಡುಗುಗಳುಳ್ಳವಾಗಿ ಜಡಿಮಳೆಯನ್ನು ಸುರಿಸಿದುವು.

೬೮. ನದಿಗಳ ಮೊರೆತವೂ, ನವಿಲುಗಳ ಕೇಗೂ, ಗಿರಿಮಲ್ಲಿಗೆ ಮತ್ತಿ ಕಡಹದ ಹೂಗಳ ವಾಸನೆಯೂ ಹೆಚ್ಚಿತು.

೬೯–೭೦. ನವಿಲುಗಳಿಗೆ ಸುಖಕರವಾದ ಗಾಳಿಯು ಬೀಸುತ್ತಿದ್ದಿತು. ಪತಿವಿರಹಿತರಾದ ಕಾಮಿನಿಯರ ದುಃಖದೊಡನೆ ಮೋಡಗಳೆಂಬ ಭೇರಿಗಳ ವಾದ್ಯಗಳನ್ನು ಪಡೆದಿದ್ದ ಆ ಮಳೆಗಾಲವು ಹೀಗೆ ಕಳೆಯಲು ಬಳಿಕ ಶರತ್ಕಾಲವು ಬಂದಿತು. ಮಹಾತ್ಮನಾದ ಅಗಸ್ತ್ಯ(ನಕ್ಷತ್ರ)ನುದಿಸಿದನು.

ತಟಕಾನಿ ಪ್ರಸನ್ನಾನಿ ಕುಮುದೋತ್ಪಲವಂತಿ ಚ ।
ಪದ್ಮಷಂಡೈಃ ಸುರಮ್ಯಾಣಿ ಪುಷ್ಪಿತಾನಿ ಸಮಂತತಃ ॥ ೭೧ ॥

ಪ್ರವಾಂತಿ ಸುಸುಖಾ ವಾತಾಸ್ಸುಗಂಧಾಶ್ಚ ಸುಶೀತಲಾಃ ।
ಸಪ್ತಪರ್ಣಸುಗಂಧಾಶ್ಚ ಶೀತಲಾಃ ಕಾಮಿವಲ್ಲಭಾಃ ॥ ೭೨ ॥

ಏವಂ ಶರದಿ ನಿರ್ವೃತ್ತೇ ಕೌಮುದೇ ಸಮುಪಾಗತೇ ।
ತೌ ತಸ್ಮಿನ್ಮಾಸಿ ಸುಶ್ರೋಣಿ ಶುಕ್ಲಪಕ್ಷಾಂತರೇ ತದಾ ॥ ೭೩ ॥

ಏಕಾದಶ್ಯಾಂ ತತಃ ಸುಭ್ರು ಸ್ನಾತೌ ಕ್ಷೌಮವಿಭೂಷಿತೌ ।
ಉಭೌ ತೌ ದಂಪತೀ ತತ್ರ ಪುತ್ರಮೂಚತುರಾತ್ಮನಃ ॥ ೭೪ ॥

ಉಷಿತಾಸ್ತ್ವತ್ರ ಷಣ್ಮಾಸಾನ್ಸುಖಂ ಚ ದ್ವಾದಶೀ ಭವೇತ್ ।
ಕಿನ್ನೋ ನ ವಕ್ಷ್ಯಸೇ ಗುಹ್ಯಂ ಯೇನ ವೈ ವಾರಿತಾ ವಯಂ ॥ ೭೫ ॥

೭೧–೭೨. ಬೆಳ್ನೈದಿಲೆ ಕನ್ನೈದಿಲೆಗಳಿಂದಲೂ, ಎಲ್ಲಾ ಕಡೆಯೂ ಅರಳಿದ ಹೂಗಳ ತಾವರೆಯ ಬಳ್ಳಿಗಳ ಗುಂಪಿನಿಂದಲೂ ಬಲು ಒಪ್ಪುವ ಕೆರೆಗಳು ತಿಳಿನೀರುಳ್ಳುವಾದುವು. ಕಪ್ಪುರಬಾಳೆಯ ಮತ್ತು ಬೇರೆಯ ಹೂಗಳ ಸುವಾಸನೆಯಿಂದ ಕೂಡಿದ, ತಂಪಾಗಿ ಕಾಮಿಗಳಿಗೆ ಅತಿಪ್ರಿಯವಾದ ಹಿತಕರವಾದ ಗಾಳಿಯು ಚೆನ್ನಾಗಿ ಬೀಸುತ್ತಿದ್ದಿತು.

೭೩–೭೫. ಸುಂದರಿ, ಹೀಗೆ ಶರತ್ಕಾಲವು ನಡೆಯುತ್ತಿರಲು, ಕಾರ್ತಿಕ ಮಾಸದ ಶುಕ್ಲಪಕ್ಷದ ಏಕಾದಶಿಯದಿನ ಆ ದಂಪತಿಗಳು ಸ್ನಾನಮಾಡಿ, ಪಟ್ಟೆಯವಸ್ತ್ರಗಳಿಂದಲಂಕೃತಳಾಗಿ ಆ ಸೌಕರಕ್ಷೇತ್ರದಲ್ಲಿ ತಮ್ಮ ಮಗನನ್ನು ನೋಡಿ, "ನಾವು ಇಲ್ಲಿ ಸುಖದಿಂದ ಆರುತಿಂಗಳು ವಾಸಮಾಡಿದುದಾಯಿತು. ನಾಳೆ ದ್ವಾದಶಿಯಾಗಿದೆ. ನಮಗೆ ಮರೆಸಿರುವ ಗುಟ್ಟನ್ನು ಇನ್ನೂನಮಗೆ ಹೇಳುವುದಿಲ್ಲವೆ?" ಎಂದರು.

ಪಿತ್ರೋಸ್ತು ವಚನಂ ಶ್ರುತ್ವಾ ಸ ಪುತ್ರೋ ಧರ್ಮನಿಷ್ಠಿತಃ |
ಉವಾಚ ಮಧುರಂ ವಾಕ್ಯಂ ತಯೋಸ್ತು ಕೃತನಿಶ್ಚಯಃ || ೭೬ ||

ಏವಮೇತನ್ಮಹಾಭಾಗ ಯತ್ತ್ವಯಾ ಪರಿಭಾಷಿತಂ |
ಕಲ್ಯಂ ತೇ ಕಥಯಿಷ್ಯಾಮಿ ಇದಂ ಗುಹ್ಯಂ ಮಹೌಜಸಂ || ೭೭ ||

ಏಷಾ ವೈ ದ್ವಾದಶೀ ತಾತ ಪ್ರಭುನಾರಾಯಣಪ್ರಿಯಾ |
ಮಂಗಲಾ ಚ ವಿಚಿತ್ರಾ ಚ ವಿಷ್ಣುಭಕ್ತಸುಖಾವಹಾ || ೭೮ ||

ದದತೇಸ್ಯಾಂ ಪ್ರಹೃಷ್ಟಾ ಚ ದ್ವಾದಶ್ಯಾಂ ಕೌಮುದೇ ಸಿತೇ |
ದೀಕ್ಷಿತಾಸ್ತೇ ಯೋಗಿಕುಲೇ ವಿಷ್ಣುಭಕ್ತಿಪರಾಯಣಾಃ || ೭೯ ||

ತೇನ ದಾನಪ್ರಭಾವೇಣ ವಿಷ್ಣುತೋಷಕರೇಣ ಚ |
ತರಂತಿ ದುಸ್ತರಂ ತಾತ ಘೋರಂ ಸಂಸಾರಸಾಗರಂ || ೮೦ ||

---

೭೬. ಧರ್ಮದಲ್ಲಿ ಸ್ಥಿರನಾದ ಆ ಮಗನು ತಾಯಿತಂದೆಗಳ ಈ ಮಾತನ್ನು ಕೇಳಿ, ಮನದಲ್ಲಿ ನಿರ್ಣಯಮಾಡಿ ಅವರಿಗೆ ಹಿತವಾಗಿ ಮಾತನಾಡಿದನು.

೭೭. "ಪೂಜ್ಯನೇ, ನೀನು ಹೇಳಿದುದು ಸರಿಯಾಗಿದೆ. ನಾಳೆ ಬೆಳಗ್ಗೆ ಅತಿತೇಜೋಬಲಗಳುಳ್ಳ ಈ ರಹಸ್ಯವನ್ನು ನಿನಗೆ ಹೇಳುವೆನು.

೭೮. ಅಪ್ಪಾ, ಈ ದ್ವಾದಶಿಯು ಸರ್ವಲೋಕಪ್ರಭುವಾದ ನಾರಾಯಣನಿಗೆ ಪ್ರಿಯವಾದುದೂ, ಮಂಗಳವಾದುದೂ, ಪವಿತ್ರವಾದುದೂ, ವಿಷ್ಣುಭಕ್ತರಿಗೆ ಸುಖವನ್ನುಂಟುಮಾಡುವುದೂ ಆಗಿದೆ.

೭೯–೮೦. ಈ ಕಾರ್ತಿಕಶುಕ್ಲದ್ವಾದಶಿಯಲ್ಲಿ, ಯೋಗಿಕುಲದಲ್ಲುದಿಸಿದ ವಿಷ್ಣುಭಕ್ತಿನಿರತರೂ, ದೀಕ್ಷಿತರೂ ಸಂತೋಷದಿಂದ ದಾನಮಾಡುವರು. ವಿಷ್ಣುಪ್ರೀತಿಕರವಾದ ಆ ದಾನದ ಮಹಿಮೆಯಿಂದ, ದಾಟಲು ಕಷ್ಟವಾದ ಭಯಂಕರವಾದ ಸಂಸಾರಸಾಗರವನ್ನು ದಾಟುವರು.

ಏವಂ ಕಥಯತಾಂ ತೇಷಾಂ ಪ್ರಭಾತಾ ರಜನೀ ಶುಭಾ ।
ತತಸ್ಸಂಧ್ಯಾಮುಪಸ್ಥಾಯ ಉದಿತೇ ಸೂರ್ಯಮಂಡಲೇ ॥ ೮೧ ॥

ಶುಚಿರ್ಭೂತ್ವಾ ಯಥಾನ್ಯಾಯಂ ಕ್ಷೌಮವಸ್ತ್ರವಿಭೂಷಿತಃ ।
ಪ್ರಣಮ್ಯ ಶಿರಸಾ ದೇವಂ ಶಂಖಚಕ್ರಗದಾಧರಂ ।
ಉಭೌ ತೌ ಚರಣೌ ಗೃಹ್ಯ ಪಿತರೌ ಸಮಭಾಷತ ॥ ೮೨ ॥

ಶೃಣು ತಾತ ಮಹಾಭಾಗ ಯದರ್ಥಂ ಸಮುಪಾಗತಃ ।
ಯದ್ಭವಾನ್ಪೃಚ್ಛತೇ ತಾತ ಗುಹ್ಯಂ ಸೌಕರವಂ ಪ್ರತಿ ॥ ೮೩ ॥

ಖಂಜರೀಟೋ ಹ್ಯಹಂ ತಾತ ಪಕ್ಷಿಯೋನಿಸಮುದ್ಭವಃ ॥ ೮೪ ॥

ಭಕ್ಷಿತಾಶ್ಚ ಪತಂಗಾ ಮೇ ಅಜೀರ್ಣೇನಾತಿಪೀಡಿತಃ ।
ಅಹಂ ತೇನೈವ ದೋಷೇಣ ನ ಶಕ್ನೋಮಿ ವಿಚೇಷ್ಟಿತುಂ ॥ ೮೫ ॥

೮೧-೮೨. ಅವರು ಹೀಗೆ ಮಾತನಾಡುತ್ತಿರಲು ಶುಭಕರವಾದ ರಾತ್ರಿಯು ಬೆಳಗಾಯಿತು. ಬಳಿಕ ಆ ಬಾಲನು ಸ್ನಾನಾದಿಗಳಿಂದ ಶುದ್ಧನಾಗಿ, ಪಟ್ಟೆಯ ವಸ್ತ್ರಗಳಿಂದಲಂಕೃತನಾಗಿ, ಸೂರ್ಯೋದಯವಾಗಲಾಗಿ ಕ್ರಮವಾಗಿ ಸಂಧ್ಯಾ ವಂದನೆಯನ್ನು ಮಾಡಿ, ಶಂಖಚಕ್ರಗದಾಧರನಾದ ನಾರಾಯಣದೇವನನ್ನು ತಲೆಬಾಗಿ ವಂದಿಸಿ, ತಾಯಿತಂದೆಗಳ ಎರಡು ಕಾಲುಗಳನ್ನೂ ಹಿಡಿದುಕೊಂಡು ಹೇಳಿದನು.

೮೩. "ಮಹಾಭಾಗ್ಯನಾದ ತಂದೆಯೇ, ನಾನು ಸೌಕರಕ್ಷೇತ್ರಕ್ಕೆ ಏಕೆ ಬಂದೆನೋ, ನೀನು ಯಾವುದನ್ನು ಪ್ರಶ್ನಿಸುತ್ತೀಯೋ ಆ ರಹಸ್ಯವನ್ನು ಕೇಳು.

೮೪-೮೫. ಅಪ್ಪಾ, ನಾನು ಹಿಂದೆ ಪಕ್ಷಿಜಾತಿಯಲ್ಲಿ ಗೀಜುಗಹಕ್ಕಿ ಯಾಗಿದ್ದೆನು. ನಾನು ಹುಳುಗಳನ್ನು ಹೆಚ್ಚಾಗಿ ತಿಂದು, ಅಜೀರ್ಣರೋಗದಿಂದ ಪೀಡಿತನಾದೆನು. ಆ ತೊಂದರೆಯಿಂದಲೇ ನಾನು ಚಲಿಸಲಾರದವನಾದೆನು.

ದೃಷ್ಟ್ವಾ ಮಾಂ ವಿಹ್ವಲಂ ಬಾಲಾಃ ಗೃಹೀತ್ವಾಕ್ರೀಡಿತುಂ ಗತಾಃ ।
ಹಸ್ತಾದ್ಧಸ್ತೇನ ಕ್ರೀಡಂತಶ್ಚಾನ್ಯೋನ್ಯಪರಿಹಾಸತಃ ।
ಮಯಾ ದೃಷ್ಟೋ ಮಯಾ.ದೃಷ್ಟೋ ಹ್ಯಯಂ ಚೇತಿ ಕಲಿಃ ಕೃತಃ ॥೮೬॥

ತತ ಏಕೇನ ಬಾಲೇನ ಭ್ರಾಮಯಿತ್ವಾಕ್ಷಯೇಂಭಸಿ ॥ ೮೭ ॥

ನ ಮಮೇತಿ ತವೇತ್ಯುಕ್ತ್ವಾ ಹ್ಯಾದಿತ್ಯಂ ತೀರ್ಥಮುತ್ತಮಂ ।
ಕ್ರೋಧೇನಾದಾಯ ತೀವ್ರೇಣ ಕ್ಷಿಪ್ತೋ ಗಂಗಾಂಭಸಿ ತ್ವರಾ ॥ ೮೮ ॥

ತತ್ರ ಮುಕ್ತಾ ಮಯಾ ಪ್ರಾಣಾಃ ಸೂರ್ಯತೀರ್ಥೇ ಮಹೌಜಸಿ ।
ಅಕಾಮೇನ ವಿಶಾಲಾಕ್ಷಿ ತತ್ಪ್ರಭಾವಾದಹಂ ತತಃ ॥ ೮೯ ॥

ಜಾತಸ್ತವ ಸುತೋ ಮಾತಸ್ತದೇತದ್ದಿನಮುತ್ತಮಂ ।
ಅಕಾಮಾನ್ಮ್ರಿಯಮಾಣಸ್ಯ ವರ್ಷಾಣ್ಯದ್ಯ ತ್ರಯೋದಶ ॥ ೯೦ ॥

---

೮೬. ಇಲ್ಲಿಗೆ ಆಟಕ್ಕಾಗಿ ಬಂದ ಹುಡುಗರು, ಶಕ್ತಿಯಿಲ್ಲದ ನನ್ನನ್ನು ನೋಡಿ, ಹಿಡಿದುಕೊಂಡು ಪರಸ್ಪರ ವಿನೋದದಿಂದ ಕೈಯಿಂದ ಕೈಗೆ ಎಸೆದು ಆಡುತ್ತಾ, "ಇದನ್ನು ಮೊದಲು ನಾನು ಕಂಡೆನು, ನಾನು ಕಂಡೆನು" ಎಂದು ಜಗಳವಾಡಿದರು.

೮೭-೮೮. ಬಳಿಕ ಒಬ್ಬ ಹುಡುಗನು 'ಇದು ನನ್ನದಲ್ಲ. ನಿನ್ನದೇ' ಎಂದು ಹೇಳಿ, ಬಹಳ ಸಿಟ್ಟಿನಿಂದ ನನ್ನನ್ನು ಕೈಗೆ ತೆಗೆದುಕೊಂಡು ತಿರುಗಿಸಿ, ಅಕ್ಷಯವಾದ ಗಂಗೆಯ ನೀರಿನಲ್ಲಿ, ಅದರಲ್ಲೂ ಉತ್ತಮವಾದ ಆದಿತ್ಯತೀರ್ಥದಲ್ಲಿ ಎಸೆದನು.

೮೯-೯೨. ಅತಿತೇಜೋಬಲಗಳುಳ್ಳ ಈ ಸೂರ್ಯತೀರ್ಥದಲ್ಲಿ ನಾನು ಉದ್ದೇಶವಿಲ್ಲದೆ ಪ್ರಾಣಗಳನ್ನು ಬಿಟ್ಟೆನು. ವಿಶಾಲಾಕ್ಷೀ, ತಾಯೇ, ಈ ತೀರ್ಥದ ಮಹಿಮೆಯಿಂದ ಬಳಿಕ ನಾನು ನಿನ್ನ ಮಗನಾಗಿ ಹುಟ್ಟಿದೆನು. ಈ ದಿನವು ಬಹು ಉತ್ತಮವಾದುದು. ಉದ್ದೇಶವಿಲ್ಲದೆ ನಾನು ಹಾಗೆ ಸತ್ತು, ಇಂದಿಗೆ

ವ್ಯತೀತಾನಿ ಚ ಗುಹ್ಯಂ ತೇ ಕಥನಂ ಮಮ ಚೈವ ಯತ್ ।
ಏತತ್ತೇ ಕಥಿತಂ ತಾತ ಗುಹ್ಯಮಾಗಮನಂ ಪ್ರತಿ ॥ ೯೧ ॥

ಅಹಂ ಕರ್ಮ ಕರಿಷ್ಯಾಮಿ ಗಚ್ಛ ತಾತ ನಮೋಽಸ್ತು ತೇ ॥ ೯೨ ॥

ತತೋ ಮಾತಾ ಪಿತಾ ಚೈವ ಪುತ್ರಂ ಪುನರುವಾಚ ಹ ।
ವಿಷ್ಣುಪ್ರೋಕ್ತಾನಿ ಕರ್ಮಾಣಿ ಯಾನಿ ಕಾರಯಿತಾ ಭವಾನ್ ।
ವಯಂ ತಾನಿ ಕರಿಷ್ಯಾಮೋ ವಿಧಿದೃಷ್ಟೇನ ಕರ್ಮಣಾ ॥ ೯೩ ॥

ಘಟಮಾನಾ ಯಥಾನ್ಯಾಯಂ ಕರ್ಮ ಸಂಸಾರಮೋಕ್ಷಣಂ ॥ ೯೪ ॥

ತೇಽಪಿ ದೀರ್ಘೇಣ ಕಾಲೇನ ಮಮ ಕರ್ಮಪರಾಯಣಾಃ ।
ಕೃತ್ವಾ ತು ವಿಪುಲಂ ಕರ್ಮ ತತಃ ಪಂಚತ್ವಮಾಗತಾಃ ॥ ೯೫ ॥

ಮಮ ಕ್ಷೇತ್ರಪ್ರಭಾವೇಣ ಚಾತ್ಮನಃ ಕರ್ಮನಿಶ್ಚಯಾತ್ ।
ವಿಮುಕ್ತಾಸ್ಸರ್ವಸಂಸಾರಾಚ್ಛ್ವೇತದ್ವೀಪಮುಪಾಗತಾಃ ॥ ೯೬ ॥

ಹದಿಮೂರು ವರ್ಷಗಳು ಕಳೆದುವು. ಅಪ್ಪಾ ಇಲ್ಲಿಗೆ ಬರುವುದಕ್ಕೆ ಕಾರಣವಾದ ನನ್ನ ಗುಟ್ಟಾದ ಈ ಕಥೆಯನ್ನು ನಿನಗೆ ಹೇಳಿದ್ದೇನೆ. ಇನ್ನು ನಾನು ಇಲ್ಲಿ ಕರ್ಮವನ್ನು ಮಾಡುತ್ತೇನೆ. ಅಪ್ಪಾ, ನೀನು ಹೊರಡು. ನಿನಗೆ ನಮಸ್ಕಾರ."

೯೩. ಬಳಿಕ ತಾಯಿಯೂ, ತಂದೆಯೂ ಮಗನಿಗೆ ಮತ್ತೆ, "ವಿಷ್ಣುಪ್ರೋಕ್ತವಾದ ಯಾವ ಕರ್ಮಗಳನ್ನು ನೀನು ಮಾಡುವೆಯೋ, ಅವುಗಳನ್ನು ನಾವೂ ವಿಧಿಯಲ್ಲಿ ಹೇಳಿರುವ ರೀತಿಯಲ್ಲಿ ಮಾಡುವೆವು" ಎಂದು ಹೇಳಿದರು.

೯೪-೯೬. ಬಳಿಕ, ನನ್ನ ಕರ್ಮದಲ್ಲಿ ನಿರತರಾದ ಅವರು ಸಂಸಾರ ವಿಮೋಚಕವಾದ ಕರ್ಮವನ್ನು ಶಾಸ್ತ್ರೋಕ್ತವಾಗಿ ಮಾಡುತ್ತ, ಹಾಗೆ ಬಹುಕಾಲ ವಿಶೇಷವಾಗಿ ಆಚರಿಸಿ, ಬಳಿಕ ಮೃತರಾಗಿ, ನನ್ನ ಕ್ಷೇತ್ರದ ಮಹಿಮೆಯಿಂದಲೂ, ಅವರ ಕರ್ಮನಿರ್ಣಯದಿಂದಲೂ, ಸರ್ವಸಂಸಾರವಿಮುಕ್ತರಾಗಿ ಶ್ವೇತದ್ವೀಪ (ವೈಕುಂಠ)ಕ್ಕೆ ಬಂದರು.

ಯೋಽಸೌ ಪರಿಜನಃ ಕಶ್ಚಿದ್ಗೃಹೇಭ್ಯಶ್ಚ ಸಮಾಗತಃ |
ಸರ್ವಃ ಶ್ರಿಯಾ ಯುತಸ್ತತ್ರ ರೋಗವ್ಯಾಧಿವಿವರ್ಜಿತಃ || ೯೭ ||

ಸರ್ವೇ ಚ ಯೋಗಿನಸ್ತತ್ರ ಸರ್ವೇ ಚೋತ್ಪಲಗಂಧಯಃ |
ಮೋದಂತೇ ತು ಯಥಾನ್ಯಾಯಂ ಪ್ರಸಾದಾತ್ ಕ್ಷೇತ್ರಜಾನ್ಮಮ |
ಏತತ್ತೇ ಕಥಿತಂ ದೇವಿ ಮಹಾಖ್ಯಾನಂ ಮಹೌಜಸಂ || ೯೮ ||

ಪುನರನ್ಯತ್ಪ್ರವಕ್ಷ್ಯಾಮಿ ಯದ್ವೃತ್ತಂ ಸೌಕರೇ ಮಮ || ೯೯ ||

ಏಷಾ ವ್ಯುಷ್ಟಿರ್ಮಹಾಭಾಗೇ ಕ್ಷೇತ್ರೇ ಯತ್ಕ್ರಿಯತೇ ಮಹತ್ |
ತಿರ್ಯಗ್ಯೋನಿವಿನಿರ್ಮುಕ್ತಾಃ ಶ್ವೇತದ್ವೀಪಮುಪಾಗತಾಃ || ೧೦೦ ||

ಯ ಏತತ್ಪಠತೇ ನಿತ್ಯಂ ಕಲ್ಯಮುತ್ಥಾಯ ಮಾನವಃ ।
ಸ ಕುಲಂ ತಾರಯೇತ್ತೂರ್ಣಂ ದಶ ಪೂರ್ವಾನ್ದಶಾಪರಾನ್ || ೧೦೧ ||

೯೭-೯೮. ಆ ವೈಶ್ಯರ ಮನೆಗಳಿಂದ ಅಲ್ಲಿಗೆ ಬಂದಿದ್ದ ಪರಿಜನರಲ್ಲಿ ಒಬ್ಬೊಬ್ಬರೂ ನನ್ನ ಕ್ಷೇತ್ರದಿಂದುಂಟಾದ ಪ್ರಸಾದದಿಂದ ಐಶ್ವರ್ಯಯುಕ್ತರೂ ರೋಗಾದಿಗಳಿಲ್ಲದವರೂ ಆಗಿ ಸರ್ವರೂ ಯೋಗಿಗಳಾಗಿಯೂ, ನೈದಿಲೆಯ ಹೂವಿನಂತೆ ಸುಗಂಧವುಳ್ಳವರಾಗಿಯೂ, ಧರ್ಮಾನುಸಾರವಾಗಿ ಸಂತೋಷ ದಿಂದಿರುವರು. ದೇವಿ, ಮಹಾತೇಜೋಬಲಗಳುಳ್ಳ ಈ ಮಹಾಚರಿತ್ರೆಯನ್ನು ನಿನಗೆ ಹೇಳಿದ್ದೇನೆ.

೯೯-೧೦೦. ನನ್ನ ಸೌಕರಕ್ಷೇತ್ರದಲ್ಲಿ ನಡೆದ ಬೇರೆಯ ವಿಚಾರವನ್ನೂ ನಿನಗೆ ಹೇಳುತ್ತೇನೆ. ಮಹಾಭಾಗ್ಯೇ, ಸೌಕರಕ್ಷೇತ್ರದ ಮಹತ್ವವು ಈ ಫಲ ಸಮೃದ್ಧಿಯುಳ್ಳದು. ತಿರ್ಯಗ್ಜಂತುಗಳೂ ಆ ಜನ್ಮವನ್ನು ಅಲ್ಲಿ ಕಳೆದುಕೊಂಡು ಶ್ವೇತದ್ವೀಪವನ್ನು ಸೇರಿದುವು.

೧೦೧. ಬೆಳಗ್ಗೆ ಎದ್ದು, ನಿತ್ಯವೂ ಇದನ್ನು ಓದುವವನು ತನ್ನ ಹಿಂದಿನ ಹತ್ತುಜನರನ್ನೂ, ಮುಂದಿನ ಹತ್ತುಜನರನ್ನೂ ಎಂದರೆ ತನ್ನ ಕುಲವನ್ನೇ ಬೇಗನೆ ಸಂಸಾರಸಾಗರದಿಂದ ದಾಟಿಸುವನು.

ನ ಪಠೇನ್ಮೂರ್ಖಮಧ್ಯೇ ತು ಪಾಪಿಷ್ಠೇ ಶಾಸ್ತ್ರದೂಷಕೇ |
ನ ಪಠೇತ್ಪಿಶುನಾನಾಂ ಚ ಏಕಾಕೀ ತು ಪಠೇದ್ಗೃಹೇ || ೧೦೨ ||

ಪಠೇದ್ಬ್ರಾಹ್ಮಣಮಧ್ಯೇ ಚ ಯೇ ಚ ವೇದವಿದಾಂ ವರಾಃ ।
ವೈಷ್ಣವಾನಾಂ ಚ ಪುರತೋ ಯೇ ಚ ಶಾಸ್ತ್ರಗುಣಾನ್ವಿತಾಃ |
ವಿಶುದ್ಧಾನಾಂ ವಿನೀತಾನಾಂ ಸರ್ವಸಂಸಾರಮೋಕ್ಷಣಂ || ೧೦೩ ||

ಇತಿ ಶ್ರೀವರಾಹಪುರಾಣೇ ಖಂಜರೀಟೋಪಾಖ್ಯಾನಂ ನಾಮ
ಅಷ್ಟತ್ರಿಂಶದಧಿಕ ಶತತಮೋಧ್ಯಾಯಃ

---

೧೦೨. ಇದನ್ನು ಮೂರ್ಖರ ಮಧ್ಯದಲ್ಲೂ, ಶಾಸ್ತ್ರವನ್ನು ದೂಷಿಸುವವರಲ್ಲೂ, ಪಿಶುನರಲ್ಲೂ ಓದಬಾರದು, ಅಥವಾ ಹೇಳಬಾರದು ಮನೆಯಲ್ಲಿ ಒಬ್ಬನೇ ಆದರೂ ಓದಬಹುದು.

೧೦೩. ವೇದವನ್ನು ಅರಿತವರಲ್ಲಿ ಉತ್ತಮರಾದ ಬ್ರಾಹ್ಮಣರ ಮಧ್ಯದಲ್ಲೂ, ಶಾಸ್ತ್ರಗಳನ್ನರಿತ ಗುಣಶಾಲಿಗಳೂ, ಪರಿಶುದ್ಧರೂ, ವಿನಯವುಳ್ಳವರೂ ಆದ ವೈಷ್ಣವರ ಎದುರಿನಲ್ಲೂ ಸರ್ವಸಂಸಾರವಿಮೋಚಕವಾದ ಇದನ್ನು ಓದಬೇಕು; ಅಥವಾ ಹೇಳಬೇಕು.

ಅಧ್ಯಾಯದ ಸಾರಾಂಶ :—

ಭೂದೇವಿಗೆ ಶ್ರೀವರಾಹನು, ಸೌಕರಕ್ಷೇತ್ರದ ಸೂರ್ಯತೀರ್ಥದಲ್ಲಿ ಅಕಸ್ಮಾತ್ತಾಗಿ ಬಿದ್ದು ಸತ್ತು, ಮಹಾವಿರಕ್ತನಾದ ವೈಶ್ಯಬಾಲಕನಾಗಿ ಹುಟ್ಟಿದ ಒಂದು ಗೀಜುಗಹಕ್ಕಿಯ ಕತೆಯನ್ನು ವಿವರವಾಗಿ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರಮೂವತ್ತೆಂಟನೆಯ ಅಧ್ಯಾಯ.

|| ಶ್ರೀಃ ||

–X–

ಏಕೋನಚತ್ವಾರಿಂಶದಧಿಕಶತತಮೋಧ್ಯಾಯಃ

ಅಥ ಸೌಕರಮಾಹಾತ್ಮ್ಯಂ

|| ಶ್ರೀವರಾಹ ಉವಾಚ ||

ಶೃಣು ತತ್ವೇನ ಮೇ ದೇವಿ ಲಿಪ್ಯಮಾನಸ್ಯ ಯತ್ಫಲಂ ।
ಸರ್ವಂ ತೇ ಕಥಯಿಷ್ಯಾಮಿ ಯಥಾ ಪ್ರಾಪ್ನೋತಿ ಮಾನವಃ || ೧ ||

ಗೃಹೀತ್ವಾ ಗೋಮಯಂ ಭೂಮೇ ಮಮ ವೇಶ್ಮೋಪಲೇಪಯೇತ್ ।
ನ್ಯಸ್ತಾನಿ ತತ್ರ ಯಾವಂತಿ ಪದಾನಿ ಚ ವಿಲಿಂಪತಃ ।
ತಾವದ್ವರ್ಷಸಹಸ್ರಾಣಿ ದಿವ್ಯಾನಿ ದಿವಿ ಮೋದತೇ || ೨ ||

ನೂರ ಮೂವತ್ತೊಂಭತ್ತನೆಯ ಅಧ್ಯಾಯ

ಸೌಕರಕ್ಷೇತ್ರಮಹಿಮೆ

೧. ಶ್ರೀವರಾಹ—ನನ್ನ ದೇವಿ, ನನ್ನ ಆಲಯವನ್ನು ಸಾರಿಸುವವರಿಗೆ ಆಗುವ ಫಲವನ್ನೆಲ್ಲಾ ನಿಜವಾಗಿ ಹೇಳುತ್ತೇನೆ. ಕೇಳು.

೨. ಭೂಮೀ, ಹಸುವಿನ ಸಗಣಿಯಿಂದ ನನ್ನ ಆಲಯವನ್ನು ಸಾರಿಸಬೇಕು. ಸಾರಿಸುವವರು ಸಾರಿಸುವೆಡೆಯಲ್ಲಿ ಎಷ್ಟು ಹೆಜ್ಜೆಗಳನ್ನು ಇಡುವರೋ ಅಷ್ಟು ಸಾವಿರದಿವ್ಯವರ್ಷ ಸ್ವರ್ಗದಲ್ಲಿ ಸುಖಗಳನ್ನು ಅನುಭವಿಸುತ್ತಾ ಸಂತೋಷಿಸುವರು.

ಯದಿ ದ್ವಾದಶವರ್ಷಾಣಿ ಲಿಪ್ಯತೇ ಮಮ ಕರ್ಮಸು |
ಜಾಯತೇ ವಿಪುಲೇ ಶುದ್ಧೇ ಧನಧಾನ್ಯಸಮಾಕುಲೇ || ೩ ||

ದಿವ್ಯೈರ್ನಮಸ್ಕೃತೋ ದೇವಿ ಕುಶದ್ವೀಪಂ ಚ ಗಚ್ಛತಿ || ೪ ||

ಕುಶದ್ವೀಪಮನುಪ್ರಾಪ್ಯ ಸಹಸ್ರಾಣಿ ಚ ಜೀವತಿ |
ದಶ ಚೈವ ತು ವರ್ಷಾಣಾಂ ಮಮ ಭಕ್ತೋ ಮಹಾನ್ಮುಚಿಃ || ೫ ||

ಕುಶದ್ವೀಪಾತ್ಪರಿಭ್ರಷ್ಟೋ ಮಮ ಕರ್ಮಪರಾಯಣಃ |
ರಾಜಾ ವೈ ಜಾಯತೇ ಸುಭ್ರು ಸರ್ವಧರ್ಮೇಷು ನಿಶ್ಚಿತಃ || ೬ ||

ತೇನ ತಸ್ಯ ಪ್ರಭಾವೇಣ ಮಮ ಕರ್ಮಪರಾಯಣಃ |
ಭಕ್ತ್ಯಾ ವ್ಯವಸ್ಥಿತಶ್ಚಾಪಿ ಸರ್ವಶಾಸ್ತ್ರಾಣಿ ಪೃಚ್ಛತಿ || ೭ ||

ದೇವಿ ಕಾರಯತೇ ಸರ್ವಂ ಮಮ ಚಾಯತನಾನಿ ಚ |
ಕಾರಯಿತ್ವಾ ಯಥಾನ್ಯಾಯಂ ಮಮ ಲೋಕಂ ಸ ಗಚ್ಛತಿ || ೮ ||

---

೩. ದೇವಿ, ನನ್ನ ಪೂಜಾಕರ್ಮಗಳಲ್ಲಿ ಹನ್ನೆರಡುವರ್ಷಕಾಲ ಸಾರಿಸಿದವರು ಧನಧಾನ್ಯಸಮೃದ್ಧಿಯುಳ್ಳ ದೊಡ್ಡದಾದ ಶುದ್ಧ ವಂಶದಲ್ಲಿ ಹುಟ್ಟುವರು.

೪–೫. ಅಲ್ಲದೆ ದೇವತೆಗಳಿಂದಲೂ ನಮಸ್ಕೃತರಾಗಿ ಕುಶದ್ವೀಪವನ್ನು ಸೇರಿ, ನನ್ನ ಭಕ್ತರೂ, ಪರಿಶುದ್ಧರೂ, ಮಹಾತ್ಮರೂ ಆದ ಅವರು ಅಲ್ಲಿ ಹತ್ತು ಸಾವಿರ ವರ್ಷಗಳಕಾಲ ಜೀವಿಸುವರು.

೬–೭. ಸುಭ್ರು, ನನ್ನ ಕರ್ಮಗಳಲ್ಲಿ ನಿರತರಾದ ಅವರು, ಕುಶದ್ವೀಪ ವಾಸವು ತಪ್ಪಿದ ಬಳಿಕ, ಹಿಂದೆ ಸಾರಿಸಿದ ಆ ಮಹಿಮೆಯಿಂದಲೇ ಸರ್ವಧರ್ಮ ನಿಷ್ಠರಾದ ರಾಜರಾಗಿ ಜನಿಸುವರು. ಅವರು ನನ್ನ ಕರ್ಮನಿರತರಾಗಿ ಭಕ್ತಿಯುಳ್ಳವರಾಗಿದ್ದು ಸರ್ವಶಾಸ್ತ್ರಗಳನ್ನೂ ಕೇಳುವರು.

೮. ದೇವಿ, ವಿದ್ಯುಕ್ತವಾಗಿ ನನಗೆ ಆಲಯಗಳನ್ನೂ, ಬೇಕಾದ ಬೇರೆಲ್ಲವನ್ನೂ ಮಾಡಿ, ನನ್ನ ಲೋಕವನ್ನು ಸೇರುವರು.

ಗೋಮಯಸ್ಯ ತು ವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ॥ ೯ ॥

ಗೋಮಯಂ ತು ಸಮಾಸಾದ್ಯ ಯಾವಲ್ಲೋಕೋಽನುಗಚ್ಛತಿ ।
ಸಮೀಪೇ ಯದಿ ವಾ ದೂರೇ ಗತ್ವಾನಯತಿ ಗೋಮಯಂ ॥ ೧೦ ॥

ಯಾವಂತಿ ತತ್ಪದಾನ್ಯಸ್ಯ ತಾವದ್ವರ್ಷಸಹಸ್ರಕಂ ।
ಗೋಮಯಾನಾಂ ಚ ನೇತಾ ವೈ ಸ್ವರ್ಗಲೋಕೇ ಮಹೀಯತೇ ॥ ೧೧ ॥

ತತಸ್ಸ ಶಾಲ್ಮಲೇ ದ್ವೀಪೇ ರಮತೇ ಚ ಮುದಾ ಯುತಃ ।
ಏಕಾದಶಸಹಸ್ರಾಣಿ ಏಕಾದಶಶತಾನಿ ಚ ॥ ೧೨ ॥

ಶಾಲ್ಮಲಾತ್ತು ಪರಿಭ್ರಷ್ಟೋ ರಾಜಾ ಭವತಿ ಧಾರ್ಮಿಕಃ ।
ಮದ್ಭಕ್ತಶ್ಚೈವ ಜಾಯೇತ ಸರ್ವಧರ್ಮವಿದಾಂ ವರಃ ॥ ೧೩ ॥

ಅಥ ದ್ವಾದಶವರ್ಷಾಣಿ ಮಚ್ಛ್ರಿತಸ್ಸುದೃಢವ್ರತಃ ।
ವಹತೇ ಗೋಮಯಂ ಸುಭ್ರು ಮಮ ಲೋಕಂ ಸ ಗಚ್ಛತಿ ॥ ೧೪ ॥

೯–೧೧. ವಸುಂಧರೇ, ಗೋಮಯದ ವಿಚಾರವನ್ನು ಹೇಳುತ್ತೇನೆ. ಕೇಳು. ನನ್ನ ಆಲಯಕ್ಕೆ ಹತ್ತಿರದಲ್ಲೇ ಆಗಲಿ, ದೂರದಲ್ಲೇ ಆಗಲಿ, ಹೋಗಿ ಗೋಮಯವನ್ನು ಪಡೆದು ತರುವವರು ಅದಕ್ಕಾಗಿ ಎಷ್ಟು ಹೆಜ್ಜೆ ಅಥವಾ ಅಡಿಗಳನ್ನು ನಡೆದಿರುವರೋ ಅಷ್ಟು ಸಾವಿರವರ್ಷಕಾಲ ಸ್ವರ್ಗಲೋಕದಲ್ಲಿ ವಾಸಿಸುವರು.

೧೨. ಬಳಿಕ ಶಾಲ್ಮಲಿದ್ವೀಪದಲ್ಲಿ ಸಂತೋಷಯುತರಾಗಿ ಹನ್ನೆರಡು ಸಾವಿರದ ಒಂದುನೂರು ವರ್ಷಕಾಲ ವಿಹರಿಸುವರು.

೧೩. ಬಳಿಕ ಆ ದ್ವೀಪವನ್ನುಳಿದು, ಧಾರ್ಮಿಕರೂ, ನನ್ನ ಭಕ್ತರೂ, ಸರ್ವಧರ್ಮಜ್ಞರಲ್ಲಿ ಮೇಲಾದವರೂ ಆದ ರಾಜರಾಗಿ ಉದಿಸುವರು.

೧೪. ಸುಭ್ರು, ಹನ್ನೆರಡುವರ್ಷಕಾಲ ನನ್ನನ್ನು ಆಶ್ರಯಿಸಿ, ಅತಿ ದೃಢವಾದ ನಿಯಮವುಳ್ಳವರಾಗಿ ನನ್ನ ಆಲಯವನ್ನು ಸಾರಿಸಲು ಗೋಮಯವನ್ನು ತಂದು, ನನ್ನ ಲೋಕವನ್ನು ಸೇರುವರು.

ಸ್ನಾನೋಪಲೇಪನೇ ಧೂಪೇ ಸಲಿಲಂ ಯೋ ದದಾತಿ ಚ |
ತಸ್ಯ ಪುಣ್ಯಂ ಮಹಾಭಾಗೇ ಶೃಣು ತತ್ತ್ವೇನ ನಿಷ್ಕಲಂ ॥ ೧೫ ॥

ಯಾವಂತೋ ಬಿಂದವಸ್ತತ್ರ ಪಾನೀಯಸ್ಯ ವಸುಂಧರೇ |
ತಾವದ್ವರ್ಷಸಹಸ್ರಾಣಿ ಸ್ವರ್ಗಲೋಕೇ ಮಹೀಯತೇ ॥ ೧೬ ॥

ಸ್ವರ್ಗಲೋಕಾತ್ಪರಿಭ್ರಷ್ಟಃ ಕ್ರೌಂಚದ್ವೀಪಂ ಚ ಗಚ್ಛತಿ |
ಕ್ರೌಂಚದ್ವೀಪಾತ್ಪರಿಭ್ರಷ್ಟೋ ರಾಜಾ ಭವತಿ ಧಾರ್ಮಿಕಃ |
ತೇನೈವ ಗುಣಯೋಗೇನ ಶ್ವೇತದ್ವೀಪಂ ಚ ಗಚ್ಛತಿ ॥ ೧೭ ॥

ಸಂಮಾರ್ಜನಂ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ |
ಯಾಂ ಗತಿಂ ಪುರುಷಾ ಯಾಂತಿ ಸ್ತ್ರಿಯೋ ವಾ ಕರ್ಮಸುಸ್ಥಿತಾಃ ॥ ೧೮ ॥

---

೧೫. ಮಹಾಭಾಗ್ಯೇ, ಸೌಕರಕ್ಷೇತ್ರದಲ್ಲಿ ನನಗೆ ಅಭಿಷೇಕವನ್ನು ಮಾಡುವವರೂ, ಗಂಧವನ್ನು ಲೇಪಿಸುವವರೂ, ಧೂಪಹಾಕುವವರೂ, ನೀರನ್ನರ್ಪಿಸುವವರೂ ಯಾವ ಪುಣ್ಯವನ್ನು ಪಡೆಯುವರೆಂಬುದನ್ನು ನಿಜವಾಗಿ ಕಳಂಕವಿಲ್ಲದಂತೆ ಹೇಳುತ್ತೇನೆ ಕೇಳು.

೧೬. ವಸುಂಧರೇ, ಭಕ್ತರು ಅಭಿಷೇಕಾದಿಗಳಿಗೆ ಉಪಯೋಗಿಸುವ ನೀರಿನಲ್ಲಿ ಎಷ್ಟು ಬಿಂದುಗಳಿರುವುವೋ ಅಷ್ಟುಸಾವಿರವರ್ಷಕಾಲ ಅವರು ಸ್ವರ್ಗಲೋಕದಲ್ಲಿ ವಾಸಿಸುವರು.

೧೭. ಸ್ವರ್ಗಲೋಕವಾಸವು ಕಳೆದ ಬಳಿಕ ಕ್ರೌಂಚದ್ವೀಪವನ್ನು ಸೇರಿ, ಅಲ್ಲಿಯ ಕಾಲವೂ ಕಳೆದ ಬಳಿಕ ಧಾರ್ಮಿಕರಾದ ರಾಜರಾಗುವರು. ಆ ಕಾಲವೂ ಕಳೆದ ಬಳಿಕ ಹಿಂದಿನ ಪುಣ್ಯಯೋಗ (ಸಂಬಂಧ)ದಿಂದಲೇ ವೈಕುಂಠವನ್ನೂ ಸೇರುವರು.

೧೮. ವಸುಂಧರೇ, ನನ್ನ ಕ್ಷೇತ್ರವನ್ನು ಗುಡಿಸುವ ಗಂಡಸರಾಗಲಿ, ಹೆಂಗಸರಾಗಲಿ ಯಾವ ಗತಿಯನ್ನು ಪಡೆಯುವರೆಂಬುದನ್ನು ಹೇಳುತ್ತೇನೆ. ಅದನ್ನು ಕೇಳು.

ಶುಚಿರ್ಭಾಗವತಶ್ಶುದ್ಧೋ ಅಪರಾಧವಿವರ್ಜಿತಃ ॥ ೧೯ ॥

ಯಾವಂತಃ ಪಾಂಸವೋ ಭೂಮೇರುಡ್ಡೀಯಂತೇ ತು ಚಾಲಿತಾಃ ।
ತಾವದ್ವರ್ಷಶತಾನ್ಯಾಶು ಸ್ವರ್ಗಲೋಕೇ ಮಹೀಯತೇ ॥ ೨೦ ॥

ಸ್ವರ್ಗಲೋಕಾತ್ಪರಿಭ್ರಷ್ಟಶ್ಶಾಕದ್ವೀಪಂ ಸ ಗಚ್ಛತಿ ।
ತತ್ರ ಸ್ಥಿತ್ವಾ ಚಿರಂ ಕಾಲಂ ರಾಜಾ ಭವತಿ ಧಾರ್ಮಿಕಃ ॥ ೨೧ ॥

ತತೋ ಭುಕ್ತ್ವಾ ಸರ್ವಭೋಗಾನ್ ಸ್ಥಿತ್ವಾ ಸಂಸಾರಸಾಗರೇ ।
ಶ್ವೇತದ್ವೀಪಂ ತತೋ ಗಚ್ಛೇನ್ಮತ್ಕರ್ಮನಿರತಶ್ಶುಚಿಃ ॥ ೨೨ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ಶೃಣುಷ್ವ ಗದತೋ ಮಮ ।
ಗಾಯನಂ ಯೇ ಪ್ರಕುರ್ವಂತಿ ಮಮ ಕರ್ಮಪರಾಯಣಾಃ ।
ತೇಷಾಂ ಯದ್ಯತ್ಫಲಂ ಭೂಮೇ ಶೃಣುಷ್ವ ಗದತೋ ಮಮ ॥ ೨೩ ॥

೧೯-೨೦. ಪರಿಶುದ್ಧರೂ, ಭಗವದ್ಭಕ್ತರೂ ಆಗಿ, ಅಪರಾಧವು ಸಂಭವಿಸದಂತೆ ಗುಡಿಸುವವರು, ಅವರು ಗುಡಿಸುವಾಗ ಭೂಮಿಯಿಂದ ಚಲಿಸಿ, ಎಷ್ಟು ಧೂಳಿನ ಕಣಗಳು ಮೇಲಕ್ಕೆ ಹಾರುವುವೋ ಅಷ್ಟುನೂರುವರ್ಷಕಾಲ ಸ್ವರ್ಗಲೋಕದಲ್ಲಿ ವಾಸಿಸುವರು.

೨೧-೨೨. ಸ್ವರ್ಗಲೋಕವನ್ನು ಬಿಟ್ಟಮೇಲೆ ಶಾಕದ್ವೀಪಕ್ಕೆ ಹೋಗಿ, ಅಲ್ಲಿ ಬಹುಕಾಲವಿದ್ದು, ಅನಂತರ ಧಾರ್ಮಿಕರಾದ ರಾಜರಾಗಿ, ನನ್ನ ಕರ್ಮದಲ್ಲಿ ನಿರತರೂ, ಶುದ್ಧರೂ ಆಗಿ ಸಂಸಾರಸಾಗರದಲ್ಲಿ ಸರ್ವಸುಖಗಳನ್ನೂ ಅನುಭವಿಸಿ, ಬಳಿಕ ಶ್ವೇತದ್ವೀಪ (ವೈಕುಂಠ)ವನ್ನು ಸೇರುವರು.

೨೩-೨೪. ಭೂಮೀ, ನನ್ನ ಸೌಕರಕ್ಷೇತ್ರದಲ್ಲಿ ಹಾಡುವ ನನ್ನ ಕರ್ಮಾಸಕ್ತರು ಯಾವ ಯಾವ ಫಲವನ್ನು ಪಡೆಯುವರೆಂಬುದನ್ನೂ

ಗೀಯಮಾನಸ್ಯ ಗೀತಸ್ಯ ಯಾವದಕ್ಷರಸಂಗ್ರಹಃ |
ತಾವದ್ವರ್ಷಸಹಸ್ರಾಣಿ ಇಂದ್ರಲೋಕೇ ಮಹೀಯತೇ || ೨೪ ||

ರೂಪವಾನ್ಗುಣವಾನ್ಸಿದ್ಧಸ್ಸರ್ವವೇದವಿದಾಂ ವರಃ |
ನಿತ್ಯಂ ಪಶ್ಯತಿ ತತ್ರಸ್ಥೋ ದೇವರಾಜಂ ನ ಸಂಶಯಃ || ೨೫ ||

ಮದ್ಭಕ್ತಶ್ಚೈವ ಜಾಯೇತ ಇಂದ್ರಲೋಕಪಥೇ ಸ್ಥಿತಃ |
ಸರ್ವಕರ್ಮಗುಣಶ್ರೇಷ್ಠಸ್ತತ್ರಾಪಿ ಮಮ ಪೂಜಕಃ || ೨೬ ||

ನಂದನೋಪವನೇ ರಮ್ಯೇ ರಮನ್ದೇವಗಣೈಸ್ಸಹ |
ಇಂದ್ರಲೋಕಾತ್ಪರಿಭ್ರಷ್ಟೋ ಮಮ ಗೀತಪರಾಯಣಃ || ೨೭ ||

ತತಸ್ಸ ಭೂಮೌ ಜಾಯೇತ ವೈಷ್ಣವೈಸ್ಸಹ ಸಂಸ್ಥಿತಃ |
ಗಾಯನ್ಮಮ ಯಶೋ ನಿತ್ಯಂ ಭಕ್ತ್ಯಾ ಪರಮಯಾ ಯುತಃ || ೨೮ ||

ಹೇಳುತ್ತೇನೆ, ಕೇಳು. ಅವರು ಹಾಡುವ ಹಾಡಿನಲ್ಲಿ ಅಥವಾ ಕೀರ್ತನೆಯಲ್ಲಿ ಎಷ್ಟು ಪಾದ(ಪಂಗ್ತಿ)ಗಳಿರುವುವೋ ಅಷ್ಟುಸಾವಿರವರ್ಷ ಇಂದ್ರಲೋಕದಲ್ಲಿ ಅವರು ವಾಸಿಸುವರು.

೨೫. ಸುಂದರರೂ, ಸುಗುಣವಂತರೂ, ಸರ್ವವೇದಜ್ಞರಲ್ಲಿ ಉತ್ತಮರೂ, ಸಿದ್ಧರೂ ಆಗಿ ಅಲ್ಲಿದ್ದು, ದೇವೇಂದ್ರನನ್ನು ನಿತ್ಯವೂ ನೋಡುತ್ತಿರುವರು. ಸಂಶಯವಿಲ್ಲ.

೨೬. ಇಂದ್ರಲೋಕಮಾರ್ಗದಲ್ಲಿರುವಾಗಲೂ, ನನ್ನ ಭಕ್ತರೂ, ಪೂಜಕರೂ, ಸರ್ವಕರ್ಮಗಳಲ್ಲೂ, ಗುಣಗಳಲ್ಲೂ ಶ್ರೇಷ್ಠರೂ ಆಗಿರುವರು.

೨೭–೨೮. ಸ್ವರ್ಗಲೋಕದಲ್ಲಿ ಮನೋಹರವಾದ ನಂದನೋಪವನದಲ್ಲಿ ದೇವತೆಗಳ ಗುಂಪಿನೊಡನೆ ವಿಹರಿಸುತ್ತಿದ್ದು, ಬಳಿಕ ಅಲ್ಲಿಂದ ಹೊರಟ ನನ್ನ ಗಾನಾಸಕ್ತರು ಮತ್ತೆ ಭೂಮಿಯಲ್ಲಿ ಜನಿಸಿ, ವೈಷ್ಣವರೊಡನೆ ಇದ್ದು, ನನ್ನಲ್ಲಿ

ಮತ್ಪ್ರಸಾದಾತ್ಸ ಶುದ್ಧಾತ್ಮಾ ಮಮಲೋಕಂ ಹಿ ಗಚ್ಛತಿ ॥ ೨೯ ॥

॥ ಸೂತ ಉವಾಚ ॥

ತಸ್ಯ ತದ್ವಚನಂ ಶ್ರುತ್ವಾ ಮಾಧವಸ್ಯ ಯಶಸ್ವಿನೀ ।
ಕೃತಾಂಜಲಿಪುಟಾ ಭೂಯಃ ಪ್ರತ್ಯುವಾಚ ವಸುಂಧರಾ ॥ ೩೦ ॥

॥ ಧರಣ್ಯುವಾಚ ॥

ಅಹೋ ಗೀತಪ್ರಭಾವೋ ವೈ ಯಸ್ತ್ವಯಾ ಕೀರ್ತಿತೋ ಮಹಾನ್ ।
ಕೇ ಚ ಗೀತಪ್ರಭಾವೇಣ ಸಿದ್ಧಿಂ ಪ್ರಾಪ್ತಾ ಮಹೌಜಸಃ ॥ ೩೧ ॥

॥ ಶ್ರೀವರಾಹ ಉವಾಚ ॥

ತತ್ರೈವ ಚಾಶ್ರಮೇ ಭದ್ರೇ ಚಂಡಾಲಃ ಕೃತನಿಶ್ಚಯಃ ।
ದೂರಾಜ್ಜಾಗರಣೇ ಯಾತಿ ಮಮ ಭಕ್ತ್ಯಾ ವ್ಯವಸ್ಥಿತಃ ॥ ೩೨ ॥

ಪರಮಭಕ್ತಿಯುಳ್ಳವರಾಗಿ ನನ್ನ ಕೀರ್ತಿಯನ್ನು ನಿತ್ಯವೂ ಗಾನಮಾಡುತ್ತ ಶುದ್ಧಾತ್ಮರಾಗಿ ನನ್ನ ಅನುಗ್ರಹದಿಂದ ನನ್ನ ಲೋಕವನ್ನು ಸೇರುವರು.

೩೦. ಸೂತಮುನಿ—ಕೀರ್ತಿವಂತೆಯಾದ ಭೂದೇವಿಯು ಆ ಮಾಧವನ ಆ ಮಾತನ್ನು ಕೇಳಿ, ಕೈಮುಗಿದುಕೊಂಡು, ತಿರುಗಿಯೂ ಅವನಿಗೆ ಹೇಳಿದಳು.

೩೧. ಭೂದೇವಿ—ಭಾಪು ! ನೀನು ಹೇಳಿದ, ಗಾನದ ಮಹಿಮೆಯು ಅತಿಶಯವಾಗಿದೆ. ಹೀಗೆ ಗೀತದ ಪ್ರಭಾವದಿಂದ ಸಿದ್ಧಿಯನ್ನು ಪಡೆದ ಮಹಿಮರು ಯಾರು ?

೩೨. ಶ್ರೀವರಾಹ—ಭದ್ರೇ, ನನ್ನ ಭಕ್ತಿಯಲ್ಲಿ ನಿರತನಾದ ಹೊಲೆಯನೊಬ್ಬನು ನನ್ನ ಸೌಕರಕ್ಷೇತ್ರದಲ್ಲಿ ಜಾಗರಣೆಮಾಡಬೇಕೆಂದು ಉದ್ದೇಶಮಾಡಿಕೊಂಡು, ದೂರದಿಂದ ಅಲ್ಲಿಗೆ ನಿತ್ಯವೂ ಬರುತ್ತಿದ್ದನು.

ಗಾಯಮಾನಶ್ಚ ಗೀತಾನಿ ಸಂವತ್ಸರಗಣಾನ್ಬಹೂನ್ ।
ಶ್ವಪಾಕಃ ಸ ಗುಣಜ್ಞಶ್ಚ ಮದ್ಭಕ್ತಶ್ಚೈವ ಸುಂದರಿ ॥ ೩೩ ॥

ಕೌಮುದಸ್ಯ ತು ಮಾಸಸ್ಯ ದ್ವಾದಶ್ಯಾಂ ಶುಕ್ಲಪಕ್ಷಕೇ ।
ಸುಪ್ತೇ ಗತೇ ಜನೇ ಜಾತೇ ವೀಣಾಮಾದಾಯ ಚಂಕ್ರಮತ್ ॥ ೩೪ ॥

ಜಾಗ್ರಂಸ್ತತ್ರ ಚ ಚಂಡಾಲೋ ಗೃಹೀತೋ ಬ್ರಹ್ಮರಕ್ಷಸಾ ।
ಅಲ್ಪಪ್ರಾಣಃ ಶ್ವಪಾಕೋ ವೈ ಬಲವಾನ್ಬ್ರಹ್ಮರಾಕ್ಷಸಃ ॥ ೩೫ ॥

ದುಃಖಶೋಕೇನ ಸಂತಪ್ತೋ ನ ಶಕ್ನೋತಿ ವಿಚೇಷ್ಟಿತುಂ ।
ತೇನ ಪ್ರೋಕ್ತಃ ಶ್ವಪಾಕೇನ ಬಲವಾನ್ಬ್ರಹ್ಮರಾಕ್ಷಸಃ ॥ ೩೬ ॥

ಕಿಂ ತ್ವಯಾ ಚೇಷ್ಟಿತಂ ಮಹ್ಯಂ ಯಸ್ತ್ವೇವಂ ಪರಿಧಾವಸಿ ॥ ೩೭ ॥

ಶ್ವಪಾಕವಚನಂ ಶ್ರುತ್ವಾ ತತ್ತು ವೈ ಬ್ರಹ್ಮರಾಕ್ಷಸಃ ।
ತತಃ ಪ್ರೋವಾಚ ತಂ ಶ್ವಾದಂ ಮಾನುಷಾಹಾರಲೋಲುಪಃ ॥ ೩೮ ॥

---

೩೩. ಸುಂದರಿ, ಗುಣಜ್ಞನೂ, ನನ್ನ ಭಕ್ತನೂ ಆದ ಅವನು ಹಲವುವರ್ಷಕಾಲ ನನ್ನ ಕ್ಷೇತ್ರದಲ್ಲಿ ಗೀತಗಳನ್ನು ಹಾಡುತ್ತಿದ್ದನು.

೩೪–೩೫. ಹೀಗಿರಲು, ಒಂದು ಕಾರ್ತಿಕಮಾಸದ ಶುಕ್ಲಪಕ್ಷದ್ವಾದಶಿಯದಿನ ರಾತ್ರಿ ಜನರೆಲ್ಲರೂ ಮಲಗಿದ ಬಳಿಕ, ಎಚ್ಚರದಿಂದಿದ್ದ ಆತನು ವೀಣೆಯನ್ನು ತೆಗೆದುಕೊಂಡು, ಸೌಕರಕ್ಷೇತ್ರಕ್ಕೆ ಹೋಗುತ್ತಿರುವಾಗ ಒಬ್ಬ ಬ್ರಹ್ಮರಾಕ್ಷಸನು ಅವನನ್ನು ಹಿಡಿದುಕೊಂಡನು. ಆ ಹೊಲೆಯನು ಅಶಕ್ತ. ರಾಕ್ಷಸನಾದರೋ ಬಲಶಾಲಿ.

೩೬–೩೭. ಹಿಡಿತಕ್ಕೆ ಸಿಕ್ಕಿ ದುಃಖದಿಂದ ಸಂತಾಪಗೊಂಡು, ಮಿಸುಕಲಾರದ ಆ ಹೊಲೆಯನು ಆ ಬ್ರಹ್ಮರಾಕ್ಷಸನಿಗೆ, 'ಹೀಗೆ ಓಡುತ್ತ ಇದೇಕೆ ನನ್ನನ್ನು ನೀನು ಹಿಡಿದುಕೊಂಡೆ?' ಎಂದನು.

೩೮–೪೦. ಅವನ ಮಾತನ್ನು ಕೇಳಿ, ಮನುಷ್ಯರನ್ನು ತಿನ್ನುವುದರಲ್ಲಿ ಅತ್ಯಾಸಕ್ತಿಯುಳ್ಳ ಬ್ರಹ್ಮರಾಕ್ಷಸನು ಅವನನ್ನು ಕುರಿತು, "ಹತ್ತುದಿನಗಳಿಂದಲೂ

ಅಥೇಹ ದಶರಾತ್ರಂ ಮೇ ನಿರಾಹಾರಸ್ಯ ತಿಷ್ಠತಃ ।
ವಿಧಾತ್ರಾ ವಿಹಿತಸ್ತ್ವಂ ಚ ಆಹಾರಃ ಪಾರಣಾವಿಧೌ ॥ ೩೯ ॥

ಅದ್ಯ ತ್ವಾಂ ಭಕ್ಷಯಿಷ್ಯಾಮಿ ಸವಸಾಮಾಂಸಶೋಣಿತೈಃ ।
ತೃಪ್ತಿಂ ಯಾಸ್ಯಾಮಿ ಪರಮಾಂ ವಿಧಾತ್ರಾ ವಿಹಿತಾಂ ಮಮ ॥ ೪೦ ॥

ಬ್ರಹ್ಮರಕ್ಷೋವಚಃ ಶ್ರುತ್ವಾ ಶ್ವಪಾಕೋ ಗೀತಲಾಲಸಃ ।
ರಾಕ್ಷಸಂ ಛಂದಯಾಮಾಸ ಮಮ ಭಕ್ತ್ಯಾ ವ್ಯವಸ್ಥಿತಃ ॥ ೪೧ ॥

ಏವಮೇತನ್ಮಹಾಭಾಗ ಭಕ್ಷ್ಯೋಽಹಂ ಸಮುಪಾಗತಃ ।
ಅವಶ್ಯಮೇವ ಕರ್ತವ್ಯಂ ಧಾತ್ರಾ ದತ್ತಂ ಯಥಾ ತವ ॥ ೪೨ ॥

ಕಿಂ ತ್ವಹಂ ದೇವದೇವಸ್ಯ ಭಕ್ತ್ಯಾ ಗಾತುಂ ಚ ಜಾಗರೇ ।
ಉದ್ಯತಸ್ತತ್ರ ಗತ್ವಾಹಮುಪಾಸ್ಯ ವಿಧಿನಾ ಹರಿಂ ।
ಪಶ್ಚಾತ್ತ್ವಾದಸ್ವ ಮಾಂ ರಕ್ಷೋ ಜಾಗರಾದ್ವಿನಿವರ್ತಿತಂ ॥ ೪೩ ॥

ಆಹಾರವಿಲ್ಲದೆ ಇರುವ ನನಗೆ ಪಾರಣೆಗಾಗಿ ಬ್ರಹ್ಮನು ನಿನ್ನನ್ನು ಒದಗಿಸಿರುವನು ವಸಾಮಾಂಸರಕ್ತಗಳೊಡನೆ ಈಗ ನಿನ್ನನ್ನು ತಿಂದು, ನನಗೆ ಬ್ರಹ್ಮನು ಒದಗಿಸಿರುವ ಪರಮತೃಪ್ತಿಯನ್ನು ಪಡೆಯುವೆನು" ಎಂದು ಹೇಳಿದನು.

೪೧. ನನ್ನ ಭಕ್ತಿಯಲ್ಲಿ ನೆಲೆಯುಳ್ಳವನೂ, ಗಾನದಲ್ಲಿ ಅತಿಯಾದ ಆಸೆಯುಳ್ಳವನೂ ಆದ ಆ ಹೊಲೆಯನು, ಬ್ರಹ್ಮರಾಕ್ಷಸನು ಹೇಳಿದುದನ್ನು ಕೇಳಿ, ಮುಂದಿನ ಮಾತುಗಳಿಂದ ಕೇಳಿಕೊಂಡನು.

೪೨. "ಮಹಾಭಾಗ್ಯನೇ, ನಾನು ನಿನಗೆ ಆಹಾರವಾಗಿ ಬಂದೆನೆಂಬುದೇನೋ ಸರಿ, ಬ್ರಹ್ಮನು ನಿಯಮಿಸಿ ಕೊಟ್ಟಿರುವುದನ್ನು ಅವಶ್ಯವಾಗಿ ಮಾಡಲೇಬೇಕು.

೪೩–೪೪. ಆದರೆ ನಾನು ದೇವ ದೇವನ ಭಕ್ತಿಯಿಂದ ಜಾಗರಣೆಯಲ್ಲಿ ಹಾಡುವುದಕ್ಕೆ ಉದ್ದೇಶಿಸಿದ್ದೇನೆ. ರಾಕ್ಷಸನೇ, ವಿಷ್ಣುವಿನ ಸಂತೋಷಕ್ಕಾಗಿ

ವಿಷ್ಣೋಸ್ಸಂತೋಷಣಾರ್ಥಾಯ ಯತೋ ಮೇ ವ್ರತಮಾಸ್ಥಿತಂ |
ಜಾಗರೇ ವಿನಿವೃತ್ತೇ ಮಾಂ ಭಕ್ಷಯ ತ್ವಂ ಯದೀಚ್ಛಸಿ ॥ ೪೪ ॥

ಶ್ವಪಾಕಸ್ಯ ವಚಃ ಶ್ರುತ್ವಾ ಬ್ರಹ್ಮರಕ್ಷಃ ಕ್ಷುಧಾರ್ದಿತಃ |
ಉವಾಚ ಪರುಷಂ ವಾಕ್ಯಂ ಶ್ವಪಾಕಂ ತದನಂತರಂ ॥ ೪೫ ॥

ಮಿಥ್ಯಾ ಕಿಂ ಭಾಷಸೇ ಮೂಢ ಪುನರೇಷ್ಯಾಮಿ ತೇಂತಿಕಂ |
ಮೃತ್ಯೋರ್ಮುಖಮನುಪ್ರಾಪ್ಯ ಪುನರ್ಜೀವತಿ ಮಾನವಃ ॥ ೪೬ ॥

ರಕ್ಷಸೋ ಮುಖವಿಭ್ರಷ್ಟಃ ಪುನರಾಗಂತುಮಿಚ್ಛಸಿ ॥ ೪೭ ॥

ರಾಕ್ಷಸಸ್ಯ ವಚಃ ಶ್ರುತ್ವಾ ಚಂಡಾಲಸ್ತಮಥಾಬ್ರವೀತ್ |
ಯದ್ಯಪ್ಯಹಂ ಹಿ ಚಂಡಾಲಃ ಪೂರ್ವಕರ್ಮವಿದೂಷಿತಃ ॥ ೪೮ ॥

ಸಂಪ್ರಾಪ್ತೋ ಮಾನುಷಂ ಭಾವಂ ವಿಹಿತೇನಾಂತರಾತ್ಮನಾ |
ಶೃಣು ಮತ್ಸಮಯಂ ರಕ್ಷೋ ಯೇನಾಹಂ ಪುನರಾಗಮಂ ॥ ೪೯ ॥

ನಾನು ವ್ರತವನ್ನು ಹಿಡಿದಿರುವುದರಿಂದ ಸೌಕರಕ್ಷೇತ್ರಕ್ಕೆ ಹೋಗಿ, ಜಾಗರಣೆಯನ್ನು ಮಾಡಿ, ಅಲ್ಲಿಂದ ಹಿಂದಿರುಗಿ ಬಂದಬಳಿಕ ಬೇಕಾದರೆ ನನ್ನನ್ನು ತಿನ್ನು"

೪೫–೪೭. ಹೊಲೆಯನ ಈ ಮಾತನ್ನು ಕೇಳಿ, ಹಸಿವಿನಿಂದ ಪೀಡಿತನಾದ ಆ ರಾಕ್ಷಸನು, ಅವನಿಗೆ ಕಠಿಣವಾದ ಮಾತಿನಿಂದ, "ಮೂಢನೇ, 'ಮತ್ತೆ ನಿನ್ನ ಹತ್ತಿರಕ್ಕೆ ಬರುತ್ತೇನೆ' ಎಂದು ಏತಕ್ಕೆ ಸುಳ್ಳು ಹೇಳುತ್ತೀಯೆ ? ! ಯಮನ ಅಥವಾ ಮೃತ್ಯುದೇವತೆಯ ಬಾಯಿಗೆ ಬಿದ್ದ ಮನುಷ್ಯನು ತಿರುಗಿ ಜೀವಿಸಲು ಬಯಸುವಂತೆ ರಾಕ್ಷಸನಾದ ನನ್ನ ಬಾಯಿಂದ ನುಣುಚಿಕೊಂಡು ಹಿಂದಕ್ಕೆ ಬರಲು ಬಯಸುತ್ತೀಯೆ" ಎಂದನು.

೪೮–೫೦. ರಾಕ್ಷಸನ ಆ ಮಾತನ್ನು ಕೇಳಿ, ಆ ಹೊಲೆಯನು ಮತ್ತೆ ಅವನಿಗೆ, " ರಾಕ್ಷಸನೇ, ನಾನೇನೋ ಪೂರ್ವಕರ್ಮದೋಷದಿಂದ ಹೊಲೆಯನಾಗಿ ಹುಟ್ಟಿದ್ದೇನೆ. ಆದರೂ ಪರಿಶುದ್ಧವಾದ ಮನಸ್ಸಿನಿಂದ ನಾನು ಹೇಳುವ ಪ್ರತಿಜ್ಞೆಯನ್ನು ಕೇಳು. ಬ್ರಹ್ಮರಾಕ್ಷಸನೇ, ನಾನು ಯಾವುದಕ್ಕಾಗಿ ದೂರದಿಂದ

ದೂರಾಜ್ಞಾಗರಣಂ ಕೃತ್ವಾ ಲೋಕಸ್ಯ ದ್ವಿಜರಾಕ್ಷಸ ।
ಸತ್ಯೇನ ಪುನರೇಷ್ಯಾಮಿ ಮನ್ಯಸೇ ಯದಿ ಮುಂಚ ಮಾಂ ॥ ೫೦ ॥

ಸತ್ಯಮೂಲಂ ಜಗತ್ಸರ್ವಂ ಲೋಕಾಸ್ಸತ್ಯೇ ಪ್ರತಿಷ್ಠಿತಾಃ ।
ಸತ್ಯೇನೆ ಸಿದ್ಧಿಂ ಪ್ರಾಪ್ತಾ ಹಿ ಋಷಯೋ ಬ್ರಹ್ಮವಾದಿನಃ ॥ ೫೧ ॥

ಸತ್ಯೇನ ದೀಯತೇ ಕನ್ಯಾ ಸತ್ಯಂ ಜಲ್ಪಂತಿ ಬ್ರಾಹ್ಮಣಾಃ।
ಸತ್ಯಂ ಜಯಂತಿ ರಾಜಾನಸ್ತ್ರೀಣ್ಯೇತಾನ್ಯಬ್ರುವನ್ನೃತಂ ॥ ೫೨ ॥

ಸತ್ಯೇನ ಗಮ್ಯತೇ ಸ್ವರ್ಗೋ ಮೋಕ್ಷಸ್ಸತ್ಯೇನ ಚಾಪ್ಯತೇ ।
ಸತ್ಯೇನ ತಪತೇ ಸೂರ್ಯಸ್ಸೋಮಸ್ಸತ್ಯೇನ ರಾಜತೇ ॥ ೫೩ ॥

ಷಷ್ಠ್ಯಷ್ಟಮೀಮಮಾವಾಸ್ಯಾಮುಭೇ ಪಕ್ಷೇ ಚತುರ್ದಶೀಂ ।
ಅಸ್ನಾತಾನಾಂ ಗತಿಂ ಯಾಸ್ಯೇ ಯದ್ಯಹಂ ನಾಗಮೇ ಪುನಃ ॥ ೫೪ ॥

ಬಂದಿರುವೆನೋ ಆ ಜಾಗರಣೆಯನ್ನು ಮಾಡಿ, ಲೋಕದ ಸತ್ಯವಾಗಿಯೂ ಹಿಂದಿರುಗಿ ಇಲ್ಲಿ ಬರುವೆನು. ಮನಸ್ಸಾದರೆ ನನ್ನನ್ನು ಬಿಡು.

೫೧. ಜಗತ್ತೆಲ್ಲವೂ ಸತ್ಯಮೂಲವಾದುದು. ಲೋಕಗಳು ಸತ್ಯದಲ್ಲಿ ನೆಲಸಿವೆ. ಬ್ರಹ್ಮವಾದಿಗಳಾದ ಋಷಿಗಳು ಸತ್ಯದಿಂದಲೇ ಸಿದ್ಧಿಯನ್ನು ಪಡೆದರಲ್ಲವೆ !

೫೨. ಸತ್ಯದಿಂದಲೇ ಕನ್ಯಾದಾನವನ್ನು ಮಾಡುವರು. ಬ್ರಾಹ್ಮಣರು ಸತ್ಯವನ್ನು ನುಡಿಯುವರು. ರಾಜರು ಸತ್ಯದಿಂದ ಜಯಿಸುವರು. ಈ ಮೂವರೂ ಸತ್ಯವನ್ನು ಹೇಳುವರು.

೫೩. ಸತ್ಯದಿಂದಲೇ ಸ್ವರ್ಗವೂ, ಮೋಕ್ಷವೂ ಲಭಿಸುವುದು. ಸತ್ಯದಿಂದಲೇ ಸೂರ್ಯನು ಉಷ್ಣವುಳ್ಳವನಾಗಿರುವನು. ಸತ್ಯದಿಂದಲೇ ಚಂದ್ರನು ಹೊಳೆಯುವನು.

೫೪. ನಾನು ದೇವನಸೇವೆಗೆ ಹೋಗಿ, ಮತ್ತೆ ನಿನ್ನ ಬಳಿಗೆ ಬಾರದಿದ್ದರೆ ಷಷ್ಠಿ, ಅಷ್ಟಮಿ, ಅಮಾವಾಸ್ಯೆಗಳಲ್ಲೂ, ಎರಡುಪಕ್ಷದ ಚತುರ್ದಶಿಯಲ್ಲೂ ಸ್ನಾನ ಮಾಡದಿರುವವರು ಪಡೆಯುವ ದುರ್ಗತಿಯನ್ನು ಪಡೆಯುವೆನು.

ಗುರುಪತ್ನಿಂ ರಾಜಪತ್ನೀಂ ಯೋಽಭಿಗಚ್ಛತಿ ಮೋಹಿತಃ ।
ತಾಂ ಗತಿಂ ಸಂಪ್ರಪದ್ಯೇಽಹಂ ಯದ್ಯಹಂ ನಾಗಮೇ ಪುನಃ ॥ ೫೫ ॥

ಯಾಜಕಾನಾಂ ಚ ಯೇ ಲೋಕಾ ಯೇ ಚ ಮಿಥ್ಯಾಭಿಭಾಷಿಣಾಂ ।
ತಾಂ ಗತಿಂ ಸಂಪ್ರಪದ್ಯೇಽಹಂ ಯದ್ಯಹಂ ನಾಗಮೇ ಪುನಃ । ॥ ೫೬ ॥

ಬ್ರಹ್ಮಘ್ನೇ ಚ ಸುರಾಪೇ ವಾ ಸ್ತೇನೇ ಭಗ್ನವ್ರತೇ ತಥಾ ।
ತೇಷಾಂ ಗತಿಂ ಪ್ರಪದ್ಯೇಽಹಂ ಯದ್ಯಹಂ ನಾಗಮೇ ಪುನಃ ॥ ೫೭ ॥

ಶ್ವಪಾಕವಚನಂ ಶ್ರುತ್ವಾ ತುಷ್ಟೋ ಬ್ರಾಹ್ಮಣರಾಕ್ಷಸಃ ।
ಉವಾಚ ಮಧುರಂ ವಾಕ್ಯಂ ಗಚ್ಛ ಶೀಘ್ರಂ ನಮೋಽಸ್ತು ತೇ ॥ ೫೮ ॥

ಬ್ರಹ್ಮರಾಕ್ಷಸಮುಕ್ತ್ವೈವ ತತ್ರ ಶ್ವಪಾಕಃ ಕೃತನಿಶ್ಚಯಃ ।
ಪುನರ್ಗಾಯತಿ ಮಹ್ಯಂ ವೈ ಮಮ ಭಕ್ತ್ಯಾ ವ್ಯವಸ್ಥಿತಃ ॥ ೫೯ ॥

---

೫೫. ನಾನು ಮತ್ತೆ ನಿನ್ನಲ್ಲಿ ಬಾರದಿದ್ದಲ್ಲಿ, ಮೋಹಿತನಾಗಿ ಗುರುಪತ್ನಿಯನ್ನೂ, ರಾಜಪತ್ನಿಯನ್ನೂ ಗಮಿಸುವವನು ಪಡೆಯುವ ದುರ್ಗತಿಯನ್ನು ಪಡೆಯುವೆನು.

೫೬. ನಾನು ತಿರುಗಿ ಬಾರದಿದ್ದಲ್ಲಿ ಯಾಜಕರಿಗೂ, ಸುಳ್ಳು ಹೇಳುವವರಿಗೂ ದೊರೆಯುವ ಹೀನಲೋಕಗಳೇ ನನಗೂ ದೊರೆಯಲಿ.

೫೭. ನಾನು ಪುನಃ ಇಲ್ಲಿಗೆ ಬಾರದೆ ಇದ್ದೆನಾದರೆ ಬ್ರಹ್ಮಹತ್ಯೆಮಾಡಿದವನಿಗೂ, ಮದ್ಯಪಾನಮಾಡುವವನಿಗೂ, ಕಳ್ಳನಿಗೂ. ವ್ರತಭ್ರಷ್ಟನಿಗೂ ಆಗುವ ಗತಿಯು ನನಗಾಗಲಿ" ಎಂದನು.

೫೮. ನಾಯುಣಿಯ ಈ ಮಾತನ್ನು ಕೇಳಿ, ಸಂತೋಷಗೊಂಡ ಬ್ರಹ್ಮರಾಕ್ಷಸನು, "ಬೇಗನೆ ಹೋಗು. ನಿನಗೆ ನಮಸ್ಕಾರ" ಎಂದು ಹಿತವಾಗಿ ನುಡಿದನು.

೫೯–೬೦. ನನ್ನ ಭಕ್ತಿಯಲ್ಲಿ ನೆಲೆಸಿದ ಆ ಅಂತ್ಯಜನು, ದೃಢವಾಡಿ, ಬ್ರಹ್ಮರಾಕ್ಷಸನಿಗೆ ಹೇಳಿ, ನನ್ನ ಕ್ಷೇತ್ರಕ್ಕೆ ಒಂದು ಮತ್ತೆ ನನಗಾಗಿ ಹಾಡಿದನು.

ಅಥ ಪ್ರಭಾತೇ ವಿಮಲೇ ಗೀತೇ ನೃತ್ಯೇ ಚ ಜಾಗರೇ ।
ನಮೋನಾರಾಯಣಾಯೇತಿ ಶ್ವಪಾಕಃ ಪರಿವರ್ತತೇ ॥ ೬೦ ॥

ತತಸ್ತ್ವರಿತಮಾಗತ್ಯ ಪುಮಾಂಸ್ತಸ್ಯಾಗ್ರತಃ ಸ್ಥಿತಃ ।
ಉವಾಚ ಮಧುರಂ ವಾಕ್ಯಂ ಚಾಂಡಾಲಂ ಕೃತನಿಶ್ಚಯಂ ॥ ೬೧ ॥

ಕ್ವ ಯಾಸಿ ತ್ವರಿತಸ್ಸಾಧೋ ನ ಚ ತ್ವಂ ಗಂತುಮರ್ಹಸಿ ।
ಜಾನನ್ ಕ್ಷಣಪಪಂ ತಂ ಚ ನ ತ್ವಂ ಮರ್ತುಮಿಹಾರ್ಹಸಿ ॥ ೬೨ ॥

ಪುರುಷಸ್ಯ ವಚಃ ಶ್ರುತ್ವಾ ಚಾಂಡಾಲಃ ಪುನರಬ್ರವೀತ್ ।
ಸಮಯೋ ಮೇಕೃತಃ ಪೂರ್ವಂ ರಾಕ್ಷಸೇನ ಹಿ ಭಕ್ಷತಾ ।
ತೇನ ತತ್ರ ಗಮಿಷ್ಯಾಮಿ ಸತ್ಯಂ ಚ ಪರಿಪಾಲಯನ್ ॥ ೬೩ ॥

ತತಸ್ಸ ಪದ್ಮಪತ್ರಾಕ್ಷಃ ಶ್ವಪಾಕಂ ಪ್ರತ್ಯುವಾಚ ಹ ।
ಮಧುರಂ ಗಿರಮಾದಾಯ ವಿಹಿತೇನಾಂತರಾತ್ಮನಾ ॥ ೬೪ ॥

ಹಾಗೆ ಗೀತನೃತ್ಯಗಳಿಂದ ಜಾಗರಣೆಯಲ್ಲಿ ರಾತ್ರಿಯು ಕಳೆದು ಬೆಳಗಾಗಲು ಆ ಪಂಚಮನು 'ನಮೋ ನಾರಾಯಣಾಯ(ನಾರಾಯಣನಿಗೆ ನಮಸ್ಕಾರ)' ಎಂದು ಹೇಳಿ, ಕ್ಷೇತ್ರದಿಂದ ಹಿಂದಿರುಗಿದನು.

೬೧–೬೨. ಅಷ್ಟರಲ್ಲಿಯೇ ಒಬ್ಬ ಮನುಷ್ಯನು ಬೇಗನೆ ಬಂದು, ಅವನೆದುರೆಗೆ ನಿಂದು, ರಾಕ್ಷಸನೆಡೆಗೆ ಹೋಗಲು ನಿಶ್ಚಯಿಸಿದ್ದ ಅವನಿಗೆ ಇಂಪಾದ ಮಾತಿನಿಂದ, "ಸಾಧು, ತ್ವರೆಯಿಂದ ಎಲ್ಲಿಗೆ ಹೋಗುತ್ತೀಯೆ ? ನೀನು ಹೋಗಬಾರದು. ಅವನನ್ನು ರಾಕ್ಷಸರಾಜನೆಂದೆಣಿಸಿ ಅವನಿಗಾಗಿ ಸಾಯಬೇಡ" ಎಂದನು.

೬೩. ಆ ಮನುಷ್ಯನ ಮಾತನ್ನು ಕೇಳಿ, ಪಂಚಮನು, "ನನ್ನನ್ನು ತಿನ್ನುತ್ತಿದ್ದ ರಾಕ್ಷಸನಲ್ಲಿ ನಾನು ಹಿಂದೆ ಪ್ರತಿಜ್ಞೆಮಾಡಿದ್ದೇನೆ. ಆದುವರಿಂದ ಸತ್ಯವನ್ನು ಪರಿಪಾಲಿಸುವುದಕ್ಕಾಗಿ ಅವನೆಡೆಗೆ ಹೋಗುವೆನು" ಎಂದನು.

೬೪–೬೫. ಬಳಿಕ ಕಮಲದಳನೇತ್ರನಾದ ಆ ಪುರುಷನು ಇಂಪಾದ ದನಿಯಿಂದಲೂ, ಪರಿಶುದ್ಧಮನಸ್ಸಿನಿಂದಲೂ, "ಪಂಚಮನೇ, ಆ ಪಾಪಿಯಾದ

ಮಾ ಗಚ್ಛ ತತ್ರ ಚಾಂಡಾಲ ಯತ್ರಾಸೌ ಪಾಪರಾಕ್ಷಸಃ ।
ಜೀವಿತಾರ್ಥಾಯ ಸತ್ಯಸ್ಯ ನ ದೋಷಃ ಪರಿಹಾಪನಾತ್ ॥ ೬೫ ॥

ತತಸ್ತಸ್ಯ ವಚಃ ಶ್ರುತ್ವಾ ಶ್ವಪಾಕಸ್ಸಂಶಿತವ್ರತಃ ।
ಉವಾಚ ಮಧುರಂ ವಾಕ್ಯಂ ಮರಣೇ ಕೃತನಿಶ್ಚಯಃ ॥ ೬೬ ॥

ನಾಹಮೇವಂ ಕರಿಷ್ಯಾಮಿ ಯನ್ಮಾಂ ತ್ವಂ ಪರಿಭಾಷಸೇ ।
ನ ಚಾಹಂ ನಾಶಯೇ ಸತ್ಯಮೇತನ್ಮೇ ನಿಶ್ಚಿತಂ ವ್ರತಂ ॥ ೬೭ ॥

ಸತ್ಯಮೂಲಂ ಜಗತ್ಸರ್ವಂ ಕುಲಂ ಸತ್ಯೇ ಪ್ರತಿಷ್ಠಿತಂ ।
ಸತ್ಯಮೇವ ಪರೋ ಧರ್ಮ ಆತ್ಮಾ ಸತ್ಯೇ ಪ್ರತಿಷ್ಠಿತಃ ॥ ೬೮ ॥

ನ ಚೈವಾಹಂ ತದುತ್ಸೃಜ್ಯ ಅಸತ್ಯಸ್ಸ್ಯಾಂ ಕದಾಚನ ।
ನಾಹಂ ಮಿಥ್ಯಾ ಚರಿಷ್ಯಾಮಿ ಗಚ್ಛ ತಾತ ನಮೋಽಸ್ತು ತೇ ॥ ೬೯ ॥

ರಾಕ್ಷಸನಿರುವೆಡೆಗೆ ಹೋಗಬೇಡ ಪ್ರಾಣರಕ್ಷಣೆಗಾಗಿ ಸತ್ಯಕ್ಕೆ ತಪ್ಪುವುದು ದೋಷವಲ್ಲ" ಎಂದು ಬದಲು ಹೇಳಿದನು.

೬೬. ಅವನ ಮಾತನ್ನು ಕೇಳಿ, ಉಗ್ರವ್ರತಿಯೂ, ರಾಕ್ಷಸನಿಗಾಗಿ ಸಾಯುವುದಕ್ಕೆ ನಿಶ್ಚಯಮಾಡಿರುವವನೂ ಆದ ಆ ಪಂಚವನು ಹಿತವಾದ ಮುಂದಿನ ಮಾತನ್ನು ಆಡಿದನು.—

೬೭. "ನೀನು ಹೇಳುವಂತೆ ನಾನು ಮಾಡೆನು. ನಾನು ಸತ್ಯಕ್ಕೆ ಲೋಪಮಾಡಲಾರೆನು. ಇದು ನನ್ನ ನಿಜವಾದ ವ್ರತ

೬೮. ಲೋಕವೆಲ್ಲವೂ ಸತ್ಯಮೂಲವಾದುದು. ಕುಲವು ಸತ್ಯದಲ್ಲಿ ನಿಂತಿದೆ. ಸತ್ಯವೇ ಅತ್ಯುತ್ತಮವಾದ ಧರ್ಮ. ಆತ್ಮನು ಸತ್ಯದಲ್ಲಿ ನೆಲಸಿರುವನು.

೬೯. ಅಂತಹ ಸತ್ಯವನ್ನು ಬಿಟ್ಟು ನಾನು ಎಂದಿಗೂ ಅಸತ್ಯವಂತನಾಗಲಾರೆನು. ನಾನು ಸುಳ್ಳನ್ನು ಅನುಸರಿಸಲಾರೆನು. ಅಪ್ಪಾ, ಹೊರಡು. ನಿನಗೆ ನಮಸ್ಕಾರ."

ಏವಮುಕ್ತ್ವಾ ಶ್ವಪಾಕೋಽಪಿ ನಿತ್ಯಂ ಸತ್ಯವ್ರತೇ ಸ್ಥಿತಃ ।
ರಾಕ್ಷಸಂ ಸಮನುಪ್ರಾಪ್ತಸ್ತಮುವಾಚಾಥ ಪೂಜಯನ್ ॥ ೭೦ ॥

ಆಗತೋಽಸ್ಮಿ ಮಹಾಭಾಗ ಮಾ ವಿಲಂಬಯ ಭಕ್ಷಯ ।
ತ್ವತ್ಪ್ರಸಾದಾದಹಂ ಗತ್ವಾ ವೈಷ್ಣವಂ ಸ್ಥಾನಮುತ್ತಮಂ ॥ ೭೧ ॥

ಏತಾನಿ ಮಮ ಗಾತ್ರಾಣಿ ಭಕ್ಷಯಸ್ವ ಯಥೇಪ್ಸಿತಃ ।
ಪಿಬೋಽಷ್ಣಂ ರುಧಿರಂ ಮಹ್ಯಂ ಪೀಡಿತೋಽಸಿ ಕ್ಷುಧಾ ಭೃಶಂ ।
ತರ್ಪಯಸ್ವ ಸ್ವಮಾತ್ಮಾನಂ ಕುರುಷ್ವ ಮಮ ವೈ ಹಿತಂ ॥ ೭೨ ॥

ಶ್ವಪಾಕಸ್ಯ ವಚಃ ಶ್ರುತ್ವಾ ತತಸ್ಸ ಬ್ರಹ್ಮರಾಕ್ಷಸಃ ।
ಉವಾಚ ಮಧುರಂ ವಾಕ್ಯಂ ಶ್ವಪಾಕಂ ತದನಂತರಂ । ॥ ೭೩ ॥

ಸಾಧು ತುಷ್ಟೋಽಸ್ಮ್ಯಹಂ ವತ್ಸ ಸತ್ಯಂ ಧರ್ಮಂ ಚ ಪಾಲಿತಂ ।
ಚಂಡಾಲಸ್ಯಾವಿಧಿಜ್ಞಸ್ಯ ಯಸ್ಯ ತೇ ಮತಿರೀದೃಶೀ ॥ ೭೪ ॥

---

೭೦. ಹೀಗೆ ಹೇಳಿ, ಯಾವಾಗಲೂ ಸತ್ಯವ್ರತದಲ್ಲಿರುವ ಆ ಪಂಚಮನು ಬ್ರಹ್ಮರಾಕ್ಷಸನ ಹತ್ತಿರಕ್ಕೆ ಬಂದು, ಗೌರವದಿಂದ ಅವನಿಗೆ ಹೀಗೆ ಹೇಳಿದನು.—

೭೧. " ಮಹಾಭಾಗ್ಯನೇ, ನಿನ್ನ ಅನುಗ್ರಹದಿಂದ ನಾನು ಉತ್ತಮವಾದ ವಿಷ್ಣುಕ್ಷೇತ್ರಕ್ಕೆ ಹೋಗಿ ಬಂದಿದ್ದೇನೆ. ತಡಮಾಡಬೇಡ, ತಿನ್ನು.

೭೨. ಈ ನನ್ನ ಅವಯವಗಳನ್ನು ಬೇಕಾದ ಹಾಗೆ ತಿನ್ನು. ಬಿಸಿಯಾದ ರಕ್ತವನ್ನು ಕುಡಿ. ಬಹಳ ಹಸಿವಿನಿಂದ ಪೀಡಿತನಾಗಿದ್ದೀಯೆ. ನಿನ್ನ ಆತ್ಮವನ್ನು ತೃಪ್ತಿಪಡಿಸು. ಅದರಿಂದ ನನಗೂ ಹಿತವನ್ನು ಮಾಡು. "

೭೩. ಪಂಚಮನ, ಈ ಮಾತನ್ನು ಕೇಳಿ, ಆ ಬ್ರಹ್ಮರಾಕ್ಷಸನು ಬಳಿಕ ಆ ಪಂಚಮನಿಗೆ ಇಂಪಾದ ಮುಂದಿನ ಮಾತನ್ನು ಹೇಳಿದನು.

೭೪. " ಮಗುವೇ, ಭಾಪು ! ವಿಧಿಗಳನ್ನರಿಯದ ಚಂಡಾಲನಾದ ನಿನಗೆ ಈ ಬಗೆಯ ಬುದ್ಧಿಯುಂಟಾದುದಕ್ಕೆ ನಾನು ಸಂತೋಷಿಸುತ್ತೇನೆ. ನೀನು ಸತ್ಯವನ್ನೂ ಧರ್ಮವನ್ನೂ ಕಾಪಾಡಿದೆ."

ಬ್ರಹ್ಮರಕ್ಷೋವಚಃ ಶ್ರುತ್ವಾ ಶ್ವಪಾಕಸ್ಸತ್ಯಸಂಗರಃ |
ಉವಾಚ ಮಧುರಂ ವಾಕ್ಯಂ ಬ್ರಹ್ಮರಕ್ಷಸಮೇವ ತು ॥ ೭೫ ॥

ಯದ್ಯಪ್ಯಹಂ ವೈ ಚಾಂಡಾಲಃ ಸರ್ವಕರ್ಮವಿವರ್ಜಿತಃ ।
ತಥಾಪಿ ಸತ್ಯಂ ವಕ್ತವ್ಯಂ ಬ್ರಹ್ಮರಾಕ್ಷಸ ನಿತ್ಯಶಃ ॥ ೭೬ ॥

ಶ್ವಪಾಕವಚನಂ ಶ್ರುತ್ವಾ ಬ್ರಹ್ಮರಕ್ಷೋ ಭಯಾನಕಂ |
ಉವಾಚ ಮಧುರಂ ವಾಕ್ಯಂ ಶ್ವಪಾಕಂ ಸಂಶಿತವ್ರತಂ ॥ ೭೭ ॥

ಯತ್ತ್ವಯಾ ಗೀಯತೇ ರಾತ್ರೌ ವಿಷ್ಣೋರ್ಜಾಗರಣಂ ಪ್ರತಿ ।
ಫಲಂ ಗೀತಸ್ಯ ಮೇ ದೇಹಿ ಯದೀಚ್ಛೇರ್ಜೀವಿತಂ ಸ್ವಕಂ ।
ತತೋ ಮೋಕ್ಷ್ಯಾಮಿ ಕಲ್ಯಾಣ ಭಕ್ಷ್ಯಾಮಿ ನ ಚ ಭೀಷಣಃ ॥ ೭೮ ॥

ಬ್ರಹ್ಮರಕ್ಷೋವಚಃ ಶ್ರುತ್ವಾ ಶ್ವಪಾಕಃ ಪ್ರತ್ಯುವಾಚ ಹ ॥ ೭೯ ॥

೭೫–೭೬. ಸತ್ಯಪ್ರತಿಜ್ಞನಾದ ಆ ಪಂಚಮನು ಬ್ರಹ್ಮರಕ್ಷಸ್ಸಿನ ಮಾತನ್ನು ಕೇಳಿ, ಹಿತಕರವಾದ ಮಾತಿನಿಂದ, "ಬ್ರಹ್ಮರಾಕ್ಷಸನೇ, ನಾನೇನೋ ಸರ್ವಕರ್ಮಬಾಹಿರನಾದ ಹೊಲೆಯನೇ. ಆದರೂ ಯಾವಾಗಲೂ ಸತ್ಯವನ್ನೇ ಹೇಳಬೇಕು" ಎಂದನು.

೭೭–೭೮. ಪಂಚಮನ ಮಾತನ್ನು ಕೇಳಿ, ಭಯಂಕರನಾದ ಆ ಬ್ರಹ್ಮರಾಕ್ಷಸನು, ಉಗ್ರವ್ರತಿಯಾದ ಅವನಿಗೆ, "ನೀನು ರಾತ್ರಿ ಜಾಗರಣೆಯನ್ನು ಮಾಡುತ್ತ ವಿಷ್ಣುವಿಗಾಗಿ ಹಾಡುವ ಗೀತದ ಫಲವನ್ನು ನಿನ್ನ ಪ್ರಾಣಗಳನ್ನುಳಿಸಿಕೊಳ್ಳಲು ಇಷ್ಟವಿದ್ದರೆ ನನಗೆ ಕೊಡು. ಮಂಗಳನೇ, ಬಳಿಕ ನಿನ್ನನ್ನು ಬಿಟ್ಟುಬಿಡುವೆನು. ಭಯಂಕರನಾಗಿ ತಿನ್ನುವುದಿಲ್ಲ." ಎಂದು ಇಂಪಾಗಿ ಹೇಳಿದನು.

೭೯–೮೦. ಬ್ರಹ್ಮರಕ್ಷಸ್ಸಿನ ಮಾತನ್ನು ಕೇಳಿ, ಪಂಚಮನು, "ಬ್ರಹ್ಮರಕ್ಷಸ್ಸೇ, ನೀನು ನನ್ನ ಮನವನ್ನರಿಯಲು ಇದನ್ನು ಹೇಳುತ್ತೀಯೆ. ನನ್ನನ್ನು

ಮನೋ*ಜ್ಞಾತುಮಿದಂ ವಾಕ್ಯಂ ಬ್ರಹ್ಮರಕ್ಷೋ ನಿಭಾಷಸೇ |
ಭಕ್ಷಯಾಮೀತಿ ಚೋಕ್ತ್ವಾ ಮಾಂ ಗೀತಪುಣ್ಯಂ ಕಿಮಿಚ್ಛಸಿ ॥ ೮೦ ॥

ಶ್ವಪಾಕವಚನಂ ಶ್ರುತ್ವಾ ಬ್ರಹ್ಮರಕ್ಷೋಽಬ್ರವೀತ್ಪುನಃ |
ದೇಹಿ ಮೇ ಶ್ಲೋಕಯಾಮೇಯಂ ಪುಣ್ಯಂ ಗೀತಸ್ಯ ವೈ ಪರಂ ॥ ೮೧ ॥

ತತೋ ಮೋಕ್ಷ್ಯಸಿ ಭಕ್ಷ್ಯೇಣ ಸಂಗತಃ ಪುತ್ರದಾರಕೈಃ ॥ ೮೨ ॥

ಶ್ರುತ್ವಾ ರಾಕ್ಷಸವಾಕ್ಯಾನಿ ಚಾಂಡಾಲೋ ಗೀತಲೋಭಿತಃ |
ಉವಾಚ ಮಧುರಂ ವಾಕ್ಯಂ ರಾಕ್ಷಸಂ ಕೃತನಿಶ್ಚಯಃ ॥ ೮೩ ॥

ನ ಗಾಯನಫಲಂ ದದ್ಮಿ ಬ್ರಹ್ಮರಕ್ಷಸ್ತ್ವಮೇಪ್ಸಿತಂ ।
ಭಕ್ಷಯಸ್ವ ಯಥಾನ್ಯಾಯಂ ರುಧಿರಂ ಪಿಬ ಚೇಪ್ಸಿತಂ ॥ ೮೪ ॥

ತಿನ್ನುವೆನೆಂದು ಹೇಳಿ, ಈಗ ಗೀತದ ಪುಣ್ಯವನ್ನೇಕೆ ಬಯಸುತ್ತೀಯೆ ?" ಎಂದು ಬದಲು ಹೇಳಿದನು.

೮೧–೮೨. ಪಂಚಮನ ಮಾತನ್ನು ಕೇಳಿ, ಬ್ರಹ್ಮರಾಕ್ಷಸನು, "ಒಂದು ಜಾವದ, ನಿನ್ನ ಗೀತದ ಶ್ರೇಷ್ಠವಾದ ಪುಣ್ಯವನ್ನು ನನಗೆ ಕೊಡು. ಬಳಿಕ ನೀನು ನನ್ನಿಂದ ಬಿಡುವನ್ನು ಪಡೆದು, ಹೆಂಡತಿ ಮಕ್ಕಳೊಡನೆ ಸೇರುವೆ" ಎಂದು ಮತ್ತೆ ಹೇಳಿದನು.

೮೩–೮೪. ರಾಕ್ಷಸನ ಮಾತುಗಳನ್ನು ಕೇಳಿ, ಗೀತದಲ್ಲಿ ಅತ್ಯಾಸೆಯುಳ್ಳ ಆ ಪಂಚಮನು ಮನಸ್ಸಿನಲ್ಲಿ ನಿಶ್ಚಯಮಾಡಿಕೊಂಡು, "ಬ್ರಹ್ಮರಾಕ್ಷಸನೇ, ನಿನಗೆ ಬೇಕಾದ ಗಾನದಫಲವನ್ನು ಕೊಡಲಾರೆನು. ನ್ಯಾಯವಾಗಿ ನನ್ನನ್ನು ತಿನ್ನು. ನಿನಗಿಷ್ಟವಾದ ರಕ್ತವನ್ನು ಕುಡಿ" ಎಂದು ಇಂಪಾಗಿ ಹೇಳಿದನು.

---

* ಜ್ಞಾತ

ಶ್ವಪಾಕವಚನಂ ಶ್ರುತ್ವಾ ರಾಕ್ಷಸಃ ಪುನರಬ್ರವೀತ್ ।
ಏಕಗೀತಸ್ಯ ಮೇ ದೇಹಿ ಯತ್ತ್ವಯಾ ವಿಷ್ಣುಸಂಸದಿ ।
ಏತೇನ ತಾರಿತೋಽಸ್ಮೀತಿ ತವ ಗೀತಫಲೇನ ವೈ ॥ ೮೫ ॥

ಶ್ರುತ್ವಾ ವಾಕ್ಯಾನಿ ಚಾಂಡಾಲೋ ರಾಕ್ಷಸಸ್ಯ ನಿವಾರಯನ್ ।
ಉವಾಚ ಮಧುರಂ ವಾಕ್ಯಂ ಚಾಂಡಾಲೋ ವಿಸ್ಮಯಾನ್ವಿತಃ ॥ ೮೬ ॥

ಕಿಂ ತ್ವಯಾ ವಿಕೃತಂ ಕರ್ಮ ತದ್ಬ್ರೂಹಿ ಮಮ ರಾಕ್ಷಸ ।
ಕರ್ಮಣೋ ಯಸ್ಯ ದೋಷೇಣ ರಾಕ್ಷಸತ್ವಂ ಸಮಾಗತಃ ॥ ೮೭ ॥

ಶ್ವಪಾಕವಚನಂ ಶ್ರುತ್ವಾ ಬ್ರಹ್ಮರಕ್ಷೋ ಮಹಾಯಶಾಃ ।
ಉವಾಚ ಮಧುರಂ ವಾಕ್ಯಂ ದುಃಖಸಂತಪ್ತಮಾನಸಃ ॥ ೮೮ ॥

ನಾಮ್ನೋ ವೈ ಸೋಮಶರ್ಮಾಹಂ ಚರಕೋ ಬ್ರಹ್ಮಯೋನಿಜಃ ।
ಸೂತ್ರಮಂತ್ರಪರಿಭ್ರಷ್ಟೋ ಯಜ್ಞಕರ್ಮಸು ನಿಷ್ಠಿತಃ ॥ ೮೯ ॥

---

೮೫. ಪಂಚಮನ ಈ ಮಾತನ್ನು ಕೇಳಿ, ರಾಕ್ಷಸನು, " ವಿಷ್ಣುವಿನ ಸನ್ನಿಧಿಯಲ್ಲಿ ನೀನು ಹಾಡಿದ ಒಂದು ಗೀತದ ಫಲವನ್ನು ನನಗೆ ಕೊಡು. ಅದರಿಂದ ನಾನು ಈ ಜನ್ಮವನ್ನು ದಾಟುವೆನು" ಎಂದು ಮತ್ತೆ ಕೇಳಿದನು.

೮೬–೮೭. ಆ ಪಂಚಮನು ರಾಕ್ಷಸನ ಮಾತುಗಳನ್ನು ಕೇಳಿ, ಬೇಡವೆನ್ನುತ್ತ, ಆಶ್ಚರ್ಯಪಟ್ಟು, ಇಂಪಾದ ಮಾತಿನಿಂದ, " ರಾಕ್ಷಸನೇ, ನೀನು ಯಾವ ದುಷ್ಕರ್ಮವನ್ನು ಮಾಡಿದೆ? ಯಾವ ಕರ್ಮದ ದೋಷದಿಂದ ನಿನಗೆ ರಾಕ್ಷಸ ಜನ್ಮವುಂಟಾಯಿತು? ಅದನ್ನು ನನಗೆ ಹೇಳು " ಎಂದನು.

೮೮. ಮಹಾಯಶಸ್ವಿಯಾದ ಬ್ರಹ್ಮರಾಕ್ಷಸನು, ನಾಯುಣಿಯ ಮಾತನ್ನು ಕೇಳಿ, ದುಃಖದಿಂದ ಸಂತಾಪಗೊಂಡ ಮನವುಳ್ಳವನಾಗಿ ಇಂಪಾದ ಮುಂದಿನ ಮಾತನ್ನು ಹೇಳಿದನು.

೮೯–೯೧. " ನಾನು ಹಿಂದೆ ಸೋಮಶರ್ಮನೆಂಬ ಬ್ರಾಹ್ಮಣನಾಗಿದ್ದೆನು. ಸೂತ್ರಮಂತ್ರಗಳನ್ನು ಸರಿಯಾಗಿ ತಿಳಿಯದ ನಾನು ಯಜ್ಞಕರ್ಮಗಳಲ್ಲಿ ನಿಂತವ

ತತೋಽಹಂ ಯಾಜಯಾಮ್ಯಜ್ಞಾನ್ ಲೋಭಮೋಹಪ್ರಪೀಡಿತಃ |
ಪ್ರವರ್ತಮಾನೇ ಯಜ್ಞೇ ತು ಕದಾಚಿದ್ದೈವಯೋಗತಃ ॥ ೯೦ ॥

ಉದರೇ ಜಾತಶೂಲೋಽಹಂ ತೇನ ಪಂಚತ್ವಮಾಗತಃ ॥ ೯೧ ॥

ಅಥ ಪಂಚಮಹಾರಾತ್ರೇ ಹ್ಯಸಮಾಪ್ತೇ ಕ್ರತೌ ತಥಾ |
ಅಸ್ಯ ಯಜ್ಞಸ್ಯ ದೋಷೇಣ ಮಾತಂಗ ಶೃಣು ಮೇ ವಚಃ |
ರಾಕ್ಷಸತ್ವಮನುಪ್ರಾಪ್ತಸ್ತೇನ ದುಷ್ಟೇನ ಕರ್ಮಣಾ ॥ ೯೨ ॥

ಮಂತ್ರಹೀನಂ ಮಯಾ ತತ್ರ ಸ್ವರಹೀನಂ ಚ ತತ್ಕೃತಂ |
ಸೂತ್ರಹೀನಂ ತಥಾ ತತ್ರ ಪ್ರಾಗ್ವಂಶಾದಿಕೃತಂ ಮಯಾ ॥ ೯೩ ॥

ಪರಿಮಾಣಂ ಚ ರೂಪಂ ಚ ಮಯಾ ತತ್ರೋಪಲಕ್ಷಿತಂ |
ಕೃತಸ್ಯ ತಸ್ಯ ದೋಷೇಣ ಯೋನಿಂ ಪ್ರಾಪ್ತೋಽಸ್ಮಿ ರಾಕ್ಷಸೀಂ ॥ ೯೪ ॥

ನಾಗಿ ಲೋಭಮೋಹಗಳಿಂದ ಪೀಡಿತನಾಗಿ ಅಜ್ಞರಿಂದ ಯಜ್ಞಗಳನ್ನು ಮಾಡಿಸುತ್ತಿದ್ದೆನು. ಒಂದು ಸಮಯದಲ್ಲಿ ಯಜ್ಞವು ನಡೆಯುತ್ತಿರುವಾಗ ಹೊಟ್ಟೆಯು ನೋವುಳ್ಳವನಾದ ನಾನು ಅದರಿಂದಲೇ ಮೃತನಾದೆನು.

೯೨. ಪಂಚಮನೇ, ಕೇಳು. ಐದು ರಾತ್ರಿಗಳಲ್ಲಿ ನಡೆಯಬೇಕಾಗಿದ್ದ ಆ ಮಹಾಯಜ್ಞವು ಪೂರ್ತಿಯಾಗದೆ ಕೆಟ್ಟುಹೋಗಲಾಗಿ, ಆ ಯಜ್ಞದೋಷದ ದುಷ್ಕರ್ಮದಿಂದ ನನಗೆ ರಾಕ್ಷಸತ್ವವುಂಟಾಯಿತು.

೯೩-೯೪. ಆ ಯಜ್ಞದಲ್ಲಿ ನಾನು ಮಂತ್ರಲೋಪವನ್ನೂ, ಸ್ವರಲೋಪವನ್ನೂ ಮಾಡಿದೆನು. ಅಲ್ಲದೆ ಯಜ್ಞಶಾಲೆಯಲ್ಲಿ, ಯಜಮಾನನು ಇರುವ ಮನೆಯೇ ಮೊದಲಾದುವುಗಳನ್ನು ವಿಧಿಯಲ್ಲಿ ಹೇಳಿರುವಂತಲ್ಲದೆ ಹೇಗೋ ಮಾಡಿಸಿದೆನು. ಅವುಗಳ ಅಳತೆಯನ್ನೂ, ಆಕಾರವನ್ನೂ ಮಾತ್ರವೇ ನಾನು ಗಮನಿಸಿದೆನು. ಆ ಕರ್ಮದ ದೋಷದಿಂದ ರಾಕ್ಷಸಜನ್ಮವನ್ನು ಪಡೆದಿದ್ದೇನೆ.

ಸ್ವಗೀತಫಲದಾನೇನ ನಿಸ್ತಾರಯಿತುಮರ್ಹಸಿ ।
ಮೋಚಯಸ್ವಾಧಮಂ ಪಾಪಾದ್ವಿಷ್ಣುಗೀತೇನ ಸತ್ವರಂ ॥ ೯೫ ॥

ಬ್ರಹ್ಮರಕ್ಷೋವಚಃ ಶ್ರುತ್ವಾ ಶ್ವಪಾಕಸ್ಸಂಶಿತವ್ರತಃ ।
ಬಾಢಮಿತ್ಯೇವ ತದ್ವಾಕ್ಯಂ ರಾಕ್ಷಸಂ ಪ್ರಾಬ್ರವೀತ್ತದಾ ॥ ೯೬ ॥

ಏತಸ್ಯ ಮಮ ಗೀತಸ್ಯ ಸುಸ್ವರಸ್ಯ ಫಲಂ ತು ಯತ್ ।
ದದಾಮಿ ರಾಕ್ಷಸ ತ್ವಂ ಚೇನ್ಮುಚ್ಯಸೇ ಶುದ್ಧಮಾನಸಃ ॥ ೯೭ ॥

ಯಸ್ತು ಗಾಯತಿ ಸಂಯುಕ್ತಂ ಗೀತಕಂ ವಿಷ್ಣುಸನ್ನಿಧೌ ।
ಸ ತಾರಯತಿ ದುರ್ಗಾಣೀತ್ಯುಕ್ತ್ವಾ ತದ್ದತ್ತವಾನ್ಫಲಂ ॥ ೯೮ ॥

ಏವಂ ತಸ್ಮಾತ್ಫಲಂ ಪ್ರಾಪ್ಯ ಶ್ವಪಾಕಾದ್ರಾಕ್ಷಸಸ್ತದಾ ।
ಜಾತಸ್ಸುವಿಮಲೋ ಭದ್ರೇ ಶರದೀವ ಯಥಾ ಶಶೀ ॥ ೯೯ ॥

---

೯೫. ನಿನ್ನ ಗೀತದ ಫಲವನ್ನು ಕೊಟ್ಟು, ನನ್ನನ್ನು ಈ ಜನ್ಮದಿಂದ ನೀನು ದಾಟಿಸಬೇಕು. ವಿಷ್ಣುಗೀತದಿಂದ, ಅಧಮನಾದ ನನ್ನನ್ನು ಪಾಪದಿಂದ ಬೇಗನೆ ಬಿಡಿಸು."

೯೬-೯೮. ತೀಕ್ಷ್ಣವ್ರತಿಯಾದ ಪಂಚಮನು ಬ್ರಹ್ಮರಕ್ಷಸ್ಸಿನ ಮಾತನ್ನು ಕೇಳಿ, ಅವನು ಹೇಳಿದಂತೆಯೇ ‘ ಅವಶ್ಯವಾಗಿಯೂ ಆಗಬಹುದು ’ ಎಂದು ಆಗ ರಾಕ್ಷಸನಿಗೆ, “ ಈ ಸುಸ್ವರವುಳ್ಳ ನನ್ನ ಗೀತದ ಫಲವನ್ನು ಶುದ್ಧವಾದ ಮನಸ್ಸುಳ್ಳವನಾಗಿ ನಾನು ನಿನಗೆ ಕೊಡುತ್ತೇನೆ. ರಾಕ್ಷಸಾ, ಇದರಿಂದ ನೀನು ಮುಕ್ತನಾಗುವುದಾದರೆ ವಿಷ್ಣುಸನ್ನಿಧಿಯಲ್ಲಿ ಗೀತಮಾಲೆಯನ್ನೇ ಹಾಡುವವನು ಕಷ್ಟಗಳನ್ನೆಲ್ಲಾ ದಾಟಿಸುವನು ” ಎಂದು ಹೇಳಿ, ಗೀತಫಲವನ್ನು ಕೊಟ್ಟನು.

೯೯. ಭದ್ರೇ, ಹಾಗೆ ಆ ಪಂಚಮನಿಂದ ಆಗ ರಾಕ್ಷಸನು ಆ ಫಲವನ್ನು ಪಡೆದು, ಶರತ್ಕಾಲದ ಚಂದ್ರನಂತೆ ಬಹು ಸ್ವಚ್ಛನಾದನು.

ಶ್ವಪಾಕಶ್ಚಾಪಿ ಸುಶ್ರೋಣಿ ಮಮ ಚೈವೋಪಗಾಯಕಃ
ಕೃತ್ವಾ ಸುವಿಪುಲಂ ಕರ್ಮ ಸ ಬ್ರಹ್ಮತ್ವಮುಪಾಗತಃ || ೧೦೦ ||

ಏತದ್ಗೀತಫಲಂ ದೇವಿ ಪ್ರಾಪ್ನೋತಿ ಮನುಜೋ ಭುವಿ |
ಮಹ್ಯಂ ಜಾಗರತೋ ಭದ್ರೇ ಗೀಯಮಾನಂ ಮನಸ್ವಿನಿ || ೧೦೧ ||

ಯಸ್ತು ಗಾಯತಿ ಸುಶ್ರೋಣಿ ಕೌಮುದೀಂ ದ್ವಾದಶೀಂ ಪ್ರತಿ |
ಸರ್ವಸಂಗಂ ಪರಿತ್ಯಜ್ಯ ಮಮ ಲೋಕಂ ಸ ಗಚ್ಛತಿ || ೧೦೨ ||

ಯಸ್ತು ಗಾಯತಿ ಗೀತಾನಿ ಮಮ ಜಾಗರಣೇ ಸದಾ |
ಸರ್ವಸಂಗಾತ್ಪ್ರಮುಕ್ತೋ ವೈ ಮಮ ಲೋಕಂ ಸ ಗಚ್ಛತಿ || ೧೦೩ ||

ಏತತ್ತೇ ಕಥಿತಂ ದೇವಿ ಗಾಯನಸ್ಯ ಫಲಂ ಮಹತ್ |
ಯಸ್ಯ ಗೀತಸ್ಯ ಶಬ್ದೇನ ತರೇತ್ಸಂಸಾರಸಾಗರಂ || ೧೦೪ ||

---

೧೦೦. ಸುಂದರಿ, ನನ್ನನ್ನೇ ಗಾನಮಾಡುವ ಆ ಪಂಚಮನೂ, ಬೇಕಾದಷ್ಟು ಸತ್ಕರ್ಮಗಳನ್ನು ಮಾಡಿ, ಬ್ರಹ್ಮತ್ವವನ್ನು ಪಡೆದನು.

೧೦೧. ಉತ್ತಮವಾದ ಮನಸ್ಸುಳ್ಳವಳೇ, ದೇವಿ, ಲೋಕದಲ್ಲಿ ಜಾಗರಣೆ ಮಾಡಿ, ನನಗಾಗಿ ಗಾನಮಾಡುವವನು, ಪಂಚಮನೂ ಬ್ರಹ್ಮರಾಕ್ಷಸನೂ ಪಡೆದ ಗೀತಫಲವನ್ನು ಪಡೆಯುವನು.

೧೦೨. ಸುಂದರಿ, ಕಾರ್ತಿಕಮಾಸದ ಶುಕ್ಲಪಕ್ಷದ ದ್ವಾದಶಿಯ ದಿನ ಗಾನದಿಂದ ನನ್ನನ್ನು ಭಜಿಸುವವನು, ಸರ್ವಸಂಗವನ್ನೂ ಪರಿತ್ಯಜಿಸಿ ನನ್ನ ಲೋಕವನ್ನು ಸೇರುವನು.

೧೦೩. ಜಾಗರಣೆಯಿಂದ ನನ್ನ ವಿಷಯದ ಗೀತಗಳನ್ನು ಯಾವಾಗಲೂ ಹಾಡುವವನೂ ಸರ್ವಸಂಗವನ್ನೂ ಬಿಟ್ಟು, ನನ್ನ ಲೋಕವನ್ನು ಸೇರುವನು.

೧೦೪. ದೇವಿ, ಯಾರ ಅಥವಾ ಯಾವ ಗಾನದ ಶಬ್ದದಿಂದ ಸಂಸಾರ ಸಾಗರವನ್ನು ದಾಟಬಹುದೋ ಅವನ ಅಥವಾ ಆ ಗಾನದ ಈ ಮಹಾಫಲವನ್ನು ನಿನಗೆ ಹೇಳಿದ್ದೇನೆ.

ವಾದಿತ್ರಸ್ಯ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ಪ್ರಾಪ್ತವಾನ್ಮಾನುಷೋ ಯೇನ ದೇವೇಭ್ಯಸ್ಸಮತಾಂ ಸ್ವಯಂ ॥ ೧೧೫ ॥

ಶಂಪಾತಾಲಪ್ರಯೋಗೇಣ ಸನ್ನಿಪಾತೇನ ವಾ ಪುನಃ ।
ನವವರ್ಷಸಹಸ್ರಾಣಿ ನವವರ್ಷಶತಾನಿ ಚ ॥ ೧೧೬ ॥

ಕುಬೇರಭವನಂ ಗತ್ವಾ ಮೋದತೇ ವೈ ಯಥೇಚ್ಛಯಾ ॥ ೧೧೭ ॥

ಕುಬೇರಭವನಾದ್ಭ್ರಷ್ಟಃ ಸ್ವಚ್ಛಂದಗಮನಾಲಯಃ ।
ಶಂಪಾದಿತಾಲಸಂಪಾತೈಃ ಮಮ ಲೋಕಂ ಸ ಗಚ್ಛತಿ ॥ ೧೧೮ ॥

ನೃತ್ಯಮಾನಸ್ಯ ವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ಮಾನವೋ ಯೇನ ಗಚ್ಛೇತ್ತು ಛಿತ್ವಾ ಸಂಸಾರಬಂಧನಂ ॥ ೧೧೯ ॥

---

೧೧೫. ವಸುಂಧರೇ, ನನ್ನ ಸೌಕರಕ್ಷೇತ್ರದಲ್ಲಿ ವಾದ್ಯವನ್ನು ಬಾಜಿಸುವುದರಿಂದ ಮನುಷ್ಯನು ತಾನು ದೇವತೆಗಳಿಗೆ ಸಮಾನತೆಯನ್ನು ಹೇಗೆ ಪಡೆಯುವನೆಂಬುದನ್ನು ಹೇಳುತ್ತೇನೆ.

೧೧೬-೧೧೮. ಶಂಪಾತಾಳವನ್ನು ಮಾತ್ರವೇ ಆಗಲಿ, ಹಲವು ಬಗೆಯ ತಾಳ (ವಾದ್ಯ) ಗಳನ್ನು ಜತೆಯಲ್ಲಿಯೇ ಆಗಲಿ ಬಾಜಿಸುವುದರಿಂದ ಒಂಭತ್ತು ಸಾವಿರದಒಂಭೈನೂರುವರ್ಷಕಾಲ ಕುಬೇರನ ಮನೆಗೆ ಹೋಗಿ, ಅಲ್ಲಿ ಬೇಕಾದ ಹಾಗೆ ಸಂತೋಷದಿಂದಿರುವನು. ಬಳಿಕ ಆ ಕೈಲಾಸದಿಂದ ಹೊರಟು, ವಿಮಾನದಲ್ಲಿ ಸಂಚರಿಸುವವನಾಗಿ ನನ್ನ ಲೋಕವನ್ನು ಸೇರುವನು.

೧೧೯. ವಸುಂಧರೇ, ಯಾವುದರಿಂದ ಸಂಸಾರದ ಕಟ್ಟನ್ನು ಹರಿದು ಮನುಷ್ಯನು ಹೊರಟುಹೋಗುವನೋ ಆ ನರ್ತನ(ಕುಣಿತ)ವನ್ನು ಮಾಡುವವನ ವಿಚಾರವನ್ನು ಹೇಳುತ್ತೇನೆ.

ತ್ರಿಂಶದ್ವರ್ಷಸಹಸ್ರಾಣಿ ತ್ರಿಂಶದ್ವರ್ಷಶತಾನಿ ಚ |
ಪುಷ್ಕರದ್ವೀಪಮಾಸಾದ್ಯ ಸ್ವಚ್ಛಂದಗಮನಾಲಯಃ
ಫಲಂ ಪ್ರಾಪ್ನೋತಿ ಸುಶ್ರೋಣಿ ಮಮ ಕರ್ಮಪರಾಯಣಃ || ೧೧೦ ||

ರೂಪವಾನ್ಗುಣವಾನ್ ಶೂರಃ ಶೀಲವಾನ್ಸತ್ಪಥೇ ಸ್ಥಿತಃ |
ಮದ್ಭಕ್ತಶ್ಚೈವ ಜಾಯೇತ ಸಂಸಾರಪರಿಮೋಚಿತಃ || ೧೧೧ ||

ಯಸ್ತು ಜಾಗರಿತೋ ನಿತ್ಯಂ ಗೀತವಾದ್ಯೇನ ನರ್ತಕಃ |
ಜಂಬೂದ್ವೀಪಂ ಸಮಾಸಾದ್ಯ ರಾಜರಾಜಸ್ತು ಜಾಯತೇ || ೧೧೨ ||

ಸರ್ವಸಂಪತ್ಸಮಾಯುಕ್ತೋ ರಕ್ಷಿತಾ ವೈ ಮಹೀಪತಿಃ |
ಮದ್ಭಕ್ತಶ್ಚೈವ ಜಾಯೇತ ಮಮ ಕರ್ಮಪರಾಯಣಃ || ೧೧೩ ||

ಉಪಹಾರ್ಯಾಣಿ ಪುಷ್ಪಾಣಿ ಮಮ ಕರ್ಮಪರಾಯಣಃ |
ಯೋ ಮಾಮುಪನಯೇದ್ಭೂಮೇ ಮಮ ಕರ್ಮಪಥೇ ಸ್ಥಿತಃ || ೧೧೪ ||

೧೧೦–೧೧೧. ಸುಂದರಿ, ನನ್ನ ಸೌಕರಕ್ಷೇತ್ರದಲ್ಲಿ ನನ್ನ ಸಂತೋಷಕ್ಕಾಗಿ ನರ್ತನಮಾಡುವ ನನ್ನ ಕರ್ಮಾಸಕ್ತನು ಮೂವತ್ತಮೂರುಸಾವಿರವರ್ಷಕಾಲ ಪುಷ್ಕರದ್ವೀಪದಲ್ಲಿದ್ದು, ವಿಮಾನಸಂಚಾರಿಯಾಗುವನು. ರೂಪವಂತನೂ, ಗುಣವಂತನೂ, ಶೂರನೂ, ಸುಶೀಲನೂ, ಸನ್ಮಾರ್ಗಗಾಮಿಯೂ, ನನ್ನ ಭಕ್ತನೂ ಆಗಿ, ಸಂಸಾರದಿಂದ ಮುಕ್ತನಾಗುವನು.

೧೧೨–೧೧೩. ನಿತ್ಯವೂ ಗೀತವಾದ್ಯಗಳೊಡನೆ ನರ್ತನಮಾಡುತ್ತ, ನನ್ನ ಕ್ಷೇತ್ರದಲ್ಲಿ ಜಾಗರಣೆಮಾಡುವವನು, ಜಂಬೂದ್ವೀಪದಲ್ಲಿ ಚಕ್ರವರ್ತಿಯಾಗಿ, ಸರ್ವಸಂಪದ್ಗುಣಾದಿಗಳಿಂದ ಕೂಡಿದವನೂ, ನನ್ನ ಭಕ್ತನೂ, ಕರ್ಮನಿರತನೂ ಆಗುವನು.

೧೧೪–೧೧೫. ಭೂಮೀ, ನನ್ನ ಕರ್ಮನಿರತನಾದ ಯಾರು ನನಗೆ ಅರ್ಪಿಸಬಹುದಾದ ಹೂಗಳನ್ನೂ, ಹೂಮಾಲೆಗಳನ್ನೂ ತಂದು, ನನ್ನ ತಲೆಯಲ್ಲಿ

ಪುಷ್ಪಾಣಿ ತತ್ರ ಯಾವಂತಿ ಮಮ ಮೂರ್ಧನಿ ಧಾರಯೇತ್ ।
ಸ ಕೃತ್ವಾ ಪುಷ್ಕಲಂ ಕರ್ಮ ಮಮ ಲೋಕಂ ಸ ಗಚ್ಛತಿ ॥ ೧೧೫ ॥

ಏತತ್ತೇ ಕಥಿತಂ ದೇವಿ ಭಕ್ತಾನಾಂ ತು ಮಹೌಜಸಾಂ ।
ಮಮ ಭಕ್ತಸುಖಾರ್ಥಾಯ ಸರ್ವಸಂಸಾರಮೋಕ್ಷಣಂ ॥ ೧೧೬ ॥

ಯ ಏತತ್ಪಠತೇ ಭೂಮೇ ಕಲ್ಯಮುತ್ಥಾಯ ಮಾನವಃ ।
ಸ ತು ತಾರಯತೇ ಜಂತುರ್ದಶ ಪೂರ್ವಾನ್ದಶಾಪರಾನ್ ॥ ೧೧೭ ॥

ನ ಪಠೇನ್ಮೂರ್ಖಮಧ್ಯೇ ತು ಪಿಶುನಾನಾಂ ಪುರೋ ನ ಚ ।
ಪಠೇದ್ಭಾಗವತಾನಾಂ ಚ ಮಧ್ಯೇ ಮುಕ್ತಿರತಾತ್ಮನಾಂ ॥ ೧೧೮ ॥

ಅಶ್ರದ್ದಧಾನೇ ಕ್ರೂರೇ ವಾ ನ ಪಠೇದ್ದೇವಲೇ ತಥಾ ॥ ೧೧೯ ॥

ಧರಿಸುವನೋ ಅವನು ಅರ್ಪಿಸುವ ಹೂಗಳೆಷ್ಟೋ ಅಷ್ಟು ಸತ್ಕರ್ಮಗಳನ್ನು ಮಾಡಿ, ನನ್ನ ಲೋಕವನ್ನು ಸೇರುವನು.

೧೧೬ ದೇವಿ, ನನ್ನ ಭಕ್ತರ ಸುಖಾರ್ಥವಾಗಿ, ಮಹಾತೇಜಸ್ವಿಗಳೂ, ಬಲಶಾಲಿಗಳೂ ಆದ ಭಕ್ತರು ಸೌಕರಕ್ಷೇತ್ರದಲ್ಲಿ ಆಚರಿಸುವ, ನನ್ನ ಕೀರ್ತನೆ, ಜಾಗರಣೆ, ನರ್ತನ ಮೊದಲಾದ ಸರ್ವಸಂಸಾರವಿಮೋಚಕವಾದ ಈ ಕಾರ್ಯಗಳನ್ನು ನಿನಗೆ ಹೇಳಿದೆನು.

೧೧೭. ಭೂಮಿ, ಬೆಳಗ್ಗೆ ಎದ್ದು ಇದನ್ನು ಹೇಳುವ ಮನುಷ್ಯನು, ತನ್ನ ವಂಶದ ಹಿಂದಿನ ಹತ್ತುತಲೆಯವರನ್ನೂ, ಮುಂದಿನ ಹತ್ತುತಲೆಯವರನ್ನೂ ಸಂಸಾರಸಾಗರದಿಂದ ದಾಟಿಸುವನು.

೧೧೮-೧೧೯. ಮೂರ್ಖರ ಮಧ್ಯದಲ್ಲಿಯೂ, ಪಿಶುನರ ಮುಂದೆಯೂ ಈ ವಿಚಾರವನ್ನು ಓದಬಾರದು. ಅಥವಾ ಹೇಳಬಾರದು. ನಂಬಿಕೆಯಿಲ್ಲದವನಿಗೂ, ಕೂಲಿಯನ್ನು ತೆಗೆದುಕೊಂಡು ದೇವರ ಪೂಜೆಯನ್ನು ಮಾಡುವವನಿಗೂ ಓದಿ ಹೇಳಬಾರದು. ಮುಕ್ತಿಯಲ್ಲಿ ಆಸಕ್ತರಾದ ಭಾಗವತರ ಮಧ್ಯದಲ್ಲಿ ಓದಿ ಹೇಳಬೇಕು.

ಯದೀಚ್ಛೇತ್ಸಿದ್ಧಿಕಲ್ಯಾಣಂ ಮಂಗಲಂ ಚ ಮಮ ಪ್ರಿಯಂ ।
ಧರ್ಮಾಣಾಂ ಪರಮೋ ಧರ್ಮಃ ಕ್ರಿಯಾಣಾಂ ಪರಮಾ ಕ್ರಿಯಾ ॥ ೧೨೦ ॥

ಮಾ ಪಠೇಚ್ಛಾಸ್ತ್ರದೂಷಾಯ ಅಧ್ಯಾಯಂ ವಾ ಕದಾಚನ ।
ಯದೀಚ್ಛೇತ್ಪರಮಾಂ ಸಿದ್ಧಿಂ ಮಮ ಲೋಕೇ ಮಹೀಯತೇ ॥ ೧೨೧ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಸೌಕರೇ ಚಾಂಡಾಲ ಬ್ರಹ್ಮ
ರಾಕ್ಷಸಸಂವಾದಃ ಸೌಕರಮಾಹಾತ್ಮ್ಯಂ ನಾಮ ಏಕೋನ
ಚತ್ವಾರಿಂಶದಧಿಕ ಶತತಮೋಧ್ಯಾಯಃ

೧೨೦-೧೨೧ ಶುಭಸಿದ್ಧಿಯನ್ನು ಬಯಸುವವನು, ಮಂಗಳವೂ, ನನಗೆ ಪ್ರಿಯವೂ, ಧರ್ಮಗಳಲ್ಲಿ ಪರಮಧರ್ಮವೂ, ಕ್ರಿಯೆಗಳಲ್ಲಿ ಉತ್ತಮಕ್ರಿಯೆಯೂ ಆದ ಇದನ್ನು ಅಥವಾ ಈ ಅಧ್ಯಾಯವನ್ನು ಎಂದಿಗೂ ಶಾಸ್ತ್ರವನ್ನು ದೂಷಿಸುವವನೆದುರಿಗೆ ಓದಬಾರದು. ಪರಮಸಿದ್ಧಿಯನ್ನು ಬಯಸಿ, ಇದನ್ನು ಓದುವವನು ನನ್ನ ಲೋಕವನ್ನು ಸೇರುವನು.

ಅಧ್ಯಾಯದ ಸಾರಾಂಶ :—

ಶ್ರೀ ವರಾಹನು ಭೂದೇವಿಗೆ, ವಾರಾಹಕ್ಷೇತ್ರವನ್ನು ಶುಚಿಮಾಡುವವರಿಗೂ ಆ ಕ್ಷೇತ್ರದಲ್ಲಿ ವಿಷ್ಣುವಿಗಾಗಿ ಗಾನಾದಿಗಳನ್ನು ಮಾಡುವವರಿಗೂ ಆಗುವ ಸತ್ಫಲಗಳನ್ನೂ, ಅಲ್ಲಿ ರಾತ್ರಿ ಜಾಗರಣೆಯಿಂದ ಗಾನಮಾಡುತ್ತಿದ್ದ ಪಂಚಮನೊಬ್ಬನ ಮತ್ತು, ಆ ಪಂಚಮನ ಒಂದು ಗೀತದ ಪುಣ್ಯವನ್ನು ಅವನಿಂದ ಪಡೆದು, ತನ್ನ ದುಷ್ಟಜನ್ಮದಿಂದ ಮುಕ್ತನಾದ ಬ್ರಹ್ಮರಾಕ್ಷಸನ ಕಥೆಯನ್ನೂ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರಮೂವತ್ತೊಂಭತ್ತನೆಯ ಅಧ್ಯಾಯ.

॥ ಶ್ರೀಃ ॥

–x–

ಚತ್ವಾರಿಂಶದಧಿಕಶತತಮೋಽಧ್ಯಾಯಃ

ಅಥ ಕೋಕಾಮುಖ (ಬದರೀ) ಮಾಹಾತ್ಮ್ಯಂ

॥ ಧರಣ್ಯುವಾಚ ॥

ಶ್ರುತಾನಿ ದೇವ ಸ್ಥಾನಾನಿ ತ್ವಯಾ ಪ್ರೋಕ್ತಾನಿ ಯಾನ್ಯುತ |
ಕಸ್ಮಿಂಸ್ತಿಷ್ಠಸಿ ನಿತ್ಯಂ ತ್ವಂ ತದ್ಭವಾನ್ವಕ್ತುಮರ್ಹತಿ ॥ ೧ ॥

ಕಿಂ ಚ ತೇ ಪರಮಂ ಸ್ಥಾನಂ ಯತ್ರ ಮೂರ್ತ್ಯಾಕೃತಿರ್ಭವಾನ್ |
ಕಸ್ಮಿನ್ ಸ್ಥಾನೇ ಕೃತಂ ಕರ್ಮ ಯೇನ ಯಾತ್ಯುತ್ತಮಾಂ ಗತಿಂ ॥ ೨ ॥

ನೂರನಲವತ್ತನೆಯ ಅಧ್ಯಾಯ.

ಕೋಕಾಮುಖ(ಬದರೀ)ಕ್ಷೇತ್ರ ಮಹಿಮೆ.

೧-೨. ಭೂದೇವಿ—ದೇವ, ನೀನು ಹೇಳಿದ ಪುಣ್ಯಸ್ಥಳಗಳನ್ನು ಕೇಳಿದುದಾಯಿತು. ಆದರೆ ನಿನಗೆ ಉತ್ಕೃಷ್ಟವಾದೆಡೆಯಾವುದು? ನೀನು ಎಲ್ಲಿ ಮೂರ್ತೀಭವಿಸಿದವನಾಗಿರುವೆ? ಯಾವ ಕ್ಷೇತ್ರದಲ್ಲಿ ನಿತ್ಯವೂ ಇರುವೆ? ಭಕ್ತರು ಯಾವ ಸ್ಥಳದಲ್ಲಿ ಮಾಡಿದ ಕರ್ಮವು ಉತ್ತಮವಾದ ಗತಿಗೆ ಕಾರಣವಾಗುವುದು? ಇದನ್ನೆಲ್ಲಾ ನೀನು ನನಗೆ ಹೇಳಬೇಕು.

॥ ಶ್ರೀವರಾಹ ಉವಾಚ ॥

ಶೃಣು ತತ್ತ್ವೇನ ಮೇ ದೇವಿ ಭಕ್ತಾನಾಂ ಭಕ್ತವತ್ಸಲೇ ।
ಯೇಷು ಸ್ಥಾನೇಷು ತಿಷ್ಠಾಮಿ ಕಥ್ಯಮಾನಾನಿಮಾನ್ ಶೃಣು ॥ ೩ ॥

ತವ ಕೋಕಾಮುಖಂ ನಾಮ ಯನ್ಮಯಾ ಪೂರ್ವಭಾಷಿತಂ ।
ಬದರೀತಿ ಚ ವಿಖ್ಯಾತಂ ಗಿರಿರಾಜಶಿಲಾತಲಂ ॥ ೪ ॥

ಸ್ಥಾನಂ ಲೋಹಾರ್ಗಲಂ ನಾಮ ಮ್ಲೇಚ್ಛರಾಜಸಮಾಶ್ರಿತಂ ।
ಕ್ಷಣಂ ಚಾಪಿ ನ ಮುಂಚಾಮಿ ಏವಮೇತನ್ನ ಸಂಶಯಃ ॥ ೫ ॥

ಸಚೈತ್ಯಂ ಪಶ್ಯ ಮೇ ಸ್ಥಾನಂ ಜಗದೇತಚ್ಚರಾಚರಂ ।
ಸರ್ವತ್ರಾಹಂ ವರಾರೋಹೇ ನ ಮನ್ಯೂನಂ ಹಿ ಜಾನತೇ ॥ ೬ ॥

ಯೇ ತು ಜಾನಂತಿ ಮಾಂ ದೇವಿ ಗುಹ್ಯಾಂ ಕಾಮಗತಿಂ ಮಮ ।
ಶೀಘ್ರಂ ಕೋಕಾಮುಖಂ ಯಾಂತು ಮಮ ಕರ್ಮಪರಾಯಣಾಃ ॥ ೭ ॥

---

೩. ಶ್ರೀವರಾಹ—ನನ್ನ ದೇವಿ, ಭಕ್ತವತ್ಸಲೇ, ನಾನು ಭಕ್ತರಿಗಾಗಿ ಯಾವ ಸ್ಥಳದಲ್ಲಿರುವೆನೆಂಬುದನ್ನು ನಿಜವಾಗಿ ಹೇಳುತ್ತೇನೆ, ಆ ಸ್ಥಳಗಳನ್ನು ಕೇಳು.

೪-೫. ನಿನಗೆ ಹಿಂದೆಯೇ ನಾನು ಹೇಳಿರುವ ಕೋಕಾಮುಖವೆಂಬ ಕ್ಷೇತ್ರವನ್ನೂ, ಹಿಮವತ್ಪರ್ವತದ ಶಿಲಾಪ್ರದೇಶವಾದ ಬದರೀಕ್ಷೇತ್ರವೆಂಬ ಪ್ರಸಿದ್ಧವಾದೆಡೆಯನ್ನೂ, ಮ್ಲೇಚ್ಛರಾಜನಿಗೆ ಆಶ್ರಯವಾಗಿರುವ ಲೋಹಾರ್ಗಲವೆಂಬ ಕ್ಷೇತ್ರವನ್ನೂ ನಾನು ಒಂದು ಕ್ಷಣವೂ ಬಿಡುವುದಿಲ್ಲವೆಂಬುದರಲ್ಲಿ ಸಂದೇಹವಿಲ್ಲ.

೬. ವರಾರೋಹೇ, ಆದರೂ ಚರಾಚರಗಳಿಂದ ಕೂಡಿದ ಈ ಜಗತ್ತನ್ನೇ ದೇವಾಲಯಸಹಿತವಾದ ನನ್ನ ಸ್ಥಾನವೆಂದು ಭಾವಿಸು(ನೋಡು). ನಾನು ಎಲ್ಲೆಲ್ಲೂ ಇರುವೆನು. ನಾನಿಲ್ಲದೆಡೆಯನ್ನು ಯಾರೂ ತಿಳಿಯರು.

೭. ದೇವಿ, ನನ್ನ ಕರ್ಮಾಸಕ್ತರಾದ ಯಾರು ನನ್ನನ್ನೂ, ನನ್ನ ರಹಸ್ಯವಾದ ಸ್ವೇಚ್ಛಾಗತಿಯನ್ನೂ ತಿಳಿಯುವವರೋ ಅವರು ಬೇಗನೆ ಕೋಕಾಮುಖ ಕ್ಷೇತ್ರವನ್ನು ಸೇರಲಿ.

ತತೋ ದೇವವಚಃ ಶ್ರುತ್ವಾ ಪೃಥಿವೀ ವಾಕ್ಯಮಬ್ರವೀತ್ ।
ಶಿರಸ್ಯಂಜಲಿಮಾಧಾಯ ನಿರ್ವೃತೇನಾಂತರಾತ್ಮನಾ ॥ ೮ ॥

॥ ಧರಣ್ಯುವಾಚ ॥

ಸರ್ವತೋ ಲೋಕನಾಥೇಶ ಪರಂ ಕೌತೂಹಲಂ ಹಿ ಮೇ ।
ಕಥಂ ಕೋಕಾಮುಖಂ ಶ್ರೇಷ್ಠಂ ತದ್ಭವಾನ್ವಕ್ತುಮರ್ಹತಿ ॥ ೯ ॥

॥ ಶ್ರೀವರಾಹ ಉವಾಚ ॥

ನಾಸ್ತಿ ಕೋಕಾಮುಖಾತ್ ಕ್ಷೇತ್ರಂ ಶ್ರೇಷ್ಠಂ ಕೋಕಾಮುಖಾಚ್ಛುಚಿ ।
ನಾಸ್ತಿ ಕೋಕಾಮುಖಾತ್ ಸ್ಥಾನಂ ನಾಸ್ತಿ ಕೋಕಾಮುಖಾತ್ಪ್ರಿಯಂ॥೧೦॥

ಯಸ್ತು ಕೋಕಾಮುಖಂ ಗತ್ವಾ ನ ಭೂಯೋ ವಿನಿವರ್ತತೇ ।
ಕರ್ಮಾಣಿ ತತ್ರ ಕುರ್ವೀತ ಚೇಷ್ಟಂ ಭವತಿ ಚಾತ್ಮನಿ ॥ ೧೧ ॥

---

೮. ಶ್ರೀವರಾಹದೇವನ ಈ ಮಾತನ್ನು ಕೇಳಿ, ಭೂದೇವಿಯು ಸಂತೋಷಗೊಂಡ ಮನಸ್ಸುಳ್ಳವಳಾಗಿ ನೆತ್ತಿಯಮೇಲೆ ಕೈಮುಗಿದುಕೊಂಡು, ಮುಂದಿನ ಮಾತನಾಡಿದಳು.

೯. ಭೂದೇವಿ—ಲೋಕನಾಥೇಶ, ನನಗೆ ಬಹಳ ಕುತೂಹಲವಾಗಿದೆ. ಎಲ್ಲಕ್ಕಿಂತಲೂ ಕೋಕಾಮುಖಕ್ಷೇತ್ರವು ಹೇಗೆ ಶ್ರೇಷ್ಠವೆಂಬುದನ್ನು ನೀನು ನನಗೆ ಹೇಳಬೇಕು.

೧೦. ಶ್ರೀವರಾಹ—ಕೋಕಾಮುಖಕ್ಕಿಂತಲೂ ಶುಚಿಯೂ, ಶ್ರೇಷ್ಠವೂ ಆದ ಕ್ಷೇತ್ರವಿಲ್ಲ. ಕೋಕಾಮುಖಕ್ಷೇತ್ರಕ್ಕಿಂತಲೂ ನನಗೆ ಪ್ರಿಯವಾದ ಸ್ಥಾನವಿಲ್ಲ.

೧೧. ಕೋಕಾಮುಖಕ್ಷೇತ್ರಕ್ಕೆ ಹೋಗಿ ಅಲ್ಲಿ ತನಗೆ ಇಷ್ಟವಾದ ಸತ್ಕರ್ಮಗಳನ್ನು ಮಾಡುವವನು ಮತ್ತೆ(ಅಲ್ಲಿಂದ) ಸಂಸಾರಕ್ಕೆ ಹಿಂದಿರುಗುವುದಿಲ್ಲ.

ಯಾನಿ ಯಾನಿ ಚ ಕ್ಷೇತ್ರಾಣಿ ತ್ವಯಾ ಪೃಷ್ಟಾನಿ ವೈ ಧರೇ ।
ಕೋಕಾಮುಖಸಮಂ ಸ್ಥಾನಂ ನ ಭೂತಂ ನ ಭವಿಷ್ಯತಿ ॥ ೧೨ ॥

ಮಮ ಸಾ ಪರಮಾ ಮೂರ್ತಿರ್ಯಾಂ ನ ಜಾನಂತಿ ಗೋಪಿತಾಂ ।
ಸ್ಥಿತಂ ಕೋಕಾಮುಖಂ ನಾಮ ಏತತ್ತೇ ಕಥಿತಂ ಮಯಾ ॥ ೧೩ ॥

॥ ಧರಣ್ಯುವಾಚ ॥

ದೇವದೇವ ಮಹಾದೇವ ಭಕ್ತಾನಾಮಭಯಪ್ರದ ।
ಯಾನಿ ಗುಹ್ಯಾನಿ ಸಂತ್ಯತ್ರ ಕೋಕಾಯಾಂ ವಕ್ತುಮರ್ಹಸಿ ॥ ೧೪ ॥

॥ ಶ್ರೀವರಾಹ ಉವಾಚ ॥

ಶೃಣು ತತ್ತ್ವೇನ ಮೇ ದೇವಿ ಯನ್ಮಾಂ ತ್ವಂ ಪರಿಪೃಚ್ಛಸಿ ।
ತಸ್ಮಿನ್ಕೋಕಾಮುಖೇ ರಮ್ಯೇ ಕಥ್ಯಮಾನಂ ಮಯಾನಘೇ ॥ ೧೫ ॥

---

೧೨ ಭೂದೇವಿ, ನೀನು ಯಾವ ಕ್ಷೇತ್ರಗಳನ್ನು ಕೇಳಿರುವೆಯೋ ಅವು ಗಳಲ್ಲಿ ಯಾವುದೊಂದೂ ಕೋಕಾಮುಖಕ್ಕೆ ಸಮವಾಗಿಲ್ಲ. ಮುಂದೆಯೂ ಸಮವಾಗುವುದಿಲ್ಲ.

೧೩. ಮರೆಯಾಗಿ ಅಥವಾ ರಹಸ್ಯವಾಗಿರುವ, ಯಾರೂ ಅರಿಯದ ನನ್ನ ಆ ಪರಮಮೂರ್ತಿಯು ಕೋಕಾಮುಖವೆಂಬ ಹೆಸರಿನಿಂದಿದೆ. ಇದನ್ನು ನಿನಗೆ ಹೇಳಿದ್ದೇನೆ

೧೪. ಭೂದೇವಿ—ದೇವದೇವ, ಮಹಾದೇವ, ಭಕ್ತರಿಗೆ ಅಭಯವನ್ನು ಕೊಡುವವನೇ, ಕೋಕಾಮುಖಕ್ಷೇತ್ರದಲ್ಲಿರುವ ರಹಸ್ಯವಾದ ತೀರ್ಥಾದಿಗಳನ್ನು ಹೇಳು.

೧೫. ಶ್ರೀವರಾಹ—ನನ್ನ ದೇವಿ, ದೋಷರಹಿತೇ, ನೀನು ತಿಳಿಯಲು ಬಯಸುವ ಆ ಮನೋಹರವಾದ ಕೋಕಾಮುಖಕ್ಷೇತ್ರದಲ್ಲಿರುವ ರಹಸ್ಯಸ್ಥಾನ ಗಳನ್ನು ನಾನು ಸರಿಯಾಗಿ ಹೇಳುತ್ತೇನೆ, ಕೇಳು.

ಜಲಬಿಂದುರಿತಿ ಖ್ಯಾತಾತ್ಪರ್ವತಾತ್ಪತನಾದ್ಭುವಿ ।
ತತ್ತು ಗುಹ್ಯತಮಂ ದೇವಿ ಕೃತ್ವಾ ಕರ್ಮ ಮಹೌಜಸಂ ।
ಸರ್ವಸಂಗಾನ್ಪರಿತ್ಯಜ್ಯ ಮಮ ಲೋಕಂ ಸ ಗಚ್ಛತಿ ॥ ೧೬ ॥

ವಿಷ್ಣುಧಾರೇತಿ ವಿಖ್ಯಾತಾ ಕೋಕಾಯಾಂ ಮಮ ಮಂಡಲೇ ।
ಪರ್ವತಾತ್ಪತಿತಾ ಭೂಮೌ ಧಾರಾ ಮುಸಲಸನ್ನಿಭಾ ॥ ೧೭ ॥

ಅಹೋರಾತ್ರೋಷಿತೋ ಭೂತ್ವಾ ಸ್ನಾಯಾತ್ತತ್ರ ಪ್ರಯತ್ನತಃ ।
ಅಗ್ನಿಷ್ಟೋಮ ಸಹಸ್ರಾಣಾಂ ಫಲಂ ಪ್ರಾಪ್ನೋತಿ ಮಾನವಃ । ॥ ೧೮ ॥

ನ ಮುಹ್ಯತಿ ಸ ಕರ್ತವ್ಯೇ ಫಲಂ ಪ್ರಾಪ್ನೋತಿ ಚೋತ್ತಮಂ ।
ಜಾಯತೇ ವಿಪುಲೇ ಶುದ್ಧೇ ಮಮ ಮಾರ್ಗಾನುಸಾರಿಣಿ ॥ ೧೯ ॥

ತತ್ರಾಥ ಮುಂಚತಿ ಪ್ರಾಣಾನ್ವಿಷ್ಣುಧಾರಾಂ ಸಮಾಶ್ರಿತಃ ।
ಪಶ್ಯತೇ ಪರಮಾಂ ಮೂರ್ತಿಮೇತಾಂ ಮಮ ನ ಸಂಶಯಃ ॥ ೨೦ ॥

೧೬–೧೭. ದೇವಿ, ನನ್ನ ಕೋಕಾಕ್ಷೇತ್ರಮಂಡಲದಲ್ಲಿ ಜಲಬಿಂದುವೆಂದು ಪ್ರಸಿದ್ಧವಾದ ಪರ್ವತದಿಂದ ಭೂಮಿಗೆ ಧುಮುಕುವ ವಿಷ್ಣುಧಾರೆಯೆಂದು ಹೆಸರುಗೊಂಡ ಒನಕೆಯಗಾತ್ರದ ಜಲಪಾತವೊಂದು ಅತಿ ರಹಸ್ಯವಾದುದು. ಅಲ್ಲಿ ಅತಿಬಲವುಳ್ಳ ಕರ್ಮವನ್ನು ಮಾಡುವವನು ಸರ್ವಸಂಗವನ್ನೂ ಪರಿತ್ಯಜಿಸಿ, ನನ್ನ ಲೋಕವನ್ನು ಸೇರುವನು.

೧೮. ಒಂದು ಹಗಲೂ ರಾತ್ರಿಯೂ ಅಲ್ಲಿ ವಾಸಮಾಡಿ, ಪ್ರಯತ್ನಪೂರ್ವಕವಾಗಿ ಆ ವಿಷ್ಣುಧಾರೆಯಲ್ಲಿ ಸ್ನಾನಮಾಡಬೇಕು. ಅದರಿಂದ ಮನುಷ್ಯನು ಸಾವಿರ ಅಗ್ನಿಷ್ಟೋಮಗಳ ಫಲವನ್ನು ಪಡೆಯುವನು.

೧೯. ಅಲ್ಲದೆ ಅವನು ತಾನು ಮಾಡತಕ್ಕ ಕಾರ್ಯಗಳಲ್ಲಿ ಭ್ರಾಂತಿಯೂ, ಅಜ್ಞಾನವೂ ಉಳ್ಳವನಾಗದೆ ಉತ್ತಮಫಲವನ್ನು ಪಡೆಯುವನು. ನನ್ನ ಮಾರ್ಗವನ್ನನುಸರಿಸುವ ಶುದ್ಧವೂ ದೊಡ್ಡದೂ ಆದ ವಂಶದಲ್ಲಿ ಹುಟ್ಟುವನು.

೨೦. ಬಳಿಕ ಆ ವಿಷ್ಣುಧಾರೆಗೆ ಹೋಗಿ ಅಲ್ಲಿ ಪ್ರಾಣಬಿಟ್ಟು ಈ ನನ್ನ ಪರಮರೂಪವನ್ನು ನೋಡುವನೆಂಬುದರಲ್ಲಿ ಸಂದೇಹವಿಲ್ಲ.

ತತ್ರ ವಿಷ್ಣುಪದಂ ನಾಮ ಸ್ಥಾನಂ ಕೋಕಾಮುಖಾಶ್ರಿತಂ ।
ಏತತ್ಕಶ್ಚಿನ್ನ ಜಾನಾತಿ ಧರೇ ವಾರಾಹಸಂಶ್ರಿತಂ ॥ ೨೧ ॥

ತಸ್ಮಿನ್ಕೃತೋದಕೋ ದೇವಿ ನರೋ ರಾತ್ರ್ಯಪ್ರೋಷಿತಃ ।
ಕ್ರೌಂಚದ್ವೀಪೇ ಪ್ರಜಾಯೇತ ಮಮ ಭಕ್ತಿಪರಾಯಣಃ ॥ ೨೨ ॥

ತತ್ರಾಥ ಮುಂಚತಿ ಪ್ರಾಣಾನ್ಗುಹ್ಯಸ್ಥಾನೇ ಪರೇ ಮಮ ।
ಸರ್ವಸಂಗಾನ್ಪರಿತ್ಯಜ್ಯ ಮಮ ಲೋಕಂ ಸ ಗಚ್ಛತಿ ॥ ೨೩ ॥

ಅಸ್ತಿ ವಿಷ್ಣುಸರೋ ನಾಮ ಕ್ರೀಡಿತಂ ಯತ್ತ್ವಯಾ ಸಹ ।
ಯತ್ರ ದಂಷ್ಟ್ರಾಪ್ರಹಾರೇಣ ಚಾಹೃತಾಸಿ ವಸುಂಧರೇ ॥ ೨೪ ॥

ತತ್ರ ಸ್ನಾನಂ ತು ಕುರ್ವೀತ ಪ್ರಾತಃಕಾಲೇ ವಸುಂಧರೇ ।
ಸರ್ವಪಾಪವಿಶುದ್ಧಾತ್ಮಾ ಮಮ ಲೋಕಂ ಸ ಗಚ್ಛತಿ ॥ ೨೫ ॥

---

೨೧. ಭೂಮೀ, ಅದೇ ಕೋಕಾಮುಖದಲ್ಲಿ ವಿಷ್ಣುಧಾರೆಯ ಸಮೀಪದಲ್ಲಿ ವಿಷ್ಣುಪದವೆಂಬ ಸ್ಥಳವಿದೆ. ವರಾಹರೂಪದಿಂದ ನಾನು ನೆಲಸಿರುವ ಅದನ್ನು ಯಾರೂ ಅರಿಯರು.

೨೨. ದೇವಿ, ರಾತ್ರಿ ಉಪವಾಸವಿದ್ದು, ಮಾರನೆಯ ಬೆಳಗ್ಗೆ ಆ ವಿಷ್ಣುಪದತೀರ್ಥದಲ್ಲಿ ಸ್ನಾನಮಾಡುವವನು ನನ್ನ ಭಕ್ತಿಯಲ್ಲಿ ನಿರತನಾಗಿ ಕ್ರೌಂಚದ್ವೀಪದಲ್ಲಿ ಹುಟ್ಟುವನು.

೨೩. ಅತ್ಯುತ್ಕೃಷ್ಟವೂ, ರಹಸ್ಯವೂ ಆದ ಆ ನನ್ನ ಸ್ಥಳದಲ್ಲಿ ಸರ್ವ ಸಂಗವನ್ನೂ ತ್ಯಜಿಸಿ ಪ್ರಾಣವನ್ನು ಬಿಟ್ಟು, ನನ್ನ ಲೋಕವನ್ನು ಸೇರುವನು.

೨೪. ವಸುಂಧರೇ, ನಿನ್ನನ್ನು ದಾಡೆಯಿಂದ ಮೀಟಿ, ಯಾವ ಸ್ಥಳದಲ್ಲಿ ಎತ್ತಿತಂದೆನೋ, ಎಲ್ಲಿ ನಿನ್ನೊಡನೆ ಕ್ರೀಡಿಸಿದೆನೋ ಆ ವಿಷ್ಣುಸರೋವರವೆಂಬುದೊಂದಿದೆ.

೨೫. ಬೆಳಗ್ಗೆ ಅದರಲ್ಲಿ ಸ್ನಾನಮಾಡುವವನು ಸರ್ವಪಾಪಗಳನ್ನೂ ಕಳೆದುಕೊಂಡು ನನ್ನ ಲೋಕವನ್ನು ಸೇರುವನು.

ಸೋಮತೀರ್ಥಮಿತಿ ಖ್ಯಾತಂ ಕೋಕಾಯಾಂ ಮಮ ಮಂಡಲೇ ।
ಯತ್ರ ಪಂಚಶಿಲಾ ಭೂಮಿಃ ವಿಷ್ಣುನಾಮ್ನಾ ತಥಾಂಕಿತಾ ॥ ೨೬ ॥

ಯಸ್ತತ್ರ ಕುರುತೇ ಸ್ನಾನಂ ಪಂಚರಾತ್ರೋಷಿತೋ ನರಃ ।
ಗೋಮೇದೇ ಜಾಯತೇ ದ್ವೀಪೇ ಮಮ ಮಾರ್ಗಾನುಸಾರಕಃ ॥ ೨೭ ॥

ತತ್ರಾಥ ಮುಂಚತಿ ಪ್ರಾಣಾನ್ಗುಹ್ಯೇ ಕ್ಷೇತ್ರೇ ಪರೇ ಮಮ ।
ಸರ್ವಪಾಪವಿನಿರ್ಮುಕ್ತಃ ಶುದ್ಧಾತ್ಮಾ ಮಾಂ ಚ ಪಶ್ಯತಿ ॥ ೨೮ ॥

ತುಂಗಕೂಟೇತಿ ವಿಖ್ಯಾತಂ ಕೋಕಾಯಾಂ ಮಮ ಮಂಡಲೇ ।
ಚತುರ್ಧಾರಾಃ ಪತಂತ್ಯತ್ರ ಪರ್ವತಾದುಚ್ಛ್ರಯಂ ಶ್ರಿತಾಃ ॥ ೨೯ ॥

ಯಸ್ತತ್ರ ಕುರುತೇ ಸ್ನಾನಂ ಪಂಚರಾತ್ರೋಷಿತೋ ನರಃ ।
ಕುಶದ್ವೀಪಂ ಸಮಾಸಾದ್ಯ ಮಮ ಲೋಕೇಷು ತಿಷ್ಠತಿ ॥ ೩೦ ॥

---

೨೬. ನನ್ನ ಕೋಕಾಮಂಡಲದಲ್ಲಿ ಸೋಮತೀರ್ಥವೆಂಬ ಪ್ರಸಿದ್ಧವಾದ ತೀರ್ಥವೊಂದಿದೆ. ಅಲ್ಲಿ ಭೂಮಿಯು ಐದುಕಲ್ಲುಗಳಿಂದ ಕೂಡಿ, ವಿಷ್ಣುವಿನ ಹೆಸರನ್ನು ಬರೆದಂತಿದೆ.

೨೭. ಐದುರಾತ್ರಿ ಅಲ್ಲಿ ವಾಸಮಾಡುತ್ತಿದ್ದು ಸ್ನಾನಮಾಡುವವನು ನನ್ನ ಮಾರ್ಗವನ್ನನುಸರಿಸುವವನಾಗಿ ಗೋಮೇದದ್ವೀಪದಲ್ಲಿ ಜನಿಸುವನು

೨೮. ರಹಸ್ಯವೂ, ಅತ್ಯುತ್ತಮವೂ ಆದ ಆ ನನ್ನ ಕ್ಷೇತ್ರದಲ್ಲಿ ಪ್ರಾಣಬಿಟ್ಟರೆ, ಸರ್ವಪಾಪಗಳನ್ನೂ ಕಳೆದುಕೊಂಡು, ಶುದ್ಧಾತ್ಮನಾಗಿ, ನನ್ನನ್ನು ಸಂದರ್ಶಿಸುವನು.

೨೯. ನನ್ನ ಆ ಕೋಕಾಮಂಡಲದಲ್ಲೇ ತುಂಗಕೂಟವೆಂದು ಪ್ರಸಿದ್ಧವಾದ ತೀರ್ಥವಿದೆ. ಎತ್ತರವಾದ ಪರ್ವತದಿಂದ ಅಲ್ಲಿ ನಾಲ್ಕುತೀರ್ಥಧಾರೆಗಳು ಬೀಳುವುವು

೩೦. ಐದುರಾತ್ರಿಗಳು ಅಲ್ಲಿ ವಾಸಮಾಡುತ್ತಿದ್ದು, ಆ ತೀರ್ಥದಲ್ಲಿ ಸ್ನಾನ ಮಾಡುವವನು ಕುಶದ್ವೀಪವನ್ನು ಸೇರಿ, ಬಳಿಕ ನನ್ನ ಲೋಕಗಳಲ್ಲಿ ನೆಲಸುವನು.

ಅನಿತ್ಯಮಾಶ್ರಮಂ ನಾಮ ಕ್ಷೇತ್ರಂ ಕರ್ಮಸುಖಾವಹಂ ।
ದೇವಾಶ್ಚ ಯನ್ನ ಜಾನಂತಿ ಕ್ವಿಂ ಪುನರ್ಮನುಜಾದಯಃ ॥ ೩೧ ॥

ತತ್ರ ಸ್ನಾತ್ವಾ ವರಾರೋಹೇ ಅಹೋರಾತ್ರೋಷಿತೋ ನರಃ ।
ಜಾಯತೇ ಪುಷ್ಕರದ್ವೀಪೇ ಮಮ ಕರ್ಮಪರಾಯಣಃ ॥ ೩೨ ॥

ಅಥ ತತ್ರ ಮೃತೋ ಭೂಮೇ ಪುಣ್ಯಕ್ಷೇತ್ರೇ ಮಹಾಶುಚಿಃ ।
ಸರ್ವಪಾಪವಿನಿರ್ಮುಕ್ತೋ ಮಮ ಲೋಕಂ ಸ ಗಚ್ಛತಿ ॥ ೩೩ ॥

ಅಸ್ತ್ಯತ್ರಾಗ್ನಿಸರೋ ನಾಮ ಪರಂ ಗುಹ್ಯಂ ಮಮ ಸ್ಥಿತಂ ।
ಪಂಚಧಾರಾಃ ಪತಂತ್ಯತ್ರ ಗಿರಿಕುಂಜಸಮಾಶ್ರಿತಾಃ ॥ ೩೪ ॥

ತತ್ರ ಚಾಪಿ ಕೃತಸ್ನಾನಃ ಪಂಚರಾತ್ರೋಷಿತೋ ನರಃ ।
ಕುಶದ್ವೀಪೇ ಚ ಜಾಯೇತ ಮಮ ಕರ್ಮಪರಾಯಣಃ ॥ ೩೫ ॥

---

೩೧. ಕರ್ಮಗಳಿಂದ ಸುಖವನ್ನುಂಟುಮಾಡುವ ಅನಿತ್ಯಾಶ್ರಮವೆಂಬ ಹೆಸರಿನ ಕ್ಷೇತ್ರವೊಂದಿದೆ. ಅದನ್ನು ದೇವತೆಗಳೂ ಅರಿಯದಿರುವಾಗ ಮನುಷ್ಯರೇ ಮೊದಲಾದವರನ್ನು ಹೇಳುವುದೇನು !

೩೨. ವರಾರೋಹೇ, ಹಗಲು ರಾತ್ರೆ ಅಲ್ಲಿದ್ದು, ಆ ತೀರ್ಥದಲ್ಲಿ ಸ್ನಾನಮಾಡುವ ಮನುಷ್ಯನು ನನ್ನ ಕರ್ಮದಲ್ಲಿ ನಿರತನಾಗಿ ಪುಷ್ಕರ ದ್ವೀಪದಲ್ಲಿ ಜನಿಸುವನು.

೩೩. ಭೂಮಿ, ಆ ಪುಣ್ಯಕ್ಷೇತ್ರದಲ್ಲಿ ಮೃತನಾದವನು ಅತಿಶುದ್ಧನೂ, ಪಾಪಗಳನ್ನೆಲ್ಲಾ ಕಳೆದುಕೊಂಡವನೂ ಆಗಿ ನನ್ನ ಲೋಕವನ್ನು ಸೇರುವನು

೩೪. ಅಲ್ಲಿ ಅಗ್ನಿಸರೋವರವೆಂಬ ಬಹು ರಹಸ್ಯವಾದ ನನ್ನ ತೀರ್ಥವೊಂದಿದೆ. ಬೆಟ್ಟದ ಮೇಲಿನ ಪೊದೆ ಅಥವಾ ಕಾಡಿನಿಂದ ಆ ಸರೋವರಕ್ಕೆ ಐದು ಜಲಧಾರೆಗಳು ಧುಮುಕುವುವು.

೩೫. ಆ ಸರೋವರತೀರದಲ್ಲಿ ಐದುರಾತ್ರೆ ವಾಸಮಾಡಿ ಸ್ನಾನಮಾಡುವವನು ಕುಶದ್ವೀಪದಲ್ಲಿ ನನ್ನ ಕರ್ಮದಲ್ಲಿ ನಿರತನಾಗಿ ಹುಟ್ಟುವನು.

ತತ್ರಾಥ ಮುಂಚತಿ ಪ್ರಾಣಾನ್ಕೃತ್ವಾ ಕರ್ಮ ಮಹೌಜಸಂ ।
ಕುಶದ್ವೀಪಾತ್ಪರಿಭ್ರಷ್ಟೋ ಬ್ರಹ್ಮಲೋಕಂ ಚ ಗಚ್ಛತಿ ॥ ೩೬ ॥

ಅಸ್ತಿ ಬ್ರಹ್ಮಸರೋ ನಾಮ ಗುಹ್ಯಂ ಕ್ಷೇತ್ರಂ ಪರಂ ಮಮ ।
ಯತ್ರ ಧಾರಾ ಪತತ್ಯೇಕಾ ಪುಣ್ಯಾ ಭೂಮಿಶಿಲಾತಲೇ ॥ ೩೭ ॥

ತತ್ರ ಸ್ನಾನಂ ಪ್ರಕುರ್ವೀತ ಪಂಚರಾತ್ರೋಷಿತೋ ನರಃ ।
ವಸತೇ ಸೂರ್ಯಲೋಕೇಷು ಮಮ ಮಾರ್ಗಾನುಸಾರಕಃ ॥ ೩೮ ॥

ತತ್ರಾಥ ಮುಂಚತಿ ಪ್ರಾಣಾನ್ಸೂರ್ಯಧಾರಾಂ ಸಮಾಶ್ರಿತಃ ।
ಸೂರ್ಯಲೋಕಮತಿಕ್ರಮ್ಯ ಮಮ ಲೋಕಂ ತು ಗಚ್ಛತಿ ॥ ೩೯ ॥

ಅಸ್ತಿಧೇನುವಟಂ ನಾಮ ಗುಹ್ಯಂ ಕ್ಷೇತ್ರಂ ಪರಂ ಮಮ ।
ಏಕಧಾರಾ ಪತತ್ಯತ್ರ ದೇವಿ ಪೂರ್ಣಾ ಶಿಲೋಚ್ಚಯಾತ್ ॥ ೪೦ ॥

---

೩೬. ಅತಿಬಲವುಳ್ಳ ಸತ್ಕರ್ಮಗಳನ್ನು ಮಾಡಿ, ಅಲ್ಲಿ ಪ್ರಾಣವನ್ನು ಬಿಟ್ಟರೆ ಕುಶದ್ವೀಪವನ್ನು ತ್ಯಜಿಸಿ, ಬ್ರಹ್ಮಲೋಕವನ್ನು ಸೇರುವನು.

೩೭. ಬ್ರಹ್ಮಸರೋವರವೆಂಬ ರಹಸ್ಯವೂ, ಉತ್ತಮವೂ ಆದ ನನ್ನ ಕ್ಷೇತ್ರವೊಂದಿದೆ. ಅಲ್ಲಿ ಭೂಮಿಯಲ್ಲಿರುವ ಒಂದು ಕಲ್ಲಿನ ಮೇಲೆ ಒಂದು ಪವಿತ್ರ ವಾದ ತೀರ್ಥಧಾರೆಯು ಬೀಳುತ್ತದೆ.

೩೮. ಅಲ್ಲಿ ಐದುರಾತ್ರೆ ವಾಸಮಾಡುತ್ತಿದ್ದು ಸ್ನಾನಮಾಡುವವನು ಸೂರ್ಯ ಲೋಕದಲ್ಲಿ ನನ್ನ ಮಾರ್ಗವನ್ನನುಸರಿಸುವವನಾಗಿ ವಾಸಮಾಡುವನು.

೩೯. ಬ್ರಹ್ಮತೀರ್ಥದ ಸೂರ್ಯಧಾರೆಯನ್ನು ಆಶ್ರಯಿಸಿ, ಮೃತನಾದರೆ ಸೂರ್ಯಲೋಕವನ್ನೂ ಅತಿಕ್ರಮಿಸಿ ನನ್ನ ಲೋಕವನ್ನು ಸೇರುವನು

೪೦. ದೇವಿ, ಧೇನುವಟವೆಂಬ ರಹಸ್ಯವಾದ ನನ್ನ ಬೇರೊಂದು ಕ್ಷೇತ್ರ ವಿದೆ. ಬೆಟ್ಟದಿಂದ ದಪ್ಪವಾದ ಒಂದು ತೀರ್ಥಧಾರೆಯು ಅಲ್ಲಿ ಬೀಳುವುದು.

ತತ್ರ ಸ್ನಾನಂ ಪ್ರಕುರ್ವೀತ ಏಕಮೇಕಂ ದಿನಂ ತಥಾ |
ಸಪ್ತರಾತ್ರೋಷಿತೋ ಭೂತ್ವಾ ಮಮ ಕರ್ಮಸಮಾಶ್ರಿತಃ || ೪೧ ||

ಸ್ನಾತ್ವಾ ಸಪ್ತಸಮುದ್ರೇಷು ಲಬ್ಧಸಂಜ್ಞಸ್ಸಮಾಹಿತಃ |
ಸಪ್ತದ್ವೀಪೇಷು ವಿಹರೇನ್ಮಮ ಕರ್ಮಪರಾಯಣಃ || ೪೨ ||

ತತ್ರಾಥ ಮುಂಚತಿ ಪ್ರಾಣಾನ್ಮಮ ಭಕ್ತಿಸಮನ್ವಿತಃ |
ಸಪ್ತದ್ವೀಪಮತಿಕ್ರಮ್ಯ ಮಮ ಲೋಕಂ ತು ಗಚ್ಛತಿ || ೪೩ ||

ಅಸ್ತಿ ಧರ್ಮೋದ್ಭವಂ ನಾಮ ತಸ್ಮಿನ್ ಕ್ಷೇತ್ರೇ ಪರೇ ಮಮ |
ಗಿರಿಕುಂಜಾತ್ಪತತ್ಯೇಕಾ ಧಾರಾ ಭೂಮಿತಲೇ ಶುಭಾ || ೪೪ ||

ತತ್ರ ಸ್ನಾನಂ ಪ್ರಕುರ್ವೀತ ಏಕರಾತ್ರೋಷಿತೋ ನರಃ |
ಸ ವೈಶ್ಯೋ ಜಾಯತೇ ಶೂದ್ರೋ ಮಮ ಕರ್ಮಪರಾಯಣಃ || ೪೫ ||

---

೪೧. ಅಲ್ಲಿ ನನ್ನ ಕರ್ಮಗಳನ್ನು ಮಾಡುತ್ತ, ಏಳುರಾತ್ರೆ ವಾಸಮಾಡಿ, ದಿನದಿನವೂ ಸ್ನಾನವನ್ನು ಮಾಡಬೇಕು.

೪೨. ಹಾಗೆ ಮಾಡುವವನು ಜ್ಞಾನಿಯೂ, ನನ್ನ ಕರ್ಮಾಸಕ್ತನೂ, ಶಾಂತನೂ ಆಗಿ ಸಪ್ತಸಮುದ್ರಗಳಲ್ಲೂ ಸ್ನಾನಮಾಡಿ, ಸಪ್ತದ್ವೀಪಗಳಲ್ಲೂ ವಿಹರಿಸುವನು.

೪೩. ನನ್ನಲ್ಲಿ ಭಕ್ತಿಯುಳ್ಳವನು ಅಲ್ಲಿ ಪ್ರಾಣಗಳನ್ನು ಬಿಟ್ಟರೆ, ಸಪ್ತದ್ವೀಪಗಳನ್ನೂ ತ್ಯಜಿಸಿ, ನನ್ನ ಲೋಕವನ್ನು ಸೇರುವನು.

೪೪. ಉತ್ಕೃಷ್ಟವಾದ ಆ ನನ್ನ ಕ್ಷೇತ್ರದಲ್ಲಿ ಧರ್ಮೋದ್ಭವವೆಂಬ ತೀರ್ಥವೊಂದಿದೆ. ಬೆಟ್ಟದ ಪೊದೆ ಅಥವಾ ಬಳ್ಳಿಯ ಮನೆಯಿಂದ ಶುಭವಾದ ತೀರ್ಥಧಾರೆಯೊಂದು ಅಲ್ಲಿ ಬೀಳುವುದು.

೪೫. ಅಲ್ಲಿ ಒಂದುರಾತ್ರೆ ವಾಸಮಾಡಿ, ಸ್ನಾನಮಾಡುವ ಶೂದ್ರನು ಬಳಿಕ ನನ್ನ ಕರ್ಮಗಳಲ್ಲಿ ನಿರತನಾದ ವೈಶ್ಯನಾಗಿ ಜನಿಸುವನು.

ತತ್ರಾಥ ಮುಂಚತಿ ಪ್ರಾಣಾನ್ಗುಹ್ಯೇ ದೇವಿ ಶಿಲೋಚ್ಚಯೇ ।
ಸಾಂಗಯಜ್ಞಂ ಸದಕ್ಷಿಣ್ಯಂ ಭುಕ್ತ್ವಾ ಮಾಂ ಪ್ರತಿಪದ್ಯತೇ ॥ ೪೬ ॥

ಅಸ್ತಿ ಕೋಟಿವಟಂ ನಾಮ ಕ್ಷೇತ್ರಂ ಗುಹ್ಯಂ ಪರಂ ಮಮ ।
ಏಕಧಾರಾ ಪತತ್ಯತ್ರ ವಟಮೂಲಮುಪಾಶ್ರಿತಾ ॥ ೪೭ ॥

ತತ್ರ ಸ್ನಾನಂ ತು ಕುರುತೇ ನರೋ ರಾತ್ರ್ಯುಪೋಷಿತಃ ।
ಯಾವಂತಿ ವಟಪತ್ರಾಣಿ ತಸ್ಮಿನ್ ಶೃಂಗೇ ಪರೇ ಮಮ ॥ ೪೮ ॥

ತಾವದ್ವರ್ಷಸಹಸ್ರಾಣಿ ರೂಪಸಂಪತ್ಸಮನ್ವಿತಃ ।
ತಿಷ್ಠತೇ ತು ವರಾರೋಹೇ ಮಮ ಮಾರ್ಗಾನುಸಾರಿಣಿ ॥ ೪೯ ॥

ತತ್ರಾಥ ಮುಂಚತಿ ಪ್ರಾಣಾನ್ಕೃತ್ವಾ ಕರ್ಮ ಸುದುಷ್ಕರಂ ।
ಅಗ್ನಿವರ್ಣಸ್ತತೋ ಭೂತ್ವಾ ಮಮ ಲೋಕಂ ಸ ಗಚ್ಛತಿ ॥ ೫೦ ॥

---

೪೬. ಸಾಂಗವೂ, ಸದಕ್ಷಿಣಾಕವೂ ಆದ ಯಜ್ಞವನ್ನು ಮಾಡಿ, ಗೂಢವಾದ ಆ ಪರ್ವತದಲ್ಲಿರುವ ಧರ್ಮೋದ್ಭವಕ್ಷೇತ್ರದಲ್ಲಿ ದೇಹವನ್ನು ತ್ಯಜಿಸಿ, ನನ್ನನ್ನು ಸೇರುವನು.

೪೭. ಕೋಟಿವಟವೆಂಬ ರಹಸ್ಯವಾದ ಬೇರೊಂದು ನನ್ನ ಕ್ಷೇತ್ರವಿದೆ. ಆಲದಮರದ ಬುಡದಲ್ಲಿ ಒಂದು ನೀರಿನ ಧಾರೆಯು ಬೀಳುತ್ತದೆ

೪೮-೫೦. ಒಂದುರಾತ್ರಿ ಉಪವಾಸವಿದ್ದು, ಅಲ್ಲಿ ಸ್ನಾನಮಾಡುವವನು, ಉತ್ಕೃಷ್ಟವಾದ ಆ ನನ್ನ ಆಲದಮರದಲ್ಲಿ ಎಷ್ಟು ಎಲೆಗಳಿವೆಯೋ ಅಷ್ಟು ಸಾವಿರವರ್ಷಕಾಲ ರೂಪಸಂಪತ್ತುಗಳುಳ್ಳವನಾಗಿರುವನು. ವರಾರೋಹೇ, ನನ್ನ ಮಾರ್ಗವನ್ನು ಅನುಸರಿಸುವವಳೇ, ದುಷ್ಕರವಾದ ಕರ್ಮಗಳನ್ನು ಮಾಡಿ, ಅಲ್ಲಿ ಪ್ರಾಣಗಳನ್ನು ಬಿಟ್ಟರೆ, ಬಳಿಕ ಅಗ್ನಿವರ್ಣವುಳ್ಳವನಾಗಿ ನನ್ನ ಲೋಕವನ್ನು ಸೇರುವನು

*ಪಾಪಪ್ರಮೋಚನಂ ನಾಮ ಗುಹ್ಯಮಸ್ಮಿನ್ಪರಂ ಮಮ ।
ಪತತ್ಯೇಕಶತಮಾ ಧಾರಾ ಸ್ಥೂಲಾ ಕುಂಭಸಮಾ ತತಃ ॥ ೫೧ ॥

ಯಸ್ತತ್ರ ಕುರುತೇ ಸ್ನಾನಮಹೋರಾತ್ರೋಷಿತೋ ನರಃ ।
ಜಾಯತೇ ಚ ಚತುರ್ವೇದೀ ಮಮ ಕರ್ಮಪರಾಯಣಃ ॥ ೫೨ ॥

ತತ್ರಾಥ ಮುಂಚತಿ ಪ್ರಾಣಾನ್ಕೌಶಿಕೀಮಾಶ್ರಿತೋ ನದೀಂ ॥ ೫೩ ॥

ಯಸ್ತತ್ರ ಕುರುತೇ ಸ್ನಾನಂ ಪಂಚರಾತ್ರೋಷಿತೋ ನರಃ ।
ಮೋದತೇ ವಾಸವೇ ಲೋಕೇ ಮಮ ಮಾರ್ಗಾನುಸಾರಿಣಿ ॥ ೫೪ ॥

ತತ್ರಾಥ ಮುಂಚತಿ ಪ್ರಾಣಾನ್ಮಮ ಕರ್ಮಪರಾಯಣಃ ।
ವಾಸವಂ ಲೋಕಮುತ್ಸೃಜ್ಯ ಮಮ ಲೋಕಂ ಚ ಗಚ್ಛತಿ ॥ ೫೫ ॥

---

೫೧. ಅದೇ ಕೋಕಾಮುಖ ಕ್ಷೇತ್ರದಲ್ಲಿ ಪಾಪಪ್ರಮೋಚನವೆಂಬ ಬೇರೊಂದು ರಹಸ್ಯವಾದ ನನ್ನ ತೀರ್ಥವಿದೆ. ಕೊಡದಷ್ಟು ಗಾತ್ರದ ಒಂದು ತೀರ್ಥಧಾರೆಯು ಅಲ್ಲಿ ಮೇಲಿಂದ ಬೀಳುತ್ತದೆ.

೫೨. ಒಂದು ಹಗಲೂ, ರಾತ್ರಿಯೂ ಉಪವಾಸಮಾಡಿ, ಆ ತೀರ್ಥದಲ್ಲಿ ಸ್ನಾನಮಾಡುವವನು ಮುಂದೆ ನನ್ನ ಕರ್ಮಗಳಲ್ಲಿ ನಿರತನೂ, ನಾಲ್ಕು ವೇದಗಳನ್ನೂ ಅರಿಯುವವನೂ ಆಗಿ ಜನಿಸುವನು.

೫೩–೫೪. ಕೌಶಿಕೀನದಿಯನ್ನು ಆಶ್ರಯಿಸಿ, ಅಲ್ಲಿ ಐದುರಾತ್ರಿ ಇದ್ದು ಸ್ನಾನಮಾಡುವವನೂ, ಅಲ್ಲಿ ಮೃತನಾಗುವವನೂ ಇಂದ್ರಲೋಕವನ್ನು ಸೇರಿ ಸಂತೋಷಪಡುವನು.

೫೫. ನನ್ನ ಕರ್ಮದಲ್ಲಿ ನಿರತನಾಗಿದ್ದು, ಇಂದ್ರಲೋಕವನ್ನು ಬಯಸದೆ ಆ ತೀರ್ಥದಲ್ಲಿ ಮೃತನಾಗುವವನು, ನನ್ನ ಲೋಕವನ್ನು ಸೇರುವನು.

---

* ಪಾಪಪ್ರಮೋಚನವೆಂಬುದು ಕೌಶಿಕೀನದಿಯಲ್ಲೇ ಒಂದು ಪ್ರದೇಶವೆಂದು ತೋರುತ್ತದೆ.

*ಯಮನಾವ್ಯಸನಕಂ ನಾಮ ಗುಹ್ಯಮಸ್ತಿ ಪರಂ ಮಮ ।
ಸ್ರೋತೋ ವಹತಿ ತತ್ರೈಕಂ ಕೌಶಿಕೀಮಾಶ್ರಿತಂ ನದೀಂ ॥ ೫೭ ॥

ಯಸ್ತತ್ರ ಕುರುತೇ ಸ್ನಾನಮೇಕರಾತ್ರೋಷಿತೋ ನರಃ ।
ನ ಸ ಗಚ್ಛತಿ ದುರ್ಗಾಣಿ ಯಮಸ್ಯ ವ್ಯಸನಂ ಮಹತ್ ॥ ೫೭ ॥

ಅಥ ತತ್ರ ತ್ಯಜೇತ್ಪ್ರಾಣಾನ್ಮಮ ಕರ್ಮಪರಾಯಣಃ ।
ವಿಶುದ್ಧೋ ಮುಕ್ತಪಾಪೋಽಸೌ ಮಮ ಲೋಕಂ ಸ ಗಚ್ಛತಿ ॥ ೫೮ ॥

ಮಾತಂಗನಾಮ ವಿಖ್ಯಾತಂ ತಸ್ಮಿನ್‌ಕ್ಷೇತ್ರೇ ಪರಂ ಮಮ ।
ಸ್ರೋತೋ ವಹತಿ ತತ್ರೈವ ಆಶ್ರಿತಂ ಕೌಶಿಕೀಂ ನದೀಂ ॥ ೫೯ ॥

ಸ್ನಾನಂ ಕುರ್ವಂತಿ ಯೇ ತತ್ರ ಏಕರಾತ್ರೋಷಿತಾ ನರಾಃ ।
ಭೇದಂ ಕಿಂಪುರುಷಂ ಪ್ರಾಪ್ಯ ಜಾಯಂತೇ ನಾತ್ರ ಸಂಶಯಃ ॥ ೬೦ ॥

---

೫೬. ಯಮನಾವ್ಯಸನಕವೆಂಬ ಗುಪ್ತವಾದ ಬೇರೊಂದು ನನ್ನ ತೀರ್ಥವಿದೆ ಕೌಶಿಕೀನದಿಯನ್ನು ಸೇರುವ ಪ್ರವಾಹವೊಂದು ಅಲ್ಲಿ ಹರಿಯುತ್ತದೆ.

೫೭. ಆ ತೀರ್ಥದಲ್ಲಿ ಒಂದು ರಾತ್ರಿ ಇದ್ದು, ಸ್ನಾನಮಾಡುವವನು ಕಷ್ಟಗಳನ್ನೂ, ಯಮನಿಂದುಂಟಾಗುವ ಮಹಾವ್ಯಸನವನ್ನೂ ಪಡೆಯುವುದಿಲ್ಲ.

೫೮. ಅಲ್ಲದೆ ನನ್ನ ಕರ್ಮದಲ್ಲಿ ನಿರತನಾಗಿದ್ದು ಅಲ್ಲಿ ಪ್ರಾಣಬಿಡುವುದರಿಂದ ಪಾಪಗಳನ್ನು ಕಳೆದುಕೊಂಡು ಶುದ್ಧನಾಗಿ ನನ್ನ ಲೋಕವನ್ನು ಸೇರುವನು.

೫೯. ಆ ಕೋಕಾಮುಖಕ್ಷೇತ್ರದಲ್ಲಿ ಮಾತಂಗವೆಂದು ಪ್ರಸಿದ್ಧವಾದ ಬೇರೊಂದು ನನ್ನ ತೀರ್ಥವಿದೆ. ಕೌಶಿಕೀನದಿಯನ್ನು ಸೇರುವ ಪ್ರವಾಹ ಅಥವಾ ಉಪನದಿಯೊಂದು ಅಲ್ಲಿ ಹರಿಯುತ್ತದೆ.

೬೦. ಅಲ್ಲಿ ಒಂದುರಾತ್ರಿ ಇದ್ದು ತೀರ್ಥದಲ್ಲಿ ಸ್ನಾನಮಾಡುವ ಮನುಷ್ಯರು ಕಿಂಪುರುಷರಾಗಿ ಜನಿಸುವುದರಲ್ಲಿ ಸಂಶಯವಿಲ್ಲ.

---

* ಯಮವ್ಯಸನಕಂ

ವಿದ್ವಾನ್ ಶುಚಿಶ್ಚ ಜಾಯೇತ ಮಮ ಕರ್ಮಾನುಸಾರಕಃ ।
ತತ್ರಾಥ ಮುಂಚತಿ ಪ್ರಾಣಾನ್ಗುಹ್ಯೇ ದೇವಿ ಪರೇ ಮಮ ।
ಮುಕ್ತ್ವಾ ಕಿಂಪುರುಷಂ ಭೇದಂ ಮಮ ಲೋಕಂ ಚ ಗಚ್ಛತಿ ॥ ೬೧ ॥

ಅಸ್ತಿ ವಜ್ರಭವಂ ನಾಮ ಗುಹ್ಯೇ ತಸ್ಮಿನ್ಪರಂ ಮಮ ।
ಸ್ರೋತೋ ವಹತಿ ತತ್ರೈಕಮಾಶ್ರಿತಂ ಕೌಶಿಕೀಂ ನದೀಂ ॥ ೬೨ ॥

ಸ್ನಾನಂ ಕರೋತಿ ಯಸ್ತತ್ರ ಏಕರಾತ್ರೋಷಿತೋ ನರಃ ।
ಜಾಯತೇ ಶಕ್ರಲೋಕೇ ತು ಮಮ ಕರ್ಮಾನುಸಾರಕಃ ॥ ೬೩ ॥

ಶರೀರಚಕ್ರಸಂಘಾತೇ ವಜ್ರಹಸ್ತಸ್ವರೂಪಕಃ ।
ತತ್ರ ಸ್ನಾನಪ್ರಭಾವೇಣ ಜಾಯತೇ ನಾತ್ರ ಸಂಶಯಃ ॥ ೬೪ ॥

ಅಥಾತ್ರ ಮುಚ್ಯತೇ ಪ್ರಾಣಾನ್ಮಮ ಚಿಂತನತತ್ಪರಃ ।
ಶಕ್ರಲೋಕಮತಿಕ್ರಮ್ಯ ಮಮ ಲೋಕಂ ಪ್ರಪದ್ಯತೇ ॥ ೬೫ ॥

---

೬೧. ದೇವಿ, ಹಾಗೆ ಕಿಂಪುರುಷರಾಗಿ ಜನಿಸಿದವರು ವಿದ್ವಾಂಸರೂ, ಪರಿಶುದ್ಧರೂ, ನನ್ನ ಕರ್ಮದಲ್ಲಿ ನಿರತರೂ ಆಗುವರು. ಗುಪ್ತವೂ, ಶ್ರೇಷ್ಠವೂ ಆದ ಆ ನನ್ನ ತೀರ್ಥದಲ್ಲಿ ಪ್ರಾಣಬಿಟ್ಟರೆ ಕಿಂಪುರುಷತ್ವವನ್ನುಳಿದು ನನ್ನ ಲೋಕವನ್ನು ಸೇರುವರು.

೬೨. ರಹಸ್ಯವಾದ ಆಯೆಡೆಯಲ್ಲಿ ವಜ್ರಭವವೆಂಬ ಬೇರೊಂದು ನನ್ನ ತೀರ್ಥವಿದೆ. ಅಲ್ಲೂ ಕೌಶಿಕೀನದಿಯನ್ನು ಸೇರುವ ಪ್ರವಾಹವೊಂದು ಹರಿಯುತ್ತದೆ.

೬೩-೬೪ ನನ್ನ ಕರ್ಮಗಳನ್ನನುಸರಿಸುವ ಮನುಷ್ಯನು ಅಲ್ಲಿ ಒಂದುರಾತ್ರಿ ಇದ್ದು ಸ್ನಾನಮಾಡಿದರೆ ಅದರ ಮಹಿಮೆಯಿಂದ ಇಂದ್ರಲೋಕದಲ್ಲಿ ಇಂದ್ರನಿಗೆ ಸಮಾನವಾದ ರೂಪವುಳ್ಳವನಾಗಿ ಹುಟ್ಟುವುದರಲ್ಲಿ ಸಂದೇಹವಿಲ್ಲ.

೬೫. ನನ್ನ ಧ್ಯಾನದಲ್ಲಿ ಆಸಕ್ತಿಯುಳ್ಳವನಾಗಿ ಆ ತೀರ್ಥದಲ್ಲಿ ಪ್ರಾಣಬಿಟ್ಟರೆ, ಇಂದ್ರಲೋಕವನ್ನು ಮೀರಿ ನನ್ನ ಲೋಕವನ್ನು ಸೇರುವನು.

ತತ್ರ ತ್ರಿಕ್ರೋಶಮಾತ್ರೇಣ ಗುಹ್ಯಂ ಕ್ಷೇತ್ರಂ ಪರಂ ಮಮ |
ಶಕ್ರರುದ್ರೇತಿ ವಿಖ್ಯಾತಂ ತಸ್ಮಿನ್ಕೋಕಾಶಿಲಾತಲೇ ॥ ೬೬ ॥

ಸ್ನಾನಂ ಕರೋತಿ ಯಸ್ತತ್ರ ತ್ರಿರಾತ್ರೋಪೋಷಿತೋ ನರಃ |
ಜಂಬೂದ್ವೀಪೇ ಪ್ರಜಾಯೇತ ಜಂಬೂರ್ಯತ್ರ ಪ್ರತಿಷ್ಠಿತಾ ॥ ೬೭ ॥

ಜಂಬೂದ್ವೀಪಂ ಪರಿತ್ಯಜ್ಯ ಜಾಯತೇ ಮಮ ಪಾರ್ಶ್ವಗಃ ॥ ೬೮ ॥

ಅಸ್ತಿ ಚಾನ್ಯನ್ಮಹದ್ಭದ್ರೇ ಕ್ಷೇತ್ರೇ ಗುಹ್ಯೇ ವಿಶೇಷಿತಂ |
ಮನುಜಾ ಯೇನ ಗಚ್ಛಂತಿ ಮುಕ್ತ್ವಾ ಸಂಸಾರಸಾಗರಂ ॥ ೬೯ ॥

ದಂಷ್ಟ್ರಾಂಕುರೇತಿ ವಿಖ್ಯಾತಂ ಯತ್ರ ಕೋಕಾ ವಿನಿಸ್ಸೃತಾ |
ಏತದ್ಗುಹ್ಯಂ ನ ಜಾನಂತಿ ಯತೋ ಮುಂಚಂತಿ ಜಂತವಃ ॥ ೭೦ ॥

೬೬–೬೭. ಆ ಕೋಕೆಯ ಶಿಲಾಪ್ರದೇಶದಲ್ಲಿ ವಜ್ರಭವತೀರ್ಥಕ್ಕೆ ಮೂರು ಹರಿದಾರಿಯಷ್ಟು ದೂರದಲ್ಲಿ ಶಕ್ರರುದ್ರವೆಂದು ಪ್ರಸಿದ್ಧವಾದ ಬೇರೊಂದು ರಹಸ್ಯವಾದ ಕ್ಷೇತ್ರವಿದೆ. ಮೂರುರಾತ್ರೆ ವಾಸಮಾಡಿ, ಅಲ್ಲಿ ಸ್ನಾನಮಾಡುವವನು ಪ್ರಸಿದ್ಧವಾದ ಜಂಬೂವೃಕ್ಷ(ನೇರಿಳೆಮರ)ವಿರುವ ಜಂಬೂದ್ವೀಪದಲ್ಲಿ ಜನಿಸುವನು.

೬೮. ಅಲ್ಲಿನ ಕಾಲವು ಕಳೆದ ಬಳಿಕ ಆ ಜಂಬೂದ್ವೀಪವನ್ನು ಬಿಟ್ಟು, ನನ್ನ ಪಕ್ಕದಲ್ಲಿರುವವನಾಗುವನು.

೬೯–೭೦. ಭದ್ರೇ, ಗುಪ್ತವಾದ ಆ ಕ್ಷೇತ್ರದಲ್ಲಿ ಕೋಕೆಯು ಉದ್ಭವಿಸುವ ಸ್ಥಳವೂ, ಮನುಷ್ಯರನ್ನು ಸಂಸಾರಸಾಗರದಿಂದ ದಾಟಿಸುವುದೂ, ದಂಷ್ಟ್ರಾಂಕುರವೆಂದು ಪ್ರಸಿದ್ಧವಾದುದೂ ಆದ ವಿಶೇಷಮಹಿಮೆಯುಳ್ಳ ತೀರ್ಥವೊಂದಿದೆ. ಜಂತುಗಳಿಗೆ ಮುಕ್ತಿಯನ್ನುಂಟುಮಾಡುವ ಆ ರಹಸ್ಯತೀರ್ಥವನ್ನು ಅವು ಅರಿಯವು.

ಕೃತೋದಕಸ್ತತ್ರ ಭದ್ರೇ ಅಹೋರಾತ್ರೋಷಿತೋ ನರಃ ।
ಜಾಯತೇ ಶಾಲ್ಮಲಿದ್ವೀಪೇ ಮಮ ಕರ್ಮಾನುಸಾರಿಣಿ ॥ ೭೧ ॥

ತತ್ರಾಥ ಮುಂಚತಿ ಪ್ರಾಣಾನ್ಮಮ ಕರ್ಮಸು ನಿಷ್ಠಿತಃ ।
ಶಾಲ್ಮಲಿದ್ವೀಪಮುತ್ಸೃಜ್ಯ ಮಮ ಪಾರ್ಶ್ವೇ ಸ ತಿಷ್ಠತಿ ॥ ೭೨ ॥

ತಸ್ಮಿನ್‌ಕ್ಷೇತ್ರೇ ಮಹಾಗುಹ್ಯೇ ಪರಮಸ್ತಿ ಫಲೋದಯಂ ।
ವಿಷ್ಣುತೀರ್ಥಮಿತಿ ಖ್ಯಾತಂ ಮಮ ಭಕ್ತಸುಖಾವಹಂ ॥ ೭೩ ॥

ತತಃ ಪರ್ವತಮಧ್ಯಾತ್ತು ಕೋಕಾಯಾಂ ಪತತೇ ಜಲಂ ।
ತ್ರಿಸ್ರೋತಸಂ ಮಹಾಭಾಗೇ ಸರ್ವಸಂಸಾರಮೋಕ್ಷಣಂ ॥ ೭೪ ॥

ತಸ್ಮಿನ್ಕೃತೋದಕೋ ಭೂಮೇ ಛಿತ್ವಾ ಸಂಸಾರಬಂಧನಂ ।
ವಾಯೋಸ್ಸ ಭವನಂ ಪ್ರಾಪ್ಯ ವಾಯುಭೂತಸ್ತು ತಿಷ್ಠತಿ ॥ ೭೫ ॥

---

೭೧. ಭದ್ರೇ, ಆ ದಂಷ್ಟ್ರಾಂಕುರತೀರ್ಥದಲ್ಲಿ ಒಂದು ಹಗಲೂ ರಾತ್ರಿಯೂ ಇದ್ದು, ಸ್ನಾನಾದಿಗಳನ್ನು ಮಾಡುವವನು ನನ್ನ ಕರ್ಮಗಳನ್ನು ಅನುಸರಿಸುವ ಶಾಲ್ಮಲಿದ್ವೀಪದಲ್ಲಿ ಜನಿಸುವನು.

೭೨. ಅಲ್ಲಿನ ಕಾಲವು ಕಳೆದ ಬಳಿಕ ಆ ದ್ವೀಪವನ್ನು ಬಿಟ್ಟು, ಮತ್ತೆ ದಂಷ್ಟ್ರಾಂಕುರತೀರ್ಥದಲ್ಲಿ ಬಂದು ನನ್ನ ಕರ್ಮಗಳನ್ನು ಆಚರಿಸಿ ಪ್ರಾಣಬಿಟ್ಟು, ನನ್ನ ಪಕ್ಕದಲ್ಲಿ ಬಂದು ನೆಲಸುವನು.

೭೩. ಬಹುಗುಪ್ತವಾದ ಆ ಕ್ಷೇತ್ರದಲ್ಲಿ, ಉತ್ತಮಫಲಪ್ರದವೂ, ನನ್ನ ಭಕ್ತರಿಗೆ ಸುಖಕರವೂ ಆದ ವಿಷ್ಣುತೀರ್ಥವೆಂಬ ಪ್ರಸಿದ್ಧವಾದ ತೀರ್ಥವಿದೆ.

೭೪. ಪರ್ವತಮಧ್ಯದಲ್ಲಿರುವ ಅದರಿಂದ ಸರ್ವಸಂಸಾರವಿಮೋಚಕವಾದ ತೀರ್ಥವು ಮೂರುಭಾಗ ಅಥವಾ ಶಾಖೆಯಾಗಿ ಧುಮುಕುವುದು.

೭೫. ಭೂಮೀ, ಆ ವಿಷ್ಣುತೀರ್ಥದಲ್ಲಿ ಸ್ನಾನಾದಿಗಳನ್ನು ಮಾಡುವವನು ಜನ್ಮಸಂಸಾರದ ಕಟ್ಟನ್ನು ಹರಿದು, ವಾಯುಲೋಕಕ್ಕೆ ಹೋಗಿ ವಾಯುವಾಗಿ ನೆಲಸುವನು.

ತತ್ರಾಥ ಮುಂಚತಿ ಪ್ರಾಣಾನ್ಮಮ ಕರ್ಮಸು ನಿಶ್ಚಿತಃ |
ವಾಯುಲೋಕಮತಿಕ್ರಮ್ಯ ಮಮ ಲೋಕಂ ಸ ಗಚ್ಛತಿ || ೭೬ ||

ಅಸ್ತಿ ತತ್ರ ವರಂ ಸ್ಥಾನಂ ಸಂಗಮಂ ಕೌಶಿಕೋಕಯೋಃ |
ಸರ್ವಕಾಮಿಕೇತಿ ವಿಖ್ಯಾತಾ ಶಿಲಾ ತಿಷ್ಠತಿ ಚೋತ್ತರೇ || ೭೭ ||

ತತ್ರ ಯಃ ಕುರುತೇ ಸ್ನಾನಮಹೋರಾತ್ರೋಷಿತೋ ನರಃ |
ವಿಶೀರ್ಣೇ ಜಾಯತೇ ವಂಶೇ ಜಾತಿಂ ಸ್ಮರತಿ ಚಾತ್ಮನಃ || ೭೮ ||

ಸ್ವರ್ಗೇ ವಾ ಯದಿ ವಾ ಭೂಮೌ ಯಂ ಯಂ ಕಾಮಯತೇ ನರಃ |
ತಂ ತಂ ಪ್ರಾಪ್ನೋತಿ ವೈ ಕಾಮಂ ಸ್ನಾತಮಾತ್ರಶ್ಶಿಲಾತಲೇ || ೭೯ ||

ತತ್ರಾಥ ಮುಂಚತಿ ಪ್ರಾಣಾನ್ಮಮ ಕರ್ಮಣ್ಯವಸ್ಥಿತಃ |
ಸರ್ವಸಂಗಂ ಪರಿತ್ಯಜ್ಯ ಮಮ ಲೋಕಂ ಸ ಗಚ್ಛತಿ || ೮೦ ||

---

೭೬. ನನ್ನ ಕರ್ಮಗಳಲ್ಲಿ ನಿಷ್ಠನಾಗಿ ಅಲ್ಲಿ ಪ್ರಾಣವನ್ನು ಬಿಟ್ಟು ವಾಯು ಲೋಕವನ್ನುಳಿದು ನನ್ನ ಲೋಕವನ್ನು ಸೇರುವನು.

೭೭. ಆ ಕೋಕಾಕ್ಷೇತ್ರದಲ್ಲಿ ಕೌಶಿಕೀಕೋಕಾನದಿಗಳ ಸಂಗಮದ ಶ್ರೇಷ್ಠ ವಾದ ಸ್ಥಾನವಿದೆ. ಅದಕ್ಕೆ ಉತ್ತರದಲ್ಲಿ ಸರ್ವಕಾಮಿಕೆಯೆಂಬ ಪ್ರಸಿದ್ಧವಾದ ಶಿಲೆಯಿದೆ.

೭೮. ಅಲ್ಲಿ ಒಂದು ಹಗಲೂ ಒಂದು ರಾತ್ರಿಯೂ ಇದ್ದು, ಆ ಶಿಲೆಯ ಮೇಲೆ ಸ್ನಾನಮಾಡುವವನು ದೊಡ್ಡದಾದ ಒಳ್ಳೆಯ ವಂಶದಲ್ಲಿ ಹುಟ್ಟಿ, ತನ್ನ ಹಿಂದಿನ ಜನ್ಮಗಳನ್ನೆಲ್ಲಾ ಜ್ಞಾಪಿಸಿಕೊಳ್ಳುವನು.

೭೯. ಸ್ವರ್ಗದಲ್ಲಾಗಲಿ, ಭೂಮಿಯಲ್ಲಾಗಲಿ ಯಾವಯಾವುದನ್ನು ಬಯಸುವನೋ ಅದೆಲ್ಲವನ್ನೂ ಆ ಸ್ನಾನಮಾತ್ರದಿಂದ ಪಡೆಯುವನು.

೮೦. ನರನು ಸರ್ವಸಂಗವನ್ನೂ ಪರಿತ್ಯಜಿಸಿ, ನನ್ನ ಕರ್ಮದಲ್ಲಿ ನಿರತ ನಾಗಿದ್ದು ಅಲ್ಲಿ ಪ್ರಾಣಬಿಟ್ಟು ನನ್ನ ಲೋಕವನ್ನು ಸೇರುವನು.

ಅಸ್ತಿ ಮತ್ಸ್ಯಶಿಲಾ ನಾಮ ಗುಹ್ಯಂ ಕೋಕಾಮುಖೇ ವರಂ ।
ಧಾರಾಃ ಪತಂತಿ ತಿಸ್ರೋ ವೈ ಕೌಶಿಕೀಮಾಶ್ರಿತಾ ನದೀಂ ॥ ೮೧ ॥

ತತ್ರ ಚ ಸ್ನಾಯಮಾನಸ್ತು ಯದಿ ಮತ್ಸ್ಯಂ ಪ್ರಪಶ್ಯತಿ ।
ತತೋ ಜಾನಾಮ್ಯಹಂ ದೇವಿ ಪ್ರಾಪ್ತೋ ನಾರಾಯಣಃ ಸ್ವಯಂ ॥ ೮೨ ॥

ತತ್ರ ಮತ್ಸ್ಯಂ ಪುನರ್ದೃಷ್ಟ್ವಾ ಯಜಮಾನಸ್ತು ಸುಂದರಿ ।
ದದ್ಯಾದರ್ಘ್ಯಂ ತತೋ ಭದ್ರೇ ಮಧುಲಾಜಸಮನ್ವಿತಂ ॥ ೮೩ ॥

ಯಸ್ತತ್ರ ಕುರುತೇ ಸ್ನಾನಂ ದೇವಿ ಗುಹ್ಯೇ ತತಃ ಪರೇ ।
ತಿಷ್ಠತೇ ಪದ್ಮಪತ್ರೇ ತು ಸೋತ್ತರೇ ಮೇರುಸಂಶ್ರಿತೇ ॥ ೮೪ ॥

ಅಥ ಸಂಪ್ರಾಪ್ಯ ಮುಚ್ಯೇತ ಮತ್ಸ್ಯಂ ಗುಹ್ಯಂ ಪರಂ ಮಮ ।
ಮೇರುಶೃಂಗಂ ಸಮುಲ್ಲಂಘ್ಯ ಮಮ ಲೋಕಂ ಚ ಗಚ್ಛತಿ ॥ ೮೫ ॥

---

೮೧. ಅದೇ ಕೋಕಾಮುಖದಲ್ಲಿ ಉತ್ತಮವೂ, ರಹಸ್ಯವೂ ಆದ ಮತ್ಸ್ಯ ಶಿಲೆಯೆಂಬುದೊಂದಿದೆ. ಕೌಶಿಕೀನದಿಗೆ ಸೇರುವ ನೀರಿನ ಮೂರು ಧಾರೆಗಳು ಆ ಮತ್ಸ್ಯಶಿಲೆಯಲ್ಲಿ ಧುಮುಕುತ್ತವೆ.

೮೨. ದೇವಿ, ಅಲ್ಲಿ ಸ್ನಾನಮಾಡುತ್ತಿರುವವನು (ಮತ್ಸ್ಯ)ಮೀನನ್ನು ಕಂಡನಾದರೆ, ನಾರಾಯಣನಾದ ನಾನೇ ಪ್ರತ್ಯಕ್ಷವಾಗಿ ಕಾಣಿಸಿಕೊಂಡೆನೆಂದು ಭಾವಿಸುತ್ತೇನೆ.

೮೩. ಭದ್ರೇ, ಸುಂದರಿ, ಸ್ನಾನಮಾಡುವ ಭಕ್ತನು ಅಲ್ಲಿ ಮತ್ಸ್ಯವನ್ನು ಕಂಡರೆ, ಬಳಿಕ ಮತ್ಸ್ಯರೂಪಿಯಾದ ನನ್ನನ್ನು ಕಂಡೆನೆಂದು ತಿಳಿದು, ಜೇನು ತುಪ್ಪ ಅರಳುಗಳಿಂದ ಕೂಡಿದ ಅರ್ಘ್ಯವನ್ನು ಅರ್ಪಿಸಬೇಕು.

೮೪. ದೇವಿ, ಶ್ರೇಷ್ಠವೂ, ಗುಪ್ತವೂ ಆದ ಆ ತೀರ್ಥದಲ್ಲಿ ಸ್ನಾನಮಾಡುವವನು ಬಳಿಕ ಮೇರುಪರ್ವತದಲ್ಲಿರುವ ಶ್ರೇಷ್ಠವಾದ ಕಮಲದಳದಲ್ಲಿ ನೆಲಸುವನು.

೮೫. ಆಮೇಲೆ ಮತ್ತೆ ನನ್ನ ಉತ್ತಮವೂ, ರಹಸ್ಯವೂ, ಆದ ಮತ್ಸ್ಯ ತೀರ್ಥಕ್ಕೆ ಬಂದು, ಪ್ರಾಣಬಿಟ್ಟು ಮೇರುವನ್ನತಿಕ್ರಮಿಸಿ, ನನ್ನ ಲೋಕವನ್ನು ಸೇರುವನು.

ಪಂಚಯೋಜನವಿಸ್ತಾರಂ ಕ್ಷೇತ್ರಂ ಕೋಕಾಮುಖಂ ಮಮ ।
ಯಸ್ತ್ವೇತತ್ತು ವಿಜಾನಾತಿ ನ ಸ ಪಾಪೇನ ಲಿಪ್ಯತೇ ॥ ೮೬ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ॥ ೮೭ ॥

ತಸ್ಮಿನ್ಕೋಕಾಮುಖೇ ರಮ್ಯೇ ತಿಷ್ಠಾಮಿ ದಕ್ಷಿಣಾಮುಖಃ ।
ಶಿಲಾಚಂದನಸಂಕಾಶಂ ದೇವಾನಾಮಪಿ ದುರ್ಲಭಂ ।
ವರಾಹರೂಪಮಾದಾಯ ತಿಷ್ಠಾಮಿ ಪುರುಷಾಕೃತಿಃ ॥ ೮೮ ॥

ವಾಮೋನ್ನತಮುಖಂ ಕೃತ್ವಾ ವಾಮದಂಷ್ಟ್ರಾಸಮುನ್ನತಂ ।
ಪಶ್ಯಾಮಿ ಚ ಜಗತ್ಸರ್ವಂ ಯೇ ಚ ಭಕ್ತಾ ಮಮ ಪ್ರಿಯಾಃ ॥ ೮೯ ॥

ಯೇ ಮಾಂ ಸ್ಮರಂತಿ ವೈ ಭೂಮೇ ಪುರುಷಾ ಮುಕ್ತಕಿಲ್ಬಿಷಾಃ ।
ತತ್ರ ಕುರ್ವಂತಿ ಕರ್ಮಾಣಿ ಶುದ್ಧಾಸ್ಸಂಸಾರಮೋಕ್ಷಣೇ ॥ ೯೦ ॥

---

೮೬. ನನ್ನ ಕೋಕಾಮುಖಕ್ಷೇತ್ರವು ಐದುಯೋಜನ(ಗಾವುದ)ವಿಸ್ತಾರವುಳ್ಳದಾಗಿರುವುದು. ಇದನ್ನು ತಿಳಿಯುವವನಿಗೆ ಪಾಪವು ಅಂಟುವುದಿಲ್ಲ.

೮೭–೮೮. ವಸುಂಧರೇ, ಬೇರೆಯವಿಚಾರವನ್ನೂ ಹೇಳುತ್ತೇನೆ, ಕೇಳು. ಮನೋಹರವಾದ ಆ ಕೋಕಾಮುಖಕ್ಷೇತ್ರದಲ್ಲಿ, ನಾನು ದೇವತೆಗಳಿಗೂ ದುರ್ಲಭವಾದ, ಶ್ರೀಗಂಧದಬಣ್ಣದ ಶಿಲೆಯ ಪುರುಷವರಾಹರೂಪವನ್ನು ಧರಿಸಿ ದಕ್ಷಿಣಾಭಿಮುಖನಾಗಿ ನೆಲಸಿರುವೆನು.

೮೯–೯೦. ಎಡಗಡೆಗೆ ಎಂದರೆ ಪೂರ್ವದ ಕಡೆಗೆ ಮುಖವನ್ನೆತ್ತಿಕೊಂಡು, ನನ್ನ ಎಡದಾಡೆಯ ಮೇಲೆ ಉನ್ನತವಾಗಿರುವ ಸರ್ವಜಗತ್ತನ್ನೂ ನೋಡುತ್ತಿರುವೆನು. ಭೂಮೀ, ನನ್ನ ಭಕ್ತರೂ, ನನಗೆ ಇಷ್ಟರೂ ಆಗಿ, ನನ್ನನ್ನು ಸ್ಮರಿಸುವವರು ಆ ನನ್ನ ಕ್ಷೇತ್ರದಲ್ಲಿ ಕರ್ಮಗಳನ್ನು ಮಾಡಿ, ಪಾಪಗಳನ್ನು ಕಳೆದುಕೊಂಡು ಶುದ್ಧರಾಗಿ, ಸಂಸಾರವಿಮೋಚನೆಗೆ ಅರ್ಹರಾಗುವರು.

ಯದಿ ಕೋಕಾಮುಖಂ ಗಚ್ಛೇತ್ಕದಾಚಿತ್ಕಾಲಪರ್ಯಯೇ ।
ಮಾ ತತೋ ವಿನಿವರ್ತೇತ ಯದೀಚ್ಛೇನ್ಮತುಲ್ಯತಾಂ ॥ ೯೧ ॥

ಗುಹ್ಯಾನಾಂ ಪರಮಂ ಗುಹ್ಯಮೇತತ್ ಸ್ಥಾನಂ ಪರಂ ಮಹತ್ ।
ಸಿದ್ಧಾನಾಂ ಪರಮಾ ಸಿದ್ಧಿರ್ಗುಹ್ಯಂ ಕೋಕಾಮುಖಂ ಪರಂ ॥ ೯೨ ॥

ನ ಚ ಸಾಂಖ್ಯೇನ ಯೋಗೇನ ಸಿದ್ಧಿಂ ಯಾಂತಿ ಮಹಾಪರಾಂ ।
ಯಾಂತಿ ಕೋಕಾಮುಖಂ ಗತ್ವಾ ರಹಸ್ಯಂ ಕಥಿತಂ ಮಯಾ ॥ ೯೩ ॥

ಏವಂ ಶ್ರೇಷ್ಠಂ ಮಹಾಭಾಗೇ ಯತ್ತ್ವಯಾ ಪರಿಪೃಚ್ಛಿತಂ ।
ಪರಮಂ ಕಥಿತಂ ಸರ್ವಂ ಕಿಮನ್ಯಚ್ಛ್ರೋತುಮಿಚ್ಛಸಿ ॥ ೯೪ ॥

ಯೇನೈತತ್ಕಥಿತಂ ಭೂಮೇ ಕೋಕಾಮುಖಮನುತ್ತಮಂ ।
ತಾರಿತಾಃ ಪಿತರಸ್ತೇನ ದಶ ಪೂರ್ವಾಸ್ತಥಾಪರಾಃ ॥ ೯೫ ॥

---

೯೧. ಕಾಲವು ನಡೆಯುತ್ತಿರುವಲ್ಲಿ ಎಂದಾದರೂ ಕೋಕಾಮುಖಕ್ಷೇತ್ರಕ್ಕೆ ಹೋಗುವವನು, ನನ್ನಂತೆ ಆಗಬೇಕೆಂದು ಎಂದರೆ ನನ್ನ ಸಾರೂಪ್ಯವನ್ನು ಪಡೆಯಬೇಕೆಂದು ಬಯಸುವುದಾದರೆ, ಅಲ್ಲಿಂದ ಹಿಂದಿರುಗದಿರಬೇಕು.

೯೨. ಅದು, ರಹಸ್ಯವಾದುವುಗಳಲ್ಲಿ ಅತಿರಹಸ್ಯವೂ, ಅತಿಶ್ರೇಷ್ಠವೂ ಆದ ಕ್ಷೇತ್ರ. ಶ್ರೇಷ್ಠವಾದ ಆ ಕೋಕಾಮುಖವು ಸಿದ್ಧರಿಗೆ ಪರಮಸಿದ್ಧಿರೂಪವಾದುದು.

೯೩. ಭಕ್ತರು, ಸಾಂಖ್ಯದಿಂದಲೂ, ಯೋಗದಿಂದಲೂ ಪಡೆಯಲಾಗದ ಮಹಾಪರಮಸಿದ್ಧಿಯನ್ನು ಕೋಕಾಮುಖಕ್ಷೇತ್ರಕ್ಕೆ ಹೋಗಿ ಪಡೆಯುವರು. ಈ ಗುಟ್ಟನ್ನು ನಿನಗೆ ಹೇಳಿದ್ದೇನೆ.

೯೪. ಮಹಾಭಾಗ್ಯೇ, ಪುಣ್ಯಕ್ಷೇತ್ರಗಳಲ್ಲಿ ಶ್ರೇಷ್ಠವಾದುದಾವುದೆಂದು ನೀನು ಕೇಳಿದೆಯಷ್ಟೆ! ಪರಮಕ್ಷೇತ್ರವನ್ನೂ, ಅದರಲ್ಲಿರುವ ತೀರ್ಥಗಳೆಲ್ಲವನ್ನೂ ಹೇಳಿದ್ದೇನೆ. ಬೇರೇನನ್ನು ಕೇಳಬೇಕೆಂದಿರುವೆ ?

೯೫. ಭೂಮೀ, ಅತ್ಯುತ್ತಮವಾದ ಈ ಕೋಕಾಮುಖಕ್ಷೇತ್ರವಿಚಾರವನ್ನು ಹೇಳುವವನು ತನ್ನ ಹಿಂದಿನ ಹತ್ತು ತಲೆಯ ಪಿತೃಗಳನ್ನೂ, ಮುಂದಿನ ಹತ್ತು ತಲೆಯವರನ್ನೂ ಸಂಸಾರಸಾಗರದಿಂದ ದಾಟಿಸುವನು.

ಮೃತೋ ವಾ ತತ್ರ ಜಾಯೇತ ಶುದ್ಧೇ ಭಾಗವತೇ ಕುಲೇ ।
ಅನನ್ಯಮಾನಸೋ ಭೂತ್ವಾ ಮಮ ಮಾರ್ಗಪ್ರದರ್ಶಕಃ ॥ ೯೬ ॥

ಯಶ್ಚೇದಂ ಶೃಣುಯಾನ್ನಿತ್ಯಂ ಕಲ್ಯ ಉತ್ಥಾಯ ಮಾನವಃ ।
ತ್ಯಕ್ತ್ವಾ ಪಂಚಶತಂ ಜನ್ಮ ಮಮ ಭಕ್ತಶ್ಚ ಜಾಯತೇ ॥ ೯೭ ॥

ಯ ಏತತ್ಪಠತೇ ನಿತ್ಯಂ ಕೋಕಾಖ್ಯಾನಂ ತಥೋಷಸಿ ।
ಗಚ್ಛತೇ ಪರಮಂ ಸ್ಥಾನಮೇವಮೇತನ್ನ ಸಂಶಯಃ ॥ ೯೮ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಕೋಕಾಮುಖಮಾಹಾತ್ಮ್ಯ ವರ್ಣನಂ ನಾಮ ಚತ್ವಾರಿಂಶದಧಿಕ ಶತತಮೋಽಧ್ಯಾಯಃ

---

೯೬. ಆ ಕೋಕಾಕ್ಷೇತ್ರದಲ್ಲಿ ಉದ್ದೇಶವಿಲ್ಲದೆ ಆಕಸ್ಮಾತ್ತಾಗಿ ಮೃತನಾದವನೂ ಬಳಿಕ ಶುದ್ಧವಾದ ಭಾಗವತರ ವಂಶದಲ್ಲಿ ಹುಟ್ಟಿ ನನ್ನ ಮಾರ್ಗವನ್ನು ಇತರರಿಗೆ ಅನನ್ಯಮನಸ್ಕನಾಗಿ ತೋರಿಸುವವನಾಗುವನು.

೯೭. ನಿತ್ಯವೂ ಬೆಳಗ್ಗೆ ಎದ್ದು ಈ ವಿಚಾರವನ್ನು ಮನಸ್ಸಿಟ್ಟು ಕೇಳುವವನು ಐನೂರುಜನ್ಮಗಳನ್ನು ತಪ್ಪಿಸಿಕೊಂಡು, ನನ್ನ ಭಕ್ತನಾಗಿ ಜನಿಸುವನು.

೯೮. ಅಲ್ಲದೆ ಈ ಕೋಕಾಕ್ಷೇತ್ರಚರಿತ್ರೆಯನ್ನು ನಿತ್ಯವೂ ಬೆಳಗ್ಗೆ ಹೇಳುವವನು ಪರಮಪದವನ್ನು ಸೇರುವುದರಲ್ಲಿ ಸಂದೇಹವಿಲ್ಲ.

ಅಧ್ಯಾಯದ ಸಾರಾಂಶ :—

ಪುಣ್ಯಕ್ಷೇತ್ರಗಳಲ್ಲಿ ಉತ್ತಮವಾದುದಾವುದೆಂದು ಪ್ರಶ್ನಿಸಿದ ಭೂದೇವಿಗೆ ಶ್ರೀವರಾಹನು, ಕೋಕಾಮುಖಕ್ಷೇತ್ರವೇ ಅತ್ಯುತ್ತಮವಾದುದೆಂದು ಹೇಳಿ, ಅದರ ಮಹಿಮೆಯನ್ನೂ, ಅದರಲ್ಲಿರುವ ತೀರ್ಥಗಳ ವಿಚಾರವನ್ನೂ, ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರನಲವತ್ತನೆಯ ಅಧ್ಯಾಯ.

|| ಶ್ರೀಃ ||

—x—

ಏಕಚತ್ವಾರಿಂಶದಧಿಕಶತತಮೋಧ್ಯಾಯಃ

ಅಥ ಬದರಿಕಾಶ್ರಮಮಾಹಾತ್ಮ್ಯಂ

ತಸ್ಮಿನ್ ಹಿಮವತಃ ಪೃಷ್ಠೇ ಪರಂ ಗುಹ್ಯಮತಃ ಶೃಣು ।
ಬದರೀತಿ ಚ ವಿಖ್ಯಾತಾ ದೇವಾನಾಮಪಿ ದುರ್ಲಭಾ || ೧ ||

ನ ತತ್ಪ್ರಾಪ್ನೋತಿ ಮನುಜಃ ಕೃತ್ವಾ ಕರ್ಮ ಸುದುಷ್ಕರಂ ।
ಪ್ರಾಪ್ನುವಂತಿ ಚ ಭಕ್ತಾಯೇ ಬದರೀಂ ವಿಶ್ವತಾರಿಣೀಂ || ೨ ||

ದುರ್ಲಭಂ ತನ್ಮಮ ಕ್ಷೇತ್ರಂ ಹಿಮಕೂಟಶಿಲಾತಲೇ ।
ಯಸ್ತತ್ಪ್ರಾಪ್ನೋತಿ ಹಿಕ್ಷೇತ್ರಂ ಕೃತಕೃತ್ಯೋ ಭವೇನ್ನರಃ || ೩ ||

ನೂರನಲವತ್ತೊಂದನೆಯ ಅಧ್ಯಾಯ.

ಬದರಿಕಾಶ್ರಮ ಮಹಿಮೆ.

೧. ಭೂದೇವಿ, ಆ ಹಿಮವತ್ಪರ್ವತದ ತಪ್ಪಲಿನಲ್ಲಿರುವ ಶ್ರೇಷ್ಠವೂ, ರಹಸ್ಯವೂ ಆದ ಮತ್ತೊಂದು ಕ್ಷೇತ್ರವಿಚಾರವನ್ನೂ ಕೇಳು. ದೇವತೆಗಳಿಗೂ ದುರ್ಲಭವಾದ, ಬದರಿಯೆಂದು ಪ್ರಸಿದ್ಧವಾದ ಕ್ಷೇತ್ರವಿದೆ.

೨. ಪ್ರಪಂಚವನ್ನೇ ಉತ್ತಾರಣಮಾಡುವ ಮತ್ತು ಭಕ್ತರಾದವರು ಪಡೆಯುವ ಆ ಕ್ಷೇತ್ರವನ್ನು ಅತಿಕಷ್ಟವಾದ ಕರ್ಮವನ್ನು ಮಾಡಿದಮಾತ್ರಕ್ಕೇ ಮನುಷ್ಯನು ಪಡೆಯಲಾರನು.

೩. ಕಷ್ಟದಿಂದ ಸೇರಬಹುದಾದ ಆ ನನ್ನ ಕ್ಷೇತ್ರವು ಹಿಮರಾಶಿಯ ಕಲ್ಲಿನ ಪ್ರದೇಶದಲ್ಲಿದೆ. ಅದನ್ನು ಸೇರುವ ಮನುಷ್ಯನು ಧನ್ಯನಾಗುವನು.

ಬ್ರಹ್ಮಕುಂಡಮಿತಿ ಖ್ಯಾತಂ ಆಸ್ತೇ ತತ್ರ ಶಿಲೋಚ್ಚಯೇ ।
ಹಿಮಸಂಸ್ಥಂ ತಥಾತ್ಮಾನಂ ಕೃತ್ವಾ ತಿಷ್ಠಾಮಿ ಮಾಧವಿ ॥ ೪ ॥

ಸ್ನಾನಂ ಕರೋತಿ ಯಸ್ತತ್ರ ತ್ರಿರಾತ್ರೋಪೋಷಿತೋ ನರಃ ।
ಅಗ್ನಿಷ್ಟೋಮಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತಿ ಮಾನವಃ ॥ ೫ ॥

ಮುಂಚೇತ್ಪ್ರಾಣಾಂಸ್ತತ್ರ ಯದಿ ವ್ರತನಿಷ್ಠೋ ಜಿತೇಂದ್ರಿಯಃ ।
ಸತ್ಯಲೋಕಮತಿಕ್ರಮ್ಯ ಮಮ ಲೋಕಂ ಚ ಗಚ್ಛತಿ ॥ ೬ ॥

ಅಗ್ನಿಸತ್ಯಪದಂ ನಾಮ ತಸ್ಮಿನ್ ಕ್ಷೇತ್ರೇ ಪರಂ ಮಮ ।
ಶೃಂಗತ್ರಯಾತ್ಪತಂತ್ಯತ್ರ ಧಾರಾ ಮುಸಲಸನ್ನಿಭಾಃ ॥ ೭ ॥

ಯಸ್ತತ್ರ ಕುರುತೇ ಸ್ನಾನಂ ತ್ರಿರಾತ್ರೋಪೋಷಿತೋ ನರಃ ।
ಸತ್ಯವಾದೀ ಭವೇದ್ದಕ್ಷೋ ಮಮ ಕರ್ಮಪರಾಯಣಃ ॥ ೮ ॥

---

೪. ಆ ಬದರೀ ಕ್ಷೇತ್ರದಲ್ಲಿ ಬೆಟ್ಟದಲ್ಲಿ ಹಿಮಕುಂಡವೆಂದು ಪ್ರಸಿದ್ಧವಾದ ತೀರ್ಥವೊಂದಿದೆ. ಮಾಧವಿ, ನಾನು ನನ್ನನ್ನು ಹಿಮದಲ್ಲಿರುವವನನ್ನಾಗಿ ಮಾಡಿಕೊಂಡು ಅಲ್ಲಿದ್ದೇನೆ.

೫. ಮೂರುರಾತ್ರಿ ಉಪವಾಸಮಾಡಿ, ಆ ತೀರ್ಥದಲ್ಲಿ ಸ್ನಾನಮಾಡುವವನು ಅಗ್ನಿಷ್ಟೋಮಯಜ್ಞದ ಫಲವನ್ನು ಪಡೆಯುವನು.

೬. ಜಿತೇಂದ್ರಿಯನೂ, ವ್ರತನಿಷ್ಠನೂ ಆಗಿ ಅಲ್ಲಿ ಪ್ರಾಣವನ್ನು ಬಿಡುವವನು ಸತ್ಯಲೋಕವನ್ನೂ ದಾಟಿ, ನನ್ನ ಲೋಕವನ್ನು ಸೇರುವನು.

೭. ಆ ಬದರೀಕ್ಷೇತ್ರದಲ್ಲಿ ಅಗ್ನಿಸತ್ಯಪದವೆಂಬ ಬೇರೊಂದು ನನ್ನ ತೀರ್ಥವಿದೆ. ಅಲ್ಲಿ ಮೂರುಶಿಖರಗಳಿಂದ ಒನಕೆಯಷ್ಟು ಗಾತ್ರದ ಧಾರೆಗಳು ಧುಮುಕುತ್ತವೆ.

೮. ಮೂರುರಾತ್ರೆ ಉಪವಾಸಮಾಡಿ, ಆ ತೀರ್ಥದಲ್ಲಿ ಸ್ನಾನವನ್ನು ಮಾಡುವವನು ಸತ್ಯವಾದಿಯೂ, ಶೂರನೂ, ನನ್ನ ಕರ್ಮಗಳಲ್ಲಿ ಆಸಕ್ತನೂ ಆಗುವನು.

ಯಸ್ತತ್ರ ಮುಂಚತಿ ಪ್ರಾಣಾನ್ಯದಿ ಕೃತ್ವಾ *ಜಲಾಶನಂ ।
ಸತ್ಯಲೋಕಮತಿಕ್ರಮ್ಯ ಮಮ ಲೋಕೇ ಸ ಮೋದತೇ ॥ ೯ ॥

ಇಂದ್ರಲೋಕಮಿತಿ ಖ್ಯಾತೋ ಬದರ್ಯಾಂ ಮಮ ಚಾಶ್ರಮಃ ।
ತತ್ರಾಹಂ ದೇವಿ ಶಕ್ರೇಣ ನಿಷ್ಕಲಂ ಪರಿತೋಷಿತಃ ॥ ೧೦ ॥

ತತ್ರ ಚೈವ ತು ಶೃಂಗೇಭ್ಯಃ ಸ್ಥೂಲಧಾರಾ ಪತೇತ್ಸ್ವನಃ ।
ಸ್ಥೂಲೇ ಶಿಲಾತಲೇ ತತ್ರ ಮಮ ಧರ್ಮೇ ವ್ಯವಸ್ಥಿತಃ ॥ ೧೧ ॥

ಸ್ನಾನಂ ಕರೋತಿ ಯಸ್ತತ್ರ ಏಕರಾತ್ರೋಷಿತೋ ನರಃ ।
ಸತ್ಯವಾದೀ ಶುಚಿರ್ಭೂತ್ವಾ ಸತ್ಯಲೋಕೇ ಮಹೀಯತೇ ॥ ೧೨ ॥

ಅಥಾತ್ರ ಮುಂಚತಿ ಪ್ರಾಣಾನ್ಕೃತ್ವಾ ಚಾನಾಶಕಂ ವ್ರತಂ ।
ಸತ್ಯಲೋಕಮತಿಕ್ರಮ್ಯ ಮಮ ಲೋಕೇಷು ತಿಷ್ಠತಿ ॥ ೧೩ ॥

---

೯. ಜಲಾಹಾರನಾಗಿ ಅಲ್ಲಿ ಪ್ರಾಣವನ್ನು ಬಿಡುವವನು ಸತ್ಯಲೋಕವನ್ನೂ ಅತಿಕ್ರಮಿಸಿ, ನನ್ನ ಲೋಕದಲ್ಲಿ ಸಂತೋಷಿಸುವನು.

೧೦. ದೇವಿ, ಬದರಿಯಲ್ಲಿರುವ ನನ್ನ ಆಶ್ರಮವು ಇಂದ್ರಲೋಕವೆಂದು ಪ್ರಸಿದ್ಧವಾಗಿದೆ. ಅಲ್ಲಿ ಇಂದ್ರನು ನನ್ನನ್ನು ಪೂರ್ಣವಾಗಿ ಸಂತೋಷಪಡಿಸಿದನು.

೧೧–೧೨. ಅಲ್ಲೂ ಶಿಖರಗಳಿಂದ ದಪ್ಪವಾದ ತೀರ್ಥಧಾರೆಯು ದೊಡ್ಡ ಹಾಸುಗಲ್ಲಿನ ಮೇಲೆ ಬೀಳುವುದು. ನನ್ನ ಧರ್ಮದಲ್ಲಿದ್ದು, ಆ ತೀರ್ಥದಲ್ಲಿ ಒಂದುರಾತ್ರೆ ವಾಸಮಾಡಿ ಸ್ನಾನಮಾಡುವವನು ಸತ್ಯವಾದಿಯೂ, ಶುಚಿಯೂ ಆಗಿ ಸತ್ಯಲೋಕದಲ್ಲಿ ವಾಸಿಸುವನು.

೧೩. ಅಲ್ಲಿ ಅನಶನವ್ರತವನ್ನು ಮಾಡಿ, ಪ್ರಾಣಬಿಡುವವನು ಸತ್ಯಲೋಕವನ್ನೂ ದಾಟಿ, ನನ್ನ ಲೋಕಗಳಲ್ಲಿ ನಿಲ್ಲುವನು.

---

* ಜಲಾಶಯಂ

ಅಸ್ತಿ ಪಂಚಶಿಖಂ ನಾಮ ಬದರ್ಯಾಶ್ರಮತೀರ್ಥಕಂ ।
ಯತ್ರ ಧಾರಾಃ ಪತಂತ್ಯತ್ರ ಪಂಚಶೃಂಗಸಮಾಶ್ರಿತಾಃ ॥ ೧೪ ॥

ಯಸ್ತತ್ರ ಕುರುತೇ ಸ್ನಾನಂ ಪಂಚಸ್ರೋತಸಿ ಮಾನವಃ ।
ಅಶ್ವಮೇಧಫಲಂ ಪ್ರಾಪ್ಯ ದೇವೈಶ್ಚ ಸಹ ಮೋದತೇ ॥ ೧೫ ॥

ಯದ್ಯತ್ರ ಮುಂಚತಿ ಪ್ರಾಣಾನ್ಕೃತ್ವಾ ಕರ್ಮ ಸುದುಷ್ಕರಂ ।
ಸ್ವರ್ಗಲೋಕಮತಿಕ್ರಮ್ಯ ಮಮ ಲೋಕೇ ಮಹೀಯತೇ ॥ ೧೬ ॥

ಚತುಸ್ರೋತ ಇತಿ ಖ್ಯಾತಂ ತಸ್ಮಿನ್ ಕ್ಷೇತ್ರೇ ಪರೇ ಮಮ ।
ಚತುರ್ಧಾರಾಃ ಪತಂತ್ಯತ್ರ ಚತಸ್ರೋ ದಿಶ ಆಶ್ರಿತಾಃ ॥ ೧೭ ॥

ಯಸ್ತತ್ರ ಕುರುತೇ ಸ್ನಾನಂ ಏಕರಾತ್ರೋಷಿತೋ ನರಃ ।
ಮೋದತೇ ನಾಕಪೃಷ್ಠೇ ತು ಮಮ ಭಕ್ತಶ್ಚ ಜಾಯತೇ ॥ ೧೮ ॥

---

೧೪. ಐದು ಶಿಖರಗಳಿಂದ ಧಾರೆಗಳು ಬೀಳುವ ಪಂಚಶಿಖವೆಂಬ ಬದರ್ಯಾಶ್ರಮತೀರ್ಥವೊಂದಿದೆ.

೧೫. ಆ ಪಂಚಧಾರಾಪ್ರವಾಹದಲ್ಲಿ ಸ್ನಾನಮಾಡುವವನು ಅಶ್ವಮೇಧ ಯಜ್ಞದ ಫಲವನ್ನು ಪಡೆದು, ದೇವತೆಗಳೊಡನೆ ಸಂತೋಷಪಡುವನು.

೧೬. ಅತಿ ಕಷ್ಟವಾದ ಸತ್ಕರ್ಮಗಳನ್ನು ಮಾಡಿ, ಅಲ್ಲಿ ಪ್ರಾಣವನ್ನು ಬಿಡುವವನು ಸ್ವರ್ಗಲೋಕವನ್ನು ಮೀರಿ ನನ್ನ ಲೋಕದಲ್ಲಿ ವಾಸಿಸುವನು.

೧೭. ಶ್ರೇಷ್ಠವಾದ ಆ ನನ್ನ ಕ್ಷೇತ್ರದಲ್ಲಿ ಚತುಸ್ರೋತವೆಂಬ ಪ್ರಸಿದ್ಧವಾದ ತೀರ್ಥವೊಂದಿದೆ. ನಾಲ್ಕು ದಿಕ್ಕುಗಳಿಂದಲೂ ಅಲ್ಲಿ ನಾಲ್ಕು ತೀರ್ಥಧಾರೆಗಳು ಧುಮುಕುತ್ತವೆ.

೧೮. ಅಲ್ಲಿ ಒಂದು ರಾತ್ರಿ ವಾಸಮಾಡಿ ತೀರ್ಥದಲ್ಲಿ ಸ್ನಾನವನ್ನು ಮಾಡುವವನು ಸ್ವರ್ಗಲೋಕದ ಹಿಂಭಾಗದಲ್ಲಿ ಸಂತೋಷಿಸುವನಲ್ಲದೆ ನನ್ನ ಭಕ್ತನಾಗಿ ಜನಿಸುವನು.

ಅಥ ಪ್ರಾಣಾನ್ಪರಿತ್ಯಜ್ಯ ಕೃತ್ವಾ ಕರ್ಮ ಸುದುಷ್ಕರಂ ।
ನಾಕಪೃಷ್ಠಮತಿಕ್ರಮ್ಯ ಮಮ ಲೋಕಂ ಪ್ರಪದ್ಯತೇ ॥ ೧೯ ॥

ವೇದಧಾರಮಿತಿ ಖ್ಯಾತಂ ತಸ್ಮಿನ್ ಕ್ಷೇತ್ರೇ ಪರೇ ಮಮ ।
ಯತ್ರ ಬ್ರಹ್ಮಮುಖಾದ್ಭ್ರಷ್ಟಾ ವೇದಾಶ್ಚತ್ವಾರ ಏವ ಚ ॥ ೨೦ ॥

ತತ್ರೈವ ಹಿಮವತ್ಪೃಷ್ಠೇ ಚತುಶ್ಶೃಂಗಾದ್ಬೃಹತ್ತರಾಃ ।
ಚತುರ್ಧಾರಾಃ ಪತಂತ್ಯತ್ರ ವಿಷಮಾಶ್ಚ ಶಿಲೋಚ್ಚಯೇ ॥ ೨೧ ॥

ಯಸ್ತತ್ರ ಕುರುತೇ ಸ್ನಾನಂ ಚತುರಾತ್ರೋಷಿತೋ ನರಃ ।
ಚತುರ್ಣಾಮಪಿ ವೇದಾನಾಂ ಗ್ರಹಣೇ ಕಾರಣಂ ಭವೇತ್ ॥ ೨೨ ॥

ಅಥಾತ್ರ ಮುಂಚತಿ ಪ್ರಾಣಾನ್ಮಮ ಕರ್ಮಪಥೇ ಸ್ಥಿತಃ ।
ದೇವಲೋಕಮತಿಕ್ರಮ್ಯ ಮಮ ಲೋಕೇ ಪ್ರತಿಷ್ಠತೇ ॥ ೨೩ ॥

---

೧೯. ಅತಿಕಷ್ಟವಾದ ಸತ್ಕರ್ಮಗಳನ್ನು ಮಾಡಿ ಬಳಿಕ ಆ ತೀರ್ಥದಲ್ಲಿ ಪ್ರಾಣಗಳನ್ನು ಬಿಟ್ಟವನು ಸ್ವರ್ಗಲೋಕವನ್ನು ಅತಿಕ್ರಮಿಸಿ, ನನ್ನ ಲೋಕವನ್ನು ಸೇರುವನು.

೨೦. ಉತ್ತಮವಾದ ಆ ನನ್ನ ಕ್ಷೇತ್ರದಲ್ಲಿ ವೇದಧಾರವೆಂದು ಪ್ರಸಿದ್ಧವಾದ ತೀರ್ಥವೊಂದಿದೆ. ಅಲ್ಲೇ ಬ್ರಹ್ಮನ ಬಾಯಿಂದ ನಾಲ್ಕು ವೇದಗಳೂ ಹೊರಗೆ ಬಂದುವು.

೨೧. ಅಲ್ಲೇ ಅದೇ ಹಿಮವತ್ಪರ್ವತದ ತಪ್ಪಲಿನಲ್ಲಿ ನಾಲ್ಕು ಶಿಖರಗಳಿಂದ ಬಹಳ ದಪ್ಪವೂ ವಿರೂಪವೂ ಆದ ನಾಲ್ಕು ತೀರ್ಥಧಾರೆಗಳು ಬೀಳುತ್ತವೆ.

೨೨. ಅಲ್ಲಿ ನಾಲ್ಕುರಾತ್ರೆ ವಾಸಮಾಡಿ ತೀರ್ಥಸ್ನಾನವನ್ನು ಮಾಡುವ ಮನುಷ್ಯನು ನಾಲ್ಕು ವೇದಗಳನ್ನೂ ಗ್ರಹಿಸಲು ಅರ್ಹನಾಗುವನು.

೨೩. ಅಲ್ಲದೇ ಬಳಿಕ ನನ್ನ ಕರ್ಮಮಾರ್ಗದಲ್ಲಿದ್ದು ಅಲ್ಲಿ ಪ್ರಾಣವನ್ನು ಬಿಟ್ಟು, ದೇವಲೋಕವನ್ನೂ ಮೀರಿ, ನನ್ನ ಲೋಕದಲ್ಲಿ ನೆಲಸುವನು.

ದ್ವಾದಶಾದಿತ್ಯಕುಂಡೇತಿ ತಸ್ಮಿನ್ ಕ್ಷೇತ್ರೇ ಪರೇ ಮಮ |
ಯತ್ರ ತೇ ದ್ವಾದಶಾದಿತ್ಯಾ ದೇವಿ ಸಂಸ್ಥಾಪಿತಾ ಮಯಾ || ೨೪ ||

ತತ್ರ ಪರ್ವತಶೃಂಗೇ ತು ಸ್ಥೂಲಮೂಲೇ ಶಿಲಾತಲೇ |
ದ್ವಾದಶ ಪತಂತಿ ಧಾರಾ ಮಮ ಕರ್ಮಸುಖಾವಹಾಃ || ೨೫ ||

ಯಸ್ತತ್ರ ಕುರುತೇ ಸ್ನಾನಂ ಯಾಂ ಕಾಂಚಿದ್ದ್ವಾದಶೀಂ ಯದಿ |
ಯತ್ರ ತೇ ದ್ವಾದಶಾದಿತ್ಯಾಸ್ತತ್ರ ಗಚ್ಛೇನ್ನ ಸಂಶಯಃ || ೨೬ ||

ಅಥಾತ್ರ ಮುಂಚತಿ ಪ್ರಾಣಾನ್ಮಮ ಕರ್ಮಣಿ ಸಂಸ್ಥಿತಃ |
ಸಮತಿಕ್ರಮ್ಯ ಚಾದಿತ್ಯಾನ್ಮಮ ಲೋಕೇ ಮಹೀಯತೇ || ೨೭ ||

ಲೋಕಪಾಲಮಿತಿ ಖ್ಯಾತಂ ತಸ್ಮಿನ್ ಕ್ಷೇತ್ರೇ ಪರೇ ಮಮ |
ತತ್ರ ತೇ ಲೋಕಪಾಲಾಸ್ತು ಮಯಾ ಸಂಸ್ಥಾಪಿತಾ ಪುರಾ || ೨೮ ||

---

೨೪. ದೇವಿ, ನನ್ನ ಉತ್ತಮವಾದ ಆ ಬದರೀಕ್ಷೇತ್ರದಲ್ಲಿ ದ್ವಾದಶಾದಿತ್ಯ ಕುಂಡವೆಂದು ನಾನು ಆ ದ್ವಾದಶಾದಿತ್ಯರನ್ನೂ ನಿಲ್ಲಿಸಿದ ಸ್ಥಳ ಅಥವಾ ತೀರ್ಥವೊಂದಿದೆ.

೨೫. ಅಲ್ಲಿ ಪರ್ವತಶಿಖರದಿಂದ ನನ್ನ ಕರ್ಮಗಳಲ್ಲಿ ಸುಖವನ್ನು ಉಂಟುಮಾಡುವ ಹನ್ನೆರಡು ತೀರ್ಥಧಾರೆಗಳು ಪರ್ವತದ ಬುಡದಲ್ಲಿರುವ ದೊಡ್ಡದಾದ ಕಲ್ಲಿನಮೇಲೆ ಬೀಳುತ್ತವೆ.

೨೬. ಯಾವುದಾದರೊಂದು ದ್ವಾದಶಿಯದಿನ ಅಲ್ಲಿ ಸ್ನಾನಮಾಡುವವನು ಆ ದ್ವಾದಶಾದಿತ್ಯರಿರುವೆಡೆಗೆ ಹೋಗುವುದರಲ್ಲಿ ಸಂಶಯವಿಲ್ಲ.

೨೭. ನನ್ನ ಕರ್ಮಗಳಲ್ಲಿದ್ದು, ಅದೇ ತೀರ್ಥದಲ್ಲಿ ಪ್ರಾಣಬಿಟ್ಟರೆ ದ್ವಾದಶಾದಿತ್ಯರನ್ನು ಅತಿಕ್ರಮಿಸಿ, ನನ್ನ ಲೋಕದಲ್ಲಿ ವಾಸಿಸುವನು.

೨೮. ಉತ್ತಮವಾದ ಆ ನನ್ನ ಕ್ಷೇತ್ರದಲ್ಲಿಯೇ ನಾನು ಪೂರ್ವದಲ್ಲಿ ಆ ಲೋಕಪಾಲರನ್ನು ನಿಲ್ಲಿಸಿದಸ್ಥಳವಾದ ಲೋಕಪಾಲವೆಂದು ಪ್ರಸಿದ್ಧವಾದ ತೀರ್ಥವೊಂದಿದೆ.

ತತ್ರ ಪರ್ವತಮಧ್ಯೇ ತು ಸ್ಥಲಕುಂಡಂ ಬೃಹನ್ಮಮ ।
ಭಿತ್ವಾ ಪರ್ವತಮುದ್ಗೀರ್ಣಂ ಯತ್ರ ಸೋಮಸಮುದ್ಭವಃ ॥ ೨೯ ॥

ತತ್ರ ಸ್ನಾನಂ ತು ಕುರ್ವೀತ ಜ್ಯೇಷ್ಠಮಾಸಸ್ಯ ದ್ವಾದಶೀಂ ।
ಮೋದತೇ ಲೋಕಪಾಲೇಷು ಮಮ ಭಕ್ತಶ್ಚ ಜಾಯತೇ ॥ ೩೦ ॥

ಅಥಾತ್ರ ಮುಂಚತಿ ಪ್ರಾಣಾನ್ಮಮ ಕರ್ಮಸು ತತ್ಪರಃ ।
ಲೋಕಪಾಲಾನತಿಕ್ರಮ್ಯ ಮಮ ಲೋಕಂ ಪ್ರಪದ್ಯತೇ ॥ ೩೧ ॥

ಅಸ್ತಿ ಮೇರೋರ್ವರಂ ನಾಮ ತಸ್ಮಿನ್ಗುಹ್ಯಂ ಪರಂ ಮಮ ।
ತತ್ರಸ್ಥಿತೇನ ವೈ ಭೂಮೇ ಮೇರುಸ್ಸಂಸ್ಥಾಪಿತಃ ಸ್ವಯಂ ॥ ೩೨ ॥

ಧಾರಾಸ್ತಿಸ್ರಃ ಪತಂತ್ಯತ್ರ ಸುವರ್ಣಸದೃಶಪ್ರಭಾಃ ।
ಪತೇತ್ತು ತಜ್ಜಲಂ ಭೂಮೌ ವ್ಯಕ್ತಂ ನೈವೋಪಲಭ್ಯತೇ ॥ ೩೩ ॥

---

೨೯. ಅಲ್ಲಿ ಪರ್ವತದ ನಡುವೆ ಪರ್ವತವನ್ನು ಭೇದಿಸಿಕೊಂಡು ಹೊರಟಿರುವ ಮತ್ತು ಚಂದ್ರನು ಉದಿಸಿದೆಡೆಯಾದ ದೊಡ್ಡದಾದ ನನ್ನ ಸ್ಥಳಕುಂಡವಿದೆ.

೩೦. ಅದರಲ್ಲಿ ಜ್ಯೇಷ್ಠಮಾಸದ ದ್ವಾದಶಿಯ ದಿನ ಸ್ನಾನಮಾಡುವವನು ಲೋಕಪಾಲಕರೊಡನೆ ಸೇರಿ ಸಂತೋಷಪಡುವನಲ್ಲದೆ ನನ್ನ ಭಕ್ತನಾಗಿಯೂ ಜನಿಸುವನು.

೩೧. ಲೋಕಪಾಲತೀರ್ಥದಲ್ಲೇ ನನ್ನ ಕರ್ಮಾಸಕ್ತನಾಗಿದ್ದು ಪ್ರಾಣವನ್ನು ಬಿಟ್ಟವನು ಲೋಕಪಾಲರನ್ನೂ ಮೀರಿ ನನ್ನ ಲೋಕವನ್ನು ಸೇರುವನು.

೩೨. ಭೂಮೀ, ಆ ಬದರಿಕಾಶ್ರಮದಲ್ಲಿ ಮೇರುವರವೆಂಬ ಮತ್ತೊಂದು ನನ್ನ ತೀರ್ಥವಿದೆ. ನಾನು ಅಲ್ಲಿ ನಿಂತು ಮೇರುವನ್ನು ನಾನೇ ಸ್ಥಾಪಿಸಿದೆನು.

೩೩. ಸುವರ್ಣಕಾಂತಿಯ ಮೂರು ತೀರ್ಥಧಾರೆಗಳು ಅಲ್ಲಿ ಧುಮಿಕುತ್ತವೆ. ಭೂಮಿಯಲ್ಲಿ ಬೀಳುವುದಾದರೂ ಆ ನೀರು ಬಳಿಕ ಕಾಣಿಸುವುದೇ ಇಲ್ಲ.

ಯಸ್ತತ್ರ ಕುರುತೇ ಸ್ನಾನಂ ತ್ರಿರಾತ್ರೋಪೋಷಿತೋ ನರಃ |
ಮೋದತೇ ಮೇರುಶೃಗೇಷು ಮಮ ಭಕ್ತಶ್ಚ ಜಾಯತೇ ॥ ೩೪ ॥

ಅಥ ತತ್ರ ಮೃತೋ ದೇವಿ ತಸ್ಮಿನ್ಗುಹ್ಯೇ ಪರೇ ಮಮ |
ಮೇರುಪೃಷ್ಠಮತಿಕ್ರಮ್ಯ ಮಮ ಲೋಕಂ ತು ಗಚ್ಛತಿ ॥ ೩೫ ॥

ಮಾನಸೋದ್ಭೇದಮಿತಿ ಚ ತತ್ರಾನ್ಯತ್ತೀರ್ಥಮುತ್ತಮಂ |
ಪೃಥ್ವೀಮುದ್ಭಿದ್ಯ ಮಧ್ಯೇ ತು ಜಲಂ ಗಚ್ಛತಿ ಸತ್ವರಂ ॥ ೩೬ ॥

ದೇವಾ ಅಪಿ ನ ಜಾನಂತಿ ತಂ ದೇಶಂ ತತ್ರ ಸಂಸ್ಥಿತಂ |
ಮಾನುಷಾ ಹಿ ವಿಜಾನಂತಿ ಭೂಮ್ಯಾಂ ಪತತಿ ತಜ್ಜಲಂ ॥ ೩೭ ॥

ಯಸ್ತತ್ರ ಕುರುತೇ ಸ್ನಾನಮಹೋರಾತ್ರೋಪೋಷಿತೋ ನರಃ |
ಮೋದತೇ ಮಾನಸೇ ದಿವ್ಯೇ ಮಮ ಭಕ್ತಶ್ಚ ಜಾಯತೇ ॥ ೩೮ ॥

---

೩೪. ಮೂರು ರಾತ್ರಿ ಉಪವಾಸಮಾಡಿ, ಆ ಧಾರೆಗಳಲ್ಲಿ ಸ್ನಾನಮಾಡುವವನು ಮೇರುಶಿಖರದಲ್ಲಿ ಆನಂದಿಸುವುದಲ್ಲದೆ ಬಳಿಕ ನನ್ನ ಭಕ್ತನಾಗಿ ಜನಿಸುವನು.

೩೫. ರಹಸ್ಯವಾದ ಆ ನನ್ನ ಉತ್ತಮತೀರ್ಥದಲ್ಲಿ ಮೃತನಾದರೆ ಮೇರುಶಿಖರವನ್ನೂ ಅತಿಕ್ರಮಿಸಿ ನನ್ನ ಲೋಕವನ್ನು ಸೇರುವನು.

೩೬. ಅಲ್ಲೇ ಮಾನಸೋದ್ಭೇದವೆಂಬ ಉತ್ತಮವಾದ ಬೇರೊಂದು ತೀರ್ಥವಿದೆ. ಅಲ್ಲಿ ನಡುವೆ ಭೂಮಿಯನ್ನು ಭೇದಿಸಿಕೊಂಡು ನೀರು ವೇಗವಾಗಿ ಹೊರಡುತ್ತದೆ.

೩೭. ಅಲ್ಲಿರುವ ಆ ಪ್ರದೇಶವನ್ನು ದೇವತೆಗಳೂ ಅರಿಯರು. ಭೂಮಿಯಮೇಲೆ ಬೀಳುವ ಆ ನೀರನ್ನು ಮನುಷ್ಯರೇ ತಿಳಿಯುವರು.

೩೮. ಅಲ್ಲಿ ಹಗಲೂ, ರಾತ್ರಿಯೂ ವಾಸಮಾಡಿ, ತೀರ್ಥಸ್ನಾನಮಾಡುವವನು ದಿವ್ಯವಾದ ಮಾನಸಸರೋವರದಲ್ಲಿ ಆನಂದಿಸುವನು. ಅಲ್ಲದೆ ನನ್ನ ಭಕ್ತನಾಗಿ ಜನಿಸುವನು.

ಅಸ್ತಿ ಪಂಚಶಿರಂ ನಾಮ ತಸ್ಮಿನ್ಗುಹ್ಯಂ ಪರಂ ಮಮ ।
*ಬ್ರಹ್ಮಣಶ್ಛಿದ್ಯತೇ ಯತ್ರ ಶಿರಶ್ಚೈವ ಮಹಾದ್ಯುತಿ ॥ ೩೯ ॥

ತತ್ರ ವೈ ಪಂಚಕುಂಡಾನಿ ಸ್ಥೂಲಶೀರ್ಷಶಿಲೋಚ್ಚಯೇ ।
ಪಂಚಾತ್ರ ಶಿರಸಃ ಸ್ಥಾನೇ ಬಹುಧಾರಾಸಮನ್ವಿತಾಃ ॥ ೪೦ ॥

ಯತ್ರ ತನ್ಮಧ್ಯಮಂ ಕುಂಡಂ ಛಿನ್ನಮೇವ ಸ್ವಯಂಭುವಾ ।
ತತ್ರ ರಕ್ತಜಲಾ ಭೂಮಿರ್ದೃಶ್ಯತೇ ಧಾರಸಂಕುಲೇ ॥ ೪೧ ॥

ಯಸ್ತತ್ರ ಕುರುತೇ ಸ್ನಾನಂ ಪಂಚರಾತ್ರೋಷಿತೋ ನರಃ ।
ಮೋದತೇ ಬ್ರಹ್ಮಲೋಕಸ್ಥೋ ಮಮ ಭಕ್ತಶ್ಚ ಜಾಯತೇ ॥ ೪೨ ॥

ತತ್ರಾಥ ಮುಂಚತಿ ಪ್ರಾಣಾನ್ಗುಹ್ಯೇ ಪಂಚಶಿರೇ ಮಮ ।
ಜಲಚಾಂದ್ರಾಯಣಂ ಕೃತ್ವಾ ಮಮ ಕರ್ಮಸು ನಿಷ್ಠಿತಃ ॥ ೪೩ ॥

---

೩೯. ಆ ಬದರಿಕಾಶ್ರಮದಲ್ಲಿ ಪಂಚಶಿರವೆಂಬ ರಹಸ್ಯವಾದ ಬೇರೊಂದು ನನ್ನ ತೀರ್ಥವಿದೆ. ಅದು ಬ್ರಹ್ಮನ ಮಹಾಕಾಂತಿಯುತವಾದ ಐದನೆಯ ತಲೆಯನ್ನು ಶಿವನು ಕತ್ತರಿಸಿದೆಡೆ.

೪೦. ದೊಡ್ಡ ತಲೆಯುಳ್ಳ ಪರ್ವತದಲ್ಲಿ ಐದು ಕುಂಡಗಳಿವೆ. ಅಲ್ಲಿ ಶಿರ (ಶಿಖರ)ಸ್ಥಾನದಲ್ಲಿ ಹಲವು ಸಣ್ಣಧಾರೆಗಳೊಡಗೂಡಿದ ಐದು ದೊಡ್ಡ ಧಾರೆಗಳು ಬೀಳುತ್ತವೆ.

೪೧. ಅಲ್ಲಿರುವ ಐದುಕುಂಡಗಳಲ್ಲಿ ನಡುವಣದು ಬ್ರಹ್ಮನೇ ತೋಡಿದುದು. ಅಲ್ಲಿ ಧಾರೆಗಳ ಗುಂಪಿನಲ್ಲಿ ಭೂಮಿಯು ರಕ್ತಜಲವುಳ್ಳದಾಗಿ ಕಾಣುತ್ತದೆ.

೪೨. ಅಲ್ಲಿ ಐದುರಾತ್ರಿಗಳು ವಾಸಮಾಡಿ, ತೀರ್ಥಸ್ನಾನಮಾಡುವವನು ಬ್ರಹ್ಮಲೋಕದಲ್ಲಿ ಸಂತೋಷಪಡುವನಲ್ಲದೆ ನನ್ನ ಭಕ್ತನಾಗಿ ಜನಿಸುವನು.

೪೩–೪೪. ನನ್ನ ಕರ್ಮಗಳಲ್ಲಿ ಆಸಕ್ತನಾಗಿ, ಬುದ್ಧಿವಂತನೂ, ರಾಗ ಮೋಹಗಳಿಲ್ಲದವನೂ ಆಗಿದ್ದು, ನನ್ನ ಆ ರಹಸ್ಯವಾದ ಪಂಚಶಿರವೆಂಬ

---

* ಬ್ರಹ್ಮಣಾ

ಬುದ್ಧಿಮಾನ್ಮತಿಮಾಂಶ್ಚೈವ ರಾಗಮೋಹವಿವರ್ಜಿತಃ ।
ಬ್ರಹ್ಮಲೋಕಮತಿಕ್ರಮ್ಯ ಮಮ ಲೋಕಂ ಸ ಗಚ್ಛತಿ ॥ ೪೪ ॥

ಅಸ್ತಿ ಸೋಮಾಭಿಷೇಕೇತಿ ತೀರ್ಥಮನ್ಯತ್ಪರಂ ಮಮ ।
ರಾಜತ್ವೇ ಬ್ರಾಹ್ಮಣಾನಾಂ ತು ಮಯಾ ಸೋಮೋಭಿಷೇಚಿತಃ ।
ತತ್ರಾಹಂ ತೋಷಿತಸ್ತೇನ ಅತಿಪುತ್ರೇಣ ಮಾಧವಿ ॥ ೪೫ ॥

ನವಪಂಚಕಕೋಟ್ಯಸ್ತು ಕೃತ್ವಾ ಕರ್ಮ ಸುದುಷ್ಕರಂ ।
ಪ್ರಾಪ್ತಶ್ಚ ಪರಮಾಂ ಸಿದ್ಧಿಂ ಮತ್ಪ್ರಸಾದಾದ್ವಸುಂಧರೇ ॥ ೪೬ ॥

ತದಾಯತ್ತಂ ಜಗತ್ಸರ್ವಂ ವ್ರೀಹಯಃ ಪರಮೌಷಧೀಃ ॥ ೪೭ ॥

ಜಾಯಂತೇಸ್ಮಿನ್ಪ್ರಲೀಯಂತೇ ಸ್ಕಂದೇದ್ರಾಸ್ಸಮರುದ್ಗಣಾಃ ।
ಭೂಮೇ ಸೋಮಮಯಂ ಸರ್ವಂ ಮಮಸಂಸ್ಥಂ ಭವಿಷ್ಯತಿ ॥ ೪೮ ॥

ತೀರ್ಥದಲ್ಲಿ ಜಲಚಾಂದ್ರಾಯಣವ್ರತವನ್ನು ಮಾಡಿ, ಪ್ರಾಣಬಿಟ್ಟರೆ, ಬ್ರಹ್ಮಲೋಕವನ್ನೂ ಅತಿಕ್ರಮಿಸಿ, ನನ್ನ ಲೋಕವನ್ನು ಸೇರುವನು.

೪೫. ಮಾಧವಿ, ಅಲ್ಲಿ ಸೋಮಾಭಿಷೇಕವೆಂಬ ಬೇರೊಂದು ಶ್ರೇಷ್ಠವಾದ ನನ್ನ ತೀರ್ಥವಿದೆ. ಆ ತೀರ್ಥದಲ್ಲಿ ನಾನು, ಚಂದ್ರನು ಬ್ರಾಹ್ಮಣರಿಗೆ ರಾಜನಾಗುವಂತೆ ಅವನಿಗೆ ರಾಜ್ಯಾಭಿಷೇಕವನ್ನು ಮಾಡಿದೆನು. ಅತ್ರಿಪುತ್ರನಾದ ಆ ಚಂದ್ರನು ನನ್ನನ್ನು ಅಲ್ಲೇ ಸಂತೋಷಪಡಿಸಿದನು.

೪೬. ವಸುಂಧರೇ, ಅತಿ ಕಷ್ಟವಾದ ಹದಿನಾಲ್ಕುಕೋಟಿ ಕರ್ಮಗಳನ್ನು ಮಾಡಿ ಆತನು ನನ್ನ ಅನುಗ್ರಹದಿಂದ ಪರಮಸಿದ್ಧಿಯನ್ನು ಪಡೆದನು.

೪೭–೪೮. ಭೂಮೀ, ಜಗತ್ತೆಲ್ಲವೂ ಆತನ ಅಧೀನವಾಗಿದೆ. ಬತ್ತಗಳೂ, ಪರಮೌಷಧಿಗಳೂ, ದೇವತೆಗಳ ಸಮೂಹದೊಡಗೂಡಿದ ಸ್ಕಂದೇಂದ್ರರೂ ಚಂದ್ರನಲ್ಲೇ ಜನಿಸುವರು ಮತ್ತು ಲಯವನ್ನೈದುವರು. ನನ್ನಲ್ಲಿರುವುದೆಲ್ಲವೂ ಸೋಮಮಯವಾಗಿರುವುದು.

ತತ್ರ ಸೋಮಗಿರಿರ್ನಾಮ ಯತ್ರ ಧಾರಾ ಪತೇದ್ಭುವಿ ।
ಕುಂಡೇರಣ್ಯೇ ವಿಶಾಲೇ ತು ಏತತ್ತೇ ಕಥಿತಂ ಮಯಾ ॥ ೪೯ ॥

ಯಸ್ತತ್ರ ಕುರುತೇ ಸ್ನಾನಂ ತ್ರಿರಾತ್ರೋಪೋಷಿತೋ ನರಃ ।
ಮೋದತೇ ಸೋಮಲೋಕೇಷು ಏವಮೇತನ್ನ ಸಂಶಯಃ ॥ ೫೦ ॥

ಅಥಾತ್ರ ಮ್ರಿಯತೇ ದೇವಿ ಕೃತ್ವಾ ಕರ್ಮ ಸುದುಷ್ಕರಂ ।
ಸೋಮಲೋಕಮತಿಕ್ರಮ್ಯ ಮಮ ಲೋಕಂ ಪ್ರಪದ್ಯತೇ ॥ ೫೧ ॥

ಅಸ್ತಿ ಚೋರ್ವಶಿಕುಂಡೇತಿ ಗುಹ್ಯಂ ಕ್ಷೇತ್ರೇ ಪರಂ ಮಮ ।
ಯತ್ರ ಚೈವೋರ್ವಶೀ ಭಿತ್ವಾ ದಕ್ಷಿಣೋರುಮಜಾಯತ ॥ ೫೨ ॥

ತತ್ರ ತಪ್ಯಾಮ್ಯಹಂ ದೇವಿ ದೇವಾನಾಮಪಿ ಕಾರಣಾತ್ ।
ನಮಾಂ ಕಶ್ಚಿದ್ವಿಜಾನಾತಿ ಸ್ವಾತ್ಮಾನೋ ಹಿ ವಿಜಾನತೇ ॥ ೫೩ ॥

---

೪೯. ವಿಶಾಲವಾದ ಅರಣ್ಯದಲ್ಲಿ ಭೂಮಿಯಲ್ಲಿರುವ ಕುಂಡದಲ್ಲಿ ನೀರಿನ ಧಾರೆಯು ಬೀಳುವ ಸೋಮಾಭಿಷೇಕತೀರ್ಥದ ಹತ್ತಿರ ಸೋಮಗಿರಿಯೆಂಬುದಿದೆ. ಇದನ್ನು ನಿನಗೆ ಹೇಳಿದ್ದೇನೆ.

೫೦. ಮೂರುರಾತ್ರಿ ಉಪವಾಸಮಾಡಿ ಆ ತೀರ್ಥದಲ್ಲಿ ಸ್ನಾನಮಾಡುವವನು ಚಂದ್ರಲೋಕದಲ್ಲಿ ಸಂತೋಷಪಡುವನೆಂಬುದರಲ್ಲಿ ಸಂದೇಹವಿಲ್ಲ.

೫೧. ಅತಿ ಕಷ್ಟಕರವಾದ ಕರ್ಮಗಳನ್ನು ಆಚರಿಸಿ, ಬಳಿಕ ಅಲ್ಲಿ ಪ್ರಾಣವನ್ನು ಬಿಟ್ಟರೆ, ಸೋಮಲೋಕವನ್ನು ಅತಿಕ್ರಮಿಸಿ ನನ್ನ ಲೋಕವನ್ನು ಸೇರುವನು.

೫೨. ಆ ಬದರೀಕ್ಷೇತ್ರದಲ್ಲಿ ಊರ್ವಶಿಕುಂಡವೆಂಬ ರಹಸ್ಯವೂ, ಉತ್ತಮವೂ ಆದ ನನ್ನ ತೀರ್ಥವೂ ಇದೆ. ಆ ಸ್ಥಳದಲ್ಲಿಯೇ ನನ್ನ ಬಲತೊಡೆಯನ್ನು ಭೇದಿಸಿಕೊಂಡು ಊರ್ವಶಿಯು ಜನಿಸಿದಳು.

೫೩. ದೇವಿ, ನಾನು ಅಲ್ಲಿ ದೇವತೆಗಳಿಗಾಗಿ ತಪಸ್ಸನ್ನು ಮಾಡುತ್ತಿದ್ದೆನು. ಅದನ್ನು ಸದಾತ್ಮರು ಹೊರತು ಬೇರಾವನೂ ಅರಿಯನು.

ತತೋ ಮೇ ತಪ್ಯಮಾನಸ್ಯ ಬಹುವರ್ಷವ್ಯತಿಕ್ರಮಾತ್ ।
ದೇವಾ ಅಪಿ ನ ಜಾನಂತಿ ವಜ್ರಿಬ್ರಹ್ಮಮಹೇಶ್ವರಾಃ ॥ ೫೪ ॥

ಏಕೈಕೇನ ಫಲೇನಾತ್ರ ಬದರ್ಯಾಂ ತು ಸುನಿಶ್ಚಿತಂ ।
ಬಹುವರ್ಷಸಹಸ್ರಂ ತು ತಪಶ್ಚೀರ್ಣಂ ಮಯಾ ಭುವಿ ॥ ೫೫ ॥

ತತ್ರಾಹಂ ದಶಕೋಟ್ಯಸ್ತು ದಶವರ್ಷಂ ದಶಾರ್ಬುದಂ ।
ದಶ ಭೂಮೇ ತಥಾನ್ಯಾನಿ ಪದ್ಮಾನಿ ತಪಸಿ ಸ್ಥಿತಃ ॥ ೫೬ ॥

ತತಸ್ತೇ ಮಾಂ ನ ಪಶ್ಯಂತಿ ದೇವಾ ಗುಹ್ಯಪಥೇ ಸ್ಥಿತಂ ।
ವಿಸ್ಮಯಂ ಪರಮಂ ಜಗ್ಮುರ್ದೇವಾ ದುಃಖಪರಾಯಣಾಃ ॥ ೫೭ ॥

ಅಹಂ ಪಶ್ಯಾಮಿ ಸರ್ವಂ ವೈ ತಪಸ್ಸಂಸ್ಥೋ ವಸುಂಧರೇ ।
ನ ಮಾಂ ಸರ್ವೇ ಪ್ರಪಶ್ಯಂತಿ ಯೋಗಮಾಯಾಸಮಾವೃತಾಃ ॥ ೫೮ ॥

---

೫೪. ನಾನು ಹಾಗೆ ತಪಸ್ಸನ್ನು ಮಾಡುತ್ತಿರಲು ಬಹುವರ್ಷಗಳಕಾಲವು ಕಳೆಯಿತು. ಆದರೂ ದೇವತೆಗಳೂ, ಇಂದ್ರಬ್ರಹ್ಮಮಹೇಶ್ವರರೂ ತಿಳಿಯರು.

೫೫. ಆ ಬದರೀಕ್ಷೇತ್ರದಲ್ಲಿ ಒಂದೊಂದು ಬದರೀಫಲವನ್ನು (ಎಲಚೀ ಹಣ್ಣನ್ನು) ಮಾತ್ರ ಸೇವಿಸುತ್ತ ಹಲವುಸಾವಿರವರ್ಷಗಳಕಾಲ ನಾನು ಭೂಮಿಯಲ್ಲಿ ತಪಸ್ಸನ್ನು ಮಾಡಿದೆನು.

೫೬. ಭೂಮಿ, ನಾನು ಬದರಿಕಾಶ್ರಮದಲ್ಲಿ ಹತ್ತು ಕೋಟಿ ಹತ್ತು ಅರ್ಬುದ ಹಲವು ಪದ್ಮಗಳ ಸಂಖ್ಯೆಯ ಅಥವಾ ಗಣಿಸಲಾಗದಷ್ಟು ವರ್ಷಗಳ ಕಾಲ ತಪಸ್ಸಿನಲ್ಲಿದ್ದೆನು.

೫೭. ಆಗ ಆ ದೇವತೆಗಳು ರಹಸ್ಯವಾದೆಡೆಯಲ್ಲಿ ಅಥವಾ ದಾರಿಯಲ್ಲಿರುವ ನನ್ನನ್ನು ಕಾಣದೆ ಪರಮಾಶ್ಚರ್ಯಗೊಂಡು ದುಃಖನಿರತರಾದರು.

೫೮. ವಸುಂಧರೇ, ತಪಸ್ಸಿನಲ್ಲಿದ್ದರೂ ನಾನು ಎಲ್ಲರನ್ನೂ, ಎಲ್ಲವನ್ನೂ ನೋಡುತ್ತಿದ್ದೆನು. ಯೋಗಮಾಯಾವೃತರಾದ ಅವರೆಲ್ಲರೂ ನನ್ನನ್ನು ಮಾತ್ರ ಕಾಣರು.

ತತಸ್ತಾ ದೇವತಾಸ್ಸರ್ವಾಃ ಪ್ರತ್ಯೂಚುಶ್ಚ ಪಿತಾಮಹಂ ।
ವಿಷ್ಣುನಾ ಚ ವಿನಾ ಲೋಕೇ ಶಾಂತಿಂ ನೈವ ಲಭಾಮಹೇ ॥ ೫೯ ॥

ದೇವಾನಾಂ ಚ ವಚಃ ಶ್ರುತ್ವಾ ಬ್ರಹ್ಮಾ ಲೋಕಪಿತಾಮಹಃ ।
ಯೋಗಮಾಯಾಪಟಚ್ಛನ್ನಂ ಕಥಯಾಮಾಸ ಮಾಂ ತದಾ ॥ ೬೦ ॥

ತತೋ ದೇವಾಸ್ಸಗಂಧರ್ವಾಸ್ಸಿದ್ಧಾಶ್ಚ ಪರಮರ್ಷಯಃ ।
ತತ್ರ ಜಗ್ಮುರ್ಮಹಾಭಾಗೇ ತುಷ್ಯಂತಃ ಪರಮಂ ಮುದಾ ॥ ೬೧ ॥

ವಿಭಾವಯಂತಿ ಮಾಂ ತತ್ರ ದೇವಾ ಇಂದ್ರಪುರೋಗಮಾಃ ।
ತ್ವಯಾ ನಾಥ ಪರಿತ್ಯಕ್ತಾ ದುಃಖಿತಾಶ್ಚ ಮರ್ವವರ್ಜಿತಾಃ ॥ ೬೨ ॥

ತ್ರಾಯಸ್ವ ನೋ ಹೃಷೀಕೇಶ ಪರಮಾನುಗ್ರಹೇಣ ವೈ ।
*ಏವಮುಕ್ತ್ವಾ ವಿಶಾಲಾಕ್ಷಿ ದೇವಾಃ ಪ್ರಣತಿಪೂರ್ವಕಂ ।
ಮಯಾ ವಿಲೋಕಿತಾಸ್ಸರ್ವೇ ಪರಾಂ ನಿರ್ವೃತಿಮಾಗತಾಃ ॥ ೬೩ ॥

---

೫೯. ಬಳಿಕ ಆ ದೇವತೆಗಳೆಲ್ಲರೂ ಬ್ರಹ್ಮನನ್ನು ನೋಡಿ, "ವಿಷ್ಣುವಿಲ್ಲದೆ ಲೋಕದಲ್ಲಿ ನಮಗೆ ಶಾಂತಿಯೇ ಇಲ್ಲವಾಗಿದೆ." ಎಂದು ಹೇಳಿದರು.

೬೦. ಲೋಕಪಿತಾಮಹನಾದ ಬ್ರಹ್ಮನು, ದೇವತೆಗಳ ಆ ಮಾತನ್ನು ಕೇಳಿ, ನಾನು(ವಿಷ್ಣುವು) ಯೋಗಮಾಯೆಯೆಂಬ ತೆರೆಯಿಂದ ಅವರಿಗೆ ಮರೆಯಾಗಿರುವುದಾಗಿ ಆಗ ಅವರೊಡನೆ ಹೇಳಿದನು.

೬೧. ಮಹಾಭಾಗ್ಯೇ, ಬಳಿಕ ಗಂಧರ್ವಸಹಿತರಾದ ದೇವತೆಗಳೂ, ಸಿದ್ಧರೂ, ಪರಮಋಷಿಗಳೂ ಸಂತೋಷವುಳ್ಳವರಾಗಿ ಆ ಬದರಿಕಾಶ್ರಮಕ್ಕೆ ಬಂದರು.

೬೨–೬೩. ಇಂದ್ರನೇ ಮೊದಲಾದ ಆ ದೇವತೆಗಳು ಪರಮಾತ್ಮನೂ, ಶ್ರೇಷ್ಠನೂ ಆದ ನನ್ನನ್ನು, "ನಾಥ, ನೀನು ಕೈಬಿಟ್ಟ ನಾವು ದುಃಖಿತರಾಗಿ ಸುಖವಿಲ್ಲದವರಾಗಿದ್ದೇವೆ. ಹೃಷೀಕೇಶನೇ, ಪರಮಾನುಗ್ರಹದಿಂದ ನಮ್ಮನ್ನು

---

* ಏತತ್ಕೃತ್ವಾ ವಿಶಾಲಾಕ್ಷಿ ದೇವಾನ್

ಏತಸ್ಮಿನ್ನೂರ್ವಶೀಕುಂಡೇ ಏಕರಾತ್ರೋಷಿತೋ ನರಃ ।
ಯಸ್ನಾತಿ ಸರ್ವಪಾಪೇಭ್ಯೋ ಮುಚ್ಯತೇ ನಾತ್ರ ಸಂಶಯಃ ॥ ೬೪ ॥

ಊರ್ವಶೀಲೋಕಮಾಸಾದ್ಯ ಕ್ರೀಡತೇ ಕಾಲಮಕ್ಷಯಂ ॥ ೬೫ ॥

ಯಸ್ತತ್ರೋತ್ಸೃಜತೇ ಪ್ರಾಣಾನ್ಮಮ ಕರ್ಮಪರಾಯಣಃ ।
ಪುಣ್ಯಪಾಪವಿನಿರ್ಮುಕ್ತೋ ಯಾತಿ ಮಲ್ಲೀನತಾಂ ಪ್ರಿಯೇ ॥ ೬೬ ॥

ಶ್ರೀಬದರ್ಯಾಶ್ರಮಂ ಪುಣ್ಯಂ ಯತ್ರ ಯತ್ರ ಸ್ಥಿತಃ ಸ್ಮರೇತ್ ।
ಸ ಯಾತಿ ವೈಷ್ಣವಂ ಸ್ಥಾನಂ ಪುನರಾವೃತ್ತಿವರ್ಜಿತಃ ॥ ೬೭ ॥

ಯ ಇದಂ ಶೃಣುಯಾನ್ನಿತ್ಯಂ ಮದ್ಭಕ್ತಸ್ಸತತಂ ಪಠೇತ್ ।
ಬ್ರಹ್ಮಚಾರೀ ಜಿತಕ್ರೋಧಸ್ಸತ್ಯವಾದೀ ಜಿತೇಂದ್ರಿಯಃ ॥ ೬೮ ॥

ರಕ್ಷಿಸು" ಎಂದು ಹೇಳಿ, ಭಕ್ತಿಯಿಂದ ಪ್ರಣಾಮಪೂರ್ವಕವಾಗಿ ಪ್ರಾರ್ಥಿಸಿದರು. ವಿಶಾಲಾಕ್ಷಿ, ನಾನು ಅವರೆಲ್ಲರನ್ನೂ ನೋಡಲು, ಅವರು ಅತ್ಯಾನಂದಗೊಂಡರು.

೬೪–೬೫. ಆ ಊರ್ವಶೀಕುಂಡದಲ್ಲಿ ಒಂದುರಾತ್ರಿಯಿದ್ದು ಸ್ನಾನಮಾಡುವವನು ಸರ್ವಪಾಪಗಳನ್ನೂ ಕಳೆದುಕೊಳ್ಳುವುದರಲ್ಲಿ ಸಂಶಯವಿಲ್ಲ. ಅಲ್ಲದೆ ಅವನು ಊರ್ವಶೀಲೋಕವನ್ನು ಸೇರಿ, ಅಕ್ಷಯಕಾಲ ವಿಹರಿಸುವನು.

೬೬. ಪ್ರಿಯೇ, ನನ್ನ ಕರ್ಮಗಳಲ್ಲಿ ಆಸಕ್ತನಾಗಿದ್ದು ಆ ಊರ್ವಶೀ ಕುಂಡದಲ್ಲಿ ಪ್ರಾಣಬಿಡುವವನು ಪುಣ್ಯಪಾಪಗಳೆಲ್ಲವನ್ನೂ ಕಳೆದುಕೊಂಡು ನನ್ನಲ್ಲಿ ಐಕ್ಯನಾಗುವನು.

೬೭. ಎಲ್ಲೆಲ್ಲಾದರೂ ಇದ್ದುಕೊಂಡು, ಪವಿತ್ರವಾದ ಶ್ರೀಬದರ್ಯಾಶ್ರಮವನ್ನು ಸ್ಮರಿಸುವವನೂ ಪುನರ್ಜನ್ಮವಿಲ್ಲದವನಾಗಿ ವಿಷ್ಣುಲೋಕವನ್ನು ಸೇರುವನು.

೬೮–೬೯. ಬ್ರಹ್ಮಚಾರಿಯೂ, ಕೋಪವನ್ನೂ ಇಂದ್ರಿಯಗಳನ್ನೂ ಜಯಿಸಿದವನೂ, ಸತ್ಯವಾದಿಯೂ ಆಗಿ ನಿತ್ಯವೂ ಈ ಬದರೀಕ್ಷೇತ್ರವಿಚಾರವನ್ನು

ಧ್ಯಾನಯೋಗರತೋ ನಿತ್ಯಂ ಸ ಮುಕ್ತಿಫಲಭಾಗ್ಭವೇತ್ ॥ ೧೯ ॥

ಯಸ್ತ್ವೇತದ್ವಿದಿತಂ ಸರ್ವಂ ಧ್ಯಾನಯೋಗಂ ವಸುಂಧರೇ ।
ಯೋಽವಗಚ್ಛತಿ ಚಾತ್ಮಾನಂ ಸ ಗಚ್ಛೇತ್ಪರಮಾಂ ಗತಿಂ ॥ ೨೦ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಬದರಿಕಾಶ್ರಮಮಾಹಾತ್ಮ್ಯ ವರ್ಣನಂ ನಾಮ ಏಕಚತ್ವಾರಿಂಶದಧಿಕ ಶತತಮೋಽಧ್ಯಾಯಃ

ಕೇಳುವ ಹೇಳುವ ಅಥವಾ ಧ್ಯಾನಮಾಡುವುದರಲ್ಲಿ ನಿರತನಾದ ನನ್ನ ಭಕ್ತನು ಮುಕ್ತಿಫಲವನ್ನು ಪಡೆಯುವನು.

೨೦. ವಸುಂಧರೇ, ಈ ಧ್ಯಾನಯೋಗವನ್ನೆಲ್ಲಾ ಅರಿತು ಆತ್ಮಜ್ಞಾನವುಳ್ಳವನಾದವನು ಪರಮಗತಿಯನ್ನು ಪಡೆಯುವನು.

ಅಧ್ಯಾಯದ ಸಾರಾಂಶ :—

ಶ್ರೀವರಾಹನು, ಭೂದೇವಿಗೆ ಬದರಿಕಾಶ್ರಮಮಹಿಮೆಯನ್ನು ಎಂದರೆ ಅಲ್ಲಿರುವ ಹಲವು ಪುಣ್ಯಕ್ಷೇತ್ರತೀರ್ಥಗಳ ಪ್ರಭಾವವನ್ನೂ, ತಾನು ಅಸಂಖ್ಯಾತ ವರ್ಷಗಳಕಾಲ ಬದರ್ಯಾಶ್ರಮದಲ್ಲಿ ತಪಸ್ಸುಮಾಡಿದ ವಿಚಾರವನ್ನೂ, ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರನಲವತ್ತೊಂದನೆಯ ಅಧ್ಯಾಯ.

|| ಶ್ರೀಃ ||

–X–

ದ್ವಾಚತ್ವಾರಿಂಶದಧಿಕಶತತಮೋಽಧ್ಯಾಯಃ

ಅಥ ಗುಹ್ಯಕರ್ಮಮಾಹಾತ್ಮ್ಯಂ

|| ಸೂತ ಉವಾಚ ||

ತತೋ ದೇವವಚಃ ಶ್ರುತ್ವಾ ಧರ್ಮಕಾಮಾ ವಸುಂಧರಾ ।
ಕೃತಾಂಜಲಿಪುಟಾ ಭೂತ್ವಾ ಪ್ರಸಾದಯತಿ ಮಾಧವಂ || ೧ ||

|| ಧರಣ್ಯುವಾಚ ||

ದಾಸ್ಯಾಂ ಮೇ ಪ್ರಣಯಂ ಕೃತ್ವಾ ವಿಜ್ಞಾಪ್ಯಂ ಶೃಣು ಮಾಧವ ।
ಮೃದುನಾ ಚ ಸ್ವಭಾವೇನ ವಕ್ಷ್ಯಾಮಿ ತ್ವಾಂ ಜನಾರ್ದನ || ೨ ||

ನೂರನಲವತ್ತೆರಡನೆಯ ಅಧ್ಯಾಯ.

ರಹಸ್ಯಕರ್ಮಮಹಿಮೆ.

೧. ಸೂತಮುನಿ—ಧರ್ಮಾಸಕ್ತಳಾದ ಭೂದೇವಿಯು, ಶ್ರೀವರಾಹದೇವನು ಹೇಳಿದುದನ್ನು ಕೇಳಿ, ಬಳಿಕ ಕೈಮುಗಿದುಕೊಂಡು ಆ ಮಾಧವನಿಗೆ ಅನುಗ್ರಹ ವುಂಟಾಗುವಂತೆ ಮಾಡಿದಳು.

೨ ಭೂದೇವಿ—ಮಾಧವಾ, ಸೇವಕಳಾದ ನನ್ನಲ್ಲಿ ಪ್ರಿತಿಯಿಟ್ಟು, ನಾನು ಬಿನ್ನಯಿಸುವುದನ್ನು ಕೇಳು. ಜನಾರ್ದನಾ, ನೀನು ಮೃದುಸ್ವಭಾವವುಳ್ಳವ ನಾಗಿರುವುದರಿಂದ ಹೇಳುತ್ತೇನೆ.

ಅಲ್ಪಪ್ರಾಣಬಲಾ ನಾರ್ಯೋ ಯತ್ತ್ವಯಾ ಪರಿಭಾಷಿತಂ ।
ಅಶಕ್ತಾಃ ಸಹಿತುಂ ಹ್ಯೇತಾಃ ಕ್ಷುಧಾ ತ್ವನಶನೇಬಲಾಃ || ೩ ||

ಭುಂಜಮಾನಾ ನರಾ ಹ್ಯತ್ರ ರಜಸಾ ಯಾಂತಿ ಶಂ ಪರಂ ।
ಅನ್ನಂ ಹ್ಯನುಗ್ರಹಂ ದೇವ ಯೇನ ತೇ ಕರ್ಮಸಂಶ್ರಿತಾಃ || ೪ ||

ತಸ್ಯಾಸ್ತದ್ವಚನಂ ಶ್ರುತ್ವಾ ಮಾಧವ್ಯಾಸ್ಸ ತು ಮಾಧವಃ ।
ಪ್ರಹಸ್ಯ ಭಾವಶುದ್ಧಾತ್ಮಾ ತತ ಏವಮಭಾಷತ || ೫ ||

|| ಶ್ರೀವರಾಹ ಉವಾಚ ||

ಸಾಧು ದೇವಿ ವರಾರೋಹೇ ಮಮ ಕರ್ಮವ್ಯವಸ್ಥಿತೇ ।
ಪೃಷ್ಟೋಽಹಂ ಪರಮಂ ಗುಹ್ಯಂ ಮಮ ಭಕ್ತಸುಖಾವಹಂ || ೬ ||

---

೩. ಹೆಂಗಸರು ಅಲ್ಪವಾದ ಪ್ರಾಣಶಕ್ತಿಯುಳ್ಳವರು. ಅವರು ನೀನು ಹೇಳಿದ ಕಷ್ಟ (ಕರ್ಮ)ಗಳನ್ನೂ, ಹಸಿವನ್ನೂ ಸಹಿಸಲಶಕ್ತರು. ಆಹಾರವಿಲ್ಲದಿದ್ದಲ್ಲಿ ಬಲವಿಲ್ಲದವರಾಗುವರು.

೪. ದೇವ, ನಾರಿಯರು ರಜಸ್ವಲೆಯರಾಗಿರುವಾಗಲೂ ಊಟಮಾಡುವುದರಿಂದ ಹೆಚ್ಚಾದ ಸುಖವನ್ನು ಪಡೆಯುವರು. ಅದರೂ ಕರ್ಮನಿರತರಾಗಿರುವುದರಿಂದ ಅವರಿಗೆ ಅನ್ನವನ್ನನುಗ್ರಹಿಸಬೇಕು.

೫. ಭಾವಶುದ್ಧಾತ್ಮನೂ, ಲಕ್ಷ್ಮೀಪತಿಯೂ ಆದ ಆ ಶ್ರೀವರಾಹನು ಭೂದೇವಿಯ ಆ ಮಾತನ್ನು ಕೇಳಿ, ನಕ್ಕು ಬಳಿಕ ಅವಳಿಗೆ ಮುಂದಿನ ಮಾತನ್ನು ಹೇಳಿದನು.

೬. ಶ್ರೀವರಾಹ—ಚೆನ್ನು! (ಸಾಧು) ದೇವಿ, ವರಾರೋಹೇ, ಕರ್ಮನಿರತೇ, ನನ್ನ ಭಕ್ತರಿಗೆ ಸುಖವನ್ನುಂಟುಮಾಡುವ ಅತಿರಹಸ್ಯವಾದ ವಿಚಾರವನ್ನು ನೀನು ನನ್ನನ್ನು ಕೇಳಿದೆ.

ಸ್ಪೃಷ್ಟ್ವಾ ಯಯಾ ರಜಸಾ ದೇವಿ ಮಮ ಕರ್ಮಪರಾಯಣಾ ।
ಮಾ* ಸಂಸ್ಪೃಶತು ತತ್ರಸ್ಥಂ ಯತ್ರ ತಿಷ್ಠಾಮಿ ಸುಂದರಿ ॥ ೭ ॥

ಯದಿ ಭಾವಸ್ತದಾ ಕಶ್ಚಿದ್ಭೋಜನೇ ಕಾಯಸಾಧನೇ ।
ಚಿತ್ತಂ ನ್ಯಸ್ಯ ಮಯಿ ಕ್ಷೋಣಿ ಭೋಕ್ತವ್ಯಂ ಚ ನ ಸಂಶಯಃ ॥ ೮ ॥

ನಸಾ ಲಿಪ್ಯತಿ ದೋಷೇಣ ಭುಂಜಮಾನಾ ರಜಸ್ವಲಾ ।
ಅಂಜಲಿಂ ಶಿರಸಾ ಕೃತ್ವಾ ಮಯೋಕ್ತಂ ಮಂತ್ರಮುತ್ತಮಂ ॥ ೯ ॥

ಅನಾದಿಮಧ್ಯಾಂತಮಜಂ ಪುರಾಣಂ
ರಜಸ್ವಲಾ ದೇವವರಂ ನಮಾಮಿ
ತತ ಏತೇನ ಮಂತ್ರೇಣ ಭುಕ್ತ್ವಾ ದೇವಿ ರಜಸ್ವಲಾ ।
ಕರೋತಿ ಯಾನಿ ಕರ್ಮಾಣಿ ನ ತೈರ್ದುಷ್ಯೇತ ಕರ್ಹಿಚಿತ್ ॥ ೧೦ ॥

೭–೮. ದೇವಿ, ಸುಂದರಿ, ನನ್ನ ಕರ್ಮದಲ್ಲಿ ನಿರತಳಾಗಿರುವವಳು, ರಜಸ್ವಲೆಯಾಗಿರುವಾಗ ಕ್ಷೇತ್ರಾದಿಗಳಲ್ಲಿ ನೆಲೆಸಿರುವ ನನ್ನನ್ನು ಮುಟ್ಟಬಾರದು. ಭೂಮೀ, ದೇಹರಕ್ಷಣೆಗಾಗಿ ಊಟಮಾಡಬೇಕೆಂದು ಮನಸ್ಸಾದರೆ ಎಂದರೆ ಹಸಿವಾದರೆ, ನನ್ನಲ್ಲಿ ಮನಸ್ಸಿಟ್ಟು ಸಂದೇಹವಿಲ್ಲದೆ ಊಟಮಾಡಬಹುದು.

೯–೧೦. ದೇವಿ, ನೆತ್ತಿಯಮೇಲೆ ಕೈಮುಗಿದುಕೊಂಡು, ನಾನು ಹೇಳಿರುವ "ಆದಿಮಧ್ಯಾಂತಗಳಿಲ್ಲದವನೂ, ಜನನವಿಲ್ಲದವನೂ, ಪುರಾತನನೂ ಆದ ದೇವೋತ್ತಮನನ್ನು ರಜಸ್ವಲೆಯಾದ ನಾನು ನಮಸ್ಕರಿಸುತ್ತೇನೆ." ಎಂಬ ಅರ್ಥವುಳ್ಳ ಮೇಲಿನ "ಅನಾದಿ.... ....ನಮಾಮಿ" ಎಂಬ ಮಂತ್ರವನ್ನು ಹೇಳಿ ಊಟಮಾಡುವ ರಜಸ್ವಲೆಗೆ ದೋಷವು ಅಂಟುವುದಿಲ್ಲ. ಅಲ್ಲದೆ ಮೇಲಿನ ಮಂತ್ರವನ್ನು ಹೇಳಿ, ಊಟಮಾಡಿ, ಕೆಲಸಮಾಡುವ ರಜಸ್ವಲೆಯು ಆ ಕೆಲಸಗಳಿಂದ ದೋಷವುಳ್ಳವಳಾಗುವುದಿಲ್ಲ.

---

* ಮಾಂ.

ಸ್ನಾತ್ವಾ ಸಾತು ಮಹಾಭಾಗೇ ಪಂಚಮಾತ್ತು ದಿನಾ ತ್ಪುನಃ ।
ಯಥಾರ್ಹಂ ಕುರುತೇ ಕರ್ಮ ಮುಚ್ಚಿತ್ವಾ ಮತ್ಪರಾಯಣಾ ॥ ೧೧ ॥

ಪ್ರಾಪ್ನುಯಾತ್* ಪುರುಷಾರ್ಥಂ ಚ ನ್ಯಸ್ತಸಂಸಾರಚಿಂತನಾತ್ ॥ ೧೨ ॥

॥ ಧರಣ್ಯುವಾಚ ॥

ಪುರುಷಾವಾ ಸ್ತ್ರಿಯೋ ವಾಪಿ ನ ಪುಮಾಂಸೋ ನವಾ ಸ್ತ್ರಿಯಃ ।
ಕಥಂ ದೋಷೇಣ ಮುಚ್ಯಂತೇ ಜನ್ಮಸಂಸಾರಬಂಧನಾತ್ ॥ ೧೩ ॥

॥ ಶ್ರೀವರಾಹ ಉವಾಚ ॥

ಇಂದ್ರಿಯಾಣಿ ನಿಗೃಹ್ಯಾಥ ಚಿತ್ತಮಪ್ಯನುವೇಶ್ಯ ಚ ।
ಮಯಿ ಸನ್ಯಾಸಯೋಗೇನ ಮಮ ಕರ್ಮಪರಾಯಣಃ ॥ ೧೪ ॥

ಮಮ ಯೋಗೇಷು ಸನ್ಯಾಸಮೇಕಚಿತ್ತೋ ದೃಢವ್ರತಃ ।
ಏವಂ ಕುರ್ವನ್ಮಹಾಭಾಗೇ ಸ್ತ್ರಿಯೋ ವಾ ಪುನ್ನಪುಂಸಕಂ ॥ ೧೫ ॥

೧೧–೧೨. ಮಹಾಭಾಗ್ಯೇ, ರಜಸ್ವಲೆಯಾದವಳು ಐದನೆಯದಿನ ಸ್ನಾನ ಮಾಡಿದ ಬಳಿಕ ಮತ್ತೆ ನನ್ನಲ್ಲಿ ಮನಸ್ಸುಳ್ಳವಳೂ, ಆಸಕ್ತಳೂ ಆಗಿ ಅವಳಿಗೆ ಯುಕ್ತವಾದ ಸತ್ಕರ್ಮಗಳನ್ನು ಮಾಡಬಹುದು ಸಂಸಾರದಲ್ಲಿಯೇ ಚಿಂತೆಯುಳ್ಳವಳಾದರೆ ಆಕೆಯು ಪುರುಷನಂತೆಯೇ ಕರ್ಮಗಳನ್ನು ಮಾಡಲು ಅರ್ಹತೆಯನ್ನು ಪಡೆಯುವಳು.

೧೩. ಭೂದೇವಿ—ಪುರುಷನಾಗಲಿ, ಸ್ತ್ರೀಯಾಗಲಿ, ನಪುಂಸಕನೇಆಗಲಿ ಮನುಷ್ಯರು ಜನ್ಮಸಂಸಾರಬಂಧನವನ್ನುಂಟುಮಾಡುವ ದೋಷ(ಪಾಪ)ದಿಂದ, ಹೇಗೆ ತಪ್ಪಿಸಿಕೊಳ್ಳುವರು ?

೧೪–೧೬. ಶ್ರೀವರಾಹ—ಮಹಾಭಾಗ್ಯೇ, ಪುರುಷನಾಗಲಿ, ಸ್ತ್ರಿಯಾಗಲಿ, ನಪುಂಸಕನೇ ಆಗಲಿ, ಪರಮಗತಿಯನ್ನು ಬಯಸುವವರು, ನನ್ನ ಕರ್ಮಗಳಲ್ಲಿ ನಿರತರಾಗಿ ಇಂದ್ರಿಯಗಳನ್ನು ನಿಗ್ರಹಿಸಿ, ಚಿತ್ತವನ್ನು ಸ್ಥಿರವಾಗಿ(ಸನ್ಯಾಸಯೋಗ

---

* ಪುರುಷತ್ವಂ.

ಜ್ಞಾನಸನ್ಯಾಸಯೋಗಂ ವಾ ಯದೀಚ್ಛೇತ್ಪರಮಾಂ ಗತಿಂ ॥ ೧೬ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ಮನೋ ಬುದ್ಧಿಶ್ಚ ಚಿತ್ತಂ ಚ ತೇ*ಹ್ಯನೀಶಾಶ್ಶರೀರಿಣಃ ॥ ೧೭ ॥

ಏಕಚಿತ್ತಂ ಮನಃ ಕೃತ್ವಾ ಜ್ಞಾನೇನ ಪೃಥುಲೋಚನೇ ।
ಸಮಚಿತ್ತಂ ಪ್ರಪದ್ಯಂತೇ ನ ತೇ ಲಿಪ್ಯಂತಿ ಮಾನವಾಃ ॥ ೧೮ ॥

ಸರ್ವಭಕ್ಷ್ಯಾಣಿ ಭಕ್ಷಂತಃ ಪೇಯಾಪೇಯಾಂಸ್ತಥೈವ ಚ ।
ಸಮಚಿತ್ತಂ ಮಯಿ ಯದಿ ತದಾ ತಸ್ಯ ನ ಚ ಕ್ರಿಯಾ ॥ ೧೯ ॥

ದಿಂದ) ನನ್ನಲ್ಲಿಟ್ಟು ನನ್ನ ಯೋಗಗಳಲ್ಲಿ ಕರ್ಮಸನ್ಯಾಸವನ್ನಾಗಲಿ, ಏಕ ಚಿತ್ತನೂ, ದೃಢವ್ರತನೂ ಆಗಿ ಜ್ಞಾನಸನ್ಯಾಸಯೋಗವನ್ನಾಗಲಿ ಮಾಡಬೇಕು.

೧೭. ವಸುಂಧರೇ, ಬೇರೊಂದನ್ನು ನಿನಗೆ ಹೇಳುತ್ತೇನೆ. ಅದನ್ನೂ ಕೇಳು. ಮನಸ್ಸು, ಬುದ್ಧಿ, ಚಿತ್ತ ಇವುಗಳನ್ನು ಸ್ವಾಧೀನದಲ್ಲಿ ಇಟ್ಟುಕೊಳ್ಳಲು ದೇಹಿಗಳು ಸಮರ್ಥರಲ್ಲ.

೧೮. ವಿಶಾಲಾಕ್ಷೀ, ಜ್ಞಾನದಿಂದ ಚಿತ್ತವನ್ನೂ, ಸಂಶಯಾತ್ಮಕವಾದ ಮನಸ್ಸನ್ನೂ ಸ್ಥಿರವಾಗಿ ನಿಲ್ಲಿಸಿ ಒಂದಾಗಿ ಮಾಡಿ, ಸಮಚಿತ್ತವನ್ನು ಪಡೆಯು ವವರು ದೋಷ(ಪಾಪ)ದಿಂದ ಲಿಪ್ತರಾಗುವುದಿಲ್ಲ.

೧೯. ತಿನ್ನಲಾಗುವುದೆಲ್ಲವನ್ನೂ ತಿನ್ನುತ್ತಲೂ, ಪೇಯಾಪೇಯಗಳೆನ್ನದೆ ಕುಡಿಯುತ್ತಲೂ ಇದ್ದರೂ ನನ್ನಲ್ಲಿ ಸಮಚಿತ್ತವುಳ್ಳವನಾಗಿದ್ದರೆ ಅವನಿಗೆ ಕರ್ಮ ಬಂಧನವಿಲ್ಲ.

---

* ಜ್ಞಾನೀಶಾಶ್ಶರೀರಿಣಾಂ.

ಚಿತ್ತಂ ಮನಶ್ಚ ಬುದ್ಧಿಶ್ಚ ಮತ್ಸಂಸ್ಥಂ ಚ ಸಮಂ ಯದಿ ।
ಯತ್ಕಿಂಚಿತ್ಕುರ್ವತಃ ಕರ್ಮ ಪದ್ಮಪತ್ರಮಿವಾಂಭಸಿ ।
ಸಂಯೋಗಾನ್ನ ಚ ಲಿಪ್ಯೇತ ಸಮತ್ವಾದೇವ ನಾನ್ಯಥಾ ॥ ೨೦ ॥

ರಾತ್ರಿಂ ದಿವಂ ಮುಹೂರ್ತಂ ವಾ ಕ್ಷಣಂ ವಾ ಯದಿ ವಾ ಕಲಾ ।
ನಿಮೇಷಂ ವಾ ತ್ರುಟಿಂ ವಾಥ ದೇವಿ ಚಿತ್ತಂ ಸಮಂ ಕುರು ॥ ೨೧ ॥

ಸದಾ ದಿವಾನಿಶೋಶ್ಚೈವ ಕುರ್ವಂತಃ ಕರ್ಮಸಂಕರಂ ।
ತೇಽಪಿ ಯಾಂತಿ ಪರಾಂ ಸಿದ್ಧಿಂ ಯದಿ ಚಿತ್ತಂ ವ್ಯವಸ್ಥಿತಂ ॥ ೨೨ ॥

ಜಾಗ್ರತಃ ಸ್ವಪತೋ ವಾಪಿ ಶೃಣ್ವತಃ ಪಶ್ಯತೋಽಪಿ ವಾ ।
ಯೋ ಮಾಂ ಚಿತ್ತೇ ಚಿಂತಯತಿ ಮಚ್ಚಿತಸ್ಯ ಚ ಕಿಂಭಯಂ ॥ ೨೩ ॥

---

೨೦. ನನ್ನಲ್ಲಿಡುವ ಚಿತ್ತವೂ, ಬುದ್ಧಿಯೂ ಸಮವಾಗಿದ್ದರೆ ಯಾವುದೊಂದು ಕರ್ಮಮಾಡಿದರೂ ಅದರ ಸಂಬಂಧವನ್ನು ನೀರಿನಲ್ಲಿರುವ ಕಮಲದೆಲೆಯಂತೆ ಅಂಟಿಸಿಕೊಳ್ಳದಿರುವನು. ಹಾಗೆ ಅಂಟಿಸಿಕೊಳ್ಳದಿರುವುದು ಮನೋಬುದ್ದಿಗಳ ಸಮತೆಯಿಂದಲೇ ಹೊರತು ಬೇರೆಯ ವಿಧದಿಂದಲ್ಲ.

೨೧. ರಾತ್ರಿಯೂ, ಹಗಲೂ ಯಾವಾಗಲೂ ಆಗಲಿ, ಮುಹೂರ್ತವಾಗಲಿ, ಕ್ಷಣವಾಗಲಿ, ಕಲೆಯಾಗಲಿ ನಿಮಿಷವಾಗಲಿ, ತ್ರುಟಿಯೆಂಬ ಅಲ್ಪಕಾಲವಾಗಲಿ, ದೇವಿ, ಚಿತ್ತವನ್ನು ಸಮನಾಗಿಡು.

೨೨. ಚಿತ್ತವು ನೆಲೆಯಾಗಿದ್ದರೆ ಹಗಲೂ, ರಾತ್ರೆಯೂ, ಯಾವಾಗಲೂ ಪಾಪಪುಣ್ಯಕರ್ಮಗಳ ಸಂಕರವನ್ನು ಮಾಡುವವರು ಕೂಡ ಪರಮಸಿದ್ಧಿಯನ್ನು ಪಡೆಯುವರು.

೨೩. ಎಚ್ಚರಗೊಂಡಿರಲಿ, ನಿದ್ದೆಮಾಡುತ್ತಿರಲಿ, ಏನನ್ನಾದರೂ ಕೇಳುತ್ತಿರಲಿ, ನೋಡುತ್ತಲೇ ಇರಲಿ, ನನ್ನನ್ನು ಚಿತ್ತದಲ್ಲಿ ಧ್ಯಾನಿಸುತ್ತಿರುವವನಿಗೆ ಭಯವೇನೂ ಇಲ್ಲ,

ದುರ್ವೃತ್ತಮಪಿ ಚಾಂಡಾಲಂ ಬ್ರಾಹ್ಮಣಂ ಚಾಪಥಿ ಸ್ಥಿತಂ ।
ತಂ ತು ದೇವಿ ಪ್ರಶಂಸಾಮಿ ನಾನ್ಯಚಿತ್ತಂ ಕದಾಚನ ॥ ೨೪ ॥

ಯಜಂತಃ ಸರ್ವಧರ್ಮಜ್ಞಾ ಜ್ಞಾನಸಂಸ್ಕಾರಸಂಸ್ಕೃತಾಃ ।
ಮಯಿ ಚಿತ್ತಂ ಸಮಾಧಾಯ ಮಮ ಕರ್ಮಪರಾಯಣಾಃ ॥ ೨೫ ॥

ಯೇ ಮತ್ಕರ್ಮಾಣಿ ಕುರ್ವಂತಿ ಮಯಾ ಹೃದಿ ಸಮಾಶ್ರಿತಾಃ ।
ಸುಖನ್ನಿದ್ರಾಂ ಸಮಾದಾಯ ಸ್ವಪಂತಃ ಕರ್ಮಸಂಸ್ಥಿತಾಃ ॥ ೨೬ ॥

ಯೇಷಾಂ ಪ್ರಶಾಂತಂ ಚಿತ್ತಂ ವೈ ತೇಽಪಿ ದೇವಿ ಮಮ ಪ್ರಿಯಾಃ ॥ ೨೭ ॥
ಸರ್ವಮಾತ್ಮನಿ ಕರ್ಮ ಸ್ವಂ ಶುಭಂ ವಾ ಯದಿ ವಾಶುಭಂ ।
ಪ್ರಾಪ್ನುವಂತಿ ಚ ದುಃಖಾನಿ ಭ್ರಮುಚ್ಚಿತಾ ನರಾಧಮಾಃ ॥ ೨೮ ॥

---

೨೪. ದೇವಿ, ನನ್ನಲ್ಲಿಯೇ ಚಿತ್ತವುಳ್ಳವನಾಗಿರುವ, ದುರ್ವೃತ್ತನಾದ ಪಂಚಮನನ್ನೂ, ಅಮಾರ್ಗದಲ್ಲಿರುವ ಬ್ರಾಹ್ಮಣನನ್ನೂ ಹೊಗಳುವೆನೇ ಹೊರತು, ಅನ್ಯಚಿತ್ತನಾದವನನ್ನು ಎಂದಿಗೂ ಹೊಗಳಲಾರೆನು.

೨೫–೨೭. ದೇವಿ, ಸರ್ವಧರ್ಮಗಳನ್ನೂ ಅರಿತವರೂ, ಜ್ಞಾನಸಂಸ್ಕಾರ ದಿಂದ ಶುದ್ಧರೂ, ನನ್ನ ಕರ್ಮಗಳಲ್ಲಿ ನಿರತರೂ ಆಗಿ ನನ್ನಲ್ಲಿ ಚಿತ್ತವನ್ನಿಟ್ಟು ಪೂಜಿಸುತ್ತ ಅಥವಾ ಯಜ್ಞಮಾಡುತ್ತ, ನನ್ನ ಕರ್ಮಗಳನ್ನು ಆಚರಿಸುವವರೂ, ಕರ್ಮನಿಷ್ಠರಾಗಿ ನನ್ನನ್ನು ಹೃದಯದಲ್ಲಿ ನೆಲೆಗೊಳಿಸಿ ಸುಖನಿದ್ರೆಯಿಂದ ಮಲಗು ವವರಾದರೂ ಪ್ರಶಾಂತಚಿತ್ತರಾಗಿರುವವರೂ ನನಗೆ ಪ್ರಿಯರು.

೨೮. ಚಂಚಲಚಿತ್ತರಾದ ನರಾಧಮರು ಶುಭಕರ್ಮವನ್ನು ನಿಷ್ಕಾಮ ರಾಗಿ ಕರ್ತವ್ಯದೃಷ್ಟಿಯಿಂದ ಮಾಡದೆ ಸ್ವಾರ್ಥತೆಯಿಂದ ಮಾಡಿ, ಅಶುಭಕರ್ಮ ಗಳಿಂದ ಪಡೆಯುವಂತೆಯೇ ಆದರಿಂದಲೂ ದುಃಖವನ್ನೇ ಪಡೆಯುವರು.

ಚಿತ್ತಂ ನಾಶೋ ಹಿ ಲೋಕಸ್ಯ ಚಿತ್ತಂ ಮೋಕ್ಷಸ್ಯ ಕಾರಣಂ ।
ತಸ್ಮಾಚ್ಚಿತ್ತಂ ಸಮಾದಾಯ ಮಾಂ ಪ್ರಪದ್ಯಸ್ವ ಮೇದಿನಿ ।
ನ್ಯಸ್ಯ ಜ್ಞಾನಂ ಚ ಯೋಗಂ ಚ ಏಕಚಿತ್ತಾ ಭಜಸ್ವಮಾಂ ॥ ೨೯ ॥

ಮಚ್ಚಿತ್ತಸ್ಸತತಂ ಯೋ ಮಾಂ ಭಜೇತ ನಿಯತವ್ರತಃ ।
ಮತ್ಪಾರ್ಶ್ವಂ ಪ್ರಾಪ್ಯ ಪರಮಂ ಮದ್ಭಾವಾಯೋಪಪದ್ಯತೇ ॥ ೩೦ ॥

ಮಯಾ ಚೈವ ಪುರಾ ಸೃಷ್ಟಂ ಪ್ರಜಾರ್ಥೇನ ವಸುಂಧರೇ ॥ ೩೧ ॥

ಮಾಸೇ ಮಾಸೇ ತು ಗಂತವ್ಯಂ ಋತುಕಾಲೇ ವ್ಯವಸ್ಥಿತಂ ।
ಏಕಚಿತ್ತಂ ಸಮಾದಾಯ ಯದೀಚ್ಛೇತ್ತು ಮಮ ಪ್ರಿಯಂ ॥ ೩೨ ॥

ನ ಗಚ್ಛೇದ್ಯದಿ ಮಾಸೇ ತು ಋತುಕಾಲವ್ಯವಸ್ಥಿತಂ ।
ಪಿತರಸ್ತಸ್ಯ ಹನ್ಯಂತೇ ದಶ ಪೂರ್ವಾ ದಶಾಪರಾಃ ॥ ೩೩ ॥

---

೨೯. ಭೂಮೀ, ಜನರಿಗೆ ಚಿತ್ತವೇ ನಾಶಕ್ಕೂ, ಮೋಕ್ಷಕ್ಕೂ ಕಾರಣವಾದುದು. ಆದುದರಿಂದ ಚಿತ್ತವನ್ನು ಸರಿಯಾಗಿ ಸ್ಥಿರಪಡಿಸಿಕೊಂಡು ನನ್ನನ್ನು ಆಶ್ರಯಿಸು. ಜ್ಞಾನವನ್ನೂ, ಯೋಗವನ್ನೂ ನನ್ನಲ್ಲಿಯೇ ಇಟ್ಟು ಏಕಚಿತ್ತಳಾಗಿ ನನ್ನನ್ನು ಭಜಿಸು.

೩೦. ಸ್ಥಿರವ್ರತಿಯೂ, ನನ್ನಲ್ಲಿಯೇ ಚಿತ್ತವುಳ್ಳವನೂ ಆಗಿ ಯಾವಾಗಲೂ ನನ್ನನ್ನು ಭಜಿಸುವವನು ಶ್ರೇಷ್ಠವಾದ ನನ್ನ ಪಾರ್ಶ್ವವನ್ನು ಪಡೆದು, ನನ್ನಂತೆ ಆಗಲು ಎಂದರೆ ನನ್ನ ಸಾರೂಪ್ಯವನ್ನು ಪಡೆಯಲು ಅರ್ಹನಾಗುವನು.

೩೧-೩೨ ವಸುಂಧರೇ, ಪ್ರಜೆ ಅಥವಾ ಸಂತಾನಾರ್ಥವಾಗಿ ಪೂರ್ವದಲ್ಲಿ ನಾನೇ ಸ್ತ್ರೀಯರಿಗೆ ಋತುಕಾಲವನ್ನು ಸೃಷ್ಟಿಸಿದೆನು ನನ್ನ ಪ್ರೀತಿಯನ್ನು ಬಯಸುವುದಾದರೆ ಪ್ರತಿತಿಂಗಳಲ್ಲಿಯೂ ಋತುಕಾಲದಲ್ಲಿ ಪತ್ನೀಸಂಗಮವನ್ನು ಮಾಡಬೇಕಾದುದು ಆವಶ್ಯಕ.

೩೩. ತಿಂಗಳ ಋತುಕಾಲದಲ್ಲಿ ನಿಯಮದಂತೆ ಪತ್ನೀಸಂಗಮವನ್ನು ಮಾಡದಿದ್ದರೆ ಮಾಡದಿರುವವನ ಹಿಂದಿನ ಹತ್ತುತಲೆಯ ಪಿತೃಗಳೂ, ಮುಂದಿನ ಹತ್ತುತಲೆಯವರೂ ಹತರಾಗುವರು.

ನ ತತ್ರ ಕಾಮಲೋಭೇನ ಮೋಹೇನ ಚ ವಸುಂಧರೇ |
ತ್ಯಕ್ತ್ವಾನಂಗಂ ಚ ಮೋಹಂ ಚ ಪಿತ್ರರ್ಥಾಯ ಸ್ತ್ರಿಯಂ ವ್ರಜೇತ್ ||೩೪||

ದ್ವಿತೀಯಾನ್ನಸ್ಪೃಶೇನ್ನಾರೀಂ ಲೋಭಮೋಹಾತ್ಕಥಂಚನ |
ನ ಸಂಸ್ಪೃಶೇತ್ತೃತೀಯಾಂ ತು ಚತುರ್ಥೀಂ ನ ಕದಾಚನ || ೩೫ ||

ಕೃತೇ ಸಂಭೋಗಧರ್ಮೇ ತು ಕೃತಕೌತುಕಸಂಸ್ಥಿತಃ |
ಶಯನೇ ನ ಸ್ತ್ರಿಯಂ ಪಶ್ಯೇದ್ಯದೀಚ್ಛೇಚ್ಛುದ್ಧಿಮುತ್ತಮಾಂ || ೩೬ ||

ಕೌತುಕೇ ಕೃತಕೃತ್ಯೇ ತು ಮಮ ಕರ್ಮಪರಾಯಣಃ |
ಜಲಸ್ನಾನಂ ತತಃ ಕುರ್ಯಾದನ್ಯವಸ್ತ್ರಪರಿಗ್ರಹಂ || ೩೭ ||

ಅಪೂರ್ಣೇ ಋತುಕಾಲೇ ತು ಯೋಽಭಿಗಚ್ಛೇದ್ರಜಸ್ವಲಾಂ |
ರೇತಃಪಾಃ ಪಿತರಸ್ತಸ್ಯ ಏವಮೇತನ್ನ ಸಂಶಯಃ || ೩೮ ||

---

೩೪. ವಸುಂಧರೇ, ಆ ಋತುಕಾಲದಲ್ಲಿ ಕಾಮಾತುರದಿಂದಾಗಲಿ ಮೋಹದಿಂದಾಗಲಿ ಅಲ್ಲ. ಕಾಮಮೋಹಗಳನ್ನು ಬಿಟ್ಟು ಪಿತೃಗಳಿಗಾಗಿ ಪತ್ನೀಸಮಾಗಮವನ್ನು ಮಾಡಬೇಕು.

೩೫. ರಜಸ್ವಲೆಯಾದ ಎರಡನೆಯ ದಿನವೂ ಸ್ತ್ರೀಯನ್ನು ಲೋಭದಿಂದಾಗಲಿ, ಮೋಹದಿಂದಾಗಲಿ ಎಂದಿಗೂ ಮುಟ್ಟಬಾರದು. ಮೂರನೆಯದಿನವೂ ಮುಟ್ಟಬಾರದು. ನಾಲ್ಕನೆಯದಿನವೂ ಎಂದಿಗೂ ಮುಟ್ಟಬಾರದು.

೩೬. ಉತ್ತಮವಾದ ಶುದ್ಧಿಯನ್ನು ಬಯಸುವುದಾದರೆ ಸಂಭೋಗ ಮಾಡಿದ ಬಳಿಕ ಕುತೂಹಲವುಳ್ಳವನಾಗಿ ಹಾಸಿಗೆಯಲ್ಲಿ ಸ್ತ್ರೀಯನ್ನು ನೋಡಬಾರದು.

೩೭. ನನ್ನ ಕರ್ಮನಿರತನಾದವನು ಸ್ತ್ರೀಸಮಾಗಮವನ್ನು ಮಾಡಿದ ಬಳಿಕ ನೀರಿನಿಂದ ಸ್ನಾನವನ್ನು ಮಾಡಿ ಬೇರೆಯ ಶುದ್ಧವಸ್ತ್ರಗಳನ್ನು ಧರಿಸಬೇಕು.

೩೮. ರಜಸ್ಸು ಪೂರ್ಣವಾಗಿ ನಿವೃತ್ತಿಯಾಗದಿರುವಾಗ ರಜಸ್ವಲೆಯ ಸಂಗವನ್ನು ಮಾಡುವವನ ಪಿತೃಗಳು ರೇತಸ್ಸನ್ನು ಪಾನಮಾಡುವವರಾಗುವುದರಲ್ಲಿ ಸಂಶಯವಿಲ್ಲ.

ಏಕಾಂ ತು ಪುರುಷೋ ಯಾತಿ ದ್ವಿತೀಯಾಂ ಕಾಮಮೋಹಿತಃ ।
ತೃತೀಯಾಂ ವಾ ಚತುರ್ಥೀಂ ವಾ ತದಾ ಸ ಪುರುಷೋಧಮಃ ।
ಸರ್ವಸ್ಯೈವ ತು ಲೋಕಸ್ಯ ಸಮಯೋಯಂ ಹಿ ಮತ್ಕೃತಃ ॥ ೩೯ ॥

ಋತುಕಾಲೇ ತು ಸರ್ವಾಸಾಂ ಪಿತ್ರರ್ಥಂ ಭೋಗ ಇಷ್ಯತೇ ।
ಋತುಕಾಲಾಭಿಗಾಮೀ ಯೋ ಬ್ರಹ್ಮಚಾರ್ಯೇವ ಸಮ್ಮತಃ ॥ ೪೦ ॥

ನ ಗಚ್ಛತಿ ಚ ಯಃ ಕ್ರೋಧಾನ್ಮೋಹಾದ್ವಾ ಪುರುಷಾಧಮಃ ।
ಋತೌ ಋತೌ ಭ್ರೂಣಹತ್ಯಾಂ ಪ್ರಾಪ್ನೋತಿ ಪುರುಷಶ್ಚರನ್ ॥ ೪೧ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ಜ್ಞಾನಂ ತು ಚಿತ್ತಯೋಗಸ್ಯ ಕರ್ಮಯೋಗಸ್ಯ ಯತ್ಕ್ರಿಯಾ ॥ ೪೨ ॥

---

೩೯. ರಜಸ್ವಲೆಯಾದವಳನ್ನು, ಕಾಮಮೋಹಿತನಾಗಿ ಮೊದಲನೆಯ ದಿನವಾಗಲಿ, ಎರಡನೆಯ ದಿನವಾಗಲಿ, ಮೂರನೆಯ ದಿನವಾಗಲಿ, ನಾಲ್ಕನೆಯ ದಿನವಾಗಲಿ ಗಮಿಸುವ ಪುರುಷನು ಅಧಮನು(ನೀಚನು). ಆದುದರಿಂದ ರಜಸ್ವಲೆಯಾದವಳನ್ನು ನಾಲ್ಕುದಿನಗಳಾಗುವವರೆಗೂ ಮುಟ್ಟಲೇಬಾರದು. ಲೋಕದ ಸರ್ವಜನರಿಗೂ ಈ ನಿಯಮವನ್ನು ನಾನು ಮಾಡಿರುವೆನು.

೪೦. ಋತುಕಾಲದಲ್ಲಿ ಎಂದರೆ ರಜಸ್ವಲೆಯಾದ ಹದಿನಾರುದಿನಗಳವರೆಗೆ ವಿಧಿಯಂತೆ ಅರ್ಹರಾದ ಎಲ್ಲಾ ಸ್ತ್ರೀಯರಿಗೂ ಪಿತೃಗಳಿಗಾಗಿ ಸಂಭೋಗವು ವಿಹಿತವಾಗಿದೆ. ಋತುಕಾಲದಲ್ಲಿ ಸ್ವಸ್ತ್ರೀಸಂಗಮಾಡುವವನು ಬ್ರಹ್ಮಚಾರಿಯೆಂದೇ ಎನಿಸುವನು.

೪೧. ಆರೋಗ್ಯದಿಂದ ಸಂಚರಿಸುತ್ತಿದ್ದೂ ಕೋಪದಿಂದಾಗಲಿ, ಅಜ್ಞಾನದಿಂದಾಗಲಿ ಋತುಕಾಲದಲ್ಲಿ ಅರ್ಹಳಾದ ಸ್ವಸ್ತ್ರೀಯ ಸಂಗಮವನ್ನು ಮಾಡದ ಪುರುಷಾಧಮನು ಪ್ರತಿಯೊಂದು ಋತುಕಾಲದಲ್ಲಿಯೂ ಭ್ರೂಣಹತ್ಯೆಯ ಪಾಪವನ್ನು ಪಡೆಯುವನು.

೪೨-೪೩. ವಸುಂಧರೇ, ಬೇರೊಂದು ವಿಚಾರವನ್ನು ನಿನಗೆ ಹೇಳುತ್ತೇನೆ. ಕೇಳು ಜ್ಞಾನಯೋಗದಲ್ಲಿ ನಿತ್ಯನೈಮಿತ್ತಿಕಕರ್ಮಮಿಶ್ರವಾಗಿದ್ದರೂ ಜ್ಞಾನಾಂಶವೇ ಪ್ರಧಾನವಾಗಿರುವುದು. ಕರ್ಮಯೋಗವು ಆತ್ಮಜ್ಞಾನಮಿಶ್ರಿತವಾಗಿದ್ದರೂ

ಕರ್ಮಣಾ ಯಾಂತಿ ಮತ್ಸ್ಥಾನಂ*ಯೇ ತು ಮದ್ಧ್ಯಾನನಿಷ್ಠಿತಾಃ |
ಯಾಂತಿ ಯೋಗವಿದಃ ಸ್ಥಾನಂ ನಾಸ್ತಿ ಚಾನ್ಯಾಪರಾ ಗತಿಃ || ೪೩ ||

ಜ್ಞಾನಂ ಯೋಗಂ ಚ ಸಾಂಖ್ಯಂ ಚ ನಾಸ್ತಿ ಚಿತ್ತವ್ಯಪಾಶ್ರಿತಂ |
ಲಭಂತೇ ಪುಷ್ಕಲಾಂ ಸಿದ್ಧಿಂ ಮಮ ಮಾರ್ಗಾನುಸಾರಿಣಃ || ೪೪ ||

÷ಯಸ್ತು ಭಾಗವತೋ ಭೂತ್ವಾ ಋತುಕಾಲೇ ವ್ಯವಸ್ಥಿತಃ |
ವಾಯುಭಕ್ಷಸ್ತತಸ್ತಿಷ್ಠೇದ್ಭೂಮೇ ತ್ರೀಣಿ ದಿನಾನಿ ಚ || ೪೫ ||

ಅಥ ತತ್ರ ಚತುರ್ಥೇ ತು ದಿನೇ ಪ್ರಾಪ್ತೇ ವಸುಂಧರೇ |
ಕೃತ್ವಾ ವೈ ಸಿದ್ಧಿಕರ್ಮಾಣಿ ನ ಗಚ್ಛೇತ್ಯಪರಾಣಿ ಚ || ೪೬ ||

ಆದರಲ್ಲಿ ಕ್ರಿಯಾಂಶವೇ ಪ್ರಧಾನವಾಗಿರುವುದು. ಮನುಷ್ಯರು ಕರ್ಮಯೋಗ ನಿಷ್ಪನ್ನಜ್ಞಾನಯೋಗರಾಗಿ ನನ್ನ ಸ್ಥಾನವನ್ನು ಪಡೆಯುವರು. ಯೋಗಜ್ಞರು ನನ್ನ ಸ್ಥಾನವನ್ನು ಪಡೆಯುವರು. ಬೇರೆಯದಾದ ಉತ್ತಮಮಾರ್ಗವಿಲ್ಲ.

೪೪. ಚಿತ್ತರಹಿತವಾದ(ಚಂಚಲಚಿತ್ತನ) ಜ್ಞಾನವೂ, ಯೋಗವೂ, ಸಾಂಖ್ಯವೂ ಉಪಯೋಗವಿಲ್ಲದುದು. ಸ್ಥಿರಚಿತ್ತರಾಗಿ ನನ್ನ ಮಾರ್ಗವನ್ನನುಸರಿಸುವವರು ಸಂಪೂರ್ಣಸಿದ್ಧಿಯನ್ನು ಪಡೆಯುವರು.

೪೫–೪೬. ಭೂಮೀ, ಭಗವದ್ಭಕ್ತ(ಭಾಗವತ)ರಾದವರು ಋತುವಾದರೆ ಆ ಮೂರುದಿನವೂ ಉಪವಾಸವಿದ್ದು, ನಾಲ್ಕನೆಯದಿನ ಬರಲಾಗಿ ಸ್ನಾನಮಾಡಿ, ಸಿದ್ಧಿಕರ್ಮಗಳನ್ನು ಮಾತ್ರ ಮಾಡಿ, ಬೇರೆಯ ಕರ್ಮಗಳನ್ನು ಮಾಡದಿರಬೇಕು.

---

* ಯಾಂತಿ. ಮದ್ಧ್ಯಾನ

÷ ಪುರುಷರೂ ಋತುವಾಗುವರೆಂಬ ಅರ್ಥವು ಇಲ್ಲಿ ಕೆಲವು ಶ್ಲೋಕಗಳಲ್ಲಿ ತೋರುತ್ತದೆ. ಇದು ಅಪ್ರಸಿದ್ಧವೂ, ವಿಚಾರಾರ್ಹವೂ ಆಗಿದೆ.

ತತಃ ಸ್ನಾನೇನ ಕುರ್ವೀತ ಶಿರಸೋ ಮಲಶೋಧನಂ ।
ಶುಕ್ಲಾಂಬರಧರೋ ಭೂತ್ವಾ ಚಿತ್ತಂ ಕೃತ್ವಾ ಸಮಾಹಿತಂ ॥ ೪೭ ॥

ತತೋ ಬುದ್ಧಿಂ ಮನಶ್ಚೈವ ಸಮಂ ಕೃತ್ವಾ ವಸುಂಧರೇ ।
ಪಶ್ಚಾತ್ಕುರ್ವಂತಿ ಕರ್ಮಾಣಿ ಸದಾ ತೇ ಮೇ ಹೃದಿ ಸ್ಥಿತಾಃ ॥ ೪೮ ॥

ಮಮ ಪ್ರಾಪಣಕಂ ಕೃತ್ವಾ ತತಃ ಕುರ್ವಂತಿ ಭೋಜನಂ ।
ಅಂಜಲಿಂ ಶಿರಸಾ ಕೃತ್ವಾ ಮಯೋಕ್ತಂ ಕರ್ಮಸಂಜ್ಞಿತಂ ॥ ೪೯ ॥

ತತ್ರ ಮಂತ್ರಃ—

ಆದಿರ್ಭವಾನ್ಗುಪ್ತಮನಂತಮಧ್ಯೋ
ರಜಸ್ವಲಾ ದೇವ ವಯಂ ನಮಾಮಃ
ಉಪೋಷಿತಾ ತ್ರೀಣಿ ದಿನಾನಿ ಚೈವಂ ।
ಮುಕ್ತ್ಯಾ ರತಂ ವಾಸುದೇವ ನಮಾಮಃ ॥ ೫೦ ॥

೪೭–೪೮. ವಸುಂಧರೇ, ಬಳಿಕ ಎಂದರೆ ಐದನೆಯದಿನ ಸೀಗೆಯಕಾಯೀ ಮೊದಲಾದುವುಗಳನ್ನುಜ್ಜಿಕೊಂಡು ಸ್ನಾನಮಾಡಿ ತಲೆಯ ಕೊಳೆಯನ್ನೂ ಪೂರ್ಣವಾಗಿ ಹೋಗಿಸಬೇಕು. ಸ್ನಾನವಾದಮೇಲೆ ಶುದ್ಧವಾದ ಬಿಳಿಯ ವಸ್ತ್ರವನ್ನು ಧರಿಸಿ ಚಿತ್ತವನ್ನು ಶಾಂತವಾಗಿ ಸ್ಥಿರವಾಗಿ ನಿಲ್ಲಿಸಿ, ಬುದ್ಧಿಯನ್ನೂ, ಮನಸ್ಸನ್ನೂ ಒಂದುಮಾಡಿ, ಆಮೇಲೆ ಕರ್ಮಮಾಡುವವರು ಯಾವಾಗಲೂ ನನ್ನ ಹೃದಯದಲ್ಲಿರುವರು

೪೯. ಅವರು, ನಾನು ಹೇಳಿರುವ ಕರ್ಮವೆಂಬ ಪೂಜಾದಿಕಾರ್ಯಗಳನ್ನು ಮಾಡಿ, ನನಗೆ ನೈವೇದ್ಯವನ್ನು ಅರ್ಪಿಸಿ, ತಲೆಯಮೇಲೆ ಕೈಮುಗಿದುಕೊಂಡು ವಂದಿಸಿ, ಬಳಿಕ ಭೋಜನವನ್ನು ಮಾಡಬೇಕು.

೫೦–೫೧. ಭೂಮೀ, ವಂದನೆಮಾಡುವಾಗ– "ದೇವ, ನೀನು ಪ್ರಪಂಚಕ್ಕೆ ಆದಿಯಾಗಿ ಮಧ್ಯಾಂತರಹಿತನಾಗಿ ಗುಪ್ತನಾಗಿದ್ದೀಯೆ. ರಜಸ್ವಲರಾಗಿದ್ದ ನಾವು ಮೂರುದಿನ ಉಪವಾಸಮಾಡಿದ್ದೇವೆ. ಮುಕ್ತಿಯಲ್ಲಿ ಆನಂದಿಸುವ ವಾಸುದೇವನಾದ ನಿನ್ನನ್ನು ನಾವು ಹೀಗೆ ವಂದಿಸುತ್ತೇವೆ, ವಂದಿಸುತ್ತೇವೆ."

ತತ ಏತೇನ ಮಂತ್ರೇಣ ಶುದ್ಧಾ ಭೂಮೇ ರಜಸ್ವಲಾಃ |
ಯೇ ತು ಕುರ್ವಂತಿ ಕರ್ಮಾಣಿ ಸ್ನಾತಾಸ್ನಾತಾಶ್ಚ ಭಾಗಶಃ || ೫೦ ||

ಏವಂ ದುಷ್ಯತಿ ನೋ ದೇವಿ ನಾರೀ ವಾ ಪುರುಷೋಽಪಿವಾ |
ಕುರ್ವಂತಿ ಮಮ ಕರ್ಮಾಣಿ ತೇ ಯಥಾವನ್ಮಮ ಪ್ರಿಯಾಃ || ೫೨ ||

ಸರ್ವಾಣ್ಯನುದಿನಂ ಭದ್ರೇ ಮಮ ಚಿತ್ತಾನುಸಾರಿಣಃ || ೫೩ ||

ಪ್ರಾಪ್ನುಯಾತ್ಪುರುಷಃಸ್ತ್ರೀ ವಾ ರಜಸಾ ದೂಷಿತಾ ಅಪಿ ।
ಏಕಚಿತ್ತಸ್ತತೋ ಭೂತ್ವಾ ಭೂಮೇ ಚೇಂದ್ರಿಯನಿಗ್ರಹಾತ್ || ೫೪ ||

ಮಮ ಯೋಗೀಷ್ಟಸನ್ಯಾಸಂ ಯದೀಚ್ಛೇತ್ಪರಮಾಂ ಗತಿಂ |
ಏವಂ ಕುರ್ವಂತಿ ಯೇ ನಿತ್ಯಂ ಸ್ತ್ರಿಯಃ ಪುಂಸೋ ನಪುಂಸಕಂ || ೫೫ ||

ಎಂಬ ಅರ್ಥವುಳ್ಳ 'ಆದಿರ್ಭವಾನ್ ನಮಾಮಃ' ಎಂಬ (ಮೇಲಿನ ೫೦ ನೆಯ ಶ್ಲೋಕ) ಮಂತ್ರವನ್ನು ಹೇಳುವುದರಿಂದ ರಜಸ್ವಲರು ಪೂರ್ಣವಾಗಿಯೋ, ಅಪೂರ್ಣವಾಗಿಯೋ ಸ್ನಾನಮಾಡಿದವರಾದರೂ ಶುದ್ಧರಾಗಿ ಕರ್ಮಮಾಡುವರಾಗುವರು.

೫೨-೫೩. ದೇವೀ, ಹಿಂದೆ ಹೇಳಿರುವಹಾಗೆ ಮಾಡುವುದರಿಂದ ಸ್ತ್ರೀಯರಾಗಲಿ, ಪುರುಷರಾಗಲಿ ಪಾಪ (ದೋಷ)ವುಳ್ಳವರಾಗುವುದಿಲ್ಲ. ನನ್ನ ಇಷ್ಟದಂತೆ ನಿತ್ಯವೂ ನನ್ನ ಸರ್ವಕರ್ಮಗಳನ್ನೂ ವಿಧಿಯಂತೆ ಸರಿಯಾಗಿ ಮಾಡುವವರು ನನಗೆ ಪ್ರಿಯರು.

೫೪-೫೫. ಭೂಮೀ, ನನ್ನ ಸಂಬಂಧವುಳ್ಳ ಪುರುಷನಾಗಲಿ, ರಜೋದೂಷಿತಳಾದ ಸ್ತ್ರೀಯೇ ಆಗಲಿ ಪರಮಗತಿಯನ್ನು ಬಯಸುವುದಾದರೆ ಏಕಚಿತ್ತರಾಗಿ ಇಂದ್ರಿಯಗಳನ್ನು ನಿಗ್ರಹಿಸಿ ಅವರಿಗೆ ಇಷ್ಟವಾದ ರೀತಿಯ ಸನ್ಯಾಸವನ್ನು ಪಡೆಯಬೇಕು. ಸ್ತ್ರೀಯಾಗಲಿ, ಪುರುಷನಾಗಲಿ, ನಪುಂಸಕನೇ ಆಗಲಿ, ಹೀಗೆ ನಿತ್ಯವೂ ಮಾಡುವವರು ನನಗೆ ಪ್ರಿಯರು.

ಜ್ಞಾನೇ ಸತ್ಯಪ್ಯಯೋಗಾನಾಂ ಮಮ ಕರ್ಮಸು ಕರ್ಮಿಣಾಂ ।
ಅದ್ಯಾಪಿ ಮಾಂ ನ ಜಾನಂತಿ ನರಾಸ್ಸಂಸಾರಸಂಶ್ರಿತಾಃ ।
ತೇ ವೈ ಭೂಮೇ ವಿಜಾನಂತಿ ಯೇ ಮದ್ಭಕ್ತ್ಯಾ ವ್ಯವಸ್ಥಿತಾಃ ॥ ೫೬ ॥

ಮಾತಾಪಿತೃಸಹಸ್ರಾಣಿ ಪುತ್ರದಾರಶತಾನಿ ಚ ।
ಚಕ್ರವತ್ಪರಿವರ್ತಂತೇ ಯನ್ಮೋಹಾನ್ಮಾಂ ನ ಜಾನತೇ ॥ ೫೭ ॥

ಅಜ್ಞಾನೇನಾವೃತೋ ಲೋಕೋ ಮೋಹೇನ ಚ ವಶೀಕೃತಃ ।
ಸಂಗೈಶ್ಚ ಬಹುಭಿರ್ಬದ್ಧಸ್ತೇನ ಚಿತ್ತಂ ನ ಸಂನ್ಯಸೇತ್ ॥ ೫೮ ॥

---

೫೬. ನನ್ನ ಸಂಬಂಧವಿಲ್ಲದ ಕರ್ಮಯೋಗಿಗಳಿಗೆ ಕರ್ಮಗಳಲ್ಲಿ ಜ್ಞಾನವಿದ್ದರೂ ಅವರು ಸಂಸಾರಾಶ್ರಿತರಾಗಿರುವರೇ ಹೊರತು ನನ್ನನ್ನು ಎಂದಿಗೂ ಅರಿಯರು. ಯಾರು ನನ್ನ ಭಕ್ತಿನಿರತರೋ ಅವರೇ ನನ್ನನ್ನು ಅರಿಯುವರು ಎಂದರೆ ಸೇರುವರು.

೫೭. ಮೋಹದಿಂದ ನನ್ನನ್ನು ಅರಿಯದಿರುವುದರಿಂದಲೇ ಮನುಷ್ಯರಿಗೆ ಸಾವಿರಾರುಜನ ತಾಯಿತಂದೆಗಳೂ, ಹೆಂಡತಿ ಮಕ್ಕಳುಗಳೂ ಚಕ್ರದಂತೆ ಮತ್ತೆ ಮತ್ತೆ ಸುತ್ತಿಬರುತ್ತಲೇ ಇರುವರು. ಎಂದರೆ ಅವರು ಮುಕ್ತರಾಗದೆ ಮತ್ತೆ ಮತ್ತೆ ಸಾವಿರಾರುಜನ್ಮಗಳನ್ನು ಪಡೆಯುತ್ತಲೇ ಇರುವರು.

೫೮. ಜನರು ಅಜ್ಞಾನದಿಂದಾವೃತರಾಗಿ ಮೋಹಕ್ಕೆ ಸಿಕ್ಕಿಕೊಂಡು ಹಲವು ಸಂಬಂಧಗಳಿಂದ ಬದ್ಧರಾಗಿರುವರು. ಆದುದರಿಂದ ಅವರು ಚಿತ್ತವು ನನ್ನಲ್ಲಿ ನೆಲೆಯಾಗಿ ನಿಲ್ಲುವುದಿಲ್ಲ.

ಗಚ್ಛತ್ಯನ್ಯತ್ರ ಮಾತಾ ವೈ ಪಿತಾ ಚಾನ್ಯತ್ರ ಗಚ್ಛತಿ ।
ಪುತ್ರಾಶ್ಚಾನ್ಯತ್ರ ಗಚ್ಛಂತಿ ದಾಸಶ್ಚಾನ್ಯತ್ರ ಗಚ್ಛತಿ ।
ಜಾಯಂತೇ ಚಾತ್ಮನಃ ಸ್ಥಾನೇ ಸ್ವಸ್ವಕರ್ಮಸಮುದ್ಭವೇ ॥ ೫೯ ॥

ಜ್ಞಾನಮೂಢಾ ವರಾರೋಹೇ ನರಾಸ್ಸಂಸಾರಮೋಹಿತಾಃ ॥ ೬೦ ॥

ಅಲ್ಪಕಾಲಂ ಪರಂ ಚೈವ ಮಾಸಸಂವತ್ಸರೇತಿ ಚ ।
ಭವಿಷ್ಯಂತಿ ಮನಃ ಕೃತ್ವಾ ನಮೇ ಮೂರ್ತ್ಯಾ ಸಹಾಸತೇ ॥ ೬೧ ॥

ಯಸ್ತ್ವೇತದ್ವಿದಿತಂ ಸರ್ವಂ ನ್ಯಾಸಯೋಗಂ ವಸುಂಧರೇ ।
ಯೋಗೇನ್ಯಸ್ಯ ಸದಾತ್ಮಾನಂ ಮುಚ್ಯತೇ ನ ಚ ಸಂಶಯಃ ॥ ೬೨ ॥

---

೫೯. ಮನುಷ್ಯನಿಗೆ ತಾಯಿಯೆನಿಸಿಕೊಂಡಿರುವಳು ಈ ದೇಹವನ್ನು ಬಿಟ್ಟು ಎಲ್ಲೋ ಹೋಗುವಳು. ತಂದೆಯೆನಿಸಿದವನು ಮತ್ತೆಲ್ಲೋ ಹೋಗುವನು. ಮಕ್ಕಳು ಇನ್ನೆಲ್ಲೋ ಹೋಗುವರು. ಸೇವಕರು ಬೇರೆಲ್ಲೋ ಹೋಗುವರು. ಹಾಗೆ ಹೋದವರು ತಮ್ಮ ತಮ್ಮ ಕರ್ಮಗಳಿಂದ ದೊರೆಯುವ ಬೇರೆ ಬೇರೆ ತಮ್ಮ ತಮ್ಮ ಎಡೆಯಲ್ಲಿ ಹುಟ್ಟುವರು.

೬೦–೬೧. ವರಾರೋಹೇ, ಸಂಸಾರಮೋಹಿತರಾಗಿ, ಜ್ಞಾನರಹಿತರಾದ ಯಾವ ಮೂಢರು ತಿಂಗಳಾಗಲಿ, ವರ್ಷವಾಗಲಿ, ಎಂದರೆ ಅಲ್ಪಕಾಲವಾಗಲಿ, ಬಹುಕಾಲವಾಗಲಿ ನನ್ನ ಮೂರ್ತಿಯೊಡನೆ ಮನಸ್ಸನ್ನಿಟ್ಟು ಇರುವುದಿಲ್ಲವೊ ಅವರು ಮತ್ತೆ ಜನ್ಮವನ್ನು ಪಡೆಯುವರು. ಮೂಢರಾದರೂ ಯಾರು ನನ್ನಲ್ಲಿ ಮನಸ್ಸನ್ನಿಟ್ಟಿರುವರೋ ಅವರು ಪುನರ್ಜನ್ಮವನ್ನು ಪಡೆಯುವುದಿಲ್ಲ.

೬೨. ವಸುಂಧರೇ, ಈ ಸನ್ಯಾಸಯೋಗವೆಲ್ಲವನ್ನೂ ಅರಿತವನು ಯಾವಾಗಲೂ ಮನಸ್ಸನ್ನು ನನ್ನಲ್ಲಿಟ್ಟು ಅಥವಾ ನನಗೆ ಶರಣಾಗತನಾಗಿ ಸಂಸಾರದಿಂದ ವಿಮುಕ್ತನಾಗುವುದರಲ್ಲಿ ಸಂಶಯವಿಲ್ಲ.

ಯ ಏತಚ್ಛೃಣುಯಾನ್ನಿತ್ಯಂ ಕಲ್ಯಮುತ್ಥಾಯ ಮಾನವಃ ।
ಪುಷ್ಕಲಾಂ ಲಭತೇ ಸಿದ್ಧಿಂ ಮಮ ಲೋಕಂ ಚ ಗಚ್ಛತಿ ॥ ೬೩ ॥

ಏತತ್ತೇ ಕಥಿತಂ ಭದ್ರೇ ರಹಸ್ಯಂ ಪರಮಂ ಮಹತ್ ।
ತ್ವಯಾ ಪೃಷ್ಟಂ ಚ ಯದ್ದೇವಿ ಮಮ ಭಕ್ತಸುಖಾವಹಂ ॥ ೬೪ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಗುಹ್ಯಕರ್ಮಮಾಹಾತ್ಮ್ಯ
ವರ್ಣನಂ ನಾಮ ದ್ವಾಚತ್ವಾರಿಂಶದಧಿಕ ಶತತಮೋಽಧ್ಯಾಯಃ

---

೬೩. ನಿತ್ಯವೂ ಪ್ರಾತಃಕಾಲ ಎದ್ದು ಈ ವಿಚಾರವನ್ನು ಕೇಳುವ ಮನುಷ್ಯರು ಪೂರ್ಣಸಿದ್ಧಿಯನ್ನು ಪಡೆಯುವರಲ್ಲದೆ ನನ್ನ ಲೋಕವನ್ನೂ ಸೇರುವರು.

೬೪. ಭದ್ರೇ, ದೇವಿ, ನೀನು ಪ್ರಶ್ನಿಸಿದುದೂ, ನನ್ನ ಭಕ್ತರಿಗೆ ಸುಖಕರವೂ, ಪರಮರಹಸ್ಯವೂ, ಉತ್ತಮವೂ ಆದ ಈ ವಿಚಾರವನ್ನು ನಿನಗೆ ಹೇಳಿದುದಾಯಿತು.

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ—ಸ್ತ್ರೀಯರು ರಜಸ್ವಲೆಯರಾದಾಗ ಅನುಸರಿಸಬೇಕಾದ ನಿಯಮಗಳನ್ನೂ, ಶುದ್ಧರಾಗುವ ವಿಧಾನವನ್ನೂ, ಸ್ತ್ರೀಸಮಾಗಮಕಾಲ ನಿಯಮವನ್ನೂ, ಸನ್ಯಾಸಯೋಗವನ್ನೂ ತಿಳಿಸುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರನಲವತ್ತೆರಡನೆಯ ಅಧ್ಯಾಯ.

|| ಶ್ರೀಃ ||

–x–

ತ್ರಯಶ್ಚತ್ವಾರಿಂಶದಧಿಕಶತತಮೋಽಧ್ಯಾಯಃ

ಅಥ ಮಂದಾರಮಹಿಮಾ ನಿರೂಪಣಂ

|| ಶ್ರೀವರಾಹ ಉವಾಚ ||

ಪುನರನ್ಯತ್ಪ್ರವಕ್ಷ್ಯಾಮಿ ಏಕಾಂತಂ ಶೃಣು ಸುಂದರಿ ।
ಸ್ಥಾನಂ ಮೇ ಪರಮಂ ಗುಹ್ಯಂ ಮದ್ಭಕ್ತಾನಾಂ ಸುಖಾವಹಂ || ೧ ||

ಜಾಹ್ನವ್ಯಾ ದಕ್ಷಿಣೇ ಕೂಲೇ ವಿಂಧ್ಯಪೃಷ್ಠ ಸಮಾಶ್ರಿತಂ ।
ಮಂದಾರೇತಿ ಚ ವಿಖ್ಯಾತಂ ಸರ್ವಭಾಗವತಪ್ರಿಯಂ || ೨ ||

ತತ್ರ ತ್ರೇತಾಯುಗೇ ಭೂಮೇ ರಾಮೋನಾಮ ಮಹಾದ್ಯುತಿಃ ।
ಭವಿಷ್ಯತಿ ನ ಸಂದೇಹಃ ಸ ಚ ಮಾಂ ಸ್ಥಾಪಯಿಷ್ಯತಿ || ೩ ||

ನೂರ ನಲವತ್ತಮೂರನೆಯ ಅಧ್ಯಾಯ

ಮಂದಾರಮಹಿಮೆಯ ವಿಚಾರ

೧-೨. ಶ್ರೀವರಾಹ—ಸುಂದರಿ, ಮತ್ತೊಂದು ಗುಟ್ಟನ್ನು ಹೇಳುತ್ತೇನೆ, ಕೇಳು. ಗಂಗಾನದಿಯ ದಕ್ಷಿಣತೀರದಲ್ಲಿ ವಿಂಧ್ಯಪರ್ವತದ ಕೊನೆಯಲ್ಲಿ ನನ್ನ ಭಕ್ತರಿಗೆ ಸುಖವನ್ನುಂಟುಮಾಡುವುದೂ, ಸರ್ವಭಾಗವತರಿಗೂ ಪ್ರಿಯವೂ, ಮಂದಾರವೆಂದು ಪ್ರಸಿದ್ಧವೂ, ಶ್ರೇಷ್ಠವೂ ರಹಸ್ಯವೂ ಆದ ನನ್ನ ಸ್ಥಾನವೊಂದಿದೆ.

೩. ಭೂಮೀ, ತ್ರೇತಾಯುಗದಲ್ಲಿ ರಾಮನೆಂಬ ಮಹಾಕಾಂತಿವಂತನು ಅಲ್ಲಿರುವನೆಂಬುದರಲ್ಲಿ ಸಂದೇಹವಿಲ್ಲ. ಆತನು ನನ್ನನ್ನು ಅಲ್ಲಿ ಸ್ಥಾಪಿಸುವನು.

ನಾರಾಯಣಮುಖಾಚ್ಛ್ರುತ್ವಾ ಧರ್ಮಕಾಮಾ ವಸುಂಧರಾ ।
ಉವಾಚ ಮಧುರಂ ವಾಕ್ಯಂ ಲೋಕನಾಥಂ ಜನಾರ್ದನಂ ॥ ೪ ॥

॥ ಧರಣ್ಯುವಾಚ ॥

ದೇವದೇವ ಮಹಾದೇವ ಹರೇ ನಾರಾಯಣ ಪ್ರಭೋ ।
ಮಂದಾರೇತಿ ತ್ವಯಾ ಪ್ರೋಕ್ತಂ ದೇವ ಧರ್ಮಾರ್ಥಸಂಯುತಂ ॥ ೫ ॥

ಮಂದಾರೇ ಕಾನಿಕರ್ಮಾಣಿ ಕುರ್ವಂತಿ ಚ ತತೋ ನರಾಃ ।
ಕಾಂಶ್ಚ ಲೋಕಾನ್ಪ್ರಪದ್ಯಂತೇ ತತ್ರ ಕರ್ಮಕೃತೋ ನರಾಃ ॥ ೬ ॥

ಮಂದಾರೇ ಕಾನಿ ಗುಹ್ಯಾನಿ ರಹಸ್ಯಂ ಕಿಂ ಚ ತತ್ರ ವೈ ।
ವಕ್ತುಮರ್ಹಸ್ಯಶೇಷೇಣ ಪರಂ ಕೌತೂಹಲಂ ಮಮ ॥ ೭ ॥

॥ ಶ್ರೀವರಾಹ ಉವಾಚ ॥

ಶೃಣು ಸುಂದರಿ ಯತ್ನೇನ ಯನ್ಮಾಂ ತ್ವಂ ಪರಿಪೃಚ್ಛಸಿ ।
ಕಥಯಿಷ್ಯಾಮಿ ತೇ ಗುಹ್ಯಂ ಮಂದಾರಸ್ಯ ಮಹಾಕ್ರಿಯಾಂ ॥ ೮ ॥

---

೪. ಧರ್ಮಾಸಕ್ತಳಾದ ಭೂದೇವಿಯು ನಾರಾಯಣನ ಬಾಯಿಂದ ಈ ಮಾತನ್ನು ಕೇಳಿ, ಲೋಕನಾಥನಾದ ಆ ಜನಾರ್ದನನೊಡನೆ ಮುಂದಿನ ಇಂಪಾದ ಮಾತನ್ನಾಡಿದಳು.

೫. ಭೂದೇವಿ—ದೇವದೇವ, ಮಹಾದೇವ, ಹರೀ, ನಾರಾಯಣಾ, ಪ್ರಭೂ, ಮಂದಾರವೆಂದು ನೀನು ಧರ್ಮಾರ್ಥಯುಕ್ತವಾದುದನ್ನು ಹೇಳಿದೆ.

೬-೭. ಆ ಮಂದಾರಕ್ಷೇತ್ರದಲ್ಲಿ ಕರ್ಮಗಳನ್ನು ಆಚರಿಸುವವರು ಯಾವ ಯಾವ ಕರ್ಮಗಳಿಂದ ಯಾವ ಯಾವ ಲೋಕಗಳನ್ನು ಪಡೆಯುವರು? ಮಂದಾರದಲ್ಲಿರುವ ರಹಸ್ಯಸ್ಥಾನಗಳೂ, ರಹಸ್ಯವಿಚಾರಗಳೂ ಯಾವುವು? ನನಗೆ ಬಹಳವಾಗಿ ಕುತೂಹಲವಾಗಿದೆ. ಎಲ್ಲವನ್ನೂ ಪೂರ್ಣವಾಗಿ ಹೇಳಬೇಕು.

೮. ಶ್ರೀವರಾಹ—ಸುಂದರಿ, ನೀನು ಪ್ರಯತ್ನಪೂರ್ವಕವಾಗಿ ನನ್ನನ್ನು ಪ್ರಶ್ನಿಸುವುದರಿಂದ ನಿನಗೆ ಮಂದಾರದ ರಹಸ್ಯವಿಚಾರವನ್ನು ಹೇಳುತ್ತೇನೆ, ಕೇಳು.

ಕ್ರೀಡಮಾನೋಸ್ಮ್ಯಹಂ ತತ್ರ ಮಂದಾರೇ ಪುಷ್ಪಿತೇ ತದಾ ।
ಮಂದಾರಪುಷ್ಪಮಾದಾಯ ಮನೋಜ್ಞಂ ನ್ಯಸ್ಯ ವೈ ಹೃದಿ ॥ ೯ ॥

ತತೋ ಮಮಾಭವಚ್ಚಿಂತಾ ಮಂದಾರೇ ಪರ್ವತಸ್ಥಿತೇ ।
ತತ್ರೈಕಾದಶಕುಂಡಾನಿ ನಿಸ್ಸೃತಾನಿ ಗಿರೌ ಧರೇ ॥ ೧೦ ॥

ವಿಂಧ್ಯೇ ಚ ಮತ್ಪ್ರಭಾವೇಣ ಮಂದಾರಶ್ಚ ಮಹಾದ್ರುಮಃ ।
ಸ್ಥಿತೋಽಹಂ ತತ್ರ ಸುಭಗೇ ಭಕ್ತಾನುಗ್ರಹಕಾಮ್ಯಯಾ ॥ ೧೧ ॥

ದರ್ಶನೀಯತಮಂ ಸ್ಥಾನಂ ಮನೋಜ್ಞಂ ಚ ಶಿಲಾತಲಂ ।
ಯತ್ರ ತಿಷ್ಠಾಮ್ಯಹಂ ದೇವಿ ಮಂದಾರದ್ರುಮಮಾಶ್ರಿತಃ ॥ ೧೨ ॥

ವಿಸ್ಮಯಂ ಶೃಣು ಸುಶ್ರೋಣಿ ಮಂದಾರೇಽಸ್ಮಿನ್ಮಹಾದ್ರುಮೇ ॥ ೧೩ ॥

---

೯. ಮಂದಾರವೃಕ್ಷದಲ್ಲಿ ಹೂಬಿಟ್ಟಿರಲಾಗಿ, ಮನೋಹರವಾದ ಆ ಹೂವನ್ನು ತೆಗೆದುಕೊಂಡು ಎದೆಗೊತ್ತಿಕೊಂಡು ನಾನು ಹಿಂದೆ ಆಯೆಡೆಯಲ್ಲಿ ವಿಹರಿಸುತ್ತಿದ್ದೆನು.

೧೦–೧೧. ಧರೇ, ಆ ಪರ್ವತದಲ್ಲಿದ್ದ ನನಗೆ ಬಳಿಕ ಮಂದಾರವೃಕ್ಷದ ಆಲೋಚನೆಯುಂಟಾಯಿತು. ಆಗ ನನ್ನ ಮಹಿಮೆಯಿಂದ ಆ ವಿಂಧ್ಯಗಿರಿಯಲ್ಲಿ ಹನ್ನೊಂದು ಕುಂಡ (ಚಿಲುಮೆ)ಗಳೂ, ಮಂದಾರಮಹಾವೃಕ್ಷವೂ ಉದಿಸಿದುವು. ಸುಂದರಿ, ಭಕ್ತರಿಗೆ ಅನುಗ್ರಹಿಸಬೇಕೆಂಬ ಇಚ್ಛೆಯಿಂದ ನಾನು ಅಲ್ಲಿದ್ದೆನು.

೧೨. ದೇವಿ, ಮಂದಾರವೃಕ್ಷವನ್ನಾಶ್ರಯಿಸಿ ನಾನಿದ್ದೆಡೆಯು ಮನೋಹರವಾದ ಹಾಸುಗಲ್ಲುಗಳುಳ್ಳದಾಗಿ ನೋಡಬೇಕಾದೆಡೆಗಳಲ್ಲಿ ಅತ್ಯುತ್ತಮವಾದುದು.

೧೩–೧೪. ಸುಂದರಿ, ವಿಂಧ್ಯದ ಸಮೀಪದಲ್ಲಿರುವ ಮಂದಾರಮಹಾವೃಕ್ಷದ ಆಶ್ಚರ್ಯವನ್ನು ಕೇಳು. ಆ ಮಹಾವೃಕ್ಷವು ದ್ವಾದಶಿಯದಿನವೂ ಚತುರ್ದಶಿಯು

ದ್ವಾದಶ್ಯಾಂ ಚ ಚತುರ್ದಶ್ಯಾಂ ಸ ಪುಷ್ಪತಿ ಮಹಾದ್ರುಮಃ |
ತತ್ರ ಮಧ್ಯಾಹ್ನವೇಲಾಯಾಂ ವೀಕ್ಷ್ಯಮಾಣೋ ಜನೈಸ್ತತಃ |
ತತೋಽನ್ಯದಿನಮಾಸಾದ್ಯ ದೃಶ್ಯತೇ ನ ಕದಾಚನ || ೧೪ ||

ತಸ್ಮಿನ್ಮಂದಾರಕುಂಡೇ ತು *ಏಕಭುಕ್ತೋಷಿತೋ ನರಃ |
ಸ್ನಾನಂ ಕರೋತಿ ಶುದ್ಧಾತ್ಮಾ ಸ ಗಚ್ಛೇತ್ಪರಮಾಂ ಗತಿಂ || ೧೫ ||

ಅಥ ಪ್ರಾಣಾನ್ಪ್ರಮುಚ್ಯೇತ ಕುಂಡೇ ಮಂದಾರಸಂಸ್ಥಿತೇ |
ತಪಃ ಕೃತ್ವಾ ವರಾರೋಹೇ ಮಮ ಲೋಕಂ ಸ ಗಚ್ಛತಿ || ೧೬ ||

ತಸ್ಯ ಚೋತ್ತರಪಾರ್ಶ್ವೇ ಚ ಪ್ರಾಪಣಂ ನಾಮ ವೈ ಗಿರಿಃ |
ತಿಸ್ರೋ ಧಾರಾಃ ಪತಂತ್ಯತ್ರ ದಕ್ಷಿಣಾಂ ದಿಶಮಾಶ್ರಿತಾಃ || ೧೭ ||

ದಿನವೂ ಹೂವುಳ್ಳುದಾಗುತ್ತದೆ. ಅಲ್ಲದೆ ಆ ದಿನಗಳಲ್ಲಿ ಮಧ್ಯಾಹ್ನಕಾಲದಲ್ಲಿ ಮಾತ್ರವೇ ಆ ವೃಕ್ಷವು ಜನರಕಣ್ಣಿಗೆ ಕಾಣಿಸಿಕೊಳ್ಳುತ್ತದೆ. ಬೇರೆಯ ದಿನಗಳಲ್ಲಿ ಯಾವಾಗಲೂ ಕಾಣಿಸುವುದೇ ಇಲ್ಲ.

೧೫. ಆ ಮಂದಾರಕುಂಡದಲ್ಲಿ ಒಂದುಹೊತ್ತು ಮಾತ್ರ ಊಟಮಾಡಿದ್ದು, ಸ್ನಾನಮಾಡುವ ಶುದ್ಧಾತ್ಮನು ಪರಮಗತಿಯನ್ನು ಪಡೆಯುವನು.

೧೬. ವರಾರೋಹೇ, ಆ ಮಂದಾರಕುಂಡದಲ್ಲಿ ತಪಸ್ಸನ್ನು ಮಾಡುತ್ತಿದ್ದು ಪ್ರಾಣಬಿಡುವವನು ನನ್ನ ಲೋಕವನ್ನು ಸೇರುವನು.

೧೭. ಅದರ ಉತ್ತರಭಾಗದಲ್ಲಿ ಪ್ರಾಪಣವೆಂಬ ಹೆಸರಿನ ಗಿರಿಯಿದೆ. ಅಲ್ಲಿ ದಕ್ಷಿಣದಿಕ್ಕಿಗೆ ಮೂರು ಜಲಧಾರೆಗಳು ಧುಮಿಕುತ್ತವೆ.

---

* ಏಕಭಕ್ತೋಷಿತೋ.

ಸ್ನಾನಕುಂಡಮಿತಿ ಖ್ಯಾತಂ ತಸ್ಮಿನ್ ಕ್ಷೇತ್ರೇ ಪರಂ ಮಮ ।
ದಕ್ಷಿಣೇ ಪತತೇ ಧಾರಾ ಸ್ರವತೇ ಚೋತ್ತರಾಮುಖಂ ॥ ೧೮ ॥

ತತ್ರ ಸ್ನಾತೋ ವರಾರೋಹೇ ಏಕರಾತ್ರೋಷಿತೋ ನರಃ ।
*ಮೋದತೇ ದಕ್ಷಿಣೇ ಶೃಂಗೇ ತಸ್ಮಿನ್ಮೇರೌ ಶಿಲೋಚ್ಚಯೇ ॥ ೧೯ ॥

ತತ್ರಾಥ ಮುಂಚತಿ ಪ್ರಾಣಾನ್ಮಮ ಕರ್ಮಪರಾಯಣಃ ।
ಸರ್ವಸಂಗಂ ಪರಿತ್ಯಜ್ಯ ಮಮ ಲೋಕಂ ಸ ಗಚ್ಛತಿ ॥ ೨೦ ॥

ತಸ್ಯ ಪೂರ್ವೋತ್ತರೇ ಪಾರ್ಶ್ವೇ ಗುಹ್ಯಂ ವೈಕುಂಠಕಾರಣಂ ।
ಯತ್ರ ಧಾರಾ ಪತತ್ಯೇಕಾ ಹರಿದ್ರಾವರ್ಣಸನ್ನಿಭಾ ॥ ೨೧ ॥

ಯಸ್ತತ್ರ ಕುರುತೇ ಸ್ನಾನಮೇಕರಾತ್ರೋಷಿತೋ ನರಃ ।
ನಾಕಪೃಷ್ಠಂ ಸಮಾಸಾದ್ಯ ಮೋದತೇ ಸಹ ದೈವತೈಃ ॥ ೨೨ ॥

---

೧೮. ಆ ಕ್ಷೇತ್ರದಲ್ಲಿ ಸ್ನಾನಕುಂಡವೆಂಬ ಪ್ರಸಿದ್ಧವೂ, ಉತ್ತಮವೂ ಆದ ನನ್ನ ತೀರ್ಥಧಾರೆಯು ದಕ್ಷಿಣಕ್ಕೆ ಬಿದ್ದು, ಬಳಿಕ ಉತ್ತರಾಭಿಮುಖವಾಗಿ ಹರಿಯುತ್ತದೆ.

೧೯. ವರಾರೋಹೇ, ಆ ಸ್ಥಳದಲ್ಲಿ ಒಂದುರಾತ್ರಿ ಇದ್ದು ಆ ತೀರ್ಥದಲ್ಲಿ ಸ್ನಾನಮಾಡುವವನು ಮೇರುಪರ್ವತದ ದಕ್ಷಿಣಶಿಖರದಲ್ಲಿ ವಾಸಿಸಿ ಸಂತೋಷಿಸುವನು.

೨೦. ಅಲ್ಲದೆ ನನ್ನ ಕರ್ಮಗಳಲ್ಲಿ ನಿರತನಾಗಿ, ಸರ್ವಸಂಗವನ್ನೂ ಪರಿತ್ಯಜಿಸಿ, ಅಲ್ಲಿ ಪ್ರಾಣಬಿಟ್ಟರೆ, ನನ್ನ ಲೋಕವನ್ನು ಸೇರುವನು.

೨೧ ಮಂದಾರಕುಂಡದ ಈಶಾನ್ಯದಿಕ್ಕಿನಲ್ಲಿ ಅರಸಿನದ ಬಣ್ಣದ ಒಂದು ತೀರ್ಥಧಾರೆಯು ಧುಮಿಕುವ ವೈಕುಂಠಕಾರಣವೆಂಬ ರಹಸ್ಯತೀರ್ಥವಿದೆ.

೨೨. ಅಲ್ಲಿ ಒಂದುರಾತ್ರಿ ಇದ್ದು ಸ್ನಾನಮಾಡುವವನು ಸ್ವರ್ಗದ ಕೊನೆಯನ್ನು ಸೇರಿ, ದೇವತೆಗಳೊಡನೆ ಸಂತೋಷಪಡುವನು.

---

* ಮೋದನಂ.

ತಥಾತ್ರ ಮುಂಚತಿ ಪ್ರಾಣಾನ್ಕೃತಕೃತ್ಯಸ್ಸುನಿಶ್ಚಿತಃ |
ತಾರಯಿತ್ವಾ ಕುಲಂ ಸರ್ವಂ ಮಮ ಲೋಕಂ ಪ್ರಪದ್ಯತೇ || ೨೩ ||

ತಸ್ಯ ದಕ್ಷಿಣಪೂರ್ವೇಣ ಸಮುಸ್ರೋತೋ ವರಾಂಗನೇ |
ಪತತೇ ವಿಂಧ್ಯಶೃಂಗೇಷು ಅಗಾಧಶ್ಚ ಮಹಾಹ್ರದಃ || ೨೪ ||

ತತ್ರ ಸ್ನಾನಂ ತು ಕುರ್ವೀತ ಅಹೋರಾತ್ರೋಷಿತೋ ನರಃ |
ಮೋದತೇ ಪೂರ್ವಪಾರ್ಶ್ವೇ ತು ತಸ್ಮಿನ್ಮೇರೌ ಶಿಲೋಚ್ಚಯೇ || ೨೫ ||

ಅಥಾತ್ರ ಮುಂಚತಿ ಪ್ರಾಣಾನ್ಮಮ ಚಿತ್ತವ್ಯವಸ್ಥಿತಃ |
ಛಿತ್ವಾ ವೈ ಸರ್ವಸಂಸಾರಂ ಮಮ ಲೋಕಂ ಸ ಗಚ್ಛತಿ || ೨೬ ||

ಮಂದಾರಸ್ಯ ತು ಪೂರ್ವೇಣ ಗುಹ್ಯಂ ಕೋಟರಸಂಸ್ಥಿತಂ |
ತತ್ರ ಧಾರಾ ಪತತ್ಯೇಕಾ ಮುಸಲಾಕೃತಿಕಾ ಶುಭಾ || ೨೭ ||

---

೨೩. ಅಲ್ಲದೆ ಕೃತಕೃತ್ಯನೂ, ಸ್ಥಿರಚಿತ್ತನೂ ಆಗಿ ಅಲ್ಲಿ ಪ್ರಾಣಬಿಟ್ಟರೆ ತನ್ನ ಕುಲವನ್ನೆಲ್ಲಾ ಉದ್ಧಾರಮಾಡಿ ನನ್ನ ಲೋಕವನ್ನು ಸೇರುವನು.

೨೪. ವರಾಂಗನೇ, ಅದರ ಆಗ್ನೇಯದಿಕ್ಕಿನಲ್ಲಿ ವಿಂಧ್ಯಶಿಖರಗಳಲ್ಲಿ ಸಮುಸ್ರೋತಸ್ಸೆಂಬ ಪ್ರವಾಹವು ಧುಮುಕುತ್ತದೆ. ಅಲ್ಲಿ ಅಗಾಧವಾದ ಮಡುವಿದೆ.

೨೫. ಅಲ್ಲಿ ಹಗಲೂ ರಾತ್ರಿಯೂ ವಾಸಮಾಡಿ, ಸ್ನಾನಮಾಡುವವನು ಆ ಮೇರುಪರ್ವತದ ಪೂರ್ವಪಾರ್ಶ್ವದಲ್ಲಿ ಸಂತೋಷಪಡುವನು.

೨೬. ಅಲ್ಲದೆ ಮನುಷ್ಯನು ನನ್ನಲ್ಲೇ ಚಿತ್ತವನ್ನು ನಿಲ್ಲಿಸಿ ಅಲ್ಲಿ ಪ್ರಾಣವನ್ನು ಬಿಟ್ಟು, ಸರ್ವಸಂಸಾರವನ್ನೂ ತಪ್ಪಿಸಿಕೊಂಡು ನನ್ನ ಲೋಕವನ್ನು ಸೇರುವನು.

೨೭. ಮಂದಾರಕ್ಷೇತ್ರದ ಪೂರ್ವದಲ್ಲಿ ಗುಹೆಯಲ್ಲಿ ರಹಸ್ಯವಾದ ತೀರ್ಥವೊಂದಿದೆ. ಅಲ್ಲಿ ಒನಕೆಯಾಕಾರದ ಶುಭವಾದ ಜಲಧಾರೆಯೊಂದು ಬೀಳುತ್ತದೆ.

ತತ್ರ ಸ್ನಾನಂ ಪ್ರಕುರ್ವೀತ ಪಂಚಭಕ್ತೋಷಿತೋ ನರಃ ।
ಮೋದತೇ ಪೂರ್ವಪಾರ್ಶ್ವೇ ಚ ಮೇರೌ ತಸ್ಮಿನ್ ಶಿಲೋಚ್ಚಯೇ ॥ ೨೮ ॥

ಅಥಾತ್ರ ಮುಂಚತಿ ಪ್ರಾಣಾನ್ಕೃತ್ವಾ ಕರ್ಮ ಸುದುಷ್ಕರಂ ।
ಮೇರುಶೃಂಗಂ ಸಮುತ್ಸೃಜ್ಯ ಮಮ ಲೋಕಂ ಚ ಗಚ್ಛತಿ ॥ ೨೯ ॥

ತಸ್ಯ ದಕ್ಷಿಣಪಾರ್ಶ್ವೇ ತು ಗುಹ್ಯಂ ವಿಂಧ್ಯವಿನಿಸ್ಸೃತಂ ।
ಪಂಚಧಾರಾಃ ಪತಂತ್ಯತ್ರ ಮುಸಲಾಕೃತಿಕಾಶ್ಶುಭಾಃ ॥ ೩೦ ॥

ತತ್ರ ಸ್ನಾನಂ ಪ್ರಕುರ್ವೀತ ಅಹೋರಾತ್ರೋಷಿತೋ ನರಃ ।
ಮೋದತೇ ದಕ್ಷಿಣೇ ಶೃಂಗೇ ಮಹಾಮೇರೌ ಶಿಲೋಚ್ಚಯೇ ॥ ೩೧ ॥

ಅಥಾತ್ರ ಮುಂಚತಿ ಪ್ರಾಣಾನ್ಕೃತ್ವಾ ಕರ್ಮ ಸುದುಷ್ಕರಂ ।
ಮೇರುಶೃಂಗಂ ಪರಿತ್ಯಜ್ಯ ಮಮ ಲೋಕಂ ಪ್ರಪದ್ಯತೇ ॥ ೩೨ ॥

---

೨೮. ತನಗೆ ಬೇಕಾಗುವ ಆಹಾರದಲ್ಲಿ ಐದನೆಯ ಒಂದುಭಾಗದಷ್ಟನ್ನು ಮಾತ್ರ ತಿಂದು ಆ ಸ್ಥಳದಲ್ಲಿದ್ದು ತೀರ್ಥದಲ್ಲಿ ಸ್ನಾನಮಾಡುವವನು ಆ ಮೇರುಪರ್ವತದ ಪೂರ್ವಭಾಗದಲ್ಲಿ ಸಂತೋಷಪಡುವನು.

೨೯. ಮನುಷ್ಯನು ಮಾಡಲು ಕಷ್ಟವಾದ ಕರ್ಮಗಳನ್ನೂ ಮಾಡಿ, ಅಲ್ಲಿ ಪ್ರಾಣಬಿಟ್ಟರೆ, ಮೇರುಶಿಖರವನ್ನೂ ತ್ಯಜಿಸಿ ನನ್ನ ಲೋಕವನ್ನು ಸೇರುವನು.

೩೦. ಅದರ ದಕ್ಷಿಣದಲ್ಲಿ ವಿಂಧ್ಯಪರ್ವತದಿಂದ ಪ್ರವಹಿಸುವ ತೀರ್ಥವೊಂದಿದೆ. ಒನಕೆಯಷ್ಟು ಗಾತ್ರದ ಐದು ಮಂಗಳಕರವಾದ ಧಾರೆಗಳು ಅಲ್ಲಿ ಧುಮುಕುತ್ತವೆ.

೩೧. ಅಲ್ಲಿ ಒಂದು ದಿನ ವಾಸಮಾಡಿ ಸ್ನಾನಮಾಡುವವನು ಮಹಾಮೇರು ಪರ್ವತದ ದಕ್ಷಿಣಶಿಖರದಲ್ಲಿ ನೆಲಸಿ ಸಂತೋಷಪಡುವನು.

೩೨. ಅತಿ ಕಠಿಣವಾದ ಕರ್ಮಗಳನ್ನು ಮಾಡಿ ಅಲ್ಲಿ ಪ್ರಾಣಬಿಟ್ಟರೆ ಮೇರುಶಿಖರವನ್ನೂ ಬಿಟ್ಟು ನನ್ನ ಲೋಕವನ್ನು ಸೇರುವನು.

ದಕ್ಷಿಣೇ ಪಶ್ಚಿಮೇ ಭಾಗೇ ಮಂದಾರಸ್ಯ ಯಶಸ್ವಿನಿ ।
ಅತ್ರ ಧಾರಾ ಪತತ್ಯೇಕಾ ಆದಿತ್ಯಸಮತೇಜಸಾ ॥ ೩೩ ॥

ತತ್ರ ಸ್ನಾನಂ ಪ್ರಕುರ್ವೀತ ಅಹೋರಾತ್ರೋಷಿತೋ ನರಃ ।
ಮೋದತೇ *ಚೋತ್ತರೇ ಭಾಗೇ ಧ್ರುವೋ ಯತ್ರ ಪ್ರವರ್ತತೇ ॥ ೩೪ ॥

ಅಥಾತ್ರ ಮುಂಚತಿ ಪ್ರಾಣಾನ್ಮಮ ಕರ್ಮವ್ಯವಸ್ಥಿತಃ ।
ಸರ್ವಪಾಪವಿನಿರ್ಮುಕ್ತೋ ಮಮ ಲೋಕೇ ಚ ಮೋದತೇ ॥ ೩೫ ॥

ತಸ್ಯ ಪಶ್ಚಿಮಪಾರ್ಶ್ವೇ ತು ಗುಹ್ಯಂ ದೇವಸಮನ್ವಿತಂ ।
ಚಕ್ರಾವರ್ತಮಿತಿ ಖ್ಯಾತಮಗಾಧಶ್ಚ ಮಹಾಹ್ರದಃ ॥ ೩೬ ॥

ಸ್ನಾನಂ ಕರೋತಿ ಯಸ್ತತ್ರ ಪಂಚಭಕ್ತೋಷಿತೋ ನರಃ ।
ಮೋದತೇ ಮೇರುಶೃಂಗೇಷು ಸ್ವಚ್ಛಂದಗಮನಾಲಯಃ ॥ ೩೭ ॥

---

೩೩. ಯಶಸ್ವಿನೀ, ಮಂದಾರದ ನೈಋತ್ಯದಲ್ಲಿ ಸೂರ್ಯನಿಗೆ ಸಮವಾದ ಕಾಂತಿಯುಳ್ಳ ಒಂದು ತೀರ್ಥಧಾರೆಯು ಧುಮುಕುತ್ತದೆ.

೩೪. ಒಂದುದಿನ ಅಲ್ಲಿ ವಾಸಮಾಡಿ, ತೀರ್ಥದಲ್ಲಿ ಸ್ನಾನಮಾಡುವವನು ಮೇರುಪರ್ವತದಲ್ಲಿ ಧ್ರುವನಕ್ಷತ್ರವಿರುವ ಉತ್ತರಭಾಗದಲ್ಲಿ ಸಂತೋಷಪಡುವನು.

೩೫. ನನ್ನ ಕರ್ಮಗಳಲ್ಲಿ ನಿಷ್ಠನಾಗಿ ಅಲ್ಲಿ ಪ್ರಾಣವನ್ನು ಬಿಟ್ಟರೆ ಪಾಪಗಳೆಲ್ಲವನ್ನೂ ಕಳೆದುಕೊಂಡು ನನ್ನ ಲೋಕದಲ್ಲಿ ಆನಂದಪಡುವನು.

೩೬ ಮಂದಾರಕುಂಡದ ಪಶ್ಚಿಮದ ಕಡೆಯಲ್ಲಿ ದೇವತೆಗಳಿರುವ ಚಕ್ರಾವರ್ತವೆಂದು ಪ್ರಸಿದ್ಧವಾದ ರಹಸ್ಯವೂ, ಅಗಾಧವೂ ಆದ ದೊಡ್ಡ ಮಡುವಿದೆ.

೩೭. ಐದನೆಯ ಒಂದುಭಾಗ ಆಹಾರವನ್ನು ಸೇವಿಸಿ ಅಲ್ಲಿ ವಾಸಮಾಡಿ ಸ್ನಾನಮಾಡುವವನು ಮೇರುಶಿಖರಗಳಲ್ಲಿ ಬೇಕಾದ ಕಡೆ ಹೋಗುವವನೂ, ವಾಸಿಸುವವನೂ ಆಗಿ ಆನಂದಪಡುವನು.

---

* ಪಶ್ಚಿಮೇ.

ಅಥ ವೈ ಮುಂಚತಿ ಪ್ರಾಣಾನ್* ಚಕ್ರಾವರ್ತೇ ಮಹಾಯಶಾಃ ।
ಶೃಂಗಾನ್ಸರ್ವಾನ್ಪರಿತ್ಯಜ್ಯ ಮೋದತೇ ಮಮ ಸನ್ನಿಧೌ ॥ ೩೮ ॥

ದಿಶಂ ವಾಯುವ್ಯಮಾಶ್ರಿತ್ಯ ತಸ್ಮಿನ್ವಿಂಧ್ಯಶಿಲೋಚ್ಚಯೇ ।
ತಿಸ್ರೋ ಧಾರಾಃ ಪತಂತ್ಯತ್ರ ಮುಸಲಾಕೃತಯಶ್ಶುಭಾಃ ॥ ೩೯ ॥

ತತ್ರ ಸ್ನಾನಂ ಪ್ರಕುರ್ವೀತ ಮಮ ಚಿತ್ತವ್ಯವಸ್ಥಿತಃ ।
ಮೋದತೇ ಸರ್ವಶೃಂಗೇಷು ಚೈಕಚಿತ್ತಂ ಸಮಾಶ್ರಿತಃ ॥ ೪೦ ॥

ಅಥಾತ್ರ ಮುಂಚತಿ ಪ್ರಾಣಾಂಸ್ತಸ್ಮಿನ್ಗುಹ್ಯೇ ಯಶಸ್ವಿನಿ ।
ಸರ್ವಸಂಗಂ ಪರಿತ್ಯಜ್ಯ ಮಮ ಲೋಕಂ ಸ ಗಚ್ಛತಿ ॥ ೪೧ ॥

ತಸ್ಯ ವಿಕ್ರೋಶಮಾತ್ರೇಣ ದಕ್ಷಿಣಾಂ ದಿಶಮಾಶ್ರಿತಃ ।
ಗುಹ್ಯೋ ಗಭೀರಕೋ ನಾಮ ಅಗಾಧಶ್ಚ ಮಹಾಹ್ರದಃ ॥ ೪೨ ॥

---

೩೮. ಮಹಾಕೀರ್ತಿವಂತನಾದವನು ಆ ಚಕ್ರಾವರ್ತತೀರ್ಥದಲ್ಲಿ ಪ್ರಾಣ ಬಿಟ್ಟರೆ, ಆ ಶಿಖರಗಳೆಲ್ಲವನ್ನೂ ಬಿಟ್ಟು ನನ್ನ ಸನ್ನಿಧಿಯಲ್ಲಿ ಸೇರಿ ಆನಂದಪಡುವನು.

೩೯. ಮಂದಾರದ ವಾಯುವ್ಯದಿಕ್ಕಿನಲ್ಲಿ ಆ ವಿಂಧ್ಯಪರ್ವತದಲ್ಲಿ ಒನಕೆಯಾಕಾರದ ಮೂರು ಶುಭವಾದ ಜಲಧಾರೆಗಳು ಧುಮುಕುತ್ತವೆ.

೪೦-೪೧. ನನ್ನಲ್ಲಿ ಚಿತ್ತವನ್ನು ನಿಲ್ಲಿಸಿ ಆ ತೀರ್ಥದಲ್ಲಿ ಸ್ನಾನಮಾಡುವವನು ಸರ್ವಶಿಖರಗಳಲ್ಲೂ ಆನಂದಪಡುವನು. (ಯಶಸ್ವಿನಿ) ಕೀರ್ತಿವಂತೆ, ನನ್ನಲ್ಲೇ ಚಿತ್ತವನ್ನಿಟ್ಟು ಆ ರಹಸ್ಯತೀರ್ಥದಲ್ಲಿ ಪ್ರಾಣಗಳನ್ನು ಬಿಟ್ಟರೆ, ಸರ್ವಸಂಗವನ್ನೂ ತ್ಯಜಿಸಿ, ನನ್ನ ಲೋಕವನ್ನು ಸೇರುವನು.

೪೨. ಮಂದಾರಕ್ಕೆ ಒಂದು ಹರಿದಾರಿಯಷ್ಟು ದೂರ ದಕ್ಷಿಣದಲ್ಲಿ ಗಭೀರ ವೆಂಬ ಹೆಸರಿನ ರಹಸ್ಯವೂ, ಅಗಾಧವೂ ಆದ ದೊಡ್ಡ ಮಡುವಿದೆ.

---

* ಚಕ್ರವರ್ತೀ (ಬೊಂ.)

ತತ್ರ ಸ್ನಾನಂ ಪ್ರಕುರ್ವೀತ ಅಷ್ಟರಾತ್ರೋಷಿತೋ ನರಃ ।
ಮೋದತೇ ಸರ್ವದ್ವೀಪೇಷು ಸ್ವಚ್ಛಂದಗಮನಾಲಯಃ ॥ ೪೩ ॥

ಅಥ ವೈ ಮುಂಚತಿ ಪ್ರಾಣಾನ್ಮಮ ಕರ್ಮವ್ಯವಸ್ಥಿತಃ ।
ಸರ್ವದ್ವೀಪಾನ್ಪರಿತ್ಯಜ್ಯ ಮಮ ಲೋಕಂ ಪ್ರಪದ್ಯತೇ ॥ ೪೪ ॥

ತಸ್ಯ ಪಶ್ಚಿಮಪಾರ್ಶ್ವೇ ತು ಗುಹ್ಯಂ ವೈ ಪರಮಂ ಮಹತ್ ।
ಸಪ್ತಧಾರಾಃ ಪತಂತ್ಯತ್ರ ಅಗಾಧಶ್ಚ ಮಹಾಹ್ರದಃ ॥ ೪೫ ॥

ತತ್ರ ಸ್ನಾನಂ ಪ್ರಕುರ್ವೀತ ಅಹೋರಾತ್ರೋಷಿತೋ ನರಃ ।
ಮೋದತೇ ಶಕ್ರಲೋಕೇ ತು ಸ್ವಚ್ಛಂದಗಮನಾಲಯಃ ॥ ೪೬ ॥

ಅಥ ವೈ ಮುಂಚತಿ ಪ್ರಾಣಾನ್ ಸ್ವಕರ್ಮಪರಿನಿಷ್ಠಿತಃ ।
ಸರ್ವಸಂಗಂ ಪರಿತ್ಯಜ್ಯ ಮಮ ಲೋಕಂ ಪ್ರಪದ್ಯತೇ ॥ ೪೭ ॥

---

೪೩. ಅದರ ಹತ್ತಿರ ಎಂಟುರಾತ್ರಿ ವಾಸಮಾಡಿ ಆ ಮಡುವಿನಲ್ಲಿ ಸ್ನಾನವನ್ನು ಮಾಡುವವನು ಸರ್ವದ್ವೀಪಗಳಲ್ಲೂ ಬೇಕಾದಕಡೆ ಹೋಗುತ್ತಲೂ, ವಾಸಿಸುತ್ತಲೂ ಆನಂದಪಡುವನು.

೪೪. ನನ್ನ ಕರ್ಮಗಳಲ್ಲಿ ನಿರತನಾಗಿದ್ದು ಆ ಮಡುವಿನಲ್ಲಿ ಪ್ರಾಣಬಿಟ್ಟರೆ, ಸರ್ವದ್ವೀಪಗಳನ್ನೂ ಬಿಟ್ಟು ನನ್ನ ಲೋಕವನ್ನು ಸೇರುವನು.

೪೫. ಅದರ ಪಶ್ಚಿಮದಲ್ಲಿ ರಹಸ್ಯವಾದ ಉತ್ತಮತೀರ್ಥವೊಂದಿದೆ. ಅದೊಂದು ದೊಡ್ಡದೂ ಆಳವೂ ಆದ ಮಡು. ಅದರಲ್ಲಿ ಏಳು ಜಲಧಾರೆಗಳು ಬೀಳುತ್ತವೆ.

೪೬. ಒಂದು ದಿನ ಅಲ್ಲಿ ವಾಸಮಾಡಿ, ಆ ತೀರ್ಥದಲ್ಲಿ ಸ್ನಾನಮಾಡುವವನು ಇಂದ್ರಲೋಕದಲ್ಲಿ ಬೇಕಾದಕಡೆ ತಿರುಗುವವನೂ, ವಾಸಿಸುವವನೂ ಆಗಿ ಆನಂದಪಡುವನು.

೪೭. ಸ್ವಕರ್ಮನಿಷ್ಠನಾಗಿ ಸರ್ವಸಂಗವನ್ನೂ ಬಿಟ್ಟು ಅಲ್ಲಿ ಪ್ರಾಣಬಿಟ್ಟರೆ ನನ್ನ ಲೋಕವನ್ನು ಸೇರುವನು.

ಕ್ಷೇತ್ರಸ್ಯ ಮಂಡಲಂ ತಸ್ಯ ಕಥ್ಯಮಾನಂ ಮಯಾ ಶೃಣು ।
ಸ್ಯಮಂತಪಂಚಕಂ ಚೈವ ಮಂದಾರಸ್ಯ ಗಿರೌ ಮಮ ॥ ೪೮ ॥

ತತ್ರ ತಿಷ್ಠಾಮಿ ಸುಶ್ರೋಣಿ ವಿಂಧ್ಯಸ್ಯ ಗಿರಿಮೂರ್ಧನಿ ।
ಮಂದಾರೇ ಪರಮಂ ಗುಹ್ಯಂ ತಸ್ಮಿನ್ಗುಹ್ಯಶಿಲೋಚ್ಚಯೇ ॥ ೪೯ ॥

ದಕ್ಷಿಣೇ ಸಂಸ್ಥಿತಂ ಚಕ್ರಂ ವಾಮೇ ಸ್ಥಾನೇ ಚ ವೈಗದಾ ।
ಲಾಂಗಲಂ ಮುಸಲಂ ಚೈವ ಶಂಖಸ್ತಿಷ್ಠತಿ ಚಾಗ್ರತಃ ॥ ೫೦ ॥

ತವ ಚೈವ ಪ್ರಿಯಾರ್ಥಾಯ ಮಮ ಭಕ್ತಸುಖಾವಹಂ ॥ ೫೧ ॥

ಏತನ್ನ ಜಾನತೇ ಕೇಚಿನ್ಮಮ ಮಾಯಾವಿಮೋಹಿತಾಃ ।
ಮುಕ್ತ್ವಾ ಭಾಗವತಾನ್ ಶುದ್ಧಾನ್ ಯೇ ಚ ವಾರಾಹಮಾಶ್ರಿತಾಃ ॥ ೫೨ ॥

---

೪೮. ಆ ಮಂದಾರಕ್ಷೇತ್ರಮಂಡಲವಿಚಾರವನ್ನು ಹೇಳುತ್ತೇನೆ, ಕೇಳು. ನನ್ನ ಮಂದಾರಗಿರಿಯಲ್ಲಿ ಸ್ಯಮಂತಪಂಚಕವೆಂಬ ತೀರ್ಥವೂ ಇದೆ.

೪೯–೫೦. ಸುಂದರಿ, ರಹಸ್ಯವಾದ ಆ ಮಂದಾರಗಿರಿಯಲ್ಲಿ ವಿಂಧ್ಯಶಿಖರದಲ್ಲಿ ನಾನಿರುವೆನು. ಇದು ಬಹು ರಹಸ್ಯವಾದುದು. ನನ್ನ ಬಲಗಡೆ ಚಕ್ರವೂ ಎಡಗಡೆ ಗದೆಯೂ ಇದೆ. ನೇಗಿಲೂ, ಒನಕೆಯೂ, ಶಂಖವೂ ನನ್ನ ಮುಂದುಗಡೆಯಲ್ಲಿವೆ.

೫೧-೫೨ ನಿನ್ನ ಸಂತೋಷಕ್ಕಾಗಿ ನನ್ನ ಭಕ್ತರಿಗೆ ಸುಖವನ್ನುಂಟು ಮಾಡುವ ಈ ವಿಚಾರವನ್ನು ನಿನಗೆ ಹೇಳಿದ್ದೇನೆ. ವರಾಹ ಪುರಾಣವನ್ನು ಮೂರ್ತಿಯನ್ನು ಅಥವಾ ವರಾಹಕ್ಷೇತ್ರವನ್ನು ಆಶ್ರಯಿಸಿದ ಶುದ್ಧರಾದ ಭಾಗವತರು ಹೊರತು ನನ್ನ ಮಾಯೆಯಿಂದ ವಿಮೋಹಿತರಾದ ಇತರರು ಈ ವಿಚಾರವನ್ನರಿಯರು.

***ಯ ಏತಚ್ಛೃಣುಯಾನ್ನಿತ್ಯಂ ಗುಹ್ಯಂ ಮಂದಾರಸಂಸ್ಥಿತಂ |**
+ಸರ್ವಪಾಪವಿನಿರ್ಮುಕ್ತೋ ಮಮ ಲೋಕಂ ಸ ಗಚ್ಛತಿ+ ॥ ೫೩ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಮಂದಾರಮಹಿಮಾನಿರೂಪಣಂ ನಾಮ ತ್ರಯಶ್ಚತ್ವಾರಿಂಶದಧಿಕ ಶತತಮೋಽಧ್ಯಾಯಃ

---

೫೩. ಮಂದಾರಕ್ಷೇತ್ರದ ಈ ರಹಸ್ಯವಿಚಾರವನ್ನು ನಿತ್ಯವೂ ಕೇಳುವ ಅಥವಾ ಹೇಳುವ ಮನುಷ್ಯನು ಸರ್ವ ಪಾಪಗಳನ್ನೂ ಕಳೆದುಕೊಂಡು ನನ್ನ ಲೋಕವನ್ನು ಸೇರುವನು.

ಅಧ್ಯಾಯದ ಸಾರಾಂಶ :—

ಶ್ರೀವರಾಹನು ಭೂದೇವಿಗೆ ಮಂದಾರಕ್ಷೇತ್ರದಲ್ಲಿರುವ ತೀರ್ಥಗಳನ್ನೂ ಅವುಗಳ ಸ್ನಾನಾದಿಗಳಿಂದಾಗುವ ಫಲವನ್ನೂ ವಿವರವಾಗಿ ತಿಳಿಸಿ, ಆ ಕ್ಷೇತ್ರದ ಮಹಿಮೆಯನ್ನು ವಿವರಿಸುವಲ್ಲಿಗೆ ಶ್ರೀ ವರಾಹಪುರಾಣದಲ್ಲಿ ನೂರನಲವತ್ತ ಮೂರನೆಯ ಅಧ್ಯಾಯ.

---

* ಅಪೂರ್ಣಾರ್ಥಕವಾದ ಈ ಅರ್ಧಪದ್ಯವು ಬೊಂ. ಕ. ಪ್ರತಿಗಳಲ್ಲಿ ೫೦ ನೆಯ ಶ್ಲೋಕದ ಉತ್ತರಾರ್ಧವಾಗಿದೆ.

+ ವಾಕ್ಯಪೂರ್ಣತೆಗಾಗಿ ಹೊಸದಾಗಿ ಸೇರಿಸಿರುವ ಭಾಗ.

|| ಶ್ರೀಃ ||

–x–

ಚತುಶ್ಚತ್ವಾರಿಂಶದಧಿಕಶತತಮೋಽಧ್ಯಾಯಃ

ಅಥ ಸೋಮೇಶ್ವರಾದಿಲಿಂಗಮುಕ್ತಿಕ್ಷೇತ್ರತ್ರಿವೇಣ್ಯಾದಿ ಮಾಹಾತ್ಮ್ಯಂ

|| ಸೂತ ಉವಾಚ ||

ಶ್ರುತ್ವಾ ಮಂದಾರಮಾಹಾತ್ಮ್ಯಂ ಧರ್ಮಕಾಮಾ ವಸುಂಧರಾ ।
ವಿಸ್ಮಯಂ ಪರಮಂ ಗತ್ವಾ ಪುನಃ ಪಪ್ರಚ್ಛ ಮಾಧವಂ || ೧ ||

|| ಧರಣ್ಯುವಾಚ ||

ಮಯಾ ದೇವ ಪ್ರಸಾದೇನ ಶ್ರುತಂ ಮಂದಾರವರ್ಣನಂ ।
ಮಂದಾರಾತ್ಪರಮಂ ಸ್ಥಾನಂ ವಿಷ್ಣೋಃ ತದ್ವಕ್ತುಮರ್ಹಸಿ || ೨ ||

ನೂರ ನಲವತ್ತನಾಲ್ಕನೆಯ ಅಧ್ಯಾಯ

ಸೋಮೇಶ್ವರಾದಿಲಿಂಗಮುಕ್ತಿಕ್ಷೇತ್ರ ತ್ರಿವೇಣ್ಯಾದಿಗಳ ಮಹಿಮೆ.

೧. ಸೂತಮುನಿ—ಧರ್ಮಾಸಕ್ತಳಾದ ಭೂದೇವಿಯು ಮಂದಾರ ಮಹಿಮೆಯನ್ನು ಕೇಳಿ, ಅತ್ಯಾಶ್ಚರ್ಯಪಟ್ಟು, ಶ್ರೀವರಾಹನನ್ನು ಮತ್ತೆ ಕೇಳಿದಳು.

೨. ಭೂದೇವಿ— ವಿಷ್ಣುವೇ, ದೇವನಾದ ನಿನ್ನ ಅನುಗ್ರಹದಿಂದ ಮಂದಾರವರ್ಣನೆಯನ್ನು ಕೇಳಿದೆನು. ಮಂದಾರಕ್ಕಿಂತ ಉತ್ತಮವಾದ ಸ್ಥಳವಿದ್ದರೆ ಅದನ್ನೂ ಹೇಳು.

|| ಶ್ರೀವರಾಹ ಉವಾಚ ||

ಶೃಣು ತತ್ತ್ವೇನ ಮೇ ದೇವಿ ಯನ್ಮಾಂ ತ್ವಂ ಪರಿಪೃಚ್ಛಸಿ |
ಕಥಯಿಷ್ಯಾಮಿ ಮೇ ಗುಹ್ಯಂ ಶಾಲಗ್ರಾಮಮಿತಿ ಸ್ಮೃತಂ || ೩ ||

ದ್ವಾಪರೇ ತು ಯುಗೇ ಭೂಮೇ ಯದೂನಾಂ ಕುಲಸಂಕುಲೇ |
ತತ್ರ ಶೂರ ಇತಿ ಖ್ಯಾತೋ ಯದೂನಾಂ ವಂಶವರ್ಧನಃ || ೪ ||

ತಸ್ಯ ಪುತ್ರೋ ಮಹಾಭಾಗೋ ಸರ್ವಕರ್ಮಪರಾಯಣಃ |
ವಸುದೇವೋ ಗೃಹೇ ಜಾತೋ ಯಾದವಾನಾಂ ಕುಲೋದ್ವಹಃ || ೫ ||

ತಸ್ಯ ಭಾರ್ಯಾ ಚ ವಸುಧೇ ಸರ್ವಾವಯವಸುಂದರೀ |
ದೇವಕೀ ನಾಮ ನಾಮ್ನಾ ಚ ಮನೋಜ್ಞಾ ಶುಭದರ್ಶನಾ || ೬ ||

ತಸ್ಯಾ ಗರ್ಭೇ ಮಹಾಭಾಗೇ ಭವಿಷ್ಯಾಮಿ ನ ಸಂಶಯಃ |
ವಾಸುದೇವ ಇತಿ ಖ್ಯಾತೋ ದೇವಾನಾಮರಿಮರ್ದನಃ || ೭ ||

---

೩. ಶ್ರೀವರಾಹ—ನನ್ನ ದೇವಿ, ನೀನು ನನ್ನನ್ನು ಪ್ರಶ್ನಿಸುವುದನ್ನು ನಿಜವಾಗಿ ಹೇಳುತ್ತೇನೆ, ಕೇಳು. ಶಾಲಗ್ರಾಮವೆಂಬ ರಹಸ್ಯವಾದ ನನ್ನ ಕ್ಷೇತ್ರವು ಉತ್ತಮವಾದುದು.

೪. ಭೂಮಿ, ದ್ವಾಪರಯುಗದಲ್ಲಿ ಯದುವಂಶದಲ್ಲಿ ಆ ವಂಶವರ್ಧಕನಾದ ಶೂರನೆಂಬ ಪ್ರಸಿದ್ಧನಾದವನುದಿಸುವನು.

೫. ಆ ಶೂರನಿಗೆ, ಮಹಾಭಾಗ್ಯಶಾಲಿಯೂ, ಸರ್ವಕರ್ಮನಿರತನೂ, ಯಾದವಕುಲನಿರ್ವಾಹಕನೂ ಆದ ವಸುದೇವನೆಂಬ ಪುತ್ರನು ಜನಿಸುವನು.

೬. ಭೂದೇವಿ, ಸರ್ವಾವಯವಸುಂದರಿಯೂ, ಮನೋಹರಳೂ, ಶುಭದರ್ಶನಳೂ ಆದ ದೇವಕಿಯೆಂಬುವಳು ವಸುದೇವನಿಗೆ ಪತ್ನಿಯಾಗುವಳು.

೭. ಮಹಾಭಾಗೇ, ನಾನು ಆಕೆಯ ಗರ್ಭದಲ್ಲಿ, ದೇವತೆಗಳ ಶತ್ರುಗಳನ್ನು ಮರ್ದಿಸುವವನಾಗಿ ವಾಸುದೇವನೆಂದು ಪ್ರಸಿದ್ಧನಾಗಿ ಜನಿಸುವೆನು. ಸಂಶಯವಿಲ್ಲ.

ತತೋಽಪಿ ಸಂಸ್ಥಿತೇ ತತ್ರ ಯಾದವಾನಾಂ ಕುಲೋದ್ವಹೇ ।
ತತ್ರ ಬ್ರಹ್ಮರ್ಷಿಃ ಪರಮಃ ಸಾಲಂಕಾಯನ ಏವ ಚ ।
ಮದ್ಯ್ಯಾರಾಧನಾರ್ಥಾಯ ಭ್ರಮತೇ ಸ ದಿಶೋ ದಶ ॥ ೮ ॥

ಪುತ್ರಾರ್ಥಂ ಸ ತಪಸ್ತೇಪೇ ಮೇರುಶೃಂಗೇ ಸಮಾಹಿತಃ ॥ ೯ ॥

ತತಃ ಪಿಂಡಾರಕೇ ಗತ್ವಾ ಮಮ ಕ್ಷೇತ್ರೇ ವಸುಂಧರೇ ।
ಲೋಹಾರ್ಗಲೇ ತತೋ ಗತ್ವಾ ಸಹಸ್ರಂ ಚೈವ ತಿಷ್ಠತಿ ॥ ೧೦ ॥

ಈಶ್ವರೇಣ ಸಮಂ ಪೂರ್ವಂ ಸರ್ವಯೋಗೇಶ್ವರಂ ಸ್ಥಿತಂ ।
ನ ಸ ಪಶ್ಯತಿ ಮಾಂ ದೇವಿ ಮಾರ್ಗಮಾಣ ಇತಸ್ತತಃ ॥ ೧೧ ॥

ಈಶ್ವರೇಣಸಮಂ ಪೂರ್ವಮಹಮಾಸಂ ವಸುಂಧರೇ ।
ತಸ್ಯೈವ ತಪ್ಯಮಾನಸ್ಯ ಸಾಲಂಕಾಯನಕಸ್ಯ ಹ ॥ ೧೨ ॥

---

೮. ನಾನು ಆ ಯಾದವಕುಲ ವರ್ಧಕನಲ್ಲಿರುತ್ತಿರುವಾಗ ಬ್ರಹ್ಮರ್ಷಿಯಾದ ಸಾಲಂಕಾಯನನೆಂಬುವನು, ನನ್ನ ಆರಾಧನೆಗಾಗಿಯೇ ಹತ್ತುದಿಕ್ಕುಗಳಲ್ಲಿಯೂ ನನ್ನನ್ನರಸುತ್ತ ತಿರುಗುವನು.

೯. ಪುತ್ರನನ್ನು ಪಡೆಯಲು ಮೇರುಶಿಖರದಲ್ಲಿ ಆತನು ಶಾಂತನಾಗಿ ತಪಸ್ಸನ್ನು ಮಾಡಿದನು.

೧೦. ಬಳಿಕ ಗಯೆಯೆಂಬ ನನ್ನ ಕ್ಷೇತ್ರಕ್ಕೆ ಹೋಗಿ, ಆಮೇಲೆ ಲೋಹಾರ್ಗಲಕ್ಷೇತ್ರಕ್ಕೆ ಹೋಗಿ, ಸಾವಿರವರ್ಷಕಾಲವಿರುವನು.

೧೧. ದೇವಿ, ಆತನು ಇಲ್ಲಿ ಅಲ್ಲಿ ನನ್ನನ್ನು ಹುಡುಕುತ್ತ, ಪೂರ್ವದಲ್ಲೇ ಶಿವನೊಡನೆ ಇರುವ ಸರ್ವಯೋಗೇಶ್ವರನಾದ ನನ್ನನ್ನು ಕಾಣುವುದಿಲ್ಲ.

೧೨–೧೩. ವಸುಂಧರೇ, ನಾನು ಪೂರ್ವದಲ್ಲಿ ಈಶ್ವರನೊಡನೆ ಇದ್ದೆನು. ಆ ಸಾಲಂಕಾಯನನು ತಪಸ್ಸುಮಾಡುತ್ತಿದ್ದ ಆ ಕ್ಷೇತ್ರದಲ್ಲಿಯೇ ಆ ಶಾಲಗ್ರಾಮ

ತಸ್ಮಿನ್ ಕ್ಷೇತ್ರೇ ಹರೋ ದೇವೋ ಮತ್ಸ್ವರೂಪೇಣ ಸಂಯುತಃ ।
ಶಾಲಗ್ರಾಮೋ ಗಿರೌ ತಸ್ಮಿನ್ ಶಿಲಾರೂಪೇಣ ತಿಷ್ಠತಿ ॥ ೧೩ ॥

ಅಹಂ ತಿಷ್ಠಾಮಿ ತತ್ರೈವ ಗಿರಿರೂಪೇಣ ನಿತ್ಯಶಃ ।
ತಸ್ಮಿನ್ ಶಿಲಾಸ್ಸಮಗ್ರಾಸ್ತು ಮತ್ಸ್ವರೂಪಾ ನ ಸಂಶಯಃ ॥ ೧೪ ॥

ಪೂಜನೀಯಾಃ ಪ್ರಯತ್ನೇನ ಕಿಂಪುನಃ ಚಕ್ರಲಾಂಛಿತಾಃ ।
ಲಿಂಗರೂಪೇಣ ಚ ಹರಸ್ತತ್ರ ದೇವಾಲಯೇ ಗಿರೌ ॥ ೧೫ ॥

ಶಿವನಾಭಾಶ್ಶಿಲಾಸ್ತತ್ರ ಚಕ್ರನಾಭಾಸ್ತಥಾ ಶಿಲಾಃ ।
ಸೋಮೇಶ್ವರಾಧಿಷ್ಠಿತಸ್ತು ಶಿವರೂಪೋ ಗಿರಿಃ ಸ್ಮೃತಃ ॥ ೧೬ ॥

ಸೋಮೇನ ತತ್ರ ಸಂಸ್ಥಾಪ್ಯ ಸ್ವನಾಮ್ನಾ ಲಿಂಗಮುತ್ತಮಂ ।
ವರ್ಷಾಣಾಂ ತು ಸಹಸ್ರಂ ವೈ ಸ್ವಶಾಪಸ್ಯ ನಿವೃತ್ತಯೇ ॥ ೧೭ ॥

ಗಿರಿಯಲ್ಲಿ ಈಶ್ವರನು ನನ್ನ ಸ್ವರೂಪದೊಡನೆ, ಸೇರಿಕೊಂಡು ಶಿಲಾರೂಪದಿಂದ ಇರುವನು.

೧೪-೧೫. ನಾನು ಅಲ್ಲಿಯೇ ಶಾಲಗ್ರಾಮಗಿರಿರೂಪದಿಂದ ಯಾವಾಗಲೂ ಇರುವೆನು. ಆ ಗಿರಿಯಲ್ಲಿ ಶಿಲೆಗಳೆಲ್ಲವೂ ಪೂರ್ಣವಾಗಿ ನನ್ನ ಸ್ವರೂಪಗಳೆಂಬುದರಲ್ಲಿ ಸಂಶಯವಿಲ್ಲ. ಚಕ್ರಚಿಹ್ನೆಯುಳ್ಳ ಆ ಶಿಲೆಗಳನ್ನು ಪ್ರಯತ್ನಪೂರ್ವಕವಾಗಿ ಪೂಜಿಸಬೇಕೆಂದು ಹೇಳುವುದೇನಿದೆ ? ! ಆ ಗಿರಿದೇವಾಲಯದಲ್ಲಿ ಹರನು ಲಿಂಗರೂಪದಿಂದ ಇರುವನು.

೧೬. ಅಲ್ಲಿ ಕೆಲವು ಶಿಲೆಗಳು ಶಿವಚಿಹ್ನೆಯುಳ್ಳವು. ಕೆಲವು ಚಕ್ರಚಿಹ್ನೆಯುಳ್ಳವು. ಸೋಮೇಶ್ವರನಿರುವ ಗಿರಿಯಾದರೋ ಶಿವರೂಪವೆಂದೆನಿಸಿಕೊಳ್ಳುವುದು.

೧೭. ಸೋಮ(ಚಂದ್ರ)ನು ತನ್ನ ಶಾಪವನ್ನು ಕಳೆದುಕೊಳ್ಳುವುದಕ್ಕಾಗಿ ಆ ಗಿರಿಯಲ್ಲಿ ತನ್ನ ಹೆಸರಿನಿಂದ ಉತ್ತಮವಾದ ಲಿಂಗವನ್ನು ಸ್ಥಾಪಿಸಿ ಸಾವಿರವರ್ಷಗಳು ಪೂಜಿಸಿದನು.

ತತಶ್ಶಾಪಾದ್ವಿನಿರ್ಮುಕ್ತಃ ತೇಜಸಾ ಚ ಪರಿಪ್ಲುತಃ ।
ಸ್ವಕಂ ತೇಜೋಬಲಂ ಪ್ರಾಪ್ಯ ತುಷ್ಟಾವ ಗಿರಿಜಾಪತಿಂ ॥ ೧೮ ॥

ಸೋಮೇಶ್ವರಾಜ್ಞ ವರದಮಾವಿರ್ಭೂತಂ ತ್ರಿಯಂಬಕಂ ॥ ೧೯ ॥

॥ ಸೋಮ ಉವಾಚ ॥

ಶಿವಂ ಸೌಮ್ಯಮುಮಾಕಾಂತಂ ಭಕ್ತಾನುಗ್ರಹಕಾತರಂ ।
ನತೋಽಸ್ಮಿ ಪಂಚವದನಂ ನೀಲಕಂಠಂ ತ್ರಿಲೋಚನಂ ॥ ೨೦ ॥

ಶಶಾಂಕಶೇಖರಂ ದಿವ್ಯಂ ಸರ್ವದೇವನಮಸ್ಕೃತಂ ।
ಪಿನಾಕಪಾಣಿಂ ದೇವೇಶಂ ಭಕ್ತಾನಾಮಭಯಪ್ರದಂ ॥ ೨೧ ॥

ತ್ರಿಶೂಲಿನಂ ಡಮರುಣಾ ಲಸದ್ಧಸ್ತಂ ವೃಷಧ್ವಜಂ ।
ನಾನಾಮುಖೈರ್ಗಣೈರ್ಜುಷ್ಟಂ ನಾನಾರೂಪೈರ್ಭಯಾನಕೈಃ ॥ ೨೨ ॥

೧೮–೧೯. ಬಳಿಕ ಶಾಪದಿಂದ ವಿಮುಕ್ತನಾಗಿ, ಕಾಂತಿಯುತನಾಗಿ ತನ್ನ ತೇಜೋಬಲವನ್ನು ಪಡೆದು, ಪಾರ್ವತೀಪತಿಯೂ, ಸೋಮೇಶ್ವರ ಲಿಂಗದಿಂದ ಕಾಣಿಸಿಕೊಂಡವನೂ, ವರದನೂ, ಮುಕ್ಕಣ್ಣನೂ ಆದ ಈಶ್ವರನನ್ನು ಮುಂದಿನಂತೆ ಸ್ತುತಿಸಿದನು.

೨೦. ಸೋಮ(ಚಂದ್ರ)—ಸೌಮ್ಯನೂ, ಪಾರ್ವತಿಪತಿಯೂ ಭಕ್ತರಿಗೆ ಅನುಗ್ರಹಿಸುವುದರಲ್ಲಿ ಕಾತರನೂ, ಸದ್ಯೋಜಾತಾದಿ ಪಂಚಮುಖಗಳುಳ್ಳವನೂ, ನೀಲಕಂಠನೂ, ತ್ರಿಣೇತ್ರನೂ ಆದ ಶಿವನನ್ನು ನಮಸ್ಕರಿಸುತ್ತೇನೆ.

೨೧. ಚಂದ್ರಶೇಖರನೂ, ದಿವ್ಯನೂ, ಸರ್ವದೇವನಮಸ್ಕೃತನೂ, ಪಿನಾಕವೆಂಬ ಬಿಲ್ಲನ್ನು ಹಿಡಿದಿರುವವನೂ, ಭಕ್ತರಿಗೆ ಅಭಯವನ್ನು ಕೊಡುವವನೂ, ಆದ ದೇವೇಶನನ್ನು ವಂದಿಸುತ್ತೇನೆ.

೨೨–೨೩. ತ್ರಿಶೂಲಡಮರುಕಗಳಿಂದೊಪ್ಪುವ ಕಯ್ಯುಳ್ಳವನೂ, ವೃಷಭ ಧ್ವಜನೂ, ಬಗೆ ಬಗೆಯ ಮುಖಗಳುಳ್ಳವರೂ ಬಗೆ ಬಗೆಯ ರೂಪವುಳ್ಳವರೂ ಭಯಂಕರರೂ ಆದ ಪ್ರಮಥಗಣಗಳಿಂದ ಸೇವಿತನೂ, ತ್ರಿಪುರಾಸುರಸಂಹಾ

ತ್ರಿಪುರಘ್ನಂ ಮಹಾಕಾಲಮಂಧಕಾರಿನಿಷೂದನಂ ।
ಗಜಾಜಿನಾವೃತಂ ಸ್ಥಾಣುಂ ವ್ಯಾಘ್ರಚರ್ಮವಿಭೂಷಿತಂ || ೨೩ ||

ನಾಗಭೋಗೋಪವೀತಂ ಚ ರುದ್ರಮಾಲಾಧರಂ ಪ್ರಭುಂ ।
ಅರೂಪಮಪಿ ಸರ್ವೇಶಂ ಭಕ್ತೇಚ್ಛೋಪಾತ್ತವಿಗ್ರಹಂ || ೨೪ ||

ವಹ್ನಿಸೋಮಾರ್ಕನಯನಂ ಮನೋವಾಚಾಮಗೋಚರಂ ।
ಜಟಾಜೂಟಪ್ರಕಟಿತಂ ಗಂಗಾಸಮ್ಮಾರ್ಜಿತಾಂಹಸಂ ।
ಕೈಲಾಸನಿಲಯಂ ಶಂಭುಂ ಹಿಮಾಚಲಕೃತಾಶ್ರಮಂ || ೨೫ ||

ಏವಂ ಸ್ತುತಸ್ತದಾ ಶಂಭುರಿದಂ ವಚನಮಬ್ರವೀತ್ || ೨೬ ||

ರಕನೂ, ಮಹಾಕಾಲನೂ, ಅಂಧಕಾಸುರ ಸಂಹಾರಿಯೂ, ಗಜಚರ್ಮಧಾರಿಯೂ ಪ್ರಲಯದಲ್ಲೂ ಇರುವವನೂ, ಹುಲಿಯ ಚರ್ಮದಿಂದ ಅಲಂಕೃತನೂ ಆದ ಈಶ್ವರನನ್ನು ನಮಸ್ಕರಿಸುತ್ತೇನೆ.

೨೪. ಸರ್ಪದ ಹೆಡೆಯನ್ನೇ ಯಜ್ಞೋಪವೀತವಾಗಿ ಧರಿಸಿರುವವನೂ, ದೊಡ್ಡದಾದ ಮಾಲೆಯನ್ನು ಧರಿಸಿರುವವನೂ, ರೂಪರಹಿತನಾದರೂ ಭಕ್ತರ ಇಷ್ಟದಂತೆ ರೂಪ(ದೇಹ)ವನ್ನು ಧರಿಸಿರುವವನೂ, ಸರ್ವೇಶನೂ ಆದ ಪ್ರಭುವನ್ನು ನಮಸ್ಕರಿಸುತ್ತೇನೆ.

೨೫. ಅಗ್ನಿಚಂದ್ರಸೂರ್ಯರೆಂಬ ಮೂರು ಕಣ್ಣುಳ್ಳವನೂ, ಮನಸ್ಸಿಗೂ, ಮಾತಿಗೂ ಅಗೋಚರನೂ, ಜಡೆಯ ಸಮೂಹದಿಂದ ಪ್ರಸಿದ್ಧನೂ, ಗಂಗೆಯಿಂದ ಪಾಪವನ್ನು ತೊಳೆದಿರುವವನೂ, ಕೈಲಾಸದಲ್ಲಿ ವಾಸಮಾಡುವವನೂ, ಹಿಮಾಚಲದಲ್ಲಿ ಆಶ್ರಮವನ್ನು ಮಾಡಿದವನೂ, ಎಲ್ಲರಿಗೂ ಸುಖವನ್ನುಂಟು ಮಾಡುವವನೂ(ಶಂಭು)ಆದ ಈಶ್ವರನಿಗೆ ನಮಸ್ಕಾರ.

೨೬-೨೭. ಹೀಗೆ ಸ್ತೋತ್ರಮಾಡಿಸಿಕೊಂಡ ಶಂಭುವು ಚಂದ್ರನನ್ನು ಕುರಿತು, "ಕಲಾನಾಥ, ದುರ್ಲಭವಾದ ನನ್ನ ದರ್ಶನವನ್ನು ಪಡೆದಿರುವುದರಿಂದ

ವರಂ ವರಯ ಭದ್ರಂ ತೇ ಯತ್ತೇ ಮನಸಿ ವರ್ತತೇ |
ದುರ್ಲಭಂ ದರ್ಶನಂ ಯಸ್ಮಾತ್ತ್ವಾಪ್ತವಾನಸಿ ಗೋಪತೇ ॥ ೨೭ ॥

॥ ಸೋಮ ಉವಾಚ ॥

ವರಂ ದದಾಸಿ ಚೇದ್ದೇವ ಮಮ ಲಿಂಗೇ ಸದಾ ವಸ !
ಏತಲ್ಲಿಂಗಸ್ಯ ಭಕ್ತಾನಾಂ ಪೂರಯಸ್ವ ಮನೋರಥಂ ॥ ೨೮ ॥

॥ ದೇವದೇವ ಉವಾಚ ॥

ವಿಷ್ಣುಸಾನ್ನಿಧ್ಯಮಸ್ಯತ್ರ ಸದೈವ ನಿವಸಾಮ್ಯಹಂ ।
ವಿಶೇಷತಸ್ತ್ವದೀಯೇಽಸ್ಮಿನ್ನದ್ಯಪ್ರಭೃತಿ ಗೋಪತೇ ॥ ೨೯ ॥

ಮಮೈವಾನ್ಯಾ ಪರಾ ಮೂರ್ತಿಸ್ತ್ವಂ ಶಶಾಂಕ ನ ಸಂಶಯಃ ॥ ೩೦ ॥

ಏತಲ್ಲಿಂಗಾರ್ಚಕಾನಾಂ ಚ ಭಕ್ತಾನಾಂ ಮಮ ಸರ್ವದಾ ।
ವರಾನ್ದಾಸ್ಯಾಮಿ ಭದ್ರಂ ತೇ ದೇವಾನಾಮಪಿ ದುರ್ಲಭಾನ್ ॥ ೩೧ ॥

ಈಗ ನೀನು ನಿನ್ನ ಮನದಲ್ಲಿರುವ ವರವನ್ನು ಬೇಡು. ನಿನಗೆ ಮಂಗಳವಾಗಲಿ" ಎಂದು ಹೇಳಿದನು.

೨೮. ಚಂದ್ರನು—ದೇವ, ನನಗೆ ವರವನ್ನು ಕೊಡುವೆಯಾದರೆ, ನಾನು ಸ್ಥಾಪಿಸಿರುವ ಈ ಲಿಂಗದಲ್ಲಿ ಯಾವಾಗಲೂ ಇರು. ಈ ಲಿಂಗದ ಭಕ್ತರ ಇಷ್ಟಾರ್ಥವನ್ನು ನೆರವೇರಿಸು.

೨೯. "ಕಲಾನಿಧಿಯೇ, ಇದು ವಿಷ್ಣುವಿನ ಸನ್ನಿಧಿಯಾದರೂ ಇಂದಿನಿಂದ ನಾನು, ನೀನು ಸ್ಥಾಪಿಸಿರುವ ಈ ಲಿಂಗದಲ್ಲಿ ವಿಶೇಷವಾಗಿ ಸದಾ ವಾಸಿಸುವೆನು.

೩೦–೩೧. ಚಂದ್ರನೇ, ನೀನು ನನ್ನ ಬೇರೊಂದು ಉತ್ತಮಮೂರ್ತಿಯಾಗಿದ್ದೀಯೆ. ಸಂಶಯವಿಲ್ಲ. ಈ ಲಿಂಗವನ್ನು ಅರ್ಚಿಸುವ ನನ್ನ ಭಕ್ತರಿಗೆ ಯಾವಾಗಲೂ ದೇವತೆಗಳಿಗೂ ದುರ್ಲಭವಾದ ವರಗಳನ್ನು ಕೊಡುವೆನು.

ಸಾಲಂಕಾಯನಕಾಖ್ಯಸ್ಯ ಮುನೇಸ್ತು ತಪಸೋ ಬಲಾತ್ ।
ವಿಷ್ಣುನಾ ಸಹ ಸಂಮಂತ್ರ್ಯ ಸ್ಥಿತಾವಾನಾಂ ಕಲಾನಿಧೇ ।
ಶಾಲಗ್ರಾಮಗಿರಿರ್ವಿಷ್ಣುರಹಂ ಸೋಮೇಶ್ವರಾಭಿಧಃ ॥ ೩೨ ॥

ತಯೋಃ ಪರ್ವತಯೋರ್ಯಾ ವೈ ಶಿಲಾ ವಿಷ್ಣುಶಿವಾಭಿಧಾ ॥ ೩೩ ॥

ರೇವಯಾ ಚ ಕೃತಂ ಪೂರ್ವಂ ತಪಶ್ಶಿವಸುತುಷ್ಟಿದಂ ।
ಮಮ ತ್ವತ್ಸದೃಶಃ ಪುತ್ರೋ ಭೂಯಾದಿತಿ ಮನೀಷಯಾ ॥ ೩೪ ॥

ಅಹಂ ಕಸ್ಯಾಪಿ ನ ಸುತಃ ಕಿಂ ಕರೋಮೀತಿ ಚಿಂತಯನ್ ।
ರೇವಾಯಾಸ್ತು ವರೋ ದೇಯಸ್ತ್ವವಶ್ಯಂ ಮೃಗಲಾಂಛನ ।
ನಿಶ್ಚಿತ್ಯೈವಂ ತದಾ ಪ್ರೋಕ್ತಃ ಪ್ರಸನ್ನೇನಾಂತರಾತ್ಮನಾ ॥ ೩೫ ॥

ಲಿಂಗರೂಪೇಣ ತೇ ದೇವಿ ಗಜಾನನಪುರಸ್ಕೃತಃ ।
ಗರ್ಭೇ ತವ ವಸಿಷ್ಯಾಮಿ ಪುತ್ರೋ ಭೂತ್ವಾ ಶಿವಪ್ರಿಯೇ ॥ ೩೬ ॥

---

೩೨. ಸಾಲಂಕಾಯನನೆಂಬ ಮುನಿಯ ತಪೋಬಲದಿಂದ ವಿಷ್ಣುವಿನೊಡನೆ ಆಲೋಚನೆಮಾಡಿ, ವಿಷ್ಣುವೂ, ನಾನೂ ಇಲ್ಲಿದ್ದೇವೆ. ಆ ಶಾಲಗ್ರಾಮಗಿರಿಯೇ ವಿಷ್ಣು. ನಾನೇ ಸೋಮೇಶ್ವರನೆಂಬ ಹೆಸರಿನ ಲಿಂಗರೂಪವಾದ ಪರ್ವತ.

೩೩. ಆ ಎರಡುಪರ್ವತಗಳ ಶಿಲೆಗಳು ಅನುಕ್ರಮವಾಗಿ ವಿಷ್ಣು(ಶಿಲೆ,) ಶಿವ(ಶಿಲೆ,) ಎಂಬ ಹೆಸರುಳ್ಳವು.

೩೪. ರೇವೆ(ನದಿ)ಯು, ಪೂರ್ವದಲ್ಲಿ ತನಗೆ ಶಿವನಂತಹ ಮಗನುದಿಸಲೆಂದು, ನನಗೆ ಸಂತೋಷವನ್ನುಂಟುಮಾಡುವ ತಪಸ್ಸನ್ನು ಮಾಡಿದಳು.

೩೫–೩೬. "ನಾನು ಯಾರಿಗೂ ಮಗನಲ್ಲ ರೇವೆಗಾದರೋ ಅಗತ್ಯವಾಗಿ ವರವನ್ನು ಕೊಡಬೇಕು. ಇದಕ್ಕೇನು ಮಾಡಲಿ"! ಎಂದು ಚಿಂತಿಸುತ್ತ, ಚಂದ್ರನೇ, ನಾನು ಕಡೆಗೆ ಹೀಗೆ ನಿಶ್ಚಯಿಸಿ, ಒಲಿದ ನಿರ್ಮಲಮನದಿಂದ, "ದೇವಿ, ಶಿವಪ್ರಿಯೇ, ನಾನು ವಿನಾಯಕನನ್ನು ಮುಂದಿಟ್ಟುಕೊಂಡು, ಲಿಂಗರೂಪದಿಂದ ನಿನಗೆ ಮಗನಾಗಿ ನಿನ್ನ ಗರ್ಭದಲ್ಲಿ ವಾಸಿಸುವೆನು.

ಮಮ ತ್ವಮಪರಾ ಮೂರ್ತಿಃ ಖ್ಯಾತಾ ಜಲಮಯೀ ಶಿವಾ ।
ಶಿವಶಕ್ತಿವಿಭೇದೇನ ಆವಾಮೇಕತ್ರ ಸಂಸ್ಥಿತೌ ॥ ೩೭ ॥

ಏವಂ ದತ್ತವರಾ ರೇವಾ ಮತ್ಸಾನ್ನಿಧ್ಯಮಿಹಾಗತಾ ।
ರೇವಾಖಂಡಮಿತಿ ಖ್ಯಾತೇ ತತಃ ಪ್ರಭೃತಿ ಗೋಪತೇ ॥ ೩೮ ॥

ಗಂಡಕ್ಯಾಪಿ ಪುರಾ ತಪ್ತಂ ವರ್ಷಾಣಾಮಯುತಂ ವಿಧೋ ।
ಶೀರ್ಣಪರ್ಣಾಶನಂ ಕೃತ್ವಾ ವಾಯುಭಕ್ಷಾಪ್ಯನಂತರಂ ।
ದಿವ್ಯವರ್ಷಶತಂ ತೇಪೇ ವಿಷ್ಣುಂ ಚಿಂತಯತೀ ತದಾ ॥ ೩೯ ॥

ತತಸ್ತಾಕ್ಷಾಜ್ಜಗನ್ನಾಥೋ ಹರಿರ್ಭಕ್ತಜನಪ್ರಿಯಃ ।
ಉವಾಚ ಮಧುರಂ ವಾಕ್ಯಂ ಪ್ರೀತಃ ಪ್ರಣತವತ್ಸಲಃ ॥ ೪೦ ॥

ಗಂಡಕಿ ತ್ವಾಂ ಪ್ರಸನ್ನೋಽಸ್ಮಿ ತಪಸಾ ವಿಸ್ಮಿತೋಽನಘೇ ।
ಅನವಿಚ್ಛಿನ್ನಯಾ ಭಕ್ತ್ಯಾ ವರಂ ವರಯ ಸುವ್ರತೇ ॥ ೪೧ ॥

---

೩೭. ನೀನು ಜಲಮಯಿಯೂ, ಮಂಗಳೆಯೂ, ಪ್ರಸಿದ್ಧಳೂ ಆದ ನನ್ನ ಅಪರರೂಪಳು. ಶಿವ, ಶಕ್ತಿಯೆಂಬ ವಿಭೇದದಿಂದ ನಾವಿಬ್ಬರೂ ಒಂದೆಡೆಯಲ್ಲಿರುವವರು'' ಎಂದು ಹೇಳಿದೆನು.

೩೮. ಕಲಾಪತಿಯೇ, ಹಾಗೆ ವರವನ್ನು ಪಡೆದ ರೇವೆ(ನರ್ಮದೆ)ಯು ಅಂದಿನಿಂದ ರೇವಾಖಂಡವೆಂದು ಪ್ರಸಿದ್ಧವಾದ ಇಲ್ಲಿಗೆ ನನ್ನ ಸನ್ನಿಧಿಗೆ ಬಂದಳು.

೩೯. ಚಂದ್ರನೇ, ಗಂಡಕಿಯೂ ಪೂರ್ವದಲ್ಲಿ ಹತ್ತುಸಾವಿರವರ್ಷ ತಪಸ್ಸನ್ನು ಮಾಡಿದಳು. ಆಗ ಸಣ್ಣ ಅಥವಾ ಸೀಳಿದ ಎಲೆಗಳನ್ನು ತಿಂದೂ, ಬಳಿಕ ವಾಯ್ವಾಹಾರಳಾಗಿಯೂ ವಿಷ್ಣುವನ್ನು ಧ್ಯಾನಿಸುತ್ತ, ದೇವಮಾನದ ನೂರುವರ್ಷ ತಪಸ್ಸನ್ನು ಮಾಡಿದಳು.

೪೦-೪೩. ಬಳಿಕ ಲೋಕನಾಥನೂ, ಭಕ್ತಜನಪ್ರಿಯನೂ, ನಮಿಸಿದವರಲ್ಲಿ ವಾತ್ಸಲ್ಯವುಳ್ಳವನೂ ಆದ ಹರಿಯು ಪ್ರತ್ಯಕ್ಷನಾಗಿ ಪ್ರೀತಿಯಿಂದ "ಗಂಡಕಿ, ದೋಷರಹಿತೇ, ನಿನ್ನ ತಪದಿಂದಲೂ, ನಿಶ್ಚಲಭಕ್ತಿಯಿಂದಲೂ ಆಶ್ಚರ್ಯಗೊಂಡು ನಿನ್ನನ್ನು ಆಶ್ರಯಿಸಿದ್ದೇನೆ ಸುವ್ರತೇ, ಉತ್ತಮಳೇ ಪ್ರೀತನಾಗಿದ್ದೇನೆ. ನಾನು

ಕಿಂ ದೇಯಂ ತದ್ವದಸ್ವಾಶು ಪ್ರೀತೋಽಸ್ಮಿ ವರವರ್ಣಿನಿ || ೪೨ ||

ಗಂಡಕ್ಯಪಿ ಪುರೋ ದೃಷ್ಟ್ವಾ ಶಂಖಚಕ್ರಗದಾಧರಂ |
ದಂಡವತ್ಪ್ರಣತಾ ಭೂತ್ವಾ ತತಃ ಸ್ತೋತುಂ ಪ್ರಚಕ್ರಮೇ || ೪೩ ||

ಅಹೋ ದೇವ ಮಯಾ ದೃಷ್ಟೋ ದುರ್ದರ್ಶೋ ಯೋಗಿನಾಮಪಿ |
ತ್ವಯಾ ಸರ್ವಮಿದಂ ಸೃಷ್ಟಂ ಜಗತ್ ಸ್ಥಾವರ ಜಂಗಮಂ || ೪೪ ||

ತದನು ತ್ವಂ ಪ್ರವಿಷ್ಟೋಽಸಿ ಪುರುಷಸ್ತೇನ ಚೋಚ್ಯಸೇ |
ತ್ವಲ್ಲೀಲೋನ್ಮೀಲಿತೇ ವಿಶ್ವೇ ಕಃ ಸ್ವತಂತ್ರೋಽಸ್ತಿ ವೈ ಪುಮಾನ್ || ೪೫ ||

ಅನಾದ್ಯಂತಮಪರ್ಯಂತಂ ಯದ್ಬ್ರಹ್ಮಶ್ರುತಿಬೋಧಿತಂ |
ತದೇವ ತ್ವಂ ಮಹಾವಿಷ್ಣೋ ಯಸ್ತ್ವಾಂ ವೇದ ಸ ವೇದವಿತ್ || ೪೬ ||

ನಿನಗೆ ಕೊಡಬೇಕಾದುದೇನೋ ಅದನ್ನು ಬೇಗನೆ ಹೇಳು.” ಎಂದು ಇಂಪಾದ ಮಾತನ್ನು ಆಡಿದನು

೪೩. ಗಂಡಕಿಯೂ ಮುಂದುಗಡೆಯಲ್ಲಿರುವ, ಶಂಖಚಕ್ರಗದಾಧರನಾದ ವಿಷ್ಣುವನ್ನು ನೋಡಿ, ದಂಡಪ್ರಣಾಮವನ್ನು ಮಾಡಿ ಬಳಿಕ ಅವನನ್ನು ಸ್ತುತಿಸಲಾರಂಭಿಸಿದಳು.

೪೪–೪೫. “ಅಹೋ! ದೇವ, ಯೋಗಿಗಳು ಕಷ್ಟದಿಂದ ನೋಡಬೇಕಾದ ನಿನ್ನನ್ನು ನಾನು ನೋಡಿದೆನು. ದೇವ, ಚರಾಚರಾತ್ಮಕವಾದ ಈ ಜಗತ್ತೆಲ್ಲವನ್ನೂ ನೀನೇ ಸೃಷ್ಟಿಸಿರುವೆ. ಈ ಜಗತ್ತಿನಲ್ಲಿ ನೀನೇ ಅನುಪ್ರವೇಶಮಾಡಿರುವೆ. (ಅಂತರ್ಯಾಮಿಯಾಗಿರುವೆ). ಆದುದರಿಂದಲೇ ನಿನ್ನನ್ನು ಪುರುಷ ಅಥವಾ ಪರಮಾತ್ಮನೆಂದು ಕರೆಯುವರು. ನಿನ್ನ ಲೀಲೆಯಿಂದ ವಿಕಾಸಗೊಂಡಿರುವ ಈ ವಿಶ್ವದಲ್ಲಿ ಬೇರಾರು ಸ್ವತಂತ್ರರಿರುವರು!

೪೬. ಬ್ರಹ್ಮಶ್ರುತಿಯು ಹೇಳುವ ಆದ್ಯಂತಪರ್ಯಂತರಹಿತವಾದ ಪರಾತ್ಪರವಸ್ತುವಾವುದೋ ಅದೇ ನೀನು. ಮಹಾವಿಷ್ಣುವೇ, ನಿನ್ನನ್ನು ತಿಳಿಯುವವನೇ ವೇದವನ್ನರಿತವನು.

ತವೈವಾದ್ಯಾ ಜಗನ್ಮಾತಾ ಯಾ ಶಕ್ತಿಃ ಪರಮಾ ಸ್ಮೃತಾ ।
ತಾಂ ಯೋಗಮಾಯಾಂ ಪ್ರಕೃತಿಂ ಪ್ರಧಾನಮಿತಿ ಚಕ್ಷತೇ ॥ ೪೭ ॥

ನಿರ್ಗುಣಃ ಪುರುಷೋಽವ್ಯಕ್ತಶ್ಚಿತ್ಸ್ವರೂಪೋ ನಿರಂಜನಃ ।
ಆನಂದರೂಪಃ ಶುದ್ಧಾತ್ಮಾ ಹ್ಯಕರ್ತಾ ನಿರ್ವಿಕಾರಕಃ ॥ ೪೮ ॥

ಸ್ವಾಂ ಯೋಗಮಾಯಾಮಾವಿಶ್ಯ ಕರ್ತೃತ್ವಂ ಪ್ರಾಪ್ತವಾನಸಿ ।
ಪ್ರಕೃತ್ಯಾ ಸೃಜ್ಯಮಾನೇಽಸ್ಮಿನ್ ದ್ರಷ್ಟಾ ಸಾಕ್ಷೀ ನಿಗದ್ಯಸೇ ॥ ೪೯ ॥

ಪ್ರಕೃತೇಸ್ತ್ರಿಗುಣೈರಸ್ಮಿನ್ಸೃಜ್ಯಮಾನೇಽಪಿ ನಾನ್ಯಥಾ ।
ಸಾನ್ನಿಧ್ಯಮಾತ್ರತೋ ದೇವ ತ್ವಯಿ ಸ್ಫುರತಿ ಕಾರಣೇ ॥ ೫೦ ॥

ಸ್ಫಟಿಕೇ ಹಿ ಯಥಾ ಸ್ವಚ್ಛೇ ಜಪಾಕುಸುಮರಾಗತಃ ।
ಪ್ರಕಾಶ್ಯತೇ ತ್ವಪ್ರಕಾಶಾಜ್ಜ್ಯೋತೀರೂಪಂ ನತಾಸ್ಮಿ ತತ್ ॥ ೫೧ ॥

---

೪೭. ಆದ್ಯಳೂ ಜಗನ್ಮಾತೆಯೂ ಆದ ಆ ಪರಶಕ್ತಿಯೆನಿಸಿಕೊಳ್ಳುವಳೂ ನಿನ್ನವಳೇ. ಪ್ರಕೃತಿಯಾದ ಆ ಯೋಗಮಾಯೆಯನ್ನು ಪ್ರಧಾನವೆಂದೂ ಹೇಳುವರು.

೪೮–೪೯. ಹೇಯವಾದ ಮತ್ತು ಸತ್ವಾದಿಗಳಾದ ಗುಣಗಳಿಲ್ಲದವನೂ, ಸೂಕ್ಷ್ಮನೂ, ಜ್ಞಾನಸ್ವರೂಪನೂ, ನಿರ್ದೋಷನೂ, ಅನಂತರೂಪನೂ, ಶುದ್ಧಾತ್ಮನೂ ಮಾಡಲೇಬೇಕಾದ ಕರ್ಮವಿಲ್ಲದವನೂ, ಪುರುಷನೂ ಆದ ನೀನು ನಿನ್ನದೇ ಆದ ಯೋಗಮಾಯೆಯನ್ನು ಹೊಕ್ಕು ಕರ್ತೃತ್ವವನ್ನು ಪಡೆದಿದ್ದೀಯೆ. ಪ್ರಕೃತಿಯು ಸೃಷ್ಟಿಸುವ ಸೃಷ್ಟಿಯನ್ನು ನೋಡುವ ನೀನು ಸಾಕ್ಷಿಯಾಗಿರುವೆ.

೫೦–೫೧. ದೇವಾ, ಸ್ಫಟಿಕವು ಸ್ವಚ್ಛವಾಗಿದ್ದರೂ, ಕೆಂಪುದಾಸವಾಳದ ಹೂವಿನ ಹತ್ತಿರದಲ್ಲಿದ್ದರೆ ಆ ಪಟಿಕದಲ್ಲಿ ಕೆಂಪುಬಣ್ಣವು ಹೊಳೆಯುವಂತೆ, ನೀನು ನಿರ್ಗುಣನೂ ಶುದ್ಧಾತ್ಮನೂ ಆಗಿದ್ದರೂ ತ್ರಿಗುಣಾತ್ಮಕವಾಗಿ ಪ್ರಕೃತಿಯಿಂದ ಸೃಜಿಸಲ್ಪಟ್ಟಿರುವ ಪ್ರಪಂಚದಲ್ಲಿ ಪ್ರವೇಶಿಸಿರುವ ನಿನ್ನಲ್ಲಿ ಪ್ರಪಂಚಸಾನ್ನಿಧ್ಯದಿಂದ ಬೇರೆಯ ರೂಪವು ಕಾಣುವುದು. ಅಂತಹ ನಿನ್ನ ತೇಜೋರೂಪವನ್ನು ನಾನು ನಮಿಸುವೆನು.

ಬ್ರಹ್ಮಾದಯೋಽಪಿ ಕವಯೋ ನ ವಿದಂತಿ ಯಥಾರ್ಥತಃ ।
ತಂ ಕಥಂ ವೇದ್ಮ್ಯಹಂ ಮೂಢಾ ತವರೂಪಂ ನಿರಂಜನಂ ॥ ೫೨ ॥

ಮೂಢಸ್ಯ ಜಗತೋ ಮಧ್ಯೇ ಸ್ಥಿತಾ ಕಿಂಚಿದಜಾನತೀ ।
ತ್ವಯಾ ಧೃತಾ ಕೃತಾ ಚಾಸ್ಮಿ ಯೋಗ್ಯಾಯೋಗ್ಯಮವಿಂದತೀ ॥ ೫೩ ॥

ತೇನ ಲೋಕೇ ಮಹತ್ವಂ ಚ ತ್ವತ್ಪ್ರಸಾದೇನ ಚೈಷಿತಾ ।
ಯಯಾ ಚಾಜ್ಞತಯೋದಾರ ತನ್ಮೇ ದಾತುಂ ತ್ವಮರ್ಹಸಿ ॥ ೫೪ ॥

ದಯಾಲುರಸಿ ದೀನೇಷು ನೇತಿ ಮಾಂ ನ ವದ ಪ್ರಭೋ ॥ ೫೫ ॥

ತತಃ ಪ್ರೋವಾಚ ಭಗವಾನ್ ದೇವಿ ಯದ್ಯತ್ತ್ವಮಿಚ್ಛಸಿ ।
ತದ್ಯಾಚಯ ವರಾರೋಹೇ ಅದೇಯಮಪಿ ಸರ್ವಥಾ ॥ ೫೬ ॥

---

೫೨. ವಿದ್ವಾಂಸರಾದ ಬ್ರಹ್ಮನೇ ಮೊದಲಾದವರು ಕೂಡ ನಿನ್ನ ನಿರಂಜನ ರೂಪವನ್ನು ಸರಿಯಾಗಿ ತಿಳಿಯಲಾರರು. ಮೂಢಳಾದ ನಾನು ಹೇಗೆ ತಾನೆ ತಿಳಿದೇನು !

೫೩. ಅರಿವಿಲ್ಲದ ಲೋಕದ ನಡುವೆ ಇದ್ದುಕೊಂಡು ಏನನ್ನೂ ಅರಿಯುದವಳಾಗಿಯೂ, ಯೋಗ್ಯಾಯೋಗ್ಯವನ್ನು ತಿಳಿಯದವಳಾಗಿಯೂ ಇರುವ ನನ್ನನ್ನು ನೀನು ಸೃಷ್ಟಿಸಿಯೂ ಧರಿಸಿಯೂ ಇದ್ದೀಯೆ.

೫೪–೫೫. ಆದುದರಿಂದ ನಾನು ಅಜ್ಞತೆಯಿಂದ ಲೋಕದಲ್ಲಿ ನಿನ್ನ ಅನುಗ್ರಹದಿಂದ ನನಗೆ ಮಹತ್ವವನ್ನು ಬಯಸಿ, ನಿನ್ನನ್ನು ಬೇಡುತ್ತೇನೆ ಉದಾರನೇ, ಅದನ್ನು ನನಗೆ ನೀನು ಕೊಡಬೇಕು. ಪ್ರಭುವೇ, ನೀನು ದೀನರಲ್ಲಿ ದಯೆಯುಳ್ಳವನಾಗಿದ್ದೀಯೆ. ‘ಇಲ್ಲ’ ಎಂದು ನನಗೆ ಹೇಳಬೇಡ.”

೫೬–೫೭. ಬಳಿಕ ಭಗವಂತನು, “ದೇವಿ, ವರಾರೋಹೇ, ಕೊಡಬಾರದುದಾಗಿದ್ದರೂ, ನೀನು ಯಾವಯಾವುದನ್ನು ಬಯಸುತ್ತೀಯೋ ಅದೆಲ್ಲವನ್ನೂ

ಯದ್ದುರ್ಲಭಂ ಮನುಷ್ಯಾಣಾಂ ಶೀಘ್ರಂ ಯಾಚಯ ಮಾಂ ಪ್ರತಿ ।
ಮದ್ದರ್ಶನಮನುಪ್ರಾಪ್ಯ ಕೋ ವಾಽಪೂರ್ಣೋ ಮನೋರಥಃ ॥ ೫೭ ॥

ತತೋ ಹಿಮಾಂಶೋ ಸಾ ದೇವೀ ಗಂಡಕೀ ಲೋಕತಾರಿಣೀ ।
ಪ್ರಾಂಜಲಿಃ ಪ್ರಣತಾ ಭೂತ್ವಾ ಮಧುರಂ ವಾಕ್ಯಮಬ್ರವೀತ್ ॥ ೫೮ ॥

ಯದಿ ದೇವ ಪ್ರಸನ್ನೋಽಸಿ ದೇಯೋ ಮೇ ವಾಂಛಿತೋ ವರಃ ।
ಮಮ ಗರ್ಭಗತೋ ಭೂತ್ವಾ ವಿಷ್ಣೋ ಮತ್ಪುತ್ರತಾಂ ವ್ರಜ ॥ ೫೯ ॥

ತತಃ ಪ್ರಸನ್ನೋ ಭಗವಾನ್ ಚಿಂತಯಾಮಾಸ ಗೋಪತೇ ।
ಕಿಂ ಯಾಚಿತಂ ನಿಮ್ನಗಯಾ ನಿತ್ಯಂ ಮತ್ಸಂಗಲುಬ್ಧಯಾ ॥ ೬೦ ॥

ದಾಸ್ಯಾಮಿ ಯಾಚಿತಂ ಯೇನ ಲೋಕಾನಾಂ ಭವಮೋಕ್ಷಣಂ ।
ಇತ್ಯೇವಂ ಕೃಪಯಾ ದೇವೋ ನಿಶ್ಚಿತ್ಯ ಮನಸಾ ಸ್ವಯಂ ॥ ೬೧ ॥

ಬೇಡು. ಸರ್ವಥಾ ಮನುಷ್ಯರಿಗೆ ಯಾವುದು ದುರ್ಲಭವೋ ಅದನ್ನೂ ನನ್ನಲ್ಲಿ ಬೇಗನೆ ಯಾಚಿಸು. ನನ್ನ ದರ್ಶನವನ್ನು ಪಡೆದ ಬಳಿಕ ಪೂರ್ಣವಾಗದ ಮನೋರಥವಾವುದು! " ಎಂದು ಹೇಳಿದನು.

೫೮-೫೯. ಚಂದ್ರನೇ, ಬಳಿಕ ಲೋಕತಾರಿಣಿಯಾದ ಆ ಗಂಡಕೀ ದೇವಿಯು ಭಗವಂತನಿಗೆ ಪ್ರಣಾಮಮಾಡಿ, ಕೈಮುಗಿದುಕೊಂಡು, " ದೇವ, ನೀನು ಪ್ರಸನ್ನನಾಗಿರುವೆಯಾದರೆ ನನಗೆ ಇಷ್ಟವಾದ ವರವನ್ನು ಕೊಡಬೇಕು. ವಿಷ್ಣುವೇ, ನೀನು ನನ್ನ ಗರ್ಭದಲ್ಲಿರುವವನಾಗಿ ನನಗೆ ಪುತ್ರನಾಗು " ಎಂದು ಇಂಪಾದ ಮಾತನಾಡಿದಳು.

೬೦-೬೩. ಕಾಂತಿನಾಥನೇ(ಚಂದ್ರನೇ), ಬಳಿಕ ಪ್ರಸನ್ನನಾದ ಆ ಭಗವಂತನು ಯೋಚಿಸಿದನು—" ಯಾವಾಗಲೂ ನನ್ನ ಸಹವಾಸದಲ್ಲಿ ಆಸೆಯುಳ್ಳ ಈ ನದಿಯು ಏನನ್ನು ಬೇಡಿದಳಲ್ಲವೆ! ಲೋಕಗಳಿಗೆ(ಜನರಿಗೆ) ಸಂಸಾರಮೋಕ್ಷವಾಗುವುದರಿಂದ ಇವಳು ಯಾಚಿಸಿದುದನ್ನು ಕೊಡುತ್ತೇನೆ " ಎಂದು ದೇವನು

ಗಂಡಕೀಮುಪದತ್ಪ್ರೀತಃ ಶೃಣು ದೇವಿ ವಚೋ ಮಮ |
ಶಾಲಗ್ರಾಮಶಿಲಾರೂಪೀ ತವಗರ್ಭಗತಸ್ಸದಾ || ೬೨ ||

ಸ್ಥಾಸ್ಯಾಮಿ ತವ ಪುತ್ರತ್ವೇ ಭಕ್ತಾನುಗ್ರಹಕಾರಣಾತ್ |
ಮತ್ಸಾನ್ನಿಧ್ಯಾನ್ನದೀನಾಂ ತ್ವಮತಿಶ್ರೇಷ್ಠಾ ಭವಿಷ್ಯಸಿ || ೬೩ ||

ದರ್ಶನಾತ್ ಸ್ಪರ್ಶನಾತ್ ಸ್ನಾನಾತ್ಪಾನಾಚ್ಚೈವಾವಗಾಹನಾತ್ |
ಹರಿಷ್ಯಾಮಿ ಮಹಾಪಾಪಂ ವಾಙ್ಮನಃಕಾಯಸಂಭವಂ || ೬೪ ||

ಯಃ ಸ್ನಾಸ್ಯತಿ ವಿಧಾನೇನ ದೇವರ್ಷಿಪಿತೃತರ್ಪಕಃ ।
ತರ್ಪಯೇತ್ ಸ್ವಪಿತೄಂಶ್ಚಾಪಿ ತಾರಯಿತ್ವಾ ದಿವಂ ನಯೇತ್ |
ಸ್ವಯಂ ಮಮ ಪ್ರಿಯೋ ಭೂತ್ವಾ ಬ್ರಹ್ಮಲೋಕಂ ಗಮಿಷ್ಯತಿ || ೬೫ ||

ಮನದಲ್ಲಿ ತಾನೇ ನಿಶ್ಚಯಿಸಿ ಪ್ರೀತನಾಗಿ ಗಂಡಕಿಯನ್ನು ಕುರಿತು, "ದೇವಿ, ನನ್ನ ಮಾತನ್ನು ಕೇಳು. ಶಾಲಗ್ರಾಮಶಿಲೆಯ ರೂಪದಿಂದ ನಾನು ಯಾವಾಗಲೂ ನಿನ್ನ ಗರ್ಭದಲ್ಲಿದ್ದು ಭಕ್ತರಿಗೆ ಅನುಗ್ರಹಿಸಬೇಕೆಂಬುದರಿಂದ ನಿನಗೆ ಮಗನಾಗಿರುವೆನು. ನನ್ನ ಸಾನ್ನಿಧ್ಯದಿಂದ ನೀನು ನದಿಗಳಲ್ಲೆಲ್ಲಾ ಅತಿಶ್ರೇಷ್ಠಳಾಗುವೆ.

೬೪. ಜನರ ಮನೋವಾಕ್ಕಾಯಗಳಿಂದುಂಟಾದ ಪಾಪವನ್ನು ನಿನ ದರ್ಶನದಿಂದಲೂ, ಸ್ಪರ್ಶನದಿಂದಲೂ, ಜಲಪಾನದಿಂದಲೂ, ಸ್ನಾನದಿಂದಲೂ ಪರಿಹರಿಸುವೆನು.

೬೫. ನಿನ್ನಲ್ಲಿ ವಿಧಿಪೂರ್ವಕವಾಗಿ ಸ್ನಾನಮಾಡಿ, ಪಿತೃಗಳಿಗೆ ತರ್ಪಣವನ್ನು ಮಾಡುವವನು ತನ್ನ ಪಿತೃಗಳನ್ನು ತೃಪ್ತಿಪಡಿಸಿ, ಸಂಸಾರಸಾಗರದಿಂದ ದಾಟಿಸಿ ಸ್ವರ್ಗಕ್ಕೆ ಸೇರಿಸುವನು. ತಾನೂ ನನಗೆ ಪ್ರಿಯನಾಗಿ ಬ್ರಹ್ಮಲೋಕವನ್ನು ಸೇರುವನು.

ಯದಿ ತ್ವಯ್ಯುತ್ಸೃಜೇತ್ಪ್ರಾಣಾನ್ ಮಮ ಕರ್ಮಪರಾಯಣಃ ।
ಸೋಽಪಿ ಯಾತಿ ಮಮ ಸ್ಥಾನಂ ಯತ್ರ ಗತ್ವಾ ನ ಶೋಚತಿ ॥ ೬೬ ॥

ಏವಂ ದತ್ವಾ ವರಾನ್ದೇವ್ಯೈ ತತ್ರೈವಾಂತರಧೀಯತ ॥ ೬೭ ॥

ತತಃ ಪ್ರಭೃತಿ ತಿಷ್ಠಾಮಃ ಕ್ಷೇತ್ರೇಽಸ್ಮಿನ್ ಶಶಲಾಂಛನ ।
ಅಹಂ ಚ ಭಗವಾನ್ವಿಷ್ಣುಃ ಭಕ್ತೇಚ್ಛೋಪಾತ್ತವಿಗ್ರಹಃ ।
ಏವಮುಕ್ತ್ವಾ ದ್ವಿಜಪತಿಮನ್ವಗೃಹ್ಣಾದ್ಧರಃ ಪ್ರಭುಃ ॥ ೬೮ ॥

ಪ್ರಭಾಸಯನ್ನುಡುಪತೇರಂಗಾನಿ ಪ್ರಮಮಾರ್ಜ ಹ ।
ಶಂಕರೇಣ ಕರೇಣಾಪಿ ನೀರುಜಾನಿ ವಿಧಾಯ ಚ ॥ ೬೯ ॥

ಪಶ್ಯತಸ್ತಸ್ಯ ತು ವಿಧೋಸ್ತತ್ರೈವಾಂತರಧೀಯತ ॥ ೭೦ ॥

---

೬೬. ನನ್ನ ಕರ್ಮಗಳಲ್ಲಿ ನಿರತನಾದವನು ನಿನ್ನಲ್ಲಿ ಪ್ರಾಣಬಿಟ್ಟರೆ, ಎಲ್ಲಿಗೆ ಹೋಗಿ ದುಃಖಿಸದಿರುವನೋ ಆ ನನ್ನ ಸ್ಥಾನವನ್ನು ಸೇರುವನು" ಎಂದು ಹೇಳಿದನು.

೬೭. ಹಾಗೆ ಗಂಡಕೀದೇವಿಗೆ ವರವನ್ನು ಕೊಟ್ಟು, ವಿಷ್ಣುವು ಅಲ್ಲೇ ಕಣ್ಮರೆಯಾದನು.

೬೮. ಶಶಾಂಕ(ಚಂದ್ರ)ನೇ, ಅಂದಿನಿಂದ ಈ ಕ್ಷೇತ್ರದಲ್ಲಿ ನಾನೂ, ಭಕ್ತರ ಇಚ್ಛೆಯಂತೆ ರೂಪ(ದೇಹ)ವನ್ನು ಧರಿಸುವ ಭಗವಂತನಾದ ವಿಷ್ಣುವೂ ಇದ್ದೇವೆ. ಎಂದು ಹೇಳಿ, ಪ್ರಭುವಾದ ಹರನು ದ್ವಿಜರಾಜನಾದ ಚಂದ್ರನಿಗೆ ಅನುಗ್ರಹಿಸಿದನು.

೬೯–೭೦. ಅಲ್ಲದೆ ನಕ್ಷತ್ರರಾಜನಾದ ಆ ಚಂದ್ರನ ಅಂಗಗಳನ್ನು ಹೊಳೆಯಿಸುತ್ತ, ಸುಖಕರವಾದ ತನ್ನ ಕಯ್ಯಿಂದ ಸವರಿ, ರೋಗರಹಿತಗಳಾಗಿಯೂ ಮಾಡಿ, ಆ ಚಂದ್ರನು ನೋಡುತ್ತಿದ್ದಂತೆಯೇ ಅಲ್ಲೇ ಕಣ್ಮರೆಯಾದನು.

ಸೋಮೇಶಾದ್ದಕ್ಷಿಣೇ ಭಾಗೇ ಬಾಣೇನಾದ್ರಿಂ ಬಿಭಿದ್ಯ ವೈ ।
ರಾವಣೇನ ಪ್ರಕಟಿತಾ ಜಲಧಾರಾತಿಪುಣ್ಯದಾ ।
ಬಾಣಗಂಗೇತಿ ವಿಖ್ಯಾತಾ ಯಾ ಸ್ನಾತಾ ಚಾಘಹಾರಿಣೀ ॥ ೭೧ ॥

ಸೋಮೇಶಾತ್ಪೂರ್ವದಿಗ್ಭಾಗೇ ರಾವಣಸ್ಯ ತಪೋವನಂ ।
ಯತ್ರ ಸ್ಥಿತ್ವಾ ತ್ರಿರಾತ್ರೇಣ ತಪಸಃ ಫಲಮಶ್ನುತೇ ॥ ೭೨ ॥

ಯತ್ರ ನೃತ್ಯೇನ ದೇವೇಶಸ್ತುಷ್ಟಸ್ತಸ್ಮೈ ವರಂ ದದೌ ।
ತೇನ ರಾವಣನೃತ್ಯೇನ ಪ್ರಖ್ಯಾತೋ ನರ್ತನಾಚಲಃ ॥ ೭೩ ॥

ಸ್ನಾತ್ವಾ ತು ಬಾಣಗಂಗಾಯಾಂ ದೃಷ್ಟ್ವಾ ಬಾಣೇಶ್ವರಂ ಪ್ರಭುಂ ।
ಗಂಗಾಸ್ನಾನಫಲಂ ಪ್ರಾಪ್ಯ ಮೋದತೇ ದೇವವದ್ದಿವಿ ॥ ೭೪ ॥

ಸಾಲಂಕಾಯನಕೋಽಪ್ಯಾಶು ಕ್ಷೇತ್ರೇ ತಸ್ಮಿನ್ಪರೇ ಮಮ ।
ಶಾಲಗ್ರಾಮೇ ಮಹಾತೀವ್ರಮಾಸ್ಥಿತಃ ಪರಮಂ ತಪಃ ॥ ೭೫ ॥

---

೭೧. ಸೋಮೇಶಗಿರಿಯ ದಕ್ಷಿಣಭಾಗದಲ್ಲಿ ರಾವಣನು ಬಾಣದಿಂದ ಪರ್ವತವನ್ನು ಭೇದಿಸಿ, ಕಾಣಿಸುವಂತೆ ಮಾಡಿದ ಬಾಣಗಂಗೆಯೆಂದು ಪ್ರಸಿದ್ಧವೂ, ಸ್ನಾನಮಾಡಿದವರ ಪಾಪವನ್ನು ಪರಿಹರಿಸುವುದೂ, ಅತಿಪುಣ್ಯಪ್ರದವೂ ಆದ ಜಲಧಾರೆಯಿದೆ.

೭೨-೭೩. ಸೋಮೇಶಗಿರಿಯ ಪೂರ್ವದಿಕ್ಕಿನಲ್ಲಿ, ಮೂರುರಾತ್ರಿ ಇದ್ದು ತಪಸ್ಸಿನ ಫಲವನ್ನನುಭವಿಸಬಹುದಾದ ರಾವಣನ ತಪೋವನ. ಎಲ್ಲಿ ನರ್ತನಮಾಡಿದುದರಿಂದ ಸಂತುಷ್ಟನಾದ ದೇವೇಶನು ರಾವಣನಿಗೆ ವರವನ್ನು ಕೊಟ್ಟನೋ, ಆ ರಾವಣನರ್ತನದಿಂದ ಪ್ರಸಿದ್ಧವಾದ ನರ್ತನಾಚಲವೂ ಅಲ್ಲಿದೆ.

೭೪. ಬಾಣಗಂಗೆಯಲ್ಲಿ ಸ್ನಾನಮಾಡಿ, ಬಾಣೇಶ್ವರಪ್ರಭುವನ್ನು ಸಂದರ್ಶಿಸುವವರು ಗಂಗಾಸ್ನಾನ ಫಲವನ್ನು ಪಡೆದು, ಸ್ವರ್ಗದಲ್ಲಿ ದೇವತೆಗಳಂತೆ ಆನಂದಪಡುವರು.

೭೫. ಸಾಲಂಕಾಯನಮುನಿಯೂ ನನ್ನ ಉತ್ತಮವಾದ ಆ ಶಾಲಗ್ರಾಮ ಕ್ಷೇತ್ರದಲ್ಲಿ ಅತ್ಯುಗ್ರವೂ, ಶ್ರೇಷ್ಠವೂ ಆದ ತಪಸ್ಸನ್ನು ಮಾಡಿದನು.

ಅನ್ಯಚ್ಚ ತೇ ಪ್ರವಕ್ಷ್ಯಾಮಿ ಪರಂ ಗುಹ್ಯಂ ವಸುಂಧರೇ ॥ ೭೬ ॥

ತಪ್ಯತಸ್ತಸ್ಯ ತು ಮುನೇರೀಶ್ವರೇಣ ಸಮಂ ಸುತಂ ।
ಪ್ರಾಪ್ಸ್ಯಾಮೀತಿ ಪರಂ ಭಾವಂ ಜ್ಞಾತ್ವಾ ದೇವೋ ಮಹೇಶ್ವರಃ ।
ಸುಂದರಂ ತ್ವಪರಂ ರೂಪಂ ಧೃತ್ವಾ ದೃಷ್ಟಿಸುಖಾವಹಂ ॥ ೭೭ ॥

ಸಾಲಂಕಾಯನಪುತ್ರತ್ವಂ ಯೋಗಮಾಯಾಮುಪಾಶ್ರಿತಃ ।
ಪ್ರಾಪ್ತೋಽಪಿ ತಂ ನ ಜಾನಾತಿ ದಕ್ಷಿಣಂ ಪಾರ್ಶ್ವಮಾಸ್ಥಿತಃ ॥ ೭೮ ॥

ಮಾಯಾಯೋಗಬಲೋಪೇತಸ್ತ್ರ್ಯಕ್ಷೋ ವೈ ಶೂಲಪಾಣಿಧೃಕ್ ।
ರೂಪವಾನ್ಗುಣವಾಂಶ್ಚೈವ ವಪುಷಾದಿತ್ಯಸನ್ನಿಭಃ ॥ ೭೯ ॥

ಸ ತಂ ನ ಜ್ಞಾಯತೇ ಜಾತಂ ಮನ್ಯೈವಾರಾಧನೇ ಸ್ಥಿತಃ ।
ಅಥ ನಂದೀ ಪ್ರಹಸ್ಯಾಹ ಮಹಾದೇವಾಜ್ಞಯಾ ಮುನಿಂ ॥ ೮೦ ॥

೭೬–೭೮. ವಸುಂಧರೇ, ನಿನಗೆ ಬೇರೊಂದು ಉತ್ತಮರಹಸ್ಯವನ್ನು ಹೇಳುತ್ತೇನೆ. ಈಶ್ವರನಿಗೆ ಸಮನಾದ ಪುತ್ರನನ್ನು ಪಡೆಯುವನೆಂದು ತಪಸ್ಸನ್ನು ಮಾಡುತ್ತಿದ್ದ ಆ ಸಾಲಂಕಾಯನಮುನಿಯ ಉತ್ತಮಭಾವವನ್ನರಿತು, ದೇವನಾದ ಮಹೇಶ್ವರನು ಯೋಗಮಾಯೆಯನ್ನು ಅನುಸರಿಸಿ, ಕಣ್ಣುಗಳಿಗೆ ಆನಂದವನ್ನುಂಟುಮಾಡುವ, ಸುಂದರವಾದ ಬೇರೆಯ ರೂಪವನ್ನು ಧರಿಸಿ, ಸಾಲಂಕಾಯನನಿಗೆ ಮಗನಾಗಿ ಬಲಭಾಗದಲ್ಲಿ ಬಂದು ಇದ್ದರೂ ಆತನು ಅದನ್ನರಿಯಲಿಲ್ಲ.

೭೯. ತ್ರಿಣೇತ್ರನೂ, ಶೂಲಪಾಣಿಯೂ ಆದ ಈಶ್ವರನು ಮಾಯಾಯೋಗ ಬಲದಿಂದ ರೂಪವಂತನೂ, ಗುಣವಂತನೂ, ಸೂರ್ಯನಂತೆ ದೇಹಕಾಂತಿಯುಳ್ಳವನೂ ಆಗಿ ಸಾಲಂಕಾಯನನ ಮಗನಾಗಿ ನಿಂತಿದ್ದನು.

೮೦. ನನ್ನ ಧ್ಯಾನದಲ್ಲೇ ಇದ್ದ ಆ ಸಾಲಂಕಾಯನನು ಮಗನಾದ ಆವನನ್ನು ತಿಳಿಯಲೇ ಇಲ್ಲ. ಬಳಿಕ ಈಶ್ವರನ ಅಪ್ಪಣೆಯಂತೆ ನಂದೀಶ್ವರನು ಆ ಮುನಿಗೆ ನಕ್ಕು, ಹೀಗೆ ಹೇಳಿದನು.

ಉತ್ತಿಷ್ಠ ಮುನಿಶಾರ್ದೂಲ ಸಫಲಸ್ತೇ ಮನೋರಥಃ ।
ತ್ವದ್ದಕ್ಷಿಣಾಂಗಾಜ್ಜಾತೋಽಸ್ಮಿ ಪುತ್ರಸ್ತೇ ಶಾಧಿಮಾಂ ಪ್ರಭೋ ॥ ೪೧ ॥

ತ್ವಯಾ ತಪಸ್ಸಮಾರಬ್ಧಮೀಶ್ವರೇಣ ಸಮಂ ಸುತಂ ।
ಪ್ರಾಪ್ಸ್ಯಾಮೀತಿ ತತೋ ಮಹ್ಯಂ ಸದೃಶೋಽನ್ಯೋ ನ ಕಶ್ಚನ ।
ವಿಚಾರ್ಯೇತಿ ತವಾಹಂ ವೈ ಜಾತೋಽಸ್ಮಿ ಸ್ವಯಮೇವ ಚ ॥ ೪೨ ॥

ತಪಸಾರಾಧಯನ್ದೇವಂ ಶಂಖಚಕ್ರಗದಾಧರಂ ।
ಪ್ರಾಪ್ತೋಽಸಿ ಪರಮಾಂ ಸಿದ್ಧಿಂ ತ್ವತ್ಪುತ್ರೋಽಹಂ ಯತಃ ಸ್ಥಿತಃ ॥ ೪೩ ॥

ಶ್ರುತ್ವಾ ತನ್ನಂದಿನೋ ವಾಕ್ಯಂ ಪ್ರಹೃಷ್ಟವದನೋ ಮುನಿಃ ॥ ೪೪ ॥

ವಿಸ್ಮಿತಸ್ತು ತದೋವಾಚ ಕಥಂ ನಾದ್ಯಾಪಿ ಮೇ ಹರಿಃ ।
ದೃಗ್ಗೋಚರತ್ವಮಾಯಾತಿ ಜಾತಂ ಚೇತ್ತಪಸಃ ಫಲಂ ॥ ೪೫ ॥

---

೪೧. ಏಳು. ಮುನಿವರ್ಯನೇ, ನಿನ್ನ ಮನೋರಥವು ಸಫಲವಾಗಿದೆ. ನಿನ್ನ ಬಲಭಾಗದ ಅಂಗದಿಂದ ನಿನಗೆ ಪುತ್ರನಾಗಿ ಜನಿಸಿದ್ದೇನೆ. ಪ್ರಭುವೇ, ನನಗೆ ಅಪ್ಪಣೆಯನ್ನು ಮಾಡು.

೪೨. ಈಶ್ವರನಿಗೆ ಸಮನಾದ ಮಗನನ್ನು ಪಡೆಯಬೇಕೆಂದು ನೀನು ತಪಸ್ಸನ್ನು ಆರಂಭಿಸಿದೆ. ಆದುದರಿಂದ ನನಗೆ ಸಮಾನನಾದವನು ಬೇರಾವನೂ ಇಲ್ಲವೆಂದು ನಿರ್ಣಯಿಸಿ, ನಾನೇ ನಿನ್ನ ಮಗನಾಗಿ ಉದಿಸಿದ್ದೇನೆ.

೪೩. ನಾನು ನಿನಗೆ ಮಗನಾಗಿರುವುದರಿಂದ, ನೀನು ಶಂಖಚಕ್ರಗದಾಧರನಾದ ದೇವನನ್ನು ತಪಸ್ಸಿನಿಂದ ತೃಪ್ತಿಗೊಳಿಸಿ, ಪರಮಸಿದ್ಧಿಯನ್ನು ಪಡೆದಿದ್ದೀಯೆ.

೪೪–೪೫. ನಂದಿಯ ಆ ಮಾತನ್ನು ಕೇಳಿ ಬಹು ಸಂತೋಷಗೊಂಡ ಮುಖವುಳ್ಳ ಆ ಮುನಿಯು ಆಶ್ಚರ್ಯಪಟ್ಟು ಹೀಗೆ ಹೇಳಿದನು. “ತಪಸ್ಸಿಗೆ ಫಲವುಂಟಾಗಿದ್ದರೆ ಹೇಗೆ ಈಗಲೂ ಆ ಹರಿಯು ನನ್ನ ಕಣ್ಣಿಗೆ ಕಾಣಿಸದಿರುವನು?

ಯಾವತ್ತಂ ನ ಸಮೀಕ್ಷಿಷ್ಯೇ ತಾವನ್ನ ವಿರತಂ ತಪಃ ।
ಅಹಮತ್ರೈವ ವತ್ಸ್ಯಾಮಿ ಯಾವದಚ್ಯುತದರ್ಶನಂ ॥ ೮೬ ॥

ಪುತ್ರ ತ್ವಮಪಿ ಯೋಗೇನ ಮಥುರಾಂ ವ್ರಜ ಸತ್ವರಂ ॥ ೮೭ ॥

ಮದಾಶ್ರಮೇ ತತ್ರ ಪುಣ್ಯೇ ಧನಂ ಗೋವ್ರಜಸಂಕುಲಂ ।
ಆಮುಷ್ಯಾಯಣಮಾದಾಯ ಶೀಘ್ರಮತ್ರ ಸಮಾನಯ ॥ ೮೮ ॥

ತತಸ್ತ್ವಾಜ್ಞಾಂ ಸಮಾದಾಯ ನಂದೀ ಸತ್ವರಮಾವ್ರಜತ್ ।
ಗತ್ವಾ ಚ ಮಥುರಾಂ ತಸ್ಯ ಋಷೇರಾಶ್ರಮಮೀಕ್ಷ್ಯ ಚ ॥ ೮೯ ॥

ದೃಷ್ಟ್ವಾಮುಷ್ಯಾಯಣಂ ತತ್ರ ಪೃಷ್ಟ್ವಾ ನಾಮ ತಮುಪ್ಯತ ।
ಗೃಹೇ ವಿತ್ತೇ ಚ ಕುಶಲಮಪೃಚ್ಛದ್ಗೋಧನೇಷು ಚ ॥ ೯೦ ॥

---

೮೬. ಆತನನ್ನು ಸಂದರ್ಶಿಸುವವರೆಗೂ ತಪಸ್ಸು ನಿಲ್ಲುವುದಿಲ್ಲ. ಅಚ್ಯುತನ ದರ್ಶನವಾಗುವವರೆಗೂ ನಾನು ಇಲ್ಲೇ ಇರುವೆನು.

೮೭. ಮಗುವೇ, (ನಂದಿ,) ನೀನೂ ಯೋಗಶಕ್ತಿಯಿಂದ ಬೇಗನೆ ಮಥುರೆಗೆ ಹೋಗು.

೮೮. ಅಲ್ಲಿ ನನ್ನ ಪವಿತ್ರವಾದ ಆಶ್ರಮದಲ್ಲಿರುವ ಧನವನ್ನೂ, ಗೋವುಗಳ ಗುಂಪನ್ನೂ, ಆಮುಷ್ಯಾಯಣನೊಡನೆ ಬೇಗನೆ ಬರಮಾಡು.

೮೯–೯೦. ನಂದಿಯು ಅವನ ಅಪ್ಪಣೆಯನ್ನು ಪಡೆದು, ಬಳಿಕ ತ್ವರೆಯಿಂದ ಹೊರಟು ಮಥುರೆಗೆ ಹೋಗಿ, ಆ ಸಾಲಂಕಾಯನಮುನಿಯ ಆಶ್ರಮವನ್ನು ನೋಡಿ, ಅಲ್ಲಿ ಆಮುಷ್ಯಾಯಣನನ್ನು ಕಂಡು, ಅವನ ಹೆಸರನ್ನು ಕೇಳಿ, ಅವನನ್ನು ಮನೆಯಲ್ಲೂ, ಧನದಲ್ಲೂ, ಗೋಸಮೂಹದಲ್ಲೂ ಕುಶಲವನ್ನು ಕೇಳಿದನು.

ಸಾಲಂಕಾಯನಶಿಷ್ಯೋಽಪಿ ಆಮುಷ್ಯಾಯಣಸಂಜ್ಞಿತಃ ।
ಸರ್ವತ್ರ ಕುಶಲಂ ಸಾಧೋ ಪ್ರಭಾವಾತ್ತು ಗುರೋರ್ಮಮ ॥ ೯೧ ॥

ಗುರೋಶ್ಚ ಕುಶಲಂ ಬ್ರೂಹಿ ಕುತ್ರಾಸ್ತೇ ಸ ತಪೋಧನಃ ।
ಭವಾನ್ಕುತಸ್ಸಮಾಯಾತಃ ಕಿಮತ್ರಾಗಮಕಾರಣಂ ।
ತನ್ಮೇ ವಿಸ್ತರತೋ ಬ್ರೂಹಿ ಅರ್ಘ್ಯಶ್ಚೈವೋಪಗೃಹ್ಯತಾಂ ॥ ೯೨ ॥

ಇತ್ಯುಕ್ತಸ್ತೋಽರ್ಘ್ಯಮಾದಾಯ ವಿಶ್ರಮ್ಯ ಚ ತತೋ ಗುರೋಃ ।
ವೃತ್ತಾಂತಂ ಕಥಯಾಮಾಸ ಸ್ವಾಗಮಸ್ಯ ಚ ಕಾರಣಂ ॥ ೯೩ ॥

ತತಸ್ತೇನೈವ ಸಹಿತೋ ಗೋಧನಂ ತತ್ರ್ಪಗೃಹ್ಯ ಚ ।
ದಿನೈಃ ಕತಿಪಯೈಶ್ಚೈವ ಗಂಡಕೀತೀರಮಾಶ್ರಿತಃ ॥ ೯೪ ॥

ಶನೈರುತ್ತೀರ್ಯ ಚ ತತಸ್ತ್ರಿವೇಣೀಂ ಪ್ರಾಪ್ಯ ಹರ್ಷಿತಃ ॥ ೯೫ ॥

೯೧-೯೨. ಆಮುಷ್ಯಾಯಣನೆಂಬ ಹೆಸರುಳ್ಳ, ಸಾಲಂಕಾಯನ ಮುನಿಶಿಷ್ಯನೂ, "ಸಾಧುವೇ, ನನ್ನ ಗುರುವಿನ ಮಹಿಮೆಯಿಂದ ಇಲ್ಲಿ ಎಲ್ಲರಿಗೂ ಕುಶಲವೇ ಆಗಿದೆ. ನನ್ನ ಗುರುವಿನ ಕ್ಷೇಮವನ್ನು ಹೇಳು. ಆ ತಪೋಧನನು ಎಲ್ಲಿರುವನು ? ನೀನು ಎಲ್ಲಿಂದ ಬಂದೆ ? ಇಲ್ಲಿ ಬಂದುದೇತಕ್ಕೆ ? ಇದೆಲ್ಲವನ್ನೂ ನನಗೆ ವಿವರವಾಗಿ ಹೇಳು. ಅರ್ಘ್ಯವನ್ನು ಸ್ವೀಕರಿಸು" ಎಂದನು.

೯೩. ಹಾಗೆ ಹೇಳಿಸಿಕೊಂಡ ಆ ನಂದಿಯು ಅರ್ಘ್ಯವನ್ನು ಸ್ವೀಕರಿಸಿ, ವಿಶ್ರಮಿಸಿಕೊಂಡು, ಬಳಿಕ ಗುರುವಿನ ವೃತ್ತಾಂತವನ್ನೂ, ತಾನು ಮಧುರೆಗೆ ಬಂದುದಕ್ಕೆ ಕಾರಣವನ್ನೂ ಹೇಳಿದನು.

೯೪-೯೫. ಬಳಿಕ ಆಮುಷ್ಯಾಯಣನೊಡನೆ ಆ ಗೋವುಗಳನ್ನೂ, ಧನವನ್ನೂ ತೆಗೆದುಕೊಂಡು ಹೊರಟು, ಕೆಲವು ದಿನಗಳಲ್ಲೇ ಗಂಡಕೀನದಿಯ ತೀರಕ್ಕೆ ಬಂದನು. ಮೆಲ್ಲಗೆ ಗಂಡಕಿಯನ್ನು ದಾಟಿ, ಬಳಿಕ ತ್ರಿವೇಣಿಯನ್ನು ಸೇರಿ, ಸಂತೋಷಗೊಂಡನು.

ದೇವಿಕಾ ನಾಮ ದೇವಾನಾಂ ಪ್ರಭಾವಾಚ್ಚ ತಪಸ್ವಿನಾಂ ।
ನಿಯಮಾರ್ಥಂ ಸಮುದ್ಭೂತಾ ಗಂಡಕ್ಯಾ ಮಿಲಿತಾ ಶುಭಾ ॥ ೯೬ ॥

ಆಶ್ರಮಾದಪರಾ ಚಾಸೀತ್ಪುಲಸ್ತ್ಯಪುಲಹಾಶ್ರಮಾತ್ ।
ಗಂಡಕ್ಯಾ ಮಿಲಿತಾ ಸಾಪಿ ತ್ರಿವೇಣೀ ಗಂಡಕೀತ್ಯಭೂತ್ ॥ ೯೭ ॥

ಕಾಮಿಕಂ ತನ್ಮಹಾತೀರ್ಥಂ ಪಿತೄಣಾಮತಿವಲ್ಲಭಂ ॥ ೯೮ ॥

ತತ್ರ ಸ್ಥಿತಂ ಮಹಾಲಿಂಗಂ ತ್ರಿಜಲೇಶ್ವರಸಂಜ್ಞಿತಂ ।
ಭುಕ್ತಿಮುಕ್ತಿಪ್ರದಂ ದೇವಿ ದರ್ಶನಾದಘನಾಶನಂ ॥ ೯೯ ॥

॥ ಧರಣ್ಯುವಾಚ ॥

ಪ್ರಯಾಗೇ ಯಾತ್ರಿವೇಣೀತಿ ಯತ್ರದೇವೋ ಮಹೇಶ್ವರಃ ।
ಶೂಲಟಂಕ ಇತಿ ಖ್ಯಾತಃ ಸೋಮೇಶ ಇತಿ ಚಾಪರಃ ॥ ೧೦೦ ॥

೯೬–೯೭. ತಪಸ್ವಿಗಳ ನಿಯಮಾರ್ಥವಾಗಿ ದೇವತೆಗಳ ಪ್ರಭಾವದಿಂದ ಉದಿಸಿದ ದೇವಿಕೆಯೆಂಬ ಶುಭನದಿಯು ಗಂಡಕಿಯೊಡನೆ ಸೇರುತ್ತದೆ. ಪುಲಸ್ತ್ಯಪುಲಹರ ಆಶ್ರಮಕ್ಕಿಂತ ಪಶ್ಚಿಮದಲ್ಲಿ ಪ್ರವಹಿಸುವ ಆ ದೇವಿಕೆಯೂ ಗಂಡಕಿಯೊಡನೆ ಸೇರಿದುದರಿಂದಲೇ ಗಂಡಕೀತ್ರಿವೇಣಿಯೆಂಬುದಾಯಿತು.

೯೮–೯೯. ಬಯಸತಕ್ಕುದಾದ ಆ ಮಹಾತೀರ್ಥವು ಪಿತೃದೇವತೆಗಳಿಗೆ ಅತಿಪ್ರಿಯವಾದುದು. ದೇವಿ, ಅಲ್ಲಿರುವ ತ್ರಿಜಲೇಶ್ವರನೆಂಬ ಹೆಸರಿನ ಮಹಾಲಿಂಗವು ದರ್ಶನದಿಂದಲೇ ಪಾಪನಾಶಕವೂ, ಭುಕ್ತಿಮುಕ್ತಿಪ್ರದವೂ ಆಗಿದೆ.

೧೦೦–೧೦೨. ಭೂದೇವಿ—ಪ್ರಯಾಗಕ್ಷೇತ್ರದಲ್ಲಿ ಯಾವುದು ತ್ರಿವೇಣಿಯೆಂದು ಪ್ರಸಿದ್ಧವೋ, ಎಲ್ಲಿರುವ ಮಹೇಶ್ವರನು ಶೂಲಟಂಕನೆಂದು ಸೋಮೇಶ್ವರನೆಂದೂ ಪ್ರಸಿದ್ಧನೋ, ಎಲ್ಲಿ ವೇಣೀಮಾಧವನೆಂಬ ಹೆಸರಿನಿಂದ

ವೇಣೀಮಾಧವನಾಮ್ನಾಪಿ ಯತ್ರವಿಷ್ಣುಸ್ಸ್ವಯಂ ಸ್ಥಿತಃ ।
ಗಂಗಾ ಚ ಯಮುನಾ ಚೈವ ಸರಸ್ವತ್ಯಪರಾ ನದೀ ॥ ೧೦೧ ॥

ಸರ್ವೇಷಾಂ ಚೈವ ದೇವಾನಾಂ ಋಷೀಣಾಂ ಸರಸಾಮಪಿ ।
ಸರ್ವೇಷಾಂ ಚೈವ ತೀರ್ಥಾನಾಂ ಸಮಾಜಸ್ತತ್ರ ಮೇ ಶ್ರುತಃ ॥ ೧೦೨ ॥

ಯತ್ರಾಪ್ಲುತಾ ದಿವಂ ಯಾಂತಿ ಮೃತಾ ಮುಕ್ತಿಂ ಪ್ರಯಾಂತಿ ಚ ।
ತೀರ್ಥರಾಜ ಇತಿ ಖ್ಯಾತಂ ತತ್ತೀರ್ಥಂ ಕೇಶವಪ್ರಿಯಂ ॥ ೧೦೩ ॥

ಸೈವ ತ್ರಿವೇಣೀ ವಿಖ್ಯಾತಾ ಕಿಮಪೂರ್ವಾಂ ಪ್ರಶಂಸಸಿ ।
ಏತದ್ಗುಹ್ಯತಮಂ ಪ್ರೋಕ್ತಂ ತ್ವಯಾ ವಿಷ್ಣೋ ನ ಸಂಶಯಃ ॥ ೧೦೪ ॥

ತತ್ಕಥ್ಯತಾಂ ಮಹಾಭಾಗ ಲೋಕಾನಾಂ ಹಿತಕಾಮ್ಯಯಾ ।
ಮಯ್ಯನುಕ್ರೋಶಬುದ್ಧ್ಯಾ ಚ ಕೃಪಾಂ ಕುರು ದಯಾನಿಧೇ ॥ ೧೦೫ ॥

ವಿಷ್ಣುವು ತಾನು ನೆಲಸಿರುವನೋ, ಗಂಗೆಯೂ ಯಮುನೆಯೂ ಸರಸ್ವತಿಯೆಂಬ ಬೇರೊಂದು ನದಿಯೂ ಎಲ್ಲಿ ಸೇರುವುವೋ, ಅಲ್ಲಿ ಸರ್ವದೇವತೆಗಳ ಋಷಿಗಳ, ಸರೋವರಗಳ, ಮತ್ತು ಇತರ ಎಲ್ಲಾ ತೀರ್ಥಗಳ ಸಂಗಮವೆಂದು ನಾನು ಕೇಳಿರುವೆನು.

೧೦೩-೧೦೪. ಅಲ್ಲಿ ಸ್ನಾನಮಾಡುವವರು ಸ್ವರ್ಗವನ್ನು ಸೇರುವರು. ಮೃತರಾದವರು ಮುಕ್ತಿಯನ್ನು ಪಡೆಯುವರು, ಕೇಶವಪ್ರಿಯವಾದ ಆ ತೀರ್ಥವು ತೀರ್ಥರಾಜನೆಂದು ಪ್ರಸಿದ್ಧವಾಗಿದೆ. ಅದೇ ತ್ರಿವೇಣಿಯೆಂದೂ ಪ್ರಖ್ಯಾತವಾಗಿದೆ ಗಂಡಕಿಯಲ್ಲಿ ತ್ರಿವೇಣಿಯೆಂದು ಇದೇನು ಅಪೂರ್ವವಾದುದನ್ನು ನೀನು ಹೇಳುತ್ತೀಯೆ ! ವಿಷ್ಣುವೇ, ನೀನು ಅತಿರಹಸ್ಯವಾದ ಇದನ್ನು ಹೇಳಿದ್ದೀಯೆ. ಸಂದೇಹವಿಲ್ಲ.

೧೦೫. ಪೂಜ್ಯನೇ, ದಯಾನಿಧೀ, ಲೋಕಹಿತೇಚ್ಛೆಯಿಂದಲೂ, ನನ್ನಲ್ಲಿ ದಯೆಯ ಬುದ್ಧಿಯಿಂದಲೂ ಗಂಡಕಿಯು ಹೇಗೆ ತ್ರಿವೇಣಿಯೆಂಬುದನ್ನು ವಿವರವಾಗಿ ಹೇಳು. ಕೃಪೆಮಾಡು.

॥ ಶ್ರೀ ವರಾಹ ಉವಾಚ ॥

ಶೃಣುಷ್ವ ದೇವಿ ಭದ್ರಂ ತೇ ಯದ್ಗುಹ್ಯಂ ಪರಿಪೃಚ್ಛಸಿ ।
ಅತ್ರ ತೇ ಕೀರ್ತಯಿಷ್ಯಾಮಿ ಸೇತಿಹಾಸಾಂ ಕಥಾಂ ಶುಭಾಂ ॥ ೧೦೬ ॥

ಪುರಾ ವಿಷ್ಣುಸ್ತಪಸ್ತೇಪೇ ಲೋಕಾನಾಂ ಹಿತಕಾಮ್ಯಯಾ ।
ಹಿಮಾಲಯೇ ಗಿರೌ ರಮ್ಯೇ ದೇವತಾಗಣಸೇವಿತೇ ॥ ೧೦೭ ॥

ತತೋ ಬಹುತಿಥೇ ಕಾಲೇ ಯಾತೇ ಸತಿ ತಪಸ್ಯತಃ ।
ತಸ್ಯೋಷ್ಮಣಾ ಸಮುದ್ಭೂತಃ ಸ್ವೇದಪೂರಸ್ತು ಗಂಡಯೋಃ ॥ ೧೦೮ ॥
ತೇನ ಜಾತಾಧುನೀ ದಿವ್ಯಾ ಲೋಕಾನಾಮಘಹಾರಿಣೀ ॥ ೧೦೯ ॥

ತೀವ್ರಂ ತೇಜಃ ಪ್ರಾದುರಾಸೀದ್ಯೇನ ಲೋಕಾಶ್ಚರಾಚರಾಃ ।
ಮಹರ್ಲೋಕಾದಯಸ್ಸರ್ವೇ ವಿಸ್ಮಿತಾಸ್ಸರ್ವತೋ ದಿಶಂ ।
ತಸ್ಯ ಪ್ರಭಾವಮಿಚ್ಛಂತೋ ಜ್ಞಾತುಂ ನೇಶುಃ ಕಥಂಚನ ॥ ೧೧೦ ॥

---

೧೦೬. ಶ್ರೀವರಾಹ—ದೇವಿ, ನಿನಗೆ ಮಂಗಳವಾಗಲಿ. ನೀನು ತಿಳಿಯಲಿಚ್ಛಿಸುವ ಈ ರಹಸ್ಯವನ್ನು ಕೇಳು. ಈ ವಿಚಾರದಲ್ಲಿ ಹಿಂದೆನಡೆದ ಶುಭವಾದ ಕಥೆಯನ್ನು ನಿನಗೆ ಹೇಳುತ್ತೇನೆ.

೧೦೭. ಪೂರ್ವದಲ್ಲಿ ವಿಷ್ಣುವು ಲೋಕಗಳ ಹಿತಕ್ಕಾಗಿ ದೇವತೆಗಳ ಗುಂಪಿನಿಂದ ಸೇವಿತವಾಗಿ, ರಮ್ಯವಾಗಿರುವ ಹಿಮಾಲಯಗಿರಿಯಲ್ಲಿ ತಪಸ್ಸನ್ನು ಮಾಡುತ್ತಿದ್ದನು.

೧೦೮–೧೦೯. ಬಹುಕಾಲವು ಕಳೆಯಲಾಗಿ, ತಪಸ್ಸನ್ನು ಮಾಡುತ್ತಿದ್ದ ಆ ವಿಷ್ಣುವಿನ ಕೆನ್ನೆಗಳಲ್ಲಿ ತಪೋಜ್ವಾಲೆಯಿಂದ ಬೆವರುನೀರಿನ ಪ್ರವಾಹ ವುಂಟಾಯಿತು. ಅದರಿಂದ ಲೋಕಗಳ ಪಾಪವನ್ನು ಪರಿಹರಿಸುವ ಗಂಡಕಿಯೆಂಬ ದಿವ್ಯನದಿಯುದಿಸಿತು.

೧೧೦. ಅಲ್ಲದೆ ವಿಷ್ಣುವಿನಿಂದ ತೀವ್ರವಾದ ತೇಜಸ್ಸುಂಟಾಯಿತು. ಅದರಿಂದ ಲೋಕಗಳೂ, ಚರಾಚರಗಳೂ, ಮಹರ್ಲೋಕಾದಿಗಳೂ, ಆಶ್ಚರ್ಯ ಗೊಂಡು, ಅದರ ಪ್ರಭಾವವನ್ನು ತಿಳಿಯಲು ಬಯಸಿ, ಎಲ್ಲಾ ಕಡೆಗಳಲ್ಲೂ ಅಲೆದೂ, ಹೇಗೂ ತಿಳಿಯಲಾರದೆ ಹೋದರು.

ದೇವಾಸ್ಸರ್ವೇ ತತೋ ಜಗ್ಮುರ್ಬ್ರಹ್ಮಾಣಂ ಪ್ರತಿ ಕೌತುಕಾಃ ।
ಪಪ್ರಚ್ಛುಃ ಪ್ರಭವಂ ತಸ್ಯ ಪ್ರಣಮ್ಯ ಚ ಪುನಃ ಪುನಃ ॥ ೧೧೧ ॥

ಬ್ರಹ್ಮಾಪಿ ಹಿ ನ ಜಾನಾತಿ ಮೋಹಿತಸ್ತಸ್ಯ ಮಾಯಯಾ ।
ತತೋ ದೇವೈಃ ಸಮಂ ಬ್ರಹ್ಮಾ ಶಂಕರಂ ಪ್ರತ್ಯುಪಸ್ಥಿತಃ ॥ ೧೧೨ ॥

ತಂ ದೃಷ್ಟ್ವಾ ಸಹಸಾ ದೇವೈಃ ಸಮೇತಂ ಪ್ರತ್ಯುಪಸ್ಥಿತಂ ।
ಪಪ್ರಚ್ಛ ತಂ ಮಹಾದೇವಸ್ತದಾಗಮನಕಾರಣಂ ॥ ೧೧೩ ॥

ಬ್ರಹ್ಮಾ ತಂ ಚ ಮಹಾದೇವಂ ಪಪ್ರಚ್ಛ ಪ್ರಣತಃ ಸ್ಥಿತಃ ।
ಅತ್ಯದ್ಭುತಂ ಮಹತ್ತೇಜಶ್ಚಾದ್ಭುತಂ ಕಿಂ ಮಹೇಶ್ವರ ॥ ೧೧೪ ॥

ಯೇನ ಪ್ರತ್ಯಾಹತಾ ಹ್ಯಾಸೌ ಜಗದ್ವ್ಯತಿಕರಾವಹಾ ।
ಕಿಂ ನು ಸ್ಯಾತ್ಕಥಮೇತತ್ಸ್ಯಾತ್ ಕಶ್ಚಾಸ್ಯ ಪ್ರಭವೋ ವಿಭೋ ॥ ೧೧೫ ॥

---

೧೧೧. ಬಳಿಕ, ದೇವತೆಗಳೆಲ್ಲರೂ ಕುತೂಹಲವುಳ್ಳವರಾಗಿ ಬ್ರಹ್ಮನ ಹತ್ತಿರ ಹೋಗಿ, ಅವನಿಗೆ ಮತ್ತೆ ಮತ್ತೆ ವಂದಿಸಿ, ಆ ತೇಜಸ್ಸಿಗೆ ಕಾರಣವನ್ನು ಕೇಳಿದರು.

೧೧೨. ವಿಷ್ಣುಮಾಯೆಯಿಂದ ಮೋಹಿತನಾದ ಬ್ರಹ್ಮನೂ ಕಾರಣವನ್ನು ತಿಳಿಯಲಾರದೆ ಇದ್ದನು, ಬಳಿಕ ಬ್ರಹ್ಮನು ದೇವತೆಗಳೊಡನೆ ಈಶ್ವರನ ಸಮೀಪದಲ್ಲಿ ಹೋದನು.

೧೧೩. ದೇವತೆಗಳೊಡನೆ ತನ್ನ ಹತ್ತಿರಕ್ಕೆ ಬಂದ ಬ್ರಹ್ಮನನ್ನು ನೋಡಿ, ಆ ಮಹಾದೇವನು, ಅವನು (ಬ್ರಹ್ಮನು) ಬಂದುದಕ್ಕೆ ಕಾರಣವನ್ನು ಕೇಳಿದನು.

೧೧೪–೧೧೫. ಬ್ರಹ್ಮನು. ಆತನಿಗೆ ವಂದಿಸಿ ನಿಂತು ' ಮಹೇಶ್ವರನೇ, ಈ ಮಹಾತೇಜಸ್ಸು ಅತ್ಯದ್ಭುತವಾಗಿದೆ. ಈ ಆಶ್ಚರ್ಯವೇನು ? ಇದರಿಂದ ಲೋಕವೆಲ್ಲಾ ವ್ಯಾಪ್ತವಾಗಿದೆ. ಇದೇನು ? ಇದು ಹೇಗಾಗಿದೆ ? ' ವಿಭುವೇ ಇದಕ್ಕೆ ಕಾರಣನಾರು ? ' ಎಂದು ಕೇಳಿದನು.

ಶಿವಃ ಕ್ಷಣಂ ತತೋ ಧ್ಯಾತ್ವಾ ಬ್ರಹ್ಮಾದ್ಯಾನ್ಪ್ರತ್ಯುವಾಚ ಹ ।
ಮಹಸೋಽಸ್ಯ ಸಮುತ್ಪತ್ತಿಂ ಮಹತೋ ದರ್ಶಯಾಮಿ ವಃ ॥ ೧೧೬ ॥

ಜಗಾಮ ದೇವಸಹಿತಃ ಸೋಮಃ ಸಹಗಣಃ ಪ್ರಭುಃ ।
ಯತ್ರಾಸ್ತೇ ಭಗವಾನ್ವಿಷ್ಣುರ್ಮಹತಾ ತಪಸಾನ್ವಿತಃ ॥ ೧೧೭ ॥

ಉವಾಚ ಪರಮಪ್ರೀತಸ್ತದಾ ಶಂಭುಃ ಸ್ಮಯನ್ನಿವ ॥ ೧೧೮ ॥

ತಪಸ್ಯಸಿ ಕಿಮಿಚ್ಛಂಸ್ತ್ವಂ ಕರ್ತಾ ಚ ಜಗತಾಂ ಪ್ರಭುಃ ।
ಸರ್ವಾಧಾರೋಽಖಿಲಾಧ್ಯಕ್ಷಃ ತತ್ಕಿಂ ಯತ್ತವ ದುರ್ಲಭಂ ॥ ೧೧೯ ॥

ಏವಮುಕ್ತಃ ಪ್ರತ್ಯುವಾಚ ಪ್ರಣಮ್ಯ ಜಗತಾಂ ಪ್ರಭುಃ ।
ಅಹಂ ಲೋಕಹಿತಾರ್ಥಾಯ ತಪಸ್ತಪ್ಯಂ ಸಮುದ್ಯತಃ ॥ ೧೨೦ ॥

---

೧೧೬. ಶಿವನು ಕ್ಷಣಕಾಲ ಆಲೋಚಿಸಿ, ಬಳಿಕ ಬ್ರಹ್ಮಾದಿಗಳನ್ನು ಕುರಿತು, "ಈ ಮಹಾತೇಜಸ್ಸಿನ ಉತ್ಪತ್ತಿಯನ್ನು ನಿಮಗೆ ತೋರಿಸುತ್ತೇನೆ" ಎಂದು ಉತ್ತರವನ್ನು ಹೇಳಿದನು.

೧೧೭. ಬಳಿಕ ಪ್ರಭುವಾದ ಈಶ್ವರನು ಗಣಗಳೊಡಗೂಡಿ, ದೇವತೆಗಳನ್ನೂ ಕರೆದುಕೊಂಡು, ಮಹಾತಪಸ್ಸಿನಿಂದ ಕೂಡಿದ ಭಗವಂತನಾದ ವಿಷ್ಣುವಿದ್ದೆಡೆಗೆ ಹೋದನು.

೧೧೮-೧೧೯. ಅಲ್ಲಿ ಪರಮಪ್ರೀತನಾದ ಶಂಭುವು ನಗುತ್ತ ಮಾತನಾಡಿದನು. "ಜಗತ್ತುಗಳಿಗೆ ಪ್ರಭುವೂ, ಕರ್ತೃವೂ, ಸರ್ವಾಧಾರನೂ, ಸಕಲಾಧ್ಯಕ್ಷನೂ ಆದ ನೀನು ಏನನ್ನು ಬಯಸಿ ತಪಸ್ಸನ್ನು ಮಾಡುತ್ತೀಯೆ ? ನಿನಗೆ ದುರ್ಲಭವಾದುದಾವುದು ?" ಎಂದನು.

೧೨೦-೧೨೧. ಹಾಗೆ ಹೇಳಿಸಿಕೊಂಡ ಲೋಕಪ್ರಭುವು ಶಿವನಿಗೆ ವಂದಿಸಿ, "ಜಗತ್ಪತೀ, ಲೋಕಹಿತಾರ್ಥವಾಗಿ ತಪಸ್ಸನ್ನು ಮಾಡಲು ಪ್ರಯತ್ನಿಸಿ

ತ್ವತ್ತೋ ವರಾನಭೀಪ್ಸನ್ವೈ ತ್ವದ್ದರ್ಶನಸಮುತ್ಸುಕಃ ।
ತ್ವದ್ದರ್ಶನಮನುಪ್ರಾಪ್ಯ ಕೃತಾರ್ಥೋಽಸ್ಮಿ ಜಗತ್ಪತೇ ॥ ೧೨೧ ॥

॥ ಶಿವ ಉವಾಚ ॥

ಮುಕ್ತಿಕ್ಷೇತ್ರಮಿದಂ ದೇವ ದರ್ಶನಾದೇವ ಮುಕ್ತಿದಂ ।
ಗಂಡಸ್ವೇದೋದ್ಭವಾ ಯತ್ರ ಗಂಡಕೀ ಸರಿತಾಂ ವರಾ ।
ಭವಿಷ್ಯತಿ ನ ಸಂದೇಹೋ ಯಸ್ಯಾ ಗರ್ಭೇ ಭವಿಷ್ಯಸಿ ॥ ೧೨೨ ॥

ತ್ವಯಿ ಸ್ಥಿತೇ ಜಗನ್ನಾಥೇ ತವ ಸಾನ್ನಿಧ್ಯಕಾರಣಾತ್ ।
ಅಹಂ ಬ್ರಹ್ಮಾ ಚ ದೇವಾಶ್ಚ ಋಷಿಭಿಃ ಸಹ ಕೇಶವ ॥ ೧೨೩ ॥

ಸರ್ವೇ ವೇದಾಶ್ಚ ಯಜ್ಞಾಶ್ಚ ಸರ್ವತೀರ್ಥಾನಿ ಚಾಪ್ಯುತ ।
ವಸಿಷ್ಯಾಮಸ್ಸದೈವಾತ್ರ ಗಂಡಕ್ಯಾಂ ಜಗತಾಂ ಪತೇ ॥ ೧೨೪ ॥

ದವನಾಗಿ ನಿನ್ನಿಂದ ವರಗಳನ್ನು ಬಯಸಿ, ನಿನ್ನ ದರ್ಶನದಲ್ಲಿ ಅತಿಕುತೂಹಲವುಳ್ಳವನಾದ ನಾನು ನಿನ್ನ ದರ್ಶನವನ್ನು ಪಡೆದು ಕೃತಾರ್ಥನಾಗಿದ್ದೇನೆ" ಎಂದು ಉತ್ತರವನ್ನು ಹೇಳಿದನು.

೧೨೨. ಶಿವ—"ದೇವ, ನೀನು ಯಾರ ಗರ್ಭದಲ್ಲಿ ಜನಿಸುವೆಯೋ, ನದಿಗಳಲ್ಲೆಲ್ಲಾ ಉತ್ತಮಳಾದ ಆ ಗಂಡಕಿಯು ನಿನ್ನ ಕೆನ್ನೆಯ ಬೆವರಿನಿಂದುದಿಸಿ ದೆಡೆಯಾದ ಈ ಮುಕ್ತಿಕ್ಷೇತ್ರವು ದರ್ಶನದಿಂದಲೇ ಮುಕ್ತಿದಾಯಕವಾದುದು.

೧೨೩-೧೨೪. ಕೇಶವಾ, ಜಗನ್ನಾಥನಾದ ನೀನು ಇಲ್ಲಿರುವುದರಿಂದ ನಿನ್ನ ಸನ್ನಿಧಿಯನ್ನು ಬಯಸಿ ನಾನೂ, ಬ್ರಹ್ಮನೂ, ಋಷಿಗಳೊಡಗೂಡಿದ ದೇವತೆಗಳೂ, ಸರ್ವವೇದಗಳೂ, ಯಜ್ಞಗಳೂ, ಸರ್ವತೀರ್ಥಗಳೂ ಯಾವಾಗಲೂ ಈ ಗಂಡಕಿಯಲ್ಲಿ ವಾಸಮಾಡುವೆವು.

ಕಾರ್ತಿಕಂ ಸಕಲಂಮಾಸಂ ಯಃ ಸ್ನಾಸ್ಯತಿ ನರಃ ಪ್ರಭೋ ॥ ೧೨೫ ॥

ಸರ್ವಪಾಪವಿನಿರ್ಮುಕ್ತೋ ಮುಕ್ತಿಭಾಗೀ ನ ಸಂಶಯಃ ॥ ೧೨೬ ॥

ತೀರ್ಥಾನಾಂ ಪರಮಂ ತೀರ್ಥಂ ಮಂಗಲಾನಾಂ ಚ ಮಂಗಲಂ ।
ಯತ್ರ ಸ್ನಾನೇನ ಲಭ್ಯೇತ ಗಂಗಾಸ್ನಾನಫಲಂ ನರೈಃ ॥ ೧೨೭ ॥

ಸ್ಮರಣಾದ್ದರ್ಶನಾತ್ಸ್ಪರ್ಶಾನ್ನಿಷ್ಪಾಪೋ ಜಾಯತೇ ನರಃ ।
ಯಸ್ಯಾಸ್ತತ್ಸಮತಾಂ ಕಾನ್ಯಾ ಲಭೇದ್ಗಂಗಾ ವಿನಾ ನದೀಂ ॥ ೧೨೮ ॥

ಯತ್ರ ಸಾ ಪರಮಾ ಪುಣ್ಯಾ ಗಂಡಕೀ ಭುಕ್ತಿಮುಕ್ತಿದಾ ।
ಅಪರಾ ದೇವಿಕಾ ನಾಮ್ನಾ ಗಂಡಕ್ಯಾ ಸಹ ಸಂಗತಾ ।
ಪುಲಸ್ತ್ಯಪುಲಹೌ ಪೂರ್ವಂ ತೇಪಾತೇ ಪರಮಂ ತಪಃ ॥ ೧೨೯ ॥

೧೨೫–೧೨೬. ಪ್ರಭುವೇ, ಕಾರ್ತಿಕಮಾಸ(ದಲ್ಲಿ) ಪೂರ್ತಿಯಾಗಿ ಗಂಡಕಿಯಲ್ಲಿ ಸ್ನಾನಮಾಡುವವನು ಸರ್ವಪಾಪಗಳನ್ನೂ ಕಳೆದುಕೊಂಡು ಮೋಕ್ಷಕ್ಕೆ ಭಾಗಿಯಾಗುವುದರಲ್ಲಿ ಸಂಶಯವಿಲ್ಲ.

೧೨೭. ಇದು ತೀರ್ಥಗಳಲ್ಲಿ ಉತ್ತಮತೀರ್ಥ, ಮಂಗಳಗಳಿಗೆ ಮಂಗಳ. ಇಲ್ಲಿ ಸ್ನಾನಮಾಡುವುದರಿಂದ ಮನುಷ್ಯರು ಗಂಗಾಸ್ನಾನದ ಫಲವನ್ನು ಪಡೆಯುವರು.

೧೨೮. ಯಾವ ನದಿಯು ಸ್ಮರಣೆಯಿಂದಲೂ, ದರ್ಶನದಿಂದಲೂ, ಸ್ಪರ್ಶದಿಂದಲೂ ಮನುಷ್ಯನು ಪಾಪರಹಿತನಾಗುವನೋ ಆ ಈ ಗಂಡಕಿಗೆ ಸಮವಾದ ನದಿಯು ಗಂಗಾನದಿಯೊಂದುಹೊರತು ಬೇರಾವುದಿದೆ ! ಎಂದನು.

೧೨೯. ಎಲ್ಲಿ ಪರಮಪವಿತ್ರವೂ, ಭುಕ್ತಿಮುಕ್ತಿಗಳನ್ನು ಕೊಡುವುದೂ ಆದ ಗಂಡಕಿಯೊಡನೆ ದೇವಿಕೆಯೆಂಬ ಹೆಸರಿನ ಬೇರೊಂದು ನದಿಯು ಸೇರುವುದೋ ಅಲ್ಲಿ, ಪೂರ್ವದಲ್ಲಿ ಪುಲಸ್ತ್ಯಪುಲಹರೆಂಬಿಬ್ಬರು ಉತ್ತಮವಾದ ತಪಸ್ಸನ್ನು ಮಾಡಿದರು.

ಯತ್ರ ಸೃಷ್ಟಿವಿಧಾನಾರ್ಥಂ ಕೃತ್ವಾಶ್ರಮಪದಂ ಪೃಥಕ್ ।
ಸೃಷ್ಟೇರ್ವಿಧಾನಸಾಮರ್ಥ್ಯಂ ಯತ್ರ ಲಬ್ಧಂ ತತಃ ಪರಂ ।
ತತೋಽಭೂದ್ಬ್ರಹ್ಮತನಯಾ ಪುಣ್ಯಾ ಸಾ ಸರಿತಾಂ ವರಾ ॥ ೧೩೦ ॥

ಗಂಡಕ್ಯಾ ಯತ್ರ ಮಿಲಿತಾ ಬ್ರಹ್ಮಪುತ್ರೀ ಯಶಸ್ವಿನೀ ।
ತ್ರಿವೇಣೀ ಸಾಮಹಾಪುಣ್ಯಾ ದೇವಾನಾಮಪಿ ದುರ್ಲಭಾ ॥ ೧೩೧ ॥

ಧರೇ ಜಾನೀಹಿ ತತ್ ಕ್ಷೇತ್ರಂ ಯೋಜನಂ ಪರಮಾರ್ಚಿತಂ ॥ ೧೩೨ ॥

ಪುರಾ ವೇದನಿಧೇಃ*ಪೌತ್ರೌ ಜಯೋ ವಿಜಯಏವಚ ।
ಯಾಜನಾಯಗತೌ ರಾಜ್ಞಾ ವೃತೌ ತೌ ಕರ್ದಮಾತ್ಮಜೌ ॥ ೧೩೩ ॥

---

೧೩೦. ಅವರು ಸೃಷ್ಟಿಮಾಡುವುದಕ್ಕಾಗಿ, ಎಲ್ಲಿ ಆಶ್ರಮಗಳನ್ನು ಬೇರೆ ಬೇರೆ ಮಾಡಿಕೊಂಡು ತಪಸ್ಸನ್ನು ಮಾಡಿ, ಬಳಿಕ ಸೃಷ್ಟಿಯನ್ನು ಮಾಡುವ ಸಾಮರ್ಥ್ಯವನ್ನು ಪಡೆದರೋ ಅಲ್ಲಿಂದ ಪುಲಸ್ತ್ಯಬ್ರಹ್ಮಪುತ್ರಿಯೂ, ನದಿಗಳಲ್ಲಿ ಉತ್ತಮವೂ ಆದ ದೇವಿಕಾನದಿಯು ಉದಿಸಿತು.

೧೩೧–೧೩೨. ಬ್ರಹ್ಮಪುತ್ರಿಯೂ, ಕೀರ್ತಿವಂತೆಯೂ ಆದ ಆ ದೇವಿಕೆಯು ಗಂಡಕಿಯೊಡನೆ ಸಂಗಮವಾಗುವೆಡೆಯೇ ಅತಿಪವಿತ್ರವೂ, ದೇವತೆಗಳಿಗೂ ದುರ್ಲಭವೂ ಆದ ತ್ರಿವೇಣಿ. ಯೋಜನದಳತೆಯ ಆ ಕ್ಷೇತ್ರವು ಪರಮ ಪೂಜ್ಯವಾದುದು.

೧೩೩. ಪೂರ್ವದಲ್ಲಿ ವೇದನಿಧಿಯಾದ ಬ್ರಹ್ಮನ ಪೌತ್ರರೂ ಕರ್ದಮ ಪ್ರಜಾಪತಿಯ ಪುತ್ರರೂ ಆದ ಜಯ ವಿಜಯರೆಂಬ ಸಹೋದರರು ಮರುತ್ತ ರಾಜನು ಯಜ್ಞಮಾಡಿಸಲು ಬರಬೇಕೆಂದು ಕರೆಯಲಾಗಿ ಅವನಲ್ಲಿಗೆ ಹೋದರು.

---

* ಪುತ್ರೌ ÷ ಸ್ಸುತೌ ಎಂದು ಬೊಂ. ಕ. ಪ್ರತಿಗಳೆರಡರಲ್ಲೂ ಇದೆ. ಹಾಗಿರುವುದರಿಂದ ಜಯವಿಜಯರು ಬ್ರಹ್ಮ, ಕರ್ದಮಪ್ರಜಾಪತಿ, ತೃಣಬಿಂದುಮುನಿ ಈ ಮೂವರಿಗೂ

ತೃಣಬಿಂದೋಃಸ್ತುತೌ ಪಾಪೌ ಜಾತೌ ದೃಷ್ಟ್ವೈವ ಸುವ್ರತೌ ।
ಯಜ್ಞವಿದ್ಯಾಸುನಿಪುಣೌ ವೇದವೇದಾಂಗಪಾರಗೌ ॥ ೧೩೪ ॥

ಪೂಜಯಂತೌ ಹರಿಂ ಭಕ್ತ್ಯಾ ತನ್ನಿಷ್ಠೇಂದ್ರಿಯಮಾನಸೌ ।
ಯಯೋಃ ಪೂಜಯತೋರ್ನಿತ್ಯಂ ಸಾನ್ನಿಧ್ಯಂ ಕಿಲ ಕೇಶವಃ ॥ ೧೩೫ ॥

ದದಾತಿ ಪೂಜಾವಸರೇ ಭಕ್ತ್ಯಾ ಕಿಲ ವಶೀಕೃತಃ ॥ ೧೩೬ ॥

ಮರುತ್ತೇನ ಕದಾಚಿತ್ತಾವಾಹೂತೌ ಕುಶಲೌ ದ್ವಿಜೌ ।
ರಾಜ್ಞಾ ಸಮಾಪ್ತಯಜ್ಞೇನ ಪೂಜಯಿತ್ವಾ ಪುರಸ್ಕೃತೌ ।
ದಕ್ಷಿಣಾಭಿಸ್ತೋಷಯಿತ್ವಾ ವಿಸೃಷ್ಟೌ ಗೃಹಮಾಗತೌ ॥ ೧೩೭ ॥

---

೧೩೪. ಮೊದಲು ಪಾಪಾತ್ಮರಾಗಿದ್ದ ಆ ಜಯ ವಿಜಯರು ತೃಣಬಿಂದು ಮುನಿಯ ದರ್ಶನಮಾತ್ರದಿಂದಲೇ ಪಾಪವನ್ನು ಕಳೆದುಕೊಂಡು ಬಳಿಕ ಸುವ್ರತಿಗಳಾಗಿ ಯಜ್ಞವಿದ್ಯೆಯಲ್ಲಿ ಅತಿನಿಪುಣರೂ ವೇದವೇದಾಂಗಪಾರಂಗತರೂ ಆಗಿದ್ದರು.

೧೩೫–೧೩೬. ಅವರು ತಮ್ಮ ಮನಸ್ಸನ್ನೂ ಇಂದ್ರಿಯಗಳನ್ನೂ ವಿಷ್ಣುವಿನಲ್ಲೇ ನೆಲೆಗೊಳಿಸಿ ಅವನನ್ನು ಭಕ್ತಿಯಿಂದ ಪೂಜಿಸುತ್ತಿದ್ದರು. ನಿತ್ಯವೂ ಪೂಜಿಸುವ ಅವರ ಭಕ್ತಿಗೆ ವಶನಾದ ಹರಿಯು ಪೂಜೆಯ ಸಮಯದಲ್ಲಿ ತಾನೇ ಪ್ರತ್ಯಕ್ಷನಾಗಿ ಬಂದು ಅವರಿಗೆ ದರ್ಶನವನ್ನೀಯುತ್ತಿದ್ದನು.

೧೩೭. ಮರುತ್ತರಾಜನು, ಒಂದಾನೊಂದು ಕಾಲದಲ್ಲಿ, ಕುಶಲರಾದ ಆ ಬ್ರಾಹ್ಮಣರನ್ನು ಕರೆಯಿಸಿ, ತಾನು ಉದ್ದೇಶಿಸಿದ ಯಜ್ಞವನ್ನು ಮಾಡಿ ಮುಗಿಸಿ, ಬಳಿಕ ಅವರನ್ನು ಪೂಜಿಸಿ, ಗೌರವಿಸಿ ದಕ್ಷಿಣೆಗಳಿಂದ ಸಂತೋಷಪಡಿಸಿ, ಕಳುಹಿಸಿದನು. ಅವರು ತಮ್ಮ ಮನೆಗೆ ಬಂದರು.

ಪುತ್ರರೆಂಬ ಅಸಂಗತವಾದ ಅರ್ಥವಾಗುತ್ತದೆ. ಆದುದರಿಂದ ಸಂಗತಾರ್ಥವಾಗುವಂತೆ ಪೌತ್ರೌ, ಸ್ತುತೌ ಎಂದು ತಿದ್ದಿರುತ್ತೇ.

ವಿಭಾಗಂ ಕರ್ತುಮಾರಬ್ಧೌ ಸಸ್ಪರ್ಧಾತೇ ಪರಸ್ಪರಂ ।
ಸಮೋ ವಿಭಾಗಃ ಕರ್ತವ್ಯ ಇತಿ ಜ್ಯೇಷ್ಠೋಽಭ್ಯಭಾಷತ ॥ ೧೩೮ ॥

ವಿಜಯಶ್ಚಾಬ್ರವೀಚ್ಚೈನಂ ಯೇನ ಲಬ್ಧಂ ಹಿ ತಸ್ಯ ತತ್ ।
ಜಯೋಽಬ್ರವೀದಸಾಮರ್ಥ್ಯಂ ಮನ್ವಾನೋಽಮಾಂ ಬ್ರವೀಷಿಕಿಂ ॥ ೧೩೯ ॥

ನ ದದಾಸಿ ಗೃಹೀತ್ವಾ ಯತ್ತಸ್ಮಾದ್ಗ್ರಾಹತ್ವಮಾಪ್ನುಹಿ ॥ ೧೪೦ ॥

ವಿಜಯೋಽಪ್ಯಬ್ರವೀನ್ಮೂನಮಂಧೀಭೂತೋಽಸಿ ಕಿಂ ಧನೈಃ ।
ಗಜೋ ಭವ ಮದಾಂಧಸ್ತ್ವಂ ಯೋ ಮಾಮೇವಂ ಪ್ರಭಾಷಸೇ ॥ ೧೪೧ ॥

ಏವಂ ತೌ ಗ್ರಾಹಮಾತಂಗಾವಭೂತಾಂ ಶಾಪತಃ ಪೃಥಕ್ ॥ ೧೪೨ ॥

ಗಂಡಕ್ಯಾಮೇವ ಸಂಜಾತೋ ಗ್ರಾಹಃ ಪೂರ್ವಸ್ಮೃತಿರ್ದ್ವಿಜಃ ।
ತ್ರಿವೇಣೀಕ್ಷೇತ್ರಮಧ್ಯೇ ತು ಜಯೋಽಭೂದ್ವೈ ಮಹಾನ್ಗಜಃ ॥ ೧೪೩ ॥

---

೧೩೮. ಬಳಿಕ ಅವರು ಮರುತ್ತನಿಂದ ಪಡೆದ ಧನವನ್ನು ಹಂಚಿಕೊಳ್ಳಲು ಆರಂಭಿಸಿ, ಒಬ್ಬರೊಡನೊಬ್ಬರು ಹೋರಾಡಿದರು. ಸಮವಾಗಿ ಎರಡುಭಾಗ ಮಾಡಬೇಕೆಂದು ದೊಡ್ಡವನು ಹೇಳಿದನು.

೧೩೯-೧೪೦. ಚಿಕ್ಕವನಾದ ವಿಜಯನು, 'ಅವನವನು ತಂದುದು ಅವನವನಿಗೆ' ಎಂದನು. ಜಯನು 'ನನಗೆ ಹೊರಲು ಸಾಮರ್ಥ್ಯವಿಲ್ಲವೆಂದು ತಿಳಿದುಕೊಂಡು ಹೀಗೆ ಹೇಳುತ್ತೀಯೇನು ! ನೀನು ತೆಗೆದುಕೊಂಡುದನ್ನು ಕೊಡದಿರುವುದರಿಂದ (ಗ್ರಾಹ)ಮೊಸಳೆಯಾಗು' ಎಂದನು.

೧೪೧. ವಿಜಯನೂ, "ನನ್ನನ್ನು ಹೀಗೆ ಹೇಳುವ ನೀನು ನಿಜವಾಗಿಯೂ ಧನದಿಂದ ಕುರುಡನಾಗಿದ್ದೀಯೇನು ! ಮದಾಂಧನಾದ ನೀನು ಆನೆಯಾಗು" ಎಂದನು.

೧೪೨. ಹೀಗೆ ಅವರಿಬ್ಬರೂ ಶಾಪದಿಂದ ಮೊಸಳೆಯೂ, ಆನೆಯೂ ಆಗಿ ಬೇರೆಯಾದರು.

೧೪೩-೧೪೪. ವಿಜಯನೆಂಬ ಬ್ರಾಹ್ಮಣನು ಗಂಡಕೀನದಿಯಲ್ಲೇ ಪೂರ್ವಜನ್ಮದ ಸ್ಮರಣೆಯುಳ್ಳ ಮೊಸಳೆಯಾಗಿ ಜನಿಸಿದನು. ಜಯನ

ಕರಿಶಾಬೈರ್ಗಜೀಭಿಶ್ಚ ಕ್ರೀಡಮಾನೋ ವನೇ ವಸನ್ |
ಬಹೂನ್ಯಬ್ದಸಹಸ್ರಾಣಿ ವ್ಯತೀತಾನಿ ತಯೋಸ್ತದಾ || ೧೪೪ ||

ವನೇ ವಿಹರತೋರ್ಭೂಮೇ ಶಾಪಮೋಹಿತಯೋಃ ಸತೋಃ |
ಕದಾಚಿತ್ಸ ಗಜಃ ಸ್ನಾತುಂ ಕರೇಣುಗಣಸಂವೃತಃ |
ತ್ರಿವೇಣೀಮಭಿತೋ ಯಾತೋಽವಗಾಹನಪರಾಯಣಃ || ೧೪೫ ||

ಸಿಂಚಿನ್ಕರೇಣೂಸ್ತಾಭಿಶ್ಚ ಸಿಚ್ಯಮಾನೋ ಜಲಂ ಪಿಬನ್ |
ಸ್ವಯಂ ಚ ಪಾಯಯಂಸ್ತಾಶ್ಚ ಚಿಕ್ರೀಡ ಪ್ರೀತಮಾನಸಃ || ೧೪೬ ||

ಏವಂ ಸಂಕ್ರೀಡತಸ್ತತ್ರ ದೈವಯೋಗೇನ ತಸ್ಯ ಹಿ |
ಗ್ರಾಹಃ ಸಂಪ್ರೇರಿತಃ ಪೂರ್ವಂ ವೈರಯೋಗಮನುಸ್ಮರನ್ || ೧೪೭ ||

ತ್ರಿವೇಣೀಕ್ಷೇತ್ರದ ನಡುವೆ ದೊಡ್ಡ ಆನೆಯಾಗಿ ಹುಟ್ಟಿ, ಹೆಣ್ಣಾನೆಗಳಿಂದಲೂ, ಆನೆಯ ಮರಿಗಳಿಂದಲೂ ಕೂಡಿ, ವಿಹರಿಸುತ್ತ ಕಾಡಿನಲ್ಲಿ ವಾಸಮಾಡುತ್ತಿದ್ದನು. ಅವರು ಹಾಗೆ ಇರಲು ಹಲವುಸಾವಿರವರ್ಷಗಳು ಕಳೆದುವು.

೧೪೫-೧೪೬. ಭೂಮೀ, ಶಾಪಮೋಹಿತರಾಗಿ ಅವರು ವನದಲ್ಲಿ ವಿಹರಿಸುತ್ತಿರಲಾಗಿ ಒಂದಾನೊಂದು ದಿನ ಆ ಆನೆಯು ಸ್ನಾನಮಾಡುವುದಕ್ಕಾಗಿ ಹೆಣ್ಣಾನೆಗಳಗುಂಪಿನೊಡನೆ ತ್ರಿವೇಣಿಯು ಸುತ್ತಲೂ ಬಂದು ಮುಳುಗುವುದರಲ್ಲಿ ಆಸಕ್ತಿಯುಳ್ಳುದಾಗಿ ಹೆಣ್ಣಾನೆಗಳಮೇಲೆ ನೀರೆರಚುತ್ತಲೂ, ಅವುಗಳಿಂದ ಎರಚಿಸಿಕೊಳ್ಳುತ್ತಲೂ, ತಾನು ನೀರುಕುಡಿಯುತ್ತ ಅವುಗಳಿಗೂ ಕುಡಿಸುತ್ತಲೂ ಸಂತೋಷಗೊಂಡ ಮನಸ್ಸುಳ್ಳುದಾಗಿ ಆಟವಾಡಿತು.

೧೪೭-೧೪೮. ಹಾಗೆ ಅಲ್ಲಿ ವಿವಹರಿಸುತ್ತಿದ್ದ ಆ ಸಲಗನ ದೈವಯೋಗದಿಂದ ಪ್ರೇರಿತವಾದ ಆ ಮೊಸಳೆಯು, ಹಿಂದಿನ ವೈರದ ಸಂಗತಿಯನ್ನು ಜ್ಞಾಪಿಸಿಕೊಂಡು ಅದರ ಕಾಲನ್ನು ಗಟ್ಟಿಯಾಗಿ ಹಿಡಿದುಕೊಂಡಿತು. ಸಲಗನೂ

ಜಗ್ರಾಹ ಸುದೃಢಂ ಪಾದಂ ಗಜೋಽಪಿ ಚ ವಿಷಾಣತಃ ।
ಗ್ರಾಹಂ ವಿವ್ಯಾಧ ಸೋಽಪ್ಯೇನಮಾಕರ್ಷಯತ ತಜ್ಜಲೇ ॥ ೧೪೮ ॥

ತಯೋರ್ಯುದ್ಧಂ ಸಮಭವದನೇಕಾಬ್ದಂ ವಿಕರ್ಷಣೈಃ ।
ಆಕರ್ಷಣೈಶ್ಚ ಬಹುಭಿರ್ದಂತಭೇದ್ಯೈಃ ಪರಸ್ಪರಂ ॥ ೧೪೯ ॥

ಪ್ರಯುಧ್ಯತೋಸ್ತಯೋರೇವಂ ಮತ್ಸರಗ್ರಸ್ತಯೋಃ ಸತೋಃ ।
ಸತ್ವಾನಿ ಪೀಡಿತಾನ್ಯಾಸನ್ನನೇಕಾನಿ ಕ್ಷಯಂ ಯಯುಃ ॥ ೧೫೦ ॥

ತತೋ ಜಲೇಶ್ವರೋ ರಾಜಾ ಭಗವಂತಂ ವ್ಯಜಿಜ್ಞಪತ್ ।
ತೇನ ವಿಜ್ಞಾಪಿತೋ ದೇವೋ ಭಗವಾನ್ಭಕ್ತವತ್ಸಲಃ ।
ಸುದರ್ಶನೇನ ಚಕ್ರೇಣ ಗ್ರಾಹಾಸ್ಯಂ ಸಮಪಾಟಯತ್ ॥ ೧೫೧ ॥

ಕ್ಷಿಪ್ತಂ ಪುನಃ ಪುನಸ್ತತ್ತು ಶಿಲಾಃ ಸಂಘಟಯದ್ಧರೇ ।
ಸಂಘಟ್ಟನಾತ್ತು ಚಕ್ರಸ್ಯ ಶಿಲಾಶ್ಚಕ್ರೇಣ ಲಾಂಛಿತಾಃ ॥ ೧೫೨ ॥

ದಂತದಿಂದ ಆ ಮೊಸಳೆಯನ್ನು ಚುಚ್ಚಿತು. ಮೊಸಳೆಯೂ ಆನೆಯನ್ನು ನೀರಿಗೆಳೆಯುತ್ತಿದ್ದಿತು.

೧೪೯ ಹಿಂದಕ್ಕೂ ಮುಂದಕ್ಕೂ ಎಳೆಯುವುದರಿಂದಲೂ, ಒಂದನ್ನೊಂದು ಹಲ್ಲಿನಿಂದ ಹಿಂಸಿಸುವುದರಿಂದಲೂ ಅನೇಕ ವರ್ಷ ಅವಕ್ಕೆ ಯುದ್ಧವಾಯಿತು.

೧೫೦. ಮತ್ಸರವುಳ್ಳವಾಗಿ ಅವು ಹಾಗೆ ಯುದ್ಧಮಾಡುತ್ತಿರಲು ಹಲವು ಜಂತುಗಳು ಹಿಂಸೆಗೊಳಗಾದುವು. ಹಲವು ಸತ್ತೂ ಹೋದುವು.

೧೫೧. ಬಳಿಕ ಜಲೇಶ್ವರರಾಜನು ಭಗವಂತನಿಗೆ ಅದನ್ನು ವಿಜ್ಞಾಪಿಸಿದನು. ಆ ವಿಜ್ಞಾಪನೆಯನ್ನು ಕೇಳಿದ ಭಕ್ತವತ್ಸಲನೂ, ಭಗವಂತನೂ ಆದ ವಿಷ್ಣುದೇವನು, ಸುದರ್ಶನವೆಂಬ ತನ್ನ ಚಕ್ರದಿಂದ ಮೊಸಳೆಯ ಬಾಯನ್ನು ಸೀಳಿದನು.

೧೫೨. ಭೂಮೀ, ಮತ್ತೆಮತ್ತೆ ಪ್ರಯೋಗಿಸಿದ ಚಕ್ರವು ಕಲ್ಲುಗಳಿಗೆ ತಾಕಿತು. ಚಕ್ರವು ತಾಕಿದುದರಿಂದ ಕಲ್ಲುಗಳು ಚಕ್ರದ ಗುರುತುಳ್ಳವಾದುವು.

ಬಾಹುಲ್ಯೇನ ಬಭೂವುರ್ಹಿ ತಸ್ಮಿನ್ ಕ್ಷೇತ್ರೇ ಪರೇ ಮಮ ।
ವಜ್ರಕೀಟೈಶ್ಚ ಜ್ಞಾತಾನಿ ಸಂತತಾನಿ ವಿಲೋಕಯ ॥ ೧೫೩ ॥

ನ ಸಂದೇಹಸ್ತ್ವಯಾ ಕಾರ್ಯಸ್ತ್ರಿವೇಣೀಂ ಪ್ರತಿ ಸುಂದರಿ ।
ತ್ರಿವೇಣೀಕ್ಷೇತ್ರಮಹಿಮಾ ಏವಂ ತೇ ಪರಿಕೀರ್ತಿತಃ ॥ ೧೫೪ ॥

ಯದಾ ಚ ಭರತೋ ರಾಜಾ ಪುಲಸ್ತ್ಯಸ್ಯಾಶ್ರಮಾಂತಿಕೇ ।
ಸ್ಥಿತ್ವಾ ಪರ್ಯಚರದ್ವಿಷ್ಣುಂ ತ್ರಿಜಲೇಶಮಪೂಜಯತ್ ॥ ೧೫೫ ॥

ತತಃ ಪ್ರಭೃತಿ ತಸ್ಯಾಸೀದ್ಭರತೇನಾರತಿಃ ಸ್ಫುಟಂ ।
ಪುನಶ್ಚ ಮೃಗದೇಹಾಂತೇ ಜಡಃ ಸ ಭರತೋಽಭವತ್ ॥ ೧೫೬ ॥

ತೇನೈವ ಪೂಜಿತೋ ಯಸ್ಮಾಜ್ಜಲೇಶ್ವರ ಇತಿ ಸ್ಮೃತಃ ।
ಯಸ್ಯ ಸಂಪೂಜನಾದ್ಭಕ್ತ್ಯಾ ಯೋಗಸಿದ್ಧಿಃ ಪ್ರಜಾಯತೇ ॥ ೧೫೭ ॥

---

೧೫೩. ಉತ್ತಮವಾದ ಆ ನನ್ನ ಕ್ಷೇತ್ರದಲ್ಲಿ ಆ ಶಿಲೆಗಳು ಬಹಳವಾದುವು. ವಜ್ರಕೀಟಗಳೂ ಅವುಗಳನ್ನು ಬಲ್ಲವು. ಅಥವಾ ವಜ್ರಕೀಟಗಳಿಂದಲೂ ಅವುಗಳನ್ನು ಅರಿಯಬಹುದು. ಅವು ಸಂತತವಾಗಿರುವುವು. ನೋಡು.

೧೫೪. ಸುಂದರಿ, ತ್ರಿವೇಣಿಯನ್ನು ಕುರಿತು ನಿನಗೆ ಸಂದೇಹವು ಬೇಡ. ತ್ರಿವೇಣೀಕ್ಷೇತ್ರಮಹಿಮೆಯನ್ನು ಹೀಗೆ ನಿನಗೆ ಹೇಳಿದುದಾಯಿತು.

೧೫೫. ಋಷಭದೇವನ ಪುತ್ರನಾದ ಭರತರಾಜನು ಪುಲಸ್ತ್ಯನ ಆಶ್ರಮದ ಹತ್ತಿರದಲ್ಲಿದ್ದು, ವಿಷ್ಣುವನ್ನು ಸೇವಿಸಿದಾಗ ತ್ರಿಜಲೇಶ್ವರನನ್ನೂ ಪೂಜಿಸಿದನು.

೧೫೬. ಅಂದಿನಿಂದ ಅವನಿಗೆ ಭರತನಲ್ಲಿ ಹೆಚ್ಚಾದ ಅನುರಾಗ ವುಂಟಾಯತು ಮತ್ತೆ ಜಿಂಕೆಯ ಜನ್ಮವು ಕಳೆದ ಬಳಿಕ ಅಂಗಿರಸನಿಗೆ ಪುತ್ರನಾದ ಆ ಭರತನು ಜಡನಾಗಿದ್ದನು.

೧೫೭. ಆ ಜಡಭರತನು ಪೂಜಿಸಿದುದರಿಂದ ಆ ದೇವನಿಗೆ ಜ(ಡೇ)ಲೇಶ್ವರನೆಂದು ಹೆಸರಾಯಿತು. ಭಕ್ತಿಯಿಂದ ಅವನನ್ನು ಪೂಜಿಸುವುದರಿಂದ ಯೋಗಸಿದ್ಧಿಯುಂಟಾಗುವುದು.

ಶಾಲಗ್ರಾಮೇ ಪರೇಕ್ಷೇತ್ರೇ ಯದಾಹಂ ಸುಭಗೇ ಸ್ಥಿತಃ ।
ತತ್ರ ಜ್ಞಾತ್ವಾ ಜಲೇಶೇನ ಸ್ತುತೋಽಹಂ ವಸುಧೇ ಮಹಿ ॥ ೧೫೮ ॥

ತತೋ ಭಕ್ತಕೃಪಾವೇಶಾತ್ ಕ್ಷಿಪ್ತವಾನ್ಸ್ತತ್ಸುದರ್ಶನಂ ।
ಪ್ರಥಮಂ ಪತಿತಂ ಯತ್ರ ತತ್ರ ತೀರ್ಥಂ ತತೋಽಭವತ್ ॥ ೧೫೯ ॥

ತತ್ರ ಸ್ನಾನೇನ ತೇಜಸ್ವೀ ಸೂರ್ಯಲೋಕೇ ಮಹೀಯತೇ ।
ಯದಿ ಪ್ರಾಣೈರ್ವಿಯುಜ್ಯೇತ ಮಮ ಲೋಕೇ ಮಹೀಯತೇ ॥ ೧೬೦ ॥

ಭಕ್ತಸಂರಕ್ಷಣಾರ್ಥಾಯ ಮಯಾಜ್ಞಪ್ತಂ ಸುದರ್ಶನಂ ।
ಯತ್ರ ಯತ್ರ ಭ್ರಮತಿ ತತ್ ತತ್ರ ತತ್ರಾಂಕಿತಾಃ ಶಿಲಾಃ ।
ಏವಂ ತದ್ವೈ ಭ್ರಮಾಕ್ಷಿಪ್ತಂ ಸರ್ವಂ ಚಕ್ರಮಯಂ ತ್ವಭೂತ್ ॥ ೧೬೧ ॥

---

೧೫೮. ಭೂದೇವಿ, ಸುಂದರಿ, ಉತ್ತಮವಾದ ಶಾಲಗ್ರಾಮಕ್ಷೇತ್ರದಲ್ಲಿದ್ದಾಗ ಅಲ್ಲಿರುವುದನ್ನು ತಿಳಿದು ಜಲೇಶ್ವರನು ನನ್ನನ್ನು ಸ್ತುತಿಸಿದನು.

೧೫೯. ಬಳಿಕ ಭಕ್ತಕೃಪಾವೇಶದಿಂದ ಆ ಸುದರ್ಶನ ಚಕ್ರವನ್ನು ಪ್ರಯೋಗಿಸಿದೆನು. ಚಕ್ರವು ಮೊದಲು ಎಲ್ಲಿ ಬಿದ್ದಿತೋ ಅಲ್ಲಿ ಅದರಿಂದ ತೀರ್ಥವಾಯಿತು.

೧೬೦. ಆ ತೀರ್ಥದಲ್ಲಿ ಸ್ನಾನಮಾಡುವುದರಿಂದ ಮನುಷ್ಯನು ತೇಜಸ್ವಿಯಾಗಿ, ಸೂರ್ಯಲೋಕದಲ್ಲಿ ವಾಸಮಾಡುವನು. ಆ ತೀರ್ಥದಲ್ಲಿ ಪ್ರಾಣಬಿಟ್ಟರೆ ನನ್ನ ಲೋಕದಲ್ಲಿ ವಾಸಿಸುವನು.

೧೬೧. ಭಕ್ತರ ಸಂರಕ್ಷಣೆಗಾಗಿ ನಾನು ಆಜ್ಞಾಪಿಸಿದ ಸುದರ್ಶನಚಕ್ರವು ಎಲ್ಲೆಲ್ಲಿ ಸುತ್ತಿತೋ ಅಲ್ಲೆಲ್ಲಾ ಕಲ್ಲುಗಳು ಚಕ್ರದ ಗುರುತುಳ್ಳುವಾದುವು. ಹಾಗೆ ಚಕ್ರದ ಸಂಚಾರಕ್ಕೆ ಸಿಕ್ಕಿದುದೆಲ್ಲವೂ ಚಕ್ರಮಯವಾಯಿತು.

ತತಸ್ಸ ಪಂಚರಾತ್ರಾಣಿ ಸ್ಥಿತ್ವಾ ವೈ ವಿಧಿಪೂರ್ವಕಂ ।
ಗೋಧನಾನ್ಯಗ್ರತಃ ಕೃತ್ವಾ ಹರಿಕ್ಷೇತ್ರಂ ಜಗಾಮ ಹ ॥ ೧೬೨ ॥

ಹರಿಣಾಧಿಷ್ಠಿತಂ ಕ್ಷೇತ್ರಂ ಪೂಜನೀಯಂ ತತಃ ಸ್ಮೃತಂ ॥ ೧೬೩ ॥

ಯದಾ ನದೀಂ ಶೂಲಪಾಣಿಃ ಗೋಧನೇನ ಪುರಸ್ಕೃತಃ ।
ಸ್ಥಿತವಾಂಸ್ತದ್ದಿನಾದೇತತ್ ಖ್ಯಾತಂ ಹರಿಹರಪ್ರಭಂ ॥ ೧೬೪ ॥

ದೇವಾನಾಮಟನಾಚ್ಚೈವ ದೇವಾಟ ಇತಿ ಸಂಜ್ಞಿತಂ ।
ತಸ್ಯ ದೇವಸ್ಯ ಮಹಿಮಾ ಕೇನ ವಕ್ತುಂ ಹಿ ಶಕ್ಯತೇ ॥ ೧೬೫ ॥

೧೬೨–೧೬೩. ಬಳಿಕ ನಂದಿಯು ಆ ತ್ರಿವೇಣಿಯಲ್ಲಿ ವಿಧಿಪೂರ್ವಕವಾಗಿ ಐದುದಿನವಿದ್ದು, ಗೋಧನಗಳನ್ನು ಮುಂದಿಟ್ಟುಕೊಂಡು, ಹರಿ(ಶಾಲಗ್ರಾಮ) ಕ್ಷೇತ್ರಕ್ಕೆ ಹೊರಟುಹೋದನು. ಅದು ಹರಿಯು ನೆಲಸಿರುವ ಕ್ಷೇತ್ರವಾದುದರಿಂದ ಪೂಜ್ಯವೆನಿಸಿಕೊಂಡಿತು.

೧೬೪. ಶೂಲಪಾಣಿಯಾದ ನಂದಿಯು ಗೋಧನವನ್ನು ಮುಂದಿಟ್ಟುಕೊಂಡು ಇದ್ದಂದಿನಿಂದ ಶಾಲಗ್ರಾಮಕ್ಷೇತ್ರವು ಹರಿಹರಪ್ರಭವೆಂದು ಪ್ರಸಿದ್ಧವಾಯಿತು.

೧೬೫. ಅಲ್ಲಿ ದೇವತೆಗಳು ಅಟನ (ಸಂಚಾರ)ಮಾಡುವುದರಿಂದ 'ದೇವಾಟ' ವೆಂಬ ಹೆಸರೂ ಉಂಟಾಯಿತು. ಆ ದೇವನ ಮಹಿಮೆಯನ್ನು ಹೇಳಲು ಯಾರಿಂದ ತಾನೆ ಸಾಧ್ಯ !

ಸ ಶೂಲಪಾಣಿರ್ದೇವೇಶೋ ಭಕ್ತಾಭಯವಿಧಾಯಕಃ ।
ಮುನಿಭಿರ್ದೇವಗಂಧರ್ವೈಃ ಸೇವ್ಯತೇಽಚಿಂತ್ಯಶಕ್ತಿಮಾನ್ ॥ ೧೬೬ ॥

ತಸ್ಮಿನ್ ಸ್ಥಾನೇ ಮಹಾದೇವಃ ಸಾಲಂಕಾಯನಕಸ್ಯ ಹಿ ।
ಪುತ್ರತ್ವಂ ನಂದಿರೂಪೇಣ ಪ್ರಾಪ್ತಸ್ಸಾಕ್ಷಾಚ್ಛಿವಃ ಪ್ರಭುಃ ॥ ೧೬೭ ॥

ಸ್ವಯಂ ಚೈವ ಮಹಾಯೋಗೀ ಯೋಗಸಿದ್ಧಿವಿಧಾಯಕಃ ।
ಆಸ್ಥಿತಃ ಪರಮಂ ಪೀಠಂ ತೀರ್ಥೇ ಚೈವ ತ್ರಿಧಾರಕೇ ॥ ೧೬೮ ॥

ತ್ರಿಜಟಾಭ್ಯೋಽಭವನ್ಧಾರಾಸ್ತಿಸ್ರೋ ವೈ ಪರಮಾದ್ಭುತಾಃ ।
ಗಂಗಾ ಚ ಯಮುನಾ ಚೈವ ಪುಣ್ಯಾ ಚೈವ ಸರಸ್ವತೀ ॥ ೧೬೯ ॥

ಏತತ್ತ್ರೈಧಾರಿಕಂ ತೀರ್ಥಂ ತ್ರಿಜಟಾಭ್ಯಸ್ಸಮುತ್ಥಿತಂ ॥ ೧೭೦ ॥

---

೧೬೬. ಶೂಲಪಾಣಿಯೂ. ಭಕ್ತರಿಗೆ ಅಭಯವನ್ನು ಉಂಟುಮಾಡುವವನೂ, ಅಚಿಂತ್ಯಶಕ್ತಿವಂತನೂ ಆದ ಆ ದೇವೇಶನು ಮುನಿಗಳಿಂದಲೂ, ದೇವತೆಗಳಿಂದಲೂ, ಗಂಧರ್ವರಿಂದಲೂ ಸೇವ್ಯನಾಗಿರುವನು.

೧೬೭. ಆ ಮಹಾದೇವನಾದ ಸಾಕ್ಷಾತ್ ಶಿವಪ್ರಭುವು ಆ ಶಾಲಗ್ರಾಮ ಕ್ಷೇತ್ರದಲ್ಲಿ ಸಾಲಂಕಾಯ ನನಿಗೆ ನಂದಿಯ ರೂಪದಿಂದ ಪುತ್ರನಾಗಿ ಉದಿಸಿದನು.

೧೬೮. ಯೋಗಸಿದ್ಧಿಯನ್ನುಂಟುಮಾಡುವ ಈಶ್ವರನು ತಾನೇ ಮಹಾಯೋಗಿಯಾಗಿ ತ್ರಿಧಾರಕತೀರ್ಥದಲ್ಲಿ ಉತ್ತಮವಾದ ಯೋಗಾಸನದಲ್ಲಿದ್ದನು.

೧೬೯–೧೭೦. ಅವನ ಮೂರು ಜಟೆಗಳಿಂದ ಗಂಗಾ ಯಮುನಾ ಸರಸ್ವತಿಗಳೆಂಬ ಮೂರು ಪರಮಾದ್ಭುತವಾದ ಧಾರೆಗಳುದಿಸಿದುವು. ತ್ರಿಜಟೆಗಳಿಂದ ಉದಿಸಿದ ಇದು ತ್ರೈಧಾರಿಕತೀರ್ಥ.

ಯತ್ರ ಶಂಭುಃ ಸ್ಥಿತಸ್ಸಾಕ್ಷಾತ್ ಮಹಾಯೋಗಿ ಮಹೇಶ್ವರಃ ।
ಶಾಲಗ್ರಾಮಾಭಿದೇ ಕ್ಷೇತ್ರೇ ಹರಿಶೀಲನತತ್ಪರಃ ।
ದಿಶನ್ ಜ್ಞಾನಂ ಸ್ವಭಕ್ತಾನಾಂ ಸಂಸಾರಾದ್ಯೇನ ಮುಚ್ಯತೇ ॥ ೧೭೧ ॥

ತೀರ್ಥೇ ತ್ರಿಧಾರೇ* ನಾ ಸ್ನಾತ್ವಾ ಸಂತರ್ಪ್ಯ ಪಿತೃದೇವತಾಃ ।
ಮಹಾಯೋಗಿನಮಭ್ಯರ್ಚ್ಯ ನ ಭೂಯೋ ಜನ್ಮಭಾಗ್ಭವೇತ್ ॥ ೧೭೨ ॥

ತಸ್ಯೈವ ಪೂರ್ವದಿಗ್ಭಾಗೇ ಹಂಸತೀರ್ಥಮಿತಿ ಸ್ಮೃತಂ ।
ತತ್ರೈಕಂ ಕೌತುಕಂ ವೃತ್ತಂ ತಚ್ಛೃಣುಷ್ವ ಮಹತ್ತರಂ ॥ ೧೭೩ ॥

ಕದಾಚಿಚ್ಛಿವರಾತ್ರ್ಯಾಂ ತು ಭಕ್ತೈಃ ಪೂಜಾಮಹೋತ್ಸವೇ ।
ನೈವೇದ್ಯೈರ್ವಿವಿಧೈಸ್ಸೃಷ್ಟೈಃ +ಮಹಾಯೋಗೀ ಸುಪೂಜಿತಃ ॥ ೧೭೪ ॥

೧೭೧-೧೭೨. ಮಹೇಶ್ವರನಾದ ಶಂಭುವು ಸಾಕ್ಷಾನ್ಮಹಾಯೋಗಿಯಾಗಿ, ಹರಿಯನ್ನು ನೋಡುವುದರಲ್ಲಿ ಆಸಕ್ತನಾಗಿ, ತನ್ನ ಭಕ್ತರಿಗೆ ಸಂಸಾರದಿಂದ ಮುಕ್ತಿಯನ್ನುಂಟುಮಾಡುವ ಜ್ಞಾನವನ್ನು ಪದೇಶಿಸುತ್ತ ಇದ್ದೆಡೆಯಾವ ಶಾಲಗ್ರಾಮಕ್ಷೇತ್ರದಲ್ಲಿ, ತ್ರಿಧಾರಕತೀರ್ಥದಲ್ಲಿ ಸ್ನಾನಮಾಡಿ, ಪಿತೃದೇವತೆಗಳಿಗೆ ತರ್ಪಣವನ್ನು ಮಾಡಿ, ಮಹಾಯೋಗಿಶಿವನನ್ನು ಪೂಜಿಸುವವನು ತಿರುಗಿ ಜನ್ಮವನ್ನು ಪಡೆಯುವುದಿಲ್ಲ.

೧೭೩. ಅದರ ಪೂರ್ವಭಾಗದಲ್ಲಿ ಹಂಸತೀರ್ಥವೆಂಬುದೊಂದಿದೆ ಅಲ್ಲೊಂದು ಅತ್ಯಾಶ್ಚರ್ಯಕರವಾದ ವಿಚಾರವು ನಡೆಯಿತು. ಅದನ್ನು ಕೇಳು

೧೭೪. ಒಂದುಸಾರಿ. ಶಿವರಾತ್ರಿಯದಿನ ಪೂಜಾಮಹೋತ್ಸವದಲ್ಲಿ ಭಕ್ತರು, ತಾವು ಸಿದ್ಧಪಡಿಸಿದ, ಬಗೆ ಬಗೆಯ ನೈವೇದ್ಯಗಳಿಂದ ಶಿವನನು ಚೆನ್ನಾಗಿ ಪೂಜಿಸಿದರು.

---

* ಪೂಜಯಿತ್ವಾ ತು ಯೋಗಿನಂ.

ತತ್ರ ಕಾಕಾಸ್ಸಮುತ್ಪೇತುರನ್ನೇ ತಸ್ಮಿನ್ಬುಭುಕ್ಷಿತಾಃ ।
ಗೃಹೀತ್ವಾನ್ನಂ ತು ತತ್ಕಾಕಸ್ತೇನ ಚೋಡ್ಡೀಯ ನಿರ್ಗತಃ ॥ ೧೭೫ ॥

ತದ್ಗೃಹೀತುಂ ಪರಃ ಕಾಕಃ ತೇನಾಯುಧ್ಯತ ಚಾಂಬರೇ ।
ತಾವುಭೌ ಯುಧ್ಯಮಾನೌ ತು ಕುಂಡೇ ತಸ್ಮಿನ್ನಿಪೇತತುಃ ॥ ೧೭೬ ॥

ತತ್ರ ಹಂಸೌ ತತೋ ಭೂತ್ವಾ ನಿರ್ಗತೌ ಚಂದ್ರವರ್ಚಸೌ ।
ತದ್ದೃಷ್ಟ್ವಾ ಮಹದಾಶ್ಚರ್ಯಂ ತತ್ರ ಯೇ ಮಿಲಿತಾ ಜನಾಃ ॥ ೧೭೭ ॥

ಹಂಸತೀರ್ಥಮಿತಿ ಪ್ರೋಚುಸ್ತತಃ ಪ್ರಭೃತಿ ಸತ್ತಮೇ ।
ತತಃ ಪ್ರಭೃತಿ ತತ್ತೀರ್ಥಂ ಹಂಸತೀರ್ಥಮಿತಿ ಸ್ಮೃತಂ ॥ ೧೭೮ ॥

---

೧೭೫. ಹಸಿದ ಕಾಗೆಗಳು ಆ ನೈವೇದ್ಯದ ಅನ್ನಕ್ಕೆ ಮುತ್ತಿದುವು. ಒಂದು ಕಾಗೆಯು ಅನ್ನವನ್ನು ತೆಗೆದುಕೊಂಡು ಹಾರಿ ಹೊರಟು ಹೋಯಿತು.

೧೭೬. ಅದನ್ನು ಕಿತ್ತುಕೊಳ್ಳಲು ಮತ್ತೊಂದು ಕಾಗೆಯು ಅದರೊಡನೆ ಆಕಾಶದಲ್ಲಿ ಜಗಳವಾಡಿತು. ಯುದ್ಧಮಾಡುತ್ತಾ ಅವೆರಡುಕಾಗೆಗಳೂ ಅಲ್ಲಿದ್ದ ತೀರ್ಥಕುಂಡದಲ್ಲಿ ಬಿದ್ದುವು.

೧೭೭–೧೭೮. ಆ ಕಾಗೆಗಳು, ಆ ತೀರ್ಥದಲ್ಲಿ ಹಂಸಗಳಾಗಿ, ಚಂದ್ರನಂತೆ ಹೊಳೆಯುತ್ತ, ಅಲ್ಲಿಂದ ಹೊರಟುವು. ಅಲ್ಲಿ ಸೇರಿದ್ದ ಜನರು ಆ ಅತ್ಯಾಶ್ಚರ್ಯವನ್ನು ಕಂಡು, ಆ ತೀರ್ಥವನ್ನು ಹಂಸತೀರ್ಥವೆಂದು ಕರೆದರು. ಉತ್ತಮೇ, ಅಂದಿನಿಂದ ಆ ತೀರ್ಥಕ್ಕೆ ಹಂಸತೀರ್ಥವೆಂದು ಹೆಸರಾಯಿತು.

ಪೂರ್ವಂ ಯಕ್ಷಕೃತಂ ತ ತ್ತು ಯಕ್ಷತೀರ್ಥಮಿತಿ ಸ್ಮೃತಂ ।
ತತ್ರ ಸ್ನಾತೋ ನರಶ್ಶುದ್ಧೋ ಯಕ್ಷಲೋಕೇ ಮಹೀಯತೇ || ೧೭೯ ||

ತತ್ರಾಥ ಮುಂಚತಿ ಪ್ರಾಣಾನ್ ಶಿವಭಕ್ತಿಪರಾಯಣಃ ।
ಯಕ್ಷಲೋಕಮತಿಕ್ರಮ್ಯ ಮಮ ಲೋಕಂ ಪ್ರಪದ್ಯತೇ || ೧೮೦ ||

ಏವಂ ಪ್ರಭಾವಂ ತತ್ತೀರ್ಥಂ ಮಹಾಯೋಗಿಪ್ರಭಾವತಃ ।
ಅಹಂ ಶಿವಶ್ಚ ಲೋಕಾನಾಮನುಗ್ರಹಪರಾಯಣೌ || ೧೮೧ ||

ಏತತ್ತೇ ಸರ್ವಮಾಖ್ಯಾತಂ ಕ್ಷೇತ್ರಂ ಗುಹ್ಯಂ ವಸುಂಧರೇ ।
ಆರಭ್ಯ ಮುಕ್ತಿಕ್ಷೇತ್ರಂ ತತ್ ಕ್ಷೇತ್ರಂ ದ್ವಾದಶಯೋಜನಂ || ೧೮೨ ||

ಶಾಲಗ್ರಾಮಸ್ವರೂಪೇಣ ಮಯಾ ಯತ್ರ ಸ್ಥಿತಂ ಸ್ವಯಂ || ೧೮೩ ||

---

೧೭೯. ಪೂರ್ವದಲ್ಲಿ ಯಕ್ಷನು ಮಾಡಿದುದರಿಂದ ಅದಕ್ಕೆ ಯಕ್ಷತೀರ್ಥವೆಂದೂ ಹೆಸರು. ಆದರಲ್ಲಿ ಸ್ನಾನಮಾಡಿದವನು ಶುದ್ಧನಾಗಿ, ಯಕ್ಷಲೋಕದಲ್ಲಿ ವಾಸಿಸುವನು.

೧೮೦. ಶಿವಭಕ್ತಿನಿರತನಾಗಿದ್ದು, ಆ ತೀರ್ಥದಲ್ಲಿ ಪ್ರಾಣಬಿಟ್ಟವನು, ಯಕ್ಷಲೋಕವನ್ನು ಬಿಟ್ಟು ನನ್ನ ಲೋಕವನ್ನು ಸೇರುವನು.

೧೮೧. ಮಹಾಯೋಗಿ (ಶಿವ)ಪ್ರಭಾವದಿಂದ ಆ ತೀರ್ಥವು ಹಾಗೆ ಮಹಿಮೆಯುಳ್ಳದಾಗಿದೆ. ನಾನೂ, ಶಿವನೂ ಲೋಕಗಳಿಗೆ ಅನುಗ್ರಹ ಮಾಡುವುದರಲ್ಲಿ ನಿರತರು.

೧೮೨–೧೮೩. ವಸುಂಧರೇ, ಮುಕ್ತಿಕ್ಷೇತ್ರವನ್ನು ಮೊದಲುಗೊಂಡು ರಹಸ್ಯವಾದ ಈ ಕ್ಷೇತ್ರವಿಚಾರವನ್ನೆಲ್ಲಾ ಹೇಳಿದೆನು. ಶಾಲಗ್ರಾಮರೂಪದಿಂದ ನಾನಿರುವ ಸ್ಥಳವಾದ ಆ ಕ್ಷೇತ್ರವು ಹನ್ನೆರಡುಯೋಜನ ವಿಸ್ತಾರವಾದುದಾಗಿದೆ.

ಸ್ವಭಕ್ತಾನಾಂ ವಿಶೇಷೇಣ ಪರಮಾನಂದದಾಯಕಂ ।
ಗುಹ್ಯಾನಾಂ ಪರಮಂ ಗುಹ್ಯಂ ಕಿಮನ್ಯಚ್ಛ್ರೋತುಮಿಚ್ಛಸಿ ॥ ೧೮೪ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಸೋಮೇಶ್ವರಾದಿಲಿಂಗಹರಿಹರ ಮುಕ್ತಿಕ್ಷೇತ್ರತ್ರಿವೇಣ್ಯಾದಿ ಮಹಿಮಾನಿರೂಪಣಂ ನಾಮ ಚತುಶ್ಚತ್ವಾರಿಂಶದಧಿಕ ಶತತಮೋಽಧ್ಯಾಯಃ

---

೧೮೪. ಅದು, ನನ್ನ ಭಕ್ತರಿಗೆ ವಿಶೇಷವಾಗಿ ಪರಮಾನಂದದಾಯಕವೂ, ರಹಸ್ಯವಾದುವುಗಳಲ್ಲಿ ಅತಿರಹಸ್ಯವಾದುದೂ ಆಗಿದೆ. ನೀನು ಮತ್ತಾವುದನ್ನು ಕೇಳಲು ಬಯಸುವೆ ?

ಅಧ್ಯಾಯದ ಸಾರಾಂಶ—

ಭೂದೇವಿಗೆ ಶ್ರೀವರಾಹನು, ಶಾಲಗ್ರಾಮಕ್ಷೇತ್ರವಿಚಾರವನ್ನು ವಿವರಿಸುತ್ತ, ಶಾಪವನ್ನು ಕಳೆದುಕೊಳ್ಳಲು ತಪಸ್ಸನ್ನು ಮಾಡಿದ ಚಂದ್ರನಿಗೆ ಈಶ್ವರನು ವರವನ್ನು ಕೊಟ್ಟುದನ್ನೂ, ರೇವಾನದಿಯ ತಪಸ್ಸಿನಿಂದ ಸಂತೋಷಗೊಂಡ ಆ ಈಶನೇ "ಲಿಂಗರೂಪದಿಂದ ನಿನ್ನ ಗರ್ಭದಲ್ಲಿರುವೆನು" ಎಂದು ವರವಿತ್ತುದನ್ನೂ, ಗಂಡಕಿಯ ತಪಸ್ಸಿಗೆ ಒಲಿದ ವಿಷ್ಣುವು, ಶಾಲಗ್ರಾಮಶಿಲಾರೂಪದಿಂದ ಆಕೆಯ ಗರ್ಭದಲ್ಲಿ ವಾಸಿಸುವುದಾಗಿ ಆಕೆಗೆ ವರವನ್ನು ಕೊಟ್ಟುದನ್ನೂ, ಬಾಣಗಂಗೋತ್ಪತ್ತಿಯನ್ನೂ, ಗಂಡಕಿಯ ಮಹಿಮೆಯನ್ನೂ, ಗಂಡಕ್ರೀತ್ರಿವೇಣಿಯ ವಿವರವನ್ನೂ ಪರಸ್ಪರ ಶಾಪದಿಂದ ಆನೆಮೊಸಳೆಗಳಾಗಿದ್ದ ಜಯ ವಿಜಯರೆಂಬ ಸಹೋದರರಿಗೆ ತ್ರಿವೇಣಿಯಲ್ಲಿ ವಿಷ್ಣುವು ಮುಕ್ತಿಯಿತ್ತುದನ್ನೂ, ಹರಿಹರಪ್ರಭ ಹಂಸತೀರ್ಥಗಳ ವಿಚಾರವನ್ನೂ ಹೇಳುವನು.

ಇಲ್ಲಿಗೆ ಶ್ರೀ ವರಾಹಪುರಾಣದಲ್ಲಿ ನೂರ ನಲವತ್ತನಾಲ್ಕನೆಯ ಅಧ್ಯಾಯ.